

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ
ಅಧ್ಯಕ್ಷರ ಭಾಷಣಗಳು

ಸಂಪುಟ ೭

(೨೦೦೬ ರಿಂದ ೨೦೧೫ ರವರೆಗೆ)

ಸಂಪಾದಕರು:
ಪ್ರೊ.ಜಿ.ಅಶ್ವತ್ಥನಾರಾಯಣ

ಮನುಷ್ಯ ಜಾತಿ ತಾನೊಂದೆ ವಲಂ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರು

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ

ಅಧ್ಯಕ್ಷರ ಭಾಷಣಗಳು

ಸಂಪುಟ : ೭

(೨೦೦೩ ರಿಂದ ೨೦೧೫ರವರೆಗೆ)

ಸಂಪಾದಕರು :

ಪ್ರೊ. ಜಿ. ಅಶ್ವತ್ಥನಾರಾಯಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

AKHILA BHARATA KANNADA SAHITYA SAMMELANAGALA ADHYAKSHARA BHASHANAGALU (2006 to 2015)
Edited by **Prof. G. Aswathanarayana**
published by : **Kannada Sahitya Parishattu** , Pampa Mahakavi Road,
Chamarajapete, Bengaluru - 560018
Pages : 348 + xii : Price : Rs.80=00 : **2016**

ಪ್ರಥಮ ಮುದ್ರಣ : ೨೦೧೬
ಪ್ರತಿಗಳು : ೧೦೦೦
ಬೆಲೆ : ಎಂಬತ್ತು ರೂಪಾಯಿಗಳು

ಮುಖಪುಟ ಕಲಾವಿನ್ಯಾಸ : ಶ್ರೀ ಯು.ಟಿ. ಸುರೇಶ್

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಯ ವಿವಿಧ ಮುಖಗಳನ್ನು ಚರ್ಚಿಸಲು ಅವಕಾಶವಾಗುವಂತೆ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷವೂ ಸಮ್ಮೇಳನಗಳನ್ನು ನಡೆಸುತ್ತಾ ಬಂದಿದೆ.

ಇದುವರೆಗೂ ೮೧ ಅಖಿಲಭಾರತ ಮಟ್ಟದ ಸಾಹಿತ್ಯ ಸಮ್ಮೇಳನಗಳು ನಾಡಿನ ವಿವಿದೆಡೆಗಳಲ್ಲಿ ಯಶಸ್ವಿಯಾಗಿ ನಡೆದಿವೆ. ಕನ್ನಡ ನಾಡು ನುಡಿ ಸಂಸ್ಕೃತಿಯ ವರ್ತಮಾನದ ಸ್ಥಿತಿಯನ್ನು ಕುರಿತು ನಾಡಿನ ಬೆಳವಣಿಗೆಯ ದೃಷ್ಟಿಯಿಂದ ಸಮ್ಮೇಳನಾಧ್ಯಕ್ಷರುಗಳು ಮಾಡಿರುವ ಭಾಷಣಗಳ ಆರು ಸಂಪುಟಗಳು ಈಗಾಗಲೇ ಪ್ರಕಟವಾಗಿವೆ. ಇದೀಗ ಏಳನೆಯ ಸಂಪುಟವನ್ನು ಪ್ರಕಟಿಸಲಾಗುತ್ತಿದೆ. ಈ ಭಾಷಣಗಳು ಸಮಕಾಲೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದಾಖಲೆಗಳಾಗಿವೆ.

ಪ್ರಸ್ತುತ ಸಂಪುಟವು ೨೦೦೬ರಲ್ಲಿ ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಶಾಂತರಸ ಹೆಂಬೇರಾಳು ಅವರ ಭಾಷಣದಿಂದ ೨೦೧೫ರಂದು ಶ್ರವಣಬೆಳಗೊಳದಲ್ಲಿ ನಡೆದ ರಾಯಚೂರಿನಲ್ಲಿ ನಡೆಯುವ ಅಖಿಲ ಭಾರತ ೮೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ಮಾಡಿದ ಭಾಷಣದವರೆಗೆ ೧೦ ಮಂದಿ ಸಮ್ಮೇಳನಾಧ್ಯಕ್ಷರ ಆಶಯ ಮತ್ತು ಚಿಂತನೆಗಳನ್ನು ಒಳಗೊಂಡಿದೆ. ಈ ಪುಸ್ತಕವನ್ನು ರಾಯಚೂರಿನಲ್ಲಿ ನಡೆಯುವ ಅಖಿಲ ಭಾರತ ೮೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ.

ಇಲ್ಲಿನ ಉತ್ಸಾಹಭರಿತ ಭಾಷಣಗಳಲ್ಲಿ ಸಮ್ಮೇಳನಾಧ್ಯಕ್ಷರುಗಳಲ್ಲಿ ಕನ್ನಡ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಯ ಬಗೆಗೆ ಹೊಂದಿರುವ ಕಾಳಜಿ, ನಾಡು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಸೂಚಿಸಿರುವುದು ಕಾಣಬಹುದಾಗಿರುತ್ತದೆ. ಇಲ್ಲಿನ ವಿಚಾರಲಹರಿ ನಾಡಿನ ಜನತೆಗೆ ಸ್ಫೂರ್ತಿ ಉತ್ಸಾಹ ಹಾಗೂ ಆತ್ಮವಿಶ್ವಾಸ ಮೂಡಿಸಲು ಸಹಕಾರಿಯಾಗಿದೆ. ಇಂತಹ ಅತ್ಯಮೂಲ್ಯ ಭಾಷಣಗಳನ್ನು ಸಿದ್ಧಪಡಿಸಿಕೊಟ್ಟ ಸಮ್ಮೇಳನಾಧ್ಯಕ್ಷರುಗಳಿಗೆ ಕೃತಜ್ಞತೆಗಳು. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಧನ್ಯವಾದಗಳು. ಈ ಸಂಪುಟದ ಸಂಪಾದಕರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ವಂದನೆಗಳು.

೦೧-೧೦-೨೦೧೬

ಡಾ. ಮನು ಬಳಿಗಾರ್
ಅಧ್ಯಕ್ಷರು

ಸಂಪಾದಕರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಏಕೈಕ ಪ್ರಾತಿನಿಧಿಕ ಕನ್ನಡಿಗರ ಸಂಸ್ಥೆ. ಶತಮಾನೋತ್ಸವ ಆಚರಿಸಿಕೊಂಡ ಸಂಸ್ಥೆ. ನಿರಂತರವಾಗಿ ಕನ್ನಡನಾಡಿನ ಏಕೀಕರಣಕ್ಕೆ, ಕನ್ನಡಿಗರ ಏಳಿಗೆಗೆ ಶ್ರಮಿಸುತ್ತಿರುವ ಸಂಸ್ಥೆ. ಕನ್ನಡ ಭಾಷೆ, ಸಾಹಿತ್ಯ ಸಾಂಸ್ಕೃತಿಗಳ ಅಭಿವೃದ್ಧಿಗಾಗಿ ನಾಡಿನಾದ್ಯಂತ ಜಿಲ್ಲಾ, ತಾಲ್ಲೂಕು ಸಮಿತಿಗಳನ್ನು ಹೊಂದಿ ಸದಾ ಶ್ರಮಿಸುತ್ತಿರುವ ಸಂಸ್ಥೆ ಪರಿಷತ್ತು.

ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ಏರ್ಪಡಿಸುವ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಸಮ್ಮೇಳನಾಧ್ಯಕ್ಷರನ್ನಾಗಿ ನಾಡಿಗೆ ನುಡಿಗೆ ಅಪೂರ್ವ ಸೇವೆ ಸಲ್ಲಿಸಿರುವವರನ್ನು ಆಯ್ಕೆಮಾಡಿ ಗೌರವಿಸುವ ಸಿದ್ಧತೆ ಕನ್ನಡ ನಾಡಿನಲ್ಲಿಯೇ ವಿಶಿಷ್ಟವಾದ ಸಾಹಿತ್ಯ ಪರಂಪರೆಗೆ ಸಾಕ್ಷಿಯಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಎಂದರೆ ಕನ್ನಡ ವಿದ್ವಾಂಸರಿಗೆ, ಸಾಹಿತಿಗಳಿಗೆ, ನುಡಿ ಸೇವಕರಿಗೆ ದೊರಕುವ ಅತ್ಯುನ್ನತ ಗೌರವ, ಪ್ರಶಸ್ತಿ, ಸನ್ಮಾನ ಎಂದರೆ ತಪ್ಪಾಗದು. ಇದುವರೆಗೆ ೧೯೧೫ರಿಂದ ೨೦೧೫ರವರೆಗೆ ೧೦೦ ವರ್ಷಗಳಲ್ಲಿ ೮೧ ಸಮ್ಮೇಳನಗಳು ನಡೆದಿವೆ. ಈ ಪೈಕಿ ೩ ಸಮ್ಮೇಳನಗಳಿಗೆ ಸಮ್ಮೇಳನಾಧ್ಯಕ್ಷರಾಗುರವ ಭಾಗ್ಯ ದೊರೆತಿರುವುದು ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರಿಗೆ ಮಾತ್ರ ಎಂಬುದು ವಿಶೇಷ ಸಂಗತಿಯಾಗಿದೆ.

೩ದಿನ ಅಥವಾ ೪ ದಿನಗಳ ಕಾಲ ಹಗಲೂ ರಾತ್ರಿ ನಾನಾಬಗೆಯ ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಗೋಷ್ಠಿಗಳು, ಸಂವಾದಗಳು, ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಬಹಿರಂಸ ಸಭೆಯ ನಿರ್ಣಯಗಳು, ಮನರಂಜನಾ ಕಾರ್ಯಕ್ರಮಗಳು ಸಮ್ಮೇಳನದ ಅಂಗವಾಗಿ ಕನ್ನಡ ಪ್ರಕಟನೆಗಳನ್ನು ಹೊರತರವುದು.

ವಿಶೇಷ ಸಂಚಿಕೆ ಪುರವಣಿಗಳನ್ನು ಪ್ರಕಟಿಸುವುದು ಪದ್ಧತಿಯಾಗಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಗಮನಿಸಬೇಕಾದ ಸಂಗತಿಯೆಂದರೆ ಮೊದಲ ದಿನದ ಸಮ್ಮೇಳನಾಧ್ಯಕ್ಷರ ಭಾಷಣ. ಈ ಭಾಷಣಗಳು ಕನ್ನಡ ಭಾಷಣ ಸಾಹಿತ್ಯ ಇತಿಹಾಸದಲ್ಲಿ ಅಪೂರ್ವ ದಾಖಲೆಗಳಾಗಿವೆ. ನಮ್ಮ ನಾಡಿನ ಇತಿಹಾಸಾವಲೋಕನ ಸಮಕಾಲೀನ ಕನ್ನಡ ಸಾಹಿತ್ಯದ ಬೆಳವಣಿಗೆ – ಕನ್ನಡಿಗರ ಸಮಸ್ಯೆ, ಕನ್ನಡಾಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳು, ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕಾದ ಕಾರ್ಯಗಳು ಇತ್ಯಾದಿ ವಿಷಯಗಳ

ಸಿಂಹಾವಲೋಕನವನ್ನು ಒಳಗೊಂಡಿರುತ್ತದೆ. ಸಮ್ಮೇಳನದಲ್ಲಿ ಕಾಲಾಭಾವದಿಂದ ಸಮ್ಮೇಳನಾಧ್ಯಕ್ಷರು ಭಾಷಣವನ್ನು ಅನೇಕ ಸಮ್ಮೇಳನಗಳಲ್ಲಿ ಪೂರ್ತಿ ಹೇಳಲಾಗದಿರುವ ಸಂದರ್ಭಗಳಿವೆ. ಆದರೆ ಅವರ ಭಾಷಣವೇ – ಯಷ್ಟೇ ಅಲ್ಲ ಅನೇಕ ನಾಡುನುಡಿಯ ಬಗೆಗಿನ ವಿಚಾರಗಳು, ಸುಧಾರಣೆಗಳ ಸೂಚನೆಗಳು ಅವರ ವಿಶಾಲಜ್ಞಾನ ಅಪಾರ ಅನುಭವದಿಂದ ನಾಡು ನುಡಿಗಾಗಿ ದುಡಿಯುವವರಿಗೆ, ಪರಿಷತ್ತಿಗೆ, ಸರ್ಕಾರಕ್ಕೆ, ಸಾರ್ವಜನಿಕರಿಗೆ ಮಾರ್ಗದರ್ಶಕ ಸೂಚನೆಗಳಾಗಿವೆ, ದಾರಿದೀಪಗಳಾಗಿವೆ. ಇಂಥ ಅಧ್ಯಕ್ಷ ಭಾಷಣಗಳು, ಸಮ್ಮೇಳನದಲ್ಲಿ ಪ್ರತಿಗಳನ್ನು ಹಂಚುವುದರ ಮೂಲಕ, ಕನ್ನಡ ನುಡಿಯಲ್ಲಿ ಪ್ರಕಟಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ನಾಡಿನ ಓದುಗರಿಗೆ, ಸಾಹಿತಿಗಳಿಗೆ, ವಿದ್ಯಾರ್ಥಿಗಳಿಗೆ ಸದಾಕಾಲ ಪುಸ್ತಕರೂಪದಲ್ಲಿ ದೊರೆಯಬೇಕೆಂದು ಪರಿಷತ್ತಿನ ಅಧ್ಯಕ್ಷರಾದ ಜಿ.ನಾರಾಯಣ ಅವರು ಗ್ರಂಥರೂಪದಲ್ಲಿ ಪ್ರಕಟಿಸಲು ಮುಂದಾದರು. ರಂ. ಶ್ರೀ. ಮುಗಳಿ ಅವರ ಸಂಪಾದಕತ್ವದಲ್ಲಿ ಮೊದಲ ೩ ಸಂಪುಟಗಳು ಪ್ರಕಟವಾದವು. ೪ನೇ ಸಂಪುಟ ಪ್ರೊ. ಹಂಪನಾ ಅವರು ೫ನೇ ಸಂಪುಟವನ್ನು, ಗೊ.ರು.ಚೆನ್ನಬಸಪ್ಪ ನವರು ೬ನೇ ಸಂಪುಟವನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ಸಂಪಾದಿಸಿದರು. ಇದೀಗ ಸಮ್ಮೇಳನಾಧ್ಯಕ್ಷರ ೭ನೇ ಭಾಷಣಗಳ ಸಂಪುಟ ಸಮ್ಮೇಳನ (೭೨ ರಿಂದ ೮೧ವರೆಗೆ) ಪ್ರಕಟವಾಗುತ್ತಿದೆ.

ಈ ೭ನೇ ಸಂಪುಟ ಪ್ರಕಟವಾಗಲು ಮುಖ್ಯಪ್ರೇರಕರು ಪರಿಷತ್ತಿನ ಶತಮಾನೋತ್ಸವ ವರ್ಷದಲ್ಲಿ ಪುಂಡಲೀಕ ಹಾಲಂಬಿ ಅವರು. ಉತ್ಸಾಹಶಾಲಿಗಳೂ, ಸಂಘಟಕರೂ ದೃಢನಿರ್ಧಾರಕರೂ ಆದ ಅವರು ನನ್ನನ್ನು ಒತ್ತಾಯಿಸಿ ಪರಿಷತ್ತಿನ ೧೦೦ ವರ್ಷಗಳ ಇತಿಹಾಸ ಗ್ರಂಥವನ್ನು ಬರೆಯಿಸಿದರು. ತಮ್ಮ ಅವಧಿಯಲ್ಲೇ ಪ್ರಕಟವಾಗಬೇಕೆಂದು ಬಯಸಿದರು. ಅವರ ಅವಧಿಯಲ್ಲಿ ಪ್ರಕಟವಾಯಿತು. ಪರಿಷತ್ತಿನ ಇತಿಹಾಸ ಕುರಿತು ಹತ್ತಾರು ಲೇಖನಗಳು ಹಲವಾರು ಗ್ರಂಥಗಳು ಬಂದಿದ್ದರೂ ಸಮಗ್ರವಾಗಿ ಬೃಹತ್ ಗ್ರಂಥ ಅದುವರೆಗೆ ರಚಿತವಾಗಿರಲಿಲ್ಲ. ಅದುವರೆಗೆ ರಚಿತವಾಗಿರಲಿಲ್ಲ. ಅಂಥ ಗ್ರಂಥ ನನ್ನಿಂದ ಬರಲು ಅವರ ದೃಢನಿರ್ಧಾರ ಮತ್ತು ಪ್ರಕಟನ ಸಮಿತಿಯ ಸಂಚಾಲಕರಾದ ಜೆ.ಎನ್. ಶಾಮರಾವ್ ಅವರ ಮಾರ್ಗದರ್ಶನ ಕಾರಣವಾಯಿತು.

ಆ ಸಂದರ್ಭದಲ್ಲಿ ಮೂರು ಸಲಹೆಗಳನ್ನು ಪುಂಡಲೀಕ ಹಾಲಂಬಿ ಅವರ ಮುಂದಿಟ್ಟೆ.

೧. ಕನ್ನಡನುಡಿ, ಪರಿಷತ್ ಪತ್ರಿಕೆಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಆಧಾರಪ್ರಾಯವಾದ ಅನೇಕ ಲೇಖನಗಳು ಪ್ರಕಟವಾಗಿವೆ. ಅವುಗಳನ್ನು ಸಂಗ್ರಹಿಸಿ ಹಲವು ಸಂಪುಟಗಳಲ್ಲಿ ಪ್ರಕಟಿಸಿರುವುದು ಶತಮಾನೋತ್ಸವ ವರ್ಷದಲ್ಲಿ ಆಗಬೇಕಾದ

ಕಾರ್ಯ ಎಂದು ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಸೂಚಿಸಿದ್ದಾರೆ. ಅದನ್ನು ಕಾರ್ಯಗತಗೊಳಿಸಬೇಕು.

೨. ಕನ್ನಡ ಸಾಹಿತ್ಯ ಪರಿಷತ್ತು ನೂರು ವರ್ಷಗಳಲ್ಲಿ (೧೯೧೫-೨೦೧೫) ೧೫೦೦ಕ್ಕೂ ಹೆಚ್ಚು ಶ್ರೇಷ್ಠ ಕನ್ನಡ ಗ್ರಂಥಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ನೂರಾರು ಗ್ರಂಥಗಳು ಸಂಶೋಧಕರಿಗೆ ಆಕರ ಗ್ರಂಥಗಳಾಗಿವೆ, ಓದುಗರಿಗೆ ಸ್ಫೂರ್ತಿಗ್ರಂಥ ಗಳಾಗಿವೆ. ಇತಿಹಾಸಕಾರರಿಗೆ, ಭಾಷಾಪ್ರೇಮಿಗಳಿಗೆ ಉಪಯುಕ್ತ ಗ್ರಂಥಗಳಾಗಿವೆ. ಇದುವರೆಗೆ ಪರಿಷತ್ತು ಪ್ರಕಟಿಸಿದ ಎಲ್ಲ ಗ್ರಂಥಗಳನ್ನು ಸಂಗ್ರಹಿಸಿ ಖಾಯಂ ಗ್ರಂಥ ಪ್ರದರ್ಶನ ಏರ್ಪಡಿಸಬೇಕು; **ಗ್ರಂಥವಿವರಣ ಸಂಚಿಕೆ** ಪ್ರಕಟಿಸಬೇಕು.

೩. ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳ ೭ನೇ ಸಂಪುಟ ಪ್ರಕಟವಾಗಿಲ್ಲ, ಅದು ಪ್ರಕಟವಾಗಬೇಕು.

ಈ ಸಲಹೆಗಳು ಕಾರಣಾಂತರಗಳಿಂದ ಅವರ ಕಾಲಾವಧಿಯಲ್ಲಿ ಕಾರ್ಯಗತವಾಗಲಿಲ್ಲ. ಈಗ ಉತ್ಸಾಹಶಾಲಿಗಳಾಗಿ ದಕ್ಷ ಆಡಳಿತಗಾರರಾಗಿ, ಅಧ್ಯಕ್ಷರಾದ ಸಾಹಿತಿಗೆ ಮನು ಬಳಿಗಾರರು ಈ ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತಾರೆಂದು ಆಶಿಸುತ್ತೇನೆ.

ಇನ್ನು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳ ೭ನೇ ಸಂಪುಟವನ್ನು ನೀವೇ ಸಿದ್ಧಪಡಿಸಿಕೊಡಿ ಪ್ರಕಟಿಸುತ್ತೇನೆ ಎಂದು ಹೇಳಿದ ಕೂಡಲೇ ೭ನೇ ಸಂಪುಟವನ್ನು ಸಿದ್ಧಪಡಿಸಿದೆ. ಅಷ್ಟರಲ್ಲೇ ಪರಿಷತ್ತಿನ ಅಧ್ಯಕ್ಷರ ಚುನಾವಣೆ ಬಂದು ಪುಂಡಲೀಕ ಹಾಲಂಬಿ ಅವರ ಕಾಲದಲ್ಲಿ ಪ್ರಕಟವಾಗಲಿಲ್ಲ. ಅನಂತರ ಪರಿಷತ್ತಿನ ಅಧ್ಯಕ್ಷರಾಗಿ ಬಂದಿರುವ ಮನುಬಳಿಗಾರರು "ಇದು ಆಗಬೇಕಾದ ಕೆಲಸ" ಎಂದು ೭ನೇ ಸಂಪುಟವನ್ನು ಮುದ್ರಿಸಲು ಅನುಮತಿಸಿದರು. ಈ ಸಂಪುಟದ ಪ್ರಕಟನೆಯಿಂದ ೧೦೦ ವರ್ಷಗಳಲ್ಲಿ ಪರಿಷತ್ತು ನಡೆಸಿದ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳೆಲ್ಲ ಪೂರ್ಣವಾಗಿ ಪ್ರಕಟವಾದಂತೆ ಆಗಿದೆ.

ಈ ಸಂಪುಟವನ್ನು ಸಿದ್ಧಗೊಳಿಸಲು ಕಾರಣಕರ್ತರಾದ ಪುಂಡಲೀಕ ಹಾಲಂಬಿ ಅವರಿಗೂ ಪ್ರಕಟನೆಗೆ ಅನುಮತಿ ನೀಡಿ ನೇರವಾಗಿ ಮುನ್ನುಡಿ ಬರೆದುಕೊಟ್ಟು ಪರಿಷತ್ತಿನ ಅಧ್ಯಕ್ಷರಾದ ಮನು ಬಳಿಗಾರ್ ಅವರಿಗೂ, ಮುದ್ರಣ ಕಾರ್ಯದಲ್ಲಿ ನೆರವಾದ ಪರಿಷತ್ತಿನ ಸಿಬ್ಬಂದಿ ಮತ್ತು ಅಚ್ಚುಕೂಟದವರಿಗೂ ಹಾಗೂ ಪರಿಷತ್ತಿನ ಪದಾಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

೨೨.೭.೨೦೧೬
ಬೆಂಗಳೂರು

ಜಿ. ಅಶ್ವತ್ಥನಾರಾಯಣ
ಸಂಪಾದಕ
ದೂ : ೦೮೦-೨೬೬೩೭೭೮೩

ಪರಿವಿಡಿ


ಚಿತ್ರಗಳು

ಸಮ್ಮೇಳನಾಧ್ಯಕ್ಷರು (ಸಂಪುಟ ೭)

ಸಮ್ಮೇಳನಾಧ್ಯಕ್ಷರುಗಳ ಭಾಷಣಗಳು

ಸಂಪುಟ - ೨

(೧೦೦೬-೧೦೯೫)



ಶಾಂತರಸ ಹೆಂಬೇರಾಳು

೭೨ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೨೭,೨೮,೨೯ ಜನವರಿ ೨೦೦೬ – ಸ್ಥಳ : ಬೀದರ್

ಪರಿಚಯ

ಶಾಂತರಸ ಹೆಂಬೇರಾಳು

ಶಿಕ್ಷಣ : ಕಾವ್ಯ-ಕಥೆ-ಕಾದಂಬರಿ-ಸಂಶೋಧನೆ-ಅನುವಾದ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿರುವವರು ಶಾಂತಯ್ಯ ಹೆಂಬೇರಾಳು ಶಾಂತರಸರು, (ಶಾಂತಯ್ಯ ನಿಜನಾಮ. ಶಾಂತರಸ ಕಾವ್ಯನಾಮ) ಚೆನ್ನಬಸವಯ್ಯ-ಸಿದ್ದಲಿಂಗಮ್ಮ ದಂಪತಿಗಳಿಗೆ ೭-೪-೧೯೨೪ರಲ್ಲಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸ ಉರ್ದು ಮಾಧ್ಯಮದಲ್ಲಿ ಸಿರಿವಾರ ಮುಷ್ಟೂರು, ಗುಲ್ಬರ್ಗ, ರಾಯಚೂರು, ಲಾತೂರುಗಳಲ್ಲಿ ನಡೆಯಿತು. ೧೯೪೮ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಶಾಲೆಯಿಂದ ಹೊರದೂಡಿಸಿಕೊಂಡಿದ್ದರು.

ಮನ್ನಣೆ : ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೮೫) ರಾಜ್ಯನಾಟಕ ಅಕಾಡೆಮಿಯ ಫೆಲೋಷಿಪ್ (೧೯೯೩) ವಿದ್ಯಾವರ್ಧಕ ಸಂಘದ ಬಹುಮಾನ (೧೯೮೫) ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಸದಸ್ಯತ್ವ (೧೯೯೭) ಇವರಿಗೆ ಲಭಿಸಿದೆ.

ಸಾಹಿತ್ಯ ಸೇವೆ : ಕನ್ನಡ ಗಜಲ್ (ಕಾವ್ಯ), ಬಯಲುಸೀಮೆಯ ಬಯಲು (ಕಾವ್ಯ), ಸತ್ಯಸ್ನೇಹಿ (ನಾಟಕ), ನಂಜುನೊರೆವಾಲು (ನಾಟಕ), ಉಮ್‌ರಾವ್ ಜಾನ್ ಅದಾ (ಅನುವಾದ), ಬಸವಪೂರ್ವಯುಗದ ಶರಣರು (ಸಂಶೋಧನೆ), ಪುರಾತನರ ಪುರಾಣ, ಮುಸುಕು ತೆರೆ, ಬೆನ್ನ ಹಿಂದಿನ ಬೆಳಕು ಇತ್ಯಾದಿ.

ಶಾಂತರಸರು ೧೩-೪-೨೦೦೮ರಲ್ಲಿ ನಿಧನರಾದರು.

ಶಾಂತರಸ ಹೆಂಬೇರಾಳು
೭೨ನೇ ಸಮ್ಮೇಳನಾಧ್ಯಕ್ಷರ ಭಾಷಣ
೨೦೦೬

ನುಡಿ ನಮನ :

ಪಾತಾಳದಿಂದತ್ತ ಮಾತ ಬಲ್ಲವರಿಲ್ಲ
ಗಗನದಿಂದ ಮೇಲೆ ಅನುಭಾವ ತಾನಿಲ್ಲ
ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ
ಹೊರಗಣ ಹೊರಗನು ಅರಿಯಬಲ್ಲವರಿಲ್ಲ
ಹಿಂದಣ ಹಿಂದನು ಮುಂದಣ ಮುಂದನು
ತಂದು ತೋರಿದ ನಮ್ಮ ಗುಹೇಶ್ವರನು.

ಅಖಂಡ ಕರ್ನಾಟಕದ ಬಂಧುಗಳೇ, ಕನ್ನಡವನ್ನು ತನ್ಮೂಲಕ ಭಾರತವನ್ನು ಪ್ರೀತಿಸುತ್ತ ವಿಶ್ವದ ತುಂಬೆಲ್ಲ ಬದುಕುತ್ತಿರುವ ಸಕಲ ಜೀವರೇ, ತಮ್ಮೆಲ್ಲರಿಗೂ ಶರಣು ಶರಣಾರ್ಥಿ.

ಬಂಧುಗಳೇ, ಅಲ್ಲಮನ ಈ ವಚನ "ಮಾತು" ಮತ್ತು "ಅನುಭಾವ"ಗಳನ್ನು ಪರಿವ್ಯಾಖ್ಯಾನಿಸುವ ಪ್ರಯತ್ನ ಮಾಡುತ್ತದೆ. "ಮಾತು" ಅಂದರೆ ಭಾಷೆ, ಅರ್ಥಾತ್ ಸಂಸ್ಕೃತಿ. ತಾತ್ಪರ್ಯ ಒಟ್ಟು "ಬದುಕು" ಎಂದೇ ಅರ್ಥ. ಜೀವಿಯ ಒಟ್ಟು ಬದುಕಿನ ಪ್ರಚಂಡ ಅಸ್ತಿತ್ವ ಅದರ ಶಕ್ತಿ, ಸಾಮರ್ಥ್ಯ, ಅನಂತತೆ ಕುರಿತು; ಅದೇ ಕಾಲಕ್ಕೆ ಬದುಕಿನ ಇತಿಮಿತಿ ಕುರಿತು ವಾಸ್ತವದ ನೆಲೆಯಲ್ಲಿ ನಡೆಸಿದ ಅನ್ವೇಷಣೆಯಾಗಿ ನನಗಾದರೂ ಅರ್ಥ ಕಟ್ಟಿಕೊಡುತ್ತಿದೆ.ಏಕೆಂದರೆ ನಾವೆಲ್ಲ ಇಂದು ವಿಶ್ವವೆಂಬ ಹಳ್ಳಿಯೊಂದರ ಪರಿವ್ಯಾಪ್ತಿಯಡಿಯಲ್ಲಿ ಏಕಕಾಲಕ್ಕೆ ತೀರ ವಿಸ್ತೃತವೂ, ಇನ್ನೊಂದು ಮಗ್ಗುಲಲ್ಲಿ ತೀರ ಕುಬ್ಜರೂ ಆಗುತ್ತಿದ್ದೇವೆ. ನಾವೇನಾಗುತ್ತಿದ್ದೇವೆ ಎಂಬುದಕ್ಕೆ ನಾವೇ ಜವಾಬ್ದಾರರು ಹೌದೇ, ಅಲ್ಲವೆ? ಎಂಬ ದ್ವಂದ್ವಗಳು, ನಾವು ಮತ್ತೇನೋ ಆಗಬೇಕಾಗಿತ್ತಲ್ಲ ಎಂಬ ತಳಮಳವೂ, ಅರಿವಿಲ್ಲದಂತೆ ಯಾರಿಗೋ ನಮ್ಮನ್ನು ನಾವು ಮಾರಿಕೊಂಡುಬಿಟ್ಟಿವೇನೋ ಎಂಬ ಆತಂಕವೂ ನಮ್ಮನ್ನು ಕಾಡುತ್ತಿವೆ.

ಈ ರೀತಿ ದ್ವಂದ್ವ, ತಳಮಳ, ಆತಂಕಗಳು ಏಕಕಾಲಕ್ಕೆ ಮುತ್ತಿಕೊಂಡಿರುವ ಈ ಸಮ್ಮಿಶ್ರ ಭಾವ ತಾಕಲಾಟಗಳ ವಿಚಿತ್ರ ಮನೋಸ್ಥಿತಿಯಲ್ಲಿ ನುಡಿಹಬ್ಬ ನಡೆಸುತ್ತಿದ್ದೇವೆ. ಹಿಂದಿನ ಹಲವು ಸಮ್ಮೇಳನಾಧ್ಯಕ್ಷರುಗಳು ಗುರುತಿಸಿರುವಂತೆ ಇದು ಕನ್ನಡದ ಹಬ್ಬ, ಸಂತೆ, ಜಾತ್ರೆ, ಉತ್ಸವ, ಮೆರವಣಿಗೆ, ಸಾಂಸ್ಕೃತಿಕ ಚಿಂತನ, ರಾಜಕೀಯ ವೈಭವ, ಸಾಹಿತಿಗಳ ಪರಿಷೆ ಏನೆಲ್ಲವೂ ಹೌದು ಮತ್ತು ಅಲ್ಲ. ನಾನು ಹೌದು ಮತ್ತು ಅಲ್ಲ ಎಂಬ ಎರಡೂ ವಿರೋಧಿ ನೆಲೆಯ ಶಬ್ದಗಳನ್ನು ಏಕಕಾಲಕ್ಕೆ

ಬಳಸುವ ಮೂಲಕ ವರ್ತಮಾನದ ಸಂಕೀರ್ಣಾತಿಸಂಕೀರ್ಣ ಬದುಕಿನ ದಿಗ್ದರ್ಶನ ಮಾಡಿಸುವ ಪ್ರಯತ್ನಕ್ಕಿಳಿಯುತ್ತೇನೆ.

ಇಂದು ನಮ್ಮ ಬದುಕು ಹೌದು ಮತ್ತು ಅಲ್ಲ ಎರಡರ ನಡುವಿನ ಬಿಕ್ಕಟ್ಟಿನಲ್ಲಿ ಹೊಸದೊಂದು ಸತ್ಯಕ್ಕೆ (ಸತ್ಯ ಎಂಬುದು ಕೂಡ ಸಾಪೇಕ್ಷ ಎಂಬ ತಿಳುವಳಿಕೆಯೊಂದಿಗೆ) ತೆರೆದುಕೊಳ್ಳುವ ಧಾವಂತದಲ್ಲಿದೆ. ಈ ಸತ್ಯವಾದರೂ ಹಲವು ಸುಳ್ಳು ಭ್ರಮೆಗಳೊಂದಿಗೆ ಕಳ್ಳೆಮಿಳ್ಳೆಯಾಡಿಸುತ್ತಿದೆ, ಬದುಕು ಆಟವಾದಂತೆ ಆಡುತ್ತಿರುವವರ ಮನಸ್ಸುಗಳಲ್ಲಿ ಹಿರ್ಸ್, ಹ್ಯಾವ, ಜಿದ್ದುಗಳು ಹೆಚ್ಚಾಗುತ್ತಿವೆ. ಈ ಜಿದ್ದು, ಹಿರ್ಸ್, ಹ್ಯಾವಗಳನ್ನು ನಕಾರಾತ್ಮಕವಾಗಿಯೇ ಚರ್ಚಿಸಬೇಕಾಗಿಲ್ಲ. ಏಕೆಂದರೆ ಬದುಕೇ ಅಂಥದ್ದು. ಅದು ಕೇವಲ ನಕಾರಕ್ಕೋ ಅಥವಾ ಕೇವಲ ಸಕಾರಕ್ಕೋ ಬಿಚ್ಚಿಕೊಳ್ಳುವಂಥದ್ದಲ್ಲ. ಹೀಗಿರುವಾಗ ಬದುಕಿಗೆ ನಾವು ಏನೆಲ್ಲ ಪರಿಭಾಷೆಗಳನ್ನು ಕಟ್ಟಿಕೊಂಡು ನಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಂಡು ಹೊರಟಿರುವಾಗಲೂ ಅದು ಅವುಗಳಿಂದ ಜಿಗಿದು ನಿತಾಂತ ನಗ್ನವಾಗಿ ಅಣಕಿಸುತ್ತದೆ. ಆದ್ದರಿಂದ ಅದನ್ನು ನಿರಪೇಕ್ಷ ನೆಲೆಯಲ್ಲಿ ಗ್ರಹಿಸುತ್ತಿರುವಾಗಲೂ ನಮ್ಮ ಸಂದರ್ಭಗಳಿಗೆ ಅಂದರೆ ನಾವು ಬದುಕಿರುವ ಸ್ಥಿತಿಗತಿಯ ಆಗುಹೋಗುಗಳೊಂದಿಗೆ ಸಂವೇದಿಸಿ ಕೊಳ್ಳುವ ಜರೂರಿ ಇದ್ದೇ ಇರುತ್ತದೆ. ಈ ಜರೂರಿಯ ಹತ್ತಾರು ಹುಡುಕಾಟಗಳಲ್ಲಿ ಸಂಸ್ಕೃತಿ ಚಿಂತನೆಯು ಬಹುಮುಖ್ಯವಾದುದು. ಇಂಥ ಸಂಸ್ಕೃತಿ ಚಿಂತನೆಯ ಬಹುಮುಖ್ಯ ನೆಲೆಗಳೆನಿಸಿಕೊಂಡಿರುವ ಸಾಹಿತ್ಯ ಸಮ್ಮೇಳನಗಳು ಬದುಕನ್ನು ಹೊಸ ಪ್ರಮೇಯಗಳಿಗೆ ಒಡ್ಡಿಕೊಳ್ಳುವ "ಹಿಕಮತ್ತು"ಗಳಾಗಬೇಕಿದೆ. "ಹಿಕಮತ್ತು" ಎಂಬುದನ್ನು ನಾನು ಈ ಹೊತ್ತು ಕನ್ನಡ ಮಾತನಾಡುವ ಮತ್ತು ಕನ್ನಡವನ್ನೆ ಬದುಕುವ ಒಟ್ಟು ಜನಾಂಗದ ಬಾಳ್ವೆಯ ಪ್ರಶ್ನೆಯಾಗಿ ನಿರ್ವಚಿಸಿಕೊಂಡಿದ್ದೇನೆ.

ಕನ್ನಡ ನುಡಿ ಚಿಂತನೆ ಕರ್ನಾಟಕದ ನಿರ್ದಿಷ್ಟ ಭೌಗೋಲಿಕ ಪ್ರದೇಶದಲ್ಲಿ ವಾಸಿಸುತ್ತಿರುವವರ ಬಾಳ್ವೆಯ ಪ್ರಶ್ನೆ ಮಾತ್ರವಲ್ಲ; ಕನ್ನಡ ಮಾತಾಡುವವರು ಎಲ್ಲೆಲ್ಲಿ ವಾಸಿಸುತ್ತಿರುವರೋ ಅವರೆಲ್ಲರೂ ಹಿಡಿ ನೆಮ್ಮದಿಯಿಂದ ಬದುಕುವಂಥ ವಾತಾವರಣ ಕಲ್ಪಿಸುವ ರಾಜಕೀಯ ಇಚ್ಛಾಶಕ್ತಿಯ ಚರ್ಚೆವರೆಗೂ ಇದರ ಅರ್ಥವನ್ನು ವಿಸ್ತರಿಸಿಕೊಳ್ಳಬೇಕಿದೆ.

ಇಂಥ ಚರ್ಚೆಯೊಂದನ್ನು ಚಾಲನೆಗೊಳಿಸುವಂಥ "ಅಧ್ಯಕ್ಷ ಸ್ಥಾನ" ಒದಗಿಸಿಕೊಟ್ಟು ಈ ಇಳಿವಯಸ್ಸಿನಲ್ಲಿ ಬೌದ್ಧಿಕ ಹರೆಯ ಉಕ್ಕುವಂತೆ ಹಾರೈಸಿದ ಸಮಸ್ತ ಕನ್ನಡಿಗರಿಗೂ ಭಾಲ್ಕಿಯ ಚನ್ನಬಸವ ಪಟ್ಟದ್ದೇವರ ವೇದಿಕೆ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕನ್ನಡ ಮಣ್ಣಿನ ಚೈತನ್ಯ, ವಚನಕಾರರ ಭೂಮಿಯ ಬೆವರ ಸೊನೆಯ ಮಾನವತಾವಾದಿ ಭಾಲ್ಕಿಯ ಚನ್ನಬಸವ ಪಟ್ಟದ್ದೇವರ ಸ್ಮೃತಿ ಜ್ಯೋತಿಯೊಂದಿಗೆ ಅಂಕಿತವಾಗಿರುವ ಈ ವೇದಿಕೆಯಿಂದ ನಾನು, ಅವರ ಕರುಣೆಯ ಕಂದ, ಸಮ್ಮೇಳನ

ಅಧ್ಯಕ್ಷನಾಗಿ ಮಾತನಾಡುತ್ತಿರುವದು ನನಗಂತೂ ಅನಿರ್ವಚನೀಯ ಆನಂದ ನೀಡುತ್ತಿದೆ. ಪಟ್ಟದ್ದೇವರು, ನಾನು ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶವೆಂಬ ಮೂರು ಭಾವಘಟಕಗಳ ಸುತ್ತ ಈ ಅರವತ್ತು, ಎಪ್ಪತ್ತು ವರ್ಷಗಳ ಸಂಘರ್ಷಮಯ ಪರಂಪರೆ ಇದೆ. ಕರುಳು ಬಳ್ಳಿಯ ಆಪ್ಯಾಯಮಾನ ನಂಟಿದೆ. ಈ ನಾಡಿನ ಬದುಕು, ಬದುಕೇ ಭಾಷೆಯಾದ ಕನ್ನಡತನದ ಹೋರಾಟದ ಗಾಥೆಯಿದೆ. ಕನ್ನಡವೆಂಬ ಭಾಷಿಕ ಹತ್ಯಾರುಗಳು ಕಾಲಕಾಲಕ್ಕೆ ಎದುರಿಸಿದ ಸವಾಲುಗಳು, ಅನ್ಯಭಾಷಿಕ ಸಮುದಾಯದೊಂದಿಗೆ ನಡೆಸಿದ ಸಂವಾದಗಳು, ಅನ್ಯಸಂಸ್ಕೃತಿಯ ಮುಖಾಮುಖಿಗಳು ಹೀಗೆ ಏನೆಲ್ಲ ಭಾವಸಂವೇದಿ ಪಲಕುಗಳು ಒಂದೊಂದಾಗಿ ನನ್ನೊಳಗೆ ಬಿಚ್ಚಿಕೊಳ್ಳುತ್ತವೆ. ಶರೀರವೆಂಬ ಈ ಎಲುವು ತೊಗಲಿನ ಹಂದರಕ್ಕೆ ಮುಪ್ಪೆಂಬ ಪ್ರಾಕೃತಿಕ ಅವಸ್ಥೆ ಅಂಟಿಕೊಂಡಿದ್ದರೂ ಮನಸಿನ ಹರೆಯಕ್ಕೆ ಬದ್ಧನಾಗಿರುವ ನನಗೆ ಕಳೆದ ಕ್ಷಣಗಳು ಹಚ್ಚಹಸುರಾಗಿ ಉಸಿರಬಳ್ಳಿಗೆ ತಿದಿಯೊತ್ತುತ್ತಿವೆಯಾದ್ದರಿಂದ ತುಸುವಾದರೂ ನಿಮ್ಮೊಂದಿಗೆ ಹಂಚಿಕೊಳ್ಳದೇ ಇರಲು ಸಾಧ್ಯವಾಗದು. ಹಾಗೆ ನೋಡಿದರೆ ನಾನು ಇತಿಹಾಸದ ಕುರುಡು ಆರಾಧಕನೂ ಅಲ್ಲ. ಅಥವಾ ಇತಿಹಾಸದ ತುಚ್ಛೀಕರಣದ ಮೂಲಕವೇ ವರ್ತಮಾನದ ಕಿರೀಟಕ್ಕೆ ಗರಿ ಮೂಡಿಸಿಕೊಳ್ಳಬೇಕೆಂಬ ಹಂಬಲವುಳ್ಳವನೂ ಅಲ್ಲ. ಇತಿಹಾಸದ ಕಸಬರಿಗೆಯಿಂದ ವರ್ತಮಾನದ ಅಂಗಳವನ್ನು ಗುಡಿಸುವ ಮೂಲಕವೇ ಭವಿಷ್ಯವನ್ನು ಸ್ವಚ್ಛವಾಗಿಡಬೇಕೆಂಬ ನಂಬಿಕೆಯುಳ್ಳವನು ನಾನು.

ಧರಿನಾಡ ಸಾಹಿತ್ಯ ಸಿರಿ*

ಎರಡು ಸಾವಿರ ವರ್ಷಗಳಿಗೂ ಮಿಕ್ಕು ದೀರ್ಘ ಇತಿಹಾಸವುಳ್ಳ ಕನ್ನಡ ಸಾಹಿತ್ಯವು ಜಾಗತಿಕ ಸಾಹಿತ್ಯಕ್ಷೇತ್ರಗಳೊಂದಿಗೆ ಗುರುತಿಸಿಕೊಳ್ಳುವ ತಾಕತ್ತು ಹೊಂದಿದೆ. ಸಂಕೀರ್ಣ ಸಾಮಾಜಿಕ ವ್ಯವಸ್ಥೆಯ ಪ್ರತಿನಿಧಿತ್ವವನ್ನು ನಿಭಾಯಿಸಿ ಕೊಂಡು ಬಂದಿರುವ ಈ ಸಾಹಿತ್ಯ ಹಲವು ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡಿದೆ. ಹಾಗೆ ನೋಡಿದರೆ ಒಟ್ಟು ಕನ್ನಡ ಸಾಹಿತ್ಯವೆಂದು ಇಂದು ಗುರುತಿಸಿಕೊಳ್ಳುತ್ತಿರುವ ಮೊತ್ತದಲ್ಲಿ ಹಿರಿಯ ಪಾಲು ನಾವು ನಿಂತ ನೆಲದ ಸೃಷ್ಟಿಯೇ ಆಗಿದೆ. ಅಂದರೆ ಹೈದ್ರಾಬಾದ ಕರ್ನಾಟಕವೆಂದು ಗುರುತಿಸಿಕೊಂಡಿರುವ ಬೀದರ, ಗುಲಬರ್ಗಾ, ರಾಯಚೂರ, ಕೊಪ್ಪಳ ಜಿಲ್ಲೆಗಳ ಹರಹಿನಲ್ಲಿ ಸೃಷ್ಟಿಯಾದದ್ದು ಸ್ಮರಣೀಯ ಸಂಗತಿಯಾಗಿದೆ.

ಶ್ರೀವಿಜಯ ಮತ್ತು ನೃಪತುಂಗರ ಹೆಸರುಗಳೊಂದಿಗೆ ಜೋಡಿಸಿಕೊಂಡಿರುವ 'ಕವಿರಾಜಮಾರ್ಗ' ಮಾನ್ಯಖೇಟ (ಗುಲಬರ್ಗಾ ಜಿಲ್ಲೆಯ ಮಳಖೇಡ)ದಲ್ಲಿ ರಚನೆಯಾಗಿದೆ. ಇತ್ತೀಚೆಗೆ ಹಂಪ ನಾಗರಾಜಯ್ಯನವರು ತಮ್ಮ ಸಂಶೋಧನೆಯ ಮೂಲಕ ಕನ್ನಡದ ಮೊಟ್ಟಮೊದಲ ಉಪಲಬ್ಧಕೃತಿ ಎಂದು ಪ್ರತಿಪಾದಿಸುತ್ತಿರುವ

---

* ಧರಿನಾಡು ಎಂದು ಬೀದರ ಭಾಗಕ್ಕೆ ಕರೆಯುವ ವಾಡಿಕೆ ಇದೆ.

"ವಡ್ಡಾರಾಧನೆ"ಯು ಬೀದರ ಜಿಲ್ಲೆಯ ಹಳ್ಳಿಖೇಡ "ಬಿ" ಗ್ರಾಮದಲ್ಲಿ ಸೃಷ್ಟಿಯಾಗಿದೆ. "ಮಾನವ ಜಾತಿ ತಾನೊಂದೆ ವಲಂ" ಎಂದು ಹೇಳಿದ ಆದಿಕವಿ ಪಂಪ ಬೀದರ ಸೀಮೆಗೆ ಸಮೀಪವಾಗಿರುವ ಕರೀಮನಗರ ಜಿಲ್ಲೆಯ ಇಂದಿನ ವೇಮುಲವಾಡವನ್ನು ಆಳುತ್ತಿದ್ದ ಚಾಲುಕ್ಯ ವಂಶದ ಎರಡನೇ ಅರಿಕೇಸರಿಯ ಆಸ್ಥಾನದಲ್ಲಿದ್ದುಕೊಂಡು ಕೃತಿ ರಚಿಸಿದನು. ಕರೀಮನಗರ ಜಿಲ್ಲೆ ಆ ಹೊತ್ತು ಕನ್ನಡನಾಡಿನ ಭಾಗವಾಗಿತ್ತು. ಶಕ್ತಿಕವಿ ರನ್ನ ತರ್ದವಾಡಿ ನಾಡಿನ ಮುಧೋಳದಲ್ಲಿ ಜನಿಸಿ, ಶ್ರವಣಬೆಳ್ಗೊಳದಲ್ಲಿ ಅಧ್ಯಯನ ಮಾಡಿದವನಾದರೂ ಆಶ್ರಯವನ್ನು ಅರಸಿ ಬಂದದ್ದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಎರಡನೇ ತೈಲಪನ ಬಳಿಗೆ. ಇಮ್ಮಡಿ ತೈಲಪನ ಮಗ ಸತ್ಯಾಶ್ರಯ ಇರಿವ ಬೆಡಂಗನನ್ನು ತನ್ನ ಕಥಾನಾಯಕ ಭೀಮನೊಂದಿಗೆ ಸಮೀಕರಿಸಿ ಕಾವ್ಯ ಬರೆದ ಕವಿರತ್ನ ರನ್ನ ಈ ಭಾಗದ ಬದುಕನ್ನು ಅನಾವರಣಗೊಳಿಸುವ ಕೆಲಸ ಮಾಡಿದ್ದಾನೆ. ಎಂತಲೇ ಕರ್ನಾಟಕದ ಇತರ ಯಾವ ಭಾಗದಲ್ಲಿ ಎಲ್ಲೂ ಬಳಕೆಯಲ್ಲಿಲ್ಲದ, ಅಥವಾ ಪರಿಚಯವೂ ಇರದ ಹತ್ತಾರು ಶಬ್ದಗಳನ್ನು ಪಂಪ, ರನ್ನರು ಬಳಸಿದ್ದಾರೆ. ಅವುಗಳಲ್ಲನೇಕ ಪದರೂಪಗಳು ಇವತ್ತಿಗೂ ಬೀದರ ಭಾಗದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು.

"ಪಂಚತಂತ್ರ" ಬರೆದ ದುರ್ಗಸಿಂಹ ಚಾಲುಕ್ಯ ಜಯಸಿಂಹನಲ್ಲಿ ಸಂಧಿ ವಿಗ್ರಹಿಯಾಗಿದ್ದರೆ, ಉತ್ತರ ಭಾರತದಿಂದ ಬಂದ ಪುಷ್ಪದಂತ ಕವಿ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನಲ್ಲಿ ಆಶ್ರಯ ಪಡೆದುಕೊಂಡು ಇದೇ ಮಣ್ಣಿನ, ಉಪ್ಪಿನ ಋಣದಲ್ಲಿ 'ತ್ರಿಷಷ್ಟಿ ಮಹಾಪುರುಷ' 'ಗುಣಾಲಂಕಾರ', 'ಯಶೋಧರ ಚರಿತೆ', 'ನಾಗಕುಮಾರ ಚರಿತೆ'ಗಳನ್ನು ಅಪಭ್ರಂಶುವಿನಲ್ಲಿ ರಚಿಸಿದ್ದಾನೆ. ಇದೇ ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದುಕೊಂಡು "ಶಾಂತಿ ಪುರಾಣ" "ಭುವನೈಕ ರಾಮಾಭ್ಯುದಯ" ಕೃತಿಗಳನ್ನು ಬರೆದ ಪೊನ್ನ ಕವಿಯು ನಮ್ಮ ನೆಲದವನೆ. "ಕವಿಚೂತವನ ಚೈತ್ರ" ಬಿರುದಾಂಕಿತನಾದ ಲಕ್ಷ್ಮೀಶ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲೂಕಿನ ದೇವಪೂರದವನು.

ಭಾರತದ ಉತ್ತರ ದಿಕ್ಕಿನಿಂದ ಬರುವವರಿಗೆ ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡಿರುವ 'ಕಲ್ಯಾಣ', ಚಾಲುಕ್ಯ ಚಕ್ರವರ್ತಿಗಳ ಕರ್ಮಭೂಮಿಯಾದಂತೆ ಕನ್ನಡ ನಾಡವರ ಕಣಕಣದಲ್ಲೂ ಅರ್ಥವಂತಿಕೆ ತುಂಬಿದ ಧರಿನಾಡು ಕೂಡಾ. ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಕಲ್ಯಾಣವು ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿ ಜಗತ್ತಿನ ಗಮನ ಸೆಳೆದಿರುವದುಂಟು. ಕ್ರಿ.ಶ. ೧೦೬೩ ರಲ್ಲಿ ಕಾಶ್ಮೀರದಿಂದ ಬಂದ ಬಿಲ್ಹಣನು ಸಂಸ್ಕೃತದಲ್ಲಿ "ವಿಕ್ರಮಾಂಕ ದೇವಚರಿತಂ" ಕೃತಿ ರಚಿಸಿದರೆ, ಇದೇ ಅವಧಿಯಲ್ಲಿ ಬೀದರ ಜಿಲ್ಲೆಯ ಮಾಸಿಮಡು ಗ್ರಾಮದಲ್ಲಿ ಜನಿಸಿ ಗುಲಬರ್ಗಾದ ಮರತೂರಿನಲ್ಲಿ ನೆಲಸಿದ ವಿಜ್ಞಾನೇಶ್ವರನು ನ್ಯಾಯಶಾಸ್ತ್ರ ಕುರಿತು 'ಮಿತಾಕ್ಷರ' ರಚಿಸಿದ್ದಾನೆ. ೬ನೇ ವಿಕ್ರಮಾದಿತ್ಯನ ಮಗನಾದ ಮೂರನೇ ಸೋಮೇಶ್ವರನು ಸ್ವಂತ ಕವಿಯೂ ಪಂಡಿತನೂ ಆಗಿದ್ದು

"ಮಾನಸೋಲ್ಲಾಸ"(ಅಭಿಲಷಿತಾರ್ಥ ಚಿಂತಾಮಣಿ) ಎಂಬ ವಿಶ್ವಕೋಶವನ್ನು ಕಾಣಿಕೆಯಾಗಿ ಕೊಟ್ಟಿದ್ದಾನೆ.

ಆದ್ಯ ವಚನಕಾರನೆಂದು ಗುರುತಿಸಿಕೊಳ್ಳುತ್ತಿರುವ ಜೇಡರ ದಾಸಿಮಯ್ಯ ಗುಲಬರ್ಗಾ ಜಿಲ್ಲೆಯ ಸುರಪೂರ ಬಳಿಯಿರುವ ಮುದೇನೂರಿನ ನಿವಾಸಿ. ಅವನ ಹೆಂಡತಿ ಶಿವಶರಣೆ ದುಗ್ಗಳೆ ಗುಲಬರ್ಗಾದ ಗೊಬ್ಬೂರಿನವಳು. ಕೆಂಭಾವಿ ಭೋಗಣ್ಣ, ಸಗರದ ಬ್ರಹ್ಮಯ್ಯ, ಈ ಪಟ್ಟಿ ತುಂಬಾ ಬೆಳೆಯುತ್ತದೆ. ಕನ್ನಡ ಸಾಹಿತ್ಯದಲ್ಲಿ 'ವಚನ ಸಾಹಿತ್ಯ'ವೆಂಬ ಹೊಸ ರೂಪವೊಂದು ಆ ಹೊತ್ತಿನ ಸಮಾಜೋಧಾರ್ಮಿಕ ಸಂಘರ್ಷದಲ್ಲಿ ಮೈದಾಳಿ ನಿಂತದ್ದು ಕೂಡಾ ಇದೇ ನೆಲದಲ್ಲಿ. ಬಸವ, ಅಲ್ಲಮ, ಅಕ್ಕಮಹಾದೇವಿ, ಮುಕ್ತಾಯಿ, ನೀಲಮ್ಮ, ಹರಳಯ್ಯ, ಮಧುವರಸ ಮುಂತಾದ ಶರಣಸಂದೋಹದಲ್ಲಿ ಕರ್ನಾಟಕದ ಬದುಕು ಸಮೂಲವಾಗಿ ಚಾತುರ್ವರ್ಣ್ಯವನ್ನು ಧಿಕ್ಕರಿಸಿ ನಿಂತದ್ದು ಜಗತ್ತಿಗೆ ಇಂದಿಗೂ ಮಾದರಿಯಾಗಿದೆ. ವರ್ಗ, ವರ್ಣ, ಲಿಂಗ, ಜಾತಿಯ ವೈಷಮ್ಯಗಳನ್ನು ಕಿತ್ತೊಗೆಯಲು ಕ್ರಾಂತಿಯ ಕಹಳೆ ಮೊಳಗಿಸಿದ ಹೋರಾಟದ ನೆಲವೇ ಇದು. ಹರಳಯ್ಯ ಮಧುವರಸರ ಮಕ್ಕಳ ವಿಲೋಮ ವಿವಾಹವು ವರ್ಣಸಂಕರದ ಕಿಚ್ಚು ಹಚ್ಚಿ ತ್ಯಾಗ ಬಲಿದಾನಗಳ ಮೂಲಕವೇ ಬದಲಾವಣೆ ಸಾಧ್ಯ ಎಂಬುದನ್ನು ತೋರಿಸಿ ಕೊಟ್ಟಿದ್ದು ಇಲ್ಲಿಯೇ. ನಾಡಿನ ಮೂಲೆಮೂಲೆಗಳಿಂದ ಬಂದ ಅಸಂಖ್ಯಾತ ದಮನಿತರು ಸಮಾನತೆಯ ಬೆಳಕ ಬತ್ತಿಯನ್ನು ಕಣ್ಣಲ್ಲಿ ಹೊತ್ತಿಸಿಕೊಂಡು ಕಲ್ಯಾಣದ ಕೆಂಪು ನೆಲದಲ್ಲಿ ಉರಿಯುಂಡ ಕರ್ಪೂರವಾಗಿದ್ದಾರೆ. ಕ್ರಾಂತಿಗೆ ರಕ್ತ ಬಸಿದ ಅವರ ಕೆಂಪಿನ ಕಂಪು ಈ ಮಣ್ಣಿನ ಹುಡಿಯೊಳಗೆ ಗುಲಾಲು ಬುಕೀಟುಗಳ ಘಾಟು ಎಬ್ಬಿಸುವಂತಿದೆ.

ಕನ್ನಡ ನುಡಿಯಮ್ಮನಿಗೆ ನಮ್ಮ ಕವಿಗಳು ವರ್ಣಿಸಿರುವಂತೆ ಎರಡು ಸಿರಿಕಳಶಗಳು ತಾನೇ. ಒಂದು ವಚನವಾದರೆ ಇನ್ನೊಂದು ಕೀರ್ತನೆ. ಇನೇ ಘಟ್ಟದಲ್ಲಿ ಕೀರ್ತನೆಗಳ ಮುಖಾಂತರ ಭಾವತುಂಬಿ, ಮನತುಂಬಿ ಹಾಡಿ, ಆಡಿ ದಣಿದ ದಾಸರು ರಾಯಚೂರ ಎರೆಮಣ್ಣಿನ ಕಸುವುಳ್ಳ ಸಂತಾನ. ತತ್ವಪದ ಸಾಹಿತ್ಯಕ್ಕಂತೂ ಕೃಷ್ಣೆ ಭೀಮೆಯರ ಮಧ್ಯದ ಸಗರನಾಡು ಟಂಕಸಾಲೆಯೇ ಸರಿ. ಹೀಗೆ ಇದನ್ನು ಬೆಳೆಸುತ್ತ ಹೋಗುವುದಾದರೆ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನೇ ನಾನು ಪುನರ್ ಸಾದರ ಪಡಿಸಬೇಕಾದೀತು. ಈ ಮೇಲಿನ ಪಕ್ಷನೋಟದ ಮೂಲಕ ಒಟ್ಟು ಕನ್ನಡ ಸಾಹಿತ್ಯ ಮತ್ತು ಅದಕ್ಕೆ ವಸ್ತುವಾಗಿರುವ ಬದುಕು ಈ ಭಾಗದವರಿಂದಲೇ ಹದಗೊಂಡದ್ದು ಎಂಬುದನ್ನು ನಾನು ಮಗುದೊಮ್ಮೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತಿದ್ದೇನೆ. ಆಧುನಿಕ ಕನ್ನಡಸಾಹಿತ್ಯದ ಸಂದರ್ಭದಲ್ಲಿಯೂ ದಲಿತ-ಬಂಡಾಯ ಸಾಹಿತ್ಯದ ಕ್ರಾಂತಿ ಕಹಳೆ ಮೊಳಗಿದ್ದು ಈ ಭಾಗದಿಂದಲೇ ಎಂಬುದು ಗಮನಿಸಬೇಕು.

ಈ ಎಲ್ಲ ಹಿರಿಮೆ ಗರಿಮೆಗಳೊಂದಿಗೆ ಹಲವು ನೋವುಗಳನ್ನು ಈ ಭಾಗ ತನ್ನೊಡಲೊಳಗೆ ಕಾಪಿಟ್ಟುಕೊಂಡಿದೆ. ಅಪ್ಪಟ ಕನ್ನಡವನ್ನೆ ಗಟ್ಟಿಗೊಳಿಸುತ್ತ ಕನ್ನಡತನವನ್ನೆ ಹಾಸುಂಡು ಬದುಕುತ್ತಿರುವಾಗಲೂ ಈ ನೆಲ ಹಲವು ಭಾಷಿಕ ದಾಳಿಗಳನ್ನು ಎದುರಿಸಿದೆ. ಗಡಿನಾಡ ಸೀಮೆಗಳಾದ ಆಂಧ್ರ, ಮಹಾರಾಷ್ಟ್ರ ನಾಡುಗಳಿಂದ ಒತ್ತುವರಿ ಸಹಿಸಿಕೊಳ್ಳುತ್ತಲೇ ತನ್ನತನ ಉಳಿಸಿಕೊಳ್ಳಲು ಇಲ್ಲಿನ ಅಚ್ಚ ಕನ್ನಡದ ಬೇಸಾಯಗಾರರು ಅವಿರತ ಹೋರಾಟ ಮಾಡಿದ್ದಾರೆ. ದೇಶೀಯ ಮತ್ತು ಅನ್ಯದೇಶೀಯ ಪ್ರಭುತ್ವಗಳು ದಾಳಿ ಮಾಡಿದಾಗ ಇಲ್ಲಿಯ ಜನಸಾಮಾನ್ಯರು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸೌಹಾರ್ದ ಪರಂಪರೆಯನ್ನೇ ರೋಗ ನಿರೋಧಕ ಶಕ್ತಿಯಾಗಿ ಬಳಸಿಕೊಂಡಿದ್ದಾರೆ. ಕನ್ನಡದ ಮೇಲೆ ಕುತ್ತು ಬಂದಾಗ ಸರ್ವಸ್ವ ಮುಡುಪಿಟ್ಟು ಹೋರಾಟ ಮಾಡಿದ ಕೆಲವೊಂದು ಮಹನೀಯರನ್ನು ಇಲ್ಲಿ ಸ್ಮರಿಸಲೇಬೇಕು. ಏಕೆಂದರೆ ಕನ್ನಡ ಭಾಷೆಯ ಉಳಿವಿಗಾಗಿ ಈ ಭಾಗದವರು ಮಾಡಿದಷ್ಟು ಹೋರಾಟ ಬೇರೆ ಯಾವ ಭಾಗದವರೂ ಮಾಡಿಲ್ಲ ಎಂಬ ಮಾತು ಉತ್ಪ್ರೇಕ್ಷೆಯಲ್ಲ.

ರಾಯಚೂರಿನ ತಾರಾನಾಥರು, ಕಲಬುರ್ಗಿಯ ದೊಡ್ಡಪ್ಪ ಅಪ್ಪ, ದತ್ತಾತ್ರೇಯರಾವ ಹೇರೂರು, ಬೀದರಿನ ಪ್ರಭುರಾವ ಕಂಬಳಿವಾಲೆ, ಹೊರಗೆ ಉರ್ದು ಬೋರ್ಡು ಹಾಕಿ ಒಳಗೆ ಕನ್ನಡ ಕಲಿಸಿ ಆಳರಸರ ಕೆಂಗಣ್ಣಿಗೆ ಗುರಿಯಾದ ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು, ಆರ್.ವಿ.ಬಿಡಪ್ ಈ ಮುಂತಾದವರು ಕನ್ನಡಕ್ಕಾಗಿ ಮಾಡಿದ ಹೋರಾಟಗಳ ದೊಡ್ಡ ಇತಿಹಾಸವೇ ಇದೆ. ಆದರೆ ಈ ಸಂಗತಿಗಳು ಚಾರಿತ್ರಿಕ ಘಟ್ಟಗಳಲ್ಲಿ ದಾಖಲಾಗದೆ ಉಳಿದುಕೊಂಡಿವೆ. ಬರುಬರುತ್ತ ಇವೆಲ್ಲ ಸಂಪೂರ್ಣ ವಿಸ್ಮೃತಿಗೆ ಸರಿದುಹೋಗುವ ಅಪಾಯವೂ ಇಲ್ಲದಿಲ್ಲ. ಆದ್ದರಿಂದ ಮುಂದಿನ ಪೀಳಿಗೆಯವರು ಇಂಥ ಅಪರೂಪದ ಚಾರಿತ್ರಿಕ ಸ್ಫೂರ್ತಿಗಳನ್ನು ದಾಖಲಿಸುವುದಷ್ಟೇ ಅಲ್ಲ; ಇವುಗಳ ಭದ್ರ ಬುನಾದಿಯ ಮೇಲೆ ಭವಿಷ್ಯದ ಕನ್ನಡ ಕಟ್ಟಬೇಕಿದೆ.

ಕರುನಾಡ ಸಾಹಿತ್ಯ ಸಿರಿ

ಭಾರತ ಅತ್ಯಂತ ಪ್ರಾಚೀನ ಕಾಲದಿಂದಲೂ ಕೃಷಿಕೃತ್ಯವನ್ನೆ ಅಭಿವೃದ್ಧಿ ಪಡಿಸಿಕೊಂಡು ಬಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಇವರು ಕೃಷಿಯ ತೊಟ್ಟಿಲಾದ ಭೂಮಿ ಮತ್ತು ನೀರನ್ನು ಆರಾಧಿಸಿದ್ದಾರೆ. ಶಿವಸಂಸ್ಕೃತಿಯ ದಟ್ಟ ಕುರುಹುಗಳು ಹರಪ್ಪ ಮಹೊಂಜೊದಾರ ಸಂಸ್ಕೃತಿಯಲ್ಲಿ ಕಾಣಿಸಿಕೊಂಡಿರುವದಕ್ಕೂ ಒಕ್ಕಲುತನವೇ ಆಧಾರವಾಗಿದೆ. ಶಿವನ ಪ್ರತೀಕವಾದ "ಶಿವಲಿಂಗ", ಒಕ್ಕಲುತನಕ್ಕೆ ಆಧಾರವಾದ "ನಂದಿ", ಜೀವಶಕ್ತಿಯಾದ ನೀರು (ಗಂಗೆ). ಅದರೊಟ್ಟಿಗೆ ಉಳಿದೆಲ್ಲ ಪಶು, ಪಕ್ಷಿ, ಕೃಷಿ ಸಲಕರಣಗಳಾದ ರೆಂಟೆ, ಕುಂಟೆ, ನೇಗಿಲು, ಋತುಮಾನಗಳು, ಋತುಗಳ ವಿದ್ಯಮಾನಗಳನ್ನು ಪ್ರತಿನಿಧಿಸುವ ಹಬ್ಬ ಹರಿದಿನಗಳು ಹೀಗೆ ಇದೊಂದು

ಸ್ವಾಯತ್ತ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಂಥ ದೇಶ. ಇಂಥ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಯೂ ಪುಟ್ಟ ಭಾರತಿಯೇ ಸರಿ.

ಹೀಗಾಗಿಯೇ ಭಾರತದ ಎಲ್ಲ ಧರ್ಮ, ಮತ ಪಂಥಗಳು, ವಿಚಾರಗಳು, ದಾರ್ಶನಿಕ ನಿಲುವುಗಳು, ಭಾಷಾ ಪರಿವಾರಗಳನ್ನು ಒಗ್ಗೂಡಿಸಿಕೊಂಡು ಕರ್ನಾಟಕ ಸೌಹಾರ್ದತೆಯ ತೊಟ್ಟಿಲಾಗಿ ಬಾಳು ಹೂಡಿಕೊಂಡು ಬಂದಿದೆ. ತತ್ಫಲವಾಗಿಯೇ ಭಾಷಾ ಬಾಂಧವ್ಯ, ದಾರ್ಶನಿಕ ಸಂಕೀರ್ಣತೆ, ಪ್ರಾದೇಶಿಕ ಸಾಮರಸ್ಯ ಪರಸ್ಪರ ಕೊಡುಕೊಳ್ಳುವಿಕೆ ಇಲ್ಲಿ ರೂಢಿಯಲ್ಲಿದೆ. ನೆರೆಯ ಭಾಷಿಕರೊಂದಿಗೆ ತೀರ ಆತ್ಮೀಯವಾಗಿ ಬಾಳುತ್ತಿರುವವರು ನಾವು. ಇತ್ತೀಚೆಗೆ ಕೋಮುಶಕ್ತಿಗಳು, ಭಾಷಾಂಧರು ನಮ್ಮಗಳ ನಡುವೆ ಭಾವನಾತ್ಮಕ ಒಡಕು ಹುಟ್ಟಿಸಿ ಪರಸ್ಪರ ಶಾಂತಿ ಕದಡುವಂತೆ ಹುನ್ನಾರಗಳನ್ನು ಹೂಡಿದಾಗಲೂ ಜನತೆ ಅದಕ್ಕೆ ಸೊಪ್ಪು ಹಾಕಲಿಲ್ಲ. ಹೀಗೆ ಕನ್ನಡಿಗರು ಇತರ ಜನವಿರೋಧಿ ಶಕ್ತಿಗಳಿಗೆ ಮಣಿಯದೆ ಉಳಿದುಕೊಂಡು ಬರುತ್ತಿರುವದಕ್ಕೆ ದೀರ್ಘ ಚಾರಿತ್ರಿಕ ಸೌಹಾರ್ದ ಪರಂಪರೆಯೇ ಕಾರಣವಾಗಿದೆ ಎಂಬುದನ್ನು ಪರಾಂಬರಿಸಬೇಕು. ಕನ್ನಡ ನಾಡು-ನುಡಿಯ ಇತಿಹಾಸದತ್ತ ಒಂದು ಪುಟ್ಟ ನೋಟ ಹರಿಸಿದರೂ ಸಾಕು, ಈ ಮಾತು ಮನವರಿಕೆಯಾಗದಿರದು. ಭಾಷಿಕ ಚರಿತ್ರೆಯ ಪಲಕುಗಳನ್ನು ಒಂದೊಂದಾಗಿ ಬಿಚ್ಚುತ್ತ ಹೋದರೂ ಸರಿಯೇ ಅದರ ನಡೆಯಲ್ಲಿಯೇ ಸಾಂಸ್ಕೃತಿಕ ವಿದ್ಯಮಾನಗಳು ಇತರೆಲ್ಲ ಧಾರ್ಮಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಶಿಸ್ತುಗಳೊಂದಿಗೆ ತಳಕು ಹಾಕಿಕೊಂಡು ಒಟ್ಟು ಬದುಕಿನ ದೊಡ್ಡದೊಂದು ಸಹಬಾಳ್ವೆಯ "ಕ್ಯಾನವಾಸು" ಎದುರಾಗುತ್ತದೆ.

ಕರ್ನಾಟಕವೆಂಬ ಹೆಸರು ಹೊತ್ತ ಈ ನಾಡಿನಲ್ಲಿ ಜನಜೀವನದ ಕುರುಹು ಕಾಣಿಸಿಕೊಂಡ ಅತ್ಯಂತ ಪ್ರಾಚೀನ ಕಾಲದಿಂದಲೂ ಇವರ ಮನೆಮಾತು ಕನ್ನಡವೇ ಆಗಿತ್ತು. ಅದು ಮೂಲ ದ್ರಾವಿಡಕ್ಕೆ ಹೆಚ್ಚು ಸಮೀಪವಾದ ರೂಪ ಧರಿಸಿತ್ತು. ಈ ಮಣ್ಣಿನ ದುಡಿಮೆಗಾರರ ಎದೆಯ ಭಾಷೆಯಾದ ಕನ್ನಡಕ್ಕೆ ಕಾವ್ಯಭಾಷೆಯಾಗಿ ಶಿಷ್ಟಪದ ಸೀಮೆಗೇರಲು ಕೆಲಹೊತ್ತು ಹಿಡಿದಿರಬಹುದು. ಆದರೆ ಕೂಡಲಸಂಗಮ ದೇವರಿಗೆ ಕೇಡಿಲ್ಲವಾಗಿ ಅವರೆಲ್ಲ ತತ್ಪೂರ್ವದಲ್ಲಿಯೇ ತಾವು ಒಲಿದಂತೆ ಆಡುವದನ್ನು ಹಾಡುವದನ್ನು ರೂಢಿಸಿಕೊಂಡಿದ್ದರು. ಎಂತಲೇ ಪೂರ್ವದ ಹಳಗನ್ನಡ ರೂಪಗಳು, ಚೆತ್ತಾಣ, ಬೆದಂಡೆಯಂಥ ಜಾನಪದ ಮಟ್ಟುಗಳು, ಆಡುನುಡಿಯ ದೇಶೀ ನುಡಿಗಟ್ಟುಗಳು ಈ ಮುಂತಾದವುಗಳು ಆಯಾ ಕಾಲಕ್ಕೆ ತಕ್ಕಂತೆ ರೂಪ, ವಿನ್ಯಾಸಗಳೊಂದಿಗೆ ಬೆಳೆದುಕೊಂಡು ಬಂದಿವೆ. ಶಿಷ್ಟ ರಚನೆಯ ಪೂರ್ವದಲ್ಲಿಯೇ ನೂರಾರು ವರ್ಷಗಳವರೆಗೆ ಈ ಜನಸಾಮಾನ್ಯರು "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳಾಗಿ" ಬರೆದ ಸಾಹಿತ್ಯ ಅಪ್ಪಟ ದೇಶೀ ಚಿಂತನೆಯ ಕಣಜವಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ದ್ರಾವಿಡ ಭಾಷಾ ಪರಿವಾರಗಳ ವೈಶಿಷ್ಟ್ಯ ಇರುವುದೇ ಇಲ್ಲಿ. ಅವುಗಳಿಗಿರುವ ಅಖಂಡ ಜನಪರತೆ ಮತ್ತು ಜೀವಪರತೆ ಸಾವಿರಾರು ವರ್ಷಗಳ ಭಾಷಿಕ ತಿಕ್ಕಾಟಗಳ ನಡುವೆಯೂ ಅವುಗಳನ್ನು

ಬದುಕಿಸಿಕೊಂಡು ಬಂದಿದೆ. ಆ ಭಾಷೆಗಳಿಗಿರುವ ಪ್ರಾಕೃತಿಕ ಜೀವಸಂವೇದಿ ಗುಣವಿದೆಯಲ್ಲ, ಅದು ತುಂಬಾ ಅಪರೂಪದ್ದು. ಅದು ಮತ್ತು ದುಡಿಯುವವರ ಎದೆಯ ದನಿ ಇವೆರಡೂ ಅವುಗಳನ್ನು ಎಲ್ಲೆಲ್ಲೂ ಹರಿಗಡಿಯುದಂತೆ ನಿರಂತರಗೊಳಿಸಿವೆ. ದಮನಕಾರಿ ದಾಳಿಗಳ ನಡುವೆಯೂ ಮತ್ತೆ ಮತ್ತೆ ಮೈಕೊಡವಿ ನಿಲ್ಲುವಂಥ ಕ್ರಿಯಾತ್ಮಕ ಗತಿಶೀಲತೆಯನ್ನು ಅವುಗಳಿಗೆ ತಂದುಕೊಟ್ಟಿವೆ.

ಅದರಲ್ಲಿಯೂ ಕನ್ನಡ ಭಾಷೆ ಅತ್ಯಂತ ಪ್ರಾಯೋಗಿಕವೂ, ವ್ಯಾವಹಾರಿಕವೂ, ಅಷ್ಟೇ ಭಾವಾಭಿವ್ಯಂಜಕತೆಯುಳ್ಳದ್ದೂ ಆಗಿದೆ. ಭಾಷೆಯ ಈ ಸ್ವರೂಪ ನಮ್ಮ ಜನತೆಯ ಗುಣಸ್ವಭಾವದ ಪ್ರತೀಕವಾಗಿದೆ. ಕವಿರಾಜಮಾರ್ಗಕಾರನ ಮಾತಿನಲ್ಲಿ ಹೇಳುವುದಾದರೆ,

ಕುರಿತರಲ್ಲದೆ ಮತ್ತಂ ಪೆರರುಂ
ತಂತಮ್ಮ ನುಡಿಗಳೊಳೆಲ್ಲರ್ ಜಾಣರ್
ಕಿರುವಕ್ಕಳುಮ್ ಆ ಮೂಗರುಮ್
ಅರಿಪಲ್ಕರಿವರ್ ವಿವೇಕಮಂ ಮಾತುಗಳಂ.

ಇಂಥ ವಿವೇಕ ಮತ್ತು ಅನುಭವದ ಮಾತುಗಳು ಕನ್ನಡಿಗರನ್ನು, ಅವರ ಭಾಷೆಯನ್ನು ಜೀವಂತವಿಟ್ಟಿದೆ. ಕನ್ನಡ ಎಂದಿಗೂ ಅನವಶ್ಯಕ ಮಡಿವಂತಿಕೆ ಮತ್ತು ಶಾಸ್ತ್ರೀಯ ಕಾಠಿಣ್ಯವನ್ನು ಮೈಗೂಡಿಸಿಕೊಂಡು ಬರಲಿಲ್ಲ. ಎಂತಲೇ ಅತ್ಯಂತ ಪ್ರಾಚೀನ ಕಾಲದಲ್ಲಿ ಸಂಸ್ಕೃತ, ಪ್ರಾಕೃತ, ಪಾಲಿ, ಮಾಗಧಿ, ಅರ್ಧಮಾಗಧಿ, ಶೂರಸೇನಿ, ಪೈಶಾಚಿಕ ಭಾಷೆಗಳೊಂದಿಗೆ ಕೂಡಿಕೊಂಡು ಬಾಳಿದರೆ, ಮಧ್ಯಕಾಲೀನ ಸಂದರ್ಭದಲ್ಲಿ ಮರಾಠಿ, ಅರಬ್ಬಿ, ಪಾರ್ಶಿ, ಗುಜರಾತಿ ಭಾಷೆಗಳೊಂದಿಗೆ, ಆಧುನಿಕ ಕಾಲಕ್ಕೆ ಬಂದರೆ ಇಂಗ್ಲಿಷ್, ಹಿಂದಿ, ಪೋರ್ಚುಗೀಸ್, ಖಡಿಬೋಲಿ, ಅವಧ ಮುಂತಾದ ಭಾಷೆಗಳೊಂದಿಗೆ, ಇನ್ನು ತನ್ನದೇ ದ್ರಾವಿಡ ಭಾಷೆಗಳಾದ ತಮಿಳು, ತೆಲಗು, ಮಲೆಯಾಳಿ, ತುಳು ಭಾಷೆಗಳಂತೂ ಸರಿಯೇ ಸರಿ. ಉಪಭಾಷೆಗಳಂತೂ ಅದರ ವಿಶಿಷ್ಟತೆಯೇ ಆಗಿದೆ. ಹೀಗೆ ಎಲ್ಲ ಭಾಷೆಯ ಭಾಷಿಕ ಆಯಾಮಗಳು ಮತ್ತು ಆ ಭಾಷೆಗಳನ್ನಾಡುವ ಜನತೆಯ ಸಂಸ್ಕೃತಿಯೊಂದಿಗೆ ಸಾಮರಸ್ಯದ ಬದುಕನ್ನು ನಡೆಸಿಕೊಂಡು ಬಂದಿದೆ. ಇಂದಿಗೂ ಅದೇ ನೆಲೆಯಲ್ಲಿ ಸಾಗಿಕೊಂಡು ಬರುತ್ತಿದೆ. ಕನ್ನಡಜನತೆ ಈ ರೀತಿ ಕಾಲಕಾಲಕ್ಕೆ ತನ್ನ ಬದುಕಿನ ಪರಿಧಿಗೆ ಯಾವು ಯಾವುದೋ ಕಾರಣಕ್ಕಾಗಿ ಬಂದು ನಿಂತುಕೊಂಡಿದ್ದ ಇತರ ಜನಸಮುದಾಯವನ್ನು ಅವರವರ ಬದುಕಿನೆಲ್ಲ ಮಿತಿಗಳೊಂದಿಗೆ ಒಗ್ಗಿಸಿಕೊಂಡು, ಅರಗಿಸಿಕೊಂಡು, ಅರ್ಥೈಸಿಕೊಂಡು ಬರುತ್ತಿದೆ. "ಮಾನವ ಜಾತಿ ತಾನೊಂದೆ ವಲಂ" ಎಂಬ ಉಚ್ಚ ತತ್ವದಲ್ಲಿ ಅಪಾರ ನಂಬುಗೆಯಿಟ್ಟುಕೊಂಡು ಬರುತ್ತಿರುವದರಿಂದಲೇ ಇಂದು ಅದು ಮೃತಭಾಷೆಗಳ ಗುಂಪಿಗೆ ಸೇರದೆ ಜೀವಂತ ಭಾಷೆಯಾಗಿ ಉಳಿದುಕೊಂಡು ಬರಲು ಸಾಧ್ಯವಾಗಿದೆ. ಕನ್ನಡಕ್ಕೆ ಎಂದಿಗೂ "ಶುದ್ಧವೆಂಬ", "ಶಾಸ್ತ್ರೀಯವೆಂಬ" ಭ್ರಮೆಯಿಲ್ಲ. ಆದ್ದರಿಂದ ಅದು ಯಾರನ್ನೂ, ಯಾವುದನ್ನೂ ಕಳೆದುಕೊಳ್ಳಲಾರದು. ಎಲ್ಲರನ್ನೂ, ಎಲ್ಲ

ಭಾಷೆಯ ಸೊಗಡನ್ನೂ ಕೂಡಿಸಿಕೊಂಡು ಭರಿಸಿಕೊಳ್ಳುವ ಮೂಲಕವೇ ಹೆಚ್ಚೆಚ್ಚು ಸಮೃದ್ಧವೂ, ಶಕ್ತಿಯುತವೂ ಆಗಿದೆ. ಮರಾಠಿ ಗಡಿ ಭಾಗಗಳಲ್ಲಿ ಮರಾಠಿಗನ್ನಡ, ಆಂಧ್ರದ ಗಡಿ ಭಾಗಗಳಲ್ಲಿ ತೆಲುಗುಗನ್ನಡ, ಕೊಂಕಣಿಮಯ ಕನ್ನಡ, ಉರ್ದುಮಯ ಕನ್ನಡ, ತಮಿಳ್ಗನ್ನಡ ಹೀಗೆ ಹಲವು ಲೆಕ್ಕವಿಲ್ಲದಷ್ಟು ಕನ್ನಡ ರೂಪಗಳು ಯಾರ ಮುಲಾಜಿಗೆ ಒಳಪಡದೆ ತಮ್ಮ ಪಾಡಿಗೆ ತಾವು ಆಕಾರ ತಳೆಯುತ್ತಲೇ ಬರುತ್ತಿವೆ.

ಕನ್ನಡಿಗರ ಈ ಉದಾರವಾದಿ ವೈಶಾಲ್ಯವನ್ನು ಅಭಿಮಾನಶೂನ್ಯ ಸ್ಥಿತಿಯೆಂದು ಹಗುರಾಗಿ ಭಾವಿಸಬೇಕಾಗಿಲ್ಲ. ಎರಡು ಭಾಷಿಕ ಸಮುದಾಯಗಳ ನಡುವಿನ ಕರುಳಬಳ್ಳಿ ಸಂಬಂಧದಲ್ಲಿ, ಪರಸ್ಪರ ವ್ಯವಹಾರ ತೂಗಿಸಿಕೊಳ್ಳುವ ಸಂದರ್ಭಗಳಲ್ಲಿ ಹಲವು ಉಪಭಾಷೆಯ ಸ್ವರೂಪಗಳು ನಿರ್ಮಾಣಗೊಳ್ಳುತ್ತವೆ. ಸಾಮಾನ್ಯ ಜನತೆಯ ನಡುವೆ ಒಣ ಅಭಿಮಾನ ಅಥವಾ ಭಾಷಾ ಮಡಿವಂತಿಕೆಗೆ ಅರ್ಥವೇ ಇರಲಾರದು. ಅದ್ದರಿಂದ ಅವರು ಹುಸಿ ಭಾಷಾ ದುರಭಿಮಾನಿಗಳು ಸೃಷ್ಟಿಸುವ ಎಲ್ಲ ರೀತಿಯ ಅವಘಡಗಳನ್ನು ಮೀರಿ ತಮ್ಮದೇ ವ್ಯಾವಹಾರಿಕ ಬದುಕೊಂದನ್ನು ಕಟ್ಟಿಕೊಂಡು ಹೊರಟೇಬಿಡುತ್ತಾರೆ. ಹೀಗೆಂದೇ ಕನ್ನಡಿಗರು ತಮ್ಮ ಅಭಿಮಾನವನ್ನು ಕಾಪಾಡಿ ಕೊಳ್ಳುತ್ತಲೇ ತಮ್ಮ ಮೇಲಾಗುವ ದಾಳಿಗಳನ್ನು ಎದುರಿಸಿದ್ದಾರೆ. ಅವು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಹೀಗೆ ಯಾವುದೇ ಪ್ರಕಾರದ ದಾಳಿಗಳಾಗಿರಬಹುದು. ಅವುಗಳನ್ನು ತಮ್ಮ ಸ್ವಂತಿಕೆಯ ಉಪಾಧಿಯಿಂದಲೇ ಸಮರ್ಥವಾಗಿ ಎದುರಿಸಿದ್ದಾರೆ. ಅದೇ ಕಾಲಕ್ಕೆ ಜನಸಾಮಾನ್ಯರ ಬದುಕಿನ ಅವಶ್ಯಕತೆಗಳನ್ನು ಭರಿಸಲೆಂದೇ ಜನಪರ ಚಳುವಳಿಗಳನ್ನು ಕಟ್ಟಿಕೊಂಡು ಬದುಕಿದ್ದಾರೆ.

ಕನ್ನಡಿಗರು ಹೊರಗಿನಿಂದ ಬಂದ ಧರ್ಮ, ಭಾಷೆ, ವಿಚಾರ, ಜೀವನದ ರೀತಿ ನೀತಿ ಯಾವುದೇ ಇರಲಿ ಅವೆಲ್ಲವುಗಳನ್ನು ಸಾರಾಸಗಟಾಗಿ ತಿರಸ್ಕರಿಸಲೂ ಇಲ್ಲ. ಯಥಾವತ್ತಾಗಿ ಅವುಗಳನ್ನು ಸ್ವೀಕರಿಸಿ "ತಮ್ಮತನ"ವನ್ನು ಕಳೆದುಕೊಳ್ಳಲೂ ಇಲ್ಲ. ಅನ್ಯರ ಸಂಸ್ಕೃತಿಯಲ್ಲಿರುವ ಗುಣಾತ್ಮಕ ಅಂಶಗಳನ್ನು ತೆರೆದ ಮನಸ್ಸಿನಿಂದ ಬರಮಾಡಿಕೊಂಡು ಸ್ಥಳೀಯ ದೇಶೀ ಸಂಸ್ಕೃತಿಯ ಆಕಾರದೊಳಗೆ ವಿಲೀನಗೊಳಿಸಿಕೊಂಡಿದ್ದಾರೆ. ಈ ಮೂಲಕವೇ ಅವರಿಗೆ ಬದಲಾದ ಸಂದರ್ಭಗಳಿಗೆ ತಕ್ಕಂತೆ ಹೊಸ ಲಯಗಳಲ್ಲಿ ಬದುಕು ಹಿಡಿಯಲು ಸಾಧ್ಯವಾಗಿದೆ. ಎಂತಲೇ ಕ್ರಿ.ಶ. ೯ನೇ ಶತಮಾನದಲ್ಲಿಯೇ ಕವಿರಾಜಮಾರ್ಗಕಾರನು

> ಕಸವರಮೆಂಬುದು ನೆರೆ ಸೈ
> ರಿಸಲಾರ್ಪೊಡೆ ಪರ ವಿಚಾರಮಂ ಪರಧರ್ಮಮುಮಂ
> ಕಸವೇಂ ಕಸವರಮೇನು
> ಬ್ಬಸಮಂ ಬಸಮಲ್ಲದಿರ್ದು ಮಾಡುವೊಡೆಲ್ಲಂ ॥

ಎಂದು ಹೇಳುತ್ತ ಪರಧರ್ಮ ಮತ್ತು ಪರವಿಚಾರಗಳನ್ನು ಗೌರವಿಸುವದೇ ನಿಜವಾದ ಬಂಗಾರವೆಂದು, ಅದೇ ಪರಮ ಮೌಲ್ಯವೆಂದು ಸಾರಿದ್ದಾನೆ. ಇಲ್ಲವಾದರೆ

ಕಸವರವೂ (ಬಂಗಾರವೂ) ಕಸದ ಸಮಾನವೇ ವ್ಯರ್ಥ ಎನ್ನುತ್ತಾನೆ. ಇದು ಕನ್ನಡಿಗರ ಹೃದಯ ವೈಶಾಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಇಲ್ಲಿನ ಜನತೆ ತಮ್ಮದೇ ಸಮುದಾಯ ಸಂಸ್ಕೃತಿ ಮತ್ತು ಧರ್ಮಗಳನ್ನು ಆಚರಿಸಿಕೊಂಡು ಬದುಕುತ್ತಿರುವಾಗಲೂ ಇತರ ಉನ್ನತ ತತ್ವ, ದರ್ಶನಗಳಿಗೆ ಎಡೆಮಾಡಿಕೊಟ್ಟಿದ್ದಾರೆ. ಕ್ರಿ.ಶ. ಪ್ರಾರಂಭದಿಂದಲೂ ಉತ್ತರ ಭಾರತದಿಂದ ಬಂದ ಜೈನಧರ್ಮವಿರಬಹುದು, ತತ್ಪೂರ್ವದಲ್ಲೆ ಉದಯವಾದ ಬೌದ್ಧ ಧರ್ಮವೇ ಇರಬಹುದು. ಬೌದ್ಧರ ದಯೆ, ಜೀವಾನುಕಂಪೆ, ಜೈನರ ಅಹಿಂಸೆ-ಸಹನೆಗಳನ್ನು ಬೆರೆಸಿಕೊಂಡೂ ತನ್ನ ಅನನ್ಯತೆ (ಐಡೆಂಟಿಟಿ)ಯನ್ನು ಉಳಿಸಿಕೊಂಡು ಬಂದಿದೆ. ಕ್ರಿ.ಶ. ೮ನೇ ಶತಮಾನದ ಹೊತ್ತಿಗೆ ಜೈನಧರ್ಮ ಕನ್ನಡದ ಧರ್ಮವೇ ಆಗಿ ಪರಿಣಮಿಸಿತ್ತು.

ಭೌಗೋಲಿಕವಾಗಿ ಸುರಕ್ಷಿತ ನೆಲದಲ್ಲಿ ವಾಸಿಸುತ್ತಿರುವ ಕನ್ನಡಿಗರು ಸ್ವಭಾವತಃ ಸಾತ್ವಿಕರು, ಉದಾರಚರಿತರು. ಧೀರೋದಾತ್ತರು, ಹೀಗಾಗಿ ಅಹಿಂಸೆ ಮತ್ತು ಪರೋಪಕಾರಗಳನ್ನು ಪ್ರತಿಪಾದಿಸುವ ಜೈನ, ಬೌದ್ಧ ಧರ್ಮಗಳು ಬಹು ಬೇಗನೆ ಇವರ ಮನ ಗೆದ್ದವು. ಆದ್ದರಿಂದಲೇ ಸಾಹಿತ್ಯಕವಾಗಿಯೂ ಸಾಂಸ್ಕೃತಿಕವಾಗಿಯೂ ಕ್ರಿ.ಶ. ೧೦ನೇ ಶತಮಾನವು ಜೈನರ ಸುವರ್ಣಯುಗವೆಂದು ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಮಣ್ಣ ಹುಡಿಯೊಳಗೆ ಬೆವರ ಹನಿಸಿ ಜೀತ ಮಾಡುವವರ ಕನ್ನಡಕ್ಕೆ ಕಾವ್ಯದ ಕಸುವನ್ನು ಹುರಿಗೊಳಿಸಿದವರು ಜೈನಕವಿಗಳು. ಶ್ರಮಿಕರ ಭಾಷೆಯಲ್ಲಿ ಮೊದಲ ಬಾರಿಗೆಂಬಂತೆ ಆಳುವವರ ಧ್ವನಿಯನ್ನು ಕಾವ್ಯ ಪ್ರತಿಮೆಗಳಲ್ಲಿ ಹದಗೊಳಿಸಿ ಸಾರಸ್ವತ ಲೋಕವೊಂದನ್ನು ತೆರೆದಿಡುವ ಜೈನರು ಬದುಕು, ಬರಹ ಎರಡನ್ನೂ ಅಹಿಂಸಾತತ್ವದ ನೆಲೆಯಲ್ಲಿಯೇ ಸ್ಥಾಪಿಸುವ ಪ್ರಯತ್ನ ಮಾಡಿದರು. ಗಂಗರು, ರಾಷ್ಟ್ರಕೂಟ, ಚಾಲುಕ್ಯ ಅರಸು ಮನೆತನದ ರಾಜರುಗಳನೇಕರು ಜೈನಧರ್ಮಕ್ಕೆ ಅಗ್ರಪಟ್ಟ ನೀಡುವ ಮೂಲಕ ಅಹಿಂಸೆ ಮತ್ತು ದಯೆಯಂಥ ಮೌಲ್ಯಗಳನ್ನೆ ರಾಜಧರ್ಮವೆಂಬಂತೆ ಪಾಲಿಸಿಕೊಂಡು ಬಂದಿರುವದು ತೀರ ಅಪರೂಪದ ಸಂಗತಿ. ಹಾಗೆ ನೋಡಿದರೆ ಪ್ರಭುತ್ವ ಮತ್ತು ಹಿಂಸೆ ಸಮೀಕರಣವಾಗುವಂತೆ, ಪ್ರಭುತ್ವ ಮತ್ತು ಜೈನರ ಅಹಿಂಸಾ ತತ್ವ ಸಮೀಕರಣವಾಗುವುದು ತುಂಬ ಕಷ್ಟದ ಸಂಗತಿ. ಪ್ರಭುತ್ವ ಮತ್ತು ಅಹಿಂಸೆ ಇವು ಪರಸ್ಪರ ವಿರೋಧಿ ನೆಲೆಯಲ್ಲಿ ಮಾತ್ರ ಮುಖಾಮುಖಿಯಾಗಬಲ್ಲವು. ಈ ತೆರನ ಅಂತರ್ ವಿರೋಧಿ ನೆಲೆಗಳ ನಡುವೆಯೇ ಒಂದು ಮಧ್ಯಮ ಮಾರ್ಗವನ್ನು ಹುಡುಕುವ ಜರೂರಿ ಅವರಿಗೆ ಕಾಣಿಸಿಕೊಂಡದ್ದು ಅಕಾರಣವಾಗಿರಲಿಲ್ಲ.

ವೈದಿಕರು ಯಜ್ಞಯಾಗಾದಿಗಳಲ್ಲಿ ನಡೆಸುವ ಹಿಂಸೆ ಮತ್ತು ಕ್ಷಾತ್ರಪೌರುಷದ ಯುದ್ಧಪಿಪಾಸು ಕ್ರೌರ್ಯ ಈ ಎರಡನ್ನೂ ಪ್ರತಿರೋಧಿಸುವ ವೈದಿಕ ವಿರೋಧಿ ನೆಲೆಯ ಜೈನ, ಬೌದ್ಧ ಧರ್ಮಗಳು ಕನ್ನಡಿಗರ ತೀವ್ರ ಜರೂರಿಯಾದವು. ಹೀಗೆಂದೇ ೧೦ನೇ ಶತಮಾನದ ಕನ್ನಡ ಕವಿಗಳಿಗೆ ನೇರವಾಗಿ ಯುದ್ಧವನ್ನು ಸಮರ್ಥಿಸಿ ಕೊಳ್ಳುವಲ್ಲಿ ಸಂಕಟ ಎದುರಾದಂತಿದೆ. ಈ ತಾಕಲಾಟದಲ್ಲಿಯೇ ಅವರಿಗೆ "ಲೌಕಿಕ", "ಆಗಮಿಕ"ವೆಂಬ ಅಭಿವ್ಯಕ್ತಿ ತಂತ್ರಗಳು ಅನಿವಾರ್ಯವಾಗಿವೆ. ಲೌಕಿಕ ಕಾವ್ಯಗಳಾದ

ವಿಕ್ರಮಾರ್ಜುನ ವಿಜಯ, ಗದಾಯುದ್ಧಗಳಲ್ಲಿ ಯುದ್ಧದ ಕತೆ ಮತ್ತು ವರ್ಣನೆ ಬಂದಿದೆಯಾದರೂ ಅವು ಯುದ್ಧಗಳ ಪರವಾಗಿಲ್ಲ. ಪಂಪ ಅರ್ಜುನನ ಬಾಯಿಂದ "ಬಂದು ಮೊರೆಹೊಕ್ಕವರನ್ನು ಕಾಯುವದೇ ಶೌರ್ಯವೆಂದು" ಹೇಳಿಸಿದರೆ, ರನ್ನನಾದರೊ ಗಾಂಧಾರಿಯ ಬಾಯಲ್ಲಿ "ಸಮರ ವ್ಯಾಪಾರಂ ಮಾಣ್ಬುದು ಮಗನೆ" ಎಂದು ಹೇಳಲು ಹಚ್ಚುತ್ತಾನೆ. ೧೦ನೇ ಶತಮಾನದ ಹಲವು ಕಾವ್ಯಗಳಲ್ಲಿ ಯುದ್ಧವಿರೋಧಿ ನಿಲುವು ಅನುರಣಿಸುತ್ತಿದೆ. ಈ ಕಾವ್ಯಗಳು ಕನ್ನಡಿಗರ ಶೌರ್ಯ, ಸಾಹಸಕ್ಕೆ ಎಂತೋ ಅಂತೆಯೇ ಶಾಂತಿಪ್ರಿಯತೆ ಮತ್ತು ವರ್ಗ ಸಂಘರ್ಷಕ್ಕೂ ಪ್ರತೀಕವಾಗಿ ನಿಲ್ಲುತ್ತವೆ. ಎಲ್ಲ ಕಾವ್ಯಗಳನ್ನು ಉದಾಹರಣೆ ಸಹಿತವಾಗಿ ಪ್ರಸ್ತುತಪಡಿಸುವುದು ಇಲ್ಲಿನ ವ್ಯಾಪ್ತಿಗೆ ಸಾಧ್ಯವಿಲ್ಲ. ಆದರೂ ಆಯಾ ಯುಗಧರ್ಮದ ಆಶಯವನ್ನು ವ್ಯಾಖ್ಯಾನಗಳಲ್ಲಿ ಗಮನಿಸುವ ಮೂಲಕವೇ ಒಟ್ಟು ಸ್ವರೂಪವನ್ನು ಗ್ರಹಿಸುವ ಪ್ರಯತ್ನ ಮಾಡೋಣ. ಪ್ರಭುತ್ವಪೋಷಿತ ಊಳಿಗಮಾನ್ಯ ವ್ಯವಸ್ಥೆಯನ್ನು ಧಿಕ್ಕರಿಸುವ ಮೂಲಕವೇ ಕ್ರಿಯಾತ್ಮಕವಾಗುವ ವಚನ ಸಾಹಿತ್ಯವಂತೂ ಪಂಪಾದಿಗಳ ಕಾವ್ಯಪ್ರತಿಭೆಗೆ ಶ್ರಮಸಂಸ್ಕೃತಿಯ ಧಾತುವನ್ನು ಸೇರಿಸುತ್ತದೆ. ವರ್ಣಾಶ್ರಮ ಧರ್ಮದ ಆಶ್ರಮ ಮೂಲ ಬದುಕನ್ನು ಪ್ರತಿಭಟಿಸಿ ಶ್ರಮಮೂಲ ಸಂಸ್ಕೃತಿಯನ್ನು ಮುಖ್ಯವಾಹಿನಿಗೆ ತರುವದೇ ವಚನ ರಚನೆಯ ಪ್ರಮುಖ ಕಾಳಜಿಯಾಗಿದೆ. ಆದ್ದರಿಂದಲೇ ಕನ್ನಡವೆಂದರೆ ವಚನ. ವಚನವೆಂದರೆ ಯಜಮಾನ ಸಂಸ್ಕೃತಿಯ ಧಿಕ್ಕಾರ. ಅಸಂಖ್ಯ ಶೋಷಿತರ ಬದುಕಿನ ಒಳಿತಿಗಾಗಿ ನಡೆಸಿದ ತಾತ್ವಿಕ ಹೋರಾಟವೆಂದೇ ಗುರುತಿಸಲ್ಪಡುವ ಈ ಸಾಹಿತ್ಯ ಸಮುದಾಯದ ಅಂಚಿನಲ್ಲಿರುವ ಕೊನೆಯ ಮಾನವನ ಹಸಿವು, ತಳಮಳವೆಂದೇ ಗೃಹೀತವಾಗುತ್ತದೆ. ಹೊಲೆಯ, ಮಾದಿಗ, ಸಮಗಾರ, ಮಡಿವಾಳ, ಅಂಬಿಗ, ಡೋಹರ ಮುಂತಾದ ಹಲವು ಹತ್ತು ಕಾಯಕದಲ್ಲಿ ನಿರತರಾದ ದೈಹಿಕ ದುಡಿಮೆಗಾರರು ತಮ್ಮ ತಮ್ಮ ಬಾಳ್ವೆ ಹಕ್ಕಿಗಾಗಿ ನಡೆಸಿದ ಸಂಘರ್ಷದಲ್ಲಿ ಉದಿಸಿಬಂದ ಈ ಸಾಹಿತ್ಯ ಪ್ರಾಯಶಃ ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿಯೇ ಅಪರೂಪದ ಸಂಕಥನವಾಗಿ ನಿಲ್ಲುತ್ತದೆ. ಏಕೆಂದರೆ ಈ ಮೇಲಿನ ಹದಿನೆಂಟು ಜಾತಿಯ ವೃತ್ತಿಬಾಂಧವರು ತಮ್ಮ ವೃತ್ತಿ ಪರಿಭಾಷೆಯಲ್ಲಿ ಹಸಿವು ಮತ್ತು ಸ್ವಾಭಿಮಾನದ ಪ್ರಶ್ನೆಗಳನ್ನು ಎತ್ತುತ್ತಾರೆ. ಹಸಿವು ಮತ್ತು ಸೃಜನಶೀಲತೆ ಪರಸ್ಪರ ಒಂದರೊಳಗೊಂದು ಆಕಾರ ಪಡೆದುಕೊಳ್ಳುವ ಪರಿಗೆ ಅಕ್ಷರಲೋಕವೇ ತಲ್ಲಣಿಸುತ್ತದೆ. ವಚನ ರಚನೆ ತನ್ನ ಈ ಅಖಂಡ ಶ್ರಮಿಕ ಸೃಜನಶೀಲತೆಯ ಕಾರಣವಾಗಿಯೇ ತದನಂತರದ ಒಟ್ಟು ಕನ್ನಡ ಸಾಹಿತ್ಯ ಮೇಲೆ ಅವ್ಯಾಹತವಾಗಿ ಪ್ರಭಾವ ಬೀರುತ್ತಲೆ ಬರುತ್ತಿದೆ.

ಹರಿಹರ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿಯಿಂದ ಮೊದಲ್ಗೊಂಡು ದಾಸರ ಕೀರ್ತನೆ, ಅನುಭಾವಿಗಳ ತತ್ವಪದ, ಸೂಫಿಗಳ ಗೀತೆ, ಗಝಲ್, ವೀರಶೈವರ ಪುರಾಣಗಳು, ಸ್ತೋತ್ರಸಾಹಿತ್ಯ, ಕೊಡೇಕಲ್ ಸಾಹಿತ್ಯ, ಜಾನಪದೀಯ ಸೊಗಡುಳ್ಳ ಮಂಟೇಸ್ವಾಮಿ ಕಾವ್ಯ, ಮಲೆ ಮಹದೇಶ್ವರ ಕಾವ್ಯ,

ಮುಂತಾಗಿ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭಕ್ಕೂ ವಚನ ಪರಂಪರೆ ಒಂದಿಲ್ಲೊಂದು ಆಯಾಮಗಳಲ್ಲಿ ಅನುರಣಿತಗೊಳ್ಳುತ್ತಲೇ ಇದೆ. ಆಧುನಿಕೋತ್ತರ ಈ ಘಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಪುನರ್ ಮೌಲ್ಯೀಕರಣಗೊಳಿಸುವ ಪ್ರಕ್ರಿಯೆಯಲ್ಲೂ ವಚನಗಳು ಹೆಚ್ಚು ಪ್ರಸ್ತುತ ಎನಿಸಿಕೊಳ್ಳುತ್ತಿರುವದಕ್ಕೆ ಅದರ ಶ್ರಮ ಮೂಲ ಧಾತುವೇ ಕಾರಣವಾಗಿ ನಿಲ್ಲುತ್ತದೆ.

ಹಳಗನ್ನಡ ಸಾಹಿತ್ಯದ ಘಟ್ಟದಲ್ಲಿ ವಚನ ಸಾಹಿತ್ಯ ಹಿಂದಿನ ಪರಂಪರೆಯನ್ನು ಅರಗಿಸಿಕೊಳ್ಳುತ್ತಲೇ ನಿರ್ಣಾಯಕ ಬಿಂದುವಿಗೆ ಬಂದು ತಲುಪಿದಂತೆ; ಆಧುನಿಕ ಕಾಲದಲ್ಲಿಯೂ ದಲಿತ, ಬಂಡಾಯಗಳು ಹಿಂದಿನ ನವೋದಯ, ಪ್ರಗತಿಶೀಲ, ನವ್ಯರ ಪ್ರಯೋಗ, ಪರಂಪರೆಗಳನ್ನು ಮುಖಾಮುಖಿಯಾಗಿಸಿಕೊಂಡೇ ಹೊಸ ದಿಗಂತಕ್ಕೆ ಬಂದು ತಲುಪಿವೆ. ಸದ್ಯ ನಾವು ಬಂಡಾಯೋತ್ತರ, ದಲಿತೋತ್ತರ ಎಂದು ಕರೆದುಕೊಳ್ಳುವ ಧಾವಂತದಲ್ಲಿದ್ದೇವೆ. ನಾನು ಇಲ್ಲಿ "ಕರೆದುಕೊಳ್ಳುವ" ಎಂಬ ಶಬ್ದವನ್ನು ತುಂಬಾ ಪ್ರಜ್ಞಾಪೂರ್ವಕವಾಗಿ ಬಳಸುತ್ತಿದ್ದೇನೆ. ಏಕೆಂದರೆ ಹಾಗೇ ಕರೆದುಕೊಳ್ಳುವುದಕ್ಕೂ, ಹಾಗೆಂದು ಗುರುತಿಸುವದಕ್ಕೂ ತುಂಬಾ ವ್ಯತ್ಯಾಸವಿದೆ. ಕರೆದುಕೊಳ್ಳುವ ಕ್ರಿಯೆ ಗುರುತಿಸುವಂತಾಗುವ ರಾಚನಿಕ ಸ್ವರೂಪಗಳಲ್ಲಿ ಆಕಾರ ತಳೆಯುವಂತಾಗಬೇಕು. ಜನಪರಂಪರೆ ಅದನ್ನು ಗ್ರಹಿಸಿ ಸ್ಪಂದಿಸಬೇಕು. ವಾಸ್ತವದ ಬದುಕು ಅದರೊಂದಿಗೆ ಸಂವಾದಿಸುವ, ತನ್ಮೂಲಕ ವಾದ, ವಿವಾದಗಳಿಗೆ ಸುರುವಿಟ್ಟುಕೊಳ್ಳುವ ಹೀಗೆ ಸೃಜನಶೀಲತೆಯು ಅಖಂಡ ಬದುಕಿನ ಧಾತುವಾಗಿ ಮೈದಾಳಬೇಕಲ್ಲವೆ? ಆಗ ಮಾತ್ರ ಒಂದು ಸಾಹಿತ್ಯ ಪರಂಪರೆಯನ್ನು ಗುರುತಿಸುವ ಕ್ರಿಯೆಗೆ ಅರ್ಥ ಬರುತ್ತದೆ.

ಬಂಧುಗಳೇ, ಇಂದು ಸಾಹಿತ್ಯಕ ಸೃಜನಶೀಲತೆ ಎಂಬುದು ಈ ಮೊದಲಿನಂತೆ ಬದುಕು ಬೀದಿಯಲ್ಲಿನ ಒಂದು ಅಂಗವೋ, ಆಯಾಮವೋ, ಭಾಗವೋ ಆಗಿ ಉಳಿದಿಲ್ಲ; ಉಳಿಯಬಾರದು ಕೂಡ. ವಿಶ್ವದ ವಿದ್ಯಮಾನಗಳು ಕಣ್ಣವೆ ಮಿಟುಕಿಸುವಷ್ಟರಲ್ಲಿ ಗಾಳಿ, ಬೆಳಕುಗಳಿಗಿಂತ ವೇಗವಾಗಿ ಓಡುತ್ತಿರುವ ಈ ಹೊತ್ತಿನಲ್ಲಿ "ಸಾಹಿತ್ಯ"ವೆಂಬುದು ಕೂಡಾ ಅಸಂಖ್ಯ ಜ್ಞಾನಶಿಸ್ತುಗಳ ಪರಿಪ್ರೇಕ್ಷ್ಯದಲ್ಲಿ ಸಮ್ಮಿಳಿತಗೊಂಡು ಜೀವನ ನಿರ್ವಹಣೆಯ ವಿಧಾನವಾಗಿ ನಿರ್ವಚಿಸಿಕೊಳ್ಳಬೇಕಿದೆ. ಇದರರ್ಥ ಕನ್ನಡ ಭಾಷೆ ಅಥವಾ ಸಾಹಿತ್ಯವೆಂದರೆ ಕನ್ನಡದ ಜನತೆಯ ಬದುಕುವ ಪ್ರಶ್ನೆಯಾಗಿ ಚರ್ಚಿತವಾಗಬೇಕಿದೆ. ಕನ್ನಡ ಉಳಿಯಬೇಕಾದರೆ ಕನ್ನಡ ಮಾತಾಡುವ ಸಾಮಾನ್ಯರು ಉಳಿಯಬೇಕು. ಅವರ ಬದುಕು ಸಂತೃಪ್ತಿ, ನೆಮ್ಮದಿಯಲ್ಲಿ ನಡೆಯುವಂತಾಗಬೇಕು. ಆದ್ದರಿಂದ ಕರ್ನಾಟಕದ ಸಮಾಜೋಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಮಾನವಿಕ, ಮನೋವೈಜ್ಞಾನಿಕ, ಪರಿಸರಾತ್ಮಕ, ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಖಗೋಳ ಭೂಗೋಳ ಮುಂತಾಗಿ ಅಖಂಡ ಬ್ರಹ್ಮಾಂಡದ ಉಪಲಬ್ಧಿ ಮತ್ತು ಹಂಚಿಕೆಯ ಪ್ರಶ್ನೆಗಳನ್ನು ಚರ್ಚಿಸಬೇಕಿದೆ. ಆದ್ದರಿಂದ ಜನತೆಯ ಪ್ರಾಥಮಿಕ ಅವಶ್ಯಕತೆಗಳಾದ ನೆಲ, ಜಲ, ಅಕ್ಷರ, ಅನ್ನ, ಅರಿವು, ಆರೋಗ್ಯ,

ಸೂರು, ಉದ್ಯೋಗ, ಇತ್ಯಾದಿ ಉಪಯೋಗಿ ಘಟಕಗಳ ಸ್ಥಿತಿಗತಿ ಕುರಿತು ಪುಟ್ಟ ನೋಟ ಹರಿಸಬೇಕಾದದ್ದು ಈ ವ್ಯಾಪ್ತಿಗೆ ಹೊರಗಾಗಲಾರದೆಂದೇ ನನ್ನ ಅಭಿಪ್ರಾಯ. ಈ ಹೊತ್ತು ಸಾಹಿತ್ಯ ಮತ್ತು ಸಾಹಿತಿಗಳ ಚಿಂತನೆ ಹರಿಯಬೇಕಾಗಿರುವದೇ ಈ ನೆಲೆಯಲ್ಲಿ. ಸೃಜನಶೀಲತೆಯೆಂಬುದನ್ನು ಬದುಕಿನ ಪ್ರಾಥಮಿಕ ಅವಶ್ಯಕತೆಗಳಿಂದ ಹೊರಗಿಟ್ಟು ನಡೆಸುವ ವಾದಗಳು ಇವೆಯಲ್ಲ, ಅವು ಜೀವವಿರೋಧಿ ನಂಬಿಕೆಯ ಮನೋಜಾಡ್ಯವೇ ಆಗಿವೆ.

ಜಲ ಮತ್ತು ನೆಲ :

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರ !
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ! ರಾಮನಾಥ.

ಹಸಿವಿನ ಪ್ರಖರತೆ, ಅದನ್ನು ತುಂಬಿಸಿಕೊಳ್ಳುವ ಅವಶ್ಯಕತೆ ಎರಡನ್ನೂ ಏಕಕಾಲಕ್ಕೆ ಹೊಳೆಸುವ ದಾಸಿಮಯ್ಯನ ಈ ವಚನ ನಮ್ಮೊಳಗೆ ಹಲವು ಅರ್ಥಸಾಧ್ಯತೆಗಳನ್ನು ಬಿಟ್ಟುಕೊಡುತ್ತದೆ. ಮೊದಲನೆಯದಾಗಿ ಸಕಲ ಜೀವರಾಶಿಯ ಅಸ್ತಿತ್ವಕ್ಕೆ ಕಾರಣವಾಗಿರುವ ಈ "ಹಸಿವು" ಎಲ್ಲ ಸಮಸ್ಯೆಯ ಮೂಲವೂ ಹೌದು. ಆತ್ಯಂತಿಕವೂ ಹೌದು. ಜೀವರಾಶಿಯ ಉದಯದೊಂದಿಗೆ ಅಲ್ಲದಿದ್ದರೂ ಜೀವಸಂಕುಲ ತನಗಾಗಿ ಒಂದು ವ್ಯವಸ್ಥೆಯನ್ನು ನಿರ್ಮಿಸಿಕೊಂಡು ನಿರ್ಬಂಧಕ್ಕೆ ಒಳಪಟ್ಟಾಗಿನಿಂದಲೂ ಹಸಿವಿನ ಸಮಸ್ಯೆ ಕಾಡಿದೆ. ಸಾವಿರಾರು ವರ್ಷಗಳಿಂದ ಕಾಡುತ್ತಿರುವ ಈ ಸಮಸ್ಯೆ ಇಂದಿಗೂ ಜೀವಂತವಾಗಿಯೇ ಇದೆಯಾದರೂ ಇದಕ್ಕಿಂತ ಗಂಭೀರವಾದ ಸಮಸ್ಯೆಯೊಂದು ಇಂದು ಹಸಿವಿನ ಸಮಸ್ಯೆಯನ್ನು ಮಂಕುಗೊಳಿಸಿದ್ದು ಈ ಸಹಸ್ರಮಾನದ ಮಹಾ ದುರಂತಗಳಲ್ಲೊಂದು. ಅದು ನೀರಿನ ಸಮಸ್ಯೆ. ನೂರು ವರ್ಷಗಳ ಹಿಂದೆ ಭೂಮಂಡಲದಲ್ಲಿ ನೀರಿಗಾಗಿ ಈ ಪರಿಯ ಹಾಹಾಕಾರ ಹುಟ್ಟಿತ್ತೆಂಬ ಊಹೆ ಎಷ್ಟು ಜನರಿಗಿದ್ದೀತು ಹೇಳುವುದು ಕಷ್ಟ. ಆದರೆ ಬಹುತರ ಜನಸಾಮಾನ್ಯರಿಗಂತೂ ಇದರ ಪರಿವೆ ಇರಲಿಲ್ಲ.

ಭೂಮಿಯ ಮೇಲ್ಮೈನ ಮುಕ್ಕಾಲು ಭಾಗ ನೀರಿನಿಂದ ಆವೃತ್ತವಾಗಿದ್ದರೂ ನಮ್ಮ ಬಳಕೆಗೆ ಯೋಗ್ಯವಿರುವ ನೀರಿನ ಪ್ರಮಾಣ ಬಹಳ ಕಡಿಮೆ. ಒಟ್ಟು ಲಭ್ಯವಿರುವ ನೀರಿನಲ್ಲಿ ಶೇಕಡಾ ೯೭.೩ ರಷ್ಟು ನೀರು ಸಾಗರದಲ್ಲಿದೆ. ಶೇಕಡಾ ೨.೦ ರಷ್ಟು ನೀರು ಘನರೂಪ ಅಂದರೆ ಮಂಜುಗಡ್ಡೆಯಾಗಿದೆ. ವಾಯುಮಂಡಲದ ಆವಿ ಅಂದರೆ ಮೋಡ, ನದಿಗಳು, ಅಂತರ್ಜಲ, ಕೊಳವೆಬಾವಿಗಳು, ಸೇರಿ ಶೇಕಡಾ ೦.೭ ನೀರು ಇದೆ. ಇದರಲ್ಲಿ ಶೇಕಡಾ ೧ರಷ್ಟು ನೀರು ಮಾತ್ರ ಜೀವಿಗಳಿಗೆ ಆಧಾರವಾಗಿದೆ. ೧೯೭೦ ರ ದಶಕಕ್ಕೂ ಮೊದಲು ಭಾರತದ ಅಂತರ್ಜಲ ಮಳೆನೀರಿನ ಹತ್ತು ಪಟ್ಟು

ಇತ್ತು. ಆದರೆ ಇಂದು ಕೊಳವೆ ಭಾವಿಗಳ ಸಂಖ್ಯೆ ಏರುತ್ತಿರುವದರಿಂದ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಅನೇಕ ಕಡೆ ಅದು ಸಂಪೂರ್ಣ ಬತ್ತಿ ಹೋಗಿದೆ.

ಭಾರತದ ಹಲವೆಡೆಯಂತೆ ಕರ್ನಾಟಕದಲ್ಲಿಯೂ ಇತ್ತೀಚೆಗೆ ನೀರಿನ ಸಮಸ್ಯೆ ಗಂಭೀರವಾಗುತ್ತಿದೆ. ಹಾಗೆ ನೋಡಿದರೆ ನೀರಿನ ಅಭಾವ ಇಂದು ವಿಶ್ವವನ್ನೆ ವ್ಯಾಪಿಸಿರುವ ಭಯಂಕರ ಸಮಸ್ಯೆಯಾಗಿದೆ. ಜಾಗತೀಕರಣದ ಹಾವಳಿಯಲ್ಲಿ ಈಗಾಗಲೇ ಲಾಭಖೋರ ರಾಷ್ಟ್ರೀಯ ಪಾಲಿಸಿಗಳಡಿಯಲ್ಲಿ ಕೋಲಾ ಪಾನೀಯ ಕಂಪನಿಗಳಿಗೆ ನದಿ, ಸರೋವರಗಳನ್ನು ಮಾರಿಕೊಂಡು ಜನತೆಯ ಪ್ರಾಣಕ್ಕೆ ಸಂಚಕಾರ ತಂದ ಘಟನೆಗಳು ಭಾರತದಂಥ ಬಡರಾಷ್ಟ್ರಗಳಲ್ಲಿ ವರದಿಯಾಗುತ್ತಿವೆ. ಜಾಗತಿಕ ಮಟ್ಟದಲ್ಲಿ ಮೂರನೇ ಮಹಾಯುದ್ಧವೇನಾದರೂ ಜರುಗಬಹುದಾದರೆ ಅದು ನೀರಿಗಾಗಿ ನಡೆಯುವ ಯುದ್ಧವಾಗಬಹುದೆಂಬ ಸಂಭವನೀಯತೆಯನ್ನು ತಜ್ಞರು ಚರ್ಚಿಸುತ್ತಿದ್ದಾರೆ.

ಕರ್ನಾಟಕದ ಪ್ರತಿಶತ ೬೦ ರಷ್ಟು ಗ್ರಾಮಗಳು ಮತ್ತು ಅಷ್ಟೇ ಪ್ರಮಾಣದ ನಗರಗಳು ನೀರಿನ ಅಭಾವವನ್ನು ಹೇಳಲಸದಳ ರೀತಿಯಲ್ಲಿ ಎದುರಿಸುತ್ತಿವೆ. ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಮಳೆಯ ಪ್ರಮಾಣ ಕುಸಿಯುತ್ತಿರುವ ಅಂತರ್ಜಲಮಟ್ಟ, ಒಂದು ಕಾರಣವಾದರೆ, ದೊರೆಯುವ ನೀರಿನ ಸಂಗ್ರಹಣೆ, ಇದ್ದ ನೀರಿನ ಅಸಮರ್ಪಕ ಸರಬರಾಜು, ಸಂಬಂಧಪಟ್ಟ ಇಲಾಖೆಯ ದಿವ್ಯ ನಿರ್ಲಕ್ಷ್ಯ ಇವು ಇನ್ನೊಂದು ಕಾರಣವಾಗುತ್ತಿವೆ. ಮುಂದುವರೆದು ಹೇಳುವುದಾದರೆ ಸದ್ಯ ಜನತೆಯ ನೀರಿನ ಬವಣೆಗೆ ಇವೇ ಪ್ರಮುಖ ಕಾರಣಗಳಾಗುತ್ತಿವೆ. ಬೇಸಿಗೆಯಲ್ಲಿ ನೀರಿನ ಅಭಾವ ಕಾಣಿಸಿಕೊಳ್ಳುತ್ತದೆ ಎಂಬ ಅರಿವಿದ್ದಾಗಲೂ ಸರಕಾರಿ ಇಲಾಖೆಗಳು ಮುನ್ನೆಚ್ಚರಿಕೆ ಕ್ರಮವಾಗಿ ಯಾವೊಂದು ಯೋಜನೆ ಹಾಕಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೊರಟರು ಎಂಬಂತೆ ಏಪ್ರಿಲ್, ಮೇ ತಿಂಗಳುಗಳಲ್ಲಿ ಅಲ್ಪಕಾಲಿಕ, ಬೇಕಾಬಿಟ್ಟಿ ಯೋಜನೆಗಳನ್ನು ಹಾಕಿಕೊಳ್ಳುವುದು, ಒಂದಕ್ಕೆ ನಾಲ್ಕುಪಟ್ಟು ಹಣವನ್ನು ವಿನಿಯೋಗಿಸಿ ತುಂಬಾ ಕಳಪೆ ಕಾಮಗಾರಿ, ತರಾತುರಿಯಲ್ಲಿ ಅಶುದ್ಧ ನೀರು ಸರಬರಾಜು ಮಾಡುವದು, ಎಷ್ಟೋ ಶಹರುಗಳಲ್ಲಿ ನಲ್ಲಿಯ ಪೈಪುಗಳು ಡ್ರೈನೇಜ ಪೈಪುಗಳೊಂದಿಗೆ ಸೇರಿಕೊಂಡು ಅತ್ಯಂತ ಕಲುಷಿತ ನೀರು ಸರಬರಾಜು ಆಗಿರುವ ಸಂಗತಿಗಳು ಇವೆ. ನೀರಿಗಾಗಿ ಎಲ್ಲೆಂದರಲ್ಲಿ ಜನತೆ ದಿನಬೆಳಗಾದರೆ ಮುಷ್ಕರ, ಧರಣಿ, ರಾಸ್ತಾರೋಕೊ ಮುಂತಾದ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವದು ಅನಿವಾರ್ಯವಾಗುತ್ತಿದೆ. ಇದಕ್ಕೆಲ್ಲ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು? ಅಧಿಕಾರಿ ವರ್ಗ, ಆಳುವ ವರ್ಗದ ಪ್ರತಿನಿಧಿಗಳು ಈ ದಿಶೆಯಲ್ಲಿ ಸಂವೇದನಾ ಹೀನರಂತೆ ವರ್ತಿಸುತ್ತಿರುವದು ನಾಚಿಕೆ ತರಿಸುತ್ತಿದೆ. ನೆರೆಯ ಮಹಾರಾಷ್ಟ್ರ,

ತಮಿಳುನಾಡು ರಾಜ್ಯಗಳನ್ನು ನೋಡಿ ನಾವು ಕಲಿಯಬೇಕಾಗಿದೆ. ಆ ರಾಜ್ಯಗಳ ಆಡಳಿತ ಮತ್ತು ಅಧಿಕಾರಿವರ್ಗ ಈ ದಿಸೆಯಲ್ಲಿ ಎಷ್ಟು ಸಚೇತಕವಾಗಿದೆಯೆಂದರೆ ಅವರು ಸಂಗ್ರಹಿತ ನೀರನ್ನು ಪೋಲಾಗದಂತೆ ಕಾಪಾಡಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅವರು ತಮ್ಮ ನೀರಿನ ಅವಶ್ಯಕತೆಯನ್ನು ಗ್ರಾಮ ಮತ್ತು ನಗರಗಳ ವಿಸ್ತಾರ, ಜನಸಂಖ್ಯಾ ಪ್ರಮಾಣವನ್ನು ಅನುಲಕ್ಷಿಸಿ ರೂಪಿಸಿಕೊಂಡಿದ್ದಾರೆ. ನಮ್ಮ

ರಾಜ್ಯದಲ್ಲೂ ಸರಕಾರ ಮತ್ತು ಜನತೆ ಎಚ್ಚೆತ್ತುಕೊಳ್ಳಬೇಕಿದೆ. ಜಲಸಂರಕ್ಷಣೆ ಮತ್ತು ಸಮರ್ಪಕವಾದ ಸರಬರಾಜು ಇವು ತುರ್ತಾಗಿ ಮಾಡಬೇಕಾದ ಕೆಲಸಗಳು. ನಮ್ಮ ರಾಜ್ಯದ ನೀರು ಸರಬರಾಜು ಮಂಡಳಿಗಳಲ್ಲಿ ಮನೆ ಮಾಡಿಕೊಂಡಿರುವ ಸೋಂಭೇರಿತನ ಮತ್ತು ಬ್ರಹ್ಮಾಂಡ ಭ್ರಷ್ಟತೆಗಳು ತೊಲಗಬೇಕು. ಜನತೆಯಲ್ಲಿಯೂ ನೀರನ್ನು ರಕ್ಷಿಸಿ ಬಳಸಿಕೊಳ್ಳುವ ಎಚ್ಚರ ಮೂಡಿಸಬೇಕು. ಈಗಾಗಲೇ ಸರಕಾರ ಜಲಸಂವರ್ಧನೆ ಯೋಜನೆಗಳನ್ನು ಅಲ್ಲಲ್ಲಿ ಕಾರ್ಯಗತಗೊಳಿಸುತ್ತಿದೆಯಾದರೂ ಅದು ಪರಿಣಾಮಕಾರಿಯಾಗುವಂತೆ ಸಾಕಾರವಾಗುತ್ತಿಲ್ಲ. ನೀರು ಒದಗಿಸುವ ಕೆಲಸ ಯುದ್ಧೋಪಾದಿಯಲ್ಲಿ ನಡೆಯಬೇಕು. ಅಂದಾಗ ಮಾತ್ರ ನೀರಿನ ಅಭಾವಕ್ಕೆ ಪರಿಹಾರ ದೊರೆತೀತು. ಇಲ್ಲವಾದರೆ ಈ ಪರದಾಟ ಮುಂಬರುವ ದಿನಗಳಲ್ಲಿ ತೀರ ಗಂಭೀರ ರೀತಿಯ ಅನಾಹುತಗಳನ್ನು ಸೃಷ್ಟಿಸಲಿದೆ ಎಂಬ ಪ್ರಜ್ಞೆ ಇರಲಿ.

ಭೌತಿಕ ಮೌಲ್ಯಗಳಲ್ಲಿ ಅತ್ಯಂತ ಬೆಲೆಯುಳ್ಳದ್ದೂ ಮತ್ತು ಮೂರ್ತವಾಗಿ ಕೈಗೆಟಕುವ ಉಪಕರಣವೆಂದರೆ "ಭೂಮಿ". ಈ ನೆಲದ ಮೇಲೆ ಹುಟ್ಟಿದೆಲ್ಲರಿಗೂ ಇದರ ಮೇಲೆ ಸಮಾನವಾದ ಹಕ್ಕು ಇದೆ ಎಂಬುದು ಒಂದು ತರ್ಕ ಮತ್ತು ಆದರ್ಶ. ವಾಸ್ತವದಲ್ಲಿ ಭೂಮಿಯ ಮೇಲೆ ಅಸಮಾನ ಒಡೆತನವಿದೆ. ಮೂಲತಃ ಅಲೆಮಾರಿಯಾದ ಮಾನವ ಸಮುದಾಯ ಒಂದೆಡೆ ನೆಲೆನಿಂತು ವೈಯಕ್ತಿಕ ಆಸ್ತಿ ಒಡೆತನಕ್ಕೆ ಸುರುವಿಟ್ಟುಕೊಂಡಂತೆ ಅಸಮಾನ ಹಂಚಿಕೆ ಪ್ರಾರಂಭವಾಗಿ ಅದೇ ಜಮೀನ್ದಾರಿ ವ್ಯವಸ್ಥೆಯ ಬರ್ಬರ ಕೃತ್ಯಗಳಿಗೆ ದಾರಿ ಮಾಡಿಕೊಟ್ಟಿತು. ಈ ಊಳಿಗಮಾನ್ಯ ವ್ಯವಸ್ಥೆ ತನ್ನ ಅಸಮಾನ ಹಂಚಿಕೆಯ ಮೂಲಗಳನ್ನು ಕಾಪಾಡಿಕೊಳ್ಳಲೆಂದೇ ತನಗೆ ಅನುಕೂಲವಾಗುವ ಕರ್ಮಸಿದ್ಧಾಂತವನ್ನು ರೂಪಿಸಿಕೊಂಡಿತು. ಕರ್ಮಸಿದ್ಧಾಂತದ ಉತ್ಪತ್ತಿಗಳಾದ ಪಾಪ, ಪುಣ್ಯ, ಸ್ವರ್ಗ, ನರಕ ಮುಂತಾದ ಭ್ರಮಾತ್ಮಕ ತಂತ್ರಗಳು ಇಂದಿಗೂ ಆಳವಾಗಿ ಆಚರಣೆಯಲ್ಲಿವೆ. ಹೀಗಾಗಿ ವ್ಯವಸ್ಥೆ ನಿರ್ಮಿಸಿರುವ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಸಮಾನತೆಗಳು ಇನ್ನೂ ಚಾಲ್ತಿಯಲ್ಲಿವೆ. ಎಲ್ಲ ಬಗೆಯ ತಾರತಮ್ಯಗಳು, ಅನಿಷ್ಟ ಜಾತಿ ಪದ್ಧತಿ ಕಾಲಕ್ಕೆ ತಕ್ಕ ಬೇರೆ ಬೇರೆ ಚಹರೆಗಳಲ್ಲಿ ತಾಂಡವ ಆಡುತ್ತಿದೆ. ಕೃಷಿಯ ಪ್ರಧಾನ ಉಪಕರಣವಾಗಿರುವ "ಭೂಮಿ" ದುಡಿಯದಿರುವವರ ಸುಪರ್ದಿನಲ್ಲೆ

ಉಳಿದುಕೊಂಡು ಬರುತ್ತಿರುವದರಿಂದ ಬದಲಾದ ಆರ್ಥಿಕ ಸಂರಚನೆಗಳಲ್ಲಿಯೂ ಅದು ಪ್ರಮುಖ ಬಂಡವಾಳವಾಗುತ್ತಿದೆ. ಕರ್ನಾಟಕದಲ್ಲಿ ಭೂಮಿತಿ ಶಾಸನ ೧೯೭೨ ರಲ್ಲಿಯೇ ಜಾರಿಗೆ ಬಂದಿದೆಯಾದರೂ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಶ್ರಮಿಕ ವರ್ಗದ ತೀವ್ರ ಹೋರಾಟದಿಂದಾಗಿ ಅಲ್ಲಿ ಭೂಸುಧಾರಣೆ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾದದ್ದು ಬಿಟ್ಟರೆ ಕರ್ನಾಟಕದ ಇನ್ನುಳಿದ ಯಾವ ಜಿಲ್ಲೆಯಲ್ಲೂ ಭೂಹಂಚಿಕೆ ಸಮರ್ಪಕವಾಗಿ ಆಗಲೇ ಇಲ್ಲ.

ಇಂದಿಗೂ ಕರ್ನಾಟಕದ ಸಾಗುವಳಿಯೋಗ್ಯವಾದ ಒಟ್ಟು ಭೂಮಿಯಲ್ಲಿ ಶೇಕಡಾ ೪೧.೯೬ ರಷ್ಟು ಭೂಮಿಯು ಶೇಕಡಾ ೧೧.೨೫ ರಷ್ಟು ಜನರ ಒಡೆತನದಲ್ಲಿದೆ. ಶೇಕಡಾ ೪೭.೭೩ ರಷ್ಟು ಭೂಮಿಯು ೪೬.೮೦ ರಷ್ಟು ಜನರ ಕೈಯಲ್ಲಿಯೂ ಶೇಕಡಾ ೧೦.೩೧ ರಷ್ಟು ಭೂಮಿಯು ಶೇಕಡಾ ೪೧.೯೫ ರಷ್ಟು ಜನರ ಸುಪರ್ದಿನಲ್ಲಿದೆ. ಅಂದರೆ ಹೆಚ್ಚು ಕೃಷಿಯೋಗ್ಯ ಭೂಮಿ ಕೆಲವೊಬ್ಬರ ಒಡೆತನದಲ್ಲಿಯೂ, ತೀರ ಕಡಿಮೆ ಪ್ರಮಾಣದ ಭೂಮಿ ಹಲವರ ಒಡೆತನದಲ್ಲಿಯೂ ಇದೆ. ಇಂದಿಗೂ ನಿಜವಾಗಿ ದುಡಿಯುವವರು ಅದರ ಒಡೆಯರಾಗಿಲ್ಲ. ತತ್ಕಾರಣವಾಗಿ ಕರ್ನಾಟಕದಲ್ಲಿ ರೂಪ ಬದಲಿಸಿಕೊಂಡ ಅರೆ ಪಾಳೇಗಾರಿ ವ್ಯವಸ್ಥೆ ಇದೆ. ಈ ವ್ಯವಸ್ಥೆ ಪೋಷಿಸಿದ ಅಸಮಾನತೆ ಬಿತ್ತುವ ಮೌಲ್ಯಗಳು, ನಂಬಿಕೆಗಳು ನಮ್ಮ ತಲೆಯನ್ನು ಆಳುತ್ತಿವೆ. ವಿಚಾರಗಳೇ ಮನುಷ್ಯರನ್ನು ಆಳುತ್ತವೆ. ಆದರೆ ಇಂದಿನವರೆಗೂ ಆಳುವವರ ವಿಚಾರಗಳೆ ಜನಸಾಮಾನ್ಯರ ದಿಕ್ಕು ತಪ್ಪಿಸುತ್ತಿವೆ. ತಮ್ಮ ಹಿತ ಕಾಪಾಡದ ವಿಚಾರಗಳನ್ನೇ ತಮ್ಮದೆಂದು ನಂಬಿಕೊಂಡು ಬಂದಿರುವ ಜನತೆ ಅರಿವಿಲ್ಲದೆ ತಿರುಗುಣಿ ಮಡುವಿನ ಸೆಳವಿಗೆ ಸಿಲುಕಿಕೊಂಡಿರುತ್ತದೆ. ಈ ಸೆಳವಿನಿಂದ ತಪ್ಪಿಸಿಕೊಂಡು ಮೇಲೆದ್ದು ಬರುವದು ಅಷ್ಟು ಸುಲಭವಲ್ಲ. ಅದಕ್ಕೆ ಎಲ್ಲ ಮೂಲದಿಂದಲೂ ವಿಚಾರಕ್ರಾಂತಿ ಎದ್ದು ಬರಬೇಕಾಗುತ್ತದೆ. ಕುವೆಂಪು ತಮ್ಮ ಸಾಹಿತ್ಯದುದ್ದಕ್ಕೂ ಯಾವ ವೈಚಾರಿಕ, ವೈಜ್ಞಾನಿಕ ದೃಷ್ಟಿಕೋನಕ್ಕೆ, ಕ್ರಾಂತಿಗೆ ಪಂಥಾಹ್ವಾನ ನೀಡಿದ್ದರೋ ಅಂಥ ಕ್ರಾಂತಿಯು ಪುನರ್‌ಘಟಿಸಬೇಕಿದೆ.

ಜಮೀನ್ದಾರಿ ವ್ಯವಸ್ಥೆ ರೂಪ ಬದಲಿಸಿಕೊಂಡಿದೆ ಎಂಬ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಒಕ್ಕಲುತನ ಪದ್ಧತಿ ಈ ಹಿಂದಿನ ಅವಸ್ಥೆ ದಾಟಿಕೊಂಡು ಹೊಸ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಕೃಷಿ ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಹೋಗಿದೆ. ನೂರಾರು ಎಕರೆ ಭೂಮಿ ಹೊಂದಿದ್ದ ಗೌಡ, ಸಾಹುಕಾರ, ಜಮೀನ್ದಾರ, ವತನದಾರ, ದೇಶಪಾಂಡೆ, ಹೆಗಡೆಗಳೆನಿಸಿಕೊಂಡಿದ್ದ ಭೂಮಾಲೀಕರು ಅಸಮರ್ಪಕ ಮಾರುಕಟ್ಟೆ ವ್ಯವಸ್ಥೆಯಿಂದಾಗಿ ದಿವಾಳಿಯೆದ್ದಿದ್ದಾರೆ. ಪರಂಪರಾಗತ ಈ ಭೂಮಾಲೀಕರು ಬದಲಾದ ಸಂದರ್ಭಗಳಿಗೆ ತಕ್ಕಂತೆ ಹೆಜ್ಜೆ

ಹಾಕಿ ತಮ್ಮ ಆಸ್ತಿ-ಪಾಸ್ತಿಯನ್ನು ಮತ್ತೊಂದು ಲಾಭದಾಯಕ ಉದ್ದಿಮೆಗಳಲ್ಲಿ ತೊಡಗಿಸಿ ನಗರಗಳಿಗೆ ಯಾರು ವಲಸೆ ಬಂದಿರುವರೋ ಅವರು ಮಾತ್ರ ಇಂದು ಒಂದಷ್ಟು ನಿರುಮ್ಮಳವಾಗಿ ಬದುಕುತ್ತಿದ್ದಾರೆ. ಆದರೆ ಹಳ್ಳಿಗಳಲ್ಲಿಯೇ ಇರುವ ಸಣ್ಣಪುಟ್ಟ ರೈತರು, ಹಳೆಯ ಜೀವನ ವಿಧಾನಕ್ಕೆ ಅಂಟಿಕೊಂಡಿರುವ ವೃತ್ತಿ ಕಸಬುದಾರರು ತೀವ್ರ ಆರ್ಥಿಕ ಮುಗ್ಗಟ್ಟು ಅನುಭವಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ರೈತರ ಸರಣಿ ಆತ್ಮಹತ್ಯೆಗಳು ನಮ್ಮ ಹದಗೆಟ್ಟ ವ್ಯವಸ್ಥೆಗೆ ಸಾಕ್ಷಿಯಾಗಿವೆ. ಹಾಗೆ ನೋಡಿದರೆ ಇತ್ತೀಚಿನ ದಶಕಗಳಲ್ಲಿ ಅಂದರೆ ಪ್ರಾರಂಭದ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಒಕ್ಕಲುತನದಲ್ಲಿ ಸಣ್ಣಪುಟ್ಟ ವೈಜ್ಞಾನಿಕ ಸುಧಾರಣೆಗಳು ಸುಧಾರಿತ ತಳಿಯ ಬೀಜ, ರಸಗೊಬ್ಬರ, ಕ್ರಿಮಿನಾಶಕ ಔಷಧಿಗಳು, ಹನಿ ನೀರಾವರಿ, ವ್ಯಾಪಾರಿ ಬೆಳೆಗಳು ಇವುಗಳಿಂದಾಗಿ ಅಧಿಕ ಇಳುವರಿಯೇನೋ ಬರುತ್ತಿದೆ. ಆದರೆ ಬೆಳೆದ ಧಾನ್ಯಕ್ಕೆ ಸ್ವಾಯತ್ತ ಮಾರುಕಟ್ಟೆ ಅಥವಾ ಸಮರ್ಪಕ ಬೆಲೆ, ಧಾನ್ಯಗಳ ದಾಸ್ತಾನು ವ್ಯವಸ್ಥೆ, ಸಂಸ್ಕರಣ ಘಟಕಗಳು ಇಲ್ಲದ್ದಕ್ಕಾಗಿ ರೈತರು ಹೆಚ್ಚೆಚ್ಚು ಬೆಳೆದರೂ ಹೂಡಿದಷ್ಟು ಹಣವೂ ಬರದೆ ಕಂಗಾಲಾಗುತ್ತಿದ್ದಾರೆ. ಇಂದು ಒಕ್ಕಲುತನ ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ನೇರವಾಗಿ ಕೃಷಿಯಲ್ಲಿ ತೊಡಗಿದ ರೈತರು ಸರಕಾರದ ಒಕ್ಕಲುತನ ವಿರೋಧಿ ನೀತಿಯಿಂದಾಗಿ ದಯನೀಯ ಸ್ಥಿತಿಗೆ ತಲುಪುತ್ತಿದ್ದರೆ, ಇನ್ನೊಂದೆಡೆ ಕೃಷಿ ಉತ್ಪಾದಿತ ವಸ್ತುಗಳ ಖರೀದಿ, ಬಿಕರಿ ವಹಿವಾಟು ನಡೆಸುವ ದಲ್ಲಾಳಿ ಸಮುದಾಯ ಇದರ ನಿವ್ವಳ ಲಾಭ ದೋಚುತ್ತಿದೆ. ಆದ್ದರಿಂದ ಪ್ರತ್ಯಕ್ಷ ಭೂ ಒಡೆತನಕ್ಕಿಂತ ಪರೋಕ್ಷ ಭೂ ಒಡೆತನವೇ ದೊಡ್ಡ ಬಂಡವಾಳವಾಗಿ ಪರಿವರ್ತನೆಯಾಗುತ್ತಿದೆ. ಈ ರೀತಿಯಲ್ಲಿ ಜಮೀನ್ದಾರೀ ವ್ಯವಸ್ಥೆ ಸ್ಥಾನಪಲ್ಲಟವಾಗಿದೆ.

ಭೂಮಿಯಲ್ಲಿ ಕೃಷಿ ಮಾಡುವುದು ಇಂದು ಲಾಭದಾಯಕವಾಗಿರಲಿಕ್ಕಿಲ್ಲ. ಆದರೆ ಭೂಮಿಯ ಮುಖಬೆಲೆ ಅದರಲ್ಲೂ ಕೃಷಿಯೇತರ ಚಟುವಟಿಕೆಗಳಲ್ಲಿ ಅಂದರೆ ಸೈಟು, ಕಾಂಪ್ಲೆಕ್ಸು, ಅಂಗಡಿ ಮುಂಗಟ್ಟು ಈ ತೆರದಲ್ಲಿ ಅದರ ಬೆಲೆ ಗಗನಕ್ಕೇರುತ್ತಿದೆ. ದೊಡ್ಡ ದೊಡ್ಡ ಶಹರುಗಳಲ್ಲಿ ಭೂಮಿಯೇ ಪ್ರಧಾನ ವಹಿವಾಟು ಆಗಿದ್ದು ಎಲ್ಲ ತರದ ಭ್ರಷ್ಟಾಚಾರ, ಹಿಂಸೆ, ಕ್ರೌರ್ಯ ಅಲ್ಲಿ ಮನೆಮಾಡಿಕೊಂಡಿವೆ. ಬೆಂಗಳೂರು ಒಂದು ನಗರದಲ್ಲಿಯೇ ಘಟಿಸಿದ ಹಲವಾರು ಭೂಹಗರಣಗಳನ್ನು ನೆನಪಿಸಿಕೊಂಡರೂ ಸಾಕು, ಬಂಡವಾಳ ವ್ಯವಸ್ಥೆಯ ಕಬಂಧ ಬಾಹುಗಳ ಅರಿವಾಗದೇ ಇರದು. ಈ ರೀತಿಯ ಭೂವ್ಯಾಪಾರೀಕರಣ ಬಡವ-ಬಲ್ಲಿದರ ನಡುವೆ, ಕೃಷಿಕ-ಕೃಷಿಯೇತರ ವ್ಯಾಪಾರಗಳ ನಡುವೆ ದೊಡ್ಡ ಕಂದಕವನ್ನು ನಿರ್ಮಾಣ ಮಾಡುತ್ತಿದೆ. ಹಳ್ಳಿಗಳಲ್ಲಿ ಬೇಸಾಯದ ದಿವಾಳೀಕರಣ, ನಗರಗಳಲ್ಲಿ ವಿದೇಶಿ ಬಂಡವಾಳೀಕರಣ ಇವೆರಡೂ ಕನ್ನಡ ಜನತೆಯ ಬದುಕನ್ನು ಧ್ವಂಸಗೊಳಿಸುತ್ತಿವೆ. ಆದ್ದರಿಂದ ಆಡಳಿತವನ್ನು ನಿಯಂತ್ರಿಸುವ ಸರಕಾರ ತನ್ನ ವ್ಯಾಪಾರಿ ನೀತಿಗಳಲ್ಲಿಯೇ

(ಪಾಲಿಸಿ) ಸಮೂಲ ಬದಲಾವಣೆ ತಂದು ಜಲ-ನೆಲವನ್ನು ರಾಷ್ಟ್ರೀಯ ಸಂಪತ್ತಾಗಿ ಪರಿಗಣಿಸಬೇಕು. ನೀರು ಮತ್ತು ನೆಲ ಆ ನಾಡಿನಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಸಮರ್ಪಕವಾಗಿ ವಿತರಣೆಯಾಗುವಂತೆ ನೋಡಿಕೊಳ್ಳುವುದು ಅತಿ ಮುಖ್ಯ. ಮಾರುಕಟ್ಟೆಯಲ್ಲಿ ಒಂದು ಲೀಟರ್ ಹಾಲಿಗೆ ಹನ್ನೆರಡು ರೂಪಾಯಿ ಇದ್ದರೆ ಅದೇ ಶುದ್ಧ ಕುಡಿಯುವ ಒಂದು ಲೀಟರ್ ನೀರಿಗೆ ಹದಿನೈದು ರೂಪಾಯಿ ಇದೆ. ಆದರೆ ಹಾಲು ಕುಡಿದು ಬದುಕಲಾಗದು. ಬದುಕುವುದಕ್ಕೆ ನೀರೇ ಬೇಕು. ಬಾಳುವುದಕ್ಕೆ ಒಂದು ಸೂರೇ ಬೇಕು. ಜವಾಬ್ದಾರಿಯುತ ಸರಕಾರವೊಂದಕ್ಕೆ ತನ್ನ ನಾಡಿನಲ್ಲಿ ವಾಸಿಸುತ್ತಿರುವ ಜನತೆಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಬೇಕು.

ಅಕ್ಷರ ಮತ್ತು ಕೆಲಸ :

ಅಕ್ಷರ ಮಾನವನ ಅದ್ಭುತ ಆವಿಷ್ಕಾರ.

ಇದು ಸರ್ವ ಜ್ಞಾನ ಶಿಸ್ತುಗಳನ್ನು ಭರಿಸಿಕೊಳ್ಳುವ ಸಶಕ್ತ ಮಾಧ್ಯಮ. ಜಗತ್ತಿಗೆ ತಾನು ತೆರೆದುಕೊಳ್ಳುವ, ಜಗತ್ತನ್ನು ತನ್ನೊಳಗೆ ಆಹ್ವಾನಿಸಿಕೊಳ್ಳುವ ಪರಿಣಾಮಕಾರಿ ಉಪಕರಣವೆನಿಸಿಕೊಂಡಿರುವ ಈ ಅಕ್ಷರ ವೈದಿಕಶಾಹಿಯ ಸ್ವಾರ್ಥದಿಂದಾಗಿ ಈ ನೆಲದಲ್ಲಿ ಎಲ್ಲರಿಗೂ ದಕ್ಕಿರಲೇ ಇಲ್ಲ. ವರ್ಣಾಶ್ರಮ ಪದ್ಧತಿಯನ್ನು ಅನೂಚಾನವಾಗಿ ಆಚರಿಸಿಕೊಂಡು ಬಂದಿರುವ ಕಾರಣವಾಗಿ ಶೂದ್ರರು, ದಲಿತರು, ಮಹಿಳೆಯರು ಮೊನ್ನೆಮೊನ್ನೆಯವರೆಗೂ ಅಕ್ಷರ ಬೆಳಕಿನಿಂದ ದೂರವೇ ಉಳಿದಿದ್ದರು. ಬ್ರಿಟಿಷರ ಆಗಮನ, ದೇಶೀ ನಾಯಕರುಗಳ ಸುಧಾರಣಾವಾದಿ ಧೋರಣೆ, ಶೂದ್ರರ-ದಲಿತರ ಎಚ್ಚೆತ್ತ ಪ್ರಜ್ಞೆಯಿಂದಾಗಿ ತೀರ ಇತ್ತೀಚೆಗೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ತೆರೆದುಕೊಂಡಿದ್ದೇವೆ. ಈಗ ಪ್ರತಿಯೊಬ್ಬರಿಗೂ ಅಕ್ಷರ ಮತ್ತು ಅನ್ನ ಎಂಬ ಪಾಲಿಸಿಯನ್ನು ಒಪ್ಪಿಕೊಂಡೂ ಅರ್ಧ ಶತಮಾನ ಸಂದುಹೋಗಿದೆ. ಸ್ವತಂತ್ರ ಭಾರತದಲ್ಲಿ ಕಳೆದ ಅರ್ಧ ಶತಮಾನದ ಅವಧಿಯಲ್ಲಿ ಹತ್ತಾರು ರಾಜಕೀಯ ಪಕ್ಷಗಳು ಆಡಳಿತ ನಡೆಸಿವೆ. ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಈ ಕುರಿತು ದೊಡ್ಡ ಭರವಸೆ ನೀಡಿಯೇ ಗೆದ್ದು ಬಂದು ಗದ್ದುಗೆ ಹಿಡಿದಿವೆ. ಆದರೆ ಇಂದು ನಮ್ಮ ಶಿಕ್ಷಣದ ಗತಿ ಪ್ರಾಥಮಿಕ ಮಟ್ಟದಿಂದ ಉನ್ನತ ಹಂತದವರೆಗೆ ಏನಾಗಿದೆ ಎಂಬುದನ್ನು ನೋಡಿದರೆ ಖಂಡಿತ ಸಿಟ್ಟು ಮತ್ತು ಜಿಗುಪ್ಸೆ ಹುಟ್ಟುತ್ತದೆ. ನಾನು ಯಾಕೆ 'ಸಿಟ್ಟು' ಮತ್ತು 'ಜಿಗುಪ್ಸೆ' ಎಂಬ ಶಬ್ದಗಳನ್ನು ಬಳಸುತ್ತಿದ್ದೇನೆಂದರೆ, ಅಭಿವೃದ್ಧಿಶೀಲ ರಾಷ್ಟ್ರಗಳ ಮುಂಚೂಣಿಯಲ್ಲಿರುವ ದೇಶವೊಂದಕ್ಕೆ ಸ್ವಾತಂತ್ರ್ಯ ದೊರೆತು ೫೮ ವರ್ಷ ಗತಿಸಿದರೂ ತನ್ನ ಅರ್ಧದಷ್ಟು ಪ್ರಜೆಗಳಿಗೆ ಕನಿಷ್ಠ ಅಕ್ಷರ ಕೊಡಲು ಸಾಧ್ಯವಾಗಿಲ್ಲ ಎಂದರೆ ಏನರ್ಥ? ಇಂಥ ಸ್ಥಿತಿಯನ್ನು ಒಪ್ಪಿಕೊಂಡಿರುವ ಪ್ರಜೆಗಳ ಸೋಂಭೇರಿತನಕ್ಕೆ, ಅವರ ರಾಜಿ ಮನೋಭಾವದ ದಾಸ್ಯತ್ವಕ್ಕೆ ಜಿಗುಪ್ಸೆ

ಬರುತ್ತದೆ. ಆಳುವ ವರ್ಗವು ಉದ್ದೇಶಪೂರ್ವಕ ವಾಗಿಯೇ ಜನರನ್ನು ಅಕ್ಷರದಿಂದ ವಂಚಿತರನ್ನಾಗಿ ಮಾಡುತ್ತಿದೆಯಲ್ಲ; ಅದಕ್ಕಾಗಿ ಸಿಟ್ಟು, ತಳಮಳಗಳು ಹುಟ್ಟುತ್ತವೆ.

ಒಟ್ಟು ದೇಶದ ಸಾಕ್ಷರತೆ ೨೦೦೧ನೇ ಸಾಲಿನ ಮಾಹಿತಿ ಪ್ರಕಾರ ೬೫.೩೮ ಮಾತ್ರ. ಕರ್ನಾಟಕದ ಸಾಕ್ಷರತೆ ೬೭.೦೪ ಇದೆ. ಇದು ಸರಕಾರ ಕೊಡಮಾಡಿದ ಮಾಹಿತಿ. ವಾಸ್ತವದಲ್ಲಿ ಸಾಕ್ಷರತೆ ಪ್ರಮಾಣ ಪ್ರತಿಶತ ೫೦ ಕ್ಕಿಂತಲೂ ಕಡಿಮೆ ಇದೆ. ಅದರಲ್ಲೂ ಮಹಿಳೆಯರ ಸಾಕ್ಷರತೆ ಪ್ರಮಾಣ ಪುರುಷರ ಅರ್ಧದಷ್ಟು ಇಲ್ಲ. ಗ್ರಾಮೀಣ ಪ್ರದೇಶದ ಮಹಿಳೆಯರು ಇಂದಿಗೂ ಶಾಲೆಗಳ ಮುಖ ನೋಡಿಲ್ಲ. ಕರ್ನಾಟಕದಲ್ಲಿ ೧೯೯೧ನೇ ಸಾಲಿನ ಜನಗಣತಿ ಪ್ರಕಾರ ಸಾಕ್ಷರತೆ ೫೬.೦ ರಷ್ಟು ಇತ್ತು. ಈಗ ೬೭.೦೪ ರಷ್ಟಾಗಿದೆ. ಅಂದರೆ ಹತ್ತು ವರ್ಷಗಳ ಅವಧಿಯಲ್ಲಿ ಪ್ರತಿಶತ ೧೧ ರಷ್ಟಾದರೆ ವರ್ಷಕ್ಕೆ ಶೇಕಡಾ ೧.೧೦ ಪರಿಮಾಣದಲ್ಲಿ ಮಾತ್ರ ಶಿಕ್ಷಣದಲ್ಲಿ ಹೆಚ್ಚಳ ತರಲು ಸಾಧ್ಯವಾಗುತ್ತಿದೆ. ಇದು ನಿರಾಶಾದಾಯಕ ಬೆಳವಣಿಗೆ. ನಿರ್ದಿಷ್ಟ ಅವಧಿ ನಿಗದಿಪಡಿಸಿ ಸಂಪೂರ್ಣ ಸಾಕ್ಷರತೆ ಸಾಧಿಸುವದು ಅಸಾಧ್ಯವೇನಲ್ಲ. ಆದರೆ ಜನತೆಗೆ ಶಿಕ್ಷಣ ನೀಡುವ ಮನಸ್ಸು ಪ್ರಭುತ್ವಕ್ಕೆ ಇಲ್ಲವೆಂದೇ ವಿದಿತವಾಗುತ್ತದೆ.

ನಮ್ಮ ನಾಡಿನ ಸರ್ಕಾರ, ಮಠಾಧೀಶರು, ರಾಜಕೀಯ ಮುತ್ಸದ್ದಿಗಳು ಖಾಸಗಿ ವೈದ್ಯಕೀಯ, ತಾಂತ್ರಿಕ, ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ತೆಗೆಯಲು ಉತ್ಸಾಹ ತೋರಿಸುವಷ್ಟು ಪ್ರಾಥಮಿಕ, ಪ್ರೌಢಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ತೆಗೆಯಲು ತೋರಿಸುವುದಿಲ್ಲ. ಕ್ರಿ.ಶ. ೧೯೮೦ ರಿಂದಲೂ ಕರ್ನಾಟಕವು ಉನ್ನತ, ವೃತ್ತಿಪರ ಶಿಕ್ಷಣಕ್ಕೆ ಅತಿ ಹೆಚ್ಚಿನ ಮಹತ್ವ ಕೊಡುತ್ತಿದ್ದು ಪ್ರಾಥಮಿಕ ಹಂತವನ್ನು ಕಡೆಗಣಿಸುತ್ತಿದೆ. ಸರಕಾರವೂ ಲಾಭಖೋರ ಶಿಕ್ಷಣ ಸಂಸ್ಥೆಗಳಿಗೆ ನೀಡುವ ಪ್ರೋತ್ಸಾಹವನ್ನು ತನ್ನದೆ ಸಾರ್ವಜನಿಕ ವಲಯದ ಶಾಲಾ, ಕಾಲೇಜುಗಳಿಗೆ ನೀಡುತ್ತಿಲ್ಲ ಎಂಬುದೇ ದೊಡ್ಡ ವಿಪರ್ಯಾಸವಾಗಿದೆ. ಇತ್ತೀಚಿನ ದಿನಗಳಲ್ಲಂತೂ ಇವರೆಲ್ಲರಿಗೂ ಉನ್ನತ ಶಿಕ್ಷಣವೆಂಬುದು ನಿವ್ವಳ ಹಣ ಮಾಡುವ ಉದ್ಯಮವಾಗುತ್ತಿದೆ. ಒಟ್ಟು ರಾಷ್ಟ್ರದಲ್ಲಿರುವ ಅರ್ಧದಷ್ಟು ತಾಂತ್ರಿಕ ಕಾಲೇಜುಗಳು ಕರ್ನಾಟಕವೊಂದರಲ್ಲಿಯೇ ಇರುವುದಕ್ಕೆ ಮುಖ್ಯ ಕಾರಣ ಈ ಉದ್ಯಮಶೀಲತೆಯ ಹಪಾಹಪಿಯೇ ಆಗಿದೆ. ವೃತ್ತಿಪರ ಪದವಿಯ ಸೀಟುಗಳಾದರೂ ಕರ್ನಾಟಕದವರಿಗಿಂತ ಇತರ ರಾಜ್ಯದವರಿಗೆ ಮಾರಿಕೊಳ್ಳಲೆಂದೇ ಸೃಷ್ಟಿಯಾಗಿವೆಯೆಂಬುದನ್ನು ಗಮನಿಸಬೇಕು. ಕಳೆದ ಐದಾರು ವರ್ಷಗಳಿಂದ ಸಿ.ಇ.ಟಿ.ಯಲ್ಲಾಗುತ್ತಿರುವ ಗೊಂದಲಗಳೇ ಆಳುವವರ ಬಂಡವಾಳಶಾಹಿಪರ ಲಾಬಿಗೆ ಸಾಕ್ಷಿಯಾಗಿವೆ.

ಸದ್ಯ ಅಸ್ತಿತ್ವದಲ್ಲಿರುವ ವ್ಯವಸ್ಥೆಯೇ ಸುಧಾರಿಸಲು ಸಾಧ್ಯವಿಲ್ಲವೆನ್ನುವಷ್ಟು ಹದಗೆಟ್ಟಿದೆ. ಮತ್ತೆ ಅಂಥ ಸಂದರ್ಭದಲ್ಲಿ ಜಾಗತೀಕರಣದ ಹಾವಳಿ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣ ಧೂಳಿಪಟ ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿನ ಖಾಸಗೀಕರಣ ಕುಟುಕು

ಜೀವ ಹಿಡಿದವನ ಕುತ್ತಿಗೆ ಒತ್ತಿದಂತೆ ಆಗುತ್ತಿದೆ. ಈಗಾಗಲೇ ವಿದೇಶಿ ಶಿಕ್ಷಣ ಕಂಪನಿಗಳು ಬೆಂಗಳೂರು ನಗರದಲ್ಲಿ ತಮ್ಮ ಅಕ್ಷರ ಮಳಿಗೆ ತೆರೆದಿಟ್ಟುಕೊಂಡಿವೆ. ಇಂಥ ವಿದೇಶಿ ಕಂಪನಿ ನಿರ್ಮಿತ ಶಾಲಾ ಕಾಲೇಜುಗಳೊಂದಿಗೆ ಸ್ಪರ್ಧೆ ಹೂಡುವ ನೆಪದಲ್ಲಿ ಸ್ಥಳೀಯ ಶಿಕ್ಷಣ ಸಂಸ್ಥೆಗಳು ಸ್ವಯಂ ಸುಧಾರಣೆ ನೆಪದಲ್ಲಿ ಮನಬಂದಂತೆ ಶುಲ್ಕ ಏರಿಸುತ್ತಿವೆ. ಗುಣಮಟ್ಟದ ಶಿಕ್ಷಣವೆಂಬ ಘೋಷಣೆಯ ಅಡಿಯಲ್ಲಿ ಸರಕಾರ ಶಿಕ್ಷಣ ಕ್ಷೇತ್ರದಲ್ಲಿ ಅನುದಾನ ಕಡಿತ ಮಾಡುತ್ತಿದೆ. ತತ್ಪರಿಣಾಮವಾಗಿ ಸರಕಾರಿ, ಅರೆ ಸರಕಾರಿ ಶಾಲಾ, ಕಾಲೇಜುಗಳು ಮುಚ್ಚಲ್ಪಟ್ಟು ಶಿಕ್ಷಣ ಸಂಪೂರ್ಣ ಖಾಸಗಿ ಒಡೆತನಕ್ಕೆ ಸರಿದುಕೊಳ್ಳುತ್ತಿದೆ. ಈಗಾಗಲೇ ಇದರ ಬಿಸಿ ಜನತೆಗೆ ತಟ್ಟಿದೆ. ಸಣ್ಣ ಉದಾಹರಣೆ ಹೇಳುವುದಾದರೆ, ಕಳೆದ ವರ್ಷಗಳಲ್ಲಿ ಬಿ.ಎ. ಪದವಿಗೆ ಸಾಮಾನ್ಯ ಮಟ್ಟದ ವಿದ್ಯಾರ್ಥಿಗೆ ೮೦೦/- ರೂಪಾಯಿಗಳಷ್ಟು ಇದ್ದ ಶುಲ್ಕ ಈ ವರ್ಷ ಹತ್ತಿರ ಹತ್ತಿರ ೨೦೦೦/- ರೂಪಾಯಿಗೆ ಬಂದು ತಲುಪಿದೆ. ಇದರ ನೇರ ಪರಿಣಾಮ ಬಡವರು, ಗ್ರಾಮವಾಸಿಗಳು, ದಲಿತರು, ಮಹಿಳೆಯರು ಬಲಿಯಾಗುತ್ತಾರೆ. ಏರುತ್ತಿರುವ ಶುಲ್ಕದಿಂದಾಗಿ ಅವರು ಮತ್ತೆ ಅಕ್ಷರ ಲೋಕದಿಂದ ದೂರವೇ ಉಳಿದುಬಿಡುತ್ತಿದ್ದಾರೆ.

"ಶಿಕ್ಷಣದಲ್ಲಿ ಗುಣಮಟ್ಟ" ಎಂಬ ಶೈಕ್ಷಣಿಕ ಪಾಲಿಸಿಯೇ ಜನವಿರೋಧಿ ಮತ್ತು ಪ್ರಾದೇಶಿಕ ಭಾಷಾ ವಿರೋಧಿಯಾಗಿದೆ. ಗುಣಮಟ್ಟ ಎತ್ತರಿಸುವ ನೆಪದಲ್ಲಿ ಕ್ರಿಯಾಶೀಲವಾಗಿರುವ "ನ್ಯಾಕ್"ನಂಥ ಯೋಜನೆಗಳು ಸಂಬಂಧಪಟ್ಟವರಿಗೂ ಅರಿವಿರದಂತೆ ಇಂಗ್ಲೀಷ ಭಾಷಾ ಹೇರಿಕೆ ಮತ್ತು ಸಾರ್ವಜನಿಕ ಬಂಡವಾಳದ ಹಿಂತೆಗೆತವೇ ಆಗಿದೆ. ಹೀಗಾಗಿ ಖಾಸಗೀಕರಣದ ಮುಖ್ಯ "ಅಜೆಂಡಾ" ಎಂದರೆ ಶಿಕ್ಷಣದ ದುಬಾರೀಕರಣ. ತನ್ಮೂಲಕ ವಿದ್ಯೆ ಈ ಹಿಂದಿನಂತೆ ಮತ್ತೆ ಕೆಲವೇ ಜನರ ಸ್ವತ್ತಾಗುವುದು. ನಮ್ಮ ಘನ ಸರಕಾರವು ಈಗಾಗಲೇ "ಉನ್ನತ ಶಿಕ್ಷಣ ಗ್ರಾಹಕ ಸರಕು"; ದುಡ್ಡಿದ್ದವರು ಮಾತ್ರ ಅದನ್ನು ಖರೀದಿಸಿಕೊಳ್ಳತಕ್ಕದು ಎಂದು ಘೋಷಿಸಿದೆ. ಶಿಕ್ಷಣ ಕ್ಷೇತ್ರದಲ್ಲಿನ ಸಾಮಾಜಿಕ ನ್ಯಾಯದ ಮೀಸಲಾತಿ ಪದ್ಧತಿಯ ಧ್ವಂಸವೇ ಇದರ ಮೊದಲ ಗುರಿಯಾಗಿದೆ. ಈಗ ಚಾಲ್ತಿಯಲ್ಲಿರುವ ಸಾರ್ವಜನಿಕ ಕ್ಷೇತ್ರದಲ್ಲಿನ ಮೀಸಲಾತಿ ವ್ಯವಸ್ಥೆ ಖಾಸಗಿ ಕ್ಷೇತ್ರಕ್ಕೂ ವಿಸ್ತರಿಸಿಕೊಳ್ಳಬೇಕು ಎಂಬ ಮಾತು ತುಟಿ ಅನುಕಂಪ ಮಾತ್ರವಾಗಿ ಉಳಿಯುತ್ತದೆ. ನಿಜವಾದ ಅರ್ಥದಲ್ಲಿ ಅದನ್ನು ಜಾರಿಗೊಳಿಸುವದು ಸಾಧ್ಯವಾಗದು. ಈ ದಿಶೆಯಲ್ಲಿ ದಮನಿತ ಶೋಷಿತ ಜನತೆ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಇತಿಹಾಸದ ಗಾಲಿ ಹಿಮ್ಮುಖವಾಗಿ ಚಲಿಸುವುದರಲ್ಲಿ ಸಂಶಯವಿಲ್ಲ. ಆದುದರಿಂದ ಚಳುವಳಿ, ಹೋರಾಟಗಳು ಮುಂದಿನ ದಿನಗಳಲ್ಲಿ ಅನಿವಾರ್ಯವಾಗಲಿವೆ. ಅವು ಮಾತ್ರ ಮುಂದಿನ ದಾರಿಗೆ ಪ್ರಾಣಮಿತ್ರರಾಗಲಿವೆ.

ಜನತೆ ರೊಚ್ಚಿಗೇಳುವ ಪೂರ್ವದಲ್ಲಿಯೇ ಸರಕಾರ ಎಚ್ಚೆತ್ತುಕೊಳ್ಳುವದು ಒಳಿತು. ಪ್ರಾಥಮಿಕ ಮತ್ತು ಪ್ರೌಢಮಟ್ಟದ ಶಿಕ್ಷಣದಲ್ಲಿ ಗುಣಮಟ್ಟ ಕಾಪಾಡಿ ಕೊಳ್ಳುವದು

ಮತ್ತು ಪ್ರತಿಯೊಬ್ಬ ಪ್ರಜೆಗೂ ಅದು ದಕ್ಕುವಂತಾಗಬೇಕು. ಜನತೆಗೆ ಅಕ್ಷರ ನೀಡುವಲ್ಲಿ ಸರಕಾರ ಪ್ರಬಲ ಇಚ್ಛಾಶಕ್ತಿ ಹೊಂದಿರಬೇಕೇ ವಿನಾ ಮೂಗಿಗೆ ತುಪ್ಪ ಒರೆಸುವಂಥ ನಿರರ್ಥಕ ಯೋಜನೆಗಳನ್ನು ತರಬಾರದು. ಸರಕಾರಿ ಶಾಲೆಗಳ ಮಟ್ಟ ಮತ್ತು ಮೌಲ್ಯ ಎರಡನ್ನೂ ಎತ್ತರಿಸಿ ಇಲ್ಲಿರುವ ಖಾಸಗಿ ಒಡೆತನಕ್ಕೆ ಮುಟ್ಟುಗೋಲು ಹಾಕಬೇಕು. ಈಗ ಸುಮಾರು ೨೦–೨೫ ವರ್ಷಗಳ ಹಿಂದೆ ಕರ್ನಾಟಕದಾದ್ಯಂತ ಸಾರ್ವಜನಿಕ ಪ್ರಾಥಮಿಕ, ಪ್ರೌಢಶಾಲೆಗಳು ನೀಡುತ್ತಿದ್ದ ಶಿಕ್ಷಣ ಮಟ್ಟಕ್ಕೂ, ಇಂದು ಅವೇ ಶಾಲೆಗಳು ಕೊಡುತ್ತಿರುವ ಶಿಕ್ಷಣ ಮಟ್ಟಕ್ಕೂ ಅಜಗಜಾಂತರ ವ್ಯತ್ಯಾಸವಿದೆ, ಏಕೆ? ಇಂದು ಒಂಚೂರು ಆರ್ಥಿಕ ಅನುಕೂಲತೆ ಇದ್ದವರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ, ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಸಲು ಇಷ್ಟಪಡುತ್ತಿಲ್ಲ. ಶತ ಸಾಹಸಪಟ್ಟಾದರೂ ತಮ್ಮ ಮಕ್ಕಳನ್ನು ಖಾಸಗಿ ಇಂಗ್ಲೀಷ ಮಾಧ್ಯಮ ಶಾಲೆಗಳಿಗೆ ಕಳುಹಿಸಲು ಪರದಾಡುತ್ತಾರೆ, ಏಕೆ? ಕನ್ನಡ ಸರಕಾರಿ ಶಾಲೆಗಳ ಈ ಮೊದಲಿನ ಗುಣಮಟ್ಟ, ಮೌಲ್ಯ ಏಕೆ ಹಾಳಾಗಿವೆ? ಅದಕ್ಕೆ ಯಾರು ಹೊಣೆಗಾರರು? ಆತ್ಮವಿಮರ್ಶೆ ಮಾಡಿಕೊಳ್ಳಬೇಕಲ್ಲವೆ?

ಏಕೆಂದರೆ ಈ ಮೊದಲಿನಂತೆ ಸರಕಾರಿ ಶಾಲೆಗಳು ಉತ್ತಮವಾಗಿಲ್ಲ ಎಂಬ ಸತ್ಯವೂ, ಇಂಗ್ಲೀಷ ಮಾಧ್ಯಮದಲ್ಲಿ ಓದಿಸಿದರೆ ಮಾತ್ರ ಸಾರ್ಥಕವೆಂಬ ವ್ಯಾವಹಾರಿಕ ಮನೋಭಾವವೂ ಜನತೆಯ ತಲೆ ಹೊಕ್ಕಿದೆ. ಇಂಗ್ಲೀಷ ಕಲಿಕೆ ಮಾತ್ರ ತಮ್ಮ ಮುಂದಿನ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬ ಭ್ರಮೆಗಳು ಅವರನ್ನು ಅಟ್ಟಾಡಿಸುತ್ತಿವೆ. ಈ ತೆರನ ಭ್ರಮೆಗಳನ್ನು ಹೊಡೆದೋಡಿಸಬೇಕಾದ ಜವಾಬ್ದಾರಿ ಕೆಲಸವನ್ನು ಬುದ್ಧಿಜೀವಿಗಳು, ಶಿಕ್ಷಣತಜ್ಞರು, ಆಡಳಿತವರ್ಗ ಎಲ್ಲರೂ ಮಾಡಬೇಕಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಕಡ್ಡಾಯ ಕುರಿತು ಗೋಕಾಕ ವರದಿಯನ್ನು ಜಾರಿಗೊಳಿಸಬೇಕು. ಮಹಾರಾಷ್ಟ್ರದಲ್ಲಿರುವ ಕನ್ನಡ ಮಾತೃಭಾಷಿಗಳು ಮರಾಠಿ ಮಾಧ್ಯಮದಲ್ಲಿ ಕಲಿತು ಬದುಕುವುದು ಸಾಧ್ಯವಾಗುವುದಾದರೆ, ಕರ್ನಾಟಕದಲ್ಲಿರುವ ಇತರ ಭಾಷಿಗರಿಗೆ ಕನ್ನಡ ಕಲಿಯುವುದು ಕಷ್ಟ ಏಕಾಗಬೇಕು? ಒಮ್ಮೆ ಭಾಷಾವಾರು ಪ್ರಾಂತ ರಚನೆ ಒಪ್ಪಿಕೊಂಡ ಮೇಲೆ ಆಯಾ ಭಾಷಿಕ ರಾಜ್ಯಗಳಲ್ಲಿ ವಾಸಿಸುವ ಜನತೆ ಆಯಾ ಭಾಷೆಯನ್ನು ಕಲಿಯಬೇಕು. ಭಾಷೆ ಎನ್ನುವದು ವಿಷಯವಸ್ತುವಲ್ಲ ಅದೊಂದು ಮಾಧ್ಯಮ. ಅಂತೆಯೇ ಅದು ರೂಢಿಯೂ ಹೌದು. ನಿರಂತರ ಸಂಪರ್ಕ ಮತ್ತು ಬದುಕಿನ ಅನಿವಾರ್ಯತೆ ಯಾವುದೇ ಭಾಷೆಯನ್ನಾದರೂ ಕಲಿಸಿಬಿಡುತ್ತದೆ. ಹಾಗೆಯೇ ಯಾವುದೇ ಭಾಷೆ ಶ್ರೇಷ್ಠ ಕನಿಷ್ಠವೆಂಬ ನಂಬಿಕೆಯೂ ಅವೈಜ್ಞಾನಿಕವಾಗಿದೆ. ಇಂಗ್ಲೀಷ ಶ್ರೇಷ್ಠ ಮತ್ತು ಅನಿವಾರ್ಯ ಎಂಬ ಭ್ರಮೆ ತುಂಬಿದವರು ಆಳರಸರು. ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಹಣದ ಥೈಲಿ ತುಂಬಿಕೊಳ್ಳುತ್ತಿರುವವರು ಶಿಕ್ಷಣ ಕ್ಷೇತ್ರದ ವ್ಯಾಪಾರಿ ದಲ್ಲಾಳಿಗಳು.

ಇದಕ್ಕೆ ಬಲಿಯಾಗುತ್ತಿರುವವರೇ ಅಮಾಯಕ ಕನ್ನಡಿಗರು. ಮಗುವಿನಲ್ಲಿ ಅಭಿವ್ಯಕ್ತಿ ಸ್ಪಷ್ಟತೆ, ನಿಖರವಾದ ವಿವೇಚನಾ ಸಾಮರ್ಥ್ಯ, ಸೂಕ್ಷ್ಮ ಗ್ರಹಣಶಕ್ತಿ ಬೆಳೆಯಬೇಕಾದರೆ ಮಾತೃಭಾಷೆಯಲ್ಲಿಯೇ ಮೂಲ ಶಿಕ್ಷಣ ಕಲಿಸಬೇಕೆಂಬುದು ವೈಜ್ಞಾನಿಕ ಸತ್ಯ. ಇದನ್ನು ಶಿಕ್ಷಣತಜ್ಞರು ಸಾರಿ ಹೇಳುತ್ತಿರು ವಾಗಲೂ ಜನರ ಅರಿವಿಗೆ ಬರುತ್ತಿಲ್ಲವಾದರೆ ಅದಕ್ಕೆ ಕಾರಣಗಳೇನು? ಎಂಬುದನ್ನು ಹುಡುಕಬೇಕು. ಕಾರಣವಿಷ್ಟೇ, ಒಟ್ಟು ಭಾಷಾ ಕಲಿಕೆಯಲ್ಲಿರುವ ದೋಷಗಳು, ಹದಗೆಟ್ಟ ಕನ್ನಡ ಮಾಧ್ಯಮ ಶಾಲೆಗಳು, ಇಂಗ್ಲೀಷ ಶಾಲೆಗಳು ಸೃಷ್ಟಿಸುತ್ತಿರುವ ಲಾಭಖೋರ ಆಮಿಷಗಳು ಮತ್ತು ಈ ದಿಸೆಯಲ್ಲಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಸರಕಾರದ ಸೋಂಭೇರಿ ಪ್ರವೃತ್ತಿ. ಈ ಎಲ್ಲವುಗಳು ತಮ್ಮ ತಮ್ಮ ನೆಲೆಯಲ್ಲಿ ರಿಪೇರಿಯಾದರೆ ಕನ್ನಡ ಕಲಿಕಾ ಪ್ರಕ್ರಿಯೆ ಕುಂಠಿತವಾಗದು.

ಕನ್ನಡಪರ ಚಿಂತನೆ ಹರಿಸುವ ಬುದ್ಧಿಜೀವಿಗಳು ಕನ್ನಡ ಶಾಲಾ, ಕಾಲೇಜುಗಳ ಮಾಸ್ತರುಗಳೇ ತಮ್ಮ ಮಕ್ಕಳನ್ನು ಇಂಗ್ಲೀಷ ಮಾಧ್ಯಮಕ್ಕೆ ಕಳಿಸುತ್ತಿರುವದು ತೀರ ಶೋಚನೀಯ ಸಂಗತಿ. ಯಾರು ಮಕ್ಕಳನ್ನು ಇಂಗ್ಲೀಷ ಮಾಧ್ಯಮದಲ್ಲಿ ಓದಿಸುವರೋ ಅವರೇ ಕನ್ನಡ ದ್ರೋಹಿಗಳು. ಯಾವ ಸರಕಾರ ಒಳಸುಳಿದಾರಿಗಳ ಮೂಲಕ ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಲು ಹಸಿರು ನಿಶಾನೆ ತೋರಿಸುವುದೋ ಅದೇ ಜನವಿರೋಧಿ ಸರಕಾರ.

ಬಂಧುಗಳೇ, ಕೇಂದ್ರ ಸರಕಾರದ ಹಿಂದಿ ದಬ್ಬಾಳಿಕೆ, ರಾಜ್ಯ ಸರಕಾರದ ಇಂಗ್ಲೀಷ ಮೋಹ, ನೆರೆಯ ರಾಜ್ಯಗಳ ಭಾಷಾ ಒತ್ತುವರಿ, ಮೇಲಾಗಿ ಅಮೇರಿಕಾದಂಥ ರಾಷ್ಟ್ರಗಳ ಇಂಗ್ಲೀಷ ದಾಳಿ ಇವುಗಳಿಂದ ಕನ್ನಡವನ್ನು ರಕ್ಷಿಸಿಕೊಳ್ಳಬೇಕಾದ ಅಗ್ನಿ ಪರೀಕ್ಷೆ ನಮ್ಮ ಮುಂದಿದೆ. ನಾವು ಹಟದಿಂದ ಕನ್ನಡ ದೀಕ್ಷೆ ತೊಡಬೇಕಿದೆ. ಸುಮ್ಮನೆ ಕನ್ನಡ ಉಳಿಸಿ ಎಂದು ಘೋಷಣೆ ಹಾಕಿದರೆ ಸಾಲದು. ಉಳಿಸಿ ಎಂದಾಕ್ಷಣ ಉಳಿಯಲು ಅದು ಪೆಟ್ರೋಲ್ ಅಥವಾ ಡೀಸೆಲ್ ಅಲ್ಲ. ಭಾಷೆ ಮಾಧ್ಯಮ ಮಾತ್ರವಲ್ಲ ಅದು ಸಂಪೂರ್ಣ ಬದುಕೇ ಆಗಿರುತ್ತದೆ. ಕನ್ನಡ ಉಳಿಯಬೇಕು ಎಂದರೆ ಕನ್ನಡ ಮಾತಾಡುವ ಜನತೆ ಉಳಿಯಬೇಕು. ಅಂದರೆ ಕನ್ನಡ ಮಾತಾಡುವ ಅಸಂಖ್ಯ ಜನಸಾಮಾನ್ಯರು ಆರ್ಥಿಕ ಭದ್ರತೆಯೊಂದಿಗೆ ಹಿಡಿ ನೆಮ್ಮದಿಯಿಂದ ಬದುಕುವಂತಾಗಬೇಕು. ಅಸಂಖ್ಯ ಕೂಲಿ, ಕಾರ್ಮಿಕ, ರೈತಾಪಿ ಜನರ ದುಡಿತಕ್ಕೆ ತಕ್ಕ ಬೆಲೆ, ತನ್ಮೂಲಕ ಅನ್ನ, ಸೂರು, ಶಿಕ್ಷಣ, ಕೆಲಸ, ಆರೋಗ್ಯ ಇವು ಲಭ್ಯವಾಗಬೇಕು. ಅಂದಾಗ ಅವರು ಬದುಕುತ್ತಾರೆ. ಅವರ ಮೂಲಕ ಭಾಷೆ ತಾನೇ ಬೆಳೆದು ಕುಣಿದು ಕುಪ್ಪಳಿಸುತ್ತದೆ. ಭಾಷೆಯು ಪಂಡಿತರ ವ್ಯಾಕರಣ, 'ಯಾ' ಹುಸಿ ಹೋರಾಟಗಾರರ ಘೋಷಣೆಗಳಿಂದ ಸೋಗಲಾಡಿಗಳ ಭಾಷಣಗಳಿಂದ ಉಳಿಯುವುದಿಲ್ಲ. ಅದು ಈ ಮಣ್ಣಿನ ದುಡಿಮೆಗಾರರ ಕೈ ಬಲಪಡಿಸುವುದರಿಂದ ಮಾತ್ರ ಉಳಿಯುತ್ತದೆ.

ಇತ್ತೀಚೆಗೆ ಇಂಗ್ಲೀಷನ್ನು ಒಂದು ಭಾಷೆಯಾಗಿ ಒಂದನೇ ತರಗತಿಯಿಂದಲೇ ಕಲಿಸಬೇಕೆಂಬ ಕೂಗು ಕೇಳಿ ಬರುತ್ತಿದೆ. ಕೆಲವು ತಜ್ಞರು ಮೂರನೇ ತರಗತಿಯಿಂದ ಎಂದೂ, ಇನ್ನು ಕೆಲವರು ಯಥಾ ಪ್ರಕಾರ ಈ ಮೊದಲಿನಂತೆ ಐದನೇ ತರಗತಿಯಿಂದ ಕಲಿಸುವಂತಾಗಲಿ ಎಂದು ವಾದಿಸುತ್ತಿದ್ದಾರೆ.

ಆದರೆ ಕನ್ನಡ ಮಾಧ್ಯಮ ಓದುವ ಮಕ್ಕಳಿಗೆ ಮೂರನೇ ತರಗತಿಯಿಂದ ಇಂಗ್ಲೀಷ ಒಂದು ವಿಷಯವಾಗಿ ಓದುವಂತೆ ಇಂಗ್ಲೀಷ ಮಾಧ್ಯಮದಲ್ಲಿ ಓದುವ ಮಕ್ಕಳೂ ಸಹಿತ ಕನ್ನಡವನ್ನು ಮೂರನೇ ತರಗತಿಯಿಂದ ಓದುವಂತಾಗಬೇಕು. ಕೇಂದ್ರೀಯ ಪಠ್ಯಕ್ರಮ ಓದುವ ಮಕ್ಕಳಿಗಂತೂ ತ್ರಿಭಾಷಾ ಸೂತ್ರ ಇದ್ದೇ ಇದೆ. ಈಗ ಪ್ರಶ್ನೆ ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳ ಸುತ್ತಲೇ ಗಿರಿಕಿ ಹೊಡೆಯುತ್ತಿದೆ. ಒಂದು ಮಗುವಿನ ಕಲಿಯುವ ಸಾಮರ್ಥ್ಯ, ಏಕಕಾಲಕ್ಕೆ ಹಲವು ಭಿನ್ನ ಭಾಷೆಗಳನ್ನು ಕಲಿಯುವ ಕ್ಷಮತೆ, ಬೌದ್ಧಿಕ ಭಾರ ಇವೆಲ್ಲವುಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸುವುದು ಒಳಿತು. ಈ ದಿಸೆಯಲ್ಲಿ ಮಾತೃಭಾಷೆಯೊಂದನ್ನು ಬಿಟ್ಟು ಉಳಿದ ಭಾಷಾ ಕಲಿಕೆಯೂ ಐಚ್ಛಿಕವಾಗಿರುವುದು ಸೂಕ್ತ.

ಒಟ್ಟಾರೆ "ಶಿಕ್ಷಣ", ಅದೂ ಗುಣಮಟ್ಟದ ಶಿಕ್ಷಣ ವ್ಯಕ್ತಿಯ ಪ್ರಾಥಮಿಕ ಅವಶ್ಯಕತೆಗಳಲ್ಲೊಂದು. ಅಂತೆಯೇ ಅದು ಸರಕಾರವು ಪೂರೈಸಬೇಕಾದ ಘಟಕ. ಪ್ರಾಥಮಿಕ, ಪ್ರೌಢ, ಪದವಿ, ಸ್ನಾತಕೋತ್ತರ, ವೈದ್ಯಕೀಯ, ತಾಂತ್ರಿಕ ಎಲ್ಲ ಬಗೆಯ ಶಿಕ್ಷಣ ಎಲ್ಲರಿಗೂ ಕಡಿಮೆ ಶುಲ್ಕದಲ್ಲಿ ಸುಲಭವಾಗಿ ದೊರೆಯುವಂತಾಗಬೇಕು. ಆಗಲೇ ಒಂದು ದೇಶ ಸುಭದ್ರ ಮತ್ತು ಶಾಂತಿಯುತವಾಗಿರಬಲ್ಲುದು. ಜನಪರ ಕಾಳಜಿಯುಳ್ಳ ಜವಾಬ್ದಾರಿಯುತ ಸರಕಾರವೊಂದಕ್ಕೆ ಇದು ಕಷ್ಟವೇನಲ್ಲ. ಪ್ರಬಲ ರಾಜಕೀಯ ಇಚ್ಛಾಶಕ್ತಿ ಬೇಕು.

ದುಡಿಯುವ ಎಲ್ಲ ಕೈಗಳಿಗೆ ಕೆಲಸ ದೊರಕುವಂತಾಗಬೇಕು. ಇದು ಶಿಕ್ಷಣದೊಂದಿಗೆ ತಳಕು ಹಾಕಿಕೊಂಡಿರುವ ಜನತೆಯ ಇನ್ನೊಂದು ಪ್ರಾಥಮಿಕ ಬೇಡಿಕೆ. ಹಾಗೆ ನೋಡಿದರೆ ಶಿಕ್ಷಣ ಮತ್ತು ಉದ್ಯೋಗವನ್ನು ಸಮೀಕರಿಸಿಕೊಂಡು ಬರುತ್ತಿರುವ ನಮ್ಮ ಮೂಲಗ್ರಹಿಕೆಗಳಲ್ಲಿಯೇ ಹಲವಾರು ತೊಂದರೆಗಳಿವೆ. ಶಿಕ್ಷಣ ಪ್ರಜ್ಞಾವಂತಿಕೆಗಾಗಿ. ಉದ್ಯೋಗ ಬದುಕುವುದಕ್ಕಾಗಿ. ಇವು ಪರಸ್ಪರ ಪೂರಕ ಮತ್ತು ಪ್ರೇರಕ ಅಂಶಗಳಾಗಬೇಕೇ ಹೊರತು ಒಂದರ ಬಾಲಂಗೋಚಿ ಮತ್ತೊಂದಲ್ಲ. ನೌಕರಿಗಾಗಿಯೇ ಪದವಿ ಸಂಪಾದನೆ ಎಂಬುದನ್ನು ನಂಬಿಸಲ್ಪಟ್ಟಿರುವುದರಿಂದ ಹೇಗಾದರೂ ಮಾಡಿ ಪದವಿ ಗಿಟ್ಟಿಸಿಕೊಳ್ಳಬೇಕೆಂಬ ಧಾವಂತ ನಮ್ಮ ಯುವಕರನ್ನು ಮುತ್ತಿಕೊಂಡಿದೆ. ಹೀಗಾಗಿ ಅವರ ಲಕ್ಷ್ಯ ಪದವಿ ಕಡೆಗಿದೆಯೇ ಹೊರತು ಜ್ಞಾನ ಸಂಪಾದನೆ ಕಡೆಗಿಲ್ಲ. ಅಲ್ಲದೆ ನಾವು ಸದ್ಯ ಕೊಡುತ್ತಿರುವ ಶಿಕ್ಷಣಕ್ಕೂ ಸ್ಪಷ್ಟವಾದ ಉದ್ದೇಶ, ನಿರ್ದಿಷ್ಟ ಗುರಿ ಇದ್ದಂತೆ ತೋರುವುದಿಲ್ಲ. ಭ್ರಷ್ಟ ವ್ಯವಸ್ಥೆಯ ಕಾರಣವಾಗಿ

ಉದ್ದಕ್ಕೂ ಹತ್ತಾರು ವರ್ಷ ಏನೇನೋ ಕಸರತ್ತು ಮಾಡಿ ಒಂದು ಪದವಿ ಪಡೆದುಕೊಂಡ ಯುವಕರು ಯಾವುದೇ ಕಾರ್ಯಕೌಶಲ್ಯ, ದುಡಿಯುವ ಕ್ಷಮತೆ ಇಲ್ಲದೆ ಭಯಾನಕ ಶೂನ್ಯದತ್ತ ಚಲಿಸುತ್ತಿದ್ದಾರೆ. ಇದು ಒಂದು ದೇಶಕ್ಕೆ ಅಂಟಿಕೊಳ್ಳುವ ವ್ಯಾಧಿಯಿದ್ದಂತೆ. ಈ ಅಪಾಯದಿಂದ ತಪ್ಪಿಸಿಕೊಳ್ಳಬೇಕಾದರೆ ಮೊದಲು ಪ್ರತಿಯೊಬ್ಬರ ಕೈಗೆ ಕೆಲಸ ಸಿಗಬೇಕು. ಕಾಯಕವಿಲ್ಲದ ಕೈಗಳು ಕಲ್ಲುಗಳನ್ನು ತೂರಿ, ಬಸ್ಸು, ರೈಲುಗಳ ಗಾಜುಗಳನ್ನಾದರೂ ಒಡೆಯುತ್ತವೆ. ಕೋವಿಯನ್ನಾದರೂ ಹಿಡಿಯುತ್ತವೆ. ತೀರ ಪರಾಕಾಷ್ಠೆಗೇರಿದರೆ ವಿಮಾನಗಳನ್ನು "ಹೈಜಾಕ್" ಆದರೂ ಮಾಡುತ್ತವೆ. ಏಕೆಂದರೆ ದುಡಿಯುವ ಕೈಗಳಿಗೆ ಮಾತ್ರ ಹೊಟ್ಟೆಯ ಬೆಂಕಿ ತಣಿಸುವ ಶಕ್ತಿ ಇದೆ. ಯಾವ ಕೈಗಳಿಗೆ ಹೊಟ್ಟೆಯ ಬೆಂಕಿಯನ್ನು ತಣಿಸುವ ಮಾರ್ಗೋಪಾಯಗಳು ಲಭ್ಯವಾಗುವದಿಲ್ಲವೋ ಅವೇ ಕೈಗಳು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತವೆ ಎಂಬ ಸತ್ಯವನ್ನು ನಾವು ಮರೆಯಬಾರದು.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ದೇಶದಾದ್ಯಂತ ಯಾವುದೇ ರೀತಿಯ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಹೊಸ ಕೆಲಸಗಳನ್ನು ಸೃಷ್ಟಿಸುವುದು ಒತ್ತಟ್ಟಿಗಿರಲಿ, ಇದ್ದ ಕೆಲಸಗಳನ್ನು ಜನತೆಯಿಂದ ಕಸಿದುಕೊಳ್ಳಲಾಗಿದೆ. ಈ ದಶಕದಲ್ಲಿ ಸುಮಾರು ೭೦ ಲಕ್ಷ ಉದ್ಯೋಗಗಳು ನಾಶವಾಗಿರಬೇಕೆಂದು ಅಂದಾಜಿದೆ. ಈ ಅತಂತ್ರ ಸ್ಥಿತಿ ನಿರ್ಮಾಣವಾಗಿರುವುದು ವಾಸ್ತವದ ಗಂಭೀರತೆಯನ್ನು ಮನಗಾಣಿಸುತ್ತದೆ. ಇದ್ದ ಕೆಲಸಗಳು ಕಳೆದುಹೋಗಲು ಕಾರಣವೇನಿರಬಹುದು ಎಂದು ವಿಚಾರಿಸುವುದಾದರೆ, ಹೆಚ್ಚುತ್ತಿರುವ ಯಾಂತ್ರಿಕರಣದಿಂದಾಗಿ ದೈಹಿಕ ದುಡಿಮೆಯ ಕೂಲಿ ಕೆಲಸಗಳು ಖೋತಾ. ಕಂಪ್ಯೂಟರೀಕರಣದಿಂದಾಗಿ ಗುಮಾಸ್ತಗಿರಿ ಕೆಲಸಗಳ ಕಬಳಿಕೆ. ಜಾಗತಿಕ ಮಾರುಕಟ್ಟೆಯ ಸ್ಪರ್ಧೆಯಿಂದಾಗಿ ಆಂತರಿಕ ಮಾರುಕಟ್ಟೆಯ ಮಧ್ಯವರ್ತಿ ಕೆಲಸಗಳು ನಾಪತ್ತೆ. ವಿದೇಶಿ ಕಂಪನಿಗಳ ಆಗಮನದಿಂದಾಗಿ ದೇಶಿ ಉದ್ದಿಮೆಗಳು ದಿವಾಳಿಯೆದ್ದು ಇಲ್ಲಿಯ ನೌಕರಿಗಳು ಮಂಗಮಾಯ. ಗಣನೀಯ ಪ್ರಮಾಣದಲ್ಲಿ ಸಾರ್ವಜನಿಕ ಬಂಡವಾಳದ ಹಿಂತೆಗೆತದಿಂದಾಗಿ ಎಲ್ಲೆಲ್ಲೂ ಅಭದ್ರತೆ. ಅರಾಜಕತೆ. ಒಕ್ಕಲುತನ ದಿವಾಳಿಯೆದ್ದು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕರ್ನಾಟಕದಿಂದ ಲಕ್ಷಾಂತರ ಕೃಷಿ ಕಾರ್ಮಿಕರು ವಲಸೆ ಹೋಗಿದ್ದಾರೆ. ಬೆಂಗಳೂರು ಮಹಾನಗರ ಒಂದರಲ್ಲಿಯೇ ೨೦ ರಿಂದ ೨೫ ಸಾವಿರ ವಿವಿಧ ಜ್ಞಾನಶಿಸ್ತುಗಳ ಪದವೀಧರ ಯುವಕರು ಪ್ರತಿನಿತ್ಯ ಕೆಲಸಕ್ಕಾಗಿ ಅಲೆದು ಜೀವಚ್ಛವವಾಗುತ್ತಿದ್ದಾರೆ. ಇವುಗಳ ನಡುವೆ ಕರ್ನಾಟಕ ಸರಕಾರ ಕಳೆದ ವರ್ಷದಲ್ಲಿ ೩೪ ಲಕ್ಷ ಹಳದಿಕಾರ್ಡು (ರೇಷನ್)ಗಳನ್ನು ಬಡವರಿಂದ ಕಸಿದುಕೊಂಡಿದೆ. ಹಸಿದ ಹೊಟ್ಟೆಗಳು ರೋದಿಸುತ್ತಿರುವ ನಾಡಿನಲ್ಲಿ ಮಿರಿಮಿರಿ ಮಿಂಚುವ ಸಾಲ ಹೊತ್ತ ಹೆದ್ದಾರಿಗಳು ಮಾತ್ರವಿದ್ದರೆ ಸಾಕೆ? ಕೆಲಸವಿಲ್ಲದ ಖಾಲಿ ಕೈ. ಶೂನ್ಯ ಮನಸ್ಸುಗಳಿಗೆ ಹಿತಾನುಭವ (ಫೀಲ್ ಗುಡ್) ಮೂಡಲು ಸಾಧ್ಯವೇ? ಹೇಳಿ. ಈ ಎಲ್ಲ ಅವಾಂತರಗಳಿಗೆ

ಕಾರಣವಾಗಿರುವ ಜಾಗತೀಕರಣ ಕುರಿತು ಇನ್ನಷ್ಟು ವಿವರವಾದ ಚರ್ಚೆ ಅಗತ್ಯವೆಂದು ಭಾವಿಸುತ್ತೇನೆ.

ಖಾಸಗೀಕರಣ, ಉದಾರೀಕರಣ, ಜಾಗತೀಕರಣ (ಖಾಉಜಾ) :

'ಖಾಉಜಾ' ಪಾಲಿಸಿ ನಮ್ಮ ದೇಶವನ್ನು ಒಳಗೊಳಗೆ ನಖಶಿಖಾಂತ ಪೊಳ್ಳು ಮಾಡುತ್ತಿದೆ. ಶಿಕ್ಷಣ, ಉದ್ಯೋಗ, ಒಕ್ಕಲುತನ, ವ್ಯಾಪಾರ, ಬ್ಯಾಂಕು, ಮಾಧ್ಯಮ, ಸಂಸ್ಕೃತಿ ಹೀಗೆ ಎಲ್ಲೆಂದರಲ್ಲಿ ಈ ತ್ರಿವಳಿಗಳ ಕಬಂಧಬಾಹುಗಳು ವ್ಯಾಪಿಸಿಕೊಂಡು ದೇಶದ ಆಂತರಿಕ ವ್ಯವಸ್ಥೆ ಪೂರ್ತಿ ಕುಸಿದಿದೆ. ಕ್ರಿ.ಶ. ೧೯೯೧ ರಲ್ಲಿ ಗ್ಯಾಟ್ ಪ್ರಸ್ತಾವನೆಗೆ ಸಹಿ ಹಾಕುವಾಗ ಕೆಲವೇ ಕೆಲವು ಎಡ ವಿಚಾರವಾದಿಗಳು ಇದನ್ನು ವಿರೋಧಿಸಿದವು. ಮೇಲಾಗಿ ಇವುಗಳ ದುಷ್ಪರಿಣಾಮಗಳ ಕುರಿತು ಮನವರಿಕೆ ಮಾಡಿಕೊಡಲು ಪ್ರಯತ್ನಪಟ್ಟವು. ಆದರೆ ನಾವ್ಯಾರೂ ಎರಡು ದಶಕಗಳ ಹಿಂದೆ ಇದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇಂದು ಅದರ ಬಿಸಿ ಎಲ್ಲ ಹಂತದಲ್ಲಿ ತಟ್ಟಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಹಾಗೂ ನವ-ಉದಾರವಾದಿ ನೀತಿಯ ಅಮಾನವೀಯ ಪರಿಣಾಮಗಳು ಸಮಾಜದ ಎಲ್ಲ ವಲಯಗಳಿಗೆ ವ್ಯಾಪಿಸಿವೆ. ಮಾನವ ಕುಲದ ಭವಿಷ್ಯಕ್ಕೆ ಅನಿವಾರ್ಯವಾಗಿರುವ ಪ್ರಕೃತಿ, ಪರಿಸರ ಹಾಗೂ ಪ್ರಾಕೃತಿಕ ಸಮತೋಲನಕ್ಕೂ ಇದು ವ್ಯಾಪಿಸಿದೆ. ಗರಿಷ್ಠ ಲಾಭದ ದಾಹವು ದೇಶೀಯ ಸಂಪನ್ಮೂಲಗಳನ್ನು ಅಪಾಯಕ್ಕೊಡ್ಡಿದೆ. ಶಿಕ್ಷಣ, ಸಂಸ್ಕೃತಿ ಮತ್ತು ವಿಜ್ಞಾನದಲ್ಲಿ ಸಾಧಿಸಲಾದ ಅಭಿವೃದ್ಧಿಗಳು ದೊಡ್ಡ ಆರ್ಥಿಕ ಹಿತಾಸಕ್ತಿಗಳ ಹಿಡಿತಕ್ಕೆ ಹಾಗೂ ಸಾಮ್ರಾಜ್ಯಶಾಹಿ ಸಿದ್ಧಾಂತಗಳಿಗೆ ಒಳಪಟ್ಟಿದೆ. ಆದರೆ ಈ ದೊಡ್ಡ ಬಂಡವಾಳದ ಶೋಷಣೆಯು ಸಾಮಾಜಿಕ ಮಟ್ಟವನ್ನು ಅತ್ಯಂತ ಹೀನಾಯ ದಾರಿದ್ರ್ಯಕ್ಕೆ ದೂಡಿದೆ. ನಾವು ನೋಡುನೋಡುತ್ತಿರುವಂತೆಯೇ ವಿದ್ಯುತ್, ವಿಮೆ, ಸಾರಿಗೆ, ನೀರು ಸರಬರಾಜು ಖಾಸಗಿ ವಲಯಕ್ಕೆ ಸೇರಿ ಹೋದವು. ರೈತರಿಗೆ ಕೊಡುವ ಸಬ್ಸಿಡಿಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿದೆ. ಬ್ಯಾಂಕು, ಕಚೇರಿ, ಕಂಪನಿಗಳಲ್ಲಿ ಸ್ವಯಂ ನಿವೃತ್ತಿಗಳ ಸಂಖ್ಯೆ ಗಗನಕ್ಕೇರಿದೆ. ಸರಕಾರ ಸಾವಿರಾರು ಹೆಕ್ಟೇರ್ ಭೂಮಿಯನ್ನು ಕೃಷಿ ಕೂಲಿಕಾರರಿಗೆ ಮತ್ತು ಭೂರಹಿತರಿಗೆ ನೀಡುವ ಬದಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅಥವಾ ಸ್ಥಳೀಯ ಗುತ್ತಿಗೆದಾರರಿಗೆ ಅಗ್ಗದ ದರಗಳಲ್ಲಿ ಮಾರಿದೆ. ಅಥವಾ ಭೋಗ್ಯಕ್ಕೆ ನೀಡಿದೆ. ಸ್ನೇಹಿತರೇ, ಬಹಳ ದೂರದ ಉದಾಹರಣೆ ಬಿಡಿ. ನಮ್ಮ ಹತ್ತಿರದ ಅಂದರೆ ಹೈದ್ರಾಬಾದ ಕರ್ನಾಟಕದ ಗುಲಬರ್ಗಾ, ಬೀದರ, ರಾಯಚೂರ, ಕೊಪ್ಪಳ ಜಿಲ್ಲೆಗಳ ಅತಿ ಪುಟ್ಟ ಉದಾಹರಣೆ ಕಡೆ ನಿಮ್ಮ ಗಮನ ಸೆಳೆಯಬಯಸುತ್ತೇನೆ. ಕಳೆದ ಎರಡು ದಶಕಗಳ ಅವಧಿಯಲ್ಲಿ ಈ ಭಾಗದಲ್ಲಿದ್ದ ಎಲ್ಲ ಸಣ್ಣ, ಪುಟ್ಟ, ಮಧ್ಯಮ ಗಾತ್ರದ ತೈಲ ಕಾರ್ಖಾನೆಗಳು ಸುಳಿವಿಲ್ಲದೆ ಸ್ತಬ್ಧವಾಗಿವೆ. ಅವುಗಳ ವ್ಯಾಪಾರಿಗಳು, ದುಡಿಯುವ ಕಾರ್ಮಿಕರು ಇಂದು ಅಕ್ಷರಶಃ ಬೀದಿಗೆ

ಬಿದ್ದಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಅವರ ಉತ್ಪಾದನೆಗಳಂತೂ ಮಾರಾಟವಾಗಲಿಲ್ಲ. ಆದರೆ ಅವರ ಮಾನ-ಸ್ವಾಭಿಮಾನಗಳಂತೂ ಹರಾಜಾಗಿ ಹೋಗಿವೆ.

ಈ ಜೀವವಿರೋಧಿ ಜಾಗತೀಕರಣವು ನಮ್ಮ ಪರಂಪರಾಗತ ಸಾಂಸ್ಕೃತಿಕ ಲೋಕವನ್ನು ಕಬಳಿಸುತ್ತಿರುವುದು ಇನ್ನೂ ಆತಂಕದ ಸಂಗತಿಯಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯ ಗುಂಗಿನಲ್ಲಿ ಈ ಮೊದಲೇ ನಮ್ಮ ದೇಶೀ ಸಂಸ್ಕೃತಿಯ ನೆಲೆಗಳಾದ ಹಾಡು, ಹಬ್ಬ, ಉಡುಗೆ, ತೊಡುಗೆ, ಗುಡಿ ಕೈಗಾರಿಕೆ, ಜಾನಪದೀಯ ಮಟ್ಟು, ಕಲಾಕೌಶಲ್ಯ ಮುಂತಾದವುಗಳನ್ನು ವಿಸ್ಮೃತಿಯತ್ತ ತಳ್ಳಿದ್ದಾಗಿತ್ತು. ಅಷ್ಟರಲ್ಲಿಯೇ ಸುನಾಮಿಯಂತೆ ಬಂದೆರಗಿದ ಜಾಗತೀಕರಣವು ಎವೆ ಪಿಳುಕುವಷ್ಟರಲ್ಲಿ "ನಮ್ಮದೆನ್ನುವುದನ್ನು" ಸೆಳೆದುಕೊಂಡು ಕೊಚ್ಚಿ ಹಾಕತೊಡಗಿದೆ. ಏಕಮುಖೀ ಸಂಸ್ಕೃತಿಯ ಆಮಿಷ ಒಡ್ಡುತ್ತ ನಮ್ಮ "ನೇಟಿವಿಟಿ"ಯನ್ನೇ ಧೂಳೀಪಟ ಮಾಡುತ್ತಿರುವುದು ಪ್ರಜ್ಞಾವಂತರೊಳಗೆ ಗಾಬರಿ ಹುಟ್ಟಿಸುತ್ತಿದೆ. ಕರ್ನಾಟಕವು ಬಹುಮುಖೀ ಸಂಸ್ಕೃತಿಯ ಅದರಲ್ಲೂ "ಹಡದವ್ವ" ಸಂಸ್ಕೃತಿಯ ತವರುಮನೆ. ಇಲ್ಲಿ ಪ್ರತಿ ಹಳ್ಳಿಗೂ ಒಂದೊಂದು ವಿಶಿಷ್ಟ ಕರುಳು ಸಂಸ್ಕೃತಿ ಇದೆ. ಪ್ರತಿ ಹತ್ತು ಕಿಲೋ ಮೀಟರಿಗೆ ಒಂದು ಉಪಭಾಷೆಯ ಸೊಗಡಿದೆ. ಅಷ್ಟೇ ಏಕೆ ಹಳ್ಳಿಗಳ ಒಳಗೇನೇ ಪ್ರತಿ ಕೇರಿ ಕೇರಿಗೆ ವೈವಿಧ್ಯಮಯ ನಡೆ-ನುಡಿಗಳಿವೆ. ಈ ಎಲ್ಲವುಗಳನ್ನು ಭಾವ ಬಳ್ಳಿಯ ಏಕಸೂತ್ರತೆಯೊಂದಿಗೆ ಬೆಸೆದುಕೊಂಡು ಒಂದು ವಿಶಿಷ್ಟ ಲಯದಲ್ಲಿ ನಮ್ಮಗಳ ಬದುಕು ಸಮೃದ್ಧವಾಗಿದೆ. ಹೀಗಿರುವಾಗಲೂ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಒಂದೇ ಸಂಸ್ಕೃತಿ ಎಂಬುದೇ ದೊಡ್ಡ ಮೋಸ. 'ಸಂಸ್ಕೃತಿ' ಎನ್ನುವುದು ಒಂದು ಪ್ರತ್ಯೇಕ ಸಂಸ್ಥೆಯಲ್ಲ. ನಿಜವಾದ ಅರ್ಥದಲ್ಲಿ ಜನಸಮುದಾಯದ ದಿನನಿತ್ಯದ ಕಷ್ಟ ಕಾರ್ಪಣ್ಯಗಳ ಕುರಿತಾದ ವ್ಯಾಖ್ಯಾನವೇ ಸಂಸ್ಕೃತಿ. ಅದು ಒಂದು ಬಣದ ಅಥವಾ ಕೋಮಿನ ವಿಧಿ-ವಿಧಾನ, ನಡೆ-ನುಡಿ ಮಾತ್ರವಲ್ಲ. ಅಂತೆಯೇ ಒಂದು ಸಮೂಹದ ಖಾಸಗಿ ಆಸ್ತಿಯೂ ಅಲ್ಲ. ಅದು ಇಡೀ ಜನಕೋಟಿಯ ಉಸಿರ ಗಾಥೆ. ಒಂದು ಸೂಕ್ತ ಉಪಮೆಯೊಂದಿಗೆ ಹೇಳಬಹುದಾದರೆ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಎಳ್ಳಅಮವಾಸೆಯಂದು ಮಾಡುವ ವಿಶೇಷ ಭಕ್ಷ್ಯ "ಸಜ್ಜೆ ಕಡಬು ಭಜ್ಜಿ ಪಲ್ಲೆದಂತೆ". ಭಜ್ಜಿ ಪಲ್ಲೆ ಅಂದರೆ ಎಲ್ಲ ನಮೂನೆಯ ದ್ವಿದಳ ಧಾನ್ಯ, ಎಲ್ಲ ನಮೂನೆಯ ತರಕಾರಿ, ಸಖತ್ ಖಾರಾ, ಉಪ್ಪು, ಹಸಿ ಹುಣಸಿನಕಾಯಿ ಸೇರಿಸಿ ಮಾಡುವ ಮೇಲೋಗರವದು. ನಮ್ಮದೆ ಹೊಲಗಳಲ್ಲಿ ಬೆಳೆದ ಸಜ್ಜೆಯ ಹಿಟ್ಟಿನಿಂದ ಗೋಲು ಕಡಬುಗಳನ್ನು ಮಾಡಿ ಅದರೊಂದಿಗೆ ಸೇರಿಸಿ ತಿಂದವರಿಗೆ ಅದರ ರುಚಿ ಗೊತ್ತು. ಎಲ್ಲ ಜನಪದರನ್ನು ಅವರವರ ನೆಲದ ಸಂಸ್ಕೃತಿಯ ಗುರುತಿನೊಂದಿಗೇನೇ ವ್ಯಾಪಕ ಅಖಂಡ ಸಂಸ್ಕೃತಿಯ ಧಾರೆಗಳಾಗಿ ಬೆಸೆಯುವುದೇ ನಮ್ಮ ವೈಶಿಷ್ಟ್ಯ. ಭಾರತೀಯ ಸಂಸ್ಕೃತಿಯೆಂದರೆ ದೇಶದೆಲ್ಲೆಡೆ ದೊರೆಯುವ ಒಂದೇ

ನಮೂನಿ ರುಚಿ, ಬಣ್ಣ ಹೊಂದಿ ಮಿಂಚಿನ ಕಾಗದದಲ್ಲಿ ಸುತ್ತಿರುವ ಚಾಕಲೇಟ್ ಅಲ್ಲ. ಆದ್ದರಿಂದ ಕರ್ನಾಟಕ, ಕನ್ನಡಿಗರು ತಮ್ಮ ಧಾರೆಗಳ ವೈವಿಧ್ಯತೆ ಯಲ್ಲಿಯೇ ಅನನ್ಯತೆ ಉಳಿಸಿಕೊಂಡು ಬದುಕುತ್ತಿದ್ದಾರೆ. ಬದುಕಬೇಕು ಕೂಡ.

ವಿದ್ಯುನ್ಮಾನ ಮಾಧ್ಯಮಗಳು ಜಾಗತೀಕರಣದ ಮೆದುಳು ಇದ್ದಂತೆ. ಟಿ.ವಿ. ಚಾನೆಲ್ಲುಗಳು, ಮೊಬೈಲ್, ಇಂಟರನೆಟ್, ಎಸ್.ಎಂ.ಎಸ್., ಎಂ.ಎಂ.ಎಸ್. ಇವುಗಳಲ್ಲಿ ಬಿಂಬಿಸಲಾಗುತ್ತಿರುವ ಸಂಸ್ಕೃತಿ ಎಂಥದ್ದು? ಅದು ನಮ್ಮ ಜನಾಂಗವನ್ನು ಮುಟ್ಟಿಸುವುದಾದರೂ ಎಲ್ಲಿಗೆ? ಎಂಬುದನ್ನು ಕುರಿತು ನಾವೆಲ್ಲ ಚಿಂತಿಸಬೇಕಾದದ್ದು ಅತ್ಯಂತ ಅವಶ್ಯವಾಗಿದೆ. ಈ ವಿದ್ಯುನ್ಮಾನ ಲೋಕದಲ್ಲಿ ಹಿಂಸೆ, ಲೈಂಗಿಕತೆ, ಕ್ರೌರ್ಯ ಬಿಟ್ಟರೆ ಮತ್ತೊಂದಿಲ್ಲ. ನಮ್ಮ ಮಕ್ಕಳು ಪ್ರತಿ ನಿಮಿಷಕ್ಕೊಂದು ಬಲಾತ್ಕಾರ, ಪ್ರತಿ ಒಂದೂವರೆ ನಿಮಿಷಕ್ಕೊಂದು ಕೊಲೆ ನೋಡುತ್ತವೆ. ಎಸ್.ಎಂ.ಎಸ್.ಗಳಲ್ಲಿ ಬರುವ ನಗ್ನ ಚಿತ್ರಗಳು, ಇಂಟರ್‌ನೆಟ್‌ನಲ್ಲಿ ಬರುವ ಅಶ್ಲೀಲ ಚಿಟ್‌ಚಾಟ್‌ಗಳು, ಶ್ರೀಮಂತರ ಬದುಕನ್ನು ವೈಭವೀಕರಿಸುವ ಮೆಗಾ ಸಿರಿಯಲ್ಲುಗಳು, ಪುರೋಹಿತ ಸಂಸ್ಕೃತಿಯ ಮೌಢ್ಯ ಬಿಂಬಿಸುವ ಚಲನಚಿತ್ರಗಳು, ಹುಸಿದೇಶಭಕ್ತಿಯ ಅಮಲನ್ನು ತುಂಬುವ ವರದಿಗಳು, ಧರ್ಮ, ದೇವರುಗಳ ಹೆಸರಿನಲ್ಲಿ ಪ್ರಚೋದಿಸುವ ಮತೀಯದ್ವೇಷ, ಕರ್ಮಸಿದ್ಧಾಂತವನ್ನು ಸಮರ್ಥಿಸುವ ಪಾಪಭೀತಿ ಇವು ಎಲ್ಲವುಗಳಿಂದ ಅಮಾಯಕ ಜನತೆಯನ್ನು ಬಚಾಯಿಸಬೇಕಿದೆ.

ಈ ಬೀದರ ನೆಲದಲ್ಲಿ ಒಂಬತ್ತು ನೂರು ವರ್ಷಗಳ ಹಿಂದೆ ಬಸವಾದಿ ಶರಣರು ಮಾದಾರ ಚನ್ನಯ್ಯಾದಿಗಳು ಕಲಿಸಿಕೊಟ್ಟ ವೈಚಾರಿಕತೆ, ಕಾಯಕಧೀರತ್ವಗಳು ಇವೆಯಲ್ಲ, ಆ ಕಾಯಕ ಜೀವಿಗಳ ಮನೋಸ್ಥೈರ್ಯ, ವಸ್ತುಸತ್ಯ ಮಾತ್ರ ಒಪ್ಪಿಕೊಳ್ಳುವ ತಾತ್ವಿಕ ಸುಳುಹುಗಳನ್ನೆ ಮತ್ತೆ ಜನತೆಯತ್ತ ತೆಗೆದುಕೊಂಡು ಹೋಗಬೇಕಿದೆ. ಪಾಪ, ಪುಣ್ಯಗಳ ಹುಸಿ ಭ್ರಮೆಗಳಲ್ಲಿ ಸಿಕ್ಕು ಭಜನೆ, ನಾಮಸ್ಮರಣೆ ಮೂಲಕವೇ ಏನೆಲ್ಲ ಸಾಧಿಸಬಹುದು; ಜಪ, ಹೋಮ, ಹವನಗಳ ಮೂಲಕವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಾಧ್ಯವೆಂದು ಭಾವಿಸಿರುವ ನಿಷ್ಕ್ರಿಯಾವಾದಿಗಳನ್ನು ಕೂಡಿಸಿಕೊಂಡು ಈ ಕೆಳಗಿನ ವಚನದ ಅರ್ಥ ಬಿಡಿಸಿ ಹೇಳಬೇಕಿದೆ.

ಸುಖ ಬಂದಡೆ ಪುಣ್ಯದ ಫಲವೆನ್ನೆನು
ದುಃಖ ಬಂದಡೆ ಪಾಪದ ಫಲವೆನ್ನೆನು
ನೀ ಮಾಡಿದಡಾಯಿತ್ತೆಂದೆನ್ನೆನು.
ಕರ್ಮಕೆ ಕರ್ತೃವೆ ಕಡೆಯೆಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲ ಸಂಗಮದೇವಾ ನೀ ಮಾಡಿದುಪದೇಶವು ಎನಗೀ ಪರಿಯಲ್ಲಿ
ಸಂಸಾರ ಸವೆಯೆ ಬಳಸುವೆನು.

ಇಲ್ಲಿ ಬಸವಣ್ಣ ವ್ಯಕ್ತಿ ಶ್ರಮದ ಘನತೆ, ಗೌರವವನ್ನು ಎತ್ತಿ ಹಿಡಿದು ವರ್ತಮಾನದ ಕಷ್ಟ ಕೋಟಲೆಗಳೊಂದಿಗೆ ಗುದ್ದಾಡುವುದೇ ನಿಜವಾದ ಬದುಕು ಎನ್ನುತ್ತಾನೆ. ಇಂದು, ಈ ಕ್ಷಣ ನಾವು ಎದುರಿಸುತ್ತಿರುವ ಸಂಕಟ, ತಲ್ಲಣಗಳಿಗೆ ನಮ್ಮ ಸದ್ಯದ ಸ್ಥಿತಿ-ಗತಿಗಳಿಗೆ ನಾವೇ ಕಾರಣ. ಅರ್ಥಾತ್ ನಮ್ಮ ಸಾಮೂಹಿಕ ನಡೆಗಳು, ರಾಜಕೀಯ ವ್ಯವಸ್ಥೆ ಮತ್ತು ವೈಯಕ್ತಿಕ ಹಿತಾಸಕ್ತಿಗಳೇ ಕಾರಣ. ಈ ಹೊತ್ತಿನ ದುಃಖಕ್ಕೆ ಯಾವುದೋ ಕಾಣದ ಜನ್ಮದಲ್ಲಿ ಮಾಡಿದ ಕರ್ಮವೆಂಬ ಗೊಡ್ಡು ವೇದಾಂತಕ್ಕೆ ಆಧಾರವಿಲ್ಲ. ಆದ್ದರಿಂದ ನಾವೆಲ್ಲ ಮೈಮುರಿದು ಕಾಯಕ ಮಾಡುವ ಮೂಲಕ ಅಭಿವೃದ್ಧಿಯನ್ನು, ವೈಚಾರಿಕ ಕ್ರಾಂತಿಯ ಮೂಲಕ ಸಾಮಾಜಿಕ ಸಮಾನತೆಯನ್ನೂ ತರಬೇಕೆಂದು ಹೇಳಿದ್ದು ತುಂಬಾ ಅರ್ಥಪೂರ್ಣ. ಇಂಥ ಕ್ರಿಯಾಶೀಲತೆಯನ್ನು, ಜನೋಪಯೋಗಿ ಮಹತ್ವಾಕಾಂಕ್ಷೆಗಳನ್ನು ಜನತೆಯ ಬುದ್ಧಿ, ಭಾವಗಳಲ್ಲಿ ತುಂಬಬೇಕಿದೆ.

ಕುಳಿತು ಮಂತ್ರ ಹೇಳಿ ಮರುಳು ಮಾಡುವ ಸಂಸ್ಕೃತಿ ನಮ್ಮದಲ್ಲ. ಕೈ ಮೈಗಳಿಗೆ ಕೆಸರು ಹಚ್ಚಿಕೊಂಡು ಬೆವರು ಸುರಿಸಿ ಬಂಗಾರದ ಬೆಳೆ ತೆಗೆಯುವ ಬೆವರು ಸಂಸ್ಕೃತಿ ನಮ್ಮದು. ಅನೇಕತೆಯಲ್ಲಿ ಏಕತೆ ಕಂಡ ಈ ನಾಡಿನ ದಲಿತ, ಮಾದಿಗ, ಡೋಹರ, ಸಮಗಾರ, ಕಂಬಾರ, ಕುಂಬಾರ ಹಲವಾರು ಕುಲ ವೃತ್ತಿ ಬಾಂಧವರ ಜೀವಂತ ಸಂಸ್ಕೃತಿ ನಮ್ಮದು. ಇಂಥ ಸಂಸ್ಕೃತಿಯ ಮೇಲಾಗುತ್ತಿರುವ ದಾಳಿಯನ್ನು ಎದುರಿಸಲು ನಾವೆಲ್ಲ ಮೈಕೊಡವಿ ನಿಲ್ಲಬೇಕಿದೆ. ಜಾಗತೀಕರಣದ ಈ ಸಾಂಸ್ಕೃತಿಕ ಯುದ್ಧಕ್ಕೆ ಪ್ರತಿರೋಧವಾಗಿ ವಿಶ್ವ ಸಾಮಾಜಿಕ ವೇದಿಕೆಯಡಿ (World Social Forum) ಎಲ್ಲ ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಒಂದಾಗಿ "ಇನ್ನೊಂದು ಜಗತ್ತು ಸಾಧ್ಯ" "ANOTHER WORLD IS POSSIBLE" ಎಂಬುದನ್ನು ಕಳೆದ ವರ್ಷ ಮುಂಬೈನಲ್ಲಿ ನಡೆದ ಸಮ್ಮೇಳನದಲ್ಲಿ ತೋರಿಸಿಕೊಟ್ಟಿವೆ. ಆದ್ದರಿಂದ ಕನ್ನಡಿಗರಾದ ನಮಗೆ ಬೆಂಗಳೂರು ಸಿಂಗಪೂರ ಆಗುವುದು ಬೇಕಿಲ್ಲ. ಅದು ಕೆಂಪೇಗೌಡನ ಬೆವರ ಬೆಲೆಯ ಬೆಂದ ಕಾಳೂರು ಮಾತ್ರವಾಗಿರಲಿ. ಬೀದರ ಅಮೇರಿಕಾದ ಒಂದು ಹಳ್ಳಿಯಾಗಬೇಕಿಲ್ಲ. ಅದು ಮಾದಿಗರ ಚನ್ನಯ್ಯನ ಅಂಬಲಿ ನುಚ್ಚು ಅಟ್ಟುಣ್ಣುವ ನೆಲವೇ ಆಗಿರಲಿ. ಇದರರ್ಥ ಪ್ರಗತಿಗೆ ವಿಮುಖರಾಗ ಬೇಕೆಂದಿಲ್ಲ. ನಮ್ಮ ಹಳ್ಳಿ, ನಗರಗಳು ಎಲ್ಲ ತಂತ್ರಜ್ಞಾನ, ವಿಜ್ಞಾನವನ್ನು ಜನಮುಖಿಯಾಗಿ ಬಳಸಿಕೊಂಡು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲಿ. ನಾವು ಆಧುನೀಕರಣ, ತಂತ್ರಜ್ಞಾನ, ವಿಜ್ಞಾನದ ವಿರೋಧಿಗಳಲ್ಲ. ರಾಷ್ಟ್ರದ ಅಭಿವೃದ್ಧಿಯ ವಿರೋಧಿಗಳಲ್ಲ. ಅಖಂಡ ರಾಷ್ಟ್ರದ ಭಾವತಂತುವಿನ ವಿರೋಧಿಗಳಲ್ಲ. ಆದರೆ ರಾಷ್ಟ್ರೀಯತೆ ಎಂಬ ಸೋಗಿನಡಿ ದೇಶದ ಹಿಡಿಯಷ್ಟಿರುವ ಜನತೆ ತನ್ನ ದಮನಕಾರಿ ಸಂಸ್ಕೃತಿಯನ್ನೇ ಹೇರುತ್ತಿರುವ ಧೋರಣೆಯ ವಿರೋಧಿಗಳಾಗಿದ್ದೇವೆ. ಈ ದೇಶದ ಶೂದ್ರ, ದಲಿತ ಮತ್ತು ಮಹಿಳೆಯರನ್ನು ತುಳಿಯಲೆಂದೇ ಸೃಷ್ಟಿಸಿಕೊಂಡಿರುವ ಪೊಳ್ಳು ಸಂಸ್ಕೃತಿಯ

ವಿರೋಧಿಗಳಾಗಿದ್ದೇವೆ. ಅವರ ಜನವಿರೋಧಿ ಕುತಂತ್ರಗಳನ್ನು ನಿರ್ನಾಮಗೊಳಿಸಲೆಂದೇ ಕಂಕಣಬದ್ಧರಾಗಿದ್ದೇವೆ.

ಭಯೋತ್ಪಾದನೆ, ಮೂಲಭೂತವಾದ, ಕೋಮುವಾದ :

ಇಂದು ವಿಶ್ವವನ್ನು ಒಳಗೊಂಡಂತೆ ಸ್ಥಳೀಯವಾಗಿ ಕಾಡುತ್ತಿರುವ ಹಲವಾರು ವ್ಯಾಧಿಗಳು ಉಲ್ಬಣಗೊಳ್ಳುತ್ತಿವೆ. ಅಮೇರಿಕಾದಂಥ ಬಲಿಷ್ಠ ರಾಷ್ಟ್ರಗಳು ತಮ್ಮ ಸಂಪತ್ತು ಹೆಚ್ಚಲೆಂದು ಬಡರಾಷ್ಟ್ರಗಳ ಮೇಲೆ ನಡೆಸುತ್ತಿರುವ ಕಾರಣರಹಿತ ಆಕ್ರಮಣಗಳು, ಸಾಂಸ್ಕೃತಿಕ ದಾಳಿಗಳು, ಮುಕ್ತ ಮಾರುಕಟ್ಟೆಯ ವ್ಯಾಪಾರೀ ಕಪಿಮುಷ್ಠಿಗಳು, ಒಂದೇ ಎರಡೇ. ಹೀಗೆ ಪಟ್ಟಿ ಮಾಡುತ್ತ ಹೋದರೆ ಅಸಂಖ್ಯ ದಮನಿತ ಗಾಥೆಗಳಿವೆ. ವಿಶ್ವಮಟ್ಟದಲ್ಲಿರುವ ಭಯೋತ್ಪಾದನೆ ರಾಷ್ಟ್ರಮಟ್ಟದಲ್ಲಿ ಹುಟ್ಟಿಕೊಂಡಿರುವ ಮೂಲಭೂತವಾದ, ಸ್ಥಳೀಯ ಮಟ್ಟದಲ್ಲೂ ಪಸರಿಸಿಕೊಂಡಿರುವ ಕೋಮುವಾದ ಇವುಗಳಿಗೆ ಪರಸ್ಪರ ಅಂತರ್ ಸಂಬಂಧವಿದೆ. ಜಗತ್ತಿನ ಎಲ್ಲ ಆಳುವ ವರ್ಗ ಒಂದೇ ನೀತಿಯನ್ನು ಅನುಸರಿಸುತ್ತದೆ. ಅದು ಜನವಿರೋಧಿ ನೀತಿ. ಸಾಮಾನ್ಯ ಜನತೆಯನ್ನು ಸ್ವಕೇಂದ್ರಿತ ಸ್ವಾರ್ಥಕ್ಕೆ ಬಲಿಯಾಗಿಸುವ ನೀತಿಯಾಗಿರುತ್ತದೆ. ಈ ರೀತಿಯ ಬಲಿಯಜ್ಞಕ್ಕೆ ಭಾರತದಲ್ಲಿಯಂತೂ ಸಾವಿರಾರು ವರ್ಷಗಳ ಇತಿಹಾಸವಿದೆ. ಅಮೇರಿಕಾದ ಪೆಂಟಗಾನ ಮೇಲೆ ಸಂಭವಿಸಿದ ಭಯೋತ್ಪಾದಕರ ದಾಳಿ, ಗುಜರಾತ್‌ನಲ್ಲಿ ನಡೆದ ನರಮೇಧ, ಕರ್ನಾಟಕದ ದತ್ತಪೀಠದಲ್ಲಿ ಎದ್ದ ವಿವಾದ ಕಾಕತಾಳೀಯವೇನಲ್ಲ. ಇವೆಲ್ಲ ಆಯಾ ಹಂತದಲ್ಲಿ ರೂಪಿಸಿದ ವ್ಯವಸ್ಥಿತ ಜೀವ ವಿರೋಧಿ ಸಂಚುಗಳಾಗಿವೆ. ಮಾನವೀಯತೆಯ ಮುಖಕ್ಕೆ ಬಡಿದ ಮಸಿಯಾಗಿವೆ. ತನ್ನ ಸಂಪತ್ತು ಮತ್ತು ಅಹಂನಿಂದ ಇಡೀ ವಿಶ್ವದ ತುಂಬ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿ ಮಾನವ ಕುಲಕ್ಕೆ ಅಂಟಿದ ಏಡ್ಸ್‌ನಂತಿದೆ. ಶೀಘ್ರವೇ ಈ ಸಾಮ್ರಾಜ್ಯಶಾಹಿ ಏಡ್ಸ್‌ಗೆ ಮದ್ದು ಕಂಡುಹಿಡಿಯಲೇಬೇಕಿದೆ. ಇಲ್ಲವಾದರೆ ಮೊನ್ನೆ ಅಫಘಾನಿಸ್ತಾನ, ನಿನ್ನೆ ಇರಾಕ್, ನಾಳೆ ಮಾತ್ರ ಮತ್ತಾರೂ ಬಲಿಯಾಗುವುದು ಬೇಡ. ತೃತೀಯ ಜಗತ್ತಿನ ರಾಷ್ಟ್ರಗಳೆಲ್ಲ ಸೇರಿ ಅದಕ್ಕೆ ಶಾಶ್ವತ ಸನ್ಮಾರ್ಗ ತೋರಿಸುವ ಜರೂರಿ ಇದೆ.

ಅಮೇರಿಕಾದ ಕುಮ್ಮಕ್ಕಿನಿಂದಲೇ ಹುಟ್ಟಿಕೊಂಡಂಥ ಅಫಘಾನಿಸ್ತಾನದ ತಾಲಿಬಾನಿಗಳು ಬಾಮಿಯಾನದ ಗಾಂಧಾರನ ಬುದ್ಧನ ಪ್ರತಿಮೆಯನ್ನು ಛಿದ್ರಗೊಳಿಸುವಂತಹ ದುಷ್ಕ್ರಿಯೆಯ ಹಿಂದಿನ ಮನೋಭೂಮಿಕೆಗೂ, ಬಾಬ್ರಿ ಮಸೀದಿಯಾದಿ ಬಾಬಾಬುಡನ್‌ಗಿರಿಯಲ್ಲಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವ ದೇಶೀ ಮೂಲಭೂತವಾದಿಗಳ ಮನೋಧರ್ಮಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಎಲ್ಲೆಲ್ಲಿ ಗುಂಪು ಸ್ವಾರ್ಥದ ಪುಂಡಾಟಿಕೆಗಳು ತಲೆ ಎತ್ತತೊಡಗುತ್ತವೆಯೋ ಅಲ್ಲೆಲ್ಲ "ಧರ್ಮ" ಅಫೀಮ ಆಗಿ, ಅಶಕ್ತರನ್ನು ಧ್ವಂಸ ಮಾಡುವ ಅಸ್ತ್ರವಾಗಿ ಕೆಲಸ ಮಾಡುತ್ತದೆ.

ಮಾನವೀಯತೆಯನ್ನು ಸಾಕಾರಗೊಳಿಸಲೆಂದೇ ಹುಟ್ಟಿದ ಧರ್ಮಗಳು ಮೂಲಭೂತವಾದಕ್ಕೆ ತಿರುಗಿಕೊಂಡೊಡನೆಯೇ ಮಾನವ ಬದುಕಿಗೆ ಸಂಚಕಾರ ತರುವ ದುಷ್ಟ ಸಾಧನಗಳಾಗಿ ಬಿಡುತ್ತವೆ. ಇಂಥ ಸಂದರ್ಭಗಳಲ್ಲಿ ಧರ್ಮದ ಆಚರಣೆಗಳು, ನಂಬಿಕೆಗಳು, ಉತ್ಸವಗಳು ತಮ್ಮ ಮೂಲಭೂತ ಅರ್ಥ ಕಳೆದುಕೊಂಡು ಹುಚ್ಚರ ಕೈಯೊಳಗಿನ ಕಲ್ಲುಗಳಾಗಿ ಬಿಡುತ್ತವೆ. ಆಗ ಅವುಗಳನ್ನು ನಿಯಂತ್ರಿಸುವದು ಹರಸಾಹಸವಾಗತೊಡಗುತ್ತದೆ. ಆದ್ದರಿಂದ ಧರ್ಮ ಮತ್ತು ನಂಬಿಕೆಗೆ ಸಂಬಂಧಪಟ್ಟಂತೆ ಪರಸ್ಪರ ಸಹ್ಯ ಮನೋಭಾವ ಬೆಳೆಸಿಕೊಳ್ಳಬೇಕು.

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ನಾವು ಎರಡು ವಿಷಯಗಳಲ್ಲಿ ಎಚ್ಚೆತ್ತುಕೊಳ್ಳಬೇಕಿದೆ. ಮೊದಲನೆಯದು ಬಲಪಂಥೀಯ ಫ್ಯಾಸಿಝಂ, ಎರಡನೆಯದು ಎಡಪಂಥೀಯ ಅಡವಂಚರಿಜಂ. ಇವೆರಡೂ ಮಾನವಕುಲದ ಬದ್ಧ ವೈರಿಗಳು. ಬಲಪಂಥೀಯ ಫ್ಯಾಸಿಜಂ ಒಂದು ಅನಿಷ್ಟವಾದರೆ, ಎಡಪಂಥೀಯ ಅಡವಂಚರಿಜಂ ಸಿದ್ಧಾಂತವೊಂದರ ತಪ್ಪು ಗ್ರಹಿಕೆಯಾಗಿದೆ. ಆದಾಗ್ಯೂ ಇವೆರಡನ್ನು ಖಂಡಿಸುವದು ಬಹುಮುಖ್ಯ. ಎಲ್ಲಿ ಹಸಿವು, ಬಡತನ, ನಿರುದ್ಯೋಗ, ನಾಗರಿಕ ಸೌಲಭ್ಯಗಳ ಕೊರತೆ ಮತ್ತು ಎಲ್ಲ ಬಗೆಯ ಅಸಮಾನತೆ ಮನೆ ಮಾಡಿಕೊಂಡಿರುತ್ತದೆಯೋ, ಅಲ್ಲಿ ಎಡ ಅಡವಂಚರಿಜಂ ಸಿದ್ಧಾಂತಗಳು ಕ್ರಿಯಾತ್ಮಕವಾಗತೊಡಗುತ್ತವೆ. ಈ ಸಿದ್ಧಾಂತ ಹಿಂಸಾರಭಸಮತಿಯನ್ನು ತುಂಬಿಕೊಂಡು ಮುಟ್ಟುವ ಗುರಿಯತ್ತಲೆ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸುತ್ತದೆಯೇ ಹೊರತು ಮಾರ್ಗದ ಸಿಂಧುತ್ವದ ಕಡೆ ಗಮನ ಹರಿಸುವದಿಲ್ಲ. ಎಡ ಅಡವಂಚರಿಜಂ ಸ್ವಂತ ತಮ್ಮನ್ನು ಬಲಿಕೊಟ್ಟಾದರೂ ತಮ್ಮ ಸಿದ್ಧಾಂತ ಜಾರಿ ಮಾಡಲು ಹವಣಿಸುತ್ತದೆ. ತತ್ಪರಿಣಾಮವಾಗಿ ಈ ಸಿದ್ಧಾಂತದ ಅನುಸಂಧಾನಿಗಳು ಮತ್ತು ಪ್ರಭುತ್ವದೊಳಗಿನ ಅಮಾಯಕ ಜನರು ಸಮಸಮ ವಾಗಿಯೇ ಬಲಿಯಾಗುತ್ತಾರೆ. ಅಂತಿಮವಾಗಿ ಇದು ಜೀವಘಾತುಕ ದುರ್ದಮ್ಯ ಸಾಹಸವಾಗಿ ನಿಲ್ಲುತ್ತದೆ. ಆದ್ದರಿಂದ ಇಂಥ ಸಾಹಸವಾದಿ ಚಟುವಟಿಕೆಗಳು ಪಸರಿಸದಂತೆ ನೋಡಿಕೊಳ್ಳಬೇಕಾದದ್ದು ಪ್ರಜಾಪ್ರಭುತ್ವವಾದಿ ಸರಕಾರದ ಮತ್ತು ಜನಪರ ಚಳುವಳಿಗಳ ಜವಾಬ್ದಾರಿಯಾಗಿದೆ.

ಆಳುವ ಸರಕಾರಕ್ಕೆ ನಿಜವಾಗಿಯೂ ಜನಪರ ಕಾಳಜಿ ಇರುವುದಾದರೆ ಈ ತೆರನ ಹಿಂಸಾವಾದ ತಲೆಯತ್ತುವ ಪ್ರಮೇಯವೇ ಬರಲಾರದು. ತನ್ನ ಆಳ್ವಿಕೆಯ ಸುಪರ್ದಿನಲ್ಲಿರುವ ಪ್ರದೇಶಗಳಲ್ಲಿ ಎಲ್ಲ ರೀತಿಯ ನಾಗರಿಕ ಸೌಲಭ್ಯಗಳು ಅಂದರೆ ಉತ್ತಮ ರಸ್ತೆ, ಶುದ್ಧ ನೀರು, ಸಮರ್ಪಕ ವಿದ್ಯುತ್, ಆರೋಗ್ಯ, ದುಡಿಯುವ ಕೈಗಳಿಗೆ ಕೆಲಸ, ಹರೆಯದ ಕಿಶೋರಿ ಕಂಗಳಲ್ಲಿ ಭವಿಷ್ಯದ ಕನಸುಗಳು ತನ್ಮೂಲಕ ಅಖಂಡ ಜೀವನ ಪ್ರೀತಿ ಉಕ್ಕಿಸುವ ವಾತಾವರಣ ಕಲ್ಪಿಸಿದರೆ ಸಾಕು 'ಬಂದೂಕು ನಳಿಗೆಗಳಲ್ಲಿ ಗುಬ್ಬಿಗಳು ಗೂಡು ಕಟ್ಟುತ್ತವೆ.' ಆದರೆ ಕರ್ನಾಟಕವನ್ನು ಈವರೆಗೆ ಆಳಿದ ಸರಕಾರಗಳ ದಿವ್ಯ ನಿರ್ಲಕ್ಷ, ಅಧಿಕಾರಶಾಹಿಯ ಮಿತಿಮೀರಿದ ಭ್ರಷ್ಟಾಚಾರದ ಎದೆಯ ಒಳಗೆ ಈ ಹಿಂಸಾವಾದದ ಬೀಜಗಳು ಅಡಗಿವೆ. ಈ ರಕ್ತಬೀಜಾಸುರ

ಬೀಜಗಳು ನೆಲಕ್ಕೆ ಬಿದ್ದು ಮೊಳಕೆಯೊಡೆಯದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರಬಲ ರಾಜಕೀಯ ಸಂಕಲ್ಪ ಬೇಕು. ಮೊದಲು ಎಡ ಅಡವಂಚರಿಜಂ ಸಮಸ್ಯೆಯಲ್ಲ. ಅದೊಂದು ಸೈದ್ಧಾಂತಿಕ ಮನೋಜಾಡ್ಯ ಎಂಬುದನ್ನು ಮನವರಿಕೆ ಮಾಡಿಕೊಂಡು ಉತ್ತಮ, ಸಂತೃಪ್ತಿಕರ ಆಡಳಿತ ನೀಡುವ ಮೂಲಕವೇ ಇದಕ್ಕೆ ಉತ್ತರ ಕಂಡುಕೊಳ್ಳಬೇಕು.

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥ

ಜೇಡರ ದಾಸಿಮಯ್ಯ ತುಂಬಾ ಹಿಂದೆಯೇ ಹಿಂಸಾವಾದದ ಬೇರುಗಳು ಹಸಿವಿನ ಲ್ಲಿವೆ ಎಂದು ಕಂಡುಕೊಂಡಿರುವ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಇಂದು ನಮಗೆ ಸಾಧ್ಯವಾಗಬೇಕು. ಹಸಿದ ಹೊಟ್ಟೆಗೆ ಅನ್ನ ನೀಡುವ ಗಾರುಡಿಗವಿದ್ಯೆ ಕರಗತ ಮಾಡಿಕೊಳ್ಳುವ ಮೂಲಕವೇ ಅದರ ಬೇರುಗಳನ್ನು ಕತ್ತರಿಸಬೇಕು. ಹಿಂಸಾವಾದಿಗಳ ಮೈ ಮೆದುಳಿಗೇರಿದ ಹಿಂಸೆಯ ವಿಷವಿಳಿಸಬೇಕು. ಇದೇ ವಚನಕಾರನ 'ಒಡಲುಗೊಂಡವ ಹಸಿವ'ಎಂಬ ವಚನವನ್ನು ಈ ಮೊದಲು ನೋಡಿದ್ದೇವಷ್ಟೇ. "ಹಸಿವು" ಉಂಟಾದರೆ ದೇವರೆಂಬ ದೇವರು ಕೂಡಾ ಸುಳ್ಳು ಹೇಳುತ್ತದೆ, ಇನ್ನು ಮನುಷ್ಯರಾದವರು ಬಂದೂಕು ಹಿಡಿದರೆ ಆಶ್ಚರ್ಯವೇನಿಲ್ಲ. ಆದ್ದರಿಂದ ಹಸಿವಿನೊಂದಿಗೆ ಹುಡುಗಾಟವಾಡಲು ಹೋಗಲುಬಾರದು. ಹಸಿವಿನ ಉಗ್ರರೂಪವೇ ಹಿಂಸೆ.. ಈ ಹಿಂಸೆಗೆ ಹಿಂಸೆ ಎಂದೂ ಉತ್ತರವಾಗಲಾರದು.

ಈ ಹೊತ್ತು ವಿಷಾದಿಸಬೇಕಾದ ಸಂಗತಿಯೆಂದರೆ, ಯಾವುದೇ ಸಮಸ್ಯೆಗೂ ಹಿಂಸೆ ಪರಿಹಾರವಲ್ಲ ಎಂದು ಬಲವಾಗಿ ನಂಬಿಕೊಂಡಿರುವಾಗಲೂ "ಶಿವಸೇನೆ" ಯಂತಹ ಸಂಘಟನೆಗಳು ಕರ್ನಾಟಕದ ಒಳಗೆ ಹಿಂಸೆ ಪ್ರಚೋದಿಸುತ್ತಿರುವುದು. ಮಹಾರಾಷ್ಟ್ರ ಮೂಲದ ಶಿವಸೇನೆ ಸಂಘಟನೆಯು ಕನ್ನಡ ಮತ್ತು ಕನ್ನಡಿಗರನ್ನು ವಿರೋಧಿಸಲೆಂದೇ ಹುಟ್ಟಿದ್ದು. ಹಾಗೆ ನೋಡಿದರೆ ಕನ್ನಡಿಗರು ಮತ್ತು ಮರಾಠಿಗರಿಗೆ ತುಂಬಾ ಆತ್ಮೀಯವಾದ ಕರುಳಬಳ್ಳಿಯ ಸಂಬಂಧವಿದೆ. ಈ ಎರಡು ನಾಡುಗಳ ನಡುವಿನ ವಿಶಿಷ್ಟ ಪರಂಪರೆಯೊಂದು "ಕಾನಡೀಚ ವಿಠ್ಠಲ" ಎಂಬ ಅಭಂಗದಲ್ಲಿ ಅನುರಣಿತವಾಗಿದೆ. ಹೀಗಾಗಿಯೇ ಕನ್ನಡದ ಅಸಂಖ್ಯ ದುಡಿಯುವ ಜನತೆಯು ಬಾಳನ್ನು ಅರಸಿಕೊಂಡು ಮಹಾರಾಷ್ಟ್ರದ ಸಾಂಗ್ಲಿ, ಮೀರಜ್, ಮುಂಬೈ, ಕೊಲ್ಹಾಪುರ, ಪುಣೆ, ಮುಂತಾದ ನಗರಗಳಲ್ಲಿ ನೆಲೆ ನಿಂತಿದ್ದಾರೆ. ಈ ಜನತೆಯನ್ನು ಅವರ ದುಡಿಯುವ ಸ್ಥಳದಿಂದ ಒಕ್ಕಲೆಬ್ಬಿಸುವುದೇ ತನ್ನ ಗುರಿಯಾಗಿಟ್ಟುಕೊಂಡಿರುವ ಶಿವಸೇನೆಗೆ ಕನ್ನಡದ ನೆಲದಲ್ಲಿ ತಳವೂರಲು ಬಿಡುವುದು ಅಕ್ಷಮ್ಯ ಅಪರಾಧ

ವಾದೀತು. ಓದುವ-ಬರೆಯುವ ಮೆದುಳು, ಕೈಗಳಿಗೆ ಪುಸ್ತಕ, ಪೆನ್ನು ಕೊಡುವ ಬದಲು ಖಡ್ಗ, ಪಿಸ್ತೂಲು ಕೊಡಿ, ಹಿಂದೂಗಳೆನಿಸಿಕೊಂಡವರು ವೆಗ್ಗಳವಾಗಿ ಮಕ್ಕಳನ್ನು ಹೆರಬೇಕು ಎಂದು ಕರೆಕೊಡುವ ನಾಯಕರು ಕನ್ನಡದ ಮಣ್ಣಿಗೆ ಬೇಕಾಗಿಲ್ಲ. ಸರಕಾರವಾದರೂ ಇಂಥ ಪ್ರಚೋದನಕಾರಿ ಹೇಳಿಕೆ ನೀಡುವ ಮತ್ತು ಕೋಮುವಾದ ಹಬ್ಬಿಸಲು ಕಾರಣವಾಗುವ ಸಂಘಟನೆಗಳಿಗೆ ಕುಮ್ಮಕ್ಕು ಕೊಡಬಾರದು. ಅಂತಹ ಸಂಘಟನೆಗಳನ್ನು ಮುಟ್ಟುಗೋಲು ಹಾಕಬೇಕು. ಯಾವುದೇ ರೀತಿಯ ಧರ್ಮಾಂಧತೆ ಹುಟ್ಟಿಸುವ ಕೋಮುವಾದಿ, ಮೂಲಭೂತವಾದಿ ಸಂಘ, ಸಂಸ್ಥೆಗಳ ಚಟುವಟಿಕೆಗಳನ್ನು ಮುಲಾಜು ಇಲ್ಲದೆ ನಿಗ್ರಹಿಸುವ ಅಗತ್ಯ ಜವಾಬ್ದಾರಿ ಸರ್ಕಾರದ ಮೇಲಿದೆ.

ಕನ್ನಡ ಜನತೆ ಸಾವಿರಾರು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವ ಸೌಹಾರ್ದದ ನೆಲೆಯನ್ನು ಧ್ವಂಸ ಮಾಡುತ್ತಿರುವಂಥ ಘಟನೆಗಳು ಕರ್ನಾಟಕದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಸನಾತನಿಗಳು ದತ್ತಪೀಠವನ್ನು ಇನ್ನೊಂದು ಗುಜರಾತ್ ಗೋಧ್ರಾವನ್ನಾಗಿ ಮಾಡುತ್ತೇವೆ ಎಂದು ಹೇಳಿರುವುದು ಖಂಡನೀಯವಾಗಿದೆ. ಪ್ರಜ್ಞಾವಂತ ಜನತೆಯು ಕೋಮುವಾದ ಬಿಂಬಿಸುವ ಹುಸಿ ದೇಶಭಕ್ತಿಯ ಅಮಲಿಗೆ ಬಲಿಯಾಗಬಾರದು. ಏಕೆಂದರೆ ಕನ್ನಡ ನಾಡು ಕೋಮುಸಾಮರಸ್ಯ ಮತ್ತು ದಾರ್ಶನಿಕ ಸಮನ್ವಯತೆಯ ಆಡುಂಬೊಲವಾಗಿದೆ. ಕವಿ ಕುವೆಂಪುವಿನ ಮಾತಿನಲ್ಲಿ ಹೇಳುವುದಾದರೆ

"ಸರ್ವ ಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ, ಕ್ರೈಸ್ತ, ಮುಸಲ್ಮಾನ
ಪಾರಸಿಕ ಜೈನರುದ್ಯಾನ" ಎನಿಸಿಕೊಂಡಿರುವ ಈ ನೆಲದಲ್ಲಿ ಅನ್ಯರೆಂಬುವರಿಲ್ಲ. ಪ್ರತಿ ನಗರ, ಗ್ರಾಮ, ಬಡಾವಣೆಗಳಲ್ಲಿ ವಿವಿಧ ಮತ, ಪಂಥ, ಧರ್ಮ, ಭಾಷಿಕ ಜನರು ಪರಸ್ಪರ ಯಾವುದೇ ಗುಮಾನಿಗಳಿಲ್ಲದೆ, ಕ್ಲೇಷೆಗಳಿಲ್ಲದೆ ಬಾಳುತ್ತಿದ್ದಾರೆ. ಅವರವರ ಪ್ರಾರ್ಥನೆ, ಪೂಜಾಸ್ಥಳಗಳು ಅವರವರಿಗೆ ಪವಿತ್ರ ಮತ್ತು ಶ್ರೇಷ್ಠ. ಪ್ರತಿಯೊಬ್ಬರ ಧರ್ಮಾಚರಣೆ ಅವರ ಖಾಸಗಿ ಹಕ್ಕು. ಅದು ಸಂವಿಧಾನ ಕೊಡಮಾಡಿದ ಸ್ವಾತಂತ್ರ್ಯ. ಪ್ರತಿಯೊಬ್ಬರು ತಮಗೆ ಇಷ್ಟವಾದ ಧರ್ಮ, ದೇವರು, ನಂಬಿಕೆ. ಶ್ರದ್ಧೆಗಳನ್ನು ಹೊಂದಲು ಬಾಧ್ಯಸ್ತರು. ಈ ತೆರನ ಸಾಂಸ್ಕೃತಿಕ, ಧಾರ್ಮಿಕ ವೈವಿಧ್ಯತೆಯೇ ನಮ್ಮ ವೈಶಿಷ್ಟ್ಯ. ಇದೇ ನಮ್ಮ ಸಂವಿಧಾನದ ದಿಗ್ವಿಜಯ ಮತ್ತು ತಾಕತ್ತು. ಈ ಕಾರಣವಾಗಿಯೇ ಜಾಗತಿಕ ಪ್ರಜಾಪ್ರಭುತ್ವವಾದಿ ಪರಂಪರೆಯಲ್ಲಿ ಭಾರತೀಯ ಸಂವಿಧಾನಕ್ಕೊಂದು ಹೆಮ್ಮೆಯ ಸ್ಥಾನವಿದೆ. ಹೀಗಿರುವಾಗಲೂ ಹಿಂದುತ್ವದ ಗುತ್ತಿಗೆ ಹಿಡಿದಂತೆ ಮಾತಾಡುವ ಮತೀಯವಾದಿಗಳು ಇತರ ಧರ್ಮೀಯರನ್ನು ಗುಮಾನಿಯಿಂದ ನೋಡುವುದಿದೆಯಲ್ಲ; ತಾವು ಮಾತ್ರ ದೇಶಭಕ್ತರು, ಉಳಿದವರೆಲ್ಲ

ದೇಶದ್ರೋಹಿಗಳು ಎಂದು ಬಿಂಬಿಸುವುದಿದೆಯಲ್ಲ ಇದು ಭಾರತೀಯ ಅಖಂಡತೆಗೆ ಧಕ್ಕೆ ತರುತ್ತದೆ. ನಾಡವರ ಬದುಕಿಗೆ ದೊಡ್ಡ ದುರಂತ ತಂದೊಡ್ಡುತ್ತದೆ. ಮುಗ್ಧ ಭಕ್ತಿ ಪರಂಪರೆಯ ಮನಸ್ಸುಗಳಲ್ಲಿ ಮೈಲಿಗೆ ತುಂಬುತ್ತದೆ.

ಕನ್ನಡ ನಾಡಿನಲ್ಲಿ ಪರಧರ್ಮ ಸಹಿಷ್ಣುತೆ ಮೌಲ್ಯ ಮಾತ್ರವಲ್ಲ; ಅದು ನಮ್ಮ ರಕ್ತದೊಂದಿಗೆ ಹರಿದುಕೊಂಡು ಬಂದಿರುವ ಜೀವವಾಹಿನಿಯಾಗಿದೆ. ನೃಪತುಂಗ, ೨ನೇ ಪುಲಕೇಶಿ, ೬ನೇ ವಿಕ್ರಮಾದಿತ್ಯನಂಥ ವೀರ ಪರಂಪರೆಯ ಅರಸರು, ಪಂಪ, ಪೊನ್ನ, ರನ್ನ, ಹರಿಹರ ರಾಘವಾಂಕರಂಥ ದಾರ್ಶನಿಕ ಕವಿಗಳು, ಬಸವ-ಅಲ್ಲಮ-ಹರಳಯ್ಯರಂಥ ಕ್ರಾಂತಿಕಾರಿಗಳು, ಶಿಶುನಾಳ ಶರೀಫ್, ಚನ್ನೂರ ಜಲಾಲಸಾಹೇಬರಂಥ ಸೂಫಿಸಂತರು, ಕಲಬುರ್ಗಿ-ಶರಣಬಸವ, ಖಾಜೇ ಬಂದೇನವಾಜ, ಮಹಮ್ಮದ ಗವಾನ, ಇಂಥ ನೂರಾರು ಮಹಾನ್ ಚೈತನ್ಯಗಳು ಕನ್ನಡ ಮಣ್ಣಿಗೆ ಭಾವೈಕ್ಯತೆಯ ಕಸುವು ಕಸಿ ಮಾಡಿದ್ದಾರೆ. ೧೭ನೇ ಶತಮಾನದಲ್ಲಿ ಗತಿಸಿಹೋದ ಚನ್ನೂರ ಜಲಾಲ ಸಾಹೇಬರ ತತ್ವಪದವೊಂದನ್ನು ಗುಣಿಗುಣಿಸಿದರೂ ಸಾಕು ಕನ್ನಡದ ದಾರ್ಶನಿಕ ಹೊಳಹು ನಮ್ಮ ನರನಾಡಿಗಳಲ್ಲಿ ಓತಪ್ರೋತವಾಗಿ ತುಂಬಿಕೊಳ್ಳತೊಡಗುತ್ತದೆ.

ಸಬ್ ಕಹತೇ ಹೈ ಈಶ್ವರ ಅಲ್ಲಾ
ಇದರ ಭೇದ ಯಾರಿಗೂ ತಿಳಿದಿಲ್ಲ ॥ ಪ ॥

ನಿರಾಕಾರಸೇ ಆಕಾರ ಹುವೇ
ವೇದ ಶಾಸ್ತ್ರಕೆ ನಿಲುಕಿಲ್ಲ
ಹಿಂದೂ ಮುಸಲ್‌ಮಾನ ಶಾಸ್ತ್ರ ಪಡತೆ ಹೈ
ಗುರು ಮನಿ ಕೀಲ ಸಿಗಲಿಲ್ಲ ॥ ೧ ॥

ಲಾಯಕ್ ಗುರುಕೋ ಜಬ್ ಢೂಂಡ ಲಾಕೆ
ಏನು ಬೇಡಿದ್ದು ಕೊಡಬೇಕಲ್ಲ
ತನು ಮನ ಧನ ಸಬ ಲೋಭ ಛೋಡಕರ್
ಆಗಬೇಕು ಗುರುವಿನ ಚೇಲಾ ॥ ೨ ॥

ಹಮ್ ಬೀ ಕಹತೆ ತುಮ್‌ಬೀ ಕಹತೆ
ಮಾಡಬ್ಯಾಡರಿ ಮ್ಯಾಲಿನ ಶೀಲ
ಗುರು ಮಡಿವಾಳನ ಹೋಕರ್ ಬೋಲೆ
ತೊಳಿಯಬೇಕರಿ ಒಳಗಿನ ಮೈಲಾ ॥ ೩ ॥

ಕಡಕೋಳ ಮಡಿವಾಳಪ್ಪನ ಶಿಷ್ಯನೆಂದು ತನ್ನನ್ನು ತಾನು ಒಪ್ಪಿಸಿಕೊಂಡಿರುವ ಚನ್ನೂರ ಜಲಾಲಸಾಹೇಬನ ಈ ಪದ್ಯ ಅತ್ಯಂತ ಸರಳವೂ, ಆಪ್ಯಾಯಮಾನವೂ

ಆಗಿದೆ. ಇದು ಏನೇನೂ ಅಬ್ಬರವಿಲ್ಲದೆ ಕನ್ನಡಿಗರ ವಿವೇಕ ಮತ್ತು ಉನ್ನತ ದಾರ್ಶನಿಕತೆಯನ್ನು ಬಿಚ್ಚಿ ತೋರಿಸುತ್ತದೆ. "ಈಶ್ವರ ಅಲ್ಲಾ ತೇರೆ ನಾಮ 1 ಸಬಕೊ ಸನ್ಮತಿ ದೇ ಭಗವಾನ" ಎಂಬ ಹಾಡು ಅನುರಣಿತವಾಗುವ ಒಂದು ಶತಮಾನ ಪೂರ್ವದಲ್ಲಿಯೇ ಹೈದ್ರಾಬಾದ ಕರ್ನಾಟಕದ ಈ ಸೂಫಿ ಸಂತ ಈಶ್ವರ ಅಲ್ಲಾರ ನಡುವೆ ಭೇದ ಮಾಡುವ ಮತೀಯವಾದಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾನೆ. ಈಶ್ವರ, ಅಲ್ಲಾ ಈ ಮುಂತಾದ ಧಾರ್ಮಿಕ, ಭಾವುಕ ಪದಗುಚ್ಛಗಳು ಪರಸ್ಪರ ಮನಸ್ಸುಗಳನ್ನು ಏಕತ್ರಗೊಳಿಸುವ ಸಾಧನಗಳು. ಹಲವು ಪ್ರದೇಶಗಳಲ್ಲಿ ವಾಸಿಸುವ ಜನಸಮುದಾಯ ತನ್ನ ಆತ್ಮಾನ್ವೇಷಣೆಯ ಹಾದಿಯಲ್ಲಿ ಎದುರುಗೊಂಡ ಅಸಂಖ್ಯ ತಾತ್ವಿಕ ಧಾರೆಗಳು ಆತ್ಯಂತಿಕವಾಗಿ ಒಂದೇ ಸತ್ಯದತ್ತ ಚಲಿಸುವುದನ್ನು ಗ್ರಹಿಸಿದ ಸಂತರು ಅದನ್ನೇ ಸಿದ್ಧಾಂತವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದರು. ಜಲಾಲಸಾಹೇಬರಂತೂ ಹಿಂದೂ ಮೂಲಭೂತವಾದಿ ಮತ್ತು ಮುಸ್ಲಿಂ ಮೂಲಭೂತವಾದಿಗಳನ್ನು ಉಗ್ರವಾಗಿ ಖಂಡಿಸುವ ಕೈಂಕರ್ಯಕ್ಕಾಗಿಯೇ ತಮ್ಮ ಕಾವ್ಯ ಪ್ರತಿಭೆಯನ್ನು ದುಡಿಸಿಕೊಂಡಿದ್ದಾರೆ. ಇಂಥ ನೂರಾರು ಕವಿ ದಾರ್ಶನಿಕರು ಈ ನೆಲದ ಬದುಕಿನ ರಕ್ಷಕರಾಗಿ ನಿಂತು ಧಾರ್ಮಿಕದ್ವೇಷ ತಲೆಯೆತ್ತದಂತೆ ಜನತೆಯ ಮನಭಾವಗಳಲ್ಲಿ ಅಪ್ಪಟ ಮಾನವತೆಯ ಪ್ರೀತಿ ರಸಧಾರೆ ಹರಿಸುತ್ತ ಬಂದಿದ್ದಾರೆ. ಬಂಧುಗಳೇ, ಕೋಮುವಾದಿಗಳನ್ನು ಎದುರಿಸಲು ನಮ್ಮ ಈ ದೇಶಿ ಸಾಮರಸ್ಯದ ದರ್ಶನಧಾರೆಯನ್ನು ನಾವು ಪುನಶ್ಚೇತನಗೊಳಿಸಬೇಕಿದೆ. ಶರಣ, ಸಂತ, ಮಹಾಂತ, ಸೂಫಿ, ಅವಧೂತ, ಪರಂಪರೆಯ ತಾಯಿಬೇರಿಗಂಟಿಕೊಂಡು ಅಪರೂಪದ ಮಾನವೀಯತೆಯ ಮಹದರಿವಿನತ್ತ ಪಯಣಿಸಬೇಕಿದೆ.

ಹೀಗೆ ಉತ್ತಮ ನಾಗರೀಕ ಸೌಲಭ್ಯಗಳ ಪೂರೈಕೆ ಮೂಲಕ ಎಡ ಅಡವಂಚರಿಜಂವನ್ನು ದೇಶೀ ಸಾಮರಸ್ಯದ ನೆಲೆಗಳ ತಾಜಾಗೊಳಿಸುವ ಮೂಲಕ ಬಲಫ್ಯಾಸಿಜಂನ್ನು ನಿವಾರಿಸಿಕೊಂಡು ಒಟ್ಟಂದದಲ್ಲಿ ಸುಖೀ ಸಮಾಜ ನಿರ್ಮಾಣದತ್ತ ಅಡಿಯಿಡೋಣ. 'ಸರ್ವೇಜನ ಸುಖಿನೋ ಭವಂತು' ಎಂಬ ಸಂಕುಚಿತತೆಯನ್ನು ಮೀರಿ 'ಸಕಲ ಜೀವಾತ್ಮರಿಗೆ ಲೇಸು ಬಯಸುವ' ವಿಶಾಲ ವಿಶ್ವಾತ್ಮ ಪ್ರಜ್ಞೆಯತ್ತ ಗಮಿಸೋಣ. ಸರ್ವೇಜನ ಎಂಬುದು ಎಲ್ಲ ಜನತೆಯನ್ನು ಮಾತ್ರ ಭರಿಸಿಕೊಂಡೀತು. ಆದರೆ ಇಂದು ಕೇವಲ ಮನುಷ್ಯರು ಬದುಕಿದರೆ ಸಾಲದು. ಸಕಲ ಜೀವರಾಶಿ ಅರ್ಥಾತ್ ಸಚರಾಚರ ಅಖಂಡ ಪರಿಸರವು ಸಮತೋಲನವಾಗಿ ಉಳಿಯಬೇಕಿದೆ. ಮನುಷ್ಯರ ಬದುಕು ಸುಖಕರವೂ, ಅಬಾಧಿತವೂ ಆಗಬೇಕಾದರೆ ಪರಿಸರದೆಲ್ಲ ಜೀವಿಗಳು ಸಮತೋಲನವನ್ನು ಕಾಪಾಡಿಕೊಳ್ಳಬೇಕಿದೆ. ಆದ್ದರಿಂದ ಪ್ರಾಯೋಗಿಕವಾದ ತತ್ವಾದರ್ಶಗಳನ್ನು ಪಾಲಿಸಬೇಕಿದೆ. ಕೆಲವೊಂದೇ ಪ್ರಾಣಿಗಳನ್ನು, ಪಕ್ಷಿಗಳನ್ನು ದೇವರೆಂದು ಆರಾಧಿಸುತ್ತ ಇತರ ಪಶುಪಕ್ಷಿಗಳನ್ನು ನಗಣ್ಯ ಗೊಳಿಸುವದಿದೆಯಲ್ಲ ಇದು ಪರಿಸರದಲ್ಲಿ ಅಸಮತೋಲನವನ್ನು ಸೃಷ್ಟಿಸುತ್ತದೆ. ನಮ್ಮ ಎಲ್ಲ ತತ್ವಾದರ್ಶಗಳು

ಕೇವಲ ಭಾವನಾತ್ಮಕ ಘಟಕಗಳಿಂದ ಆವೃತ್ತವಾಗಿದ್ದರೆ ನಿಜದ ಬದುಕು ನಡೆಯಲಾರದು. ತಾತ್ವಿಕ, ತಾರ್ಕಿಕ ಮತ್ತು ವೈಜ್ಞಾನಿಕತೆಯನ್ನು ಮೈಗೂಡಿಸಿಕೊಂಡು ವಸ್ತುಸತ್ಯದ ಇರುವಿಕೆ ಮತ್ತು ಆಗುವಿಕೆಯ ಮೇಲೆ ಬದುಕು ನಡೆಯುತ್ತದೆ. ಆದ್ದರಿಂದ ಮರ್ತ್ಯಲೋಕವೆಂಬ ಈ ಕರ್ತಾರನ ಕಮ್ಮಟದಲ್ಲಿ ಇಂದ್ರಿಯಗಳ ಮೂಲಕ ಗ್ರಹೀತವಾಗುವ ಅನುಭವಗಳಿಗೆ ಒಡ್ಡಿಕೊಳ್ಳುತ್ತ ಸ್ವಯಂ ಅರಿವಿನ ಸಾಕ್ಷಾತ್ಕಾರದಲ್ಲಿ ವಿಶ್ವದ ಒಳಿತನ್ನೂ ಪೂರೈಸುತ್ತ ಬದುಕುವುದೇ ನಮ್ಮ ಧರ್ಮ ಅರ್ಥಾತ್ ಇದೇ ಕನ್ನಡದ ಧರ್ಮವೂ ಆಗಿದೆ.

ಮಹಿಳಾಪರ ಸಂವೇದನೆ :

ಕರ್ನಾಟಕದಲ್ಲಿ ಮಹಿಳೆಯರ ಸ್ಥಿತಿ-ಗತಿಯನ್ನು ಕುರಿತು ಯೋಚನಾಲಹರಿ ಹರಿಸುವುದಾದರೆ ನಾವೆಲ್ಲ ಪ್ರಜ್ಞಾವಂತರು ಚಿಂತಿತರಾಗುವುದು ಅನಿವಾರ್ಯವಾಗಿದೆ. ವಿಶ್ವವನ್ನು ಒಳಗೊಂಡಂತೆ ಭಾರತದಾದ್ಯಂತ ತನ್ಮೂಲಕ ಕರ್ನಾಟಕದಲ್ಲೂ ಮಹಿಳೆಯರನ್ನು ನೋಡುವ ಪುರುಷ ಪ್ರಧಾನ ದೃಷ್ಟಿಕೋನದಲ್ಲಿ ಅಲ್ಪಸ್ವಲ್ಪ ಬದಲಾವಣೆ ಬಿಟ್ಟರೆ ಸಮೂಲ ಪರಿವರ್ತನೆಯಾಗಿಲ್ಲ. ಆಧುನಿಕ ವಿದ್ಯಾಮಾನವು ಬದುಕಿನ ಇತರೆಲ್ಲ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದ ಬದಲಾವಣೆಗಳನ್ನು ತಂದಿರಬಹುದಾದರೂ ಸ್ತ್ರೀಯರ ಬಾಳಿನಲ್ಲಿ ಮಾತ್ರ ಶತಮಾನಗಳ ನೋವು ಶೋಷಣೆಗಳು ರೂಪ ಬದಲಿಸಿಕೊಂಡು, ಕಾಲಕ್ಕೆ ತಕ್ಕ ಹೊಸ ತಂತ್ರದೊಂದಿಗೆ ಜೀವಂತವಾಗಿವೆ.

ಮನೆಯ ಒಳಗೂ, ಹೊರಗೂ ಸಂಭವಿಸುವ ಸಾಮಾಜಿಕ ಅಪಮಾನ, ಲೈಂಗಿಕ ಕಿರಕುಳಗಳಂತೂ ಸರಿಯೇ ಸರಿ. ಹೊಸ ತಂತ್ರಜ್ಞಾನದ ಬೆಳವಣಿಗೆಯೂ ಅವರ ಬದುಕಿಗೆ ವರವಾಗುವ ಬದಲು ಕುತ್ತಾಗುತ್ತಿರುವುದು ಖೇದದ ಸಂಗತಿ. ಗರ್ಭಲಿಂಗ ಪತ್ತೆಯಂಥ ಆವಿಷ್ಕಾರಗಳಿಂದಾಗಿ ಕರ್ನಾಟಕದಲ್ಲಿ ಇತ್ತೀಚೆಗೆ ಹೆಣ್ಣು ಭ್ರೂಣ ಹತ್ಯೆಯ ಪ್ರಕರಣಗಳು ಹೆಚ್ಚಾಗುತ್ತಿವೆ. ೨೦೦೧ನೇ ಸಾಲಿನ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ೧೦೦೦ ಪುರುಷರಿಗೆ ೯೬೪ ಮಹಿಳೆಯರು ಇದ್ದಾರೆ. ವಿಶ್ವದೆಲ್ಲೆಡೆ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಭಾರತದಲ್ಲಿ ೧೦೦೦ ಪುರುಷರಿಗೆ ೯೩೩ ಮಹಿಳೆಯರು ಮಾತ್ರ ಇದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪ್ರತಿ ಒಂದು ಸಾವಿರ ಪುರುಷರಿಗೆ ೩೬ ಮಹಿಳೆಯರು ಕಡಿಮೆಯಾಗುತ್ತಿದ್ದಾರೆ. ರಾಜ್ಯದ ಒಟ್ಟು ಪುರುಷರ ಸಂಖ್ಯೆ ೨೬೮.೫೬ ಲಕ್ಷ. ಇಷ್ಟು ಪುರುಷರಿಗೆ ಸರಾಸರಿ ತೆಗೆದರೆ ಕಡಿಮೆ ಬೀಳುವ ಮಹಿಳೆಯ ಸಂಖ್ಯೆ ೯.೭೮ ಲಕ್ಷ. ಲಿಂಗ ತಾರತಮ್ಯದಿಂದಾಗಿಯೇ ಇಡೀ ಕರ್ನಾಟಕದಲ್ಲಿ ಈ ನಡುವೆ ಕಳೆದುಹೋದ ಮಹಿಳೆಯರ ಸಂಖ್ಯೆ ೧೦.೮೪ ಲಕ್ಷ ಎಂದು ಅಂದಾಜಿಸಲಾಗಿದೆ. ಗರ್ಭದಲ್ಲಿರುವಾಗಲೇ ಮಗುವಿನ ಲಿಂಗವನ್ನು ಪತ್ತೆ ಮಾಡಿ ಅದು ಹೆಣ್ಣು ಅಂತ ಖಚಿತವಾದರೆ ಹೊಟ್ಟೆಯಲ್ಲಿರುವಾಗಲೇ ಹೊಸಕಿ

ಹಾಕಲಾಗುತ್ತಿದೆ. ಈ ಪ್ರವೃತ್ತಿ ಸುಶಿಕ್ಷಿತ, ಮಧ್ಯಮ, ಮೇಲ್ಮಧ್ಯಮ ಮತ್ತು ಅಭಿವೃದ್ಧಿ ಹೊಂದಿದ ನಗರವಾಸಿಗಳ ಮಧ್ಯದಲ್ಲಿಯೇ ಹೆಚ್ಚಾಗಿ ಕಂಡು ಬರುತ್ತಿರುವುದು ನಾಚಿಕೆ ಬರಿಸುವ ಸಂಗತಿ. ಹೊಟ್ಟೆ ತುಂಬಿದ ವಿದ್ಯಾವಂತರ ಕೈಗೆ ಜಗವ ಹೆರುವ ಜನನಿಯರನ್ನು ಕೊಂದ ರಕ್ತ ಅಂಟಿಕೊಂಡಿದೆ. ಪುತ್ರ ಫಲಾಪೇಕ್ಷೆ ನಮ್ಮ ಸಮಾಜವನ್ನು ಎಂಥ ದಯನೀಯ ಸ್ಥಿತಿಗೆ ತಂದು ನಿಲ್ಲಿಸಿದೆ ಎಂದರೆ "ಮಗಳು" ಇಲ್ಲದ ಭಾರತ ನಿರ್ಮಾಣವಾದೀತೆ? ಎಂಬ ಗಾಬರಿ ಹುಟ್ಟಿಸುತ್ತಿದೆ. ಎರಡು ಅಥವಾ ಒಂದು ಮಕ್ಕಳ ಕಡ್ಡಾಯ ಕಾನೂನು ಕೂಡಾ ಸ್ತ್ರೀಯರ ಬದುಕಿಗೆ ಉರುಳಾಗುತ್ತದೆ ಎಂಬುದನ್ನು ಗಮನಿಸಬೇಕು. ಆಯ್ಕೆಯ ಪ್ರಶ್ನೆ ಬಂದಾಗ ನಮ್ಮ ಪ್ರಜೆಗಳಿಗೆ ಹುಟ್ಟುವ ಎರಡೂ ಮಕ್ಕಳು ಗಂಡೇ ಇರಬೇಕು. ಕೊನೆಯ ಪಕ್ಷ ಒಂದಾದರೂ ಗಂಡು ಮಗು ಬೇಕೇ ಬೇಕು. ಹೀಗಾಗಿ ಗಂಡು ಹುಟ್ಟುವವರೆಗೂ ಗರ್ಭದಲ್ಲಿ ಮೂಡುವ ಹೆಣ್ಣು ಭ್ರೂಣಗಳನ್ನು ಹೊಸಕಿ ಹಾಕುತ್ತಲೆ ಹೋಗುತ್ತಾರೆ. ಹೀಗೆ ಹೊಸಕಿ ಹಾಕಿದುದರ ಪರಿಣಾಮವೇ ಮಹಿಳೆಯರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಇಳಿಕೆ ಕಂಡುಬರುತ್ತಿದೆ. ಆದ್ದರಿಂದ ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಜಾರಿಗೊಳಿಸುವಾಗ ಸಮಗ್ರ ಆಲೋಚನೆ, ದೂರದೃಷ್ಟಿ, ವೈಜ್ಞಾನಿಕಸಾಧ್ಯತೆ, ಜನರ ಮನೋಭಾವ ಇವುಗಳನ್ನು ಪರಿಗಣಿಸಿ ಕಾನೂನು ರೂಪಿಸಬೇಕು. ಜನಸಂಖ್ಯಾನಿಯಂತ್ರಣ ಎಷ್ಟು ಮುಖ್ಯವೋ ಲಿಂಗಾನುಪಾತದಲ್ಲಿ ಸಮತೋಲನವು ಅಷ್ಟೇ ಮುಖ್ಯ. ಕರ್ನಾಟಕದಲ್ಲಿ ಈಗಾಗಲೇ ಪಿ.ಸಿ. ಆ್ಯಂಡ್ ಪಿ.ಎನ್.ಡಿ.ಟಿ. ಆ್ಯಕ್ಟ್ ಅಂದರೆ ಲಿಂಗಪತ್ತೆ ನಿಷೇಧ ಕಾನೂನು ಇದೆ. ಆದರೆ ಅದು ಕಟ್ಟುನಿಟ್ಟಾಗಿ ಎಲ್ಲಿಯೂ ಜಾರಿಯಾಗುತ್ತಿಲ್ಲ. ಸಂಬಂಧಪಟ್ಟ ಇಲಾಖೆ ತನ್ನ ಭಾವಕೋಶಕ್ಕೆ ಅಂಟಿಸಿಕೊಂಡು ಈ ಕೆಲಸವನ್ನು ತುಂಬಾ ಮುತುವರ್ಜಿ ವಹಿಸಿ ಮಾಡಬೇಕಿದೆ. ಅದೇ ಹೊತ್ತಿಗೆ ಪುರುಷ ಪ್ರಧಾನ ನಂಬಿಕೆಗಳ ಕೋಟೆ ಒಡೆದು ಸ್ತ್ರೀಯರನ್ನು ನೋಡುವ ಒಟ್ಟು ದೃಷ್ಟಿಕೋನದಲ್ಲಿ ಸಮಗ್ರ ಬದಲಾವಣೆ ತರಬೇಕಿದೆ.

ಪಂಚಾಯತ್ ರಾಜ್ಯ ವ್ಯವಸ್ಥೆಯಡಿ ಸ್ಥಳೀಯ ವಲಯದಲ್ಲಿ ಶೇಕಡಾ ೩೩ ಮಹಿಳಾ ಮೀಸಲಾತಿ ಅನ್ವಯವಾಗಿದ್ದರೂ ಅದು ಸಂಖ್ಯಾಭರ್ತಿ ಮಾತ್ರವಾಗಿ ಚಾಲ್ತಿಯಲ್ಲಿದೆ. ನಿಜವಾದ ಅರ್ಥದಲ್ಲಿ ಮಹಿಳೆಯರು ತಾವೇ ಹಕ್ಕು ಚಲಾಯಿಸುವ ಹಂತದಲ್ಲಿ ಇಲ್ಲ. ಏಕೆಂದರೆ ಒಟ್ಟು ಸಾಕ್ಷರ ಪ್ರಮಾಣದಲ್ಲಿ ಮಹಿಳಾ ಸಾಕ್ಷರ ಪ್ರಮಾಣ ಪುರುಷರ ಅರ್ಧದಷ್ಟೂ ಇಲ್ಲ. ಇನ್ನು ಜಾಗತೀಕರಣ, ಖಾಸಗೀಕರಣಗಳ ಹಾವಳಿಯಲ್ಲಿ ಏರುತ್ತಿರುವ ಶಾಲಾಶುಲ್ಕ, ಇತರ ಖರ್ಚು, ವರದಕ್ಷಿಣೆ, ಪಿಡುಗು ಇವುಗಳಿಂದಾಗಿ ಮಹಿಳೆಯರು ಮತ್ತೆ ಶಿಕ್ಷಣದಿಂದ ವಂಚಿತರಾಗಿಯೇ ಉಳಿಯತ್ತಿದ್ದಾರೆ. ಇತ್ತೀಚೆಗೆ ಸರಕಾರ "ಬಾ ಬಾಲೆ ಶಾಲೆಗೆ" ಎಂಬ ಯೋಜನೆಯನ್ನು ಪ್ರಾಥಮಿಕ ಹಂತದಲ್ಲಿ ಜಾರಿಗೆ ತಂದಿದೆ. ಇದರಡಿಯಲ್ಲಿ ಬಾಲಕಿಯರು ಮತ್ತೆ ಶಾಲೆಗಳ ಕಡೆಗೆ

ಮುಖಮಾಡುವಂತೆ ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳೇನೋ ಸರಕಾರಿ ಕಡತದಲ್ಲಿವೆ. ಆದರೆ ನಿಜವಾಗಿ ಅವು ಪರಿಣಾಮಕಾರಿಯಾಗಿ ತಲುಪುತ್ತಿಲ್ಲ. "ಬಾ ಬಾಲೆ ಶಾಲೆಗೆ" ಎಂಬಂಥ ಯೋಜನೆಗಳು ಯಥಾರೀತಿ ಕಾರ್ಯಕ್ರಮ ದಂತಾಗದೆ ಚಳುವಳಿ ರೂಪದಲ್ಲಿ ಮೇಲೆದ್ದು ಬರಬೇಕು. ಶಿಕ್ಷಣದಲ್ಲಿ ಮಹಿಳೆಯರಿಗಾಗಿ ವಿಶೇಷ ಸೌಲಭ್ಯಗಳನ್ನು ಮೀಸಲಿಡಬೇಕು.

ಮಹಿಳೆಯರಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯ ಬೇಕೆಂಬ ಬಹುದಿನದ ಕೂಗನ್ನು ಅನುಲಕ್ಷಿಸಿ ಸರಕಾರ ಬಿಜಾಪೂರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನೇನೋ ಪ್ರಾರಂಭಿಸಿದೆ. ಆದರೆ ಅಲ್ಲಿ ಮಹಿಳಾಪರ ಚಿಂತನೆ, ಮಹಿಳಾ ಅಸ್ಮಿತತೆ ಮೆರೆಯುವ ಹೊಸ ಪದವಿ, ಮಹಿಳೆಯರಲ್ಲಿ ನಾಯಕತ್ವ ಬೆಳೆಸುವ ಚಟುವಟಿಕೆ ಹೀಗೆ ಯಾವುದೇ ಹೊಸತನವಿಲ್ಲ. ಅದೇ ಪರಂಪರಾಗತ ಸ್ನಾತಕ, ಸ್ನಾತಕೋತ್ತರ ಹಳಸಲು ಪದವಿಗಳನ್ನೇ ಕಲಿಸುವುದಾದರೆ ಅದೊಂದು ಮಹಿಳಾ ವಿರೋಧಿ ಚಿಂತನೆಯೇ ಆದೀತು. ಸ್ತ್ರೀ-ಪುರುಷರ ಮಧ್ಯೆ ಭೇದ ಅಳಿಸಬೇಕಾದರೆ ಅವರಿಬ್ಬರನ್ನು ಹೆಚ್ಚು ಸಮೀಪ, ಅಂದರೆ ಪರಸ್ಪರ ಸ್ನೇಹ, ವಿಶ್ವಾಸಗಳಿಂದ ಕೂಡಿ ಕಲೆತು ಬೆಳೆಯಲು ಸಾಧ್ಯವಾಗಬೇಕು. ವೈಜ್ಞಾನಿಕವಾಗಿಯೂ ಸಹಅಧ್ಯಯನ(Co-education)ವೇ ಅವರನ್ನು ಹೆಚ್ಚು ಪ್ರಬುದ್ಧಗೊಳಿಸುತ್ತದೆ. ಪದವಿ ಮಟ್ಟದಲ್ಲಿಯೂ ಪ್ರತ್ಯೇಕ ಮಹಿಳಾ ಕಾಲೇಜುಗಳು ಅನಾವಶ್ಯಕ. ಅಂಥದರಲ್ಲಿ ಸ್ನಾತಕ ಹಂತದಲ್ಲೂ ರೂಢಿಗತ ಪದವಿಗಳನ್ನೆ ಪ್ರತ್ಯೇಕವಾಗಿ ಕಲಿಸುವುದೆಂದರೆ ಅದು ಒಂದು ರೀತಿಯ ಪ್ರಮಿಳೆಯರ ರಾಜ್ಯ ಅಥವಾ "ಜನಾನಾ" ಆದೀತು. ರಾಜ್ಯದಾದ್ಯಂತ ಸದ್ಯ ಇರುವ ವಿಶ್ವವಿದ್ಯಾಲಯಗಳಲ್ಲಿ ಆಯಾ ಭಾಗದ ಸ್ತ್ರೀ ಪುರುಷ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಮಾಡಲು ಅವಕಾಶ ಇರುವಾಗ ದೂರದೂರಿನ ಮಹಿಳೆಯರು ಅದ್ಯಾವ ವಿಶೇಷ ಅಧ್ಯಯನಕ್ಕಾಗಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಬರಬೇಕು? ಸದರಿ ವಿಶ್ವವಿದ್ಯಾಲಯ ಮಹಿಳೆಯರ ಶೈಕ್ಷಣಿಕ ಸಾಧನೆಗೆ ಪೂರಕವಾಗುವ ಬದಲು ಕಾಲ್ತೊಡಕ್ಕಾಗುತ್ತಿರುವುದು ವಿಷಾದನೀಯ. ಅದರಲ್ಲೂ ಹೈದ್ರಾಬಾದ್ ಕರ್ನಾಟಕ ಭಾಗದ ಮಹಿಳೆಯರಿಗೆ ಇದು ಹತ್ತಾರು ತಾಂತ್ರಿಕ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಈ ಭಾಗದ ವಿದ್ಯಾರ್ಥಿನಿಯರಿಗೆ ಸ್ಥಳೀಯ ವಿಶ್ವವಿದ್ಯಾಲಯಗಳಲ್ಲಿ ಅವಕಾಶ ವಿರುವಾಗಲೂ ಮಹಿಳೆಯರು ಎಂಬ ಕಾರಣಕ್ಕಾಗಿಯೇ ಬಿಜಾಪೂರಕ್ಕೆ ಹೋಗುವ ಒತ್ತಾಯ. ಪಠ್ಯಕ್ರಮ, ಪರೀಕ್ಷಾ ಗೊಂದಲ ಹೀಗೆ ಇವೆಲ್ಲ ಅನಾವಶ್ಯಕ ರೇಜಿಗೆ ಹುಟ್ಟಿಸುತ್ತಿವೆ. ಸರಕಾರ ಪ್ರತ್ಯೇಕ ಮಹಿಳಾ ವಿಶ್ವವಿದ್ಯಾಲಯವನ್ನು ಖಂಡಿತ ನಡೆಸತಕ್ಕದ್ದು. ಆದರೆ ಅಲ್ಲಿ ಪರಂಪರಾಗತ ಅಧ್ಯಯನ ಪದ್ಧತಿ ಹೊರತಾಗಿ ಲಿಂಗಸಂವೇದಿ ಅಧ್ಯಯನ ಶಿಸ್ತು ಅಭಿವೃದ್ಧಿಯಾಗಬೇಕು. ಮಹಿಳೆಯರ ಅಸ್ಮಿತತೆ ಜಾಗೃತಗೊಳಿಸುವ ಹೊಸ ಪದವಿಗಳು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಹಿಳೆಯರು ತೊಡಗಿಸಿಕೊಳ್ಳಬೇಕಾದ ಚಾಕಚಕ್ಯತೆ, ಜಾಗತಿಕ ಸ್ತ್ರೀವಾದದ ಹಿನ್ನೆಲೆಯಲ್ಲಿ ದೇಶೀಯ ಸ್ತ್ರೀವಾದದ ರೂಪಣೆ, ನೀತಿ ನಿರೂಪಣಾ ಸ್ಥಾನಗಳಲ್ಲಿ ತೊಡಗಿಸಿಕೊಳ್ಳುವಂತೆ

ಸ್ತ್ರೀಯರನ್ನು ಸಿದ್ಧಪಡಿಸುವುದು ಈ ಮುಂತಾದ ಪರಿವರ್ತನೆಗಳನ್ನು ತರುವುದರ ಮೂಲಕ ಮಾದರಿ ಮಹಿಳಾ ವಿಶ್ವವಿದ್ಯಾಲಯವನ್ನು ರೂಪಿಸಬೇಕು.

ಇತ್ತೀಚೆಗೆ ಕೇಂದ್ರ ಮಾನವ ಸಂಪನ್ಮೂಲಖಾತೆಯು ದೇಶದಲ್ಲಿ ಚಾಲ್ತಿಯಲ್ಲಿರುವ "ಮಹಿಳಾ ಅಧ್ಯಯನ ಕೇಂದ್ರ"ಗಳ ಆಶಯವನ್ನೇ ಬುಡಮೇಲು ಗೊಳಿಸುವ ತರಾತುರಿಯಲ್ಲಿತ್ತು. ಅದೇನೆಂದರೆ "ಮಹಿಳಾ ಅಧ್ಯಯನ"ವೆಂಬ ಹೆಸರು ಬದಲಿಸಿ "ಮಹಿಳೆ ಮತ್ತು ಕುಟುಂಬ ಕಲ್ಯಾಣ ಅಧ್ಯಯನ"ವೆಂದು ಅಂಕಿತಗೊಳಿಸಲು ಉದ್ದೇಶಿಸಿತ್ತು. ಹೆಸರಿನ ಮುಖಾಂತರ ಮಹಿಳೆಯರನ್ನು ಮತ್ತದೇ ಮಕ್ಕಳನ್ನು ಹೆರುವ, ಪೋಷಿಸುವ, ಅಡುಗೆಮನೆ, ಬಾಣಂತಿ ಕೋಣೆಗೆ ಮೀಸಲಿಡುವ ಹುನ್ನಾರು ಒಳ್ಳೆಯದಲ್ಲ. ಇದು ಪರಂಪರಾಗತ ಪುರುಷಪ್ರಧಾನ ಸಂಕುಚಿತ ದೃಷ್ಟಿಕೋನದ ಕೂಸು. ಆದ್ದರಿಂದ ಇಂಥ ಆದೇಶಗಳು ಜಾರಿಗೊಳ್ಳದಂತೆ ನೋಡಿಕೊಳ್ಳಬೇಕಾದದ್ದು ಪ್ರಜ್ಞಾವಂತರ ಜವಾಬ್ದಾರಿಯಾಗಿದೆ.

ಗ್ರಾಮೀಣ ಪ್ರದೇಶದ ಮಹಿಳೆಯರ ಸ್ಥಿತಿಗತಿಯಂತೂ ಹೇಳತೀರದಷ್ಟು ಶೋಚನೀಯವಾಗಿದೆ. ಅದರಲ್ಲಿಯೂ ದಲಿತ, ಅಲ್ಪಸಂಖ್ಯಾತ ಮಹಿಳೆಯರ ನೋವು ಸಂಕಟಗಳು ಗಾಬರಿ ಹುಟ್ಟಿಸುವಷ್ಟು ಭೀಕರವಾಗಿವೆ. ಅವರು ಮೊದಲು ಮಹಿಳೆಯರಾಗಿ, ಅದರಲ್ಲೂ ದಲಿತ ಮಹಿಳೆಯರಾಗಿ ಮೇಲ್ವರ್ಗದವರಿಂದ ಮತ್ತು ತಮ್ಮದೇ ವರ್ಗದ ಪುರುಷರಿಂದ ಹೀಗೆ ಇಬ್ಬದಿಯ ಶೋಷಣೆಗೆ ತುತ್ತಾಗುತ್ತಿದ್ದಾರೆ. ಹಳ್ಳಿಗಳಲ್ಲಿ ಮಹಿಳೆಯರಿಗಾಗಿ ಕನಿಷ್ಠ ಶೌಚಾಲಯಗಳಿಲ್ಲ. ಹೆರಿಗೆ ಆಸ್ಪತ್ರೆಗಳಂತೂ ಗಗನ ಕುಸುಮವೇ ಸರಿ. ವರದಕ್ಷಿಣೆ ಸಾವು, ನೋವುಗಳು ದಿನಾಲೂ ವರದಿಯಾಗುತ್ತಿವೆ. ಕುಡಿತದ ವ್ಯಾಪಕತೆಯಿಂದಾಗಿ ಪ್ರತಿಶತ ೪೦ ರಷ್ಟು ಮಹಿಳೆಯರೇ ನಿರ್ವಹಿಸುವ ಕುಟುಂಬಗಳು, ಇನ್ನೊಂದೆಡೆ ಹೆಚ್ಚಾಗುತ್ತಿರುವ ವರೌಢ್ಯ, ಕುಸಿಯುತ್ತಿರುವ ಮಾರುಕಟ್ಟೆ ಇವುಗಳಿಂದಾಗಿ ಹೆಚ್ಚುತ್ತಿರುವ ವೇಶ್ಯಾವಾಟಿಕೆ, ದೇವದಾಸಿ ಪದ್ಧತಿ, ಬಾಲ್ಯವಿವಾಹ ಮುಂತಾದ ಸಮಸ್ಯೆಗಳು ಜೀವಂತವಾಗಿವೆ. ರೈತಾಪಿ ಕೃಷಿ ಕೂಲಿ ಕೆಲಸಗಳು ಕಳೆದು ಹೋಗಿರುವುದರಿಂದ ದೊಡ್ಡ ಮಟ್ಟದಲ್ಲಿ ದುಡಿಯುವ ಮಹಿಳೆಯರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿಯೂ ವ್ಯಾಪಕ ಯಾಂತ್ರೀಕರಣದಿಂದ ಕೆಲಸವಿಲ್ಲದಕ್ಕಾಗಿ ದೇಹವ್ಯಾಪಾರಕ್ಕೆ ಅನಿವಾರ್ಯವಾಗಿ ಇಳಿಯುತ್ತಿದ್ದಾರೆ. ತತ್ಪರಿಣಾಮವಾಗಿ ಅಂಟಿಕೊಳ್ಳುತ್ತಿದೆ ಏಡ್ಸ್. ಹೀಗೆ ಇದೊಂದು ತಿರುಗುಣಿ ಮಡುವು. ಸಮಸ್ಯೆಯ ಸುಳಿಯಾಗಿದೆ. ಇಂಥ ಸುಳಿಗಳ ಮಧ್ಯೆ ಸಿಲುಕಿ ನಲುಗುತ್ತಿರುವ ಸ್ತ್ರೀಯರಿಗೆ ಭಾರತ ಪ್ರಕಾಶಿಸುತ್ತಿರುವಂತೆ ಕಾಣಲು ಸಾಧ್ಯವೆ?

ಈ ನಡುವೆ ರಾಜ್ಯದಾದ್ಯಂತ ಸ್ತ್ರೀಶಕ್ತಿ ಸಂಘ, ಸ್ವಸಹಾಯ ಗುಂಪುಗಳು ಹುಟ್ಟಿಕೊಂಡಿವೆ. ಇವುಗಳಿಂದಾಗಿ ಬಡ, ಹಿಂದುಳಿದ ಮತ್ತು ಮಧ್ಯಮ ವರ್ಗದ ಮಹಿಳೆಯರಲ್ಲಿ ಒಂದು ಚಲನೆಯಂತೂ ಸುರುವಾಗಿದೆ. ಅಡುಗೆಮನೆ, ಹೊಲಗದ್ದೆಗಳ

ಕೆಲಸಕ್ಕೆ ಸೀಮಿತರಾಗಿದ್ದ ಮಹಿಳೆಯರು ತಮ್ಮ ಪರಿಮಿತ ಕ್ಷೇತ್ರದಿಂದ ಹೊರಬಂದು ಸಭೆ ನಡೆಸುವುದು, ಹಣ ಉಳಿಸುವುದು, ಬ್ಯಾಂಕಿಗೆ ಹೋಗುವುದು ಇತ್ಯಾದಿ ಸಣ್ಣಪುಟ್ಟ ಬದಲಾವಣೆಗೆ ಒಡ್ಡಿಕೊಳ್ಳುತ್ತಿದ್ದಾರೆ. ಬೇರೆ ಪುರುಷರೊಂದಿಗೆ ಒಂದಷ್ಟು ವ್ಯಾವಹಾರಿಕವಾಗಿ ಮಾತಾಡುವುದನ್ನು ಕಲಿಯುತ್ತಿದ್ದಾರೆ. ಆದರೆ ಇವರುಗಳನ್ನು ಹಣಕಾಸಿನ ವಿಷಯಗಳಿಗಾಗಿ ಸಂಘಟಿಸಿದರೆ ಸಾಲದು. ಒಟ್ಟೊಟ್ಟಿಗೆ ಅವರಲ್ಲಿ ಸ್ತ್ರೀಪರ ಚಿಂತನೆಗಳನ್ನು ಬೆಳೆಸಬೇಕು. ಅವರ ತಿಳುವಳಿಕೆ ಮಟ್ಟ ಎತ್ತರಿಸಬೇಕು. ಅವರಲ್ಲಿ ಸ್ವಯಂ ಅರಿವು ಜಾಗೃತವಾಗುವಂಥ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಬಲಗೊಳಿಸಬೇಕು. ತಮ್ಮ ಸ್ಥಿತಿ-ಗತಿ, ತಮ್ಮ ಮೇಲಾಗುತ್ತಿರುವ ಶೋಷಣೆಯ ಸ್ವರೂಪ, ಅದರ ಕಾರಣ, ಪರಿಹಾರೋಪಾಯಗಳ ಕುರಿತು ಅವರು ಸ್ವಯಂ ಚಿಂತಿಸುವಂಥ ವಾತಾವರಣ ಮೂಡಿಸಬೇಕು. ಇಲ್ಲವಾದರೆ ಕೇವಲ ಹಣಕಾಸಿನ ವ್ಯವಹಾರ ಅವರ ಸ್ಥಿತಿಯನ್ನು ಉತ್ತಮಗೊಳಿಸಲಾರದು. ಆರ್ಥಿಕ ಸಬಲತೆಯೊಂದಿಗೆ ಸಾಮಾಜಿಕ ಎಚ್ಚರ, ಆತ್ಮಪ್ರತ್ಯಯ ಮೂಡುವಂತಾಗಬೇಕು. ಮಹಿಳೆಯರ ಸ್ಥಿತಿಯನ್ನು ಎತ್ತರಿಸಲು ನಿಜವಾದ ಕಳಕಳಿ ಮತ್ತು ಅಪ್ಪಟ ತಾಯಿ ಹೃದಯ ಇರಬೇಕು. ಸ್ತ್ರೀಪರ ಕಾನೂನುಗಳಿಗೆ ಬಲ ಬರುವಂತಾಗಬೇಕು. ಅವರು ಬದುಕಿನ ಪ್ರಧಾನ ಧಾರೆಗೆ ಬರಲು ಎಲ್ಲ ರೀತಿಯ ರಕ್ಷಣೆ ಮತ್ತು ವಿಶೇಷ ಅವಕಾಶ ಕೊಡಬೇಕು. ಈ ನಿಟ್ಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಏನೇನೂ ಕುಂಟು ನೆಪಗಳಿಲ್ಲದೆ ಜಾರಿಯಾಗಬೇಕು. ನೀತಿ ನಿರೂಪಣಾ ಸ್ಥಾನಗಳಲ್ಲಿ ಮಹಿಳೆಯರು ತಮ್ಮ ಸಂಖ್ಯೆಗನುಗುಣವಾಗಿ ಇದ್ದರೆ ಮಾತ್ರ ಸ್ತ್ರೀ ಸಮಾನತೆ ಸಾಧ್ಯ. ಇಲ್ಲವಾದರೆ ಸ್ತ್ರೀ ಸಬಲೀಕರಣ ಎಂಬುದು ತುಟಿ ಅನುಕಂಪವಾಗಿಯೇ ಉಳಿಯುತ್ತದೆ. ಮಹಿಳಾ ಸಾಹಿತಿಗಳು, ವಿಚಾರವಾದಿಗಳು, ಸ್ತ್ರೀಪರ ಚಿಂತಕರು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನಾಭಿಪ್ರಾಯಗಳನ್ನು ರೂಪಿಸಬೇಕು. ಸಾಹಿತ್ಯವನ್ನು ಅಸ್ತ್ರವಾಗಿಟ್ಟುಕೊಂಡು ಸೃಜನ, ಸೃಜನೇತರ ಪ್ರಕಾರಗಳನ್ನು ದುಡಿಸಿಕೊಳ್ಳುವ ಮೂಲಕ ಸಾಂಸ್ಕೃತಿಕ ಚಳುವಳಿಗೆ ಮುಂದಾಗಬೇಕು. ಪ್ರತಿಭೆಗೆ ಮಹಿಳಾ ಸಾಹಿತ್ಯವೆಂಬ ರಿಯಾಯಿತಿ ಬೇಕಾಗಿಲ್ಲ. ಹಾಗೇ ನೋಡಿದರೆ ಮಹಿಳೆಯರು ರಚಿಸಿದ ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯಕ ರಾಜಕೀಯವೇ ಘಟಿಸಿದೆ. ಈ ಕುತಂತ್ರಗಳನ್ನು ಭೇದಿಸುವ ದಿಶೆಯಲ್ಲಿ ಹೊಸ ತಲೆಮಾರಿನ ಲೇಖಕಿಯರು ಮೈಕೊಡವಿ ನಿಲ್ಲುತ್ತಿದ್ದಾರೆ ಎಂಬುದೇ ಸಮಾಧಾನದ ಸಂಗತಿ. ಕನ್ನಡದಲ್ಲಿ ಮೊದಲ ಬಾರಿಗೆ ಮಹಿಳಾ ಸಾಹಿತಿಯಾದ ಗೀತಾ ನಾಗಭೂಷಣ ಅವರಿಗೆ ಕೇಂದ್ರ ಸಾಹಿತ್ಯ ಅಕೆಡೆಮಿ ಪ್ರಶಸ್ತಿ ಬಂದಿರುವುದು ಮತ್ತು ಅದೇ ಮಹಿಳೆಯೇ ಮೊದಲ ಬಾರಿಗೆ ಸಾಹಿತ್ಯ ಅಕೆಡೆಮಿಗೆ ಅಧ್ಯಕ್ಷರಾಗಿರುವುದು ಎರಡೂ ಹೆಮ್ಮೆಯ ಸಂಗತಿ. ಅದರಲ್ಲೂ ಈ ಎರಡೂ ಪಟ್ಟ ನಮ್ಮ ಹಿಂದುಳಿದ ಭಾಗದ, ಶೂದ್ರ ಸಮುದಾಯದ ಧೀಮಂತ ಏಕಾಂಗಿ ಸಾಹಸಿ ಗೀತಾ ಅವರಿಗೆ ದೊರತದ್ದು

'ಸಸಿಯ ಮೇಲೆ ಸಾಗರ ಹರಿದಂತೆ' ನನಗಂತೂ ಹೃದಯ ತುಂಬಿ ಬರುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶ, ಶೂದ್ರ, ದಲಿತ ಎಂದೆಲ್ಲಾ ವಿಭಾಗೀಕರಣವೇ ತಪ್ಪು ಎಂದು ವಾದಿಸುವವರಿಗೆ ಈ ದೇಶದ ಚಾರಿತ್ರಿಕ ರಾಜಕಾರಣವನ್ನು ಪರಾಂಬರಿಸುವ ವ್ಯವಧಾನವಿಲ್ಲವೆಂದೇ ಅರ್ಥ. "ಪ್ರತಿಭೆ" ಎನ್ನುವುದು ತನ್ನಷ್ಟಕ್ಕೆ ಸ್ವಯಂಭು, ಸ್ವಾಯತ್ತ ಘಟಕವಲ್ಲ. ಅದು ಕೂಡಾ ಹಲವು ವಸ್ತುಸತ್ಯ ಮತ್ತು ಚಾರಿತ್ರಿಕ ಬಿಕ್ಕಟ್ಟುಗಳೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಶತಮಾನಗಳ ನೋವಿಗೆ ಧ್ವನಿ ಕೊಡುವುದು ಅಸಾಧ್ಯವಾಗಿದ್ದ ಸ್ಥಿತಿಯಲ್ಲಿ ನರಳಾಡಿದವರ ತಲ್ಲಣ, ಧಾವಂತ ಎಂಥದು ಎಂಬುದು ಅರಿವಾಗಲು ಬೌದ್ಧಿಕ ಚಾಣಾಕ್ಷತನವಲ್ಲ ತುಡಿಯುವ ಮನಸ್ಸು ಬೇಕು. ಆದ್ದರಿಂದ ನನ್ನಂಥವನಿಗೆ ಈ ರೀತಿಯ ಸಣ್ಣಪುಟ್ಟ ಸಾಧನೆಗಳು ಕೂಡಾ ಅಸದಳ ಖುಷಿ, ಸಂಭ್ರಮ ತಂದು ಕೊಡುತ್ತವೆ.

ದಲಿತಪರ ಸಂವೇದನೆ :

ಈ ನಡುವೆ ದೈನಿಕ ಪತ್ರಿಕೆಗಳಲ್ಲಿ ದಲಿತರ ಮೇಲಾಗುತ್ತಿರುವ ದೌರ್ಜನ್ಯ ಕುರಿತು ಪ್ರಕಟವಾಗುತ್ತಿರುವ ವರದಿಗಳು, ಪರಸ್ಪರ ಸವರ್ಣೀಯ, ಸವರ್ಣೀಯೇತರ ಮಧ್ಯೆ ಜರುಗುವ ಘರ್ಷಣೆಗಳು, ರಾಜಕೀಯ ಕುತಂತ್ರಗಳು ಕಸವಿಸಿಯನ್ನುಂಟು ಮಾಡುತ್ತವೆ. ಈ ನಾಡಿನಲ್ಲಿ ತಲೆ ಮರೆಸಿಕೊಂಡಾದರೂ ಇನ್ನೂ ಅಸ್ಪೃಶ್ಯತೆ ಆಚರಣೆಯಲ್ಲಿದೆ ಎಂಬುದು ನೋವನ್ನುಂಟು ಮಾಡುತ್ತದೆ. ಸನಾತನ ವೈದಿಕಶಾಹಿ ನಿರ್ಮಿಸಿದ ಈ ಅಸ್ಪೃಶ್ಯತೆಯು ಭಾರತೀಯ ಸಮಾಜಕ್ಕಂಟಿದ ಮಹಾರೋಗ. ಇದರ ಉಚ್ಚಾಟನೆಗಾಗಿ ಕಾನೂನು ನಿರ್ಮಿಸಿ ಅರ್ಧ ಶತಮಾನ ಸಂದರೂ ಮನಸ್ಸುಗಳ ಆಳದಲ್ಲಿರುವ ದಲಿತ ವಿರೋಧಿ ಹುನ್ನಾರುಗಳನ್ನು ಸಮೂಲವಾಗಿ ಕಿತ್ತೆಸೆಯಲು ಸಾಧ್ಯವಾಗುತ್ತಿಲ್ಲವೆಂಬುದೇ ದುಃಖದ ಸಂಗತಿ. ಇತ್ತೀಚೆಗೆ ಜಾತಿ ಸಂಘಟನೆಗಳು ಎಲ್ಲ ಸಮುದಾಯಗಳಲ್ಲಿ ತಲೆ ಎತ್ತುತ್ತಿರುವದು ಕಂಡು ಬರುತ್ತಿದೆ. ಈ ಯುಗವು ಸಮುದಾಯದ ಅಸ್ತಿತ್ವಕ್ಕಾಗಿ ಹುಡುಕಾಟ ನಡೆಸುತ್ತಿರುವ ಸೂಕ್ಷ್ಮ ಭಾವಸಂವೇದಿ ಯುಗವಾಗಿದೆ. ಕೆಳಸಮುದಾಯಗಳಲ್ಲಿ ಸಂಘಟಿತ ಸ್ತರದಲ್ಲಿ ಮೂಡುತ್ತಿರುವ ಎಚ್ಚರಿಕೆ ಅವುಗಳ ಅಭಿವೃದ್ಧಿಗಾಗಿ ಅವಶ್ಯಕವೇ. ಆದರೆ ಅವು ವರ್ತಮಾನದ ಓಟು ಬ್ಯಾಂಕಿನ ರಾಜಕೀಯಕ್ಕೆ ಬಲಿಯಾಗದಂತೆ ತಮ್ಮ ಸಮುದಾಯ ಹಿತವನ್ನು ಕಾಪಾಡಿಕೊಳ್ಳಬೇಕಾಗಿದೆ.

ದಲಿತ ಸಂಘಟನೆಗಳು ಒಡೆದು ಚೂರು ಚೂರಾಗಿರುವದಕ್ಕೂ, ರೈತ ಸಂಘಟನೆಗಳು ಹೋಳಾಗಿ ಹರಿದು ಹಂಚಿಹೋಗಿರುವದಕ್ಕೂ ತುಂಬಾ ಆಳವಾದ ರಾಜಕೀಯ ಕುತಂತ್ರಗಳಿವೆ. ಆಯಾ ಸಮುದಾಯಗಳ ನೇತೃತ್ವ ವಹಿಸಿಕೊಂಡಿರುವ ಮುಖಂಡರು ಇದನ್ನು ಅರ್ಥ ಮಾಡಿಕೊಳ್ಳಬೇಕು. ತಳ ಸಮುದಾಯಗಳು ಯಾರೋ ಒಡ್ಡಿದ ಆಮಿಷಕ್ಕೆ ಬಲಿಯಾಗಿ ಪರಸ್ಪರ ತಮ್ಮ ತಮ್ಮಲ್ಲಿಯೇ ಕಚ್ಚಾಡಿ ಹಾಳಾಗುವ

ಹೊತ್ತಲ್ಲ ಇದು. ಆಳದ ಚಾರಿತ್ರಿಕ ಪ್ರಜ್ಞೆ ಮತ್ತು ದೂರದೃಷ್ಟಿ ಇಟ್ಟುಕೊಂಡು ಸಮಗ್ರ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗೂಡಿ ಹೆಜ್ಜೆ ಇಡಬೇಕಾದ ಸಮಯವಿದು. ನಾಯಕರುಗಳು ಕಷ್ಟಪಟ್ಟಾದರೂ ಮೈಯೆಲ್ಲ ಕಣ್ಣಾಗಿಸಿಕೊಂಡು ಎಚ್ಚರವಿರಬೇಕಾಗಿದೆ. ಇಲ್ಲವಾದರೆ ಅವರ ಸಂಘಟಿತ ಶಕ್ತಿ ವರ್ತಮಾನದ ಸ್ವಾರ್ಥ ರಾಜಕೀಯ ಹಿತಾಸಕ್ತಿಗಳಿಗೆ ಹಾಸುವ ಮಡಿಬಟ್ಟೆಯಾಗುತ್ತದೆ. ಜಾಗತೀಕರಣದ ಜಾತ್ರೆಯಲ್ಲಿ ಮೀಸಲಾತಿ ಸೌಲಭ್ಯ ಹಿತ್ತಲ ಬಾಗಿಲಿನಿಂದ ಪಲಾಯನ ಮಾಡುವ ಸಂಭವವಿದೆ. ಅವಕಾಶವಾದಿ ರಾಜಕಾರಣದಲ್ಲಿ ಇವರು ಯಾರದೋ ಬಂದೂಕಿಗೆ ಹೆಗಲುಗಳಾಗುವ ಅಪಾಯವಂತೂ ಇದ್ದೇ ಇದೆ. ಖಾಸಗಿ ವಲಯದಲ್ಲಿ ಮೀಸಲಾತಿ ಸೌಲಭ್ಯ ದೊರೆಯುವಂತಾಗಲು ನಿರಂತರ ಹೋರಾಟ ಮಾಡದೆ ಗತ್ಯಂತರವಿಲ್ಲ. ಆದ್ದರಿಂದ ವಿಚಾರವಾದಿಗಳು, ಪ್ರಗತಿಪರರು ಎಲ್ಲ ಹಂತದಲ್ಲೂ ದಲಿತ ಸಂವೇದನೆಯನ್ನು ಕಾಪಿಟ್ಟುಕೊಂಡೇ ಹೆಜ್ಜೆ ಇಡಬೇಕಿದೆ.

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯಂತೂ ತೀರ ಇತ್ತೀಚೆಗೆ ಅಂದರೆ ನಿಖರವಾಗಿ ದಲಿತ–ಬಂಡಾಯ ಚಳುವಳಿಯ ಸಂದರ್ಭದಲ್ಲಿ ದಲಿತ ಸಂವೇದನೆ ಕಾಣಿಸಿಕೊಂಡಿದೆಯಾದರೂ ಈ ಮೊದಲು ೯೦೦ ವರ್ಷಗಳಷ್ಟು ಹಿಂದೆಯೇ ಅದರ ಸಿಂಹಗರ್ಜನೆ ಮೊಳಗಿದೆ. ಉರಿಲಿಂಗ ಪೆದ್ದಿ, ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಗೊಗ್ಗವ್ವೆ, ಸೂಳೆ ಸಂಕವ್ವೆ ಇವರ ಬಂಡಾಯದ ವಚನಗಳು ದಲಿತ ಲೋಕದ ಬದುಕಿನ ಜಾಗತಿಕ ಮಟ್ಟದ ಮೈಲಿಗಲ್ಲುಗಳಂತಿವೆ. ಅಂಥದೊಂದು ದೀರ್ಘ ಪರಂಪರೆಯ ವಾರಸುದಾರರೆನಿಸಿ ಕೊಂಡಿರುವ ಆಧುನಿಕ ಲೇಖಕರು 'ಹೋರಾಟದ ಸಾಗರಕ್ಕೆ ಸಾವಿರಾರು ನದಿ'ಗಳಾಗಿ ಹರಿದುಬರುತ್ತಿದ್ದಾರೆ. ದಲಿತ–ಬಂಡಾಯೋತ್ತರದ ಈ ಸಂದರ್ಭದಲ್ಲಿ ಆ ನದಿಗಳು ತಮ್ಮ ಆರ್ಭಟ ಉಬ್ಬರಗಳನ್ನು ತಹಬಂದಿಗೆ ತಂದುಕೊಂಡು ಪ್ರಶಾಂತ ಸಾಗರವಾಗಿ ಒಮ್ಮೊಮ್ಮೆ ಧುಮ್ಮಿಕ್ಕುವ ಜಲಪಾತಗಳಾಗಿ, ಶ್ರಾವಣಮಾಸದ ಜಡಿಮಳೆಯಾಗಿ ಸುರಿಯುತ್ತಿರಲಿ ಎಂದು ಹಾರೈಸುತ್ತೇನೆ. ದಲಿತ ಬಂಡಾಯ ಸಾಹಿತ್ಯವು ಆವೇಗ, ಆವೇಶಗಳ ಅಗ್ನಿದಿವ್ಯವನ್ನು ಹಾದು ಈಗ ಒಂದು ಧ್ಯಾನಸ್ಥ ಸ್ಥಿತಿಯಲ್ಲಿ ನೆಲೆನಿಂತು ಕಾವ್ಯಕ್ಕೆ ಒಡ್ಡಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಅಷ್ಟಕ್ಕೂ ಬಂಡಾಯದ ಕೋಗಿಲೆಗಳು ಈಗ ಜೀವನಾನುಭವದ ಚೈತ್ರ ಮಾಸಕ್ಕ ಮನಸೋತು ಆಳದ ಚಾರಿತ್ರಿಕ ಪ್ರಜ್ಞೆಯಿಟ್ಟುಕೊಂಡು ದೂರಗಾಮಿ ದೃಷ್ಟಿ ಹರಿಸುತ್ತ ಸೃಜನಶೀಲ ಕಲಾಪಗಳಲ್ಲಿ ತೆರೆದುಕೊಳ್ಳುತ್ತಿರುವುದು ಕೂಡ ಕಾಲದ ಅವಶ್ಯಕತೆಯೇ ಆಗಿದೆ. ಎಪ್ಪತ್ತೊಂದು ಅಖಿಲ ಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳು ಮೇಲ್‌ಜಾತಿಯ ಪ್ರತಿಭೆಗಳಲ್ಲೆ ಹಂಚಿಹೋಗಿವೆ. ಮುಂಬರುವ ಸಮ್ಮೇಳನದಲ್ಲಾದರೂ ದಲಿತ ಪ್ರತಿಭೆಗಳನ್ನು ಗುರುತಿಸಿ ಕನ್ನಡ ನುಡಿ ತಾಯಿಯ ಚೊಚ್ಚಿಲ ಪಟ್ಟ ನೀಡಲಿ. ತನ್ಮೂಲಕ ಕನ್ನಡದ ನೆಲಪರಂಪರೆ ಉತ್ತರೋತ್ತರವಾಗಿ ಉತ್ತುಂಗಕ್ಕೇರಲಿ ಎಂದು ಆಶಿಸೋಣ.

ಮುಸ್ಲಿಂಪರ ಸಂವೇದನೆ :

ಆಧುನಿಕ ಕನ್ನಡ ಸಾಹಿತ್ಯಕ್ಕೆ ಬಲ ಮತ್ತು ಛಲ ಬಂದಿರುವುದೇ ಹಲವು ಹೊಸ ಸಂವೇದನೆಗಳ ಅಭಿವ್ಯಕ್ತಿಯಿಂದಾಗಿ. ದಲಿತ, ಶೋಷಿತ, ಮಹಿಳೆ, ಮುಸ್ಲಿಂ ಅಭಿವ್ಯಕ್ತಿ ಪಲಕುಗಳು ಒಂದರ ಸೆರಗನ್ನೊಂದು ಹಿಡಿದು ಕನ್ನಡ ಲೋಕದಲ್ಲಿ ಕಾಲಿಟ್ಟದ್ದೇ ಈ ಸಾಹಿತ್ಯಕ್ಕೆ ಸಂಕೀರ್ಣತೆ, ಶ್ರೀಮಂತಿಕೆ, ವೈವಿಧ್ಯಮಯತೆ ತಾನೆ ತಾನಾಗಿ ಸೇರಿಕೊಂಡವು. ಸಾವಿರಾರು ವರ್ಷಗಳಿಂದಲೂ ಮೇಲ್ಜಾತಿ, ಮೇಲ್ವರ್ಗದ ಚರ್ವಿತ ಚರ್ವಣ ಜೀವನಾನುಭವಗಳನ್ನು ಗರ್ಭೀಕರಿಸಿಕೊಂಡಿದ್ದ ಕನ್ನಡದ ಅಕ್ಷರಗಳು ಹೊಸ ಪದಾರ್ಥಕ್ಕಾಗಿ ತಹತಹಿಸುತ್ತಿರುವವೇನೋ ಎಂಬಂತೆ ಝೋಪಡಪಟ್ಟಿ ಮಂದಿಯ ಬದುಕನ್ನು ಅನಾವರಣಗೊಳಿಸಿದವು. ಈ ಹೊಸ ಅನುಭವಗಳು ಮೊದಲ ಬಾರಿಗೆಂಬೆಂಬಂತೆ ಅನಾವರಣಗೊಂಡಿದ್ದರಿಂದ ಅಕ್ಷರಗಳಿಗೆ ರೋಮಾಂಚನವುಂಟಾಗಿ ಒಟ್ಟು ಕನ್ನಡ ಭಾಷಿಕ ಆವರಣವೇ ಹೊಸದೊಂದು ಕ್ಷಿತಿಜದತ್ತ ಸರಿದುಕೊಂಡಿತು. ಗೀತಾ ನಾಗಭೂಷಣ ಅವರ ಕೇಂದ್ರ ಸಾಹಿತ್ಯ ಅಕೆಡೆಮಿ ಪ್ರಶಸ್ತಿ ವಿಜೇತ 'ಬದುಕು' ಕಾದಂಬರಿಯನ್ನು ಓದಿದವರಿಗೆ ಈ ಮಾತು ಅರಿವಿಗೆ ಬರದೆ ಇರದು. ಈ ಕೃತಿ ತಳ ಸಮುದಾಯದ ಮಂದಿಯ ಬದುಕು, ಭಾಷೆ, ಸಂಸ್ಕೃತಿ ಇವೆಲ್ಲವುಗಳ ಪೃಥಕ್ಕರಣದಲ್ಲಿ ಮಾನವಶಾಸ್ತ್ರೀಯ ಅಧ್ಯಯನಕ್ಕೆ ವಿದ್ವತ್ ವಲಯದಲ್ಲಿ ಹೊಸ ಆಕೃತಿ ದೊರೆತಂತಾಗಿದೆ. ಅಂತೆಯೇ ಮುಸ್ಲಿಂ ಲೇಖಕರ ಕೃತಿಗಳು ಕೂಡಾ ಮಾನವೀಕ ವಿಜ್ಞಾನಗಳಂಥ ಅಧ್ಯಯನ ಶಿಸ್ತುಗಳಿಗೆ ಆಕರ ಕೃತಿಗಳಾಗಿ ನಿಲ್ಲುತ್ತವೆ. ಸಾಹಿತ್ಯಕವಾಗಿ ಮುಸ್ಲಿಂ ಲೇಖಕರು ತುಂಬ ಅಪರೂಪದ ಸಾಧನೆ ಮಾಡಿದ್ದಾರೆ. ಮುಸ್ಲಿಂ ಲೋಕದ ದುಡಿಯುವ ಜನತೆಯ ಬದುಕನ್ನು ಅನಾವರಣಗೊಳಿಸಿದ್ದಾರೆ. ಇದು ಕನ್ನಡ ಸಾಹಿತ್ಯಕ್ಕೆ ಶಕ್ತಿಯಾಗಿ ಸೇರಿಕೊಂಡಿದೆ.

ಕರ್ನಾಟಕದಲ್ಲಿ "ಮುಸ್ಲಿಂ" ಎಂಬುದು ಏಕಾಕೃತಿಯಲ್ಲ. ಆ ಸಮುದಾಯದ ಹಲವು ಸಾಂಸ್ಕೃತಿಕ ಪಠ್ಯಗಳು ಇಲ್ಲಿ ಲಭ್ಯ. ಹೈದ್ರಾಬಾದ ಕರ್ನಾಟಕದ ಮುಸ್ಲಿಂ ಪ್ರಜ್ಞೆ, ಕರಾವಳಿಯ ಮುಸ್ಲಿಂ ಪ್ರಜ್ಞೆ, ಮಲೆನಾಡ ಸೀಮೆಯ ಮುಸ್ಲಿಂ ಪ್ರಜ್ಞೆ, ಹಾಗೇ ಬೆಳಗಾವಿ ಸೀಮೆ, ಧಾರವಾಡ ಬಿಜಾಪೂರ ಸೀಮೆ ಹೀಗೆ ಹಲವು ಹತ್ತು ಬಗೆಯ ಮುಸ್ಲಿಂ ಪ್ರಜ್ಞೆಗಳು ಆಯಾ ಪ್ರದೇಶದ ದೇಶೀ ಸಮುಚ್ಚಯದೊಂದಿಗೆ ಸಮ್ಮಿಳಿತಗೊಂಡು ನಿರ್ಮಾಣವಾಗಿರುವ ವೈವಿಧ್ಯಮಯ ಧಾರೆಗಳಿವೆ. ಇವು ಪರಸ್ಪರ ಭಿನ್ನವೂ ಹೌದು. ಇನ್ನೊಂದು ಮಗ್ಗುಲಲ್ಲಿ ಅನ್ಯೋನ್ಯವೂ ಹೌದು. ಹೀಗಿರುವಾಗಲೂ ಧರ್ಮ ರಾಜಕಾರಣದ ಕುತಂತ್ರದಡಿ ಈ ಎಲ್ಲ ಸಮುದಾಯಗಳನ್ನು ಏಕಾಕಾರವಾಗಿ ಗುರುತಿಸುವುದು ಸಾಂಸ್ಕೃತಿಕ ಲೋಕಕ್ಕೆ ಎಸಗುವ ದ್ರೋಹ. ಆದ್ದರಿಂದ ಇವರೆಲ್ಲ ಮೊದಲು ಕನ್ನಡಿಗರು. ಈ ಎಲ್ಲ ಕನ್ನಡಿಗರ ಸಂಕೀರ್ಣಾನುಭವಗಳು ಅಕ್ಷರ ಲೋಕಕ್ಕೆ ಇನ್ನು ಸಂಪೂರ್ಣವಾಗಿ ದಕ್ಕಿಲ್ಲ. ಕರ್ನಾಟಕದಲ್ಲಿ ಇದರೊಟ್ಟಿಗೆ ಇನ್ನು ಹಲವು

ಅಲಕ್ಷಿತ ಸಮುದಾಯಗಳಿವೆ. ಅವರೆಲ್ಲರ ಅನುಭವ ಪ್ರಪಂಚ ಅನಾವರಣ ಗೊಳ್ಳಬೇಕಿದೆ. ಅದಕ್ಕೆ ಅಕ್ಷರವೇ ಮಾಧ್ಯಮವಾದ್ದರಿಂದ ಅವರ ಮನೆ ಮನಕ್ಕೂ ಅಕ್ಷರ ಬೆಳಕ ಮುಟ್ಟಿಸಿ ಮಾತಾಡಿಸಬೇಕಿದೆ. ಅಲ್ಪಸಂಖ್ಯಾತ, ಅಲೆಮಾರಿ ಸಮುದಾಯದ ಜನತೆ ಹಿಂಜರಿತವಿಲ್ಲದಂತೆ ತಮ್ಮ ತಮ್ಮ ಎದೆಯ ಧ್ವನಿಯನ್ನು ಹೊರಹಾಕುವಂಥ ವಾತಾವರಣವನ್ನು ಸಾಹಿತ್ಯ ವಲಯದಲ್ಲಿ ಮೂಡಿಸಬೇಕು. ಶತಮಾನಗಳಿಂದಲೂ ಬರೆಯುತ್ತಿರುವವರು ಬರೆದು ಬರೆದು ಕ್ಲೀಷೆಯಾಗಿದ್ದನ್ನೆ ಮತ್ತೆ ಬರೆದು; ಹಳಸಲು ಅನ್ನಕ್ಕೆ ಕಮಟು ಒಗ್ಗರಣೆ ಹಾಕಿ ಚಿತ್ರಾನ್ನ ಮಾಡಿದಂತೆ ಮಾಡುವ ಬದಲು ಹೊಸರುಚಿ ಬರಲಿ ಅಲ್ಲವೆ?

ಪ್ರಾದೇಶಿಕ ಅಸಮಾನತೆ :

ಅಖಂಡ ಕರ್ನಾಟಕದ ಶಿರೋ ಮುಕುಟವೂ, ಹೈದ್ರಾಬಾದ ಕರ್ನಾಟಕದ ಧರಿಸೀಮೆಯೂ ಎನಿಸಿಕೊಂಡಿರುವ ಈ ಬೀದರಿನಲ್ಲಿ ಈಗಾಗಲೇ ಅಖಿಲ ಭಾರತ ಮಟ್ಟದ ಎರಡು ಸಮ್ಮೇಳನಗಳು ಜರುಗಿಹೋಗಿವೆ. ಇದು ಮೂರನೇ ಸಮ್ಮೇಳನ. ಬದುಕಿನುದ್ದಕ್ಕೂ ಈ ಭಾಗವನ್ನು ಕುರಿತು ಧ್ವನಿ ಎತ್ತಿದ ನಾನು ಪ್ರಸ್ತುತ ಸಮ್ಮೇಳನಾಧ್ಯಕ್ಷನಾಗಿರುವ ವಿಶೇಷ ಅವಕಾಶವನ್ನು ಬಳಸಿಕೊಂಡು ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕು. ಹೈದ್ರಾಬಾದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ, ಸ್ವಾತಂತ್ರ್ಯೋತ್ತರ ಇತಿಹಾಸ ಮತ್ತು ನನ್ನ ಬದುಕಿನ ಚರಿತ್ರೆ ಅಭಿನ್ನ. ನೈಜಾಂ ಇಲಾಖೆಯ ಹೃದಯಭಾಗವಾಗಿದ್ದ ಬೀದರ, ಗುಲಬರ್ಗಾ, ರಾಯಚೂರ, ಕೊಪ್ಪಳ, ಈ ಜಿಲ್ಲೆಗಳು ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಕನ್ನಡವನ್ನು ಉಳಿಸಿ ಬೆಳೆಸಲು ಅವಿರತ ಶ್ರಮಪಟ್ಟಿವೆ. ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು ಆಳರಸ ನಿಜಾಮರ ಒತ್ತಡದ ನಡುವೆಯೂ ಹೊರಗೆ ಉರ್ದು ಬೋರ್ಡು ಹಾಕಿ ಒಳಗೆ ಕನ್ನಡ ಶಾಲೆಗಳನ್ನು ನಡೆಸಿದ್ದಾರೆ. ನನ್ನಂಥ ಬಡ ವಿದ್ಯಾರ್ಥಿಗಳಿಗಾಗಿ ಮುಷ್ಟಿಫಂಡ್ ಅಂದರೆ ಮನೆಮನೆಗೆ ಭಾರವಾಗದಂತೆ ಒಂದು ಹಿಡಿಹಿಟ್ಟು ಭಿಕ್ಷೆ ಎತ್ತಿ ವಸತಿ ನಿಲಯಗಳನ್ನು ನಡೆಸಿದ್ದಾರೆ. ಅಂದು ಭಾಲ್ಕಿ ಅಪ್ಪನವರು, ಪ್ರಭುರಾವ ಕಂಬಳಿವಾಲಾ ಇಂಥವರು ಆಳರಸರನ್ನು ಎದುರು ಹಾಕಿಕೊಂಡು ಕನ್ನಡ ಶಾಲೆಗಳನ್ನು ನಡೆಸಿರದಿದ್ದರೆ ನಾನು ಕನ್ನಡ ಕವಿಪಟ್ಟ ಹೊತ್ತು ಇವತ್ತು ಈ ವೇದಿಕೆ ಮೇಲೆ ನಿಲ್ಲುವ ಪ್ರಮೇಯವೇ ಬರುತ್ತಿರಲಿಲ್ಲ. ತುಂಬಾ ಹಳೆಯದಾದ ಆದರೆ ಈ ಹೊತ್ತು ಸ್ಮರಿಸಲೇಬೇಕಾದ ಕೆಲವು ಘಟನೆಗಳು ಹೇಳುವುದು ಉಚಿತವೆಂದು ಭಾವಿಸುತ್ತೇನೆ. ಈ ಭಾಗದ ವರ್ತಮಾನದ ತವಕ ತಲ್ಲಣಗಳ ಮೇಲೆ ಬೆಳಕು ಚೆಲ್ಲಲು ಇತಿಹಾಸದ ಆ ಸ್ಮೃತಿಗಳು ಅನಿವಾರ್ಯವಾಗಿವೆ.

ಹೀಗೆ ರಾಜ್ಯಶಾಹಿ ಒತ್ತಡಗಳ ನಡುವೆ ಉರ್ದು. ಫಾರ್ಸಿ ಭಾಷೆಗಳನ್ನು ಶಾಲಾ ಮಾಧ್ಯಮವಾಗಿ ಕಲಿಯುತ್ತಲೂ ಮನೆಮಾತು ಕನ್ನಡವನ್ನು ಬಲಿಷ್ಠವಾಗಿ

ನೋಂಪಿಯಂತೆ ಬೆಳೆಸಿಕೊಂಡು ಬಂದವರು ನಾವು. ಇವತ್ತಿಗೂ ದಕ್ಷಿಣ ಕರ್ನಾಟಕದ ಸೀಮೆಯ ಜನರಿಗೆ ನಾವು ಕನ್ನಡ ಬರದವರು, ಅಜ್ಞರು ಎಂಬ ಭಾವನೆಯೇ ಇದೆ. ಆದರೆ ಅವರೆಲ್ಲ ಧ್ಯಾನಸ್ಥ ಸ್ಥಿತಿಯಲ್ಲಿ ಒಮ್ಮೆ ಕುಳಿತು ಹಳಗನ್ನಡ, ನಡುಗನ್ನಡ, ಆಧುನಿಕ ಕನ್ನಡದ ಒಟ್ಟು ಸಾಹಿತ್ಯವನ್ನು ಅವಲೋಕಿಸಿದರೆ ಸಾಕು. ಅದರಲ್ಲಿ ಗಟ್ಟಿಕಾಳುಗಳು ಯಾರಿಂದ ಸಂದಿವೆ ಎಂಬ ಸತ್ಯ ಅರಿವಿಗೆ ಬರುತ್ತದೆ. ಈ ಭಾಗದ ಜನತೆ ನಿರಂತರ ಸಂಘರ್ಷ ಮತ್ತು ಪ್ರಾಕೃತಿಕ ಅವಘಡಗಳ ನಡುವೆ ಬದುಕು-ಬರಹಗಳನ್ನು ಮಜಬೂತಾಗಿಯೇ ಉಳಿಸಿಕೊಂಡು ಬಂದಿದ್ದಾರೆ. ಇದೇ ನೆಲದ ಅಸೀಮ ಬಂಡಾಯ ಕವಿ ಎನಿಸಿಕೊಂಡಿರುವ ೧೭ನೇ ಶತಮಾನದಲ್ಲಿ ಆಗಿ ಹೋದ ಕಡಕೋಳದ ಮಡಿವಾಳಪ್ಪ ನಮ್ಮ ಬರವಣಿಗೆಯ ಹಿಂದಿರುವ ಬವಣೆಯನ್ನು ಕುರಿತು ಹೀಗೆ ಹೇಳುತ್ತಾನೆ.

"ಹೊತ್ತು ನುಚ್ಚುಯಿಲ್ಲ ಹುಗ್ಗಿಗೆಲ್ಯಾದ ಬೆಲ್ಲ
ಅತ್ತತ್ತು ಸುಳ್ಳೇ ನೀ ಯಾಕ ಬಾಡ್ತಿ
ಸಿಟ್ಟಿಗೆ ಬರಲ್ಯಾಕೆ ಸುಳ್ಳಂತ ಬರಿಲ್ಯಾಕೆ
ಬಿಟ್ಟಿಗೆ ಬಂತೆನೊ ದೌತಿ ಲೆಕ್ಕಣಿಕೆ

ಅಂದರೆ ಒಂದು ಹೊತ್ತು ನುಚ್ಚಿಗೂ (ಗಂಜಿ) ಗತಿಯಿಲ್ಲದ ಈ ನಾಡಿನಲ್ಲಿ ಹುಗ್ಗಿಯ (ಪಾಯಸ) ಬಗ್ಗೆ ಬರೆಯುವುದಾಗಲಿ, ಕಾವ್ಯ, ಕಥೆ ಕಟ್ಟುವುದಾಗಲಿ ಸಾಧ್ಯವಾಗದು. ಅದು ಸಾಧು ಅಲ್ಲ ಕೂಡ. ಕಾಮಧೇನು, ಕಲ್ಪವೃಕ್ಷಗಳ ಭ್ರಮೆ ಹುಟ್ಟಿಸಿ ಇಲ್ಲದ್ದನ್ನು ವೈಭವೀಕರಿಸಿ ಕಾವ್ಯ ಬರೆದು ಮೋಸ ಮಾಡುವುದು ನಮ್ಮವರ ಜಾಯಮಾನವಲ್ಲ. ಉಳ್ಳವರ ರಂಜಿಸಲೆಂದು ಕಾವ್ಯ ಬರೆಯಲು ತನ್ನ ಲೆಕ್ಕಣಿಕೆ ಬಿಟ್ಟಿಗೆ ಬಂದಿಲ್ಲ ಎಂದು ಢಾಣಾಢಂಗುರವಾಗಿ ಇಲ್ಲಿ ಕವಿ ಸಾರಿದ್ದಾನೆ. ಇದರ ತಾತ್ಪರ್ಯವಿಷ್ಟೆ. ನೂರಾರು ವರ್ಷಗಳ ಪ್ರಭುತ್ವಗಳ ದಾಳಿಯಲ್ಲಿ, ಪ್ರಾಕೃತಿಕ ಅವಘಡಗಳಲ್ಲಿ ಈ ಭಾಗದ ಬದುಕು ಬಸವಳಿದಿದೆ. ಆದರೂ ಬದುಕಿಗೆ ಮುಖಾಮುಖಿಯಾಗಿ ನಿಂತು ಸೆಡ್ಡು ಹೊಡೆದು ಬಾಳ್ವೆ ಹೂಡಿದ್ದೇವೆ. ಆದ್ದರಿಂದ ಈ ನೋವು, ಅಳಲು, ಸಿಟ್ಟುಗಳು ನಮ್ಮ ಕಾವ್ಯದ ವಸ್ತುವಾಗುತ್ತವೆ. ವಾಸ್ತವ ಬದುಕಿನ ಸವಾಲುಗಳು ಅಲ್ಲಿ ಎಡೆ ಪಡೆದುಕೊಳ್ಳುತ್ತವೆ. ಕಾವ್ಯ ನಮಗೆ ಹೋರಾಟದ ಅಸ್ತ್ರವೂ ಹೌದು. ಬದುಕಿನ ನಿಗೂಢಾನುಭವಗಳ ಅನ್ವೇಷಣೆಯೂ ಹೌದು ಎನ್ನುತ್ತಾನೆ ಕವಿ. ಮಡಿವಾಳಪ್ಪನ ಈ ಸಾಲುಗಳು ಅಕ್ಷರಶಃ ನಮ್ಮ ಬದುಕಿಗೆ ಬರೆದ ಭಾಷ್ಯದಂತಿವೆ. ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಟೊಂಕಕಟ್ಟಿ ನಿಂತು ಸ್ಥಳೀಯ ಆಳರಸರ ವಿರುದ್ಧ ಸೆಣಸಾಡಿದ್ದೇವೆ. ಒಂದನೆಯದಾಗಿ ಬ್ರಿಟಿಷರ ವಿರುದ್ಧ, ಎರಡನೆಯದಾಗಿ ಸ್ಥಳೀಯ ನೈಜಾಂಶಾಹಿ ವಿರುದ್ಧ. ಹೀಗೆ ಇಬ್ಬಗೆಯ ಸಂಘರ್ಷಕ್ಕೆ ಒಡ್ಡಿಕೊಂಡು ದೇಶದ ಇತರ ಬಾಂಧವರಿಗಿಂತ ೧೩ ತಿಂಗಳು ತಡವಾಗಿ ಸ್ವಾತಂತ್ರ್ಯ ಪಡೆದುಕೊಂಡಿದ್ದೇವೆ. ಕರ್ನಾಟಕ ಏಕೀಕರಣದ ಸಂದರ್ಭದಲ್ಲೂ ದೊಡ್ಡ ಮಹತ್ವಾಕಾಂಕ್ಷೆಯೊಂದಿಗೆ

ಸಮೃದ್ಧಿಯ ಕನಸುಗಳನಿಟ್ಟು ಕೊಂಡು ಅಖಂಡ ಕರ್ನಾಟಕದ ಭಾಗವಾಗಿದ್ದೇವೆ. ಆದರೆ ನಮ್ಮ ಸಮೃದ್ಧಿಯ ಕನಸುಗಳು ಇಂದು ಅಣಕಿಸುತ್ತಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶ ಹಿಂದುಳಿದಿದೆ ಎಂಬ ಮಾತು ಕ್ಷೀಷೆಯಾಗಬೇಕಿಲ್ಲ. ಉದ್ಯೋಗ, ಶಿಕ್ಷಣ, ಆರೋಗ್ಯ, ರಸ್ತೆ, ಸಾರಿಗೆ, ವ್ಯಾಪಾರ ಹೀಗೆ ಹಲವು ಹತ್ತು ಅಭಿವೃದ್ಧಿ ಅಂಶಗಳಲ್ಲಿ ಈ ಭಾಗದ ತಾಲೂಕುಗಳು ಎಷ್ಟು ಹಿಂದೆ ಉಳಿದಿವೆ ಎಂಬುದನ್ನು ನಾನು ಮತ್ತೆ ಪುನರ್ ಉಚ್ಚರಿಸಬೇಕಿಲ್ಲ. ಅಂಕಿ ಅಂಶಗಳ ಕೋಷ್ಟಕಗಳನ್ನು ಪುನರಾವರ್ತಿಸಬೇಕಾಗಿಲ್ಲ. ನಂಜುಂಡಪ್ಪ ವರದಿ ಇದನ್ನು ಸಾದ್ಯಂತವಾಗಿ ನಿಚ್ಚಳಗೊಳಿಸಿದೆ. ಅಖಂಡ ಕರ್ನಾಟಕದ ಪ್ರಜೆಯಾಗಿ ನನಗೆ ಗೊತ್ತು. ಹೈದ್ರಾಬಾದ ಕರ್ನಾಟಕ ಪ್ರದೇಶದಂತೆ, ಬಯಲುಸೀಮೆಯ ಕೆಲವು ಪ್ರದೇಶಗಳು ರಾಜ್ಯದ ಇನ್ನಿತರೆ ಭಾಗಗಳು, ತುಮಕೂರ ಜಿಲ್ಲೆಯ ಪಾವಗಡ ತಾಲೂಕು ಇರಬಹುದು. ನೆರೆಯ ಬಿಜಾಪೂರ ಜಿಲ್ಲೆಯ ಹಲವು ತಾಲೂಕುಗಳು ಇರಬಹುದು. ಇನ್ನು ಹಲವು ತಾಲೂಕುಗಳು ಕೂಡಾ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿವೆ. ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಹೈದ್ರಾಬಾದ ಕರ್ನಾಟಕ ಪ್ರದೇಶ ಒಳಗೊಂಡಂತೆ ಇತರ ಹಿಂದುಳಿದ ಪ್ರದೇಶಗಳನ್ನು ಪ್ರಧಾನ ಧಾರೆಗೆ ತರುವುದು ಹೇಗೆ ಎಂಬುದೇ ಆಗಿದೆ. ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಮಂಡಳಿ ರಚಿಸಿ, ವಿಶೇಷ ಹಣಕಾಸು ಬಿಡುಗಡೆಗೊಳಿಸಿ, ಒಂದೆರಡು ಪ್ಯಾಕೇಜ ಕೊಟ್ಟಾಕ್ಷಣ ಅಭಿವೃದ್ಧಿಯಾದೀತು ಎಂದು ಭಾವಿಸಲಾಗದು. ನಮ್ಮ ಸರಕಾರವು ನಂಜುಂಡಪ್ಪ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದಾಗಿ ಹೇಳಿಕೆ ನೀಡಿದ್ದು ಸ್ವಾಗತಾರ್ಹ. ಆದರೆ ಈ ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಮನೆ ಮಾಡಿಕೊಂಡಿರುವ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ಎಚ್ಚರ ವಹಿಸಬೇಕಾದದ್ದು ಅತ್ಯಂತ ಅವಶ್ಯ. ಇಲ್ಲವಾದರೆ ಈ ಎಲ್ಲ ಯೋಜನೆಗಳು ಹೊಳೆಯಲ್ಲಿ ಹುಣಸಿಹಣ್ಣು ತೊಳೆದಂತೆ ಹಣದ ದುಂದುವೆಚ್ಚವಲ್ಲದೆ ಮತ್ತೇನು ಆಗದು. ನಂಜುಂಡಪ್ಪ ವರದಿಯಲ್ಲಿರುವ ದೋಷಗಳನ್ನು ಸರಿಪಡಿಸಿ ಜಾರಿಗೊಳಿಸಬೇಕು.

ಕರ್ನಾಟಕವೆಂದರೆ ಕೇವಲ ಬೆಂಗಳೂರು ಮತ್ತು ಅದರ ಸುತ್ತಮುತ್ತಲ ಭಾಗವಲ್ಲ ಎಂಬುದನ್ನು ರಾಜಧಾನಿಯಲ್ಲಿ ಕುಳಿತವರು ಅರ್ಥ ಮಾಡಿಕೊಳ್ಳಬೇಕು. ಕೇಂದ್ರೀಕೃತವಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ನಾಡಿನ ಅಂಚಿನಲ್ಲಿರುವ ಭಾಗಗಳಿಗೂ, ವಿಶೇಷವಾಗಿ ಗಡಿಭಾಗಗಳಿಗೆ ವಿಸ್ತರಿಸಬೇಕು. ಇನ್ನು ಹಿಂದುಳಿದ ಪ್ರದೇಶದ ಚುನಾಯಿತ ಪ್ರತಿನಿಧಿಗಳು, ಸ್ಥಳೀಯ ಮುಖಂಡರು ಕಾಮಗಾರಿ ಗುತ್ತೆದಾರರು ತಮ್ಮ ತಮ್ಮ ಸ್ವಾರ್ಥ ಪರಿಧಿಯಿಂದ ತುಸುವಾದರೂ ದೂರ ಸರಿದು ನಿಜವಾದ ಕಳಕಳಿಯಿಂದ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಬೇಕು. ಶಾಸನಸಭೆಗಳಲ್ಲಿ ತಮ್ಮ ಭಾಗದ ಅಭಾವ ಕುರಿತು ಮನವರಿಕೆ ಮಾಡಿಕೊಡಬೇಕು. ನಾವು ಎಲ್ಲಿ ತಪ್ಪಿದ್ದೇವೆ ಎಂಬುದನ್ನು ಪತ್ತೆ ಹಚ್ಚಿ ಸರಿಪಡಿಸಲು ಹವಣಿಸಬೇಕೇ ಹೊರತು ಪ್ರತ್ಯೇಕ ರಾಜ್ಯದ ಕೂಗು ಸಾಧುವಲ್ಲ. ಭಾಷಾವಾರು ಪ್ರಾಂತೀಯ ವಿಲೀನೀಕರಣದ

ಸಂದರ್ಭದಲ್ಲಿ ನಾವು ಅನುಭವಿಸಿದ ನೋವು, ಒದ್ದಾಟಗಳು ಪ್ರತ್ಯೇಕ ರಾಜ್ಯದ ಹುಯಿಲೆಬ್ಬಿಸುವವರಿಗೆ ಅರ್ಥವಾಗುವುದಿಲ್ಲ. ಆದರೆ ಹಿಂದುಳಿದ ಪ್ರದೇಶದ ಜನತೆಯ ಹತಾಸೆಯಾಗಿ, ಆಕ್ರೋಶವಾಗಿ ಈ ಕೂಗು ಎದ್ದಿದೆ ಎಂಬುದನ್ನು ಗದ್ದುಗೆ ಮೇಲೆ ಕುಳಿತ ಮಹಾಶಯರು ಅರ್ಥಮಾಡಿಕೊಳ್ಳಬೇಕು.

ಒಂದು ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಹಣಕಾಸು ಎಷ್ಟು ಮುಖ್ಯವೋ ಅದನ್ನು ವಿನಿಯೋಗಿಸುವ ಕಾರ್ಯವೈಖರಿಯೂ ಅಷ್ಟೇ ಮುಖ್ಯ. ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಹಣದಲ್ಲಿ ಪ್ರಮುಖ ಪಾಲು ಎಲ್ಲ ಜಾತಿ ಕುಲ ಬಾಂಧವರ ಗುಡಿ ಗುಂಡಾರ, ಪೂಜಾಸ್ಥಳಗಳಿಗೆ ವಿನಿಯೋಗಿಸಲಾಗಿದೆ. ಅನುತ್ಪಾದಕ ಕೆಲಸಗಳಿಗೆ ಹಣ ಪೋಲು ಮಾಡಿರುವುದರ ಪರಿಣಾಮವಾಗಿ ರಸ್ತೆ, ಶಿಕ್ಷಣ, ಆರೋಗ್ಯ, ಸಂಸ್ಕೃತಿ ಸಂವರ್ಧನೆ ಮುಂತಾದ ಜನೋಪಯೋಗಿ ಸಾರ್ವಜನಿಕ ಘಟಕಗಳಿಗೆ ದೊರೆಯಬೇಕಾದ ಆದ್ಯತೆ ದೊರೆಯಲೇ ಇಲ್ಲ. ಕರ್ನಾಟಕದ ಇತರ ಭಾಗಗಳಿಗಿಂತ ೪೦-೫೦ ವರ್ಷಗಳಷ್ಟು ತಡವಾಗಿ ಅಕ್ಷರದ ಮುಖ ನೋಡಿದ ಹೈದ್ರಾಬಾದ ಕರ್ನಾಟಕ ಭಾಗದ ಜನತೆಯ ತಿಳುವಳಿಕೆಯ ಮಟ್ಟದಲ್ಲೇ ಹಲವಾರು ತೊಂದರೆಗಳಿವೆ. ಆದ್ದರಿಂದ ಒಂದು ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾದರೆ ಆ ಪ್ರದೇಶದ ಜನತೆಯ ತಿಳುವಳಿಕೆಯ ಮಟ್ಟವೂ ಎತ್ತರಿಸಬೇಕು. ಅಭಿವೃದ್ಧಿ ಕಲ್ಪನೆಯಲ್ಲಿರುವ ಅಸ್ಪಷ್ಟತೆಗಳನ್ನು ನಿವಾರಿಸಬೇಕು. ಜನತೆಯನ್ನು ವೈಚಾರಿಕವಾಗಿ, ವೈಜ್ಞಾನಿಕವಾಗಿ ಬೆಳೆಸದಿದ್ದರೆ ಅಭಿವೃದ್ಧಿ ಎಂಬುದು ಅಂಕಿ ಅಂಶಗಳ, ಕೂಡಿ ಕಳೆಯುವ ಆಟವಾಗಿ ಅರಾಜಕತೆ ಖಾಯಂ ಆಗಿ ಉಳಿಯುತ್ತದೆ. ಆರ್ಥಿಕ ಉಪಲಬ್ಧಿ ಮತ್ತು ಬೌದ್ಧಿಕ ಮಟ್ಟ ಎರಡನ್ನೂ ಜೊತೆ ಜೊತೆಯಾಗಿ ನಿಭಾಯಿಸಿಕೊಂಡು ಹೋದಾಗಲೆ ನಿಜವಾದ ಅಭಿವೃದ್ಧಿ ಯೋಜನೆಗಳು ಸಾಕಾರಗೊಳ್ಳುತ್ತವೆ.

ಒಟ್ಟಾರೆ ಕರ್ನಾಟಕದ ಯಾವ್ಯಾವ ಭಾಗಗಳು ಹಿಂದುಳಿದಿವೆಯೋ ಆ ಎಲ್ಲ ಭಾಗಗಳಿಗೆ ವಿಶೇಷ ಮುತುವರ್ಜಿ ವಹಿಸಿ ಸರಕಾರ ಹಣಕಾಸಿನ ನೆರವು ನೀಡಬೇಕು. ಆಯಾ ಭಾಗದ ಸ್ಥಳೀಯ ಶಾಸಕರು, ಆಡಳಿತ ಯಂತ್ರ ಕಾಳಜಿಯಿಂದ ಚುರುಕಾಗಿ ಅಭಿವೃದ್ಧಿ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಅಲ್ಲಿನ ಪ್ರಗತಿಪರ ಬುದ್ಧಿಜೀವಿಗಳು ಜನತೆಯ ಯೋಚನಾಲಹರಿಯನ್ನು ಅಭಿವೃದ್ಧಿಗೆ ಪೂರಕ ವಾಗುವಂತೆ ಹದಗೊಳಿಸಬೇಕು. ಜನತೆಯಾದರೂ ಸರಕಾರಿ ಯಂತ್ರದ ಮೇಲೆ ಸದಾ ಕಟ್ಟೆಚ್ಚರ ಹೊಂದಿರಬೇಕು. ಈ ಮಾಡಬೇಕಾದ ಕೆಲಸಗಳನ್ನು ಬಿಟ್ಟು; ಹಿಂದುಳಿದ ಪ್ರದೇಶದವರೆಲ್ಲ ಪ್ರತ್ಯೇಕ ರಾಜ್ಯವೆಂಬ ಗುಲ್ಲೆಬ್ಬಿಸಿದರೆ ಅದು ಅತ್ಯಂತ ಅವೈಜ್ಞಾನಿಕ ಮತ್ತು ಬಾಲಿಶವೆನಿಸುತ್ತದೆ. ನಾಡು, ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆ ಮತ್ತು ಅಖಂಡತೆಗೆ ಧಕ್ಕೆ ಬರುತ್ತದೆ. ಈಗಾಗಲೇ ಸಣ್ಣಪುಟ್ಟ ರಾಜ್ಯಗಳಾಗಿ ಒಡೆದು ಹೋಗಿರುವ ಜಾರ್ಖಂಡ, ತ್ರಿಪುರಾ, ಉತ್ತರಾಂಚಲ ಇವುಗಳ ಗತಿ ಏನಾಗಿದೆ ಎಂಬುದನ್ನು

ಗಮನಿಸಬೇಕು. ನಮ್ಮ ಯೋಚನಾಲಹರಿ ಅಥವಾ ಜನಪರ ಕಾಳಜಿಗಳೆಲ್ಲ ಅಖಂಡ ಕರ್ನಾಟಕದ ಪರಿಕಲ್ಪನೆಯ ಒಳಗಡೆಯೇ ಪರಸ್ಪರ ವಿಚಾರ ವಿನಿಮಯದ ಹಾದಿಯಲ್ಲಿ ಕ್ರಿಯಾತ್ಮಕವಾಗಬೇಕು. ನಾಡನ್ನು ಒಡೆಯುವ ಧ್ವನಿ ಯಾವತ್ತೂ ಸಲ್ಲದು.

ಗಡಿ ಸಮಸ್ಯೆ :

ಭಾಷಾವಾರು ಪ್ರಾಂತಗಳ ಉದಯದೊಂದಿಗೇನೇ ಗಡಿ ಬಿಕ್ಕಟ್ಟುಗಳ ಬೀಜಾರೋಪಣೆಯಾಗಿದೆ. ಮಹಾರಾಷ್ಟ್ರ, ಕೇರಳ, ಆಂಧ್ರ, ತಮಿಳುನಾಡು ಇವು ನಮ್ಮ ನೆರೆಯ ರಾಜ್ಯಗಳು. ಈ ರಾಜ್ಯಗಳ ನಡುವೆ ನಮಗೆ ನಿರಂತರ ಕರುಳುಬಳ್ಳಿಯ, ಕೊಡು ಕೊಳ್ಳುವ ಸಂಬಂಧವಿದೆ. ನೀರು, ಭಾಷೆ, ರಸ್ತೆ, ಸಾಹಿತ್ಯ, ವ್ಯಾಪಾರ, ವಹಿವಾಟು ಹೀಗೆ ಎಲ್ಲವುಗಳಲ್ಲಿ ಪರಸ್ಪರ ಆಂತರಿಕ ಅವಲಂಬನೆ ಇದೆ. ಇದು ಇರಲೇಬೇಕಾದದ್ದು. ಮನುಷ್ಯ ಸಂಬಂಧಗಳೇ ಹಾಗೇ; ಗೋಜಲು ಗೋಜಲಾಗಿ ವ್ಯಾಪಿಸಿಕೊಂಡಿರುತ್ತವೆ. ಸಂಬಂಧಗಳೆಂದರೆ ಗಣಿತದ ಲೆಕ್ಕಾಚಾರವಲ್ಲ. ಆದ್ದರಿಂದ ಈ ಎಲ್ಲ ರಾಜ್ಯಗಳನ್ನು ಒಕ್ಕೂಟವಾಗಿ ನಿಭಾಯಿಸುತ್ತಿರುವ ಕೇಂದ್ರ ಸರಕಾರ ಇಂಥ ವಿಷಯಗಳಲ್ಲಿ ತುಂಬಾ ಎಚ್ಚರ ವಹಿಸಬೇಕು.

ಬೆಳಗಾವಿ ಕರ್ನಾಟಕದ ಅಂಗವೆಂಬುವದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ಮಹಾಜನ ವರದಿ ಮೀನ ಮೇಷ ಎಣಿಸದೆ ಜಾರಿಯಾಗಬೇಕು. ಕಾಸರಗೋಡು, ಸೊಲ್ಲಾಪುರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕನ್ನಡಿಗರು ಹತಾಶೆಗೊಳ್ಳದಂತೆ ಅವರ ಬದುಕನ್ನು ಕಾಪಾಡಬೇಕಿದೆ. ಕರ್ನಾಟಕವೆಂದರೆ ಕೇವಲ ಭೌಗೋಳಿಕ ಸೀಮೆ ಸರಹದ್ದು ಎಂದಲ್ಲ. ಕನ್ನಡಿಗರು ಎಲ್ಲೆಲ್ಲಿ ವಾಸಿಸುತ್ತಿರುವರೋ ಅವರೆಲ್ಲರ ಹಿತಚಿಂತನೆ ನಮ್ಮದಾಗಬೇಕು. ಹೊರನಾಡ ಕನ್ನಡಿಗರು ಒಳನಾಡ ಕನ್ನಡಿಗರ ಸಾಂಸ್ಕೃತಿಕ ಸಂಪರ್ಕದಲ್ಲಿ ಉಳಿಯುವಂಥ ಕಾರ್ಯಕ್ರಮಗಳನ್ನು ನಮ್ಮ ಅಕೆಡೆಮಿಗಳು ಮತ್ತು ಸಂಸ್ಕೃತಿ ಇಲಾಖೆ ರೂಪಿಸಿಕೊಳ್ಳಬೇಕು. ಗಡಿ ಭಾಗಗಳಲ್ಲಿ ವಾಸಿಸುತ್ತಿರುವ ಯಾವುದೇ ಭಾಷಿಕರಿರಲಿ ಎರಡೂ ಸರಕಾರಗಳು ಅವರ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಶಿಕ್ಷಣ, ಉದ್ಯೋಗ, ಇತರ ನಾಗರಿಕ ಸೌಲಭ್ಯಗಳು ದೊರೆಯುವಂತೆ ನೋಡಬೇಕು.

ಬೆಳಗಾವಿಯಲ್ಲಿ ಮೊನ್ನೆ ನಡೆದ ಎಲ್ಲ ಅವಘಡಗಳು ಗಣತಾಂತ್ರಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮಾಡಿದ ಅಪಮಾನವೆ ಸರಿ. ಭಾಷಾವಾರು ಪ್ರಾಂತ ರಚನೆಗೆ ಒಪ್ಪಿಕೊಂಡಾಗಲೇ ನಾವೆಲ್ಲ ನಮ್ಮ ಗಡಿರೇಖೆಗಳನ್ನು ನಿರ್ಧರಿಸಿ ಕೊಂಡಿದ್ದೇವೆ. ಆದರೂ ಗಡಿಭಾಗಗಳಲ್ಲಿ ಪದೇ ಪದೇ ಗಡಿವಿವಾದ ಭುಗಿಲೇಳುತ್ತಲೆ ಇರುತ್ತದೆ. ಇದಕ್ಕೆ ಕಾರಣಗಳು ತುಂಬಾ ಸ್ಪಷ್ಟವಾಗಿಯೇ ಇವೆ. ಕರ್ನಾಟಕ ಅಥವಾ ಮಹಾರಾಷ್ಟ್ರ ಸರಕಾರಗಳು ಗಡಿ ಅಭಿವೃದ್ಧಿಗೆ ಒತ್ತು ಕೊಡುವುದಕ್ಕಿಂತಲೂ ಹೆಚ್ಚಾಗಿ ಗಡಿ ವಿವಾದಗಳನ್ನು ರಾಜಕೀಯ ದಾಳ ಮಾಡಿಕೊಂಡಿವೆ. ಮಧ್ಯಸ್ತಿಕೆ ವಹಿಸಿ ಶಾಶ್ವತ ಪರಿಹಾರೋಪಾಯಗಳನ್ನು ಜಾರಿಯಲ್ಲಿ ತರಬೇಕಾದ ಕೇಂದ್ರ ಸರಕಾರವು ಕೂಡಾ

ಈ ದಿಸೆಯಲ್ಲಿ ಪಕ್ಷ ರಾಜಕಾರಣದ ಪಿಡುಗಿಗೆ ಬಲಿಯಾಗಿ ಕೈಚೆಲ್ಲಿ ಕುಳಿತಿದೆ. ಹೀಗಾಗಿ ಬೆಳಗಾವಿ, ಬೀದರ, ಕಾಸರಗೋಡು ಭಾಗಗಳಲ್ಲಿ ಆಗಾಗ ಸಮಸ್ಯೆ ಉಲ್ಬಣಗೊಳ್ಳುತ್ತಲೆ ಇರುತ್ತದೆ. ಇವತ್ತಿಗೂ ನಮ್ಮ ಗಡಿ ಭಾಗಗಳಲ್ಲಿ ಸುಸಜ್ಜಿತವಾದ ಕನ್ನಡ ಮಾಧ್ಯಮ ಶಾಲೆಗಳು ಇಲ್ಲ. ನೆಪಕ್ಕಾಗಿ ಇದ್ದ ಶಾಲೆಗಳಲ್ಲಿ ಕನ್ನಡ ಕಲಿಸುವ ಶಿಕ್ಷಕರಿಲ್ಲ. ಗಡಿ ಭಾಗದಲ್ಲಿ ರಸ್ತೆ, ಆಸ್ಪತ್ರೆ, ಕುಡಿಯುವ ನೀರಿನ ಸೌಲಭ್ಯ, ಉದ್ಯೋಗ, ವಸತಿ, ಸಾಂಸ್ಕೃತಿಕ ಐಡಂಟಿಟಿ–ಹೀಗೆ ಎಲ್ಲ ಅಂಶಗಳು ತುಂಬಾ ದಯನೀಯ ಸ್ಥಿತಿಯಲ್ಲಿವೆ. ಸಾರ್ವತ್ರಿಕ ಚುನಾವಣೆಯಲ್ಲಿ ಗಡಿಯ ಹಳ್ಳಿಗಳಲ್ಲಿರುವ ಜನರು ಯಾರಿಗೆ ಮತ ಹಾಕಬೇಕು ಎಂಬುವುದರಲ್ಲಿಯೂ ವೆಗ್ಗಳ ಗೊಂದಲಗಳು ಇರುವುದು ಪ್ರತಿಬಾರಿ ವರದಿಯಾಗುತ್ತಿದೆ. ಹೀಗಿರುವಾಗ ಗಡಿಭಾಗದ ಜನತೆಯ ಬದುಕು ಸೌಲಭ್ಯಗಳಿಂದ ವಂಚಿತವಾಗುವುದಲ್ಲದೆ ರಾಜಕೀಯ ಅತಂತ್ರ ಸ್ಥಿತಿಯಲ್ಲಿ ನಲುಗುತ್ತಿದೆ. ಅವರು ಅನಾಥಪ್ರಜ್ಞೆ ಮತ್ತು ಹತಾಶೆ ಸ್ಥಿತಿಯಲ್ಲಿ ನರಳುತ್ತಿದ್ದಾರೆ. ಜನತೆಯ ಈ ಹತಾಶೆ ಸ್ಥಿತಿಯನ್ನು ಬಳಸಿಕೊಳ್ಳುವ ಹುಸಿ ಭಾಷಾಭಿಮಾನಿಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗುತ್ತಿದ್ದಾರೆ.

ಕರ್ನಾಟಕ ಸರಕಾರ ಬೆಳಗಾವಿಯಂಥ ಗಡಿಭಾಗಗಳ ವಿವಾದಗಳನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುವುದನ್ನು ನಿಲ್ಲಿಸಿ ತಕ್ಷಣ ಅಲ್ಲಿ ಅಭಿವೃದ್ಧಿಪರ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡುವ ಮೂಲಕವೇ ಹುಸಿ ಭಾಷಾಭಿಮಾನದಿಂದ ಕೆರಳುವ ಸ್ಥಿತಿಯನ್ನು ನಿಯಂತ್ರಿಸಬೇಕು. ಹಿಂಸಾವಾದಿ ಶಿವಸೇನೆಯಂಥ ಸಂಘಟನೆಗಳ ಕಪಿಮುಷ್ಠಿಯಿಂದ ಅಮಾಯಕರನ್ನು ಬಿಡುಗಡೆಗೊಳಿಸಬೇಕು. ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಮೇಲೆಯೂ ದಬ್ಬಾಳಿಕೆ ನಡುಸುತ್ತೇವೆ ಎಂದಿರುವ ಅವರ ಹಿಟ್ಲರಿಜಂನ್ನು ಕೇಂದ್ರ ಸರಕಾರ ಮುಟ್ಟುಗೋಲು ಹಾಕಬೇಕು.

ಮಹಾಜನ ವರದಿ, ಚಂಪಾ–ಬರಗೂರರ ಶೈಕ್ಷಣಿಕ ವರದಿ, ವಾಟಾಳ್ ವರದಿ ಹೀಗೆ ವರದಿಗಳು ರಚನೆಯಾಗುತ್ತಲೆ ಹೋಗುತ್ತವೆ. ಆದರೆ ದುಷ್ಟ ರಾಜಕಾರಣದ ಕುತಂತ್ರದಿಂದಾಗಿ ಯಾವುವೂ ಜಾರಿಯಾಗುವುದೇ ಎಲ್ಲ ಎಂದರೆ ಏನು ಅರ್ಥ? ನಾಚಿಕೆ ಬಿಟ್ಟಂತಿರುವ ನಮ್ಮ ಸರಕಾರಗಳನ್ನು ತರಾಟೆಗೆ ತೆಗೆದುಕೊಳ್ಳುವುದು ಕೂಡಾ ಇತ್ತೀಚೆಗೆ ಕ್ಲೀಷೆಯಾಗುತ್ತಿದೆ. ಬಂಧುಗಳೇ, ಈ ದಿಸೆಯಲ್ಲಿ ಜನಸಾಮಾನ್ಯರಾದ ನಾವು ಸರಕಾರದ ಮೇಲೆ ಒತ್ತಡ ತಂದು ಶಾಶ್ವತ ಪರಿಹಾರ ಕಂಡುಕೊಳ್ಳಲೇಬೇಕಿದೆ. ಗಡಿಭಾಗದ ಸಮಗ್ರ ಅಭಿವೃದ್ಧಿಗಾಗಿ ಒಂದು ಸಚಿವ ಖಾತೆಯನ್ನು ಆರಂಭಿಸಿ ಯುದ್ಧೋಪಾದಿಯಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುವಂತೆ ನೋಡಿಕೊಳ್ಳಬೇಕಿದೆ. ಸರಕಾರವಾದರೂ ಎಡಬಿಡಂಗಿಯಂತೆ ವರ್ತಿಸದೆ ಶೀಘ್ರವಾಗಿ ಗಡಿವಿವಾದ ಕುರಿತು ಶಾಶ್ವತ ಪರಿಹಾರ ಕಂಡುಕೊಳ್ಳುವುದು ಒಳಿತು. ಇಲ್ಲವಾದರೆ ಕನ್ನಡ ವಿರೋಧಿ ಮತ್ತು ಜನವಿರೋಧಿ ಎಂಬ ಪಟ್ಟ ಪಡೆದುಕೊಂಡು ಉಗ್ರಹೋರಾಟ ಎದುರಿಸಬೇಕಾದೀತು.

ಕನ್ನಡಿಗರು, ಮರಾಠಿಗರು ಯಾರೇ ಇರಲಿ, ನಾವ್ಯಾರೂ ಹುಸಿ ಭಾಷಾಭಿಮಾನದ ಪುಂಗಿನಾದಕ್ಕೆ ಮರುಳಾಗದೆ ನಾವು ನಿಂತ ನೆಲ ಮತ್ತು ಭಾಷೆಯನ್ನು ಪ್ರೀತಿಸುತ್ತಲೇ ಸೌಲಭ್ಯಗಳನ್ನು ಪಡೆದುಕೊಳ್ಳಲು ಹವಣಿಸೋಣ.

ಗಡಿವಿವಾದಗಳಂತೆ ಕೃಷ್ಣ, ಕಾವೇರಿ ನದಿಗಳ ನೀರು ಹಂಚಿಕೆಯ ವಿಷಯವೂ ರಾಜಕೀಯ ಲಾಬಿಯಾಗಬಾರದು. ಕೇಂದ್ರ ಜಲಮಂಡಳಿ ನಿಷ್ಪಕ್ಷಪಾತವಾಗಿ ಸಮಸ್ಯೆಯನ್ನು ಬಗೆಹರಿಸಬೇಕು. ಆಂಧ್ರ, ತಮಿಳುನಾಡುಗಳ ಹಿತಾಸಕ್ತಿ ಕಾಪಾಡುವ ಭರದಲ್ಲಿ, ರಾಜಕೀಯವಾಗಿ ಅವರನ್ನು ಓಲೈಸುವ ತಂತ್ರದಲ್ಲಿ ಕರ್ನಾಟಕದ ಜನತೆಗೆ ಮೋಸ ಮಾಡಬಾರದು.

ಕರ್ನಾಟಕ ಸರಕಾರ ನಿಗದಿತ ಸಮಯಕ್ಕೆ ಸರಿಯಾಗಿ ತನ್ನ ನೀರಾವರಿ ಯೋಜನೆಗಳನ್ನು ಪೂರೈಸದಿರುವ ಕಾರಣಕ್ಕಾಗಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಇನ್ನಾದರೂ ಗಂಭೀರವಾಗಿ ಚಿಂತಿಸಬೇಕು. ಕೇಂದ್ರದ ಎದುರು, ನ್ಯಾಯಾಲಯಗಳ ಸಮ್ಮುಖದಲ್ಲಿ ರಾಜ್ಯದ ರೈತರ ಸ್ಥಿತಿ-ಗತಿ ಕುರಿತು ಮನವರಿಕೆ ಮಾಡಿಕೊಡಲು ಎಲ್ಲ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ನಮ್ಮ ನಾಯಕರು, ಕಾನೂನು ತಜ್ಞರು ಈ ನಿಟ್ಟಿನಲ್ಲಿ ತಲಸ್ಪರ್ಶಿ ಅಧ್ಯಯನ ಮಾಡಿ ವಿಚಾರ ಮಂಡಿಸಬೇಕು. ಆಂಧ್ರ ಪ್ರದೇಶದ ಕೃಷ್ಣಾ ಬಯಲಿನಲ್ಲಿ ಅಕ್ರಮವಾಗಿ ನಿರ್ಮಿಸುತ್ತಿರುವ ನೀರಾವರಿ ಯೋಜನೆಗಳ ಬಗ್ಗೆ ಕೇಂದ್ರ ತನಿಖೆ ಮಾಡುವಂತೆ ಒತ್ತಾಯ ತರಬೇಕು. ಕೇಂದ್ರವಾದರೂ ದೇಶದ ಸಮಗ್ರ ರೈತಾಪಿ ಸಮುದಾಯವನ್ನು ಒಂದೇ ಘಟಕವಾಗಿ ನೋಡಬೇಕು.

ಕನ್ನಡ ಜನತೆ ಮತ್ತು ಸರಕಾರ ನದಿ ನೀರಿನ ಹಂಚಿಕೆ ವಿಷಯದಲ್ಲಿ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದು ಅಕ್ಷಮ್ಯ. ಕಳೆದ ಕೆಲವು ತಿಂಗಳಲ್ಲಿ ನದಿ ನೀರಿನ ಹಂಚಿಕೆಯ ಹುನ್ನಾರುಗಳನ್ನು ನೆನಪಿಸುವ ಪ್ರಯತ್ನ ಮಾಡುತ್ತೇನೆ. ಕಾವೇರಿ ನದಿ ನೀರಿನ ಬಗ್ಗೆ ನಡೆದ ವಾಗ್ವಾದದಲ್ಲಿ ನಾವು ಬಹುತೇಕವಾಗಿ ಸೋತೆವು. ನಮ್ಮ ನಿಲುವಿನ ವಿರುದ್ಧವಾಗಿ ಕೃಷ್ಣ ಮತ್ತು ಕಾವೇರಿ ನದಿಗಳ ನೀರಿಗೆ ಕುರಿತಂತೆ ಟ್ರಿಬ್ಯೂನಲ್‌ಗಳನ್ನು ರಚಿಸಲಾಯಿತು. ಇಲ್ಲಿ ಒಂದಂಶವನ್ನು ಗಮನಿಸಬೇಕು. ಕೃಷ್ಣಾ ನದಿ ನೀರಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವಾದ ಮಾಡಲೆಂದು ನಮ್ಮ ರಾಜ್ಯ ಸರಕಾರ ೧೯೮೩ ರಲ್ಲಿ ಕಲ್ಕತ್ತಾದ ಸಚಿನ್ ಚೌಧರಿ ಎಂಬುವವರನ್ನು ವಕೀಲರಾಗಿ ನೇಮಿಸಿತು. ಕಾವೇರಿ ನದಿ ನೀರಿನ ಸಮಸ್ಯೆಯನ್ನು ಮಹಾರಾಷ್ಟ್ರದ ನಾರಿಮನ್ ಮತ್ತು ಅವರ ಬಳಗ ನೋಡಿಕೊಳ್ಳುತ್ತಿದೆ. ಪರರಾಜ್ಯದವರಾದ ಅವರಿಗೆ ನಮ್ಮಗಳ ಬಗ್ಗೆ ಎಷ್ಟರ ಮಟ್ಟಿಗೆ ಕಾಳಜಿ ಇರಲು ಸಾಧ್ಯ? ನಮ್ಮ ವಿಶಾಲ ಕರ್ನಾಟಕದಲ್ಲಿ ನಮ್ಮ ಸಮಸ್ಯೆಗಳನ್ನು ರಾಜಧಾನಿಯಲ್ಲಿ ಮಂಡಿಸಲು ಬೇರೆ ರಾಜ್ಯದ ವಕೀಲರೇ ನಮಗೆ ಬೇಕೇ? ನಮಗೆ ನಮ್ಮವರಾರೂ ಇಲ್ಲವೆ? ಮೇಲಾಗಿ ಪರರಾಜ್ಯದವರಾದ ಇವರಿಂದ ನಮ್ಮ ರಾಜ್ಯಕ್ಕಾದ ಲಾಭವಾದರೂ ಏನು? ಇವರ ನೇಮಕಾತಿಯಿಂದ ರಾಜ್ಯ ಸರಕಾರಕ್ಕೆ ಆದ ನಷ್ಟ ಎಷ್ಟು? ಈ

ಪ್ರಶ್ನೆಗಳನ್ನು ಈಗ ಕನ್ನಡಿಗರು ಕೇಳಿಕೊಳ್ಳಬೇಕಿದೆ. ಇನ್ನಾದರೂ ನಮ್ಮ ಸರಕಾರ ತುಂಬಾ ಮುತುವರ್ಜಿ ವಹಿಸಿ ರಾಜ್ಯದ ಹಿತಾಸಕ್ತಿ ಕಾಪಾಡಿಕೊಳ್ಳುವ ದಿಸೆಯಲ್ಲಿ ಹೆಜ್ಜೆ ಹಾಕುವುದನ್ನು ಕಲಿಯಬೇಕು.

ಎಲ್ಲಕ್ಕಿಂತ ಹೆಚ್ಚಾಗಿ ಅಚ್ಚುಕಟ್ಟು ಪ್ರದೇಶದ ಭೂಮಿಯನ್ನು ಕನ್ನಡಿಗರು ಪರರಾಜ್ಯದವರಿಗೆ ಮಾರದಂತೆ ಕಟ್ಟುನಿಟ್ಟಿನ ನಿಯಮ ತರಬೇಕು. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಬಹುಪಾಲು ಆಂಧ್ರ ರೈತರ ವಶವಾಗಿರುವಂತೆ ಈ ಕಳೆದ ೨-೩ ವರ್ಷಗಳಲ್ಲಿ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಸುರಪೂರ, ಶಹಾಪೂರ, ಲಿಂಗಸೂಗೂರು ಭಾಗಗಳು ಕೂಡಾ ಆಂಧ್ರದವರಿಂದ ಆವೃತ್ತವಾಗಿವೆ. ಇಲ್ಲಿಯ ಮೂಲ ಒಕ್ಕಲಿಗರು, ಕೂಲಿಕಾರರು ದಿಕ್ಕೇಡಿಗಳಾಗುತ್ತಿದ್ದಾರೆ. ಈ ದಿಶೆಯಲ್ಲಿ ಕನ್ನಡಿಗರ ಸೋಮಾರಿತನವೇ ದೊಡ್ಡ ಕಂಟಕವಾಗಿದೆ. ಕಷ್ಟಪಟ್ಟು ಬೆಳೆ ತೆಗೆಯುತ್ತಿರುವ ಆಂಧ್ರದ ಕೂಲಿಕಾರರ ಮೇಲೆ ಹರಿಹಾಯುವುದರಿಂದ ಅಥವಾ ಗುತ್ತಿಗೆದಾರಿ ಗೇಣಿದಾರರ ಜೊತೆ ಕಾಲ ಕೆದರಿ ಜಗಳ ತೆಗೆಯುವುದರಿಂದ ಈ ದಿಕ್ಕೇಡಿತನಕ್ಕೆ ಪರಿಹಾರ ದೊರೆಯಲಾರದು. ನಮ್ಮ ನಾಡವರಲ್ಲಿ ದುಡಿತದ ಭಕ್ತಿ ಮತ್ತು ಧೀಶಕ್ತಿ ಹುಟ್ಟಿಸಬೇಕು. ಸಾರಾಯಿ, ತಂಬಾಕು, ಗುಟಕಾ, ಮಟಕಾ, ಜೂಜು ಮುಂತಾದ ವ್ಯಸನಗಳಿಗೆ ಬಲಿಯಾಗುತ್ತಿರುವವರನ್ನು ಎಚ್ಚರಿಸಬೇಕು. ಅವರಲ್ಲಿ ಆತ್ಮ ಪ್ರತ್ಯಯ ಮತ್ತು ಆತ್ಮ ವಿಶ್ವಾಸಗಳನ್ನು ಬಲಿಸಬೇಕು. ಈ ನಿಟ್ಟಿನಲ್ಲಿ ಬುದ್ಧಿಜೀವಿಗಳು, ಧಾರ್ಮಿಕ ನೇತಾರರು, ಮಾಧ್ಯಮದ ಮಿತ್ರರು ಸಕಾರಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನರತ್ತ ಹರಿದು ಬರಬೇಕು. ಒಟ್ಟಾರೆ ಕನ್ನಡದ ಭೂಮಿ ಯಾವುದೇ ಕಾರಣಕ್ಕೂ ಪರಭಾರೆಯಾಗದಂತೆ ಎಚ್ಚರ ವಹಿಸಬೇಕು.

ಬಂಧುಗಳೇ, ಇಷ್ಟು ದೀರ್ಘವಾದ ನನ್ನ ಚರ್ಚೆಯೂ ಸಾಹಿತ್ಯದಾಚೆ ಜಿಗಿದು ನೆಲ-ಜಲ-ಸಂಸ್ಕೃತಿ ಎಲ್ಲವನ್ನು ಹಬ್ಬಿದೆ. ಈ ಎಲ್ಲವುಗಳನ್ನು ಒಳಗೊಂಡದ್ದೇ ಬದುಕು. ಈ ಬದುಕು ಮತ್ತು ಸಾಹಿತ್ಯ ಎರಡೂ ಅಭಿನ್ನ ಎಂಬುದು ನನ್ನ ಖಚಿತ ಗ್ರಹಿಕೆ.

ಈ ಕ್ಷಣದ ಜರೂರಿ :

ಕರ್ನಾಟಕ ಜನತೆ ಮತ್ತು ಸರಕಾರ ಸೇರಿ ತುರ್ತಾಗಿ ಮಾಡಬೇಕಾದ ಕೆಲಸಗಳು ಹಲವಾರು ಇವೆ. ಅವುಗಳಲ್ಲಿ ಕೆಲವನ್ನಾದರೂ ನಾವು ಕೂಡಲೆ ಅನುಷ್ಠಾನಕ್ಕೆ ತರಬೇಕಾಗಿದೆ. ಭಾಷೆ, ಸಂಸ್ಕೃತಿ, ಆಡಳಿತಕ್ಕೆ ಸಂಬಂಧಪಟ್ಟ ಕೆಲಸಗಳಲ್ಲದೆ ಮೂಲಭೂತ ಸೌಲಭ್ಯಗಳಿಗೆ ಸಂಬಂಧಪಟ್ಟ ಕಾರ್ಯಗಳು ಇವೆ. ಪ್ರಮುಖವಾದವುಗಳನ್ನು ಇಲ್ಲಿ ಗಮನಿಸೋಣ.

೧. ಅನುವಾದ ಅಕಾಡೆಮಿ :- ಕರ್ನಾಟಕ ಸರಕಾರವು ಅನುವಾದ ಅಕಾಡೆಮಿ ಪ್ರಾರಂಭಿಸಿದ್ದು ಸ್ವಾಗತಾರ್ಹ. ಇದಕ್ಕಾಗಿ ಕನ್ನಡಿಗರ ಅಭಿನಂದನೆಗಳು. ಇಂದು ಜಾಗತೀಕರಣದ ಪರಿಧಿಯಲ್ಲಿ ಅನ್ಯಜ್ಞಾನ ಶಿಸ್ತುಗಳು ಅಂತರ ಶಿಸ್ತೀಯ ಅಧ್ಯಯನದ ವ್ಯಾಪ್ತಿಗೆ ತೆರೆದುಕೊಳ್ಳುತ್ತಿವೆ. ಜ್ಞಾನದ ಹರಹು ದಿಗಂತದಾಚೆ ಚಾಚುತ್ತಿದೆ. ವಿಶ್ವವೇ

ಒಂದು ಹಳ್ಳಿಯಾಗುತ್ತಿರುವ ಈ ಹೊತ್ತಿನಲ್ಲಿ ಜಗತ್ತಿನ ಎಲ್ಲ ಮೂಲೆಯ ಜ್ಞಾನವನ್ನು ಕನ್ನಡ ಲೋಕಕ್ಕೆ ಭರಿಸಿಕೊಳ್ಳಬೇಕಿದೆ. ಅಂತೆಯೇ ಸ್ಪರ್ಧಾತ್ಮಕ ಜಗತ್ತಿನೊಂದಿಗೆ ಹೆಜ್ಜೆ ಹಾಕಲು ಕನ್ನಡದೆಲ್ಲ ಜ್ಞಾನ ಸಂಪತ್ತು, ಜಾಣ್ಮೆಗಳು ವಿಶ್ವದೆಲ್ಲ ಭಾಷೆಗೆ ತೆರೆದುಕೊಳ್ಳಬೇಕು. ಆದ್ದರಿಂದ ಬೇರೆ ಬೇರೆ ಭಾಷೆಯ ಕೃತಿಗಳು ಕನ್ನಡಕ್ಕೆ, ಕನ್ನಡದ ಕೃತಿಗಳು ಇತರ ಭಾಷೆಗೆ ಅನುವಾದಗೊಳ್ಳುವಂಥ ಕೆಲಸಗಳನ್ನು ತುಂಬಾ ಸಮರ್ಪಕವಾಗಿ ಮಾಡಬೇಕಿದೆ. ಈ ಅಕಾಡೆಮಿಯಲ್ಲಿ ನಾಮಾಂಕಿತರಾದ ಸದಸ್ಯರು ಆಳದ ಕಾಳಜಿ ಇಟ್ಟುಕೊಂಡು ದುಡಿಯಬೇಕಿದೆ. ವಚನ ಸಾಹಿತ್ಯದಂಥ ಸರಳ ಮತ್ತು ವೈಚಾರಿಕ ಕೃತಿಗಳು ಜಾಗತಿಕ ಮಟ್ಟದಲ್ಲಿ ಪರಿಚಯಿಸುವಂಥ ಮಹತ್ತರ ಕಾರ್ಯವನ್ನು ಹಟತೊಟ್ಟು ನಿಭಾಯಿಸಬೇಕಿದೆ. ಇದರೊಟ್ಟಿಗೆ ಜನಪರ ಧೋರಣೆಯುಳ್ಳ ಸಾಹಿತ್ಯ ಕೃತಿಗಳನ್ನು ವಿಶ್ವದ ವೇದಿಕೆಯಲ್ಲಿ ಸಾದರಪಡಿಸಿ ಕನ್ನಡದ ಶ್ರೇಷ್ಠತೆಯನ್ನು ಮನಗಾಣಿಸಬೇಕಿದೆ.

೨. ಮಕ್ಕಳ ಅಕಾಡೆಮಿ :– ಎಸ್.ಎಂ.ಎಸ್., ಟಿ.ವಿ. ಚಾನೆಲ್ಲು, ಇಂಟರನೆಟ್ ಗದ್ದಲದಲ್ಲಿ ನಮ್ಮ ಮಕ್ಕಳು ಕಳೆದುಹೋಗುತ್ತಿದ್ದಾರೆ. ಮೂರ್ಖರ ಪೆಟ್ಟಿಗೆ ಎಂದೇ ಪರಿಗಣಿಸಲಾಗಿರುವ ಟಿ.ವಿ. ಚಾನೆಲ್ಲುಗಳಲ್ಲಂತೂ ಹಿಂಸೆ, ಕ್ರೌರ್ಯ, ಭ್ರಮೆಗಳನ್ನು ಬಿತ್ತರಿಸಲಾಗುತ್ತಿವೆ. ಮಕ್ಕಳಿಗಾಗಿ ಇರುವ ಕಾರ್ಯಕ್ರಮಗಳಲ್ಲೂ ಮೌಢ್ಯ, ಅವೈಜ್ಞಾನಿಕತೆಯನ್ನೆ ತೋರಿಸಲಾಗುತ್ತಿದೆ. ಈ ಹೊತ್ತು ಮಕ್ಕಳ ಬುದ್ಧಿಶಕ್ತಿ ಹಿಂದೆಂದೂ ಕಂಡು ಕೇಳರಿಯದಷ್ಟು ತೀಕ್ಷ್ಣವೂ, ಹರಿತವೂ ಆಗುತ್ತಿದೆ ಎಂಬುದು ಅತಿಶಯೋಕ್ತಿಯಲ್ಲ. ಆದರೆ ಅವರ ಗ್ರಹಣಶಕ್ತಿ, ತೀಕ್ಷ್ಣಮತಿಯನ್ನು ಹದಗೊಳಿಸುವಂಥ ಮಾಧ್ಯಮಗಳಾಗಲಿ, ಕಾರ್ಯಕ್ರಮಗಳಾಗಲಿ ನಮ್ಮ ಬಳಿ ಇಲ್ಲ. ಮಕ್ಕಳ ಸಹಜಾಸಕ್ತಿಯನ್ನು ತಣಿಸಬಲ್ಲಂಥ ತನ್ಮೂಲಕ ಅವರನ್ನು ಉತ್ತಮ ನಾಗರಿಕರನ್ನಾಗಿ ನಿರ್ಮಿಸುವಂಥ ಯಾವ ಯೋಜನೆಗಳನ್ನು ಇದುವರೆಗೂ ನಾವು ಕೈಗೊಂಡಿಲ್ಲ. ಆದ್ದರಿಂದ ಮಕ್ಕಳ ಸಾಂಸ್ಕೃತಿಕ, ಬೌದ್ಧಿಕ ಮಟ್ಟವನ್ನು ಎತ್ತರಿಸುವಂಥ ಯೋಜನೆಗಳನ್ನು ರೂಪಿಸಲು "ಮಕ್ಕಳ ಅಕಾಡೆಮಿ"ಯೊಂದನ್ನು ಪ್ರಾರಂಭಿಸಬೇಕು. ಇಲ್ಲಿ ನಮಗೆ ದಕ್ಕಿರುವ ಅಕ್ಷರ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಹೀಗೆ ಎಲ್ಲ ಮಾಧ್ಯಮಗಳನ್ನು ಬಳಸಿಕೊಂಡು ಮಕ್ಕಳಿಗಾಗಿ ಅರ್ಥಪೂರ್ಣ ಕಾರ್ಯಕ್ರಮಗಳು ನಡೆಸಲು ಸಾಧ್ಯವಾಗಬೇಕು. ಮಕ್ಕಳಿಗಾಗಿ ದೊಡ್ಡವರು ಒಂದ್ನಾಲ್ಕು ಪುಸ್ತಕ ಬರೆದು, ಒಂದಷ್ಟು ಕಾರ್ಟೂನ್ ಷೋ, ಬಾಲಚಿತ್ರಗಳನ್ನು ತೆಗೆದರೆ ಎಲ್ಲವೂ ಮಾಡಿದಂತಾಗುವುದಿಲ್ಲ. ಮಕ್ಕಳಿಗಾಗಿಯೇ ಒಂದು ಇಡೀ ಅಕಾಡೆಮಿ ಕಾರ್ಯನಿರತ ವಾದರೆ ಅಲ್ಲಿ ಬಹಳಷ್ಟನ್ನು ಸಾಧಿಸಬಹುದು. ಬದಲಾಗುತ್ತಿರುವ ಸಂದರ್ಭಗಳಿಗೆ ತಕ್ಕಂತೆ ಹೊಸ ಸವಾಲುಗಳಿಗೆ ಒಡ್ಡಿಕೊಂಡು ತರಹೇವಾರಿ ಚಟುವಟಿಕೆಗಳನ್ನು ನಡೆಸಬಹುದು. ಮಕ್ಕಳಿಗಾಗಿ ಮಕ್ಕಳೆ ನಡೆಸುವಂತಹ ರೂಪಿಸುವಂಥ, ಕಮ್ಮಟ, ಕಾರ್ಯಾಗಾರ, ವಿಚಾರ ಸಂಕಿರಣ, ಸೃಜನಶೀಲ ರಚನೆಗಳನ್ನು ಪ್ರದರ್ಶಿಸುವಂಥ ಯೋಜನೆಗಳನ್ನು ರೂಪಿಸಬೇಕು. ಸರಕಾರ ಈ ಕುರಿತು ಸಕಾರಾತ್ಮಕ ಹೆಜ್ಜೆ ಇಡಬೇಕು.

೩. ಶಿಕ್ಷಣ ರಂಗ :- ಕನ್ನಡ ಮಾಧ್ಯಮವು ಪ್ರೌಢಮಟ್ಟದವರೆಗೆ ಕಡ್ಡಾಯವಾಗಬೇಕು. ಸಮಾನ ಶಿಕ್ಷಣ ನೀತಿ ಜಾರಿಯಾಗಬೇಕಲ್ಲದೆ, ೧೯೮೯ರ ಕನ್ನಡ ಮಾಧ್ಯಮದ ತಡೆಯಾಜ್ಞೆಯನ್ನು ಕೂಡಲೇ ತೆರವುಗೊಳಿಸಬೇಕು. ತುರ್ತಾಗಿ ಆಗಬೇಕಾಗಿರುವ ಕೆಲಸವೆಂದರೆ ಸರಕಾರಿ ಕನ್ನಡ ಮಾಧ್ಯಮ ಶಾಲೆಗಳ ಮಟ್ಟ ಸುಧಾರಿಸುವುದು. ಅದರೊಟ್ಟಿಗೆ ಆಂಗ್ಲ ಮಾಧ್ಯಮ ಶಾಲೆಗಳಿಗೆ ಹಸಿರು ನಿಶಾನೆ ತೋರಿಸುವುದನ್ನು ತಕ್ಷಣ ನಿಲ್ಲಿಸಬೇಕು. ಹಾಗೆಯೇ ಕನ್ನಡ ಬೋರ್ಡ್ ಹಾಕಿ ಒಳಗೆ ಇಂಗ್ಲಿಷ್ ಕಲಿಸುವ ಶಾಲೆಗಳನ್ನು ಮುಚ್ಚಿಸಬೇಕು ಮತ್ತು ನಮ್ಮ ನಾಡಿನಲ್ಲಿರುವ ಕೇಂದ್ರೀಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಕಡ್ಡಾಯ ಮಾಡಬೇಕು.

ವಂತಿಗೆ ಸಂಗ್ರಹಿಸುತ್ತಿರುವ ಶಾಲಾ, ಕಾಲೇಜುಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಸರಕಾರ ಸುಮ್ಮನೆ ಬೊಬ್ಬೆ ಹಾಕಿದರೆ ಸಾಲದು. ಈಗೀಗ ಶಾಲಾ ಸುಧಾರಣಾ ನೆಪದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಖುಲ್ಲಂಖುಲ್ಲಾ ಡೊನೇಷನ್ ವಸೂಲಿ ಮೂಲಕ ಹಗಲು ದರೋಡೆ ನಡೆಸುತ್ತಿವೆ. ಪ್ರತಿವರ್ಷ ಶಾಲೆಗಳು ಪ್ರಾರಂಭವಾಗುವ ಅವಧಿಯಲ್ಲಿ ಅಧಿಕಾರಿಗಳು ವಂತಿಗೆ ಸಂಗ್ರಹವು ಶಿಕ್ಷಾರ್ಹ ಎಂದು ಹೇಳಿಕೆಯನ್ನು ನೀಡಿಯೇ ನೀಡುತ್ತಾರೆ. ಖಾಸಗಿ ಸಂಸ್ಥೆಗಳು ಸರಕಾರದ ಆದೇಶಕ್ಕೆ ಕವಡೆ ಕಿಮತ್ತೂ ನೀಡುವುದಿಲ್ಲ. ಎಲ್ಲಕಿಂತ ಆಘಾತವೆಂದರೆ ಈ ನಡುವೆ ಸರಕಾರಿ ಶಾಲೆಗಳಲ್ಲೂ ಮೆಲ್ಲನೆ ವಂತಿಗೆ ಪಿಡುಗು ತಲೆ ಎತ್ತುತ್ತಿರುವುದು. ಇದೆಲ್ಲವನ್ನು ಕಂಡೂ ಸರಕಾರ ಪಲಾಯನವಾದಿ ಧೋರಣೆ ತಳೆಯಬಾರದು. ಪ್ರಾಥಮಿಕ, ಪ್ರೌಢ ಮಟ್ಟದಲ್ಲಿ ರಾಜ್ಯದೆಲ್ಲೆಡೆ ವ್ಯಾಪಕವಾಗಿರುವ ವಂತಿಗೆ ಹಾವಳಿ ನಿಲ್ಲಿಸಲು ಸರಕಾರ ಉಗ್ರಕ್ರಮ ಕೈಗೊಳ್ಳಬೇಕು.

ಇದೇ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಬ್ಬುತ್ತಿರುವ ಮತೀಯವಾದ ಕುರಿತು ಎಚ್ಚರಿಕೆ ನೀಡುವುದು ತುಂಬ ಅವಶ್ಯಕವೆಂದು ನಾನಾದರೂ ಭಾವಿಸುತ್ತೇನೆ. ನೈತಿಕ ಶಿಕ್ಷಣದ ನೆಪದಲ್ಲಿ, ವ್ಯಕ್ತಿತ್ವ ವಿಕಾಸದ ನೆಪದಲ್ಲಿ ವಿದ್ಯಾರ್ಥಿಗಳಲ್ಲಿ ಮತೀಯ ಭಾವನೆ ತುಂಬಲಾಗುತ್ತಿದೆ. ಇದು ತುಂಬಾ ಅಪಾಯಕಾರಿ. ಕಲಿಕಾ ಪ್ರಕ್ರಿಯೆಯಲ್ಲಿ ಶುದ್ಧ ಜ್ಞಾನ, ವಿಷಯ ವಸ್ತು ಕಲಿಸಬೇಕೇ ಹೊರತು ಯಾವುದೇ ನಿರ್ದಿಷ್ಟ ಮತ, ಪಂಥಗಳ ಕ್ರಿಯಾಚರಣೆ ಅಥವಾ ಕೋಮು ಭಾವನೆ ಪ್ರಚೋದಿಸುವ ಅಂಶಗಳನ್ನು ಕಲಿಸಲು ಅವಕಾಶ ಕೊಡಬಾರದು. ಪಠ್ಯಕ್ರಮ, ಪಠ್ಯಪುಸ್ತಕ ಸಮಿತಿಗಳಲ್ಲಿ ಕೋಮುವಾದಿಗಳು, ಮೂಲಭೂತವಾದಿಗಳು ಸೇರ್ಪಡೆಯಾಗದಂತೆ ನಿಗಾ ವಹಿಸಬೇಕು. ತನ್ಮೂಲಕ ಇತಿಹಾಸ ತಿರುಚುವ ಹುನ್ನಾರವನ್ನು ತಡೆ ಹಿಡಿಯಬೇಕು.

೪. ವರದಿಗಳ ಅನುಷ್ಠಾನ :- ಗಡಿ ಸಮಸ್ಯೆ ಕುರಿತು ಮಹಾಜನ ವರದಿ, ಪ್ರಾದೇಶಿಕ ಅಸಮಾನತೆ ಕುರಿತು ನಂಜುಂಡಪ್ಪ ವರದಿಯನ್ನು ಸೂಕ್ತ ಬದಲಾವಣೆಯೊಂದಿಗೆ ಜಾರಿಗೊಳಿಸಬೇಕು. ಕನ್ನಡಿಗರಿಗೆ ಕೆಲಸದ ಅವಕಾಶ, ವೃತ್ತಿಕೋರ್ಸು ಗಳಲ್ಲಿ ಮೀಸಲಾತಿಗೆ ಸಂಬಂಧಪಟ್ಟಂತೆ ಮಹಿಷಿ ವರದಿಯನ್ನು ಕೈಗೆತ್ತಿಕೊಳ್ಳಬೇಕು.

ಇತ್ತೀಚೆಗೆ ಐ.ಟಿ. ಕ್ಷೇತ್ರದ ಮಲ್ಟಿ ನ್ಯಾಷನಲ್ ಕಂಪನಿಗಳು ಕೆಲಸಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಸುತರಾಂ ಇಲ್ಲ ಎಂದು ಹೇಳಿರುವುದು ಉದ್ಧಟತನದ ಪರಮಾವಧಿ. ಕನ್ನಡದ ನೆಲ, ನೀರು, ಇತರ ಸಂಪನ್ಮೂಲಗಳನ್ನು ಬಳಸಿಕೊಂಡು ಕನ್ನಡಿಗರನ್ನೆ ಅಲಕ್ಷಿಸುತ್ತಿರುವ ಇಂಥ ಕಂಪನಿಗಳಿಗೆ ಮಣೆ ಹಾಕುವುದನ್ನು ಸರಕಾರ ನಿಲ್ಲಿಸಬೇಕು. ಸರಕಾರದ ಇಬ್ಬಗೆಯ ನೀತಿಯ ವಿರುದ್ಧವೂ ಕನ್ನಡಿಗರು ಜಾಗೃತರಾಗಬೇಕು.

೫. ಶಾಸ್ತ್ರೀಯ ಭಾಷಾ ದರ್ಜೆ :– ಎರಡು ಸಾವಿರಕ್ಕೂ ಮಿಕ್ಕು ದೀರ್ಘ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷಾ ದರ್ಜೆಗೇರಿಸಬೇಕು. ಭಾರತ ಸಂವಿಧಾನವು ಒಪ್ಪಿಕೊಂಡಿರುವ ಎಲ್ಲ ರಾಷ್ಟ್ರೀಯ ಭಾಷೆಗಳನ್ನು ಶಾಸ್ತ್ರೀಯ ದರ್ಜೆಗೇರಿಸುವ ಮೂಲಕ ಭಾಷಾ ಸಮಾನತೆ ಎತ್ತಿ ಹಿಡಿಯಬೇಕು. ಅರ್ಥಾತ್ ಎಲ್ಲ ಭಾಷೆಗಳ ಬೆಳವಣಿಗೆಗೆ ಬೇಕಾಗುವ ಸವಲತ್ತುಗಳನ್ನು ಒದಗಿಸಬೇಕು. ಭಾಷೆಗಳಲ್ಲಿ ಅಶುದ್ಧ, ಅಶಾಸ್ತ್ರೀಯ ಎಂಬ ಪರಿವ್ಯಾಖ್ಯಾನವೇ ತಪ್ಪು. ಪ್ರತಿಯೊಂದು ಭಾಷೆ ಮತ್ತು ಸಂಸ್ಕೃತಿಗೆ ತನ್ನದೆ ಸ್ವಾಯತ್ತ ಅಸ್ತಿತ್ವ ಇರುತ್ತದೆ. ಹೀಗಿರುವಾಗಲೂ ಕೆಲವೊಂದು ಭಾಷೆಗಳಿಗೆ ಶಾಸ್ತ್ರೀಯುವೆಂದು ಪಟ್ಟಕಟ್ಟುವ ಮೂಲಕ ವೈಭವೀಕರಿಸುವುದು ಕೂಡಾ ರಾಜಕೀಯ ಪ್ರೇರಿತ ಲಾಬಿಯೇ ಆಗಿರುತ್ತದೆ. ಕೇಂದ್ರ ಸರಕಾರವು ತಮಿಳು ಭಾಷೆಯನ್ನು "ಅಭಿಜಾತ ಸಾಹಿತ್ಯ" (Classical Language) ಎಂದು ಮಾನ್ಯ ಮಾಡಿತು. ಅದರ ಪರಿಣಾಮವಾಗಿ ಭಾರತದ ಹಲವು ವಿಶ್ವವಿದ್ಯಾಲಯಗಳಲ್ಲಿ ತಮಿಳು ಅಧ್ಯಯನ ಪೀಠಗಳು ಆರಂಭವಾದವು. ಆದರೆ ತಮಿಳಿನಷ್ಟೇ ಶ್ರೀಮಂತವಾದ ಕನ್ನಡ ಭಾಷೆಗೆ ಆ ಸ್ಥಾನಮಾನ ಸಿಗಲಿಲ್ಲ. ಕೇಂದ್ರದಲ್ಲಿ ನಮ್ಮ ಪ್ರತಿನಿಧಿಗಳಾಗಿರುವ ಲೋಕಸಭೆಯ ಮತ್ತು ರಾಜ್ಯಸಭೆಯ ಸದಸ್ಯರು ಇದಕ್ಕಾಗಿ ಯಾವುದೇ ಹೋರಾಟವನ್ನು ಮಾಡಲಿಲ್ಲ. ಕೇಂದ್ರದ ಯೋಜನಾ ಸಚಿವರಾದ ಶ್ರೀ ಎಂ.ವಿ.ರಾಜಶೇಖರನ್ ಅವರ ಪ್ರಯತ್ನಕ್ಕೆ ನಮ್ಮ ಸಂಸದರು ಬೆಂಬಲ ಸೂಚಿಸಿ ಹೋರಾಟ ಮಾಡಿದ್ದರೆ ಕನ್ನಡಕ್ಕೆ ಆ ಸ್ಥಾನಮಾನ ಬರಬಹುದಿತ್ತು. ನಮ್ಮವರ ದಿವ್ಯ ನಿರ್ಲಕ್ಷ ದಿಂದಾಗಿ ಇಂದಿಗೆ ಇಡೀ ಉತ್ತರ ಭಾರತದಲ್ಲಿ ಒಂದೇ ಒಂದು ವಿಶ್ವವಿದ್ಯಾಲಯವು ಕೂಡಾ ಕನ್ನಡದ ಬಗ್ಗೆ ಸಂಶೋಧನಾ ಅಧ್ಯಯನ ನಡೆಸಲಾಗದ ಸ್ಥಿತಿಗೆ ಬಂದಿದೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಆರಂಭವಾಗಿದ್ದ ಕನ್ನಡ ಪೀಠವು ಕೂಡಾ ಇಂದು ಮುಚ್ಚಿಹೋಗಿದೆ. ಬಾಂಬೆ, ಮದ್ರಾಸ್, ಹೈದ್ರಾಬಾದ್ ಮುಂತಾದ ಕಡೆಗಳಲ್ಲಿರುವ ಕನ್ನಡ ಪೀಠಗಳು ಮುಚ್ಚುವ ಹಂತದಲ್ಲಿವೆ. ಆದ್ದರಿಂದ ಕನ್ನಡದ ಪ್ರಜ್ಞಾವಂತ ಜನತೆ ಜನಪ್ರತಿನಿಧಿಗಳನ್ನು ಎಚ್ಚರಗೊಳಿಸಬೇಕಿದೆ. ಕನ್ನಡ ಭಾಷೆಯನ್ನು "ಶಾಸ್ತ್ರೀಯ ಸಾಹಿತ್ಯ"ದ ದರ್ಜೆಗೇರಿಸುವ ಮೂಲಕ ದೊರೆಯಬೇಕಾದ ಎಲ್ಲ ಸೌಲಭ್ಯಗಳನ್ನು ಕೊಡಮಾಡುವಂತೆ ಒತ್ತಾಯ ತರಬೇಕು. ಗುರಿ ಮುಟ್ಟುವವರೆಗೂ ನಾವೆಲ್ಲ ಒಕ್ಕೊರಲಿನ ಹೋರಾಟ ಮಾಡಬೇಕು.

೬. ಪ್ರಾಥಮಿಕ ಸೌಲಭ್ಯಗಳು :– ಒಟ್ಟು ಜನತೆಯನ್ನು ಅನುಲಕ್ಷಿಸಿ ಹೇಳುವುದಾದರೆ ರಾಜ್ಯದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬರಿಗೂ ಅನ್ನ, ಅಕ್ಷರ, ಉದ್ಯೋಗ, ಆರೋಗ್ಯ,

ಧಾರ್ಮಿಕ ಸ್ವಾತಂತ್ರ್ಯ ದೊರೆಯಬೇಕು. ವ್ಯಕ್ತಿ ಗೌರವ ದಕ್ಕುವಂಥ ಪಾಲಿಸಿ ರೂಪಿಸಬೇಕು. ಜಾಗತೀಕರಣದ ಹಾವಳಿಯಲ್ಲಿ ಸಾಮಾಜಿಕ ನ್ಯಾಯ ವ್ಯವಸ್ಥೆ ಹಾಳಾಗದಂತೆ ನಿಗಾ ವಹಿಸಬೇಕು. ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ, ಮಹಿಳೆಯರಿಗೆ ಮೀಸಲಾತಿ ಇರುವಂತೆ ನೋಡಿಕೊಳ್ಳಬೇಕು. ಓಟು ಬ್ಯಾಂಕ್ ರಾಜಕಾರಣ ಸಾಕು. ರಾಜಕೀಯ ಪಕ್ಷಗಳು ಸಂಕುಚಿತ ಸ್ವಾರ್ಥ, ಅಧಿಕಾರ ದಾಹಗಳನ್ನು ತುಸುವಾದರೂ ಬದಿಗೊತ್ತಿ ಜನಪರ, ಜೀವಪರ, ಪರಿಸರಪರ ಕಾಳಜಿಯನ್ನು ಮೈಗೂಡಿಸಿಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಶಾಸಕಾಂಗವೇ ಸರ್ವೋಚ್ಚ ಎಂಬುದನ್ನು ನಮ್ಮ ನೇತಾರರು ತಮ್ಮ ನಡೆ ಮತ್ತು ಸಾಧನೆಗಳ ಮೂಲಕ ಎತ್ತಿ ಹಿಡಿಯಬೇಕು.

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ, ಪೂರ್ವಪ್ರಾಥಮಿಕದಿಂದ ಪದವಿ ಮಟ್ಟ, ಸ್ನಾತಕೋತ್ತರವರೆಗೆ ಎಲ್ಲ ವಿಧದ ಪದವಿಗಳು ಕಡಿಮೆ ಶುಲ್ಕದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಜಾಗತೀಕರಣದ ಅನಿಷ್ಟ ಒತ್ತಡಕ್ಕೆ ಒಳಗಾಗಿ ಸರಕಾರ ಪೂರ್ವಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ನೀಡುವ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಕೇವಲ ಆರು ವರ್ಷದಿಂದ ಹದಿನಾಲ್ಕು ವರ್ಷದವರೆಗೆ ಮಾತ್ರ ಶಿಕ್ಷಣ ನೀಡುವುದು ತನ್ನ ಹೊಣೆಗಾರಿಗೆ ಎನ್ನುತ್ತಿದೆ. ಇದು ಖಂಡನಾರ್ಹ. ಸಮಗ್ರ ಶಿಕ್ಷಣ ಒಂದು ಸಾವಯವ ಘಟಕವಾಗಿರುತ್ತದೆ. ಇದರಲ್ಲಿ ತುಂಡು ಮಾಡುವುದು ಅವೈಜ್ಞಾನಿಕ. ಅಷ್ಟೇ ಅಲ್ಲ ಸಮಗ್ರ ಅಭಿವೃದ್ಧಿಗೆ ಕಂಟಕವೂ ಆಗಿ ಪರಿಣಮಿಸುತ್ತದೆ. ಆದ್ದರಿಂದ ಒಟ್ಟು ಶಿಕ್ಷಣ ನೀಡುವುದನ್ನು ಸರಕಾರ ಆದ್ಯತೆಯಾಗಿಸಿ ಕೊಳ್ಳತಕ್ಕದ್ದು. ಕಾಮೇಡ್‌ಕೆ, ಸಿ.ಇ.ಟಿ. ಗೊಂದಲಕ್ಕೆ ಶಾಶ್ವತ ಪರಿಹಾರ ಕಂಡು ಕೊಳ್ಳಬೇಕು. ವಿದ್ಯಾರ್ಥಿಗಳು ಓದಲು ಅವಕಾಶ ಇಲ್ಲದ್ದಕ್ಕಾಗಿ ಆತ್ಮಹತ್ಯೆಗಿಳಿಯುವಂಥ ವಾತಾವರಣ ಕಲ್ಪಸುತ್ತಿರುವ ನೀತಿಯನ್ನು ಬಿಡಬೇಕು. ಜಾಗತಿಕ ಆರ್ಥಿಕ ನೀತಿಗಳೊಂದಿಗೆ ಹೆಜ್ಜೆ ಹಾಕುವ ಭರದಲ್ಲಿ ಆಂತರಿಕ ವ್ಯವಸ್ಥೆ ಹದಗೆಡುತ್ತಿರುವುದನ್ನು ಲಕ್ಷಿಸಬೇಕು. ಈ ದಿಸೆಯಲ್ಲಿ ಜನಮುಖಿ ಆರ್ಥಿಕ ನೀತಿಯನ್ನು ಕಟ್ಟಿಕೊಳ್ಳಬೇಕು. ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಿಗೆ ನೀಡುವ ಸಬ್ಸಿಡಿ ಕುರಿತಂತೆ ನಮ್ಮದೆ ನೀತಿಗಳನ್ನು ರೂಪಿಸಬೇಕಲ್ಲದೆ ಆಯ್.ಎಂ.ಎಫ್., ವರ್ಲ್ಡ್ ಬ್ಯಾಂಕುಗಳ ಮೂಗಿನ ನೇರಕ್ಕೆ ಕುಣಿಯಬಾರದು. ಇದಕ್ಕೆ ರಾಜಕೀಯ ಇಚ್ಛಾಶಕ್ತಿ; ಅಂದರೆ ಜನಪರ ಕಾಳಜಿ ಮತ್ತು ದೃಷ್ಟಿ, ಧೋರಣೆ ಇರಬೇಕು. ವಿದ್ಯಾರ್ಥಿಗಳಲ್ಲಿ ಅವೈಜ್ಞಾನಿಕ ಮನೋಭಾವ ಬೆಳೆಸುವುದು ಅಕ್ಷಮ್ಯ ಅಪರಾಧ. ಸಮಾಜಮುಖಿ ಕಾಯಕಶೀಲತೆ, ಧೀರತ್ವಗಳನ್ನು ಬೆಳೆಸುವ ಮೂಲಕ ನಾಗರೀಕರನ್ನು ಪ್ರಜ್ಞಾವಂತರಾಗಿ ಮಾಡಬೇಕು.

೭. ಪ್ರಾದೇಶಿಕ ರಂಗಭೂಮಿ :- ಕೇಂದ್ರ ಸರಕಾರ ಪ್ರಾದೇಶಿಕ ರಂಗಭೂಮಿಯನ್ನು ಅಲಕ್ಷಿಸುತ್ತಿದೆ. ದೇಶಕ್ಕೆ ಒಂದೇ ಒಂದು ರಾಷ್ಟ್ರೀಯ ಶಾಲೆ, ಅದು ಹಿಂದಿ ಭಾಷಿಕರ ರಂಗಶಾಲೆಯಾಗಿದೆ. ಹಿಂದಿ ಬಾರದ ದಕ್ಷಿಣ ರಾಜ್ಯದ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶವಿಲ್ಲ. ಇದು ಪರಮ ಅನ್ಯಾಯ. ರಂಗಭೂಮಿಯಂಥ ಸಾಂಸ್ಕೃತಿಕ ರಂಗದಲ್ಲೂ ಹಿಂದಿ ಹೇರಿಕೆ ಸಲ್ಲದು. ಆದ್ದರಿಂದ ಪ್ರತಿ ರಾಜ್ಯದಲ್ಲಿ

ಆಯಾ ಪ್ರಾದೇಶಿಕ ಭಾಷೆಗಳಲ್ಲಿ ನಾಟಕ ಶಾಲೆಗಳನ್ನು ಆರಂಭಿಸಿ ಎನ್.ಎಸ್.ಡಿ.ಗೆ (ರಾಷ್ಟ್ರೀಯ ನಾಟಕ ಶಾಲೆ) ನೀಡಿರುವಂತೆಯೇ ಸವಲತ್ತು ಮತ್ತು ಹಣಕಾಸು ನೆರವನ್ನು ನೀಡಬೇಕು. ಈ ಯೋಜನೆಯ ಪ್ರಾರಂಭ ಕರ್ನಾಟಕದಿಂದ ಸುರುವಾಗಲಿ. ನಮ್ಮ ಸರಕಾರ ಕೇಂದ್ರದ ಮೇಲೆ ಒತ್ತಡ ತಂದು ಸ್ಥಳೀಯ ನಾಟಕ ಶಾಲೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಿ.

೮. ಸ್ವಾಯತ್ತ ಸಂಸ್ಥೆಗಳು :– ಸರಕಾರವು ರಾಜ್ಯದಲ್ಲಿರುವ ವಿವಿಧ ಅಕಾಡೆಮಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಗ್ರಂಥಾಲಯ ಸಮಿತಿ ಮುಂತಾದ ಸ್ವಾಯತ್ತ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡಿ ಅವು ಪರಿಣಾಮಕಾರಿಯಾಗಿ ಮತ್ತು ಗುಣಾತ್ಮಕವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ಅಷ್ಟೇ ಅಲ್ಲ ಅಕಾಡೆಮಿಗಳು ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ವಿವಿಧ ಜಿಲ್ಲೆಗಳಲ್ಲಿ ವಿಕೇಂದ್ರೀಕರಣಗೊಂಡು ಕಾರ್ಯ ನಿರ್ವಹಿಸುವಂತಾಗಬೇಕು. ಈ ಸಂಸ್ಥೆಗಳಾದರೂ ರಾಜಧಾನಿ ಕೇಂದ್ರಿತ ಕಾರ್ಯಕ್ರಮಗಳನ್ನು ಮೊಟಕುಗೊಳಿಸಿ ಪ್ರತಿಹಳ್ಳಿ, ಪ್ರತಿ ವ್ಯಕ್ತಿಗೂ ಕಾರ್ಯಕ್ರಮಗಳನ್ನು ಮುಟ್ಟಿಸಬೇಕು. ಇಲ್ಲಿ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಅಲಕ್ಷಿತರು ಹೆಚ್ಚೆಚ್ಚು ತೊಡಗುವಂತೆ ನಿಗಾ ವಹಿಸಬೇಕು. ಈ ಮೇಲಿನ ಎಲ್ಲ ಅಕಾಡೆಮಿಗಳು ಗಡಿಭಾಗಗಳಲ್ಲಿ ವಿಶೇಷ ಮುತುವರ್ಜಿ ವಹಿಸಿ ಕಾರ್ಯಕ್ರಮ ನಡೆಸುವ ಮೂಲಕ ಆ ಜನತೆಯಲ್ಲಿ ನಾಡು–ನುಡಿಯ ಪ್ರೇಮ ಗಟ್ಟಿಗೊಳ್ಳುವಂತೆ ಮಾಡಬೇಕು. ಈ ತೆರನ ಸಾಂಸ್ಕೃತಿಕ ಐಡೆಂಟಿಟಿಯನ್ನು ತಾಜಾಗೊಳಿಸುವ ಮೂಲಕವೇ ಅವರಲ್ಲಿ ಆವರಿಸಿಕೊಂಡಿರುವ ಅನಾಥ ಪ್ರಜ್ಞೆ, ಅಭದ್ರತೆಯನ್ನು ಹೋಗಲಾಡಿಸಬೇಕು.

ಸುವರ್ಣ ಕರ್ನಾಟಕ :

> "ನೀರು ನೆಲ ಗಡಿ ಹಸಿವು ಸಾವು ನೂರಾರು ಸಮಸ್ಯೆಯ ಸುಳಿಗಳಲ್ಲಿ
> ಈಗ ಸುವರ್ಣ ಕರ್ನಾಟಕವೆಂಬ ಕನ್ಯೆ ಕುಣಿಯುತ್ತಿದ್ದಾಳೆ ಲಜ್ಜೆಯ ತೊರೆದು"

ಸುವರ್ಣ ಕರ್ನಾಟಕ ಆಚರಣೆಯ ಈ ಸಂದರ್ಭದಲ್ಲಿ, ಜರುಗುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಿರುವಾಗ ನನ್ನೊಳಗೆ ಥಟ್ಟನೆ ಈ ಮೇಲಿನ ದ್ವಿಪದಿ ಕಟ್ಟಿಕೊಂಡಿತು.

ಅಸಂಖ್ಯ ಕನ್ನಡಿಗರ ಪ್ರಯತ್ನ ಮತ್ತು ಹೋರಾಟದ ಫಲವಾಗಿ ಭಾರತ ಸರ್ಕಾರವು ೧–೧೧–೧೯೫೬ ರಂದು ಅಖಂಡ ಕರ್ನಾಟಕದ ಸ್ಥಾಪನೆಗೆ ಒಪ್ಪಿಗೆ ನೀಡಿತು. ಆಗ ಅದು ಮೈಸೂರು ರಾಜ್ಯವೆಂದೆ ನಾಮಾಂಕಿತವಾಯಿತು. ಈ ಮೈಸೂರು ರಾಜ್ಯವೆಂಬ ಹೆಸರನ್ನು ಬದಲಾಯಿಸಿ ಕರ್ನಾಟಕವೆಂದು ಪುನರ್ ನಾಮಾಂಕಿತವಾಗಲು ಕೂಡಾ ಸಾಕಷ್ಟು ಹೋರಾಡಬೇಕಾಯಿತು. ಅದು ಒಂದರ್ಥದಲ್ಲಿ ಮೈಸೂರು ಪ್ರಾಂತದವರಿಗೂ ಮತ್ತು ಕರ್ನಾಟಕದ ಇತರ ಪ್ರಾಂತದವರಿಗೂ ನಡೆದ ಜಟಾಪಟಿ ಎನ್ನುವಂತೆಯೇ ಇತ್ತು. ಕೊನೆಗೂ

೧-೧೧-೧೯೭೩ ರಂದು ಆಗಿನ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರ ಪ್ರಬಲ ಇಚ್ಛಾಶಕ್ತಿಯಿಂದಾಗಿ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಲಾಯಿತು. ಈಗ ಅಖಂಡ ಕರ್ನಾಟಕದ ರಚನೆಯಾಗಿ ೫೦ ವರ್ಷಗಳು ಸಂದುತ್ತಿರುವುದರ ನೆನಪಿಗಾಗಿ ಬಂಗಾರದ ಹಬ್ಬ ಆಚರಿಸಬೇಕೆಂಬುದು ನಮ್ಮೆಲ್ಲರ ಅಭೀಪ್ಸೆ. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಸದಿಚ್ಛೆ. ಈ ಕುರಿತು ಪ್ರಸ್ತುತ ಸರ್ಕಾರ ಕನ್ನಡದ ಬುದ್ಧಿಜೀವಿಗಳನ್ನು, ಮುತ್ಸದ್ದಿ ರಾಜಕಾರಣಿಗಳನ್ನು ಸೇರಿಸಿಕೊಂಡು ಉನ್ನತ ಸಭೆಯನ್ನು ನಡೆಸಿದೆ. ಭವ್ಯ ಕರ್ನಾಟಕದ ಪರಂಪರೆಯನ್ನು ನೆನಪಿಸಿಕೊಳ್ಳುವ ದಿಶೆಯಲ್ಲಿ ಹತ್ತಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಇದಕ್ಕಾಗಿ ಸಾಕಷ್ಟು ಹಣವನ್ನು ಸರ್ಕಾರ ವಿನಿಯೋಗಿಸಲು ಸಿದ್ಧವಾಗಿದೆ.

ಇದೇ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ಆಚರಣೆ ಕುರಿತಂತೆ ನಾಡಿನಾದ್ಯಂತ ಅನೇಕ ಅಪಸ್ವರಗಳು ಕೇಳಿಬರುತ್ತಿವೆ. ಸಾಹಿತಿ-ಬುದ್ಧಿಜೀವಿಗಳಲ್ಲಿ ಗೊಂದಲಗಳು ಕೂಡಾ ಸೃಷ್ಟಿಯಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಇಂತಹ ಕಾರ್ಯಕ್ರಮಗಳನ್ನು ನಡೆಸುವ ಸರ್ಕಾರಕ್ಕೆ ಭಾಷೆ-ಸಂಸ್ಕೃತಿ- ಅಭಿವೃದ್ಧಿ ಕುರಿತಂತೆ ಸ್ಪಷ್ಟವಾದ ಗ್ರಹಿಕೆಗಳೇ ಇಲ್ಲದಿರುವುದು ವಿಷಾದನೀಯ ಸಂಗತಿ. ಏಕೆಂದರೆ, ಯಾವುದೇ ರಾಷ್ಟ್ರೀಯ ಮಹೋತ್ಸವಗಳು ಕೆಲವೊಂದು ಸಭೆ ಸಮಾರಂಭಗಳನ್ನು ನಡೆಸುವುದರ ಮೂಲಕ ಆಳರಸರ ವೈಭವಗಳಲ್ಲಿ ಕಳೆದುಹೋಗುವುದೇ ಹೆಚ್ಚು. ಇಂತಹ ಕಾರ್ಯಕ್ರಮಗಳು ಸಾರ್ವಜನಿಕ ಹಣದ ದುಂದು ವೆಚ್ಚವಲ್ಲದೆ ಬೇರೆ ಏನೂ ಅಲ್ಲ.

ನಾಡು-ನುಡಿಗಳ ಅಭಿಮಾನಗಳ ಹೆಸರಿನಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಸಾಂಸ್ಕೃತಿಕ ಲೋಕದ ದಿಗ್ಗಜರು ಜನತೆಯ ಮೂಗಿಗೆ ತುಪ್ಪ ಒರೆಸಿ ಹಣ ಲೂಟಿ ಮಾಡುವುದು ಸರ್ವಥಾ ಸಲ್ಲದು. ಹೀಗೆಂದು ಇಂತಹ ಸಾಂಸ್ಕೃತಿಕ ಉತ್ಸವಗಳು ನಡೆಸಬಾರದೆಂದೇನೂ ಅಲ್ಲ. ಹಾಗೆ ನೋಡಿದರೆ ಜಾತಿ-ಮತ-ಪಂಥಗಳ ಸಂಕುಚಿತತೆಯನ್ನು ಮೀರಿ ಅಖಂಡ ಕರ್ನಾಟಕದ ಜನತೆ ತಾವೆಲ್ಲ ಒಂದೇ ಎಂಬ ಅನುಭವವನ್ನು ಮೆಲುಕು ಹಾಕಲು ಇಂತಹ ಕಾರ್ಯಕ್ರಮಗಳು ತುಂಬ ಅವಶ್ಯ ಮತ್ತು ಅನಿವಾರ್ಯ. ಕನ್ನಡಿಗರು ಬದುಕನ್ನು ಅರಸಲೆಂದು ಯಾವುಯಾವುದೋ ವ್ಯವಹಾರಗಳಲ್ಲಿ ಕಳೆದು ಹೋಗುತ್ತಿರುವ ಈ ಹೊತ್ತಿನಲ್ಲಿ ಕನ್ನಡಿಗರನ್ನು ಒಂದು ಭಾವತಂತುವಿನಲ್ಲಿ ಒಂದುಗೂಡಿಸುವ ಜರೂರಿ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಹೊರನಾಡ ಕನ್ನಡಿಗರು, ಗಡಿನಾಡ ಕನ್ನಡಿಗರು, ಹೊರದೇಶದ ಕನ್ನಡಿಗರು ಮತ್ತು ಕರ್ನಾಟಕದೊಳಗಿನ ಕನ್ನಡೇತರರು ಇವರೆಲ್ಲರೂ ಕನ್ನಡವನ್ನು ಜೀವತಂತುವಾಗಿ ತಮ್ಮ ತಮ್ಮ ಭಾವಲೋಕಕ್ಕೆ ಹೆಣೆದುಕೊಳ್ಳುವ ಅವಶ್ಯಕತೆಯೂ ಇದೆ. ಈ ದಿಶೆಯಲ್ಲಿ "ಸುವರ್ಣ ಕರ್ನಾಟಕ' ಆಚರಣೆಯು ತುಂಬಾ ವ್ಯಾಪಕವಾಗಿ ಮತ್ತು ಜೀವನ್ಮುಖಿಯಾಗಿ ಹೊರಹೊಮ್ಮಬೇಕಾಗಿದೆ.

ಸುವರ್ಣ ಕರ್ನಾಟಕದ ಕೊಡುಗೆಯಾಗಿ ಈ ಕೆಳಗಿನ ಅಂಶಗಳ ಬಗ್ಗೆ ಗಂಭೀರ ಚಿಂತನೆ ಮತ್ತು ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ನಿರೀಕ್ಷಿಸೋಣ.

೧. ಕರ್ನಾಟಕದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಉಳಿಸಿ ಬೆಳೆಸುವ ದಿಶೆಯಲ್ಲಿ ಕಟ್ಟುನಿಟ್ಟಾದ ಶಾಸನಗಳನ್ನು ಜಾರಿಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ತೀವ್ರಗೊಳಿಸಬೇಕು.

೨. ಇಂದು ಸರ್ಕಾರದ ಎಲ್ಲ ವಲಯಗಳು ಕಂಪ್ಯೂಟರೀಕರಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಎಲ್ಲ ಇಲಾಖೆಗಳಿಗೂ ಅನ್ವಯವಾಗುವಂತಹ ಏಕರೂಪಿ ಗಣಕ ತಂತ್ರಾಂಶ ಜಾರಿಗೊಳಿಸುವುದು ಅತ್ಯಂತ ಅವಶ್ಯವಾಗಿದೆ.

೩. ಗಡಿಭಾಗಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಕಡ್ಡಾಯಗೊಳಿಸುವುದು ಮತ್ತು ಈಗಿರುವ ಶಾಲೆಗಳ ಗುಣಮಟ್ಟವನ್ನು ದೀಕ್ಷೆಕೊಟ್ಟು ಉನ್ನತೀಕರಿಸುವುದು.

೪. ಆಡಳಿತದಲ್ಲಿ ಕನ್ನಡ ಎಂಬ ಮಾತಿಗೆ ಅರ್ಥ ಬರಲು ಸರ್ಕಾರ ಮತ್ತು ಖಾಸಗಿ ಇಲಾಖೆಗಳಲ್ಲಿ ಕನ್ನಡದ ಸಂಪೂರ್ಣ ಬಳಕೆಗೆ ಉಗ್ರ ಕ್ರಮ ಕೈಗೊಂಡು 'ಸುವರ್ಣ ಕರ್ನಾಟಕ' ಎಂಬುದನ್ನು ಅರ್ಥಪೂರ್ಣಗೊಳಿಸಬೇಕು.

೫. 'ಸುವರ್ಣ ಕರ್ನಾಟಕ'ದ ನೆನಪಿನಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಸುಸಜ್ಜಿತ ರಂಗ ಸಮುಚ್ಚಯಗಳನ್ನು ನಿರ್ಮಿಸಿ ಕನ್ನಡ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸುವುದು.

೬. ಬಹುರಾಷ್ಟ್ರೀಯ ಮತ್ತು ಖಾಸಗಿ ಕಂಪನಿಗಳು ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ ನೀಡುವಂತೆ ಶಾಸನವನ್ನು ರೂಪಿಸುವ ಇಚ್ಛಾಶಕ್ತಿ ತೋರಿಸುವಂತಾದರೆ ಸುವರ್ಣ ಕರ್ನಾಟಕ ಯಶಸ್ವಿಯಾದಂತೆಯೇ ಸರಿ.

ಒಟ್ಟಿನಲ್ಲಿ ಸುವರ್ಣ ಕರ್ನಾಟಕಕ್ಕಾಗಿ ಮೀಸಲಿಟ್ಟ ಹಣವನ್ನು ದುರುಪಯೋಗವಾಗದಂತೆ ಕಟ್ಟೆಚ್ಚರ ವಹಿಸುವುದು. ಅಲ್ಲದೇ ಅಭಿವೃದ್ಧಿಪರ ಯೋಜನೆಗಳಲ್ಲಿ ತೊಡಗಿಸುವ ಮೂಲಕ ಸಾಮಾನ್ಯ ಜನತೆಯ ಜೀವನ ಮಟ್ಟವನ್ನು ಎತ್ತರಿಸುವುದಾದರೆ 'ಸುವರ್ಣ ಕರ್ನಾಟಕ'ವು ವಜ್ರಮಹೋತ್ಸವದ ಕಡೆಗೆ ದಾಪುಗಾಲಿಡುವುದರಲ್ಲಿ ಸಂಶಯವಿಲ್ಲ.

ಜಗವ ಬೆಳಗೋಣ


ಈ ಎಲ್ಲವುಗಳೊಂದಿಗೆ ಇನ್ನು ಹಲವು ಕೆಲಸಗಳಿವೆ. ಅವುಗಳನ್ನು ಮಾಡಲು ರಾಜಕೀಯ ಪ್ರಜ್ಞೆ ಮತ್ತು ಪ್ರಬಲ ಇಚ್ಛಾಶಕ್ತಿ ಬೇಕು. ಸಾಹಿತ್ಯ ಮತ್ತು ರಾಜಕಾರಣ ಪರಸ್ಪರ ಭಿನ್ನವಲ್ಲ. ಸಾಹಿತಿಯೊಬ್ಬ ರಾಜಕಾರಣದಿಂದ ದೂರವಿರುವುದು ಎಂದರೆ ಜೀವಂತ ಸಮಾಜಕ್ಕೆ ಮುಖಾಮುಖಿಯಾಗದೆ ಪಲಾಯನ ಮಾಡುವುದು ಎಂದೇ ಅರ್ಥ. ಸಾಹಿತಿ ತನ್ನ ಸುತ್ತಲಿನ ಬದುಕಿಗೆ ತೆರೆದ ಕಣ್ಣುಗಳಿಂದ ಸ್ಪಂದಿಸಬೇಕೆಂದರೆ ಆತ ಸಮಕಾಲೀನ ರಾಜಕಾರಣದೊಂದಿಗೆ ಅನುಸಂಧಾನಗೈಯಲೇಬೇಕು. ವಿಶಾಲವಾದ ಅರ್ಥದಲ್ಲಿ ರಾಜಕಾರಣವೆಂದರೇನೆ ಜನತೆಯ ಯೋಗಕ್ಷೇಮದ ಚಿಂತನೆಯಾಗಿದೆ. ಇನ್ನೂ ಈ ರಾಜ್ಯದಲ್ಲಿ ಪ್ರತಿಶತ ಅರ್ಧದಷ್ಟು ಜನರಿಗೆ ಅಕ್ಷರವೇ

ದಕ್ಕಿಲ್ಲ. ಹೀಗಿರುವಾಗ ನಾವು ಸಾಹಿತ್ಯ ಬರೆಯುವುದಾದರೂ ಯಾರಿಗೆ? ಕನ್ನಡ ಕವಿ ನೇಮಿಚಂದ್ರ "ಕಟ್ಟಿಯುಂ ಏನೋ ಮಾಲೆಗಾರ ಪೊಸ ಬಾಸಿಂಗಮಂ. ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದಪುದೆ?" ಎಂದು ಬಹು ಹಿಂದೆಯೇ ಕೇಳಿದ್ದಾನೆ. ಆದ್ದರಿಂದ ಸಾಹಿತಿಯಾದವನು ಮೊದಲು ಹೂ ಮುಡಿಯುವ ರಸಿಕರು ಅರ್ಥಾತ್ ಸಂತೃಪ್ತರನ್ನು ಸಿದ್ಧಪಡಿಸಬೇಕು. ಅನಂತರ ಬಾಸಿಂಗ, ಹಾರಗಳನ್ನು ಕಟ್ಟಬೇಕು. ಅಂದರೆ ಸಾಹಿತಿ ಜನತೆಯ ಜೀವನ ಮಟ್ಟ ಸುಧಾರಿಸುವ ದಿಶೆಯಲ್ಲಿ ತನ್ನ ಸೃಜನಶೀಲತೆಯನ್ನು ದುಡಿಸಿಕೊಳ್ಳಬೇಕು. ಸೃಜನಶೀಲತೆಯೆಂಬುದೇ ಉನ್ನತ ಮಾನವೀಯ ಅಂತಃಕರಣದಲ್ಲಿ ಸ್ಫುರಿಸುವ ದಾರ್ಶನಿಕ ಮಹೋನ್ನತಿಯಾಗಿದೆ.

ಜೈನಕವಿಗಳು, ವಚನಕಾರರು, ತತ್ವಪದಕಾರರು, ಜನಪದ ಕವಿಗಳು, ಆಧುನಿಕ ಕವಿಗಳು ತಮ್ಮ ಸಾಹಿತ್ಯಕ್ಕೆ ಶಕ್ತಿ ತುಂಬಿಕೊಂಡದ್ದೆ ಈ ತೆರನ ಜನಮುಖಿ ಚಿಂತನೆಯಲ್ಲಿ. ಇನ್ನು ಮುಂದೆಯೂ ಕವಿ, ದಾರ್ಶನಿಕರು ಅಖಂಡ ಭೂಮಂಡಲ ಒಳಗೊಂಡು ಕರ್ನಾಟಕ ಜನತೆಯ ಬದುಕ ನೇಯ್ಗೆಗೆ ಬಣ್ಣ ಬಣ್ಣದ ಹೊಕ್ಕೆಳೆ ತುಂಬುವ ನೇಕಾರರಾಗಲಿ ಎಂದು ಹಾರೈಸುತ್ತೇನೆ.

ಮಹನೀಯರೇ, ನಮ್ಮ ಮುಂದಿನ ಸಮಸ್ಯೆಗಳು, ಸವಾಲುಗಳು, ಸಂಖ್ಯಾತೀತವಾಗುತ್ತಿವೆ. ಮಾಡಬೇಕಾದ ಕೆಲಸಗಳು ಬೆಟ್ಟದಷ್ಟಿವೆ. ಕಳೆದ ಅರ್ಧ ಶತಮಾನದಿಂದಲೂ ಈ ನಾಡ ಮನೆಯ ಅಂಗಳದ ಮೂಲೆ ಮೊಡಕುಗಳಲ್ಲಿ ಕಸ ತುಂಬಿಬಿಟ್ಟಿದ್ದೇವೆ. ನಮ್ಮ ಮನಸ್ಸುಗಳಲ್ಲಿಯೂ ಸಹಸ್ರಮಾನದ ಮೌಢ್ಯವೆಂಬ ಧೂಳು ತುಂಬಿಕೊಂಡಿದ್ದೇವೆ. ಇದನ್ನು ಹಸನುಗೊಳಿಸಲು ಸಾವಿರ, ಲಕ್ಷ, ಕೋಟಿ ಅಸಂಖ್ಯ ಕೈಗಳು ಮುಂದೆ ಬರಬೇಕು. ದೇಶವನ್ನು ಆಳುತ್ತಿರುವ ಸರಕಾರ, ಪಕ್ಷಗಳು ನಿಜವಾದ ಜನಪರ ಕಾಳಜಿಯೊಂದಿಗೆ ಮುನ್ನುಗ್ಗಬೇಕು. ಧರ್ಮದ ಮುಖಂಡರು ಸ್ವಾರ್ಥ ಸಂಕುಚಿತತೆಯ ಪರದೆ ಹರಿದು ಅಸಲಿ ಮಾನವೀಯತೆಯ ಹಣತೆ ಹಚ್ಚಬೇಕು. ಅಂದಾಗಲೇ ಇಂಥ ನುಡಿ ಹಬ್ಬಗಳಿಗೆ ಅರ್ಥ ಮತ್ತು ಗೌರವ ಬರುತ್ತದೆ. ಇಲ್ಲವಾದರೆ ಸಮ್ಮೇಳನಗಳು ಬರುತ್ತವೆ ಹೋಗುತ್ತವೆ. ಜನರ ಬದುಕು ಮಾತ್ರ ಅದೇ ದುಃಖ ದುಮ್ಮಾನಗಳಲ್ಲಿ ಕೊಳೆಯುತ್ತಿದ್ದರೆ ಇವು ಯಾರಿಗಾಗಿ ಮತ್ತು ಏತಕ್ಕಾಗಿ ಎಂಬ ಪ್ರಶ್ನೆಗಳು ಕಾಡುತ್ತಲೆ ಇರುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹಾದಿಯಲ್ಲಿ ನಾವೂ ನೀವೂ ಮಾನವೀಯ ಹಣತೆಗೆ ಒಂದೊಂದೇ ಹನಿ ಎಣ್ಣೆಯಾಗಿ ಒಂದಾಗಿ ಜಗವ ಬೆಳಗೋಣವೆಂದು ನಾನಾದರೂ ಆಶಿಸುತ್ತೇನೆ. ಬನ್ನಿ ಎಲ್ಲರೂ ಕೈಗೆ ಕೈ ಕಲಸಿ ಹೊಸ ಚರಿತ್ರೆ ನಿರ್ಮಾಣದಲ್ಲಿ ಮುಂದಡಿಯಿಡೋಣ.

◆



ಕೆ.ಎಸ್. ನಿಸಾರ್ ಅಹಮದ್

೭೩ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೨೦, ೨೧, ೨೨, ೨೩ ಡಿಸೆಂಬರ್ ೨೦೦೬, ಸ್ಥಳ : ಶಿವಮೊಗ್ಗ

ಪರಿಚಯ

ನಾಡೋಜ ಕೆ.ಎಸ್. ನಿಸಾರ್ ಅಹಮದ್

ಶಿಕ್ಷಣ : ನಿತ್ಯೋತ್ಸವ ಕವಿಯಾಗಿ ಪ್ರಸಿದ್ಧರಾದ ಕೆ.ಎಸ್. ನಿಸಾರ್ ಅಹಮದ್ ಅವರು ಮೈಸೂರು ಸರ್ಕಾರದಲ್ಲಿ ರೆವಿನ್ಯೂ ಅಧಿಕಾರಿಯಾಗಿದ್ದ ಕೆ.ಎಸ್. ಹೈದರ್ ಮತ್ತು ಗೃಹವಿಜ್ಞಾನ ಪದವೀಧರೆ ಹಮೀದಾ ಬೇಗಂ ದಂಪತಿಗಳ ಪುತ್ರರು. ಇವರು ಜನಿಸಿದ್ದು ೫-೨-೧೯೩೬.

ಬೆಂಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಸಕೋಟೆಯಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿಗಳಿಸಿದ ಇವರು ಭೂ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು.

ಉದ್ಯೋಗ : ಮೈಸೂರು ಸರ್ಕಾರದ ಭೂ ವಿಜ್ಞಾನ ಇಲಾಖೆಯಲ್ಲಿ ಒಂದಷ್ಟು ಕಾಲ ಸೇವೆ ಸಲ್ಲಿಸಿದರು. ಅನಂತರ ಕಾಲೇಜು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೯೪ರಲ್ಲಿ ನಿವೃತ್ತರಾದರು.

ಸೇವೆ : ೧೯೮೪-೮೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದರು. ೧೯೭೮ರಲ್ಲಿ ಕನ್ನಡದ ಪ್ರಥಮ ಧ್ವನಿಸುರುಳಿಯಾಗಿ 'ನಿತ್ಯೋತ್ಸವ' ಬಿಡುಗಡೆ ಆಯಿತು.

ಮನ್ನಣೆ : ಹಂಪಿ ವಿಶ್ವವಿದ್ಯಾಲಯದಿಂದ ದೊರೆತ ನಾಡೋಜ ಪ್ರಶಸ್ತಿ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ

ಅಧ್ಯಕ್ಷರಾಗಿ ಅನೇಕ ಸಂಘಸಂಸ್ಥೆಗಳಿಂದ ಪ್ರಶಸ್ತಿಗಳು ದೊರೆತಿವೆ. 'ಗೊರೂರು ಪ್ರಶಸ್ತಿ' 'ವಿಶ್ವ ಮಾನವ' ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹೆಜ್ಜೆಗುರುತು ಕೃತಿಗೆ ಸೋವಿಯಟ್ ಲ್ಯಾಂಡ್ ಪ್ರಶಸ್ತಿ ಇತ್ಯಾದಿ ಹತ್ತಾರು ಪ್ರಶಸ್ತಿಗಳು ದೊರೆತಿವೆ.

ಸಾಹಿತ್ಯ ಸೇವೆ : ಕವಿತೆ, ವಿಮರ್ಶೆ ಅನುವಾದ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವ ಇವರ ಮುಖ್ಯಕೃತಿಗಳು ಹೀಗಿವೆ :

೧. ನಿತ್ಯೋತ್ಸವ, ನಾನೆಂಬ ಪರಕೀಯ

೨. ಅಚ್ಚುಮೆಚ್ಚು

೩. ಆನಪೋಲ್ಲಾಸ

೪. ಆಚಾರ, ವಿಚಾರ

೫. ಸಮಗ್ರಭಾವಗೀತೆಗಳು

೬. ಒಥೆಲೊ ಅನುವಾದ

೭. ಮಿಡ್ ಸಮ್ಮರ್ ನೈಟ್ಸ್ ಡ್ರೀಂ

೮. ಇದು ಬರಿ ಬೆಡಗಲ್ಲೋ ಅಣ್ಣ ಇತ್ಯಾದಿ.

ಕೆ.ಎಸ್. ನಿಸಾರ್ ಅಹಮದ್

೭೩ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

೨೦೦೬

ಪ್ರಸ್ತುತ ಅಪ್ರಸ್ತುತ ಸಂಗತಿಗಳು

ಕನ್ನಡ ರಾಜೇಶ್ವರಿಯ ಸರ್ವಾಲಂಕೃತ ಆಸ್ಥಾನದಂತೆ ಸಜ್ಜಾಗಿರುವ ಈ ಬೃಹತ್ ವೇದಿಕೆಯಲ್ಲಿ ಪೀಠಸ್ಥರಾಗಿರುವ ಗಣ್ಯರೆ, ನಾಡು ಹೊನ್ನೊಸಗೆಯನ್ನು ಆಚರಿಸುತ್ತಿರುವ ಶುಭ ಸಂದರ್ಭದಲ್ಲಿ ನಡೆದಿರುವ ೭೩ನೆಯ ಅಖಿಲ ಭಾರತ ಕನ್ನಡ ಸಮ್ಮೇಳನದ ವಿಶೇಷ ಸಂಭ್ರಮದಲ್ಲಿ ಪಾಲ್ಗೊಳ್ಳಲು ಇಲ್ಲಿ ನೆರೆದಿರುವ ಅಪಾರ ಸಂಖ್ಯೆಯ ಅಕ್ಕರೆಯ ಕನ್ನಡಿಗ ಬಂಧು ಭಗಿನಿಯರೆ, ಹಾಗೂ ಈ ಸಾರಸ್ವತೋತ್ಸವವನ್ನು ಏರ್ಪಡಿಸುವುದರಲ್ಲಿ ತಿಂಗಳಾನುಗಟ್ಟಲೆ ಹಗಲಿರುಳು ದಣಿವಿಲ್ಲದೆ ದುಡಿದಿರುವ ಶಿವಮೊಗ್ಗೆಯ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಿಯಾಗಿ ಎಲ್ಲ ಕಾರ್ಯಕರ್ತರೆ, ಸ್ವಯಂಸೇವಕ ಉತ್ಸಾಹಿಗಳೆ; ಮತ್ತು ನೆರವು, ಸಹಕಾರಗಳನ್ನು ಅತ್ಯುದಾರವಾಗಿ ನೀಡಿರುವ ಸ್ಥಳೀಯ ಮತ್ತು ಈ ಜಿಲ್ಲೆಯ ಮಹಾ ಜನರೆ,

ನನ್ನ ಜೀವನದ ಪರಮ ಸಾರ್ಥಕ್ಯದ ಕೆಲವು ಅಪರೂಪದ ದಿವಸಗಳಲ್ಲಿ ಇವೊತ್ತಿನದು ಅತ್ಯಂತ ಮಹತ್ವಪೂರ್ಣವೆಂದರೆ ಅತಿಶಯೋಕ್ತಿಯಲ್ಲ. ದಯಾಮಯ ನಾದ ಅಲ್ಲಾಹನ ಕೃಪೆಯಿಂದ; ಕನ್ನಡ ಮಾತೆಯ ನನ್ನ ಮೇಲಿನ ವಿಶೇಷತರ ಮಮತೆಯ ಮಹಾಶೀರ್ವಾದದಿಂದ; ಗುರುಹಿರಿಯರ ಮತ್ತು ನನ್ನ ದಿವಂಗತ ತಂದೆತಾಯಿಗಳ ಹೃತ್ಪೂರ್ವಕ ಹರಕೆಯಿಂದ; ಹಿತಾಕಾಂಕ್ಷಿ ಸನ್ಮಿತ್ರರ ಹಾಗೂ ಪರಿಚಿತ, ಅಪರಿಚಿತ ಅಪಾರ ಸಂಖ್ಯೆಯ ಕನ್ನಡಿಗ ಸೋದರಸೋದರಿಯರ ಒಳಿತಿನ ಹಾರೈಕೆಯಿಂದ ನನಗೆ ಇಂತಹ ಪ್ರತಿಷ್ಠಿತ ಪದವಿ ಪ್ರಾಪ್ತವಾಗಿದೆ. ನನ್ನನ್ನು ಆಯ್ಕೆ ಮಾಡಿರುವ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಸಹ ಸಾಹಿತಿಗಳೂ ಆದ ಪ್ರೊ. ಚಂದ್ರಶೇಖರ ಪಾಟೀಲರಿಗೆ, ಕಾರ್ಯದರ್ಶಿಗಳಿಗೆ ಮತ್ತು ಕಾರ್ಯಕಾರಿ ಸಮಿತಿಯ ಮಾನ್ಯ ಸದಸ್ಯರಿಗೆ ನಾನು ಚಿರ ಆಭಾರಿ.

ಕಳೆದ ೫೦ ವರ್ಷಗಳಿಂದ ನಾನು ನಿಸ್ಪೃಹವಾಗಿ ಕನ್ನಡ ತಾಯಿಯ ಕೈಂಕರ್ಯವನ್ನು ಕೈಗೊಂಡಿದ್ದರ ಫಲಶ್ರುತಿ ಇದೆಯೆಂದು ಭಾವಿಸಿದ್ದೇನೆ. ಕನ್ನಡದ ಅತಿರಥ ಮಹಾರಥ ಸಾರಸ್ವತಾಚಾರ್ಯರು ಈ ಉನ್ನತ ಪೀಠದಲ್ಲಿ ವಿಜೃಂಭಿಸಿದ್ದಾರೆ. ನಮ್ಮ ದೀರ್ಘಾನುಭವ, ಧೀಶಕ್ತಿಗಳ ದ್ಯೋತಕವಾದ ವಿದ್ವತ್ಪೂರ್ಣ ಆಲೋಚನೆಗಳ

ದೀಪ್ತಿಯಿಂದ ಕನ್ನಡಿಗರ ಹೃನ್ಮನಗಳನ್ನು, ಅವರ ಅಮೋಘ ಭಾವಾಲೋಚನೆಗಳನ್ನು ಬೆಳಗಿದ್ದಾರೆ. ಅವರ ವಿಚಾರಗಳನ್ನು ಶ್ರದ್ಧಾಸಕ್ತಿಗಳಿಂದ ಓದಿ ಗ್ರಹಿಸಿದಾಗ ಹೊಸದಾಗಿ ಹೇಳುವುದಾದರೂ ಏನಿದೆ? ಎಂಬ ಶಂಕೆ ನನ್ನನ್ನು ಒಂದೆರಡು ಕ್ಷಣ ಬಾಧಿಸಿದ್ದು ಸಹಜವೇ.

ಕನ್ನಡ ನಾಡು ನುಡಿಗಳ ಹಲವು ದಶಕಗಳ ಸಮಸ್ಯೆಗಳಾಗಲಿ, ಅವುಗಳಿಗೆ ಅವರು ಹಿಂದಿನ ಹಿಂದಿನ ಸಮ್ಮೇಳಾನಧ್ಯಕ್ಷರುಗಳು ಸೂಚಿಸಿರುವ ಕೆಲವೊಂದು ಪರಿಹಾರೋಪಾಯಗಳಾಗಲಿ ಪ್ರಸ್ತುತವೆನ್ನಿಸುವಂತಹವು. ಬಹುಶಃ ಭವಿಷ್ಯದಲ್ಲೂ ಆಧೇಯವಾಗುವಂತಹವು. ಅಂದಿನ ಕೆಲವು ಆಶಯ, ಆಶೋತ್ತರಗಳು ನೆರವೇರಿ ಇವೊತ್ತಿಗೆ ಅಗತ್ಯವಲ್ಲ ಎನ್ನಿಸುವ ಬಗೆಯವು. ಉದಾಹರಣೆಗೆ, ಕರ್ನಾಟಕ ಏಕೀಕರಣದ ಚಳವಳಿ ಮತ್ತು ಅದರ ಕೈ ಹಿಡಿದೇ ಸಾಗಿ ಬಂದ ರಾಷ್ಟ್ರ ವಿಮೋಚನೆಯ ಸಂಗ್ರಾಮ. ಹೀಗಿದ್ದರೂ, ಅವುಗಳ ಬಗೆಗಿನ ಆ ಕಾಲದ ಹಿರಿಯರ ಉತ್ಕಟವಾದ ಶ್ರದ್ಧಾಸಕ್ತಿ, ಪ್ರಾಮಾಣಿಕವಾದ ಕಾರ್ಯೋನ್ಮುಖ ನಿಷ್ಠೆ, ಸಾಂಘಿಕ ಸಾಹಸೋತ್ಸಾಹ ಹಾಗೂ ನಿಸ್ವಾರ್ಥಪರ ತ್ಯಾಗ ಜೀವನದ ಕೃತಾರ್ಥತೆ ತಕ್ಕಮಟ್ಟಿ ಗಾದರೂ ಇಂದಿನವರಿಗೆ ಬೋಧಪ್ರದವಾಗಬೇಕು. ಹುದ್ದೆ, ಮುದ್ದೆ, ನಿದ್ದೆಗಳ ನಿರಂತರ ಸೆಣಸಾಟ ಮಾತ್ರವೇ ಬದುಕಿನ ಉದ್ದೇಶವೆಂದು ಬಗೆದಿರುವ ಅಸಂಖ್ಯ ಸಾಮಾಜಿಕರಿಗೆ ಹಿಂದಿನವರ ಧ್ಯೇಯಾದರ್ಶ, ದೇಶ–ಭಾಷೆಗಳ ಬಗೆಗಿನ ಸ್ವಹಿತವಿದೂರವಾದ ಕೃತಜ್ಞತಾಪೂರ್ವಕ ಸೇವಾತ್ಪರತೆ ಮನದಟ್ಟಾಗಬೇಕು.

ಕನ್ನಡ ನಾವು ನುಡಿಯ ಬೆಳವಣಿಗೆ ಏರುಗತಿಯಲ್ಲಿ ಸಾಗುತ್ತಿರುವಂತೆಯೇ ಅವಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಅಷ್ಟೇ ವೇಗದಲ್ಲಿ ಹೆಚ್ಚುತ್ತಿವೆ. ಕೆಲವಂತೂ ಕನ್ನಡ ನಾಡು, ನುಡಿ ಮತ್ತು ಜನಜೀವನವನ್ನು ಏರುಪೇರುಗೊಳಿಸುವಷ್ಟು ಆತಂಕಕಾರಿ ಎನಿಸುತ್ತಿವೆ. ಅದರಲ್ಲೂ, ವಿಜ್ಞಾನ–ತಂತ್ರಜ್ಞಾನದ ನಿಲುವುಗಾಣದ ನಿಟ್ಟೋಟದ ದೆಸೆಯಿಂದ ಹೊಸ ಹೊಸ ಸಮಸ್ಯೆಗಳು ಹಿಂದಿದ್ದವುಗಳ ಜೊತೆ ಸೇರಿಕೊಂಡು ಮತ್ತಷ್ಟು ಜಟಿಲವಾಗುತ್ತಿವೆ. ಇವುಗಳನ್ನು ಬುಡ ಸಮೇತ ತೊಡೆದು ಹಾಕುವುದು ದುಸ್ಸಾಧ್ಯವಾದರೂ ಅವುಗಳ ಅರಿವು ನಮ್ಮ ಜನರಲ್ಲಿ ಜಾಗೃತವಾಗಿ ಇರಬೇಕಾದದ್ದು ಅನಿವಾರ್ಯ ಎನ್ನಿಸುತ್ತದೆ. ಇವುಗಳ ಬಗೆಗೆ ಮುನ್ನೆಚ್ಚರಿಕೆಯನ್ನು ಆಗಿಂದಾಗ್ಗೆ ಕನ್ನಡಿಗರಿಗೆ ನೀಡಬೇಕಾದದ್ದು ಸಮಾಜದ ಎಲೆಯಾಳುಗಳ, ಧೀಮಂತರ, ಸಾಹಿತಿಗಳ, ಶಿಕ್ಷಕರ, ಸುದ್ದಿ ಮಾಧ್ಯಮದ ಹಾಗೂ ಇನ್ನಿತರ ಕ್ಷೇತ್ರಗಳ ಗಣ್ಯರ ಕರ್ತವ್ಯವಾಗಿದೆ. ಏಕೆಂದರೆ, ಬಹುಸಂಖ್ಯಾತ ಜನಸಾಮಾನ್ಯರು ಆಜ್ಞಾಧಾರಿಗಳೇ ಹೊರತು ಆಜ್ಞಾ ಪ್ರಯೋಗಿಗಳಲ್ಲ. ಆಂಜನೇಯರೇ ವಿನಾ ರಾಮಚಂದ್ರರಲ್ಲ. ಅವರನ್ನು ವಿವೇಕ, ವಿವೇಚನೆಗಳಿಂದ ಮುನ್ನಡೆಸುವ ಖವ್ವತ್ತು ಇರುವುದು ಇಂತಹ ಅಲ್ಪಸಂಖ್ಯೆ ಪ್ರಾಜ್ಞರಿಗೆ. ಸಾಮಾನ್ಯರು ಸ್ವತಃ ಮುನ್ನಡೆಯಲು ಅಸಮರ್ಥರು. ಏಕೆಂದರೆ ಜನಸ್ತೋಮ ಬೋಗಿಗಳು, ಪ್ರಜ್ಞಾವಂತರು ಎಂಜಿನ್ನು.

ಹಿಂದಿನ ಸಮ್ಮೇಳನಗಳ ಮೌಲಿಕ ಸಂಗತಿಗಳು

ಇಂದಿನ ಜೀವನಮೌಲ್ಯ ಪೌರರನ್ನು ಸಾವಕಾಶವಾಗಿ ಆಲೋಚಿಸುವುದಕ್ಕಾಗಲಿ, ಸಂಯಮ ಮತ್ತು ಯುಕ್ತಯುಕ್ತತೆಯನ್ನು ವಿವೇಚಿಸಿ ಕಾರ್ಯೋನ್ಮುಖವಾಗುವುದಕ್ಕಾಗಲಿ ಇಂಬು ನೀಡುವಂಥದ್ದಲ್ಲ. ಅನವರತ ಧಾವಂತಿಸಿರುವ ನಮ್ಮ ಇವೊತ್ತಿನ ಬಾಳ್ವೆಗೆ ಮೇಲ್ಮೆ, ಮರ್ಯಾದೆಗಳನ್ನು, ಘನತೆ ಕೃತಕೃತ್ಯತೆಗಳನ್ನು ಕೂಡಿಸುವ ಸನ್ಮೌಲ್ಯಗಳ ಬಗೆಗಿನ ತಿಳಿವಳಿಕೆಯನ್ನು ಪಡೆಯಲು ಹಿಂದಿನ ಅಧ್ಯಕ್ಷರ ಕೆಲವೊಂದು ಅಭಿಪ್ರಾಯಗಳು ಸಾಕಾಗದೆನ್ನಿಸಬಹುದು. ಹಾಗೆಂದು ಅವುಗಳನ್ನು ಅವಗಣಿಸುವಂತಿಲ್ಲ. ಚಾರಿತ್ರಿಕ ದಾಖಲೆಗಳಾಗಿ ಅವು ತಮ್ಮ ಮಹತ್ವವನ್ನು ಉಳಿಸಿಕೊಳ್ಳುತ್ತವೆ. ಈ ದೃಷ್ಟಿಯಿಂದ ಹಿಂದಿನ ಸಮ್ಮೇಳನಾಧ್ಯಕ್ಷರ ಸಕಾಲಿಕ ಮತ್ತು ಸಾರ್ವಕಾಲಿಕ ಸಂಗತಿಗಳ ಬಗೆಗಿನ ಕೆಲವು ವಿಚಾರಗಳು ಮನನಯೋಗ್ಯವಾಗಿವೆ. ಕನ್ನಡಿಗನ ಪಾಲಿಗೆ ಉಪಯುಕ್ತವಾಗಿವೆ.

ಸಕಾಲದಲ್ಲಿ ಆಯ್ಕೆ

ನಾಲ್ಕು ವರ್ಷಗಳ ಹಿಂದೆ ನನ್ನನ್ನು ಸಮ್ಮೇಳನಾಧ್ಯಕ್ಷನನ್ನಾಗಿ ಆಯ್ಕೆ ಮಾಡಲು ಸಂಕಲ್ಪಿಸಿದ್ದ ಸಂಬಂಧಪಟ್ಟ ಮಹನೀಯರು ಕೆಲವೊಂದು ಕಾರಣಗಳಿಂದಾಗಿ ಕೊನೆಯ ಗಳಿಗೆಯಲ್ಲಿ ನನ್ನ ಹೆಸರನ್ನು ಕೈಬಿಟ್ಟರಂತೆ. ಆ ಸುಯೋಗ ಈ ವರ್ಷ ನನಗೆ ಒದಗಿದೆ. "ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು" ಎಂಬ ಒಳ್ನುಡಿಯಂತೆ ಈಗ ಆ ಅಗ್ರಾಸನ ಲಭಿಸಿರುವುದು ಹಲವು ರೀತಿಗಳಿಂದ ಗಮನಾರ್ಹವಾಗಿದೆ. ನನಗೆ ಹೆಚ್ಚಿನ ಹಿಗ್ಗು ಮತ್ತು ಸಮಾಧಾನವನ್ನು ಕೊಟ್ಟಿದೆ. ನಾಡಿನ ಹುಟ್ಟುಹಬ್ಬದ ಹೊನ್ನೊಸಗೆಯನ್ನು ನಮ್ಮ ಸರ್ಕಾರ ಮತ್ತು ಕರ್ನಾಟಕದ ವಿವಿಧ ಊರು, ಪಟ್ಟಣಗಳ ಕನ್ನಡ ಸಂಘ ಸಂಸ್ಥೆಗಳು, ಹೊರಗಿರುವ ನಮ್ಮ ಭಾಷಾ ಬಂಧುಗಳು ಸಂಭ್ರಮಯುತವಾಗಿ ಆಚರಿಸುತ್ತಿರುವ ಈ ಅಪೂರ್ವ, ವಿಶಿಷ್ಟ ಸಂವತ್ಸರದಲ್ಲಿ ನನ್ನ ಆಯ್ಕೆಯಾಗಿರುವುದು ಹೆಮ್ಮೆಯನ್ನು ಹೆಚ್ಚಿಸಿದೆ. ಇದರಷ್ಟೇ ಅಥವಾ ಇದಕ್ಕಿಂತಲೂ ಅತಿಶಯವಾದ, ಆಹ್ಲಾದದ ಸಂಗತಿ ಎಂದರೆ ನನ್ನ ಸೃಜನಶೀಲತೆಯ ಎರಡನೆಯ ತೌರೆನ್ನಿಸಿರುವ ಶಿವಮೊಗ್ಗೆಯಲ್ಲಿ ನಡೆದಿರುವ ಪ್ರಸ್ತುತ ಸಾಹಿತ್ಯ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಿರುವುದು. ಮೂಲತಃ ಬೆಂಗಳೂರಿನವನಾದ ನನ್ನನ್ನು ದೇಶ ವಿದೇಶಗಳ್ಲಿನ ನಮ್ಮ ಬಹುಜನಕನ್ನಡಿಗರು ಇಂದಿಗೂ ಭಾವಿಸಿರುವುದು ಶಿವಮೊಗ್ಗೆ ನನ್ನ ಹುಟ್ಟೂರು ಎಂದೇ. ನನ್ನ ಬರವಣಿಗೆ, ಹೆಸರು, ಕಿಂಚಿನ್ಮಾತ್ರದ ಕೀರ್ತಿಗೆ ಈ ಊರಿನ ಕೊಡುಗೆ ಗಣನೀಯ. ಈ ಕಾರಣಕ್ಕಾಗಿಯೂ ಈ ಸೌಭಾಗ್ಯ ನನಗೆ ದೊರಕಿರುವುದು ಅಘಟಿತ ಘಟನ ವಿಶೇಷವೆನ್ನಿಸಿದೆ.

ನನ್ನ ಸಾಹಿತ್ಯಕ ಜೀವನದಲ್ಲಿ ಶಿವಮೊಗ್ಗೆಯ ಪಾತ್ರದ ಮಹತ್ವದ ಬಗ್ಗೆ ನಾನು ಅನೇಕ ಸಲ ಭಾಷಣಗಳಲ್ಲಿ ಉಲ್ಲೇಖಿಸಿದ್ದೇನೆ. ಉದ್ಯೋಗ ನಿಮಿತ್ತ ಎರಡು ಅವಧಿಗಳವರೆಗೆ ನಾನು ಈ ಊರಿನಲ್ಲಿ ಇದ್ದೆ. ೧೯೬೭ ರಿಂದ ೧೯೭೭ರವರೆಗೆ

ಮೊದಲನೆಯ ಐದು ವರ್ಷಗಳ ಸೇವಾವಧಿ; ೧೯೭೫ರಿಂದ ೧೯೭೮ರವರೆಗೆ ಎರಡನೆಯ ಅವಧಿ ಮೂರು ವರ್ಷಗಳದ್ದು. ನನ್ನ ಪಾಲಿಗೆ ಅದು ಸೃಜನಶೀಲತೆ ಸುಗ್ಗಿ ಕಾಲ. ನನ್ನ ಕಾವ್ಯ ಸೃಷ್ಟಿಯ ಪರಮೋನ್ನತಿಯನ್ನು ಸಾಧಿಸಿದ ಸಾರ್ಥಕ ಅವಧಿ. ಆ ಸುಭಿಕ್ಷ, ಫಲವಂತ ಎಂಟು ವರ್ಷಗಳಲ್ಲಿ ನಾನು ನೂರಾರು ನವ್ಯ ಕವಿತೆಗಳನ್ನೂ ಭಾವಗೀತಗಳನ್ನೂ ಅಪರೂಪಕ್ಕೆ ಗಂಭೀರ ಸ್ವರೂಪದ ಕೆಲವು ವಿಮರ್ಶೆಯ ಮತ್ತು ವಿಚಾರಪರ ಲೇಖನಗಳನ್ನೂ ರಚಿಸಿದೆ. ನನ್ನ ಕುಟುಂಬದ ಬೆಂಗಳೂರಿನಲ್ಲಿದ್ದು ನಾನು ಒಬ್ಬಂಟಿಯಾಗಿದ್ದರಿಂದ ನನ್ನ ಅಧ್ಯಯನ, ಚಿಂತನೆ, ಬರವಣಿಗೆಗಳಿಗೆ ಸಾಕಷ್ಟು, ಸಮಯ ಮತ್ತು ಪ್ರಕೃತಿಯ ದಿನಂಪ್ರತಿ ಪ್ರಶಾಂತತೆಯ ಸಾನ್ನಿಧ್ಯ ಲಭಿಸಿತು. ಬಹುಶಃ, ಬಾಳಿನ ಅವಿಶ್ರಾಂತ ಕರ್ಮವಸ್ತ್ರಕ್ಕೆ ಸಾರ್ಥಕ ರೂಪದ ವಿರಾಮ ಆಕರ್ಷಕ ಅಂಚಿದ್ದಂತೆ.

ಆಗಿನ ಕಾಲಕ್ಕೆ ಶಿವಮೊಗ್ಗ ತನ್ನ ಮೇರೆಗಳನ್ನು ಈ ರೀತಿ ಯದ್ವಾತದ್ವಾ ಹಿಗ್ಗಿಸಿಕೊಂಡಿರಲಿಲ್ಲ. ಮಲನಾಡುತನದ ಸ್ವಂತಿಕೆಯನ್ನು ನೀಗಿಕೊಂಡು ಹಿರಿಯ ಷಹರುಗಳ ಹಾಗೆ ಚಹರೆಯಿಲ್ಲದ ಸ್ವರೂಪವನ್ನು ಪಡೆದುಕೊಂಡಿರಲಿಲ್ಲ. ಈ ಊರಿನಲ್ಲಿ ಮೊದಲ ಬಾರಿಗೆ ೧೯೬೭ರಲ್ಲಿ ನಾನು ಕಾಲಿಟ್ಟಾಗ ಆಟೋರಿಕ್ಷಾಗಳ ಭರಾಟೆ ಶುರುವಾಗಿರಲಿಲ್ಲ; ಜಟಕಾಗಳದ್ದೇ ದರ್ಬಾರು. ಬೆಂಗಳೂರು, ಮೈಸೂರುಗಳಿಗೆ ಬಹುತರ ಎಲ್ಲರೂ ಪ್ರಯಾಣ ಮಾಡುತ್ತಿದ್ದದ್ದು ರೈಲುಗಾಡಿಯಲ್ಲಿ. ಈಗಿನ ಹಾಗೆ ಧಂಡಿಯಾಗಿ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಸುಖಾಸನದ ಹವಾ ನಿಯಂತ್ರಿತ, ಡಿ.ವಿ.ಡಿ. ಸೌಲಭ್ಯದ ಬಸ್ಸುಗಳಿರಲಿಲ್ಲ. ಅಂತೆಯೇ ಕಾರುಗಳನ್ನು, ಮೊಬೈಕ್ ಸ್ಕೂಟರುಗಳನ್ನು ಹೊಂದಿದ್ದವರ ಸಂಖ್ಯೆಯೂ ಕಡಮೆ. ವಾಸ್ತವ್ಯಕ್ಕೆ, ಊಟ ತಿಂಡಿಗಳಿಗೆ ಇದ್ದ ಹೋಟೆಲುಗಳ ಸಂಖ್ಯೆ ಸಹ ಬೆರಳಣಿಕೆಯಷ್ಟು, ಇವೆಲ್ಲಕ್ಕಿಂತ ನೆನಪಿನಲ್ಲಿ ನಾಟಿರುವ ವಿಷಯವೆಂದರೆ ನಾನು ಕೆಲಸ ಮಾಡುತ್ತಿದ್ದ ಸಹ್ಯಾದ್ರಿ ಕಾಲೇಜಿಗೆ ಉಪನ್ಯಾಸಕರಾದಿಯಾಗಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಕಛೇರಿಯ ಮತ್ತು ವಿವಿಧ ವಿಭಾಗಗಳ ಸಿಬ್ಬಂದಿ ವರ್ಗ ಮೆಗಾನ್ ಆಸ್ಪತ್ರೆ ಬಳಿಯಿಂದ ಹೊರಡುವ, ನಮಗಾಗಿಯೇ ಮೀಸಲಾಗಿದ್ದ ಖಾಸಗಿ ಬಸ್ ಒಂದರಲ್ಲಿ ನಿರ್ದಿಷ್ಟ ಸಮಯಕ್ಕೆ ಹೋಗಿ ಬರಬೇಕಾಗಿತ್ತು. ಆಗ ಶಿವಮೊಗ್ಗೆಯ ಸುತ್ತಮುತ್ತಿನ ಫಾಸಲೆಗೆ ಹೆಸರುವಾಸಿ ಹಾಗೂ ಹಳೆಯದೆನ್ನಿಸಿದ್ದು ನಮ್ಮ ಸರ್ಕಾರಿ ಸಹ್ಯಾದ್ರಿ ಕಾಲೇಜೊಂದೆ. ಇತರ ಕಾಲೇಜುಗಳು ಮೈದೋರಿರಲಿಲ್ಲ. ಅಥವಾ ಶೈಶವ ಅವಸ್ಥೆಯಲ್ಲಿದ್ದವು. ಈ ಕಾರಣಕ್ಕೆ ಭದ್ರಾವತಿ, ಲಕ್ಕವಳ್ಳಿ, ಐಯ್ಯನೂರು, ರಿಪ್ಪನ್‌ಪೇಟೆ, ಕುಂಸಿ, ತರೀಕೆರೆ, ಅಜ್ಜಂಪುರ ಮೊದಲಾದ ಕಡೆಯಿಂದ ಸಹ್ಯಾದ್ರಿ ಕಾಲೇಜಿಗೆ ವಿದ್ಯಾರ್ಥಿಗಳು ಬರುತ್ತಿದ್ದರು.

ಶಿವಮೊಗ್ಗೆಯ ಮಗ್ಗುಲಿಗೆ, ಕೈ ಚಾಚಿಗೆ ತೆಂಗು ಅಡಿಕೆ ತೋಟಗಳು, ಕಬ್ಬು ಭತ್ತದ ದಟ್ಟ ಗದ್ದೆಗಳು, ನಾಲೆ, ಗುಡ್ಡ, ಕೆರೆ, ಅರಣ್ಯ ಇಲಾಖೆಯ ಅಚ್ಚ ಹಸುರಿನ ಒತ್ತೊತ್ತಾದ ಮರಗಿಡ, ಹಳ್ಳಿಗಳು ಹಾಗೂ ಬೆಂಗಳೂರಿನಲ್ಲಿ ಕಂಡರಿಯದ ಬಗೆ

ಬಗೆಯ ಪಕ್ಷಿಗಳು ನಳನಳಿಸಿದ್ದವು. ಅದರಲ್ಲೂ ನವಿಲಿನ ಹಿಂಡುಗಳು ಮೇಲಿಂದ ಮೇಲೆ ಎದುರಾಗುತ್ತಿದ್ದವು. ಮನಸ್ಸನ್ನು ಪ್ರಶಾಂತಿ ಪ್ರಸನ್ನತೆಯ ಪ್ರಫುಲ್ಲಕರ ಸ್ಥಿತಿಯಲ್ಲಿ ಇರಿಸುತ್ತಿದ್ದವು. ನನ್ನಂತಹ ಅಂತರ್ಮುಖಿ, ಭಾವುಕ ಸ್ವಭಾವದ ಕವಿಗೆ ಅಂದಿನ ಶಿವಮೊಗ್ಗೆ ಹೇಳಿ ಮಾಡಿಸಿದ ಚೈತ್ರ ಸದೃಶ, ಸೃಷ್ಟಿಶೀಲ ಸ್ವರ್ಗೀಯ ತಾಣವಾಗಿತ್ತು. ಬೆಂಗಳೂರಿನ ನನ್ನ ಕಾಲೇಜು ವಿದ್ಯಾಭ್ಯಾಸದ ದಿನಗಳಲ್ಲಿ ನಾನು ಆಗಾಗ್ಗೆ ಓದಿದ್ದ ರಾಷ್ಟ್ರಕವಿ ಕುವೆಂಪು ಅವರ ಬಿಡಿ ಕವಿತೆ, ಮಹಾಕಾವ್ಯ, ಪ್ರಬಂಧ, ಕಥೆ, ಕಾದಂಬರಿಗಳಲ್ಲಿ ಚಿತ್ರವತ್ತಾಗಿ, ಚಿತ್ತಾಕರ್ಷಕವಾಗಿ ಕಣ್ಣಿಗೆ ಕಟ್ಟುವಂತೆ ಬಣ್ಣಿತವಾಗಿ ನನ್ನನ್ನು ಭಾವಪರವಶಗೊಳಿಸಿ ಮತ್ತೆ ಮತ್ತೆ ನೆನಪಾಗಿ ಮೋಡಿ ಮಾಡಿದ್ದ ಪ್ರಕೃತಿಯ ಸಾಕ್ಷಾತ್ ದರ್ಶನ ನನಗೆ ದಿನವಹಿ ಶಿವಮೊಗ್ಗೆಯ ಆಸುಪಾಸಿನಲ್ಲಿ, ಆಗಾಗ್ಗೆ ಗಾಜನೂರಿನ ಮತ್ತು ಅದರಾಚೆಯ ಪ್ರದೇಶಗಳಲ್ಲಿ; ತೀರ್ಥಹಳ್ಳಿ, ಆಗುಂಬೆ, ದೇವಂಗಿ, ಹೊಸ ನಗರ ಮೊದಲಾದ ಅರಣ್ಯ ಸಂಪನ್ನ ಪ್ರದೇಶಗಳಲ್ಲಿ ಆಗಿ ನನ್ನ ಭಾವಕೋಶವನ್ನು ಶ್ರೀಮಂತವಾಗಿಸಿತ್ತು, ಬೆಂಗಳೂರಿನಲ್ಲಿ ಎರವಾಗಿದ್ದ, ಸರಿಯಾಗಿ ಹೇಳಬೇಕೆಂದರೆ ಲಾಲ್‌ಬಾಗ್, ಕಬ್ಬನ್‌ಪಾರ್ಕ್‌ನಂತಹ ಪ್ರಕೃತಿಯ ಪುಟ್ಟ ಪುಟ್ಟ ಪಾಳೆಯಪಟ್ಟುಗಳಲ್ಲಿ ಮಾತ್ರ ಕೈವಶವಾಗುತ್ತಿದ್ದ ಸೀಮಿತಾನುಭವ, ಮಲೆನಾಡಿನ ಉದಾರೋನ್ನತ ಗಿರಿವನ ಸಮೃದ್ಧ ಭವ್ಯ ನಿಸರ್ಗದ ಬಾದಷಾಹಿಕೆಯಲ್ಲಿ ಮಹದನುಭವವಾಗಿ ಮಾರ್ಪಟ್ಟಿತು. ಅದರ ಸಾನ್ನಿಧ್ಯದಲ್ಲಿ ನನಗೆ ಅನ್ನಿಸಿದ್ದನ್ನು ಪದ್ಯಗಳಲ್ಲಿ ದಾಖಲಿಸಿದ್ದೇನೆ. ಕೆಲವು ಪದ್ಯಗಳ ಪಂಕ್ತಿಗಳು ಹೀಗಿವೆ :

"ಅನುಭವಕೆ ಬಹುದಿಲ್ಲ ಪರಮಾತ್ಮನಿರವು,
ಇಹದಾವಿಷವೆ ಇರದ ಎದೆ ಸ್ವಚ್ಛ ತೆರವು;
ಜೀವಕ್ಕೆ ಬೇಕಿಲ್ಲ ಕರಣಗಳ ನೆರವು,
ನಿರ್ಭಾವ ವರವಿಲ್ಲಿ, ತಿಳಿವೀಗ ಮರೆವು."

ಹಾಗೆಯೇ, ಹೀಗೆ ಭಾಸವಾದದ್ದೂ ಉಂಟು :

'ನೆಲದ ಸಿರಿಯ ಸವಿಯದವನ ಬಾಳು ಬಾಳೆ ಅಲ್ಲ, ಬೀಳು;'
ರಸಿಕನಲ್ಲದವನ ಎದುರಿಗಿಟ್ಟ ಭಕ್ಷ್ಯ– ಬರಿಯ ಕೂಳು.'

ಪ್ರಕೃತಿಯ ಅನಂತ ಸಮೃದ್ಧಿ ಮತ್ತು ವೈವಿಧ್ಯ, ಹೃದಯವಂತ ವ್ಯಕ್ತಿಯನ್ನು ಚಕಿತಗೊಳಿಸುವ ರೀತಿ ಹೀಗೆ ಅಭಿವ್ಯಕ್ತವಾಗಿದೆ :

'ಜೀವಿ ಪಾಲಿಗಿಳೆಯ ಸೊಬಗು
ದೈವವಿತ್ತ ದಯೆಯ ಕೊಡುಗೆ;
ಹೆಜ್ಜೆ ಹೆಜ್ಜೆ ಗೆನಿತು ಬೆರಗು –
ಹಿಗ್ಗು ತುಂಬಿಸಿಟ್ಟ ಹೆಡಿಗೆ.'

ನಿಸರ್ಗ ನನ್ನ ಚೇತನವನ್ನು ಅಪೂರ್ವ ಸಂವೇದನಗಳಿಗೆ ಒಳಪಡಿಸಲು ಪ್ರೇರಕವಾಯಿತು. ಇದರ ಫಲಶ್ರುತಿ ಹಲವು ವೈವಿಧ್ಯ ಪೂರ್ಣ, ಸ್ವಾನುಭವನಿಷ್ಠ

ನವ್ಯ ಕವನಗಳ ಮತ್ತು ಭಾವಗೀತೆಗಳ ರಚನೆ.

ಇಂದಿಗೂ ಹೆಸರಾಂತವೆನ್ನಿಸಿರುವ ಕವನಗಳು ಶಿವಮೊಗ್ಗೆಯ ಬಳುವಳಿಗಳೆಂದರೆ ಅದರ ಅಚ್ಚಳಿಯದ ಪರಭಾವದ ಕಲ್ಪನೆ ನಿಮಗಾದೀತು. ಅವುಗಳೆಂದರೆ "ಸಂಜೆ ಐದರ ಮಳೆ". "ನಾನೆಂಬ ಪರಕೀಯ", "ನಿತ್ಯೋತ್ಸವ" – ಪದ್ಯ ಸಂಗ್ರಹಗಳ ಶಿಷ್ಟಜನ ಪರಿಚಿತ ಮತ್ತು ವಿಮರ್ಶಕರ ಮೆಚ್ಚುಗೆಯ ರಚನೆಗಳು. ಅವುಗಳಲ್ಲಿ ಕೆಲವನ್ನು ಪ್ರಾತಿನಿಧಿಕವಾಗಿ ಉಲ್ಲೇಖಿಸಬಯಸುತ್ತೇನೆ. ಅವೆಂದರೆ "ಸಂಜೆ ಐದರ ಮಳೆ" ಕವನ ಸಂಕಲನದ 'ಅಮೇರಿಕ, ಅಮೇರಿಕ'. 'ಮಾಸ್ತಿ', 'ಗಾಂಧಿಬಜಾರಿನ ಸಂಜೆ', 'ಅಮ್ಮ, ಆಚಾರ, ನಾನು', 'ಪಳೆಯುಳಿಕೆ', 'ಬಾಪೂ', 'ದ್ವಂದ್ವ', 'ಪಾಠ', "ನಾನೆಂಬ ಪರಕೀಯ" ಸಂಕಲನದ 'ಭಾಷೆಗೆ ಭಾಷೆ ಒಡು', 'ರಾಮನ್ ಸತ್ತ ಸುದ್ದಿ', 'ಪ್ರಾಗ್ಬಂಧಗಳು', 'ಪರ್ಣಾಶ್ರಮ', 'ಅಪಾರ ಪ್ರಭೂ, ನಿನ್ನ ಕರುಣೆ', 'ಹಕ್ಕು', 'ಅನಾಥರು', 'ನಿತ್ಯೋತ್ಸವ' ಕವನಗುಚ್ಛದ 'ಎಲ್ಲ ಮರೆತಿರುವಾಗ', 'ನಾಡ ದೇವಿಯೆ', 'ಮತ್ತದೇ ಬೇಸರ', 'ನಿನ್ನ ಅನುರಾಗ'. 'ನೀ ನುಡಿಯದಿರಲೇನು', 'ಸಗ್ಗದ ಸಿರಿ ಬಂತು', 'ನಾದವಿರದ ಬದುಕು', 'ಅಂದೇನು ಇಂದೇನು', 'ಆಹ! ಪ್ರಾತಃಕಾಲ', 'ಲೋಕ ಹಿತವೇ' ಇತ್ಯಾದಿ.

'ನಿತ್ಯೋತ್ಸವ' (ಜೋಗದ ಸಿರಿ ಬೆಳಕಿನಲ್ಲಿ) ಕವನವನ್ನು ಶಿವಮೊಗ್ಗೆಯಲ್ಲಿ ನಾನು ವಾಸವಾಗಿದ್ದ ಮೊದಲನೆಯ ಕಾಲಾವಧಿಯಲ್ಲಿ, ಅಂದರೆ ೧೯೬೯ರಲ್ಲಿ ಬರೆದೆ. ರಜೆಯಲ್ಲಿ ಬೆಂಗಳೂರಿಗೆ ಹೋಗಿದ್ದಾಗ ಜಯನಗರದ ನಮ್ಮ ಮನೆಯ ಮಾಳಿಗೆಯ ಮೇಲೆ ಒಂದು ರಾತ್ರಿ ಶತಪಥಿಸುತ್ತ ಅದನ್ನು ರಚಿಸಿದೆ. ಆಕಾಶವಾಣಿ ಕಾರ್ಯಕ್ರಮವೊಂದಕ್ಕೆ ತುರ್ತಾಗಿ ಕವಿತೆಯನ್ನು ಬರೆದುಕೊಡಬೇಕಾಗಿದ್ದ ಅನಿವಾರ್ಯತೆಯ ಕಾರಣಕ್ಕೆ ಆ ಕವನ ಮೂಡಿ ಬಂದಿತು. ಹೀಗಾಗಿ, ಅದರ ರಚನೆ ಬೆಂಗಳೂರಿನಲ್ಲಾದರೂ ಪ್ರೇರಣೆ ಪೂರ್ತಾ ಶಿವಮೊಗ್ಗದ್ದು. ಆ ಸಮಯಾವಧಿಯಲ್ಲಿ ನನ್ನಿಂದ ಹೊರ ಬಂದ ಇತರ ಗಣನೀಯ ರಚನೆಗಳೆಂದೆ "ಹಕ್ಕಿಗಳು" ಹೆಸರಿನ ಸಚಿತ್ರ ಮಕ್ಕಳ ಪುಸ್ತಕ ಮತ್ತು "ಇದು ಬರಿ ಬೆಡಗಲ್ಲೋ ಅಣ್ಣ" ಎಂಬ ನನ್ನ ಪ್ರಥಮ ಗದ್ಯ ರೂಪದ ವಿಮರ್ಶನ ಕೃತಿಯ ಕೆಲವು ಮುಖ್ಯ ಲೇಖನಗಳು. ಈ ಕಾರಣಕ್ಕೆ, ಶಿವಮೊಗ್ಗೆಯ ಸಾರಸ್ವತೋತ್ಸವಕ್ಕೆ ಈ ನನ್ನ ಆಯ್ಕೆ ಅರ್ಥಪೂರ್ಣವೆನ್ನಿಸುತ್ತದೆ.

ಇದರೊಂದಿಗೆ ಇನ್ನೂ ಒಂದು ವಿಸ್ಮಯದ ವಿಶೇಷವೂ ಇದೆ. ಹಾಲಿ ಜರಗುತ್ತಿರುವ ಈ ಸಾಹಿತ್ಯ ಸಮ್ಮೇಳನದ ಸ್ಥಳವಾದ ನೆಹರು ಕ್ರೀಡಾಂಗಣದ ಬದಿಯ ರಸ್ತೆಯ ಮಗ್ಗಲಿಗೇ ನನ್ನ ರೂಮು ಇದ್ದುದ್ದು, ನಾನು ಮುಂಚೆ ಉಲ್ಲೇಖಿಸಿರುವ ಹಲವು ಕವಿತೆ ಮತ್ತು ಲೇಖನಗಳನ್ನು ಸೃಜಿಸಿದ್ದು ಆ ಕಿರು ಕೊಠಡಿಯಲ್ಲೆ, ಪ್ರತಿ ದಿವಸ ಮುಂಜಾನೆ ಮತ್ತು ಸಂಜೆ ಈ ಕ್ರೀಡಾಂಗಣದಲ್ಲಿ ನಡೆದು, ಅದನ್ನು ದಾಟಿ ಹೋಟೆಲಿಗೊ, ಪೇಟೆಗೊ, ಕಾಲೇಜಿಗೊ ಹೋಗಬೇಕಾಗಿತ್ತು.

ಸುಮಾರು ನಾಲ್ಕು-ನಾಲ್ಕೂವರೆ ವರ್ಷ ಹೀಗೆ ನಾನು ಇದರ ಮೂಲಕ ಹಾದು ಹೋಗುತ್ತಿದ್ದೆ. ಆಗ ಇಲ್ಲಿ ಯಾವುದೇ ಕಟ್ಟಡ ಎದ್ದಿರಲಿಲ್ಲ.

ಹೀಗೆ, ಬೆಂಗಳೂರಿನ ಬಳಿಕ ನನ್ನ ಪ್ರೀತಿಗೆ ಅತ್ಯತಿ ಪಾತ್ರವಾದ ಶಿವಮೊಗ್ಗದಲ್ಲಿ, ಕರ್ನಾಟಕದ ಸುವರ್ಣ ಮಹೋತ್ಸವದ ವರ್ಷದಲ್ಲಿ, ಮತ್ತು ನಾನು ದೀರ್ಘ ಕಾಲ ವಾಸಿಸಿ ಸಾಹಿತ್ಯ ಕೃಷಿಯನ್ನು ಎಡೆಬಿಡದೆ ಮಾಡಿದ ಕೊಠಡಿಗೆ ತಗುಲಿಕೊಂಡಂತಿರುವ ಕ್ರೀಡಾಗಾರದಲ್ಲಿ ನಡೆದಿರುವ ಈ ಮಹೋತ್ಸವದ ಮುಂದಾಳ್ತನ ದೊರಕಿರುವುದು ಕಾಕತಾಳೀಯವೋ, ಯೋಗಾಯೋಗವೋ ಗೊತ್ತಿಲ್ಲ. ಅದೃಶ್ಯ ಶಕ್ತಿಯ ಕೈವಾಡ ಇದಾಗಿರಬಹುದುದೆಂಬ ಭಾವನೆ ನನ್ನಲ್ಲಿ ಮೂಡಿರುವುದುಂಟು.

ಶಿವಮೊಗ್ಗೆಯ ಪೇಟೆಯ ಪರಿಸರಕ್ಕಿಂತ ನನಗೆ ಹೆಚ್ಚು ಪ್ರೇರಕವಾಗಿದ್ದು, ನಲಿವು ನಿರಾಳಗಳ ಅಮೃತ ಸೇಚನ ಮಾಡಿಸಿದ್ದು ಇಲ್ಲಿನ ಆಸುಪಾಸಿನ ನಿಸರ್ಗದ ಚೇತೋಹಾರಿ ದೃಶ್ಯಾವಳಿ. ಊರಾಚೆಗಿನ ಆ ಹಳೆಯ ಸಂಜೆಗಳ ನಿತ್ಯ ಭೇಟಿಯಿಂದ ನನಗೊದಗಿರುವ ಆನಂದಾನುಭವದ ನಿಧಿ ಮನಸ್ಸಿನ ಖಜಾನೆಯಲ್ಲಿ ಜಮೆಯಾಗಿ ಬಹು ವರ್ಷಗಳವರೆಗೆ ಖರ್ಚಾಗದೆ ಉಳಿದಿತ್ತು. ಆತಂಕದ ಕ್ಷಣಗಳಲ್ಲಿ ಜೀವ ಸ್ವಾಸ್ಥ್ಯದ ರಕ್ಷಣೆಗಾಗಿ ಅದರ ಮಧುರ ಸ್ಮರಣೆ ಉಪಯೋಗಕ್ಕೆ ಬರುತ್ತಿತ್ತು. ಇಮ್ಮಡಿ ಹುರುಪಿನಿಂದ ದೈನಂದಿನ ಕಾರ್ಯ ಕಲಾಪಗಳಲ್ಲಿ ತೊಡಗಲು ಮನಸ್ಸನ್ನು ಅನುಗೊಳಿಸುತ್ತಿತ್ತು.

ನನ್ನೊಡನೆ ಮಾತಾಡದ, ಜಗಳವಾಡದ, ಪ್ರಯಣಕ್ಕೆ ತೊಡಗದ, ಬಸ್ಸಿಗೆ 'ಕ್ಯೂ' ನಿಲ್ಲದ ನಿಸರ್ಗ; ಮನುಷ್ಯ ಸಂಬಂಧಗಳಂತೆ ದಿನಂಪ್ರತಿಯ ಬಾಳಿನಲ್ಲಿ ಕಲಸಿಕೊಳ್ಳದೆ ನನ್ನಿಂದ ತಟಸ್ಥವಾಗಿ ಎಲ್ಲೋ ನೆಲಸಿರುವಂತಹ ನಿಸರ್ಗ– ತನ್ನ ಅಗೋಚರ ಪಾಶಗಳನ್ನು ನನ್ನ ಹೃದಯದ ಸುತ್ತ ಬಿಗಿದು ನನ್ನನ್ನು ಇಷ್ಟೆಲ್ಲ ಕಾಡಿ ಗದ್ಗದಗೊಳಿಸಬಲ್ಲದು, ವಿಸ್ಮಯಮೂಕವಾಗಿಸಬಲ್ಲದು, ದೂರವಾದಷ್ಟೂ, ಹತ್ತಿರಸರಿದು ನನ್ನ ಆಳಕ್ಕಿಳಿದು ಆಳಬಲ್ಲದು ಎಂದು ನನಗೆ ಕೆಲವೊಮ್ಮೆಯಾದರೂ ಅನ್ನಿಸಿರುವುದುಂಟು.

ನಗರೀಕರಣದ ಮೇಲುಮೇಲಿನ ಮೋಹಕ ಮೋಡಿಯ ಮರೆಯಲ್ಲಿ ನಡೆದಿರುವ ವ್ಯಕ್ತಿ ಪ್ರತ್ಯೇಕತೆಯ, ತಿಜೋರಿ ತುಂಬಿಕೆಯ, ಗಿಲೀಟು ವ್ಯವಹಾರಗಳ ದೈನಂದಿನ ನಾಟಕವನ್ನು ನೋಡಿ, ವಿಮರ್ಶಿಸಿ ಬೆಲೆ ಕಟ್ಟುವುದಕ್ಕೆ ಪ್ರಕೃತಿ ಒಂದು ಪ್ರಬಲವಾದ ಮಾನದಂಡ, ಅದು ಎಲ್ಲೋ ದೂರದ ಒಂದು ಸುಂದರ ಗುಂಗಾಗದೆ, ಮಂತ್ರಗಂಬಳಿಯಾಗದೆ ಜೊತೆಜೊತೆಗೇ ನಡೆದು ಪ್ರತಿ ಸಲವೂ ಪುನರ್ಜೀವಿಸುವ ಹೊಚ್ಚ ಹೊಸ ಸಜೀವಾನುಭವ, ಕೈ ಹಿಡಿದು ನಡೆಸುವ ಕರುಣಾಳು, ಒಮ್ಮೆ ಅತಿಥಿಯಾಗಿ, ಆಮೇಲೆ ನಿಕಟ ಸಂಬಂಧಿಯಾಗಿ, ತದನಂತರ ಪೊರೆಯುವ ದೈವವಾಗಿ ಪರಿಣಮಿಸುವ ನಿಸರ್ಗದ ಪರಿ ಮೂಕಗೊಳಿಸುವಂಥದ್ದು.

ಬಹುಶಃ ಎಳವೆಯಿಂದಲೇ ಏಕಾಂತ ಪ್ರೀತಿ, ಪ್ರಕೃತಿಯ ಸಂಸರ್ಗವನ್ನು

ಗಳಿಸಿಕೊಳ್ಳದವನು ಜೀವನದಲ್ಲಿ ದೊಡ್ಡದ್ದನ್ನು ಸಾಧಿಸಲಾರ, ಪಡೆಯಲಾರ, ಪ್ರಕೃತಿಯ ಒಡನಾಟ ಮುಂಬಾಳಿನ ಜಂಜಾಟಗಳ ನಂಜಿಗೆ ಪ್ರತಿರೋಧಕ-ಆಂಟಿಡೋಟ್; ಎಡೆಬಿಡದ ಸಮಸ್ಯೆಗಳ ಬಾಣ ಹತಿಗೆ ವಜ್ರ ಕವಚವೆಂದು ನನ್ನ ಅಚಲ ನಂಬಿಕೆ.

ಪ್ರತಿದಿನ ತುಂಗಾ ನದಿಯ ಹಳೆಯ ಸೇತುವೆಯ ಮೇಲೆ ಕಾಲೇಜಿಗೆ ಹೋಗಿ ಬರುತ್ತಿದ್ದಾಗ ದೂರದವರೆವಿಗೂ ಗೋಚರಿಸುತ್ತಿದ್ದ ನೋಟ ನನಗೆ ಆಪ್ಯಾಯಮಾನಕರವಾಗಿರುತ್ತಿತ್ತು. ಅದರಲ್ಲೂ, ತುಂಗೆ ಜಲವಸ್ತ್ರವನ್ನುಟ್ಟು ಮದುಮಗಳಂತೆ ಮೈಕೈ ತುಂಬಿಕೊಂಡು ಕಂಗೊಳಿಸುತ್ತಿದ್ದ ಮಳೆಗಾದ ಮನಮೋಹಕ ದೃಶ್ಯ, ಅದರ ಒಂದು ಬದಿಯ ಫರ್ಲಾಂಗುಗಟ್ಟಲೆಯ ಹುಲುಸಾದ ಹರಯವಂತೆ ಭತ್ತದ ಗದ್ದೆ, ಇನ್ನೊಂದು ಬದಿ ಉದ್ದಕ್ಕೂ ಸಾಲುಗಟ್ಟಿದ ಅಗ್ರಹಾರೀ ಕಳೆಯ ಹಳೆಯ ಮನೆಗಳ ನೆರವಿ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದಿದೆ. ಸಂಜೆ ನಾನು ಗಾಳಿ ಸೇವನೆಗೆಂದು ಹೋಗುತ್ತಿದ್ದಾಗ ಆಪ್ತನಂತೆ ಆಹ್ವಾನಿಸುತ್ತಿದ್ದ ತುಂಗೆಯ ತುಂಬು ನಾಲೆ, ಜೇಬಿನಲ್ಲಿ ಚಿಲ್ಲರೆಯನ್ನು ಗಿಡಿದುಕೊಂಡು ಓಡುವಾಗ ಹೊಮ್ಮು ಶಬ್ದದ ಹಾಗೆ ಕಬ್ಬಿನ ತೋಟದಲ್ಲಿ ಅಡಗಿಕೊಂಡು ಚಿಲಿಮಿಲಿಸುತ್ತಿದ್ದ ಗುಬ್ಬಚ್ಚಿಗಳ ಕಲರವ, ಮಿಲಿಟರಿಯವರಂತೆ ನೇರ ನಿಂತು ಹಣ್ಣುಗಳ ಮೆಡಲುಗಳನ್ನು ತೊಟ್ಟು ಮೆರೆದಿದ್ದ ಕಂಗು ತೆಂಗುಗಳ ದಟ್ಟ ತರು ಸಮೂಹ, ಅದರ ಬದಿಯಲ್ಲೇ ಬೇಲಿಯುದ್ದಕ್ಕೂ ಚಿಕ್ಕ ಚಿಕ್ಕ ಸರಣಿ ಬಲ್ಬುಗಳನ್ನು ಅಂಟಿಸಿಟ್ಟಂತೆ ಮೆರೆಯುವ ಹಲವು ಬಗೆಯ ಕಾಡು ಹೂವುಗಳ ಕಣ್ ಸೂರೆಗೊಳ್ಳುವ ಕಮನೀಯ ಸಾಲು; ನಡುವೆ ಗೀಜಗಗಳು ನಿರ್ಮಿಸಿರುವ ಅಗಣಿತ ಕಲಾತ್ಮಕ ಸ್ವವಸತಿ ಗೃಹಗಳು. ಇಲ್ಲಿಂದ ಕೆಲವು ಮಾರುಗಳ ದೂರದಲ್ಲಿ ಹಾಯಾದ ನಿರುಮ್ಮಳ ಭಂಗಿಯ ನವುಲೆ ಗ್ರಾಮ. ಅದರಾಚೆ ನಿಡಿದಾದ ಹಚ್ಚೆಯಂತೆ ಹಾಸಿರುವ ರಸ್ತೆ ಬದಿಯ ಕಮಲಿಸಿದ ಕೊಳ. ಅದರ ಏರಿಯಾಚೆಯ ಬಂಡೆಯ ಬಳಿ ಲಂಬಾಣಿ ತಾಂಡದವರು ಕೇರಿದ ಧಾನ್ಯದಿಂದ ಜಾರಿ ಬಿದ್ದದ್ದನ್ನು ನಿರ್ಭಯವಾಗಿ ಮೆಲ್ಲುತ್ತ ಮೈ ಮರೆತ ನವಿಲಿನ ಹಿಂಡು. ಒಂದಿಷ್ಟು ದೂರ ಹತ್ತು ಹದಿನೈದು ಆಳು ಎತ್ತರದ ಗುಡ್ಡದ ಹೊನ್ನಂಚಿನ ಪಡಿನೆಳಲು ಮಗ್ಗುಲಿನ ಕೆರೆಯಲ್ಲಿ ಮೂಡಿ ಜಲ ರಾಶಿಗೆ ಬಳುವಳಿಸಿದ್ದ ಅಪ್ರತಿಮ ಅತಿಶಯತೆ. ಇಂಥವೇ ಭೂದೃಶ್ಯಗಳ ತರಹಾವರಿ ನಿತ್ಯದ ನೋಟ ನನ್ನ ವೃತ್ತಿಯ ಮತ್ತು ಇತರ ದೈನಂದಿನ ಏಗಾಟದ ಕಿರಿಕಿರಿ, ಬೇಸರ, ನಸನಸೆಗಳನ್ನು ಮರೆಸಿ ಪುನಶ್ಚೇತವನ್ನು ಉಡಿಸುತ್ತಿತ್ತು. ದೈನಂದಿನ ಸಾಧಾರಣ ವಸ್ತ್ರ ಧರಿಸಿ ದೈವೀಕೃತ ಅದ್ಭುತಗಳು ನಮ್ಮ ನಡುವೆ ಅಡ್ಡಾಡಿವೆ. ಅವುಗಳನ್ನು ಕಾಣುವ ದಿವ್ಯ ಚಕ್ಷು ನಮಗಿಲ್ಲವಾಗಿದೆ. ಪೌರನ ವೇಷ ತೊಟ್ಟು ದೊರೆ ಜನಪದದ ನಡುವೆ ಅಡ್ಡಾಡಿದರೂ ರಾಜ ತೇಜವನ್ನು ಗುರುತಿಸುವ, ಗೌರವಿಸುವ, ಹಿಗ್ಗುವ ಭಾಗ್ಯ ನಮ್ಮ ಪಾಲಿಗೆ ಇಲ್ಲ.

ಶಿವಮೊಗ್ಗೆಯ ನೆಲದ ಗುಣವೇ ಅಂಥದ್ದು. ನದಿಯ ಪಕ್ಕದ ಮರಳಿನಲ್ಲಿ

ಕೊಂಚ ಬಗೆದರೂ ಅಜಸ್ರವಾಗಿ ಜಲವುಕ್ಕಿ ಬರುವಂತೆ, ಅಲ್ಪಸ್ವಲ್ಪ ಪ್ರಯತ್ನಕ್ಕೂ ಅಸಮಾನ ಸಾಫಲ್ಯವನ್ನು ಮೆರೆಸುವಂಥದ್ದು: ಸಮೃದ್ಧತೆ ಅದರ ಹುಟ್ಟುಗುಣ; ಧಾರಾಳತೆ ಅದರ ಜಾಯಮಾನ, ಅದು ವನಸ್ಪತಿಯ ಬಗೆಗಷ್ಟೇ ಸತ್ಯವಲ್ಲ. ಭಾವುಕ ವ್ಯಕ್ತಿಯ ಮನಸ್ಸಂವೇದನೆಯ ಬಗೆಗೂ ಅಷ್ಟೇ ದಿಟ. ಅದನ್ನು ಸಾರವತ್ತಾಗಿಸಿ ಪುಷ್ಟಿಗೊಳಿಸುವುದರಲ್ಲಿ ಅದರ ಪಾತ್ರ ಅನ್ಯಾದೃಶ. ಹೀಗಾಗಿ ಆಗಿನ ಕಾಲದ ಪ್ರಶಾಂತಾಲಸವೂ ಹೆಚ್ಚು ಏರುಪೇರಿಲ್ಲದ ಸಮತಟ್ಟಿನ ನಿರಾಳವೂ ಆದ ಪರಿಸರ, ನನ್ನ ಅಂತರಂಗದ ಭಾವಾಲೋಚನೆಗಳ ಮೂಡುವಿಕೆಗೆ, ಪರಸ್ಪರ ಒಂದುಗೂಡುವಿಕೆಗೆ ಮತ್ತು ಮಾತಿನಲ್ಲಿ ಅವುಗಳ ತೊಡುವಿಕೆಗೆ ಮಿಗಿಲಾದ ಸಹಕಾರ ನೀಡಿತ್ತು; ಸೃಜನಶೀಲ ಶಕ್ತಿಗೆ ಸೂಕ್ತ ಗೊತ್ತುಗುರಿಯನ್ನು ಕಾಣಿಸಿತ್ತು.

ಇಲ್ಲಿ ನಾನು ಬರೆದದ್ದರ ಜೊತೆಗೆ, ವ್ಯಾಸಂಗಿಸಿದ ಪರಿಯೂ ಸ್ಮರಣೀಯವೇ. ಹಲವು ಹಿರಿಯ ಲೇಖಕರ ಉದ್ಗ್ರಂಥಗಳನ್ನಲ್ಲದೆ, ಕುವೆಂಪು ಅವರ ದಾರ್ಶನಿಕ ರೂಪದ ವಿಮರ್ಶಾತ್ಮಕ ಕೃತಿ ಸಮುಚ್ಚಯವನ್ನು ವಾರಗಟ್ಟಲೆ ಅಧ್ಯಯನಿಸಿ ವಿಚಾರ ಮಾಡಿದ್ದು ಕೂಡ ನನಗೆ ಭಾಷಿಕ ಮತ್ತು ಭಾವಾತ್ಮಕವಾಗಿ ದಕ್ಕಸಿರಿವು ಲಾಭ ಅಷ್ಟಿಷ್ಟಲ್ಲ. ಇದರ ಜೊತೆಗೇ ನಮ್ಮ ನಾಡಿನ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿಗಳ, ಪ್ರಾಚ್ಯ ನಿರ್ಮಿತಿಗಳ ಬಗೆಗಿನ ಪುಸ್ತಕಗಳನ್ನೂ ಶ್ರದ್ಧಾಸಕ್ತಿಯಿಂದ ವಾಚಿಸಲು ಮುಕ್ತಾವಕಾಶವನ್ನು ದೊರಕಿಸಿ ಕೊಟ್ಟಿದ್ದು ಶಿವಮೊಗ್ಗೆಯ ಏಕಾಂಗಿ ಬದುಕಿನ ಪ್ರಶಾಂತಿಯೇ. ಶಿವಮೊಗ್ಗ ಜಿಲ್ಲೆ ಒಂದು ಕಡೆ ನೈಸರ್ಗಿಕ ಕುಬೇರತ್ವಕ್ಕೆ ಕೀರ್ತಿ ಗಳಿಸಿರುವಂತೆ ಮತ್ತೊಂದು ಕಡೆ ಗತಕಾಲದ ದೇಗುಲ, ಶಾಸನ, ಮೂರ್ತಿಶಿಲ್ಪ ವಾಸ್ತು ವೈವಿಧ್ಯಕ್ಕೂ ವಿಖ್ಯಾತ. ಒಂದೆಡೆಗೆ ತೀರ್ಥಹಳ್ಳಿ, ಶೃಂಗೇರಿ, ಆಗುಂಬೆ, ಕೊಣಂದೂರು ಫಾಸಲೆಯ ಅವಾಕ್ಕಾಗಿಸುವ ದಟ್ಟಡವಿಗಳ, ಗಿರಿ ದರಿ ನದಿ ತೊರೆ ಝರಿಗಳ, ಪಶುಪಕ್ಷಿ ಕೀಟಗಳ ವನ್ಯಾತಿಶಯ ಗಳೊಂದಿಗೆ, ಮೂಗಿನ ಮೇಲೆ ಬೆರಳಿಡಿಸುವ ವಿಶ್ವ ಪ್ರಸಿದ್ಧ ಗೇರುಸೊಪ್ಪೆಯ ಮಹದ್ಭೀಷಣಾನುಭವದಾಯಕ, ಭವ್ಯಾದ್ಭುತ ನೀರ್‌ಬೀಳ ಶಿವಮೊಗ್ಗೆಗೆ ಪ್ರಕೃತಿಯ ವರದಾನವಾಗಿರುವಂತೆ; ಮತ್ತೊಂದೆಡೆ ಕರ್ನಾಟಕ್ಕೆ ಹಲವು ಶತಮಾನಗಳ ಜ್ವಲಂತ ಇತಿಹಾಸದ ಕ್ಷಾತ್ರ ಕೊಡುಗೆಗಳನ್ನಲ್ಲದೆ, ಎಣಿಕೆ ದಣಿಯುವಷ್ಟು ದೇಗುಲಗಳ ಮತ್ತವುಗಳ ದಾಖಲಾರ್ಹ ವೈವಿಧ್ಯಮಯ ಕೆತ್ತನೆಯ ಕಲಾಪ್ರಪೂರ್ಣ ಭಿತ್ತಿಶಿಲ್ಪ ಮೂರ್ತಿಶಿಲ್ಪ ಮತ್ತು ಬಸದಿಗಳನ್ನು; ಆರ್ಮ ಅದಟಿನ ಅಟ್ಟಹಾಸಕ್ಕೆ, ದಾನದತ್ತಿಗಳ ಧಾರಾಳತನಕ್ಕೆ ತೋರುಗಂಬಗಳಂತಿರುವ ಶಾಸನಗಳನ್ನು ಮಡಿಲಲ್ಲಿಟ್ಟುಕೊಂಡು ಮೆರೆಸಿರುವ ಬಳ್ಳಿಗಾವೆ ಪ್ರದೇಶದ ಕದಂಬಾದಿ ನಾಗರಖಂಡ ಸಂಸ್ಥಾನದ ಹೆಗ್ಗಳಿಕೆಯ ಹರವು. ಇದಕ್ಕೆ ಹೊಂದಿಕೊಂಡಂತೆ ಮಹಾ ಮಹಿಳೆ, ಅಪ್ರತಿಮ ವೈರಾಗ್ಯ ನಿಧಿ ಮಹಾದೇವಿಯಕ್ಕನ ಪವಿತ್ರತಮ ತವರಾದ ಉಡುತಡಿಯ ಭಾವೋದ್ದೀಪಕ ಪರಿಸರ – ಇವೆಲ್ಲವುಗಳ ಪುನಃ ಪುನದರ್ಶನದಿಂದ ನನ್ನ ಆಂತರ್ಯ ಉದ್ದೀಪ್ತ ಮತ್ತು ಸ್ಫೂರ್ತಿಗೊಂಡಿದೆ. ನಿಸರ್ಗ, ಚರಿತ್ರೆ ಮತ್ತು ಭಾಷೆಯ ಹಿರಿಮೆಯ ಪ್ರಸ್ತಾವ ನನ್ನ

'ನಿತ್ಯೋತ್ಸವ' ಕವನದಲ್ಲಿ ಹೇಗೆ ಹೊಳಹು ಹಾಕಿದೆಯೋ ಹಾಗೆಯೇ ಇತರ ಹಲವು ಕವಿತೆಗಳಲ್ಲಿ, ಗದ್ಯ ಲೇಖನಗಳಲ್ಲಿ ಅಲ್ಲಲ್ಲಿ ಸುಳಿವುದೋರಿದೆ. ಅವುಗಳ ಪರೋಕ್ಷ ಪ್ರಭಾವದ ವರ್ಣರಂಜಿತ ಎಳೆಗಳು ನನ್ನ ಬಾಳಿನಲ್ಲಿ ಹಾಸುಹೊಕ್ಕಾಗಿವೆ. ನನ್ನ ಅಸ್ತಿತ್ವಕ್ಕೆ ಧನ್ಯತಾ ಭಾವದ ಕಳಶವನ್ನು ಮುಡಿಸಿವೆ.

ಶಿವಮೊಗ್ಗೆಯಲ್ಲಿದ್ದ ಎಂಟು ವರ್ಷಗಳ ಎರಡು ಅವಧಿಗಳಲ್ಲಿ ಸಾಹಿತ್ಯಕವಾಗಿ ನನಗೆ ಆಗಿರುವ ಲಾಭ ಮತ್ತು ತೃಪ್ತಿಗಳನ್ನು ಬಣ್ಣಿಸಿದೆನಷ್ಟೆ? ಹಾಗೆಂದು ನನ್ನ ವೈಯಕ್ತಿಕ ಬದುಕು ಕೇವಲ ಗುಲಾಬಿಯೇ ಆಗಿತ್ತು ಎಂದು ಎಣಿಸಬೇಕಾಗಿಲ್ಲ. ಈ ಅವಧಿಯಲ್ಲಿ, ಅದರಲ್ಲೂ ಮೊದಲನೆಯದರಲ್ಲಿ ನಾನು ಏಕಾಗಿಯಾಗಿದ್ದ ಕಾರಣ ಮತ್ತು ಹೋಟೆಲ್‌ನ ಊಟೋಪಚಾರಗಳ ದೆಸೆಯಿಂದ ದೈಹಿಕವಾಗಿ ಅನುಭವಿಸಿದ ಕಷ್ಟ ನಷ್ಟಗಳು ದೇವರಿಗೆ ವೇದ್ಯ. ಪದೇ ಪದೇ ವ್ಯಾಧಿಗ್ರಸ್ತನಾಗುತ್ತಿದ್ದುದು ಹಾಗೂ ಆರೈಕೆಗೆ ಯಾರೂ ಇರದೇ ಪಾಡು ಪಡುತ್ತಿದ್ದುದು ನನ್ನಲ್ಲಿ ತುಂಬ ಅಧೈರ್ಯವನ್ನು ಹುಟ್ಟುಹಾಕುತ್ತಿತ್ತು. ದಿನಗಟ್ಟಲೆ ಅಸ್ಪಷ್ಟವಾದ ಒಂದು ತಲ್ಲಣದ, ಕಸಿವಿಸಿಯ ಭಾವ ನನ್ನ ಮನಸ್ಸನ್ನು ಆವರಿಸಿರುತ್ತಿತ್ತು. ಎಲ್ಲರ ನಡುವೆ ಇದ್ದೂ ನಾನು ಅನಾಥನಾಗಿರುವೆನೆಂಬ ಹತಾಶ ಭಾವನೆ ಒಮ್ಮೊಮ್ಮೆ ನನ್ನನ್ನು ವಿಹ್ವಲಗೊಳಿಸುತ್ತಿತ್ತು. ಆ ಸಮಯದಲ್ಲಿ ಮನುಷ್ಯನ ಬಾಳಿನ ಅಸ್ವತಂತ್ರತೆ, ಪರಾಧೀನತೆಗಳ ಅರಿವು ಘನಗೊಂಡದ್ದರ ಜೊತಗೆ, ಮರ್ತ್ಯಾತೀತ ಶಕ್ತಿಯ ಬಗೆಗಿನ ವಿಶ್ವಾಸ ಗಾಢಗೊಂಡದ್ದನ್ನು ನಾನು ಸ್ಮರಿಸಬೇಕು. ನನ್ನ ವ್ಯಕ್ತಿತ್ವದೊಂದಿಗೆ ತಾತ್ತ್ವಿಕ ದೃಷ್ಟಿಧೋರಣೆ ಸಮನ್ವಿತವಾದದ್ದು ಆ ಕಾಲಘಟ್ಟದಲ್ಲಿ :

> 'ಬಾಳುವುದೆ ಬದುಕಲ್ಲ. ಬದುಕಿನರ್ಥವ ತಿಳಿವ
> ಚಿಂತನೆಯ ನಿಜ ಬದುಕು ನರ ಜೀವಿಗೆ;
> ಬದುಕಲದೆ ಇಹ ಕಲಿಕೆ ಅನ್ಯರನುಭವ ಗಳಿಕೆ;
> ವಿಶ್ವವಿದು ರೂಪುಗೊಳಲೊಂದಾವಿಗೆ.'

ದೈವವೊ, ವಿಧಿಯೊ – ಅಲೌಕಿಕ ಶಕ್ತಿಯೊಂದು ನರನನ್ನು ಕಷ್ಟಗಳ ಪುಟಕ್ಕೆ ಒಡ್ಡಿ, ಅವನ ತಾಳ್ಮೆಯ ಬಣ್ಣವನ್ನು ಅಂದಾಜಿಸಿ ಚಡಪಡಿಸುವಂತೆಸಗಿ, ಕೊನೆಗೆ ಅದೇ ಸಂಕಷ್ಟ ಪರಿಹಾರದ ದಾರಿಯನ್ನು ರಚಿಸುವ ಪರಿ ಅರ್ಥವಾಗದ್ದು, ಆಗ ನಾನು ಉದ್ಗರಿಸಿದ್ದು ಹೀಗೆ:

> 'ಹಾಯಾದ ಹಾದಿಯಲಿ ಕೊಳ್ಳಗಳನೊಡ್ಡುವುದು ನರನ ಸ್ಮರಣೆಗೆ
> ಹಠಾತ್ತನೆ ಸವಾಲೆಸೆದು ದೈವ. ಅದು ಮುಗಿಯಿತೋ, ತಾನೆ ಸಾಗಣೆಗೆ
> ಸಂರಚಿಸುವುದು ಸೇತುವೆಯ; ಹದ್ದು ಮೀರಿದಹಮ್ಮನನ್ನು ಘಾತಿಸಿ ಕೊಂದು;
> ಸದ್ದುಗೈದಿರುವ ಹುಲು ನರನ ಅಳವಿನ ಮಿತ್ತಿಯ ರುಜುವಾತಿಸಲಿಕೆಂದು.'

ಮತ್ತೆ ಕೆಲವೊಮ್ಮೆ ಅದು ಮನುಷ್ಯನಿಗೆ ತೋರಿಸುವ ಕೃಪೆ, ದಯಾಶೀಲತೆ ಪರಿ ಬೆರಗು ಬರಿಸುಂತಹದು:

'ಅರಿಯಲಾಗದು ದೈವ ದಯೆಯನೆಸಗುವ ಪರಿಯ:
ಕೆಲವು ಸಲ ಉದ್ದೇಶಿಸಿದ ಕಾಯಿಗೆ ಹೊಡೆಯದೆಯೆ ನೇರ
ಹಿಂದಿರುವ ಮತ್ತೊಂದಕ್ಕೆ ತಾಕಿಸಿ,
ಆ ಕಾಯಿ, ದೂರದ ಅಪೇಕ್ಷಿತ ಕಾಯಿಗೆ ಬಡಿದು
ಒಡನೆ ಪೋಚಿಗಟ್ಟುವುದು ಅದನು.
–ಇದರಂತೆಯೇ ನರನ ಜೀವಿತದಲಿ
ಕಾಣಿಸದ ದೈವ ಕರುಣೆಯ ಹದನು.'

ಒಟ್ಟಿನಲ್ಲಿ ದೈವಪರವಾದ ಶ್ರದ್ಧೆ, ನಂಬಿಕೆಗಳು ಮನುಷ್ಯನನ್ನು ಕೈಬಿಡುವುದಿಲ್ಲ ಎಂಬ ಭಾವನೆ ಬಲಗೊಂಡದ್ದು ಆ ಸಮಯದಲ್ಲೇ :

'ನಂಬಿದರೆ ಕಂಬವನೆ ಒಡೆದು ಬಂದೇನೆಂದು
ನೊಂದವರಿಗಾಲಂಬವಾದ ಋತವೇ,
ಬಿದ್ದ ಬದುಕೂ ಮತ್ತೆ ಎದ್ದು ನಿಂತೀತೆಂದು
ಸದ್ದಿರದೆ ಮುದ್ದಿಸುವ ಲೋಕ ಹಿತವೇ.'

–ಆದ್ದರಿಂದ ಆ ಶಕ್ತಿಯ ನೆನಪು ಮನುಷ್ಯ ಜೀವಿಗೆ ಸದಾ ಜಾಗೃತವಾಗಿರ ಬೇಕು; ಅದರ ಬಗೆಗೆ ಕೃತಜ್ಞತೆಯ ಭಾವನೆ ಜ್ವಲಂತವಾಗಿರಬೇಕು:

'ಬಾಳಿನಡುಗೆಯ ಮನೆಯ ದಟ್ಟೈಸಿದುರಿ ಹೊಗೆಯ
ಉಸಿರು ಕಟ್ಟಿಸುವಂಥ ಆವರಣದಲಿ
ದೈವ ಸ್ಮರಣೆಯ ಚಿಮಣಿ ನಿತ್ಯ ತೆರೆದಿರಬೇಕು;
ಕರಣ ಗಣವಿರಬೇಕು ಓರಣದಲಿ.'

ಇಂತಹ ನಿಲವಿನ ಮತ್ತೊಂದು ಪರಿಣಾಮವೆಂದರೆ, ಮನುಷ್ಯನ ಸ್ವಂತ ಪರಿಶ್ರಮ, ಗೆಯ್ಮೆಯ ಜೊತೆಗೆ ಅತೀತ ಸತ್ವದ ಒತ್ತಾಸೆಯ ಅಗತ್ಯದ ಅರಿವಾದದ್ದು:

'ಬಟ್ಟೆ ಆರಲಿಕೆ ಬೇಕು ಬಿಸಿಲ ಜೊತೆ ಗಾಳಿ ನೆರವು ಕೂಡ;
ಸಂಕಲ್ಪ ಬತ್ತಿಗಿಂಬಾಗಬೇಕು ಪರ ಕೃಪೆಯ ತೈಲ ಗೂಢ.'

– ಹಾಗೆಯೇ, ಸದಿಚ್ಛೆಯಿದಾಗಷ್ಟೇ ನಮ್ಮ ಇಂಗಿತ ಫಲಪ್ರದವಾಗುವುದೆಂಬ ಭಾವನೆ ಪುಷ್ಟಿಗೊಂಡಿದ್ದು ಆಗಲೇ :

'ಸ್ವಪ್ರಯತ್ನ ಋಜುವಿರಲು ಚಾಚುವುದು ಮರೆಯಿಂದ ವರದ ಹಸ್ತ :
ಸಿಕ್ಕಿರದ ನೂಲು ಬಳಿಯಿರಲು ಸಿದ್ಧ, ಸುಕ್ಕಿರದ ನಯದ ವಸ್ತ್ರ.'

ರೋಗರುಜಿನಾದಿಗಳ ಭಯೋದ್ವೇಗ ವಿಹ್ವಲತೆಯಿಂದ ಪಾರಾಗಲು ಪ್ರಾಯಶಃ ಓದು, ನಿಸರ್ಗದ ಒಡನಾಟದ ದೈನಂದಿನ ಗಾಳಿ ಸಂಚಾರ ಮತ್ತು ಕವನ ರಚನೆ ಕೊಂಚ ಮಟ್ಟಿಗೆ ಸಹಾಯಕವಾಗುತ್ತಿದ್ದವು. ಒಮ್ಮೊಮ್ಮೆ ಸಾವು ನೋವಿನ ಅಮೂರ್ತ ಆತಂಕ ಮತ್ತು ಒಬ್ಬಂಟಿತನ ಗಾಢವಾಗಿ ಅತಿಯಾದ ಚಡಪಡಿಕೆಗೆ ಈಡಾಗುತ್ತಿದ್ದುದುಂಟು. ಬಹುಶಃ ಇಂತಹ ದಾರುಣವಾದ ಮತ್ತು ತಳ್ಳಂಕದ ಸ್ಥಿತಿ

'ರಾಮನ್ ಸತ್ತ ಸುದ್ದಿ', 'ಗಾಡಿ ಮತ್ತು ನಾಯಿ', 'ಇಬ್ಬಂದಿ' ಮೊದಲಾದ ಕವನಗಳನ್ನು ರಚಿಸಲು ಪರೋಕ್ಷ ಪ್ರೇರಣೆಯನ್ನು ಒದಗಿಸಿರಬೇಕು.

ಕನ್ನಡದ ಮೇಲ್ಲಿನ ಅಭಿಮಾನ ಮತ್ತು ಈ ಭಾಷೆಯಲ್ಲಿ ನಾನು ಬರಹಗಾರನಾಗಿ ಮುಂದುವರಿಯಲು ನನ್ನ ಬಾಲ್ಯದ ಮತ್ತು ವಿದ್ಯಾಭ್ಯಾಸದ ದಿನಗಳ ಪ್ರೇರಣೆ ಮತ್ತು ಪ್ರೋತ್ಸಾಹಕ ವಾತಾವರಣದ ಬಗ್ಗೆ ಅನೇಕರು ಹಲವಾರು ಸಲ ನನ್ನನ್ನು ಪ್ರಶ್ನಿಸಿದ್ದಾರೆ. ಅವರ ಕುತೂಹಲ ಪರಿಹಾರ್ಥ ನಾನು ಆಗಾಗ್ಗೆ ಚುಟುಕಾಗಿ ಅವುಗಳ ಬಗ್ಗೆ ಉತ್ತರಿಸಿದ್ದುಂಟು. ಈಗ ತಮ್ಮೆಲ್ಲರ ಅವಗಾಹನೆಗಾಗಿ ಕೆಲವು ವಿಷಯಗಳನ್ನು ವಿಮಾನಾವಲೋಕನದ ರೀತಿಯಲ್ಲಿ ಸೂಚಿಸಬಯಸುತ್ತೇನೆ.

ನನ್ನ ಬಾಲ್ಯ ನಮ್ಮ ಕುಟುಂಬ ವಾಸಿಸುತ್ತಿದ್ದದ್ದು ಬೆಂಗಳೂರಿನ ಹಳೆಯ ಬಡಾವಣೆಗಳಲ್ಲಿ ಒಂದಾದ ಮಾವಳ್ಳಿಯಲ್ಲಿ, ಲಾಲ್‌ಬಾಗ್‌ನ ನೆರೆಯಲ್ಲೇ ನಮ್ಮ ಮನೆ; ಒಂದು ರಸ್ತೆ ಮಾತ್ರ ಅಡ್ಡ. ಅದು ಬ್ರಿಟಿಷರ ಆಳ್ವಿಕೆಯ ಕಾಲ. ಬೆಂಗಳೂರು ಆಗಿನ್ನೂ ಸಣ್ಣ ನಗರ, ಪಿಂಚಣಿದಾರರ ನಾಕ ಎಂಬ ಕೀರ್ತಿಗೆ ಪಾತ್ರವಾಗಿತ್ತು. ಜನ ಹೆಚ್ಚಾಗಿ ಬಳಸುತ್ತಿದ್ದುದ್ದು ಬೈಸಿಕಲ್ಲು ಇಲ್ಲವೇ ಜಟಕಾ ಗಾಡಿಗಳನ್ನು. ಆಗ ಇದ್ದ ಕಾರುಗಳ ಸಂಖ್ಯೆ ಮತ್ತು ಮಾದರಿಗಳು ತುಂಬಾ ಸೀಮಿತ. ಅವುಗಳ ಗಾತ್ರ, ಆಕಾರ, ಹಾರನ್ನಿನ ಶಬ್ದದ ವೈಖರಿ ಈಗಲೂ ನೆನಪಿದೆ. ಅವು ಇವೊತ್ತಿಲ್ಲ. ಅವುಗಳ ಕೆಲವು ಹೆಸರುಗಳು : ಮಾರಿಸ್ ಮೈನರ್, ಆಸ್ಟಿನ್ ಆಫ್ ಇಂಗ್ಲೆಂಡ್, ವ್ಯಾಕ್ಸಾಲ್, ಸ್ಟುಡಿಬೇಕರ್ ಇತ್ಯಾದಿ. ಆಂಗ್ಲರು ಪ್ರತಿ ಭಾನುವಾರ ದಂಡು ಪ್ರದೇಶದಿಂದ ಲಾಲ್‌ಬಾಗ್‌ಗೆ ವಿಹಾರಾರ್ಥ ಇಂತಹ ವಾಹಗಳಲ್ಲಿ, ಕುದುರೆ ಸಾರೋಟುಗಳಲ್ಲಿ ಕುಟುಂಬದೊಂದಿಗೆ ಬರುತ್ತಿದ್ದುದನ್ನು ನೋಡುವುದೇ ನಮಗೆಲ್ಲ ಒಂದು ಮೋಜು. ನೂರಾರು ಮನೆಗಳಿಗೆ ಒಂದು ರೇಡಿಯೋ ಇದ್ದರೆ ಅದೇ ಒಂದು ಪ್ರತಿಷ್ಠೆಯ ವಿಷಯ. ಒಟ್ಟಿನಲ್ಲಿ ನಿರಾಳವಾದ, ಇದ್ದುದರಲ್ಲಿ ತೃಪ್ತಿಕರವಾದ ಬದುಕು. ನಮ್ಮ ತಂದೆ ಅಲ್ಲಿನ ಪ್ರತಿಷ್ಠಿತರಲ್ಲಿ ಒಬ್ಬರಾಗಿದ್ದಕ್ಕೆ ಕಾರಣ ಅವರ "ಫುಡ್ ಇನ್‌ಸ್ಪೆಕ್ಟರ್' ಹುದ್ದೆ. ಮಾವಳ್ಳಿಯ ನಮ್ಮ ಭಾಗದಲ್ಲಿ ನೂರಾರು ಮುಸ್ಲಿಮ್ ಕುಟುಂಬಗಳಿದ್ದವು. ಸಾಮಾನ್ಯವಾಗಿ ಅವರ ಮಕ್ಕಳು ಕಲಿಯುತ್ತಿದ್ದುದ್ದು ಉರ್ದು ಶಾಲೆಗಳಲ್ಲಿ. ಅಪರೂಪಕ್ಕೆ ಒಬ್ಬಿಬ್ಬರು ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರುತ್ತಿದ್ದರು.

ನಮ್ಮ ತಂದೆಯವರ ದೂರ ದೃಷ್ಟಿಯಿಂದ ನಾನು ಮಾವಳ್ಳಿಯ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗೆ ಸೇರಿದೆ. ಅವರು ಸರ್ಕಾರದ ಹುದ್ದೇದಾರರಾಗಿದ್ದುದರಿಂದ, ಜನ ಸಂಪರ್ಕ ಅಗತ್ಯವಾಗಿದ್ದರಿಂದ ಮುಂದೆ ನಮ್ಮ ನಾಡಿಗೆ ಸ್ವಾತಂತ್ರ್ಯ ದೊರಕಿದ ಮೇಲೆ ನಾನು ಸರ್ಕಾರಿ ಕೆಲಸಕ್ಕೆ ಸೇರಿದರೆ ವ್ಯವಹಾರಕ್ಕೆ ಕನ್ನಡ ಅಗತ್ಯವಾಗುವುದೆಂದು ಮನಗಂಡಿದ್ದರು. ಹಾಗಾಗಿ, ನನಗೆ ಮತ್ತು ನನ್ನ ತಮ್ಮನಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡಿಸಿದರು.

೧೯೪೦-೪೧ನೆಯ ಇಸವಿಯಲ್ಲಿ ನಾನು ಪ್ರೈಮರಿ ಮೊದಲನೆಯ ತರಗತಿಗೆ

ಸೇರಿದೆ. ಆಗಿನ ಕಾಲಕ್ಕೆ ಮಣೆಗಳು ನಮ್ಮ ಪೀಠಗಳು, ಸ್ಲೇಟು ಬಳಪ ನಿತ್ಯ ಸಂಗಾತಿಗಳು. ಕಮಲಮ್ಮ ಮೇಡಂ ಮೆಚ್ಚಿನ ಉಪಾಧ್ಯಾಯಿನಿ. ಬಹುಶಃ ಮೂರನೆಯ ಅಥವಾ ನಾಲ್ಕನೆಯ ತರಗತಿಯಲ್ಲಿ ಎಂದು ತೋರುತ್ತದೆ: ಅವರು ರಾಗವಾಗಿ 'ಗೋವಿನ ಹಾಡ'ನ್ನು ಹಾಡಿದಾಗ ನಮ್ಮಲ್ಲಿ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿಯನಿಯರ ಕಣ್ಣಲ್ಲಿ ನೀರಿನ ಧಾರೆ. ಪರಿಣಾಮಕಾರಿಯಾಗಿ ಹಾಡುತ್ತಿದ್ದು ದಲ್ಲದೆ ಪದ್ಯವನ್ನು ಮನಸ್ಸಿನಲ್ಲಿ ನಾಟುವಂತೆ ವಿವರಿಸುತ್ತಿದ್ದರು. ಶಾಲೆ ಬಿಟ್ಟ ಮೇಲೆ ಆಗಿನ ನಮ್ಮ ಅತಿ ಮುಖ್ಯ ಆಡುಂಬೊಲವೆಂದರೆ ಲಾಲ್‌ಬಾಗ್, ಗೋಡೆಯ ಬದಲಿಗಿದ್ದ ಕಬ್ಬಿಣದ ಸರಳುಗಳ ನಡುವೆ ಸಲೀಸಾಗಿ ನುಗ್ಗಿ ಬಿಡುವಿನ ವೇಳೆಯನ್ನು ನಾವು ಅಲ್ಲಿ ಕಳೆಯುತ್ತಿದ್ದೆವು. ಹೀಗಾಗಿ, ಚಿಕ್ಕಂದಿನಲ್ಲೇ Nature in miniature ನಂತಿದ್ದ ಲಾಲ್‌ಬಾಗ್‌ನ ಮರ, ಗಿಡ, ಬಳ್ಳಿಗಳು: ಹಕ್ಕಿ ಪ್ರಾಣಿ ಕೀಟಗಳು: ಅಲ್ಲಿನ ಪ್ರಶಾಂತ ಪರಿಸ; ಜನ್ಮಾವಸ್ಥೆಯಲ್ಲಿ ಈಜಾಡುತ್ತಿದ್ದ ಕೆರೆ, ಗುಡ್ಡದ ಜೊತೆಗಿನ ಒಡನಾಟ ಮತ್ತು ಅದರ ಮೇಲಿನ ಕೆಂಪೇಗೌಡರ ಗೋಪುರದಲ್ಲಿನ ಆಟ ಪಾಠ ನನಗೆ ನಿಕಟವಾದವು. ಕುವೆಂಪು ಅವರಿಗೆ ಮಲೆನಾಡು ಸ್ಫೂರ್ತಿಯ ತಾಣವಾದಂತೆ, ಪ್ರಕೃತಿಯ ಈ ಪುಟ್ಟ ನೆಲೆ ನನ್ನ ಪಾಲಿಗೆ ವರವಾಗಿ ಪರಿಣಮಿಸಿತು. ಕೆಲವೊಮ್ಮೆ ಶಾಲೆಯಲ್ಲಿ ಕಲಿತಿದ್ದ ಕವಿತೆಗಳನ್ನು ಜ್ಞಾಪಿಸಿಕೊಂಡು ಒಬ್ಬನೇ ತನ್ಮಯನಾಗಿ ಹಾಡುತ್ತಾ ಸುಮಾರು ಸಮಯ ಅಲ್ಲಿ ಕಳೆಯುತ್ತಿದ್ದೆ. ಮೊದಲಿನಿಂದ ಅಂತರ್ಮುಖಿಯಾಗಿದ್ದ ನನಗೆ ಲಾಲ್‌ಬಾಗ್‌ನ ನಿತ್ಯ ಸಾನ್ನಿಧ್ಯ ವಿಶೇಷ ಪ್ರಭಾವ ಬೀರಿತ್ತು. ಮುಂದೆ ನಾನು ಮಾವಳ್ಳಿ ವೃತ್ತದಲ್ಲಿದ್ದ ಮಾಧ್ಯಮಿಕ ಶಾಲೆಯನ್ನು ಸೇರಿದಾಗ ನನ್ನ ಮೇಲೆ ಅತೀವ ಪರಿಣಾಮ ಬೀರಿದ್ದು ಕುವೆಂಪು ಅವರ 'ಕಿಂದರಿ ಜೋಗಿ' ಪದ್ಯ. ಇದನ್ನು ಮತ್ತು 'ಗೋವಿನ ಹಾಡ'ನ್ನು ಹಲವಾರು ಸಲ ಚಿತ್ರವತ್ತಾಗಿ ಕಲ್ಪಿಸಿಕೊಂಡು ಹಾಡಿಕೊಂಡಿದ್ದು ನನ್ನ ಭಾವಕೋಶವನ್ನು ಶ್ರೀಮಂತಗೊಳಿಸಿರಬೇಕು.

ನಮ್ಮ ತಂದೆಯವರು ತಕ್ಕಮಟ್ಟಿಗೆ ಇಂಗ್ಲೀಷ್, ಕನ್ನಡ, ಉರ್ದು ಭಾಷೆಗಳನ್ನು ಬಲ್ಲವರಾಗದ್ದರು. ಸಂಸ್ಕೃತದ ಕೆಲವು ಶ್ಲೋಕಗಳೂ ಅವರಿಗೆ ಬಾಯಿಪಾಠವಾಗಿದ್ದವು. ತಮ್ಮ ವಿರಾಮದ ವೇಳೆಯಲ್ಲಿ ನನ್ನನ್ನು ಮತ್ತು ನನ್ನ ತಮ್ಮನನ್ನು ಲಾಲ್‌ಬಾಗ್‌ಗೆ ವಿಹಾರಕ್ಕೆ ಕರೆದೊಯ್ದು ಕೆಲವು ಕ್ಲಿಷ್ಟ ಕನ್ನಡ ಪದಗಳ ಸರಿಯಾದ ಉಚ್ಚಾರಣೆಯನ್ನು ಹೇಳಿಕೊಡುತ್ತಿದ್ದರು. ನೆನಪಿನಲ್ಲಿ ಉಳಿದಿರುವುದು 'ವಿಘ್ನೇಶ್ವರ', 'ಕೃತಜ್ಞ', 'ಕೃತಘ್ನ', ಸ, ಶ, ಷಗಳ ಸೂಕ್ತ ಉಚ್ಚಾರ, ಇಂಥವನ್ನು ಕೆಲವೊಮ್ಮೆ ಬರೆದೂ ತೋರಿಸುತ್ತಿದ್ದರು. ಹೀಗಾಗಿ ನನ್ನ ಮೊದಲನೆಯ ಗುರು ನನ್ನ ತಂದೆಯವರು. ಹಾಗೆಯೇ, ತಮ್ಮನ ಮನೆ ಪಾಠಕ್ಕೆಂದು ಬರುತ್ತಿದ್ದ ಗಂಗಪ್ಪ ಮೇಷ್ಟ್ರು ಶಿಸ್ತಾಗಿ ಕಲಿಸುತ್ತಿದ್ದ ಪಾಠ ಮತ್ತೂ ಕೊಂಚ ಮಟ್ಟಿನ ಕನ್ನಡ ಕಲಿಯಲು ನೆರವಾಯಿತು.

ಬೇಸಿಗೆಯ ರಾತ್ರಿಗಳಲ್ಲಿ ತಂದೆಯ ಪಕ್ಕ ಮನೆ ಅಂಗಳದಲ್ಲಿ ಮಲಗಿ ನಕ್ಷತ್ರ ಖಚಿತ ಆಕಾಶವನ್ನು ಈಕ್ಷಿಸುತ್ತ, ಅವರು ಸರಳಿಸಿ ಹೇಳುತ್ತಿದ್ದ 'ಅರೇಬಿಯನ್ ನೈಟ್ಸ್'ನ ಕಥೆಗಳು ನನ್ನ ವಿಭಾವನೆ ಹಸನುಗೊಳ್ಳಲು ಸಹಕಾರಿಯಾದವು. ಅದರಲ್ಲಿ ಬರುವ

ಶಹಜಾದಿಗಳು, ಫೇರಿಗಳು, ಯಕ್ಷಿಣಿಯರು, ಮಂತ್ರವಾದಿಗಳು ಮುಂತಾದ ಪಾತ್ರಗಳು, ಅರಮನೆ ಉದ್ಯಾನಗಳು, ಅದ್ಭುತ ಸನ್ನಿವೇಶಗಳು, ಮಾಯಾ ಜಗತ್ತಿನ ಭ್ರಾಮಕ ದೃಶ್ಯಗಳು ನನ್ನ ಕಲ್ಪನೆಗೆ ರೆಕ್ಕೆ ಮೂಡಿಸಿದ್ದವು. ಅವುಗಳನ್ನು ನೆನಪಿಸಿಕೊಂಡು ಮುದಗೊಳ್ಳುತ್ತಿದ್ದದ್ದು ಅದೆಷ್ಟು ಸಲವೋ, ಮಾನವನ ಬದುಕಿನ ನಿತ್ಯ ಕೋಟಲೆಗಳ ಮುಗಿವಿರದ ಮರಳುಗಾಡಿನಲ್ಲಿ ಬಾಲ್ಯದ ನೆನಪು ಚೈತನ್ಯದಾಯಕ ಓಯಸಿಸ್ಸು, ಮನುಷ್ಯ ವಯಸ್ಸಿನಲ್ಲಿ ಮುಂದೆ ಸಾಗಿದ ಹಾಗೆ, ಶೈಕ್ಷಣಿಕವಾಗಿ ಮೇಲೇರಿದ ಹಾಗೆ, ಬಾಲ್ಯದಲ್ಲಿ ಸಮ್ಮೋಹಕ ಸಂವೇದನೆಗಳ ಸ್ವಯಂದೀಪ್ತ ಸಂಗ್ರಹಾಲಯದಂತಿದ್ದ ಅವನ ಮನಸ್ಸು ಬರಿಯ ಬುದ್ಧಿ ಜನ್ಯವಾದ ಅಂಕಿ ಅಂಶಗಳನ್ನು, ಶುಷ್ಕಮಾಹಿತಿಗಳನ್ನು ದಾಸ್ತಾನಿಸಿಡುವ ಕಗ್ಗತ್ತಲಿನ ಗೋದಾಮು ಆಗುತ್ತದೆ. ಒಟ್ಟಿನಲ್ಲಿ ಚಿಕ್ಕಂದು ಎನ್ನುವುದು –

'ವಾಸ್ತವದ ದಳ್ಳುರಿಗೆ ಸೀಯದೆಯೆ ಉಳಿದಿರುವ
ಪುಟ್ಟ ಕನಸಿನ ಚಿಟ್ಟೆ ರೆಕ್ಕೆ ಬಾಲ್ಯ;
ಬಾಳ್ ಬನದ ಮೃದು ಗರಿಕೆ, ಮುದಿತನದ ಕನವರಿಕೆ,
ಕವಿಯ ನಿತ್ಯ ಸ್ಫೂರ್ತಿ ನೇವರಿಕೆ ಬಾಲ್ಯ.'

ಹಾಗೆಯೇ –

'ನೂರಾರು ತರಲೆಗಳ ಕಾರ್ಪಣ್ಯದೊರಲೆಗಳ
ಕೊಡಹಿ ತೇಲಿದ ಅರಳೆ ಬದುಕು ಬಾಲ್ಯ;
ಬಾಲ್ಯದಲ್ಲಿರುವವಗೆ ಮಧುರ ಬಾಲ್ಯದ ಮೌಲ್ಯ
ಮನವರಿಕೆಯಾಗದನಿತಮೂಲ್ಯ ಬಾಲ್ಯ.'

ನನ್ನ ಎಳಮೆಯ ಪ್ರಭಾವಗಳು ಅನಂತರದ ಸಾಹಿತ್ಯದ ಬದುಕಿನ ಮೇಲೆ ನೆರಳನ್ನು ಹಾಯಿಸಿವೆ. ನನ್ನ ಅಂತಶ್ಚೇತನವನ್ನು ಭಾವಮಯಗೊಳಿಸಿವೆ; ನನ್ನನ್ನು ಎಷ್ಟೋ ಸಲ haunt ಮಾಡಿ ಕಾಡಿವೆ. ಆಮೇಲೆ ನಾನು ಹೊಸಕೋಟೆಯ ಮುನಿಸಿಪಲ್ ಪ್ರೌಢಶಾಲೆಗೆ ಪ್ರವೇಶಪಡೆದಾಗ ಅಲ್ಲಿ ನನ್ನ ಸಾಹಿತ್ಯಾಸಕ್ತಿ ಪುಸ್ತಕ ಪತ್ರಿಕೆಗಳ ಓದಿಗೆ ಹೆಚ್ಚಿನ ಒತ್ತಾಸೆ ಸಿಕ್ಕಿತು. ಪಠ್ಯಗಳಲ್ಲಿ ಸೇರಿದ್ದ ಗೋವಿಂದ ಪೈ, ಡಿವಿಜಿ, ಮಾಸ್ತಿ, ಕುವೆಂಪು, ಬೇಂದ್ರೆ, ಪುತಿನ, ವಿ.ಸೀ. ಅವರ ಪದ್ಯಗಳು ನನಗೆ ಬಾಯಿಪಾಠವಾಗಿದ್ದಲ್ಲದೆ, ಮೋಡಿ ಹಾಕಿ ಸೆಳೆದಿದ್ದವು. ಆಗ ನಡೆಯುತ್ತಿದ್ದ ನೀತಿ ಪಾಠದ ತರಗತಿ (Moral Class) ಗಳಲ್ಲಿ ಉಪಾಧ್ಯಾಯರು ಓದಿ ವಿವರಿಸುತ್ತಿದ್ದ ಕೈಲಾಸಂ ಅವರ 'ಪೋಲಿ ಕಿಟ್ಟಿ', ಅನಕೃ ಅವರ 'ಸಂಧ್ಯಾರಾಗ', ಶ್ರೀ ಅವರ 'ಇಂಗ್ಲಿಷ್ ಗೀತಗಳು' ಮತ್ತು ಫ್ರೆಂಚ್ ಕಾದಂಬರಿಕಾರ ವಿಕ್ಟರ್ ಹ್ಯೂಗೊ (Victor Hugo) ನ "Les Miserables" ಕಾದಂಬರಿಯ, ಡಾ. ಎನ್. ಎಸ್. ನಾರಾಯಣಶಾಸ್ತ್ರಿ ಎಂಬುವರ ಕನ್ನಡಾನುವಾದ 'ಮಹಾ ಪುರುಷ' ಮೊದಲಾದವು ನನ್ನ ಮೇಲೆ ಗಣನೀಯ ಪ್ರಭಾವವನ್ನು ಬೀರಿದವು. ನನ್ನ ಚಿತ್ರಕ ಶಕ್ತಿ ಮತ್ತು ಭಾವಸ್ಪಂದನ ಸಾಮರ್ಥ್ಯ ಈ ಅವಧಿಯಲ್ಲಿ ಪುಷ್ಟಿಗೊಂಡವು.

೧೯೪೯ನೆಯ ಇಸವಿಯಲ್ಲಿ ಪ್ರೌಢಶಾಲೆಯ ಮೊದಲನೆಯ ತರಗತಿಯ

ವಿದ್ಯಾರ್ಥಿಯಾಗಿದ್ದಾಗ ನನ್ನ ಮೊದಲ ಕವನ 'ಜಲಪಾತ'ವನ್ನು ಬರೆದೆ. ಪ್ರತ್ಯಕ್ಷವಾಗಿ ಅದನ್ನು ನೋಡದೆ ಬರೆದ ಚೊಚ್ಚಲು ಬಾಲಿಶ ಶಬ್ದಲಾಪ ಅದು. ಆಗ ನನ್ನ ವಯಸ್ಸು ಹದಿನಾಲ್ಕು. ಅಲ್ಲಿನ ಗೆಳೆಯರ ಶಹಬಾಸ್‌ಗಿರಿ ಮತ್ತು ಇಬ್ಬರು ಗುರುವರ್ಯರ (ಆರ್. ನಾಗರಾಜ್ ಮತ್ತು ಕೇಶವಮೂರ್ತಿ) ಉತ್ತೇಜನವನ್ನು ನೆನೆಯಬೇಕು. ಬಳಿಕ ನಾನು ಬೆಂಗಳೂರಿನ ಸರ್ಕಾರಿ ಇಂಟರ್‌ಮೀಡಿಯಟ್ ಕಾಲೇಜಿಗೆ ಸೇರಿದಾಗ ಶ್ರೀ ಎಲ್. ಗುಂಡಪ್ಪ ನನ್ನ ಪದ್ಯಗಳನ್ನು ನೋಡಿ ಸಾರ್ವಜನಿಕ ಸಮಾರಂಭವೊಂದರಲ್ಲಿ ಪ್ರಶಂಸಿಸಿ ಪ್ರೋತ್ಸಾಹಿಸಿದರು. ತದನಂತರ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್.ಸಿ., ಆನರ್ಸ್ ತರಗತಿಯ ವಿದ್ಯಾರ್ಥಿಯಾಗಿದ್ದಾಗ ಗುರುಗಳಾದ ಜಿ.ಪಿ. ರಾಜರತ್ನಂ, ವಿ.ಸೀ. ನನ್ನ ಪದ್ಯಗಳನ್ನು ಓದಿ ಸೂಕ್ತ ಸಲಹೆಗಳನ್ನು ಕೊಡುವುದರ ಜೊತೆಗೆ, ರಾಜರತ್ನಂ ಅವರು ಅಲ್ಲಿಯ ಕರ್ನಾಟಕ ಸಂಘದ ಪ್ರಕಟಣೆಯಾದ 'ಪದ್ಯಾಂಜಲಿ'ಯಲ್ಲಿ ನನ್ನ ಕೆಲವು ಪದ್ಯಗಳನ್ನು ತಿದ್ದಿ ಪ್ರಕಟಿಸಿದರು. ಅಲ್ಲಿನ ಪ್ರತಿಷ್ಠಿತ ಕರ್ನಾಟಕ ಸಂಘದ ಕಾರ್ಯದರ್ಶಿಯನ್ನಾಗಿಯೂ ಮಾಡಿದರು. ಇವರೆಲ್ಲರ ಪ್ರೋತ್ಸಾಹ ಸದಾ ಸ್ಮರಣೀಯ.

೧೯೫೪ ಅಥವಾ ೧೯೫೫ ಇರಬಹುದು. ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಆನರ್ಸ್ ವಿದ್ಯಾರ್ಥಿ. ಆಗ ಕನ್ನಡ ಸಾಹಿತ್ಯ ಪರಿಷತ್ತು, ಬಹುಶಃ ಚಾಮರಾಜಪೇಟೆಯ ಸಾಹಿತ್ಯ ಸಂಸ್ಥೆ 'ವಿಚಾರ ವಾಹಿನಿ'ಯೊಂದಿಗೆ ಸೇರಿ, ವಿಶೇಷ ಸಂದರ್ಭವೊಂದರಲ್ಲಿ ಕವಿಗೋಷ್ಠಿಯನ್ನು ನಡೆಸಿತು. ಅದರ ಅಧ್ಯಕ್ಷರು ವರ ಕವಿ ದ.ರಾ.ಬೇಂದ್ರೆ. ಇದು ನನ್ನ ಮೊಟ್ಟ ಮೊದಲನೆಯ ಸಾರ್ವಜನಿಕ ಕವಿಗೋಷ್ಠಿಯ ಭಾಗವಹಿಸುವಿಕೆ. ಬೇಂದ್ರೆಯವರ ಕವನಗಳಿಂದ ಪ್ರಭಾವಿತನಾಗಿದ್ದ ನನಗೆ ಇದರಿಂದ ಅನಿರ್ವಚನೀಯವಾದ ಆನಂದವಾಗಿತ್ತು. ಅವರನ್ನು ಪ್ರತ್ಯಕ್ಷವಾಗಿ ಕಾಣುವ ಮತ್ತು ಆಂಗಿಕಾನಭಿಯ ಸಹಿತದ ಅವರ ಸ್ವಾರಸ್ಯಕರವಾದ ಮಾತುಗಳನ್ನು ಹಾಗೂ ಕವನ ವಾಚನವನ್ನು ಕೇಳುವ ಸೌಭಾಗ್ಯ ದೊರಕಿತ್ತು. ಈ ಮುಂಚೆ ಆಕಾಶವಾಣಿಯಲ್ಲಿ ಅಪರೂಪಕ್ಕೊಮ್ಮೆ ಅವರ ಧ್ವನಿಯನ್ನು ಆಲಿಸಿದ್ದೆಷ್ಟೋ ಅಷ್ಟೇ.

ಆ ದಿವಸ ಅನೇಕ ಹಿರಿಯ ಮತ್ತು ಪ್ರಖ್ಯಾತ ಕವಿಗಳು ತಮ್ಮ ಪದ್ಯಗಳನ್ನು ಓದುವವರಿದ್ದರು. ಕಿರಿಯನೂ ಅಜ್ಞಾತನೂ ಆದ ನನ್ನ ಹೆಸರು ಕವಿಗಳ ಪಟ್ಟಿಯ ಕೊನೆಯಲ್ಲಿ ಅಚ್ಚಾಗಿತ್ತು. ನನಗೆ ಸಂಭ್ರಮದ ಜೊತೆಯಲ್ಲೇ ಆದ ಅಳುಕು, ತಲ್ಲಣ ಅಷ್ಟಿಷ್ಟಲ್ಲ. ಕಿಕ್ಕಿರಿದು ನೆರೆದಿದ್ದ ಸಭಿಕರಿಗೆ ಬೇಂದ್ರೆ ಕೇಂದ್ರ ಲಕ್ಷ್ಯವಾಗಿದ್ದರೆಂದರೆ ತಪ್ಪಲ್ಲ. ನನ್ನ ಸರದಿ ಬಂದಾಗ ಸಭಾಕಂಪನದಿಂದ ಭೀತಿಗೊಂಡರೂ ಸಾವರಿಸಿಕೊಂಡು, ಮುಂಚೆ ಮನೆಯಲ್ಲಿ ಹಲವು ಬಾರಿ ಓದಿ ಅಭ್ಯಾಸ ಮಾಡಿಕೊಂಡಿದ್ದ ನಾಟಕೀಯ ಧಾಟಿಯ ಪದ್ಯವನ್ನು ಧೈರ್ಯ ತಂದುಕೊಂಡು ಏರು ದನಿಯಲ್ಲಿ ಕೈಗಳನ್ನು ಅತ್ತಿತ್ತ ಆಡಿಸುತ್ತಾ ವಾಚಿಸಿದೆ. ನನಗೇ ಅಚ್ಚರಿಯಾಗು ವಂತೆ ಸಭಿಕರು ಅಮೋಘವಾಗಿ ಚಪ್ಪಾಳೆ ತಟ್ಟಿ ಉತ್ತೇಜಿಸಿದರು. ಅನಂತರ ಗಾರುಡಿಗ ಕವಿ ಬೇಂದ್ರೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ನನ್ನ ಪದ್ಯ ಮತ್ತು ವಾಚನವನ್ನು ಪ್ರಶಂಸಿಸಿ ಹೀಗೆಂದರು: 'ಈತನ ಹೆಸರು ನಿಸ್ಸಾರ. ಆದರೂ ಕವಿತಾ ಸಾರಸವತ್ತಾಗ್ಯದ.

ಇವನ ಹೆಸರೂ ನನಗೆ ಹೊಸದು. ಆದರ ಇವನಲ್ಲಿ ಅಹಂ ಮತ್ತು ಮದ ನಿಸ್ಸಾರ ಆಗ್ಯದ, ಮುಂದೆ ಇವಂ ಚಲೋ ಕವಿಯಾಗೋ ಲಕ್ಷಣ ತೋರಿಸ್ಯಾನ' ಎಂದು ತಮ್ಮದೇ ಆದ ಹಾಸ್ಯಭರಿತ ಮಾತುಗಳಿಂದ ಹರಸಿದ್ದು ನನಗೆ ಒಂದು ಅರ್ಹತಾ ಪತ್ರವಾಗಿ, ಕೆಲವೇ ದಿವಸಗಳಲ್ಲಿ ಇಲ್ಲಿನ ಸಾಹಿತ್ಯ ವಲಯದಲ್ಲಿ ಪರಿಚಿತನಾಗಲು ಪ್ರೇರಕವಾಯಿತು.

ಹಾಗೆಯೇ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ, ೧೯೫೭ರಲ್ಲಿ ನನಗೆ ಬೆಂಗಳೂರು ಆಕಾಶವಾಣಿಯಲ್ಲಿ 'ಕಾವ್ಯಧಾರೆ' ಕಾರ್ಯಕ್ರಮದಲ್ಲಿ ಸ್ವಂತ ಕವನಗಳನ್ನು ಓದುವ ಅವಕಾಶವೊಂದು ಲಭಿಸಿತ್ತು. ಆ ಕಾಲಕ್ಕೆ ಆಕಾಶವಾಣಿ ಅತ್ಯಂತ ಶಕ್ತಿಯುತ ಪ್ರಚಾರ ಮಾಧ್ಯಮವಾಗಿತ್ತು. ಹೀಗಾಗಿ ನನ್ನ ಹೆಸರು ಜನಕ್ಕೆ ಪರಿಚಿತವಾಗಲು ಅದು ನೆರವಾಯಿತು. ಅನಂತರ ಆಗಿಂದಾಗ್ಗೆ ಸುಮಾರು ಎರಡೂವರೆ – ಮೂರು ದಶಕಗಳ ಕಾಲ ಅದರ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರ ನೆನಪು ಇನ್ನೂ ಮಾಸಿಲ್ಲ. ನನ್ನನ್ನು ಬಾನುಲಿಗೆ ಪ್ರವೇಶ ದೊರಕಿಸಿಕೊಟ್ಟವರು ನನ್ನ ಹಿರಿಯ ಮಿತ್ರರೂ ಕವಿಗಳೂ ಮತ್ತು ಕಾರ್ಯಕ್ರಮ ನಿರ್ವಾಹಕರೂ ಆಗಿದ್ದ ದಿವಂಗತ ರಾಘವೇಂದ್ರ ಇಟಗಿ, ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ನನ್ನ ಸಾಹಿತ್ಯಿಕ ಮತ್ತು ವೈಯಕ್ತಿಕ ಜೀವನಕ್ಕೆ ಮತ್ತೊಂದು ಸ್ಮರಣೀಯ ಮತ್ತು ಮಹತ್ವದ ಸನ್ನಿವೇಶ ಒದಗಿದ್ದು ನಾನು ಗುಲ್ಬರ್ಗಾದಲ್ಲಿ ಸುಮಾರು ಹತ್ತು ತಿಂಗಳುಗಳ ಕಾಲ ಸಹಾಯಕ ಭೂವಿಜ್ಞಾನಿಯಾಗಿ ಕೆಲಸ ಮಾಡಿ, ಅದರಿಂದ ನನ್ನ ಸಾಹಿತ್ಯ ಜೀವನಕ್ಕೆ ಅನುಕೂಲವಾಗದೆಂಬುದು ಮನವರಿಕೆಯಾದ ಬಳಿಕ ಬೆಂಗಳೂರಿಗೆ ಮರಳಿ ನಿರುದ್ಯೋಗಿಯಾಗಿದ್ದ ಅವಧಿಯಲ್ಲಿ. ಅಂದರೆ, ಎಂ.ಎಸ್.ಸಿ. ಯನ್ನು ಮುಗಿಸಿದ ಬಳಿಕ, ೧೯೫೯ರಲ್ಲಿ. ಆ ವರ್ಷದ ಅಕ್ಟೋಬರ್ ತಿಂಗಳಲ್ಲಿ ನಾನು ಕನಸು ಮನಸ್ಸಿನಲ್ಲೂ ಎಣಿಸದ ಸುಸಂಧಿಯೊಂದು ಒದಗಿತ್ತು. ಬೆಂಗಳೂರಿನ ಆಕಾಶವಾಣಿ ಏರ್ಪಡಿಸಿದ್ದ ವಿಶೇಷ ದಸರಾ ಕವಿ ಸಮ್ಮೇಳನದಲ್ಲಿ ಕವನವನ್ನು ವಾಚಿಸಲು ನನಗೆ ಕರೆ ಬಂದಿತ್ತು. ನಿಗದಿತ ದಿನದ ಸಾಯಂಕಾಲ ನಾನು ಆ ನಿಲಯಕ್ಕೆ ಹೋದಾಗ ಮಹದಾಶ್ಚರ್ಯವೊಂದು ಕಾದಿತ್ತು. ಅಲ್ಲಿ ಹಿರಿಯರಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಅವರೊಂದಿಗೆ ಡಾ. ಪು. ತಿ. ನರಸಿಂಹಾಚಾರ್ ಒಂದು ಸೋಫಾದಲ್ಲಿ ಕುಳಿತಿದ್ದರು. ಎದುರಿನ ಮತ್ತೊಂದು ಸೋಫಾದ ಮೇಲೆ, ನನ್ನ ಮೇಲೆ ಅಪೂರ್ವ ಪ್ರಭಾವವನ್ನು ಬೀರಿದ ಮಹಾಕವಿ ಕುವೆಂಪು ಆಸೀನರಾಗಿದ್ದರು. ಈ ಮೂವರು ಪ್ರತಿಷ್ಠಿತರನ್ನು ಕಂಡೊಡನೆ ಉದ್ವಿಗ್ನತೆಯಿಂದ ನನ್ನ ಎದೆ ಬಡಿತ ಅಧಿಕವಾಯಿತು.

ಈ ದಿಗ್ಗಜರಿಗೆ ನಮಿಸಿ ಸ್ವಲ್ಪ ದೂರದ ಕುರ್ಚಿಯಲ್ಲಿ ಸಂಕೋಚದಿಂದ ಮುದುಡಿಕೊಂಡು ಕುಳಿತೆ. ಆನೆಗಳ ನಡುವಿನ ಆಡಿನಂತೆ ಎನ್ನಲೆ? ಡಾ. ಮಾಸ್ತಿಯವರು ನನಗೆ ಮುಂಚೆ ಪರಿಚಯವಿದ್ದವರು. ತಮ್ಮ ಪ್ರತಿಷ್ಠಿತ 'ಜೀವನ'

ಮಾಸ ಪತ್ರಿಕೆಯಲ್ಲಿ ನನ್ನ ಒಂದೆರಡು ಕವಿತೆಗಳನ್ನ ಅಚ್ಚು ಮಾಡಿ ಪ್ರೋತ್ಸಾಹಿಸಿದರು. ನನ್ನನ್ನು ಪ್ರೀತಿ ವಿಶ್ವಾಸದಿಂದ ಮಾತಾಡಿಸುತ್ತಿದ್ದವರು. ಅಂದಿನ ಕವಿಗೋಷ್ಠಿಯ ಅಧ್ಯಕ್ಷತೆ ಡಾ. ಮಾಸ್ತಿಯವರದು. ನಿಲಯದ ನಿರ್ದೇಶಕರಾಗಿದ್ದ ಶ್ರೀ ನಟೇಶ್ ಅವರು ಕುವೆಂಪು ಅವರಿಗೆ ಪರಿಚಿತರಾಗಿದ್ದ ಕಾರಣಕ್ಕೋ, ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಗುರುಗಳಾಗಿದ್ದ ಕುವೆಂಪು ಅವರ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರಿಂದಲೋ ಈ ಅಪೂರ್ವ ಕಾರ್ಯಕ್ರಮಕ್ಕೆ ಕುವೆಂಪು ಅವರನ್ನು ಒಪ್ಪಿಸಿ ಕರೆದು ತರುವ ಸಾಹಸದಲ್ಲಿ ಸಫಲರಾಗಿದ್ದರು. ಕುವೆಂಪು ಅವರು ಭಾಗವಹಿಸಿದ್ದರಿಂದ ಕವಿಗೋಷ್ಠಿಗೆ ಮಿಗಿಲಾದ ಅತಿಶಯತೆ ದೊರಕಿತ್ತು.

ಕುವೆಂಪು ಅವರನ್ನು ನಾನು ಸೆಂಟ್ರಲ್ ಕಾಲೇಜಿನ ದ್ವಿತೀಯ ಆನರ್ಸ್ ವಿದ್ಯಾರ್ಥಿಯಾಗಿದ್ದಾಗ (೧೯೫೫) ಮೊಟ್ಟ ಮೊದಲನೆಯ ಬಾರಿಗೆ ನೋಡಿದ್ದೆ. ಆಗ ಅವರು, ನಮ್ಮ ಕಾಲೇಜು ಸೇರಿದ್ದ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ವಿಜ್ಞಾನ ಇಲಾಖೆಗಳ ಆವಶ್ಯಕತೆಗಳನ್ನು ತಿಳಿಯಲು ನಮ್ಮ ಕಾಲೇಜಿಗೆ ಬಂದಿದ್ದಾಗ ನಾನು ನಮ್ಮ ಭೂವಿಜ್ಞಾನ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿ ನಡೆದಿದ್ದ ತರಗತಿಯಲ್ಲಿ ಕುಳಿತಿದ್ದೆ. ಸಮೀಪದಿಂದ ಅವರ ತೇಜಃಪೂರ್ಣ ವದನಾರವಿಂದವನ್ನು ವೀಕ್ಷಿಸಿದ್ದೆ. ಅಷ್ಟು ಬಿಟ್ಟರೆ ಅವರನ್ನು ಮೂರು ವರ್ಷಗಳ ಬಳಿಕ ಕಂಡಿದ್ದು, ಅದರಲ್ಲೂ ಅವರ ಜೊತೆಗೆ ಕವನ ಓದುವ ಅದೃಷ್ಟವನ್ನು ಪಡೆದದ್ದು ಈಗಷ್ಟೆ. ಕುವೆಂಪು ಅವರ 'ಕಾನೂರು ಹೆಗ್ಗಡತಿ', 'ಮಲೆನಾಡಿನ ಚಿತ್ರಗಳು' ಮತ್ತು ಅವರ ಕೆಲವು ಕವಿತಾ ಸಂಕಲನಗಳನ್ನು ಹಾಗೂ ವಿಮರ್ಶೆಗಳನ್ನು ಓದಿ ರಸಾನುಭವಿಸಿ ಆಗಾಗ್ಗೆ ನೆನಪಿಸಿಕೊಂಡು ಪುಳಕಗೊಳ್ಳುತ್ತಿದ್ದ ಹಾಗೂ ಅವರ ಮಾತುಗಾರಿಕೆಯಿಂದ ಪ್ರಭಾವಿತನಾಗಿದ್ದ ನನಗೆ ಕುವೆಂಪು ಅವರ ಸಾನ್ನಿಧ್ಯದಿಂದ ಒಂದು ಅಘಟಿತ ಘಟನವೇ ಅನಿರೀಕ್ಷಿತವಾಗಿ ನೆರವೇರಿದಂತಾಯಿತು.

ವಯಸ್ಸು ಮತ್ತು ಯೋಗ್ಯತೆಯಲ್ಲಿ ಕಿರಿಯನಾದ ನನ್ನನ್ನು ಮೊದಲು ಪದ್ಯ ಓದಲು ಮಾಸ್ತಿಯವರು ಆಗ್ರಹಿಸಿದರು. ಮೊದಲೇ ಸಾಕಷ್ಟು ತಾಲೀಮು ನಡೆಸಿಕೊಂಡು ಬಂದಿದ್ದ ಎರಡು ಸಾಂದರ್ಭಿಕ ಪದ್ಯಗಳನ್ನು ನಾನು ಸ್ಪಷ್ಟವಾಗಿ, ತಡವರಿಸದ ಹಾಗೆ ಮತ್ತು ನಾಟಕೀಯ ರೀತಿಯಲ್ಲಿ ವಾಚಿಸಿದೆ. ಅದು ಲೈವ್ ಕಾರ್ಯಕ್ರಮವಾಗಿತ್ತು. ಪದ್ಯದ ಓದನ್ನು ಮುಗಿಸಿ 'ಸದ್ಯ ಗೆದ್ದೆ' ಎಂದು ನನ್ನ ಜಾಗದಲ್ಲಿ ಹೋಗಿ ಕೂತೆ. ನಾನು ವಾಚಿಸುತ್ತಿದ್ದುದನ್ನು ಕಣ್ಣು ಮುಚ್ಚಿ ಗಂಭೀರವಾಗಿ ಆಲಿಸುತ್ತಿದ್ದ ಕುವೆಂಪು ಅವರು ನಿಧಾನವಾಗಿ ಕಣ್ತೆರೆದು ನನ್ನನ್ನು ಕರೆದು ಪಕ್ಕದಲ್ಲಿ ಕುಳಿತುಕೊಳ್ಳಲು ಸನ್ನೆ ಮಾಡಿದರು. ನಾನು ಹಿಂಜರಿಕೆಯಿಂದಲೇ ಹೋಗಿ ಅವರ ಸೋಫಾದಲ್ಲಿ ಕೊಂಚ ದೂರದಲ್ಲೇ ಕುಳಿತೆ. ನನ್ನ ಪೂರ್ವಾಪರಗಳನ್ನು ವಿಚಾರಿಸಿದರು. ನಾನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಧ್ಯಾಪಕ ಹುದ್ದೆಗೆ ಅರ್ಜಿ ಗುಜರಾಯಿಸಿದ್ದನ್ನು ಅರಿತುಕೊಂಡರು. 'ನೀವು, ನಿಮ್ಮ ಪದ್ಯಗಳಲ್ಲಿ ಬಳಸಿರುವ ಉಪಮೆ, ರೂಪಕಗಳು

ಹೊಸದಾಗಿವೆ. ಭಾಷೆ ಪರಿಣಾಮಕಾರಿಯಾಗಿದೆ. ಚೆನ್ನಾಗಿ ಓದುತ್ತೀರಿ' ಎಂದಾಗ ನಾನು ಧನ್ಯತಾಭಾವದಿಂದ ಹಿರಿಹಿರಿ ಹಿಗ್ಗಿಹೋದೆ. ಮನಸ್ಸಿನಲ್ಲೇ ಅವರಿಗೆ ಗೌರವ ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದೆ.

ಕುವೆಂಪು ಅವರಂಥ ಮಹಾಕವಿಯೊಬ್ಬರಿಂದ ಮೊದಲನೆಯ ಭೇಟಿಯಲ್ಲೇ ನನ್ನಂಥ ಅಪರಿಚಿತ ಮತ್ತು ಅಲ್ಪಖ್ಯಾತ ಪದ್ಯ ರಚಕನಿಗೆ ಹರಕೆಯ ರೂಪದ ಈ ಉತ್ತೇಜನಕರ ಮಾತುಗಳು ಮೂಡಿದ್ದು ಇಂದಿಗೂ ಅವಿಸ್ಮರಣೀಯ ಪ್ರೇರಣೆಯಾಗಿ ಉಳಿದಿದೆ. ಹಾಗೆಯೇ, 'ಅವರು ಬಲು ಬಿಗುಮಾನದ ವ್ಯಕ್ತಿ, ಅಂತರ್ಮುಖಿ, ಯಾರನ್ನೂ ಹತ್ತಿರ ಬರಗೊಡುವುದಿಲ್ಲ. ಯಾರ ಬಗ್ಗೆಯೂ ಅಭಿಪ್ರಾಯ ಸೂಚಿಸುವುದಿಲ್ಲ' ಎನ್ನುವ ಅವರ ಬಗೆಗಿನ ಸಾಹಿತ್ಯ ವಲಯದ ಸಾಮಾನ್ಯ ಟೀಕೆಗೂ ನನ್ನ ಈಗಿನ ಅನುಭವಕ್ಕೂ ತಾಳಮೇಳ ಕಾಣಲಿಲ್ಲ. ಕುವೆಂಪು ಅವರ ವ್ಯಕ್ತಿತ್ವದ ಗುಣಪ್ರಶಂಸಕ ಅಪೂರ್ವ ಲಕ್ಷಣವೊಂದರ ಮೇಲೆ ಬೆಳಕು ಹಾಯಿಸಲು ಈ ಮಾತುಗಳೂ ಸಹಕಾರಿಯಾಗುತ್ತವೆ. ಇದಾದ ಅನಂತರ, ಈ ಕಾರ್ಯಕ್ರಮದ ಮುಂದುವರಿಕೆಯೋ ಎಂಬಂತೆ ಯೋಗವಶಾತ್ ಮತ್ತೊಂದು ಅನಿರೀಕ್ಷಿತ ಘಟಿಸಿತು. ಮುಂದೆ ಅದು ನನ್ನ ತರಗೆಲೆಯ ಬದುಕಿಗೆ ಸುರಕ್ಷೆ ಮತ್ತು ಆಸರೆಗಳನ್ನು ಕಲ್ಪಿಸುವ ದೈವನಿಯಾಮಕ ಸಂದರ್ಭವಾಗಿ ಪರಿಣಮಿಸಿತು. ಆ ಅಪ್ರಾರ್ಥಿತ ಅನುಗ್ರಹ ನನ್ನ ಬಾಳ್ವೆಯ ಬಟ್ಟೆಯನ್ನೇ ಬದಲಿಸಿತು. ಅರ್ಥಾತ್, ನನಗೆ ಸೆಂಟ್ರಲ್ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಯನ್ನು ಕುವೆಂಪು ಅವರು ಕರುಣಿಸಿದ್ದರು.

ನನ್ನ ಹೆಸರಿಗೆ ಮೈಸೂರಿನ ಡಿವಿಜನಲ್ ಕಮೀಷನರ್ ತಂತಿಯನ್ನು ಕಳುಹಿಸಿದ್ದರು. ವಿಜಯದಶಮಿಯ ದಿವಸ ದಿವಾನ್ ರಂಗಾಚಾರ್ಲು ಭವನದಲ್ಲಿ ಮಹಾಕವಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಜರುಗಲಿರುವ ವಿಶೇಷ ದಸರಾ ಕವಿ ಸಮ್ಮೇಳನದಲ್ಲಿ ಭಾಗವಹಿಸುವಂತೆ ಆ ತಂತಿಯಲ್ಲಿ ಕೋರಿದ್ದರು. ಮೈಸೂರಿಗೆ ಹೋದಾಗ, ನನ್ನನ್ನು ಆಮಂತ್ರಿಸಲು ಸ್ವತಃ ಕುವೆಂಪು ಅವರೇ ಸೂಚಿಸಿದ್ದಾಗಿ ಗೊತ್ತಾದ ಮೇಲಂತೂ ನನಗೆ ಸ್ವರ್ಗ ಮೂರೇ ಮಾರು ಅನ್ನಿಸಿತು. ಅಲ್ಲಿಯೂ ಕೂಡ, ನೆರೆದಿದ್ದ ಕೆಲವು ಗಣ್ಯರ ಮುಂದೆ 'ಇವರು ಇತರ ನವ್ಯ ಕವಿಗಳಂತಲ್ಲ, ಅರ್ಥವಾಗುವಂತೆ ಚೆನ್ನಾಗಿ ಬರೆಯುತ್ತಾರೆ' ಎಂದರು. ಆ ಗಳಿಗೆಯಲ್ಲಿ ನನ್ನ ಮನಸ್ಸು ಕುವೆಂಪು ಅವರೇ ತಮ್ಮ ಒಂದು ಕಥೆಗೆ ಕೊಟ್ಟ ತಲೆಬರಹದಂತೆ 'ಶ್ರೀಮನ್ಮೂಕವಾಗಿತ್ತು'. ಕಿರಿಯನೊಬ್ಬನ ಬಗೆಗಿನ ಮಹಾ ಕವಿಯೊಬ್ಬರ ಔದಾರ್ಯ ಸದಾ ಸ್ಮರಣಯೋಗ್ಯ.

ಬೆಂಗಳೂರಿನಲ್ಲಿ ನಾನು ಇಂಟರ್‌ಮೀಡಿಯಟ್ ತರಗತಿಯಲ್ಲಿ ಓದುತ್ತಿದ್ದ ಕಾಲದಲ್ಲಿ ನಮ್ಮ ತಂದೆಯವರಿಗೆ ಆನೇಕಲ್ಲಿಗೆ ವರ್ಗವಾಗಿತು. ಹೀಗಾಗಿ ವಾರಕ್ಕೋ, ಹದಿನೈದು ದಿವಸಕ್ಕೋ, ಒಂದೆರಡು ದಿವಸದ ರಜೆ ಸಿಕ್ಕಾಗಲೋ, ಇಲ್ಲವೇ ದಸರಾ ಮತ್ತು ಕ್ರಿಸ್‌ಮಸ್‌ಗಳ ರಜೆಯ ವೇಳೆಯಲ್ಲೋ, ಅಥವಾ ಬೇಸಿಗೆಯಲ್ಲೋ

ಆನೇಕಲ್ಲಿಗೆ ಹೋಗಿ ಬರುತ್ತಿದ್ದುದುಂಟು. ನಮ್ಮ ಮನೆ ಪ್ರಶಾಂತವಾದ ಬೀದಿಯ ಸಾಲಿನ ಕೊನೆಯಲ್ಲಿತ್ತು. ಅಲ್ಲಿ ಒಂದು ಪ್ರತ್ಯೇಕವಾದ ಮುಂಭಾಗದ ಕೋಣೆ. ಕಿಟಕಿಯಾಚೆ ದೂರದವರೆಗೂ ನೋಡುತ್ತಾ, ಆಲೋಚನೆಯಲ್ಲಿ ತೊಡಗುತ್ತಾ ಪದ್ಯ ಬರೆಯುವುದೂ ಪುಸ್ತಕ ಓದುವುದೂ ನನಗೆ ಮೆಚ್ಚಾಗಿತ್ತು. ಪಕ್ಕದಲ್ಲೇ ಒಂದು ಹೆಮ್ಮರಗಳ ತೋಪು. ಅದರಾಚೆ ದೃಷ್ಟಿ ಹರಿಯುವವರೆಗೂ ಹಚ್ಚನೆಯ ಹೊಲಗಳು. ಮಧ್ಯಾಹ್ನದ ವೇಳೆ ನಾನು ಆ ಏಕಾಂತ ನೀರವದ ತೋಪಿನ ಗೋಣಿ ಮರದ ಕೆಳಗೆ ಕುಳತು ಓದಿದ ಪುಸ್ತಕಗಳ ಯಾದಿ ಹಿರಿದು. ಮತ್ತು ಅವು ನೀಡಿದ ಹಿಗ್ಗು ಮತ್ತು ಸಂತೃಪ್ತಿ ಮಾತಿನಲ್ಲಿ ಬಣ್ಣಿಸಲು ಅಸದಳ. ಅವುಗಳಿಂದ ನನಗೆ ಆದ ಭಾವ ಭಾಷೆಗಳ ಪ್ರಯೋಜನ ಸಹ ಅತಿಶಯವಾದದ್ದು.

ನಾನು ಆ ತಣ್ಣೆಳಲಿನಲ್ಲಿ ಮತ್ತು ತಂಗಾಳಿಯ ಹಿತಕರ ತೀಡಿಕೆಯಲ್ಲಿ ಓದಿ ಅನುಭವಿಸಿದ ಕೆಲವೊಂದು ಮುಖ್ಯ ಪುಸ್ತಕಗಳೆಂದರೆ, ಎಂ.ಆರ್.ಶ್ರೀ. ಅವರ 'ನಾಗರಿಕ' ಮತ್ತು 'ಧರ್ಮ ದುರಂತ' ನಾಟಕಗಳು: ಕುವೆಂಪು ಅವರ 'ಬೆರಳ್ಗೆ ಕೊರಳ್' ಮತ್ತು 'ಪ್ರೇಮ ಕಾಶ್ಮೀರ', 'ಕಿಂಕಿಣಿ', 'ಪಕ್ಷಿಕಾಶಿ', 'ಅಗ್ನಿಹಂಸ' ಕವನ ಸಂಗ್ರಹಗಳು; ಗೋಪಾಲಕೃಷ್ಣ ಅಡಿಗರ ಅನುವಾದ ಕೃತಿಗಳಾದ 'ಭೂಗರ್ಭ ಯಾತ್ರೆ' ಮತ್ತು 'ರೈತರ ಹುಡುಗಿ' ಹಾಗೂ ತ.ರಾ.ಸು ಅವರ 'ಹಂಸಗೀತೆ'. ಅಂತಹ ಮನಸ್ಸಾಂತ್ವನಕರ ಸುಪ್ರಸನ್ನದಾಯಕ ಭಾವಾನುಭವ ನನಗೆ ಮತ್ತೆ ಒದಗಿದ್ದು ಅನೇಕ ವರ್ಷಗಳ ಬಳಿಕ; ನಾನು ಬಿಡುವಿನ ವೇಳೆಯಲ್ಲಿ ಲಾಲ್‌ಬಾಗ್‌ನ ಮರೆಹೊಕ್ಕು ಹಲವು ಕನ್ನಡ ಮತ್ತು ಇಂಗ್ಲೀಷಿನ ನವ್ಯ ಸಾಹಿತ್ಯದ ಉತ್ಕೃತಿಗಳನ್ನು ಚಿತ್ತೈಕಾಗ್ರತೆಯಿಂದ ಗಂಟೆಗಟ್ಟಲೆ ಓದಿ ಮೈ ಮರೆತಾಗ; ಹಾಗೂ ಅದಾದ ಹಲವು ವರ್ಷಗಳ ಅನಂತರ ಶಿವಮೊಗ್ಗೆಯಲ್ಲಿ ಗಂಭೀರಾಧ್ಯಯನದಲ್ಲಿ ತೊಡಗಿಸಿಕೊಂಡಾಗ. ಇದರೊಂದಿಗೆ ಆನೇಕಲ್ಲಿನ ಹೊರಗಿನ ಕೆಲವು ತೋಟಗಳು, ಈಜುತ್ತಿದ್ದ ಬಾವಿಗಳು ಮತ್ತು ರಮಣೀಯ ಕಣಿವೆ ಪ್ರದೇಶವಾದ 'ಮುತ್ತಿನ ಮಡು' (ಮುತ್ಯಾಲ ಮಡು)ವಿನ ಪ್ರಶಾಂತಮಯ ರಮಣೀಯತೆಯ ಪಾರವಶ್ಯ ಕೂಡ ಸುಸ್ಮರಣೀಯ.

ನನ್ನ ಮೇಲೆ ಓದಿನ ದಿನಗಳಲ್ಲಿ ಪ್ರಭಾವಿಸಿದ ಹೊಸಕೋಟೆ ಈಗ ಬೆಂಗಳೂರಿನ ಭಾಗವೇ ಆಗಿದ್ದರೂ ಆ ಕಾಲಕ್ಕೆ ಅದು ತನ್ನ ಹಳ್ಳಿಯ ಸ್ವರೂಪವನ್ನು ನೀಗಿಕೊಂಡಿರಲಿಲ್ಲ. ಕೆಲವು ಹಿರಿಯ ಅಧಿಕಾರಿಗಳ, ಹಣವೊಂದಿಗರ ಮನೆಗಳಲ್ಲಷ್ಟೇ ಕೊಳಾಯಿಯ ಅನುಕೂಲ. ಬಹಳ ಮಂದಿ ಕೆರೆಯಿಂದಲೋ ಕುಂಟೆಯಿಂದಲೋ ನೀರನ್ನು ತಂದು ಬಳಸುತ್ತಿದ್ದದ್ದು ಸಾಮಾನ್ಯ. ಅನೇಕ ಮನೆಗಳು ಸುದ್ದೆ ಮಣ್ಣಿನ ಮಾಳಿಗೆಯವಾಗಿದ್ದು ಅವಕ್ಕೆ ಗವಾಕ್ಷಿಗಳಿರುತ್ತಿದ್ದವು. ಅಲ್ಲದೇ, ಕಲ್ಲಿದ್ದಲು ಚಾಲಿತ ಬಸ್ಸುಗಳು ಬೇಡವೆಂದರೂ ಕಣ್ಣಿಗೆ ಬೀಳುತ್ತಿದ್ದವು. ರೇಡಿಯೋ ಅನುಕೂಲ ದುರ್ಲಭವಾಗಿದ್ದ ಅನೇಕ ಗೃಹಸ್ಥರಿಗೆ ಪಾರ್ಕಿನಲ್ಲಿ ಧ್ವನಿ ವರ್ಧಕದ ಸಹಕಾರ ದೊಂದಿಗೆ ಸಂಜೆಯ ವೇಳೆ ಜೋರಾಗಿ ರೇಡಿಯೋ ಮೂಲಕ ಪ್ರಸಾರ ಮಾಡುತ್ತಿದ್ದ

ಹಾಡುಗಳು ಮತ್ತು ಸುದ್ದಿಗಳೇ ಮನೋರಂಜನೆ. ಹಲವು ಕುಟುಂಬಗಳು ಇದನ್ನು ಆಲಿಸಲು ಕಾತರರಾಗಿ ಹುಲ್ಲಿನ ಮೇಲೆ ಅಲ್ಲಲ್ಲಿ ಗುಂಪುಗೂಡಿ ಕೂರುತ್ತಿದ್ದದು ಮಾಮೂಲಿ ದೃಶ್ಯ. ಇಂಥದೇ ಇನ್ನೂ ಹಲವಾರು, ಇವೊತ್ತಿಗೆ ಅಪರಿಚಿತವಾದ ವಿಷಯಗಳು ಹೊಸಕೋಟೆಯಂಥ ಊರುಗಳಲ್ಲಿ ಸಾಮಾನ್ಯ.

ಹೊಸಕೋಟೆಯ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಿನ ಅವಧಿಯ ಒಂದು ಉಲ್ಲೇಖನಾರ್ಹ ವಿಷಯವೆಂದರೆ ನನ್ನನ್ನು ಮತ್ತು ನನ್ನ ಸ್ನೇಹಿತರನ್ನು ಆ ಊರು, ಪುಸ್ತಕ ಮತ್ತು ಪತ್ರಿಕೆಗಳನ್ನು ಓದಲು ಪ್ರೇರಿಸಿದ ಸಂಗತಿ. ಆಗ ಆ ಊರಿಗಿದ್ದದ್ದು ಒಂದೇ ಒಂದು ಸಾರ್ವಜನಿಕ ವಾಚನಾಲಯ. ಅದು ಬಸ್‌ಸ್ಟ್ಯಾಂಡಿಗೆ ಅಂಟಿಕೊಂಡಿದ್ದ ಪಾರ್ಕಿನ ಒಂದು ಹೆಂಚಿನ ಕಟ್ಟಡದಲ್ಲಿತ್ತು. ಶಾಲೆ ಬಿಟ್ಟ ಮೇಲೆ ಸಂಜೆಯ ವೇಳೆ ನಮ್ಮಲ್ಲಿ ಹಲವರು ಅಲ್ಲಿಗೆ ಹೋಗಿ ಬರುತ್ತಿದ್ದುದು ವಾಡಿಕೆ. ಅರ್ಥವಾಗಲಿ, ಬಿಡಲಿ ಒಂದು–ಒಂದೂವರೆ ಗಂಟೆಯ ಕಾಲ ಅಲ್ಲಿದ್ದ ದಿನಪತ್ರಿಕೆಗಳಾದ 'ತಾಯಿನಾಡು', 'ವಿಶ್ವ ಕರ್ನಾಟಕ', 'ಸಂಯುಕ್ತ ಕರ್ನಾಟಕ' ಮತ್ತು ಮದ್ರಾಸಿನಿಂದ ಬರುತ್ತಿದ್ದ ಇಂಗ್ಲೀಷಿನ 'The Mail, 'The Hindu' ದೈನಿಕಗಳನ್ನು; 'ಚಿತ್ರಗುಪ್ತ', 'ಪ್ರಜಾಮತ', 'ಜಯ ಕರ್ನಾಟಕ', 'ಕೊರವಂಜಿ', 'ನಗುವ ನಂದ', 'ವಿಕಟ ವಿನೋದಿನಿ'– ಮುಂತಾದವುಗಳನ್ನು ತಿರುವಿ ಹಾಕದೆ ಸಮಾಧಾನವಿರುತ್ತಿರಲಿಲ್ಲ. ವಾಚಲನಾಲಕ್ಕೆ ಬರಲು ಮುಖ್ಯವಾದ ಇನ್ನೂ ಒಂದು ಕಾರಣವಿತ್ತು. ಅದೇನೆಂದರೆ ಶಾಲೆಯ ಪ್ರಾರಂಭಕ್ಕೆ ಮುಂಚೆ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲ ಆವರಣದಲ್ಲಿ ನಿಂತು ಪ್ರಾರ್ಥನೆ ಮಾಡಿದ ಬಳಿಕ ಬಿಸ್ಮಾರ್ಕ್ ಬಿರುದಾಂಕಿತ ಬೆತ್ತ ಸುಸಜ್ಜಿತ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಅಳಸಿಂಗ್ರಾಚಾರ್ಯರು ಹಿಂದಿನ ದಿವಸದ ವರ್ತಮಾನ ಪತ್ರಿಕೆಗಳ ಮುಖ್ಯ ಸುದ್ದಿಗಳ ಬಗೆಗೆ ವಿಚಾರಿಸುತ್ತಿದ್ದರು. ಆಗ ಕೊರಿಯಾ ಯುದ್ಧ ನಡೆಯುತ್ತಿತ್ತು. ಅದರ ಬಗೆಗೆ ಮತ್ತು ನಮ್ಮ ದೇಶದ ಹಲವು ವಿದ್ಯಮಾನಗಳ ಬಗೆಗೆ ನಾವು ಪತ್ರಿಕೆಗಳಲ್ಲಿ ಓದಿಕೊಂಡು ಬಂದು, ಅವರು ಯಾರನ್ನು ಪ್ರಶ್ನಿಸುತ್ತಾರೋ ಆ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಹರಕು ಮುರುಕು ಭಾಷೆಯಲ್ಲಿ ವರದಿ ಒಪ್ಪಿಸಬೇಕಾಗಿತ್ತು. ಇಲ್ಲದಿದ್ದರೆ ಬೆತ್ತದ ರುಚಿ ತಪ್ಪುತ್ತಿರಲಿಲ್ಲ. (ವಿದ್ಯಾರ್ಥಿನಿಯರಿಗೆ ಮಾತ್ರ ರಿಯಾಯ್ತಿ.) ಇಂತಹ ಭಯ ನಮ್ಮನ್ನು ಓದಿನ ಕಡೆ ಹಚ್ಚಿದ್ದು ನಿಜಕ್ಕೂ ನಮ್ಮ ಭಾಗ್ಯವೆಂದು ಈಗ ಅನ್ನಿಸುತ್ತದೆ.

ಒಟ್ಟಿನಲ್ಲಿ ಚಿಕ್ಕಂದಿನ ಮತ್ತು ಯೌವನಪೂರ್ವ ವಯೋಮಾನದ ನೆನಹುಗಳು ಮನಸ್ಸನ್ನು ಆಪ್ಯಾಯಮಾನಗೊಳಿಸುವುದರಲ್ಲಿ ಸಹಕಾರಿಯಾಗುತ್ತವೆ:

'ಜೀವನದ ಜಂಜಡದ ಸುಡು ಬಿಸಿಲ ಜಾತ್ರೆಯಲಿ
ನೆನಹು ತಣವನು ಎರೆವ ಅರವಟ್ಟಿಗೆ;
ಹಿಂದು–ಮುಂದಿನ ಮಧ್ಯೆ ಹೂವ ಸೇತುವೆ ಸ್ಮರಣೆ,
ಉರಿ, ಬೆಳಕ ಬೆಸೆಯುವುದು ಒಟ್ಟೊಟ್ಟಿಗೆ.'

ಹೆಗ್ಗೊಂಬೆಗೆ ಕಟ್ಟಿದ್ದ ಜೇನುಹುಟ್ಟಿಯ ಸುಟ್ಟ ಗುರುತಿನಂತೆ ಆಗಿನ ನೆನಪುಗಳು ಮನಸ್ಸನ್ನು ಎಡೆಬಿಡದೆ ಹಳಹಳಿಸುತ್ತವೆ.

ಹಲವಾರು ವರ್ಷಗಳಿಂದ ನಮ್ಮ ನಾಡಿನ ವಿವಿಧ ನಗರ ಮತ್ತು ಊರುಗಳ ಹಲವು ಪ್ರಕಾರದ ಕಾರ್ಯಕ್ರಮಗಳಲ್ಲಿ, ದೇಶ ವಿದೇಶಗಳ ಕನ್ನಡ ಕೂಡ ಮತ್ತು ಮನೆಗಳಲ್ಲಿ ನನ್ನ ಕೆಲವು ಮೆಚ್ಚಿನ ಕವನ ಮತ್ತು ಗೀತೆಗಳನ್ನು ಓದಿಸಿ, ಅವುಗಳು ಹುಟ್ಟಿದ ಸಂದರ್ಭ, ಪ್ರೇರಣೆ ಮುಂತಾದ ವಿವರಗಳನ್ನು ಅನೇಕರು ಹಲವಾರು ಬಾರಿ ಕೇಳಿದ್ದಾರೆ. ಅಂತಹ ಕವಿತೆಗಳಲ್ಲಿ ಎರಡರ ಬಗೆಗಂತೂ ತಪ್ಪದೇ ನನ್ನನ್ನು ಪ್ರಶ್ನಿಸಿದ್ದಾರೆ. ಅವೆಂದರೆ 'ನಿತ್ಯೋತ್ಸವ' ಮತ್ತು 'ಕುರಿಗಳು, ಸಾರ್, ಕುರಿಗಳು'. ನನ್ನ ಕೆಲವೊಂದು ಶಿಷ್ಟ ಜನ ಮೆಚ್ಚುಗೆಯ ಕವಿತೆಗಳಲ್ಲಿ ಇವೆರಡು ರಚನೆಗಳು ಹೆಚ್ಚು ಅದೃಷ್ಟಶಾಲಿಗಳು. ನಾನು ಕಾರ್ಯಕ್ರಮಗಳಿಗೆ ಹೋದೆಡೆಯಲ್ಲಿ ಇವನ್ನು ಹಾಡದೆ ಇರುವುದು ಅಪರೂಪ. ಜನರ ಸಂತೋಷಕ್ಕೆ ಪಾತ್ರವಾಗಿರುವ ಹಲವು ಕವಿತೆಗಳನ್ನು ಕನ್ನಡ ತಾಯಿ ನನ್ನಿಂದ ಬರೆಸಿರುವುದಕ್ಕೆ ಮತ್ತು ನಾನು ಕನ್ನಡದಲ್ಲಿ ಬರೆಯುತ್ತಿರುವುದಕ್ಕೆ ಧನ್ಯನೆಂಬ ಭಾವನೆ ನನ್ನನ್ನು ಆವರಿಸಿರುವುದು ಇಂತಹ ಸಂದರ್ಭಗಳಲ್ಲೇ. ಆ ಪದ್ಯಗಳು ಮೈ ತಳೆದ ಸಂದರ್ಭವನ್ನು ನಿಮ್ಮೆದುರು ನಿವೇದಿಸಬಯಸುತ್ತೇನೆ.

'ನಿತ್ಯೋತ್ಸವ'ವನ್ನು ನಾನು ತುರ್ತಾದ ಒಂದು ಸಂದರ್ಭಕ್ಕೆ ಅರ್ಧ ಮುಕ್ಕಾಲು ಗಂಟೆಯ ಅವಧಿಯಲ್ಲಿ ರಚಿಸಿದೆ. ಕಾಲ ಮತ್ತು ಜನಮಾನಸದಲ್ಲಿ ಇಂತಹ ವ್ಯಾಪ್ತಿಯ ಆಯಾಮವನ್ನು ಪಡೆದುಕೊಳ್ಳುತ್ತದೆ ಎಂಬ ಕಲ್ಪನೆ, ಅದನ್ನು ಬರೆದಾಗ ನನಗೆ ಲವಲೇಶವೂ ಇರಲಿಲ್ಲ. ಆ ಕವನವನ್ನು ರಚಿಸಿದ್ದು ಬೆಂಗಳುರಿನ ಜಯನಗರದ ನಮ್ಮ ಮನೆಯ ಮಾಳಿಗೆಯ ಮೇಲೆ. ಆದರೆ ಆ ಕವಿತೆಯ ಹೂರಣ ಪೂರ್ತಿ ಶಿವಮೊಗ್ಗೆಯದೇ. ಏಕೆಂದರೆ ನಾನು ಅಲ್ಲಿದ್ದ ಅವಧಿಯ ಒಂದು ಸಮಯದಲ್ಲಿ (೧೯೬೯) ರಜೆಗೆ ಬೆಂಗಳೂರಿಗೆ ಬಂದಾಗ ಅದನ್ನು ಬರೆದೆ.

ಆಕಾಶವಾಣಿಯವರು ಆ ವರ್ಷದ ನವೆಂಬರ್ ತಿಂಗಳಲ್ಲಿ 'ತಿಂಗಳ ಹೊಸ ಹಾಡು' ಕಾರ್ಯಕ್ರಮಕ್ಕೆ ನನ್ನಿಂದ ಒಂದು ಪದ್ಯವನ್ನು ಬಯಸಿ ಶಿವಮೊಗ್ಗೆಗೆ ಬರೆದ ಕಾಗದಕ್ಕೆ ನಾನು ಒಪ್ಪಿಗೆ ಸೂಚಿಸಿದ್ದೆ. ಸನ್ನಿವೇಶವಶಾತ್ ಮಧ್ಯಕಾಲೀನ ಪರೀಕ್ಷೆ, ಪಾಠ ಪ್ರವಚನಗಳ ನಡುವೆ ಆ ವಿಷಯ ಮರೆಗೆ ಸರಿದಿತ್ತು. ಸಂಬಂಧಪಟ್ಟವರು ನನ್ನನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಜ್ಞಾಪಿಸಲು ಪ್ರಯತ್ನಿಸಿದಾಗ ನಾನು ರಜೆಗೆ ಬೆಂಗಳೂರಿಗೆ ಬಂದಿದ್ದೆ. ಅದನ್ನು ತಿಳಿಯಲು ನನ್ನನ್ನು ಸಂಪರ್ಕಿಸಿ ಮರುದಿನದ ಹೊತ್ತಿಗೆ ಪದ್ಯವನ್ನು ಕಳಿಸಲೇಬೇಕೆಂದು ಒತ್ತಾಯಿಸಿದರು. ಇಂತಹ ಸಮಯಾಭಾವದ ಇಕ್ಕಟ್ಟಿನ ಸ್ಥಿತಿಯಲ್ಲಿ ಒಂದು ರಾತ್ರಿ ನಮ್ಮ ಮನೆಯ ಮಾಳಿಗೆಯ ಮೇಲೆ ಶತಪಥಿಸುತ್ತಾ ಅದನ್ನು ರಚಿಸಿದೆ. ನವೆಂಬರ್ ಮಾಹೆಯಾಗಿದ್ದರಿಂದ ರಾಜ್ಯೋತ್ಸವದ, ಅರ್ಥಾತ್ ಕನ್ನಡ ತಾಯಿಯ ಬಗೆಗೆ ಬರೆಯುವುದು ಸೂಕ್ತವೆನ್ನಿಸಿ

ಶಿವಮೊಗ್ಗೆಯ ಅನುಭವಗಳನ್ನು ಮೆಲುಕು ಹಾಕಿಕೊಳ್ಳುತ್ತ ಬರೆದು ಆಕಾಶವಾಣಿಗೆ ಕಳಿಸಿದೆ. ಮುಂದೆ ಅದಕ್ಕೆ ದಿವಂಗತ ಮೈಸೂರು ಅನಂತಸ್ವಾಮಿ 'ಕಲಾವತಿ' ರಾಗವನ್ನು ಅಳವಡಿಸಿ ನೂರಾರು ಸಭೆ ಸಮಾರಂಭಗಳಲ್ಲಿ ಹಾಡಿ, ವೃಂದ ಗಾನವಾಗಿ ಹಾಡಿಸಿ ಜನರ ಹೃದಯಕ್ಕೆ ನಿಕಟಗೊಳಿಸಿದರು. ಕನ್ನಡದ ಪ್ರಪ್ರಥಮ ಭಾವಗೀತೆಯ ಕ್ಯಾಸೆಟ್ಟನ್ನು ಇದೇ ಹೆಸರಿನಲ್ಲಿ ತಂದ ಮೇಲಂತೂ (೧೯೭೭೮) ಅದು ಕನ್ನಡಿಗರ ಮನೆಮನೆಗೂ ತಲುಪಿ ವಿರಾಜಿಸುವಂತಾಯಿತು.

ಇಲ್ಲೇ ಒಂದು ಸ್ವಾರಸ್ಯಕರವಾದ ಸಂಗತಿಯನ್ನು ನಿಮಗೆ ತಿಳಿಸಬಯಸುತ್ತೇನೆ. ಸುಮಾರು ಹದಿನೈದು-ಹದಿನಾರು ವರ್ಷಗಳ ಹಿಂದೆ ಬೆಂಗಳೂರಿನ ಪದ್ಮನಾಭನಗರದ ನಮ್ಮ ಮನೆಯ ಉಪ್ಪರಿಗೆಯ ಹಾಲಿನಲ್ಲಿ ತಿರುಗಾಡುತ್ತಿದ್ದೆ. ಪಕ್ಕದ ಬಯಲಿನಲ್ಲಿ ಇರುವ ಪರ ಭಾಷಿಕರ ಮನೆ ಎದುರಿನ ಚಪ್ಪರದಲ್ಲಿ ಹಲವಾರು ಅಯ್ಯಪ್ಪನ ಭಕ್ತರು ಭಜನೆ ಮಾಡುತ್ತಿದ್ದದ್ದು ಕೇಳಿಸುತ್ತಿತ್ತು.

'ನಿತ್ಯೋತ್ಸವ, ಅಯ್ಯಪ್ಪ, ನಿತ್ಯೋತ್ಸವ, ನಿನಗೆ ನಮ್ಮ ಭಕ್ತಿಪೂರ್ವಕ ನಿತ್ಯೋತ್ಸವ' ಎಂದು ಸಾಮೂಹಿಕವಾಗಿ ಹಾಡುತ್ತಿದ್ದ ಗೀತೆಯ ಹಲವು ಸಾಲುಗಳ ಪದಗಳು ಮತ್ತು ಒಟ್ಟು ರಾಗ ನನ್ನ ಕವಿತೆಯದ್ದೇ ಆಗಿತ್ತು ನನಗೆ ಕುತೂಹಲವಾಗಿ ಮರು ದಿವಸ ಆ ಮನೆಯ ಹುಡುಗನನ್ನು ಕರೆದು ವಿಚಾರಿಸಿದಾಗ ಅವನು, 'ನಮ್ಮ ಗುರುಗಳು ಆ ಹಾಡನ್ನು ಹೇಳಿಕೊಟ್ಟಿದ್ದಾರೆ. ಅಯ್ಯಪ್ಪನ ಮೇಲಿನ ಭಜನೆಗಳ ಕ್ಯಾಸೆಟ್ಟಿನಲ್ಲಿ ಇದೆ. ನಾವು ಶಬರಿ ಮಲೆಗೆ ಹೋಗುವಾಗ ಬಸ್ಸಿನಲ್ಲಿ ಇದನ್ನು ಹಾಡುತ್ತೇವೆ' ಎಂದ. ನಾನು ಅದರ ಮೂಲ ಕವಿತೆಯನ್ನು ಬರೆದವನ ಹೆಸರು ಗೊತ್ತಿದೆಯೆ? ಎಂದಾಗ ಅವನು ತಲೆ ಅಲ್ಲಾಡಿಸಿ 'ಯಾವೊನು ಬರೆದವನೋ, ಯಾರಿಗೆ ಗೊತ್ತು!' ಎಂದಾಗ, ನನಗೆ ನಿಜಕ್ಕೂ ಸಂತೋಷವೇ ಆಗಿತ್ತು. ಕವಿ ಯಾರೆಂದು ತಿಳಿಯದೆ ಜನ ಅವನ ಕವನಕ್ಕೆ ಮಹತ್ವನ್ನು ಕೊಟ್ಟು ಹಾಡಿ ಸಂತೋಷ ಪಡುವುದು ನಿಜಕ್ಕೂ ಕವಿಗೊಂದು ಭಾಗ್ಯವೆನ್ನಿಸುತ್ತದೆ. ಇಂಥವೇ ಇನ್ನೂ ಕೆಲವು ಅನುಭವಗಳು ನನಗಾಗಿವೆ.

ಇನ್ನು 'ಕುರಿಗಳು, ಸಾರ್, ಕುರಿಗಳು' ಎಂಬ ರಾಜಕೀಯ ವಿಡಂಬನೆಯ ಕವನ ಮೂಡಿ ಬಂದ ಸಂದರ್ಭವನ್ನು ಕುರಿತು ಎರಡು ಮಾತು. ಇದು ಒಂದು ಸಾಮಯಿಕ ಸ್ವರೂಪದ ನವ್ಯ ಜಾಡಿನ ನಾಟಕೀಯ ಕವಿತೆ. ಇದನ್ನು ನಾನು ರಚಿಸಿದ್ದು ಚೀನೀಯರ ದುರಾಕ್ರಮಣ ನಮ್ಮ ನಾಡಿನ ಮೇಲೆ ಆಗಿದ್ದ ಕಾಲಾವಧಿಯಲ್ಲಿ. ಬೆಂಗಳೂರಿನ ಬಸವನಗುಡಿಯಲ್ಲಿದ್ದ ನಮ್ಮ ಮನೆಯ ಪಕ್ಕದ ಒಂದು ಕೊಠಡಿಯಲ್ಲಿ. ೧೯೬೨ರಲ್ಲಿ ಚೀನೀಯರ ಅಕ್ರಮ ಪ್ರವೇಶ ನಮ್ಮ ಗಡಿ ಭಾಗಗಳಲ್ಲಿ ಆದದ್ದು ಸರಿಯಷ್ಟೆ? ಓಬೀರಾಯನ ಕಾಲದ ಬಂದೂಕುಗಳೊಡನೆ ನಮ್ಮ ವೀರ ಸೈನಿಕರು ಚೀನೀಯರ ಜೊತೆ ಹಿಮಾಲಯದ ದುರ್ಗಮ ಮತ್ತು ದುಷ್ಕರ ಪ್ರದೇಶಗಳಲ್ಲಿ ಜೀವದ ಹಂಗನ್ನು ತೊರೆದು ಕಾದಿದರು. ಆಗ ನಮ್ಮ ದೇಶಕ್ಕೆ ಆದ ಪ್ರಾಣಹಾನಿ, ಭೂಪ್ರದೇಶದ ಕಬಳಿಕೆಯ ವಿಸ್ತಾರ ಅತ್ಯಂತ ನೋವು ಅಪಮಾನಗಳ

ವಿಷಯವೆನ್ನಿಸುತ್ತದೆ. ಚೀನೀಸೇನೆ ಭಾರತದ ಒಳಗೆ ನುಗ್ಗಿದ್ದರೂ ನಮ್ಮ ಮುಖಂಡರು ರಾಷ್ಟ್ರಕರನ್ನು ಅಜ್ಞಾನದ ಕತ್ತಲೆಯಲ್ಲಿಟ್ಟಿದ್ದು ಮಹಾಪರಾಧ. ನಮ್ಮನ್ನು ಕುರಿಗಳಂತೆ ವಂಚಿಸಿದ ರಾಜಕೀಯ ನಾಯಕರು ಕಟುಕರಂತೆ ವರ್ತಿಸಿದ್ದು ಇತಿಹಾಸದ ಭಾಗವಾಗಿದೆ. ಸಾವಿರಾರು ಸೈನಿಕರು ಚೀನೀ ದುರಾಕ್ರಮಣಕಾರರ ಗುಂಡಿಗೆ ಬಲಿಯಾಗಿದ್ದಲ್ಲದೆ, ನೂರಾರು ಸೈನಿಕರು ಸೆರೆಯಾಗಿ ಅವರ ರಾಜಧಾನಿ ಪೀಕಿಂಗ್‌ನಲ್ಲಿ (ಬೀಜಿಂಗ್) ಸಾರ್ವಜನಿಕವಾಗಿ ಪ್ರದರ್ಶನಗೊಂಡಿದ್ದಂತೂ ನಮ್ಮ ರಾಷ್ಟ್ರವೇ ತಲೆ ತಗ್ಗಿಸಬೇಕಾಗಿದ್ದ ವಿಷಾದನೀಯ ವಿಚಾರವಾಗಿತ್ತು. ಇದರೊಂದಿಗೆ ಚೀನಿಯರ ಒಬ್ಬ ಪಡೆಯಾಳೂ ಸೆರೆ ಸಿಕ್ಕದಿದ್ದದ್ದು ನಮ್ಮ ದೌರ್ಭಾಗ್ಯ ಮತ್ತು ಅಪಮಾನಕ್ಕೆ ದೊಡ್ಡ ನಿದರ್ಶನವಾಗಿತ್ತು.

ರೇಡಿಯೊದಲ್ಲಿ ಪ್ರತಿನಿತ್ಯ ಇಂತಹ ಸೋಲು, ಅಪಮಾನಗಳ ಸುದ್ದಿಯನ್ನು ಆಲಿಸುತ್ತಿದ್ದ ನನ್ನ ನೆತ್ತರು ಕುದಿಯತೊಡಗಿತ್ತು. ನೋವು ತಹತಹ ಕಸಿವಿಸಿಗಳಿಂದ ಒಂದು ಬಗೆಯ ಅಸ್ವಾಸ್ಥ್ಯ ಭಾವ ಮನಸ್ಸನ್ನು ಚಿಟುಕುಮುಳ್ಳಾಗಿ ಬಾಧಿಸುತ್ತಿತ್ತು. ನಮ್ಮನ್ನು ಸಾಕಿ ಸಲಹುವ ಪ್ರತಿಜ್ಞೆ ಮಾಡಿ ಆಯ್ಕೆಯಾಗಿದ್ದ ರಾಜಕೀಯ ಧುರೀಣರು ಕಸಾಯಿಖಾನೆಯ ನಿಷ್ಠುರಣ ಕಟುಕರಿಗಿಂತಲೂ ಕಠಿಣರಾಗಿ, ಕ್ರೂರಿಗಳಾಗಿ ನಮ್ಮನ್ನು ನಡೆಸಿಕೊಳ್ಳುತ್ತಿದ್ದ ಸಂಗತಿ 'ಕುರಿಗಳು, ಸಾರ್, ಕುರಿಗಳು' ಪದ್ಯಕ್ಕೆ ಬೀಜಪ್ರಾಯ. ಆ ಸಮಯದಲ್ಲಿ ಒಂದುಸಂಜೆ ನಾನು ನಮ್ಮ ಮನೆಯಿಂದ ಹತ್ತಿರವಿದ್ದ ಗಾಂಧಿಬಜಾರಿಗೆ ಹೋಗುತ್ತಿರುವಾಗ ರಸ್ತೆಯ ನಡುವೆ ಕುರಿ ಮಂದೆಯೊಂದು ದಾಟುತ್ತಿದ್ದದ್ದು ಕಾಣಿಸಿತು. ಹಾಗೆಯೇ, ಅವುಗಳ ಪರಾಧೀನ ವರ್ತನೆ ಮತ್ತು ಅಸ್ವತಂತ್ರ ಹಾಗೂ ಅಸಹಾಯಕ ಪರಿಸ್ಥಿತಿ, ನನ್ನ ಬಾಯಿಯಿಂದ 'ಕುರಿಗಳು, ಸಾರ್, ಕುರಿಗಳು' ಎಂಬ ಉದ್ಗಾರವನ್ನು ನನಗರಿವಿಲ್ಲದಂತೆಯೇ ಹೊಮ್ಮಿಸಿತ್ತು. ನಮ್ಮ ದೇಶದ ಹಾಲಿ ಸ್ಥಿತಿಗತಿಗಳೆಲ್ಲ ಕ್ಷಣ ಮಾತ್ರದಲ್ಲಿ ಮಿಂಚಿ ಮಾಯವಾದವು.

ನಾನು ಚಿಕ್ಕಂದಿನಿಂದ ನೂರಾರು ಬಾರಿ ಕುರಿ ಮಂದೆಯನ್ನು ಗಮನಿಸಿರಬಹುದು. ಆಗೆಲ್ಲ ಅದು ಒಂದು ಮಾಮೂಲಿ ನೋಟವಾಗಿ ಕಾಣಿಸಿತ್ತು. ಆದರೆ ದೇಶದ ಹಾಲಿ ದುಃಸ್ಥಿತಿ ನೆನಪಿಗೆ ಬಂದು ನಮ್ಮ ಬದುಕಿನ ಕುರಿತನದ ಅಮಾಯಕತ್ವ ಮತ್ತು ನಿಸ್ಸಹಾಯಕತೆ ತಟಕ್ಕನೆ ಮನಸ್ಸಿಗೆ ಹೊಳೆದವು. ಆ ಒಂದು ಭಾವಾವೇಶದ ಕಾವಿನ ಅವಸ್ಥೆಯಲ್ಲಿ ನಾನು ಮರಳಿ ಮನೆಗೆ ಹಿಂತಿರುಗಿ ಪಕ್ಕದಲ್ಲಿದ್ದ ರೂಮಿನಲ್ಲಿ ಸುಮಾರು ಒಂದು ಗಂಟೆಯ ಅವಧಿಯಲ್ಲಿ ಈ ಪದ್ಯವನ್ನು ರಚಿಸಿದೆ. ಚೆನ್ನಾಗಿ ನೆನಪಿರುವಂತೆ, ಅದು ಮುಗಿಯುವ ತನಕ ಭಾವಪರವಶ ಸ್ಥಿತಿಯಲ್ಲಿ ನಾನಿದ್ದೆ. ಹೀಗೆ, ಸಂದರ್ಭವಶವಾಗಿ (೧೯೬೩) ಆಗ ಮೂಡಿ ಬಂದ ಕವಿತೆ ನಲವತ್ತ ಮೂರು ವರ್ಷಗಳು ಕಳೆದಿದ್ದರೂ ಕೂಡ ಇಂದಿಗೂ ಕಾಲದಿಂದ ಕಾಲಕ್ಕೆ ಜನ ಮೆಚ್ಚಿಗೆಯನ್ನು ಗಳಿಸಿಕೊಳ್ಳುತ್ತಾ ಸಾಗಿರುವುದು ನನ್ನ ಹೆಮ್ಮೆ ಮತ್ತು ಆಶ್ಚರ್ಯಗಳಿಗೆ ಕಾರಣವಾಗಿದೆ.

ಇದು ಹುಟ್ಟಿದಾಗಲೇ ಪತ್ರಿಕೆಯಲ್ಲಿ ಪ್ರಕಟವಾದಾಗ ಅದಕ್ಕೆ ದೊರೆತ ಪ್ರಶಂಸೆ

ಅಭೂತಪೂರ್ವ. ಸ್ವಾರಸ್ಯದ ಸಂಗತಿ ಎಂದರೆ ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಈ ಕವನವನ್ನು ವಿರೋಧ ಪಕ್ಷದ ನಾಯಕ ಶ್ರೀ ಎಸ್. ಗೋಪಾಲಗೌಡರು ವಿಧಾನ ಸಭೆಯಲ್ಲಿ ಓದಿ ಎಲ್ಲರ ಮೆಚ್ಚಿಗೆಗೆ ಪಾತ್ರರಾದರು. ಆಮೇಲೆ ಹಲವರು ಆ ಇಡೀ ಪದ್ಯವನ್ನು, ಇಲ್ಲವೇ ಅದರ ಕೆಲವು ಸಾಲುಗಳನ್ನು ವಿಧಾನ ಸಭೆಯಲ್ಲಿ ಉದ್ಧರಿಸಿದ್ದು ನನಗೆ ಸಂತಸ ತಂದಿದೆ. ಇಷ್ಟೇ ಅಲ್ಲದೆ, ಈ ಕವನದ ಶೀರ್ಷಿಕೆಯನ್ನು ಬಳಸಿಕೊಂಡು ಒಂದು ಚಲಚ್ಚಿತ್ರ ಮತ್ತು ಅದನ್ನು ಅನುಕರಿಸಿದ ತಲೆಬರಹದ ಹಲವಾರು ಚಲನಚಿತ್ರಗಳು ತಯಾರಾದದ್ದು ನನಗೆ ಸೋಜಿಗ ಬರಿಸಿದೆ. ಇದರೊಂದಿಗೆ, ಇದು ನಾಟಕ ರೂಪದಲ್ಲಿಯೂ ದೂರದರ್ಶನದ ತಿಂಗಳುಗಟ್ಟಲೆಯ ಧಾರವಾಹಿಯ ಶಿರೋನಾಮೆಯಾಗಿಯೂ ಸಹ ಹೊಸ ಹೊಸ ಆಯಾಮವನ್ನು ಪಡೆದುಕೊಳ್ಳುತ್ತಿದೆ.

ದೀರ್ಘಕಾಲದ ಓದು, ಸ್ವಾನುಭವ, ವಿಚಾರ ಮಂಥನಗಳಿಂದ ಗಳಿಸಿಕೊಂಡ ಕೆಲವು ವಿಷಯಗಳನ್ನು ನಿಮ್ಮೆದುರು ನಿವೇದಿಸಬಯಸುತ್ತೇನೆ. ಪ್ರಸಕ್ತ ಸಂದರ್ಭದಲ್ಲಿ ನಮ್ಮ ನಾಡು ನುಡಿ ಪರಂಪರೆ ಜನ ಜೀವನ ಸಾಹಿತ್ಯ ವಿಜ್ಞಾನಾದಿ ಸಂಗತಿಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಕೆಲವೊಂದು ಪ್ರಚಲಿತ ವಿದ್ಯಮಾನಗಳನ್ನು ಹಾಗೂ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವುದು ವಿಹಿತವೆನ್ನಿಸುತ್ತದೆ. ಇವುಗಳಲ್ಲಿ ಅನೇಕವನ್ನು ನಾನು ಬಾಳಿನಲ್ಲಿ ಬಹು ಕಾಲದಿಂದ ಒಪ್ಪಿ ನಂಬಿಕೊಂಡು ಮುಂದುವರಿದಿದ್ದೇನೆ. ಮೊದಲಿಗೆ ನಮ್ಮ ನಾಡಿನ ಮಹಾನ್ ಪ್ರಾಚೀನ ಪರಂಪರೆಯ ಬಗೆಗೆ ಸ್ಥೂಲವಾಗಿ ಕೆಲವು ಸಂಗತಿಗಳನ್ನು ನಿರೂಪಿಸಲು ಇಚ್ಛಿಸುತ್ತೇನೆ.

ಕರ್ನಾಟಕದ ವೈಶಿಷ್ಟ್ಯಮಯ ಪರಂಪರೆಯ ಬೇರುಗಳು ಪ್ರಾಚೀನತಮ ಕತ್ತಲಲ್ಲಿ ಮರೆಯಾಗಿವೆ. ಭಾರತದಲ್ಲಿ ಚಾಲ್ತಿಯಲ್ಲಿರುವ ಹಲವಾರು ಭಾಷೆಗಳಲ್ಲಿ ಕನ್ನಡ ಹಳಮೆಯಲ್ಲಿ ಗಣನೀಯವಾದದ್ದು; ಎರಡನೆಯದು. ಆದಿಮ ದ್ರಾವಿಡ (Proto-Dravidian) ಮೂಲದಿಂದ ಕವಲುಗೊಂಡ ಮುಂಚಿನ ಪ್ರಮುಖ ಭಾಷೆಗಳಲ್ಲಿ ಕನ್ನಡ ಸಹ ಒಂದು. ಅದರಲ್ಲಿರುವ ಶಬ್ದ ಸಂಪತ್ತು ಅಪರಿಮಿತ. 'ಕರ್ನಾಟಕ' ಎಂಬ ಪದ ಪ್ರಥಮತಃ ನಮಗೆ ತೋರಿ ಬರುವುದು 'ಮಹಾಭಾರತ'ದಲ್ಲಿ; ಸಭಾ ಮತ್ತು ಭೀಷ್ಮ ಪರ್ವಗಳಲ್ಲಿ ಅಲ್ಲಿ ಬರುವ 'ಕರ್ನಾಟಕ', 'ಕುಂತಲ' ಮತ್ತು ಪ್ರಾಯಃ 'ಮಹಿಷಕಾ' ಕನ್ನಡ ನಾಡಿನ ವಿವಿಧ ಪ್ರದೇಶಗಳನ್ನು ಸೂಚಿಸುವಂಥವು. ಗೋದಾವರಿಯಿಂದ ಕಾವೇರಿ ತನಕ ವಿಸ್ತಾರವಾಗಿ ಹಬ್ಬಿದ್ದ ಭೂಭಾಗದ ಉತ್ತರದ್ದು ಕುಂತಲ, ದಕ್ಷಿಣದ್ದು ಕರ್ನಾಟಕ ಎಂದು ಕರೆಯಲ್ಪಡುತ್ತಿರಬೇಕು.

'ರಾಮಾಯಣ'ದಲ್ಲಿ 'ಕರ್ನಾಟಕ' ಹೆಸರಿನ ಉಲ್ಲೇಖ ಕಂಡು ಬರದಿದ್ದರೂ, ಅದರ ಭಾಗಗಳಾಗಿದ್ದ ಕಿಷ್ಕಿಂಧೆ, ವೈಜಯಂತ, ಮಹೀಷಕಾ ಇತ್ಯಾದಿಗಳು ಕರ್ನಾಟಕ ರಾಜ್ಯವನ್ನು ಸೂಚಿಸಬಹುದು. ಬಹುಶಃ 'ರಾಮಾಯಣ' ರಚಿತವಾದ ಕಾಲ ಕ್ರಿಪೂ. ಮೂರು ಅಥವಾ ನಾಲ್ಕನೆಯ ಶತಮಾನವೆಂದು ಭಾವಿಸಿದರೆ, ಆ ಕಾಲಕ್ಕಾಗಲೇ

ನಮ್ಮ ಈ ಚಿನ್ನ, ಶ್ರೀಗಂಧಗಳ ಬೀಡು ಮತ್ತು ಅದರ ಅಗ್ಗಳಿಕೆಯ ನಾಡವರು ಇತರ ಪ್ರದೇಶಗಳ ಜನರಿಗೆ ಚಿರಪರಿಚಿತರಾಗಿರಬೇಕು. ಕ್ರಿಸ್ತ ಶಕದ ಆರಂಭದ ಕಾಲಕ್ಕೇ ಕರ್ನಾಟಕ ತನ್ನ ಸ್ವಂತತೆ ಮತ್ತು ಹಿರಿಮೆಯನ್ನು ಸ್ಥಾಪಿಸಿಕೊಂಡಿರಬಹುದು. ಆ ಅವಧಿಯಲ್ಲಿ ಗ್ರೀಸ್ ದೇಶದ ಟಾಲೆಮಿ ಕರ್ನಾಟಕದ ಪ್ರವಾಸ ಮಾಡಿ ಅದರ ವೈಭವವನ್ನು ಸ್ತುತಿಸಿರುವನಲ್ಲದೆ, ಅಂದು ಖ್ಯಾತವಾಗಿದ್ದ ಹಲವು ಊರುಗಳ ಹೆಸರುಗಳನ್ನು ಉಲ್ಲೇಖಿಸಿದ್ದಾನೆ. ಸಂಸ್ಕೃತದ ಶೂದ್ರಕನ 'ಮೃಚ್ಛಕಟಿಕ'ದಲ್ಲಿ (ಕ್ರಿಸ್ತಶಕದ ಆರಂಭ ಕಾಲ) 'ಕರ್ನಾಟ'ದ ಪ್ರಸ್ತಾವ ಕಾಣಿಸುತ್ತದೆ. ಅದೇ ಅವಧಿಯಲ್ಲಿ 'ಮಾರ್ಕಂಡೇಯ ಪುರಾಣ' ಸಹ ದಕ್ಷಿಣ ಭಾರತದ ರಾಜ್ಯಗಳನ್ನು ಪ್ರಸ್ತಾವಿಸುತ್ತಾ ಕುಂತಲ, ಮಹೀಷಕಾ, ಕರ್ನಾಟಕವನ್ನು ಹೆಸರಿಸುತ್ತದೆ. ಫಾದರ್ ಹೆರಾಸ್ ಅವರ ಪ್ರಕಾರ, ಸಿಂಧೂ ನಾಗರೀಕತೆ (ಕ್ರಿ.ಪೂ. ೨೫೦೦ರಿಂದ ೧೫೦೦ರ ತನಕ)ಯ ಮುದ್ರೆಯ ಚಿತ್ರಲಿಪಿಯೊಂದ ಅರ್ಥ ಕರ್ನಾಟಕದ ಜನರನ್ನು ಕುರಿತದ್ದು. ಅಲ್ಲಿನ ಪ್ರದೇಶದ ಬುಡಕಟ್ಟು ಜನಾಂಗದವರಲ್ಲಿ ಈಗಲೂ ನಮ್ಮ ಹಳಗನ್ನಡದ 'ಅರಿಲ್' (ನಕ್ಷತ್ರ) ಪದ, ಅದೇ ಅರ್ಥದಲ್ಲಿ ಪ್ರಚಲಿತವಿದೆ ಎನ್ನುತ್ತಾರೆ.

ಅಂತೂ ಕರ್ನಾಕಕ್ಕೆ ಮಹಿಷ ರಾಷ್ಟ್ರ ಅಥವಾ ಮೈಸ ನಾಡು, ಎರುಮೈ ನಾಡು ಎಂಬ ಪ್ರಾಚೀನ ಹೆಸರುಗಳಲ್ಲದೆ, ಕುಂತಲ, ಲಾಟ, ಕೊಂಕಣ, ಪುನ್ನಾಟ ಮತ್ತು ಮಹಾರಾಷ್ಟ್ರ ಎಂದು ಕರೆಯುತ್ತಿದ್ದದ್ದು ತಿಳಿದು ಬರುತ್ತದೆ. ಹಾಗೆಯೇ, ಗ್ರೀಕ್ ಪ್ರಹಸನವೊಂದರಲ್ಲಿ ಕನ್ನಡ ನಾಡಿನ, ಅದರಲ್ಲೂ ಕರಾವಳಿ ಪ್ರದೇಶದ ಮತ್ತು ಅಲ್ಲಿನವರ ಕೆಲವು ಹೆಸರುಗಳಲ್ಲದೆ ಕನ್ನಡದ ಮಾತುಗಳೂ ಬರುತ್ತವೆಯೆಂದು (ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೇರೆತ್ತುವೆಂ) ವಿದ್ವಾಂಸರ ಅಭಿಮತ. ಕ್ರಿಸ್ತ ಪೂರ್ವದ ಬೌದ್ಧ (ಅಶೋಕ) ಶಾಸನಗಳು ಕರ್ನಾಟಕದ ಉತ್ತರ ಭಾಗಗಳಲ್ಲಿ ಸಿಕ್ಕಿರುವುದು, ಚಿತ್ರದುರ್ಗದ ಚಂದವಳ್ಳಿಯ ಬಳಿ ಕ್ರಿಸ್ತ ಪೂರ್ವ ಎರಡನೆಯ ಶತಮಾನದ ಚೀನಾದ ರಾಜನ ಹಿತ್ತಾಳೆ ನಾಣ್ಯ ಹಾಗೂ ರೋಂ ಚಕ್ರವರ್ತಿ ಆಗಸ್ಟಸ್‌ನ ಡಿನೇರಿಯಸ್ ಎಂಬ ಬೆಳ್ಳಿ ನಾಣ್ಯ ದೊರಕಿರುವುದು, ನಮ್ಮ ಶಿವಮೊಗ್ಗೆಯ ಶಿಕಾರಿಪುರ ತಾಲ್ಲೂಕಿನ ತಾಳಗುಂದದಲ್ಲಿ ಪ್ರಪ್ರಾಚೀನ ದೇಗುಲವಾದ ಪ್ರಣವಲಿಂಗೇಶ್ವರದ ಮುಂದುಗಡೆ ಐದನೆಯ ಶತಮಾನದ ಕದಂಬ ದೊರೆ ಶಾಂತಿವರ್ಮನ ಶಾಸನ ಉಪಸ್ಥಿತವಿರುವುದು ನಮ್ಮ ನಾಡಿನ ಗತ ಕಾಲದಲ್ಲಿನ ವ್ಯಾಪ್ತಿ ಹಾಗೂ ಹಿರಿಮೆಗಳನ್ನು ಸಾರಿ ಹೇಳುತ್ತವೆ.

ಕನ್ನಡದ ಮೊದಲನೆಯ ಶಾಸನ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿಯಲ್ಲಿ ಸಿಕ್ಕಿರುವುದು – ಈಗ್ಗೆ ಒಂದೂವರೆ ಸಾವಿರ ವರ್ಷಗಳಷ್ಟು ಹಳೆಯದು (ಕ್ರಿ.ಶ. ೪೫೦). ಈ ಮಹತ್ವದ ಶಾಸನಕ್ಕಿಂತ ಮುಂಚೆಯೇ ಸುಮಾರು ಇನ್ನೂರು-ಮುನ್ನೂರು ವರ್ಷಗಳ ಹಿಂದೆಯೇ ನಮ್ಮ ಕನ್ನಡ ಲಿಪಿ ರೂಪು ಪಡೆದು ಚಲಾವಣೆಯಲ್ಲಿ ಇದ್ದಿರಬಹುದು. ಆಗಿನ ಬೌದ್ಧ ಗ್ರಂಥವೊಂದರಲ್ಲಿ ಉಲ್ಲೇಖವಾಗಿರುವ ಅರವತ್ತು

ನಾಲ್ಕು ಲಿಪಿಗಳಲ್ಲಿ 'ಕಾನಾರಿ'ಯೂ ಒಂದು; ಇದು ಕನ್ನಡ ಲಿಪಿಯನ್ನು ಸೂಚಿಸುತ್ತದೆಂದು ವಿದ್ವಾಂಸರ ಅಭಿಮತ.

ಕನ್ನಡ ಸಾಹಿತ್ಯೇತಿಹಾಸದ ಮೊದಲನೆಯ ಲಕ್ಷಣ ಗ್ರಂಥ ರಾಷ್ಟ್ರಕೂಟ ಸಾಮ್ರಾಟ ನೃಪತುಂಗನಿಂದ ರಚಿತವಾದ "ಕವಿರಾಜ ಮಾರ್ಗ". ಕನ್ನಡಿಗರ ಬಗೆಗಿನ ಹೆಮ್ಮೆ ಆದರಾಭಿಮಾನಗಳು, ಕರ್ನಾಟಕದ ಬಗೆಗೆ ಉಪಯುಕ್ತ ಮಾಹಿತಿಗಳು ಇದರಲ್ಲಿ ಹೃದ್ಯವಾಗಿ ಪ್ರಸ್ತಾಪಿತವಾಗಿವೆ. ಹತ್ತನೆಯ ಶತಮಾನದ ಈ ಅಪೂರ್ವ ಗ್ರಂಥದಲ್ಲಿ ಉಕ್ತವಾಗಿರುವ ನಮ್ಮ ನಾಡು – ನುಡಿ–ಜನಪದರ ಹಿರಿಮೆಯನ್ನು ಕುರಿತಾದ ಪಂಕ್ತಿಗಳು ಚಿರಪರಿಚಿತ, ಇಂದಿಗೂ ಮನನೀಯ:

ಕಾವೇರಿಯಿಂದಮಾ
ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಳಯ ವಿಲೀನ ವಿಶದ ವಿಷಯ ವಿಶೇಷಂ ।
ಪದನರಿದು ನುಡಿಯಲೊಡಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಗಳ್
ಚದುರರ್ ನಿಜದಿಂದ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್.

ಕರ್ನಾಟಕದ ಜನ ಪರಧರ್ಮ ಸಹಿಷ್ಣುತೆಗಳು, ಅನ್ಯರನ್ನು ದ್ವೇಷಿಸಿ, ದೂರ ಮಾಡದೆ ಸಹಬಾಳ್ವೆ ನಡೆಸುವ ಉದಾತ್ತ ಸ್ವಭಾವದವರು. ಇಂದಿಗೂ ಆ ಸತ್ಪರಂಪರೆ ಮುಂದುವರಿದಿದೆ. ಇಲ್ಲಿನ ಸಂಸ್ಕೃತಿಗೆ ಹೊಯ್ನೀರು ಸಮನ್ವಯತೆ, ಸೌಹಾರ್ದ. ನಮ್ಮ ನಾಡಿನ ಅನೇಕ ಅರಸರು ಅತುಳ ಪರಾಕ್ರಮಿಗಳು. ಹಲವು ಪರ ರಾಜ್ಯಗಳನ್ನು ಗೆದ್ದು, ಒಂದು ಕಡೆ ಹಿಮಾಲಯದವರೆಗೆ, ಮತ್ತೊಂದು ಕಡೆ ಬಂಗಾಳದವರೆಗೆ ತಮ್ಮ ಕೀರ್ತಿಯನ್ನು ಪಸರಿಸಿದರು. ಯುದ್ಧದಲ್ಲಿ ಶರಣಾದವರನ್ನು ಕ್ರೌರ್ಯ, ಹಿಂಸೆಗೆ ಈಡು ಮಾಡಿ ನಾಮಾವಶೇಷಗೊಳಿಸಿದವರು. ಬದಲಿಗೆ, ಅವರನ್ನೂ ಅವರ ಧರ್ಮವನ್ನೂ ರಕ್ಷಿಸುವ ಔದಾರ್ಯವನ್ನು ತಳೆದಿದ್ದರು. ಕ್ಷಮೆ, ಶರಣಾಗತರನ್ನು ಕಾಪಾಡುವಿಕೆ ಅವರ ರಕ್ತಗತ ಗುಣ. ಗೆದ್ದ ದೂರದ ರಾಜ್ಯಗಳಲ್ಲಿ ಸುವ್ಯವಸ್ಥಿತ ಆಡಳಿತೆಯ ಸಲುವಾಗಿ ತಮ್ಮ ಪ್ರತಿನಿಧಿಗಳನ್ನು ಉಳಿಸಿ ಅಲ್ಲಿನವರ ಪ್ರಜಾಹಿತವನ್ನು ಕಾಪಾಡಲು ಪಣ ತೊಟ್ಟವರು.

ಕಲ್ಯಾಣ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯ ವಂಗ ದೇಶವನ್ನು ವಶಪಡಿಸಿಕೊಂಡು, ನಮ್ಮ ಕರ್ನಾಟಕದ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡದ ಪರ್ವತಾರಣ್ಯ ಪ್ರದೇಶದ ತನ್ನ ಸಾಮಂತರಾದ ಸೇನರನ್ನು ಆ ದೇಶದಲ್ಲಿ ಆಡಳಿತ ನಡೆಸಲು ಬಿಟ್ಟು ಬಂದದ್ದು ಚರಿತ್ರೆಯಿಂದ ತಿಳಿದು ಬರುತ್ತದೆ. ಹಾಗಾಗಿ, ಬಂಗಾಳದ ಸೇನ್ ವಂಶಸ್ಥರು ಮೂಲತಃ ನಮ್ಮ ಕರ್ನಾಟಕದವರ ಕರುಳಿನ ಕುಡಿಗಳು, ಅಂತೆಯೇ, ನಮ್ಮ ನಾಡಿನ ನಾನ್ಯದೇವ ಸುದೂರದ ಹಿಮಾಲಯದ

ನೇಪಾಳವನ್ನು ಆಳಿದ್ದೂ ಚರಿತ್ರಾರ್ಹವಾಗಿದೆ. ಅಷ್ಟೇ ಅಲ್ಲ, ಅಲ್ಲಿನ ಜಗದ್ವಿಖ್ಯಾತ ಪಶುಪತಿ ದೇವಾಲಯದ ಅರ್ಚಕರು ಮುಂಚಿನಿಂದ ಕನ್ನಡಿಗರು; ಗೋಕರ್ಣದ ಕಡೆಯವರು. ಅವರಲ್ಲಿ ಯಾರಾದರೂ ಕಾಲಾಧೀನರಾದರೆ, ಕರ್ನಾಟಕದಿಂದ ಹೊಸಬರನ್ನು ನೇಮಿಸುವ ಪದ್ಧತಿ ಲಾಗಾಯ್ತಿನಿಂದ ರೂಢಿಯಲ್ಲಿದೆ. ಹಿಮಾಲಯದ ಬಳಿ ಕನ್ನಡ ಶಾಸನ ಸಿಕ್ಕಿರುವುದು, ಅಲ್ಲಿನ ನೈನಿತಾಲ್ ಪ್ರದೇಶದ ಕುಮಾಂವ್‌ನ ಗುಡ್ಡಗಾಡು ಪ್ರದೇಶದಲ್ಲಿರುವ ಬ್ರಾಹ್ಮಣ ಉಪಜಾತಿಯೊಂದರ ಹೆಸರು 'ಕರ್ನಾಟಕ' ಆಗಿರುವುದು; ಅಲ್ಲಿನ ಒಂದು ಬಡಾವಣೆಗೆ 'ಕರ್ನಾಟಕ'ವೆಂಬ ಹೆಸರಿರುವುದು ಕೂಡ ನಮ್ಮವರ ದೇಶೋವಿಶಾಲದ ಅಗ್ಗಳಿಕೆಗೆ ದ್ಯೋತಕವಾಗಿದೆ. ಬಂಗಾಲದ ಸೇನರ ಹಾಗೆಯೇ, ರಾಜಸ್ಥಾನದ ರಾಠೋಡರಿಗು ಸಹ ನಮ್ಮ ಕರ್ನಾಟಕದ ವಂಶವೊಂದರ ಜೊತೆಗೆ ರಕ್ತ ಸಂಬಂಧವಿರುವುದನ್ನು ಘನ ವಿದ್ವಾಂಸರಾಗಿದ್ದ ದಿವಂಗತ ಡಾ. ಎಸ್. ಶ್ರೀಕಂಠಶಾಸ್ತ್ರಿ ಅವರು ಹಿಂದೆಯೇ ತಿಳಿಸಿದ್ದಾರೆ.

ನಮ್ಮ ಕನ್ನಡ ನಾಡಿನ ಸಂಸ್ಕೃತಿ, ಭಾರತೀಯ ಸಂಸ್ಕೃತಿಯ ಒಂದು ಪ್ರಮುಖ ಬಿಳಲಾದರೂ ಜನರ ನಡೆನುಡಿ, ರೀತಿ ರಿವಾಜುಗಳ ವಿವಿಧತೆ; ಜಾನಪದ, ವಚನ, ದಾಸ ಮತ್ತಿತರ ಸಾಹಿತ್ಯದ ಜನಪರ ಧೋರಣೆ ಹಾಗೂ ವಿವೇಕಶೀಲ ಸದ್ಬೋಧೆ; ಸಮಾಜದ ಬೇರೆ ಬೇರೆ ವರ್ಗಗಳ ನಡುವಣ ಸಮನ್ವಯ ಮತ್ತು ಅಸ್ಪೃಶ್ಯತೆಯ ಕೊನೆಗಾಣಿಸುವಕೆ, ಕಾಯಕ ತತ್ತ್ವದ ಮಹತ್ತರತೆ–ಮುಂತಾದ ಸ್ಥಳೀಯ ವೈಶಿಷ್ಟ್ಯಗಳಿಂದ ಸಮೃದ್ಧವಾಗಿರುವುದಲ್ಲದೆ ಅನನ್ಯವಾಗಿದೆ; ಧನ್ಯವಾದಾರ್ಹ ಎನ್ನಿಸಿದೆ. ಜಾನಪದ, ದಾಸವರೇಣ್ಯರ ಹಾಗೂ ಶರಣರ ಸಾಹಿತ್ಯ, ಜಗತ್ತಿನ ಇತರೆಡೆಯಲ್ಲಿ ದುರ್ಲಭವಾದ ಸಮೂಹದ ಚಟುವಟಿಕೆಯ ಸತ್ಫಲ. ಬೇರೆ ಬೇರೆ ವೃತ್ತಿಯ, ಮನೋವೃತ್ತಿಯ ಅಸಂಖ್ಯ ಜನ ಸಾಮಾನ್ಯರು, 'ಶಿವ ಶರಣರು, ಹರಿಭಕ್ತರು ತಮ್ಮ ತಮ್ಮ ಕಸುಬಿನ, ಬದುಕಿನ ರೀತಿಯ ಅನುಭವವನ್ನೇ ಬಳಸಿಕೊಂಡು ಸ್ವಂತ ನೋವು ನಲಿವು ಆಸೆ ಆಶೋತ್ತರಗಳಿಗೆ ನಾಲಗೆ ಆದದ್ದು ಪವಾಡ ಸದೃಶ ಮಹತ್ಕಾರ್ಯ.

ಅದರಲ್ಲೂ, ೧೨ನೆಯ ಶತಮಾನದ ಶಿವಭಕ್ತಭಕ್ತೆಯರ ವಚನ ರಚನೆಗಳಂತೂ ಕ್ರಾಂತಿಕಾರಕವೆನ್ನಿಸಿ ಅನೇಕರಿಗೆ ದಾರಿದೀಪವಾದವು; ಸಮಜಪರವಾದವು ಮತ್ತು ಸುಭಗ, ಸುರಳೀತನವೆನ್ನಿಸಿ ಜನ ಸಾಮಾನ್ಯರಿಗೂ ಆದರಣೀಯವಾಗಿದ್ದವಂಥವು. ಸುಮಾರು ಇನ್ನೂರ ಹದಿನಾರು ಶರಣ, ಶರಣೆಯರು ರಚಿಸಿರುವ ವಚನಗಳು ಕನ್ನಡದಲ್ಲಿ ನಮಗೆ ಲಭ್ಯವಾಗಿವೆ. ಇನ್ನೂ ಅವೆಷ್ಟು ಗತಕಾಲದ ಸೆಳೆಖಾನೆಗಳಲ್ಲಿ ಅಡಗಿ ಕೂತಿವೆಯೊ! ಅಧಿಕೃತವೆಂದು ಪರಿಗಣಿತವಾದ ಸುಮಾರು ಹದಿನೇಳೂ ಸಹಸ್ರ ವಚನಗಳು ಸಿಕ್ಕಿವೆ. ಅವುಗಳಲ್ಲಿ ಅಪ್ರತಿಮ ನೇತಾರರೂ ಇತಿಹಾಸ ಪುರುಷರೂ ಆದ ಮಹಾನುಭವ ಬಸವೇಶ್ವರರ ನಾಲ್ಕು ಸಾವಿರ ರಚನೆಗಳು ಪ್ರಾಪ್ತವಾಗಿವೆ. 'ಒಂದು ಜನಾಂಗದ ಶ್ರೇಷ್ಠತೆಗೆ ಅದರ ಸಂಸ್ಕೃತಿ ಅಕ್ಷಿಯಾಗಿರುವ ಹಾಗೆ, ಅದರ ಸಂಸ್ಕೃತಿಗೆ ಅಲ್ಲಿನ ಸಾಹಿತ್ಯ ಸಾಕ್ಷಿ'ಯಾಗುವುದೆಂದು ರಾಷ್ಟ್ರಕವಿ ಕುವೆಂಪು ನುಡಿದಿರುವ ಮಾತು ಮಹದರ್ಥ ಪೂರ್ಣವಾಗಿದೆ. ಇದನ್ನು ಸಮರ್ಥಿಸುವ ಅನೇಕಾನೇಕ

ಉದಾಹರಣೆಗಳು ನಮ್ಮ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯದಲ್ಲಿ ಧಂಡಿಯಾಗಿದ್ದರೂ ವಚನ ಮತ್ತು ಜಾನಪದ ಪ್ರಕಾರಗಳಂತೂ ಹೇಳಿ ಮಾಡಿಸಿದ ನಿದರ್ಶನಗಳಾಗಿವೆ.

ಒಟ್ಟಿನಲ್ಲಿ ನಮ್ಮ ಕರ್ನಾಟಕದ ಪರಂಪರೆ ವಿಶಿಷ್ಟೋಜ್ವಲವಾದದ್ದು; ಭವ್ಯೋದಾತ್ತವಾದದ್ದು. ಅಸಮಾನ ಸೌಹಾರ್ದಶೀಲವಾದದ್ದು; ಅದು hostile ಅಲ್ಲ, accomodative ಸ್ವರೂಪದ್ದು; ಹೊಂದಾವಣೆ ಅದರ ಹೂರಣ; ಸಾಮರಸ್ಯ ಅದಕ್ಕೆ ಪ್ರೇರಣೆ, 'ಕವಿರಾಜಮಾರ್ಗಕಾರ' ತುಂಬ ಹಿಂದೆಯೇ ಉವಾಚಿಸಿರುವ 'ವಸುಧಾವಳಯ ವಿಲೀನ ವಿಶದ ವಿಷಯ ವಿಶೇಷಂ' ಕನ್ನಡ ನಾಡು – ನುಡಿ – ಜನರಿಗೆ ಅನ್ವಯಿಸುವಂತಹದು. ಇಂದಿಗೆ ಅತ್ಯಂತ ಸಮಂಜಸ ಎನ್ನಿಸುವಂಥದ್ದು. ಇದನ್ನು ಜಿ.ಪಿ. ರಾಜರತ್ನಂ, ಕನ್ನಡಿಗರು ಜಪಿಸಬೇಕಾದ ಮಹಿಮಾನ್ವಿತ ಸನ್ಮಂತ್ರವೆಂದು ಬಗೆಯುತ್ತಾರೆ; 'ಅಷ್ಟಾದಶಾಕ್ಷರಿ ಮಂತ್ರ' ಎಂದು ಅಭಿಧಾನಿಸುತ್ತಾರೆ. ಇಲ್ಲಿ ಬರುವ 'ವಿಷಯ', ಎಂದರೆ ನಮ್ಮ ನಾಡು ಹಾಗೂ ಕನ್ನಡಿಗರು. ಇವುಗಳಿಗೆ ಒಂದು ಅನ್ಯ ದುರ್ಲಭ ಅಗ್ಗಳಿಕೆ ಇದೆ. ಭಾರತವೆಂಬ ಭೂಭಾಗದ ಜನಪದರಲ್ಲಿ ಒಂದಾಗಿ ಬೆರೆತು ಹೋಗಿದ್ದರೂ ತಮ್ಮದೇ ಆದ ವಿಶದತೆಯನ್ನು, ಮೂರ್ತಿತ್ವವನ್ನು ಕಾಪಾಡಿಕೊಂಡಿದ್ದಾರೆ. ಈ 'ವಿಷಯದ ವಿಶೇಷ', ಅರ್ಥಾತ್ ಕರ್ನಾಟಕದ ಅತಿಶಯತೆಯೆಂದರೆ ಇದೇನೇ.

ಪೂರ್ವಾರ್ಧದ ಕಾವೇರಿಯಿಂದ ಗೋದಾವರಿಯವರೆಗಿನ ಆಧಿಪತ್ಯ ಈಗ ನಮ್ಮ ಭಾಗ್ಯಕ್ಕೆ ಎರವಾಗಿರಬಹುದು; 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳೆ'ಂಬುದು ಇವೊತ್ತು ಅಪಾರ್ಥಕ್ಕೋ ವಿಲಕ್ಷಣಾರ್ಥಕ್ಕೋ ಎಡೆ ಮಾಡಿ ಕೊಡಬಹುದು. ಆದರೆ, 'ವಸುಧಾವಳಯ ವಿಲೀನ ವಿಶದ ವಿಷಯ ವಿಶೇಷ' ಪ್ರಸ್ತುತ ಮಾತ್ರವಲ್ಲ, ಮುಂದೆಯೂ ಪಾಲನಯೋಗ್ಯ, ಭಾರತ ಜನನಿಯ ತನುಜಾತೆಯಾಗಿದ್ದೂ ಅಭಿಜಾತೆಯಾಗಿ, ಅನ್ಯ ರಾಜ್ಯಗಳ ನಡುವೆಯಿದ್ದೂ ತನ್ನ ಸಾಧನೆಗಳ ಅನನ್ಯ ಯಶೋಗಾಥೆಯನ್ನು ಮಿಗಿಲಾಗಿ ಮೆರೆಸಿರುವ ನಮ್ಮ ಕನ್ನಡ ತಾಯಿಯ ಈ ನೆಗಳ್ತೆಯ ನಾಡು, ನಾನಾ ಮತಧರ್ಮ ಭಾಷಾ ಸಮರಸತೆಯ ರಸದ ಬೀಡು: ಭವ ಸಮನ್ವಯತೆಯ ಜೇನುಗೂಡು. (ವಿವಿಧ) 'ಮತಗಳ ಮಳೆಬಿಲ್ಲ ಈ ನಾಡಿನಲ್ಲಿ ಕಂಡು ಬರುವಷ್ಟು ಬಣ್ಣ ಬಣ್ಣವಾಗಿ ಬೇರೆಲ್ಲೂ ಕಾಣಿಸದು' ಎಂಬ ಕವಿಯ ಪ್ರಶಂಸೋದ್ಗಾರ ನೂರಕ್ಕೆ ನೂರರಷ್ಟು ನಿಜ.

ಇಂತಹ ಭವ್ಯ ಪರಂಪರೆಯ ವಾರಸುದಾರರಾದ ನಾವು ಇಂದು ಹೊಂದಿರುವ ಅಗಾಧ ಅಭಿಮಾನ ಶೂನ್ಯತೆ, ಕೀಳರಿಮೆ ಸಂಕೋಚಗಳ ಹೀನಮಾನ್ಯತೆ ನಮ್ಮ ರಾಷ್ಟ್ರದ ಯಾವ ರಾಜ್ಯದವರಲ್ಲೂ ಇಲ್ಲವೆಂದರೆ ತಪ್ಪಾಗಲಾರದು.

ನಾನು ನಾಡು ನುಡಿ ಮತ್ತು ನಮ್ಮ ಪರಂಪರೆಯನ್ನು ಕುರಿತು ನಡೆಸಿರುವ ಚಿಂತನೆಯ ಭಾವಗೀತಗಳನ್ನೂ ತಕ್ಕಷ್ಟು ಸಂಖ್ಯೆಯಲ್ಲಿ ಬರೆದಿದ್ದೇನೆ. ಕೆಲವು ನನ್ನ ನಿರೀಕ್ಷೆಗೂ ಮೀರಿ ಜನಾದರಣೆಗೆ ಪಾತ್ರವಾಗಿವೆ. ಇನ್ನು ಕೆಲವಕ್ಕೆ ಆ

ಯೋಗವಿಲ್ಲದಿದ್ದರೂ ವೈಯಕ್ತಿಕವಾಗಿ ನನಗೆ ಮೆಚ್ಚಿಗೆಯಾಗಿವೆ. ನನ್ನ ಮನದ ಆಶಯವನ್ನು ಮಾತಿನಲ್ಲಿ ಮೂರ್ತೀಕರಿಸಿಕೊಂಡಿರುವ ಆ ಪ್ರಕಾರದ ಗೀತಗಳಲ್ಲಿ ಒಂದು 'ಕರುನಾಡ ಹಿರಿಮೆ'. ಅದರ ಭಾವಾರ್ಥ ಭವ್ಯಾತಿಶಯವೆನ್ನಿಸದಿರಬಹುದು. ಆದರೆ ಕನ್ನಡನಾಡು–ನುಡಿಗಳ ಬಗೆಗಿನ ನನ್ನ ನೈಜ ಕಳಕಳಿಗೆ ಪುಟ್ಟ ಕೈದೀವಿಗೆಯಾಗಬಹುದು. ಅದು ಹೀಗಿದೆ –

ಕರುನಾಡ ಹಿರಿಮೆ

ಹಿರಿದು ತಾಯೆ, ನಿನ್ನ ಘನತೆ ಹಿರಿದು;
ಮುಗಿಸಲಾಗದು ಅದನು ಮಾತಿನಲಿ ಒರೆದು.

ಮಲೆನಾಡ ಸೀರೆಗಿದೆ ಪಡುಗಡಲ ಚೆಲು ಸೆರಗು,
ಕೆನ್ನೆಗೋ ಸಂಜೆ ಬಾನ್‌ಗೆಂಪು ಬಣ್ಣ
ನಿತ್ಯ ದೀಪೋತ್ಸವದ ರತ್ನದೊಡವೆಯ ಮೆರುಗು –
ನೀನು ಕೃಪೆ ತೋರಿದೆಡೆ ಮಣ್ಣು, ಚಿನ್ನ,

ನಿನ್ನ ಚಕ್ರೇಶ್ವರರರು ಹೈಮಾಚಲದ ನೆಲೆಯಲ್ಲಿ
ಮೆರೆದ ಅದಟಿಗೆ ನೆಟ್ಟ ಕಲ್ಲು ಸಾಕ್ಷಿ.
ಬಹು ದೂರ ಬಂಗಾಳದಿಳೆಯ ಸೇನರ ಸೇನೆ
ನಿನ್ನದೇ ತಳಿಯಮ್ಮ ಮಂಗಳಾಕ್ಷಿ.

ನಿನ್ನ ರಾಜಕುಮಾರರೊಡ್ಡೋಲಗಕೆ ಬಂದ
ಎನಿತೋ ವಿದೇಶಿ ಪ್ರವಾಸಿ ಬುಧರು;
ನಿನ್ನ ನೆಲ ಜಲ, ಜನರ ಜೀವನದ ಬಿಸವಂದ
ಬರಹದಲಿ ಬಾಯ್ತುಂಬ ಬಣ್ಣಿಸಿದರು.

ಸಿಂಧೂ ಸಂಸ್ಕೃತಿಗೆ ಕರ್ನಾಟಕದ ಹೊನ್ನು!
ಪ್ರಾಚೀನ, ಕನ್ನಡದ ನೆಲದ ಕೊಡುಗೆ;
ನಿನ್ನ ತುಂಬೊಲವಲ್ಲಿ ಭೇದ ತರತಮವಿಲ್ಲ,
ಸರ್ವರಿಗು ಸಮಪಂಕ್ತಿ; ಒಂದೆ ಅಡುಗೆ.

ಮಯೂರ, ಶ್ರೀ ಪುಲಕೇಶಿ, ಹರ್ಷವರ್ಧನ, ಕೃಷ್ಣ –
ದೇವ, ಕೆಳದಿಯ ಅರಸು, ಧೀರ ಟೀಪ್ಪು;
ನಿನ್ನ ಅಕ್ಷತ ಅಮರ ಗರ್ಭಕೆಲ್ಲಿಯ ಮುಪ್ಪು?
ಪುಣ್ಯ ಸಂತತಿಗೆಲ್ಲ ನಿನ್ನ ಛಾಪು.

ಬಹು ಖನಿಜ ಸುಂದರಿಯೆ, ಕನ್ನಡ ವಸುಂಧರೆಯೆ,
ಸೌಗಂಧಶಾಲಿನಿಯೆ ನಮೋ ನಮೋ!
ಮಹಿತೋಮಹೀಯಳೆ, ಸನ್ಮನೋಭಾವಳೆ,
ವಿಶ್ವತೋವಿಶಾಲಿನಿಯೆ ನಮೋ ನಮೋ!

ಈ ಬಗೆಯ ಶ್ಲಾಘ್ಯ ಭಾವನೆಯ ಕವನಗಳ ಹಾಗೆ ಕನ್ನಡ ಭಾಷೆಯ ಬಗೆಗೆ ಇಬ್ಬಂದಿತನವನ್ನು, ಆಷಾಢಭೂತಿ ಧೋರಣೆಯನ್ನು ತಳೆದಿರುವ ವ್ಯವಸ್ಥೆಯನ್ನೋ ವ್ಯಕ್ತಿಗಳನ್ನೋ ಕುರಿತು ಹನಿಗವನ ರೂಪದ ಕಟಕಿಯ ಕಿಡಿಗಳನ್ನು ಹಾರಿಸಿದ್ದೂ ಇದೆ. ಅವುಗಳಲ್ಲಿ ಇಂದು ಒಂದು :

ವರ್ಷವಿಡೀ ಚಾಟಿಯ ಏಟಿನ, ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ ಅಹ! ಎಂತಹ ಸಿಂಗಾರ;
ಜ್ಞಾಪಿಸುವುದು ನನಗೀ ದೃಶ್ಯ ನವೆಂಬರ್
ಒಂದರ ಸರಕಾರದ ಸಿರಿಗನ್ನಡದುದ್ಧಾರ.

('ನುಡಿ ಏಳಿಗೆ')

ಮತ್ತೊಂದು, ಪರರ ಮಕ್ಕಳನ್ನು ಬಾವಿಗೆ ತಳ್ಳುವ ನಯವಂಚಕ ಹುನ್ನಾರನ್ನು ಸೂಚಿಸುವಂಥದ್ದು:

ಸ್ವಂತ ಮನೆಯಲಿ ಸ್ಟೇಯಿಲ್‌ಲೆಸ್ ಸ್ಟೀಲಿನ
ಪಾತ್ರೆಯ ಬಳಸುತ ಮನಸಾರ
ಪರರಿಗೆ ಮಡಿಕೆಯ ಮಹಿಮೆಯ ದಿನವೂ
ಬೋಧಿಸುತಿರುವನು ಕುಂಬಾರ.

('ಕನ್ನಡ ಮಾಧ್ಯಮ')

ಆಧುನಿಕ ಕನ್ನಡ ಸಾಹಿತ್ಯ ವೈವಿಧ್ಯಮಯವಾಗಿದ್ದು ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯದ ಜೊತೆಗೆ ಹೊಯ್‌ಕಯ್ ಆಗಿ ನಿಲ್ಲುವ ಗುಣಮಟ್ಟ, ತನ್ನತನ ಮತ್ತು ವಿಚಾರಪರತೆಯನ್ನು ರೂಢಿಸಿಕೊಂಡಿವೆ ಎಂಬ ಮಾತು ಚರ್ವಿತ ಚರ್ವಣವೆನ್ನಿಸುವಷ್ಟು ಸತ್ಯತರವಾಗಿದೆ. ಇಂದಿನ ಸಾಹಿತ್ಯ ರಚನೆಯಲ್ಲಿ ಹಿಂದೆಂದೂ ಪ್ರತಿನಿಧಿಸುವ ಸಮಾಜದ ಹಲವು ವರ್ಗದವರಿದ್ದಾರೆ; ಅವರೊಂದಿಗೆ ಲೇಖಕಿಯರ ಸಂಖ್ಯೆ ಸಹ ಅಭೂತಪೂರ್ವವಾಗಿದೆ. ಅವರವರ ಜೀವನ, ಕಸುಬು ಮುಂತಾದ ಅನುಭವ ಕ್ಷೇತ್ರಗಳ ನೋವು ನಲಿವುಗಳನ್ನು ಆಸೆ ಆಶೋತ್ತರಗಳನ್ನು, ಶೋಷಣೆ ಹಕ್ಕೊತ್ತಾಯಗಳನ್ನು ಮನ ಮಿಡಿಯುವಂತೆ ಮತ್ತು ಮುಲಾಜಿಲ್ಲದಂತೆ ತೋಡಿಕೊಳ್ಳುತ್ತಾರೆ. ಇವರಿಂದ ನಮ್ಮ ಸಾಹಿತ್ಯಕ್ಕೆ ಹಿಂದಿಲ್ಲದ ತುಂಬು, ಉದ್ದಗಲ, ವೈವಿಧ್ಯ ಮತ್ತು ಹೊಸ ಸಂವೇದನೆಯ ಧಾತು ಕೂಡಿಕೊಂಡಂತಾಗಿದೆ. ಸಮಾಜದ ವಿಭಿನ್ನ ಸಾಮಾಜಿಕ ಸ್ತರಗಳ ಸಾಹಿತಿಗಳ, ಕವಿ, ಕವಯತ್ರಿಯರ ರಚನೋತ್ಸಾಹ ಮುದ ಮತ್ತು ಅಚ್ಚರಿಗಳನ್ನು ಒಟ್ಟೊಟ್ಟಿಗೆ ಮೂಡಿಸುವಂಥದ್ದು. ಒಟ್ಟಿನಲ್ಲಿ ನಮ್ಮ ಸಾಹಿತ್ಯ ಅನೇಕ ಹೊಸಬರಿಂದ ಭಾವಾತ್ಮಕ ಹಾಗೂ ವೈಚಾರಿಕವಾಗಿ ಅಮೋಘ ಆಯಾಮವನ್ನು ಪಡೆಯುತ್ತಿರುವುದು ಮೆಚ್ಚಬೇಕಾದ ವಿಚಾರ.

ಕನ್ನಡದಲ್ಲಿ ಮಹಿಳಾ ಸಾಹಿತ್ಯ ವಿಪುಲವಾಗಿ ಹಾಗೂ ಈಚೆಗೆ ಹೆಚ್ಚು ವೈವಿಧ್ಯಮಯವಾಗಿ ಬೆಳೆಯುತ್ತಿರುವುದು ಆಶಾಸೂಚಕವಾಗಿದೆ. ಈ ಸಾಹಿತ್ಯದ ಸಾಮಾನ್ಯೀಕೃತ ಜನಪ್ರಿಯ ಚರ್ಯೆಯ ಜೊತೆಗೆ ಕೆಲವು ವರ್ಷಗಳಿಂದೀಚೆಗೆ ವೈಚಾರಿಕ ಧಾತುಗಳು ಸೇರಿಕೊಳ್ಳುತ್ತಿರುವುದು ಸಂತೋಷದಾಯಕ ಸಂಗತಿ. ಈಗ್ಗೆ ಮೂವತ್ತೈದು–ನಲವತ್ತು ವರ್ಷಗಳ ಹಿಂದೆ ಕವಿ ಮೇಳಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವ ಅರ್ಹತೆಯುಳ್ಳ ಲೇಖಕಿಯರನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಬೇಕಿತ್ತು. ಅಲ್ಲದೇ, ಅವರು ಕೂಡ ಭಾಗವಹಿಸುವುದರಲ್ಲಿ ಹೆಚ್ಚಿನ ಹುಮ್ಮಸ್ಸನ್ನು ತೋರುತ್ತಿರಲಿಲ್ಲ.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ವಿಚಾರದಲ್ಲಿ ಇಂದಿನ ಸ್ಥಿತಿ ತುಂಬಾ ಮುಂದುವರೆದಿದೆ ಮತ್ತು ಸಮಾನಾರ್ಹತೆಯಿರುವ ಲೇಖಕಿಯರನ್ನು ಆಯ್ಕೆ ಮಾಡುವುದೇ ಕೆಲವೊಮ್ಮೆ ಸಮಸ್ಯೆಯಾಗುವುದುಂಟು.

ಮಹಿಳೆಯರು ಮಿಕ್ಕೆಲ್ಲಾ ಸಾಮಾಜಿಕ ರಂಗಗಳಲ್ಲಿ ಮುನ್ನಡೆಯನ್ನು ಸಾಧಿಸುತ್ತಿರುವಂತೆ ಸಾಹಿತ್ಯದಲ್ಲೂ ಸಂಘಟಿತರಾಗಿ ತಮ್ಮ ನ್ಯಾಯಬದ್ಧವಾದ ಹಕ್ಕೊತ್ತಾಯವನ್ನು ಮಂಡಿಸುತ್ತಿದ್ದಾರೆ. ಶೇಕಡ ೩೩ರಷ್ಟು ಮೀಸಲಾತಿ ಬೇಕೆಂಬ ಸದಾಗ್ರಹವನ್ನು ಮಾಡುತ್ತಿದ್ದಾರೆ. ಸಾಹಿತ್ಯದಲ್ಲಿ ಮಾತ್ರವಲ್ಲದೆ ಇತರ ಕಲೆಗಳ, ಶಿಕ್ಷಣ, ನ್ಯಾಯಾಲಯ ಮೊದಲಾದ ಕ್ಷೇತ್ರಗಳಲ್ಲಿ ತಾವೇ ಸ್ವತಃ ಚರ್ಚೆಗಳನ್ನು, ವಿಚಾರ ಸಂಕಿರಣಗಳನ್ನು ನೆರವೇರಿಸುವ; ಪೂರ್ತಿಯಾಗಿ ಮಹಿಳಾ ಕಾರ್ಯಕ್ರಮಗಳನ್ನು ನಿಯೋಜಿಸುವ ಸಾಮರ್ಥ್ಯವನ್ನು ಸಂಪಾದಿಸಿಕೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ಸ್ವಕೀಯವಾದ ಸಂಗತಿಗಳನ್ನು ಗೋಪ್ಯವಾಗಿ ಮರೆಮಾಚುತ್ತಿದ್ದಂತಹ ಮತ್ತು ಸ್ವಂತದ ಅಪಮಾನ, ದಮನ, ದಬ್ಬಾಳಿಕೆಗಳನ್ನು ಚಕಾರವೆತ್ತದೆ ಅನುಭವಿಸುತ್ತಿದ್ದಂತಹ ಕೀಳರಿಮೆ, ಹಿಂಜರಿಕೆಗಳನ್ನು ತೊಡೆದು ಇಂದು ಇವುಗಳನ್ನೆಲ್ಲ ಸಾರ್ವಜನಿಕವಾಗಿ ದಿಟ್ಟತನದಿಂದ ಪ್ರತಿಭಟಿಸುವ, ಪ್ರಶ್ನಿಸುವ ಮನಃಸ್ಥೈರ್ಯವನ್ನು ಗಳಿಸಿಕೊಂಡಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ಒಂದು ಸಾಂಘಿಕ ಸ್ವರೂಪ ಅವರಿಗೆ ಒದಗಿ ಗಂಡಿನಷ್ಟೇ ಸ್ವತಂತ್ರ ಅಸ್ತಿತ್ವವನ್ನು ನಿಭಾಯಿಸುವಲ್ಲಿ ಸಾಮರ್ಥ್ಯವನ್ನು ಪಡೆದಿದ್ದಾರೆ. ಇದು ಬಹುತರ ವಿದ್ಯಾವಂತ, ಉದ್ಯೋಗಸ್ಥ ಮತ್ತು ಸಮಾಜದ ಮಧ್ಯಮ ಹಾಗೂ ಮೇಲು ವರ್ಗದ ಮಹಿಳೆಯರಿಗೆ ಹೆಚ್ಚು ಅನ್ವಯಿಸುವ ವಿಷಯ. ಇವರ ಅವಿದ್ಯಾವಂತ ದೀನ, ನಗರವಾಸಿ ಕೊಳೆಗೇರಿಗಳ ಪ್ರತಿನಿಧಿಗಳು ಮತ್ತು ಹಳ್ಳಿಗಾಡಿನ ರೈತಾಪಿ ಕೂಲಿಕಾರರ ಅಸಂಖ್ಯಾತ ಹೆಣ್ಣು ಮಕ್ಕಳು ಪುರುಷ ಪ್ರಧಾನ ಸಮಾಜದ ಎಲ್ಲ ಅನ್ಯಾಯ ಮತ್ತು ಅಸಮಾನತೆಯ ನೋವನ್ನು ಇಂದಿಗೂ ಅನುಭವಿಸುತ್ತಿದ್ದಾರೆ. ಅದರಲ್ಲೂ ದಾರಿದ್ರ್ಯದ ಫಲಶ್ರುತಿಗಳಾದ ಅಜ್ಞಾನ, ಅಂಧಶ್ರದ್ಧೆ, ಪರಾಧೀನ ಪ್ರವೃತ್ತಿಯಿಂದ ಬಾಳನ್ನು ನೂಕುತ್ತಿರುವ ಅಸಂಖ್ಯಾತ ದಲಿತ ಹಾಗೂ ಅಲ್ಪಸಂಖ್ಯಾತರ ಸ್ಥಿತಿ ಇನ್ನೂ ದಯನೀಯ. ಅವರ ಬದುಕನ್ನು ಕುರಿತು ಬರೆಯುವುದರ ಜೊತೆಗೆ ಅವರನ್ನು ಸುಸ್ಥಿತಿಗೆ ತರುವ, ಶೋಷಣೆ ಮತ್ತು ಕ್ರೌರ್ಯದಿಂದ ಪಾರು ಮಾಡಿ ಧೈರ್ಯವನ್ನು ತುಂಬುವ ಸಾರ್ಥಕ ಕಾರ್ಯದಲ್ಲಿ ನಮ್ಮ ಪ್ರತಿಷ್ಠಿತ ಲೇಖಕಿಯರು ಶ್ರಮಿಸಬೇಕಾದ ಅಗತ್ಯ ಹೆಚ್ಚಿದೆ. ಕೇವಲ ಪುರುಷರ ಬಗೆಗೆ ಆಕ್ರೋಶ ಮತ್ತು ಮತ್ಸರವನ್ನು ಕಾರುವ ಬದಲು, ಆವೇಶಯುತವಾಗಿ ಅವನ ವಿರುದ್ಧ ಘೋಷಣೆ ಕೂಗುವ ಬದಲು, ಕುಟುಂಬ ಮತ್ತು ಮಕ್ಕಳ ಹಿತದೃಷ್ಟಿಯಿಂದ ಗಮನದಲ್ಲಿಟ್ಟುಕೊಂಡು ತಮ್ಮ ವ್ಯಕ್ತಿತ್ವ ಹಾಗೂ ಅಸ್ತಿತ್ವವನ್ನು ಅಭಿವೃದ್ಧಿಪಡಿಸಿಕೊಳ್ಳುವ ವಿಧಾನಗಳನ್ನು ಹುಡುಕಿಕೊಳ್ಳುವುದು ಇಂದಿನ ಮುಖ್ಯ ಅಗತ್ಯಗಳಲ್ಲಿ ಒಂದಾಗಿದೆ.

ಇದೇ ಸಂದರ್ಭದಲ್ಲಿ ಕಾವ್ಯ ರಾಜಕೀಯ, ಸಾಮಾಜಿಕ ಮತ್ತಿತರ ದೈನಿಕ ಸಮಸ್ಯೆಗಳನ್ನು ಒಳಗೊಳ್ಳುತ್ತಿರುವುದರಿಂದ ಮತ್ತು ಬಹುತರ ಅನೇಕರ ಪ್ರಧಾನ

ಆಶಯ ಒಂದೇ ಆಗಿರುವುದರಿಂದ ಅದಕ್ಕೆ ತಕ್ಕಮಟ್ಟಿನ ಪ್ರಚಾರಾತ್ಮಕ ಸ್ವರೂಪ ದೊರೆಯುತ್ತಿರುವುದು ವಾಸ್ತವ ಸಂಗತಿಯಾಗಿದೆ. ಹೀಗಾಗಿ, ನಮ್ಮ ಕಾವ್ಯ ತನ್ನ ನೈಜ ಅಂತರ್ಮುಖ ಸ್ವರೂಪವನ್ನು ನೀಗಿಕೊಂಡು ಬಹಿರಂಗ ಚಹರೆಯನ್ನು ಮೆರೆಸುತ್ತಿದೆ. ಪ್ರಸ್ತುತತೆ, ಬದ್ಧತೆಗಳ ಹೆಸರಿನಲ್ಲಿ ವಿವೇಚನೆಯಿಲ್ಲದೆ ಹಲವಾರು ಭಿನ್ನ ಹಾಗೂ ವಿರುದ್ಧವೆನ್ನಿಸುವ ರಾಜಕೀಯ, ಸಾಮಾಜಿಕ ವಿಷಯಗಳು ಕಾವ್ಯದಲ್ಲಿ ತಲೆದೋರಿಸುವ ಪ್ರಯತ್ನ ನಡೆಸಿವೆ. ಕಾವ್ಯ ಎನ್ನುವುದು ಏನೆಲ್ಲವನ್ನೂ ಅಡಕಿಸಿ ಕೊಳ್ಳುವ ಹಸುಬೆ ಹಡಪವಲ್ಲ; ವಸ್ತು ಸಾಂಕರ್ಯದ ಕಸದ ಬುಟ್ಟಿಯಲ್ಲ. ಕಾವ್ಯಕ್ಕೆ ತನ್ನದೇ ಆದ ಶಿಸ್ತು, ಧರ್ಮ, ಎಲ್ಲೆಕಟ್ಟು ಇವೆ. ಯಾವುದೇ ವಸ್ತು ಕಾವ್ಯವನ್ನು ಪ್ರವೇಶಿಸಬೇಕಾದರೆ ಅದಕ್ಕೆ ಇರಬೇಕಾದ ಆದ್ಯ ಅಗತ್ಯ ಕಲಾತ್ಮಕತೆ. ನಮ್ಮ ಸಿಟ್ಟು, ಆಕ್ರೋಶ, ಹಕ್ಕೊತ್ತಾಯ, ಪ್ರತಿಭಟನೆ ತದಿತರ ಸಂಗತಿಗಳ ಲೋಕಾನುಭವವನ್ನು ಹಾಗೆ ಹಾಗೇ, ಹಸಿ ಹಸಿಯಾದ ಸ್ಥಿತಿಯಲ್ಲೇ ಕಾವ್ಯದಲ್ಲಿ ತುರುಕುವಂತಿಲ್ಲ. ಅದು ಕಲಾನುಭವ, ಅರ್ಥಾತ್ ಭಾವವಾಗಿ ಕವಿ ಪ್ರತಿಭೆಯ ಮಂತ್ರದಂಡದಿಂದ ಪರಿವರ್ತಿತವಾಗಬೇಕು. ಯಾವುದೇ ಪ್ರಜ್ಞಾಪೂರ್ವಕವಾದ ಬಾಹ್ಯ ವಿಚಾರ ಅಥವಾ ಸಂಗತಿ ಈ ಬಗೆಯ ಕಲಾತ್ಮಕ ಸ್ವರೂಪದಿಂದ, ಅಂದರೆ ಭಾವದ ಚಹರೆಯನ್ನು ಧರಿಸಿದ ರೀತಿಯಿಂದ ಕವನವನ್ನು ಪ್ರವೇಶಿಸದಿದ್ದರೆ ಅದು ಘೋಷಣೆಯಾಗುತ್ತದೆ, ಪ್ರಚಾರ ಸಾಧನದ ಕೆಳಮಟ್ಟಕ್ಕೆ ಜಿಗಿಯುತ್ತದೆ. ಇಲ್ಲಿ ಇನ್ನೊಂದು ವಿಚಾರವೂ ಸ್ಮರಣೀಯ; ಕವಿ, ಇಂದ್ರಿಯಗಳ ಮೂಲಕ ತನ್ನ ಪ್ರಪಂಚಾನುಭವವನ್ನು ಬುದ್ಧಿಪೂರ್ವಕವಾಗಿ ಪಡೆದಾದ ಮೇಲೆ, ಅದನ್ನು ಕಲಾತ್ಮಕವಾಗಿಸುವ ಚಿತ್ತದ ಕ್ರಿಯೆ ನಡೆಯುವುದು ನಿಗೂಢ ಮತ್ತು ಸಂದಿಗ್ಧವೆನ್ನಿಸುವ ಅಪ್ರಜ್ಞಾವಸ್ಥೆಯಲ್ಲಿ, ಹೂವಿನ ರಸವೇ ಜೇನಿನಲ್ಲಿ ಶೇಖರವಾಗಿದ್ದರೂ ಆ ಜೇನಿನ ಮಕರಂದತ್ವ ಮರೆಯಾಗಿ ಅಪೂರ್ವವಾದ ಮಧುತ್ವ ಪ್ರಾಪ್ತವಾಗಿರುತ್ತದೆ. ಈ ವಾಗಾತೀತವಾದ ಮಾರ್ಪಾಡಿನಿಂದ ಪೂರ್ವಾವಸ್ಥೆಯ ಲೋಕಾನುಭವದಲ್ಲಿ ನಮ್ಮ ಲಕ್ಷ್ಯಕ್ಕೆ ಬಾರದ ಹೊಸದಾದ ರುಚಿ, ಬಣ್ಣ, ಕಂಪು ಮತ್ತು ಪುಷ್ಟಿ ಗುಣಗಳ ಹೆಚ್ಚಳ ಕೂಡಿಕೊಂಡಿರುತ್ತದೆ.

ಹಾಗೆಂದು ಹೊಸ ಹೊಸ ಸಾಮಾಜಿಕ, ರಾಜಕೀಯ ವಿಚಾರಗಳಿಗೆ, ಪ್ರಸ್ತುತ ಮುಖ್ಯವೆನ್ನಿಸುವ ಕಾಳಜಿಗಳಿಗೆ ಕವಿತೆಯ ಮಾಧ್ಯಮ ಎಡೆ ಮಾಡಿಕೊಡ ಬಾರದೆಂದೋ, ಅವು ಪ್ರಶಸ್ತವಲ್ಲವೆಂದೋ ತಿಳಿಯ ಬೇಕಾಗಿಲ್ಲ. ತದ್ವಿರುದ್ಧವಾಗಿ ಈ ಹೊಸ ಧಾತುಗಳು, ಭಾವದಿಂದ ಭಾರವಾದ ಕವನದ ವಸ್ತುವಿಗೆ ವೈಚಾರಿಕತೆ, ಲವಲವಿಕೆ, ಲಗುಬಗೆಯನ್ನು ಸೇರಿಸುತ್ತವೆ. ಆದರೆ ಈ ಅಂಶಗಳು ಕಚ್ಚಾ ಗಾಳಿಗೀಳುಗಳಂತೆ ಕವನದ ದೇಹವನ್ನು ಬಾಧಿಸದಂತೆ, ಕವಿಯಾದವ ಔಚಿತ್ಯಪ್ರಜ್ಞೆಯ ಎಚ್ಚರವನ್ನು ಜಾಗೃತವಾಗಿರಿಸಿಕೊಳ್ಳಬೇಕು. ಕವನ ರಚನೆಯ ವೇಳೆ ಕವಿ ಹೆಚ್ಚಿನ ಹುಷಾರಿ ಹಾಗೂ ವಿವೇಕವಂತಿಕೆಯನ್ನು ತಳೆಯುವುದು ಅನಿವಾರ್ಯವಾಗುತ್ತದೆ. ಇಂದಿನ ಕಾವ್ಯ ಆಶ್ಚರ್ಯಕರ ಉದ್ದಗಲವನ್ನು ವಿಸ್ತರಿಸಿಕೊಂಡಿದೆ. ಅದಕ್ಕೆ ತಕ್ಕನಾದ

ಆಳ ದಕ್ಕಿಲ್ಲವೆಂದರೆ ಅಸಮಾಧಾನ ತಾಳಬೇಕಾದ ಅಗತ್ಯವಿಲ್ಲ. ಬದಲಿಗೆ ಆತ್ಮಾವಲೋಕನವನ್ನು ಮಾಡಿಕೊಂಡು ಪರಿಹಾರಕ್ಕೆ ಪ್ರಯತ್ನಿಸಬೇಕು. ಏನೇನನ್ನೋ, ಎಂಥೆಂಥದನ್ನೋ ಮುಕ್ಕುತ್ತಿರುವ ನಮ್ಮ ಕಾವ್ಯಕ್ಕೆ ಒಂದಿಷ್ಟು ಕಾಲ ಪಥ್ಯದ ಉಪಚಾರ ಅವಶ್ಯಕವೆನ್ನಿಸುತ್ತದೆ. ಇಂದು ಗುಂಪಿನ ಬಲದಿಂದ, ಬಾಹ್ಯ ಸ್ವರೂಪದ ಸಾಮೂಹಿಕ ನೆಲೆಯಿಂದ ರಚಿತವಾಗುತ್ತಿರುವ ಕಾವ್ಯವನ್ನು ವೈಯಕ್ತಿಕ ಅನುಭವದ ಕಡೆಗೆ, ಅಂತರ್ಮುಖತ್ವದ ಕಡೆಗೆ ತಿರುಗಿಸುವುದು ಮುಖ್ಯವೆನ್ನಿಸುತ್ತದೆ. ಅದರ ನೋಟ ಸಾಮಾಜಿಕ, ರಾಜಕೀಯದ ದೈನಂದಿನ ತುರ್ತುಗಳಿಂದ ಕೊಂಚ ಕಾಲ ಬೇರ್ಪಟ್ಟು ಪ್ರೇಮ, ಪ್ರಕೃತಿ, ಅಧ್ಯಾತ್ಮದಂಥ ಜೀವಸಂಸ್ಕಾರಿ ಅಗತ್ಯಗಳ ಕಡೆಗೆ ಹೊರಳಬೇಕಾಗಿದೆ.

ಎಲ್ಲ ಮಾನುಷ ಸಾಧನೆಗಳಿಗೆ ಕಡ್ಡಾಯವಾಗಿ ಬೇಕಾಗುವ ದೀರ್ಘ ಅಭ್ಯಾಸ, ಕಸುಬುಗಾರಿಕೆಯ ಕೌಶಲ, ತಿದ್ದಾಣಿಕೆ ಮತ್ತು ಸಾವಧಾನಕರವಾದ ಪರಿಶ್ರಮ ಶ್ರದ್ಧೆಗಳು ಕಾವ್ಯವನ್ನು ಸೃಷ್ಟಿಸುವವನಿಗೂ ಅನಿವಾರ್ಯವೆನ್ನಿಸುತ್ತವೆ. ಕಾವ್ಯ ಕನ್ನಿಕೆ ಸಾಮಾನ್ಯವಾದ ಅನುನಯ ಮತ್ತು ಅನುರಾಗಗಳಿಗೆ ಮನ ಸೋಲುವಂಥ ಸರಳ ಹಾಗೂ ಸುಲಭ ಜಾಯಮಾನಿಯಲ್ಲ. ಅವುಗಳನ್ನು ಗೆಲ್ಲುವುದರ ಮುಖೇನ, ಗೆದ್ದೆನೆಂದು ಸಾರ್ವಜನಿಕವಾಗಿ ಸಾರುವ ಮುಖೇನ ಮಾತ್ರ ಅವಳ ಅಂತರಂಗವನ್ನು ಸ್ವಾಧೀನಪಡಿಸಿಕೊಳ್ಳುವುದು ಸಾಧ್ಯ 'ವರ ಕವಿ' ಎಂದು ಅವಳು ಆದರಿಸಿ ಸ್ವಯಂವರಿಸುವುದು ಸಮರ್ಥರಾದವರಲ್ಲಿ ಅತ್ಯಂತ ಸಮರ್ಥರನ್ನು ಮಾತ್ರ; ಅರ್ಹರಾದವರಲ್ಲಿ ತುಂಬ ಅರ್ಹರಾದವರನ್ನು ಮಾತ್ರ. ಇದರಲ್ಲಿ ಆಕೆ ಯಾವುದೇ ವಿನಾಯಿತಿಯನ್ನು ತೋರಳು. ಆದರೆ ಅಂಥ ಭಾಗ್ಯಶಾಲಿ ಕವನಕರ್ತ ಮಾತ್ರ ಯುಗ ವಿರಳ. ಉಳಿದ ಎಲ್ಲ ಕವನಕಾರರು ಸ್ವತಏವ ಸಾಮರ್ಥ್ಯಶಾಲಿಗಳೇ ಆಗಿದ್ದರೂ ಅದಟಿನಲ್ಲಿ ಅದ್ವಿತೀಯರಾಗಿದ್ದರೂ ಆಕೆಯ ದೃಷ್ಟಿಗೆ ಬರಿಯ ಸಭಾಸದರು ಅಷ್ಟೇ. ಅವಳ ಹೃದಯ ಮರ್ಮದ ಮತ್ಸ್ಯ ಯಂತ್ರ ಭೇದನವನ್ನು ಮಾಡಲು ರಾಜಸ, ತಾಮಸ ರೂಪದ ಪ್ರದರ್ಶನಕಾತರ ಡಿಖಾವುಗಾರರಿಂತ ಸಾತ್ವಿಕ ಸೌಮ್ಯದ ಹಾಗೆ ಹೊರಗೆ ತೋರುವ ಕ್ಷಾತ್ರ ಸಂಪನ್ನ ಅರ್ಜುನ ಪ್ರತಿಭೆಗಷ್ಟೇ ಶಕ್ಯ.

ಸಹಜ ಕವಿಯಾದವನು ಯಾವುದೇ ವಿಷಯದ ಬಗ್ಗೆ ಕೇವಲ ತಿಳಿವಳಿಕೆಯನ್ನು ಗಳಿಸಿಕೊಂಡರೆ, ಕೌಶಲವನ್ನು ಸಂಪಾದಿಸಿಕೊಂಡರೆ ಸಾಕಾಗುವುದಿಲ್ಲ. ಅದು ಅವನ ಪಾಲಿಗೆ ಸ್ವಾನುಭವವಾಗಿ ಸಾಕ್ಷಾತ್ಕಾರಗೊಳ್ಳಬೇಕು. ಆದ್ದರಿಂದ ಕವಿ ತಾನು ಕೇವಲ ರಸಜ್ಞನಾದರೆ ಸಾಲುವುದಿಲ್ಲ; ರಸಪ್ರಜ್ಞನಾಗಬೇಕು. ಈ ಬಗೆಯ ರಸಪ್ರಜ್ಞತೆ ಇಲ್ಲದೆ ಹೋದರೆ ಅವನು ಮಾಮೂಲಿನಲ್ಲಿ ಮಹತ್ವವಾದುದನ್ನು ಮನವರಿಕೆ ಮಾಡಿಕೊಳ್ಳಲಾರ. ಚಿರಪರಿಚಿತವಾದ ಸಂಗತಿಗಳಲ್ಲಿ ಅತಿ ಅಪರಿಚಿತವಾದುದನ್ನು ಸಹೃದಯರಿಗೆ ದರ್ಶನ ಮಾಡಿಸಿ, ಆ ಮೂಲಕ ಭಾವೋದೀಪ್ತಗೊಳಿಸುವುದೇ ಎಲ್ಲಾ ಕಾವ್ಯಕಲೆಗಳ ಪ್ರಧಾನೋದ್ದೇಶ. ಇದರಲ್ಲಿ ನಮ್ಮ ಭಾರತೀಯ ಮೀಮಾಂಸಕಾರರು ಕವಿಯಲ್ಲಿ ಗುರುತಿಸುವ ವಿಶೇಷ ಗುಣವಾದ ಪ್ರತಿಭೆಯ ಕೈವಾಡ ಮಹತ್ವದ್ದು.

ಕವನ ರಚಿಸುವನಿಗೆ ಸ್ಫೂರ್ತಿ ಬೇಕೆನ್ನುತ್ತಾರೆ. ಅದು ನಿಜವೇ. ಆದರೂ ಆ ಪ್ರೇರಣೆ ಮತ್ತು ಸ್ಫುರಿತದ ಹಿನ್ನೆಲೆಯಲ್ಲಿ ಕವಿಯ ಅಂತರಂಗದ ಆಳದಲ್ಲಿ ಅರಿವಿಗೆ ಬರದಂತಹ ಎಂತೆಂತಹ ಸಿದ್ಧತೆ ನಡೆದಿದೆಯೋ ಯಾರು ಬಲ್ಲರು? ಅದರ ಸ್ವರೂಪ ಮತ್ತು ಕ್ರಿಯೆ ರೀತಿಯನ್ನು ಸಾಕ್ಷ್ಯಾಧಾರಗಳೊಂದಿಗೆ ಯಾರು ತಾನೆ ಬಣ್ಣಿಸಬಲ್ಲರು? ಕವನವೆನ್ನುವುದು ಇಂತಹ ಮನದಾಳದ ನಿಗೂಢ ಪ್ರಕ್ರಿಯೆಯ ಪರಿಣಾಮರೂಪಿಯಾದ ಪುಷ್ಪ. ಅದರ ಚೆಂದಗಾರಿಕೆಗೆ, ವರ್ಣ ಸೌಭಾಗ್ಯಕ್ಕೆ, ಸರ್ವಾಂಗ ಸಂಪೂರ್ಣತೆಗೆ ಶ್ರಮಿಸುವ ಶಕ್ತಿಗಳು ಕಗ್ಗತ್ತಲಿನ ಮಣ್ಣಿನಾಳದ ಪದರ ಗಳಲ್ಲಿ ಪ್ರಚ್ಛನ್ನವಾಗಿರುತ್ತವೆ. ಅವು ಕಾರ್ಯಶೀಲವಾಗುವ ವೇಳೆ ಗಹನ ಕ್ರಿಯೆಯನ್ನು ಅದರ ಫಲಿತವೊಂದರಿಂದ, ಹೊರಗಿನ ಮಾದರಿಯೊಂದರಿಂದ ಅರಿಯುವುದು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ, ಕವಿತೆ ಹುಟ್ಟುವ ಪ್ರಕ್ರಿಯೆಯ ಪರಿಜ್ಞಾನಕ್ಕೆ ನಾವು, ಕವಿ ಪದ್ಯವನ್ನು ರಚಿಸಿದ ಸಮಯದ ಮನಸ್ಸಿನ ಅವಸ್ಥೆಗೇ ಮೊರೆ ಹೋಗಬೇಕು.

ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳಬಹುದಾದರೆ, ಕಾವ್ಯ ಸೃಜನ ಪ್ರಕ್ರಿಯೆಯ ಬೇರುಗಳು ಆ ಕ್ಷೇತ್ರಕ್ಕೇ ಕಚ್ಚಿಕೊಳ್ಳದೆ, ಮನೋವಿಜ್ಞಾನದ ಜೊತೆ ಹಲವು ಬಗೆಯಲ್ಲಿ ನಂಟನ್ನು ಪಡೆದಿರುತ್ತವೆ. ಹೀಗಾಗಿ, ಅವು ಮನುಷ್ಯನ ಅಂತರಾಳದಷ್ಟೇ ಅಗ್ರಾಹ್ಯ, ಅಮೇಯ ಹಾಗೂ ಗುಹ್ಯಾತಿಗುಹ್ಯ, ಅಂತಶ್ಚಿತ್ತವೆನ್ನುವುದು ಒಂದು ಗೂಢವಾದ ನಿತ್ಯ ನಿರನ್ವೇಷಿತ ಲೋಕ. ಒಂದೊಂದು ಪದ್ಯ ರಚನೆಯ ಸನ್ನಿವೇಶದಲ್ಲಿ ಕವನಕಾರ ಅದನ್ನು ಹೊಸದಾಗಿ ತಡಕಾಡಿ ತಲಾಷು ಮಾಡಿಕೊಳ್ಳ ಬೇಕಾಗುತ್ತದೆ. ತನ್ನ ಅಳವಿಗೆ, ಆಶಯಕ್ಕೆ ಅನುಸಾರವಾಗಿ ಅದರಿಂದ ಎಷ್ಟು ಪ್ರದೇಶವನ್ನು ಗೆದ್ದು ಕೈವಶಗೊಳಿಸಿಕೊಳ್ಳಲು ಸಾಧ್ಯವೋ ಅಷ್ಟನ್ನು ಅವನು ತನ್ನ ಪ್ರತಿಭಾ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಲು ಅರ್ಹನಾಗುತ್ತಾನೆ.

ಈ ರೀತಿಯಿಂದ ಪರಿಶೀಲಿಸಿದರೆ, ಒಬ್ಬೊಬ್ಬ ಕವಿಯೂ ಕವನ ಸೃಷ್ಟಿ ಪ್ರಕ್ರಿಯೆಯ ಸಮಯದಲ್ಲಿ ಒಬ್ಬೊಬ್ಬ ಭೂ ಸಂಶೋಧಕನ ಹಾಗೆ ಅಸೀಮ ಸಾಹಸಿ, ಅವನೊಬ್ಬ ಕೊಲಂಬಸ್. ಪ್ರತಿಯೊಂದು ವಿಶೇಷವೆನ್ನಿಸುವ ಕವಿತೆಯ ರಚನೆ ಒಂದೊಂದು ದುರ್ಗಮವೂ ಸಾಹಸಮಯವೂ ಆದ ಪ್ರಯಾಣ; ಹೊಸ ಹೊಸದಾದ ನೆಲೆಯೊಂದರ ಅನ್ವೇಷಣ. ವ್ಯತ್ಯಾಸವೆಂದರೆ, ಭೂಶೋಧಕನಿಗೆ ಹೋಲಿಸಿದರೆ, ಕವಿಯ ಹುಡುಕಾಟ ಆಕೃತಿರಹಿತ ಮಬ್ಬಿನ ಮೊತ್ತದಲ್ಲಿ, ಅಮೂರ್ತತೆಯ ಅವ್ಯವಸ್ಥೆಯಲ್ಲಿ. ಈ ಅಮೂರ್ತತೆ ಮತ್ತು ಅಸ್ತವ್ಯಸ್ತತೆಗಳಿಗೆ ಸ್ಪಷ್ಟತೆ ಮತ್ತು ಸುವ್ಯವಸ್ಥೆಯನ್ನು ಮಾತು ಮತ್ತು ತಂತ್ರದ ಮೂಲಕ ಕವಿ ಸ್ಥಾಪಿಸಬೇಕಾಗುತ್ತದೆ. ಈ ಬಗೆಯಲ್ಲಿ ಮೈ ತಳೆದ ಕಲಾಜಗತ್ತು ವಾಸ್ತವಲೋಕಕ್ಕಿಂತ ಹೆಚ್ಚು ಆತ್ಮೀಯ, ಅತಿಶಯ, ಭಿನ್ನ, ಸ್ವಾರಸ್ಯಕರ. ಒಟ್ಟಿನಲ್ಲಿ, ಕವಿಯ ಸೃಷ್ಟಿ ಕರ್ಮದ ಮುಖ್ಯಾಂಶವೆಂದರೆ ಸ್ಪಷ್ಟವಿಲ್ಲದ ಮನೋಮುದ್ರೆಗಳಿಗೆ ಅನುರೂಪವಾದ ವಸ್ತು ಪ್ರತಿರೂಪಗಳನ್ನು (Objecitve Correlatives) ಪದಗಳಲ್ಲಿ ಪಡಿಮೂಡಿಸುವಿಕೆ ಹಾಗೂ ತತ್ಫಲವಾಗಿ ಬುದ್ಧಿ ಮತ್ತು

ಭಾವವೇದಿಯಾದ ಶಿಲ್ಪವನ್ನು ರೂಪಾರಿಸುವಿಕೆ. ಅಂಗೋಪಾಂಗ ಸಮರಸತೆಯ ಇಂಥ ಶಿಲ್ಪವೇ ಕವಿತೆ.

ಕವಿಯೊಬ್ಬನ ಲೋಕಾನುಭವ ಸ್ವಂತ ಅನುಭೂತಿಯಾಗಿ ಮಾರ್ಪಟ್ಟ ತತ್‌ಕ್ಷಣ ಅದು ಕವಿತೆಯಾಗಿ ಮೈ ತಾಳಿ ಬಿಡುವುದಿಲ್ಲ. ಅದಕ್ಕೆ ಸಾಕಷ್ಟು ವ್ಯವಧಾನ, ಆಲೋಚನೆಗಳ ಅಗತ್ಯವಿದೆ. ತಂತ್ರಾಭಿವ್ಯಕ್ತಿಯ ಮತ್ತು ಮಾತುಗಾರಿಕೆ ಹೆಚ್ಚುಗಾರಿಕೆ ತೋರಿ ಬರುವುದು ಈ ಹಂತದಲ್ಲಿ. ಭಾವದ ಆಳ್ಳಕ ಮತ್ತು ಕೋಮಲ ಶರೀರಕ್ಕೆ ವಿಚಾರದ ಬೆನ್ನೆಲುಬು ಸೃಷ್ಟಿಗೊಳ್ಳುವುದು ಸಾವಕಾಶವಾಗಿ. ಹೀಗಾಗಿ, ಭಾವವನ್ನು ದಿಢೀರೆಂದು ಪರಿವರ್ತಿಸುವ ರಾಸಾಯನಿಕ ಕ್ರಿಯಾವರ್ಧಕ ಯಾವ ಕವಿಯ ಅಂತರಂಗದಲ್ಲೂ ಲಭ್ಯವಿರುವುದಿಲ್ಲ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು.

ಕವಿಯ ಹಲವಾರು ಗುಣಗಳಿಂದ ಸಮನ್ವಿತವಾಗಿರಬಹುದು. ಅವನಿಗೆ ಶಬ್ದ ಪ್ರಯೋಗದಲ್ಲಿ ಪರಿಣಿತಿ ಇರಬಹುದು. ಸಮ್ಮೋಹಕವಾದ ಭಾಷಾ ಸಂಪತ್ತು ಅವನಿಗೆ ವಶವಾಗಿರಬಹುದು. ಹಾಗೆಯೇ, ಅವನಲ್ಲಿ ಲೋಕಾನುಭವ, ಸೌಂದರ್ಯವನ್ನು ಗ್ರಹಿಸುವ ಅಂತಃಶಕ್ತಿ ಉತ್ಕಟವಾಗಿರಬಹುದು, ಛಂದೋಲಯದ ಕೌಶಲಪ್ರದ ಬಳಕೆಯಲ್ಲಿ ಅವನು ತಜ್ಞನಿರಬಹುದು; ವಿಭಾವನಾ ಸಮೃದ್ಧನಿರಬಹುದು. ಹೀಗಿದ್ದಾಗಲೂ ಅವನು ಅಪೇಕ್ಷಿಸಿದೊಡನೆ ಕವನ ಜೀವ ತಳೆದು ಬಿಡುವುದಿಲ್ಲ. ತಕ್ಕ ಮುಹೂರ್ತಕ್ಕೆ, ಪ್ರಶಸ್ತವಾದ ಸಂದರ್ಭಕ್ಕೆ ಅವನು ಕಾಯಲೇಬೇಕು; ಆಸ್ಪತ್ರೆ ತುಂಬ ಸುಸಜ್ಜಿತವಾಗಿರಬಹುದು. ಅಲ್ಲಿನ ನಿಪುಣ ವೈದ್ಯೆ ತನ್ನ ವಿದ್ಯೆಯಲ್ಲಿ ಪಾರಂಗತಳಿರಬಹುದು. ಪರೀಕ್ಷಣ ಸಲಕರಣಗಳು ಅತ್ಯಾಧುನಿಕವಾಗಿರಬಹುದು. ಔಷಧೋಪಚಾರ ಮತ್ತು ಆರೈಕೆಗಳಲ್ಲಿ ನಿಪುಣಳಾದ ದಾದಿ ಲಭ್ಯವಿರಬಹುದು. ಇವೆಲ್ಲ ಇದ್ದರೂ, ನ್ಯೂನತೆ ಇರದ ಶಿಶುವಿನ ಹುಟ್ಟುವಿಕೆಗೆ ಒಂಭತ್ತು ತಿಂಗಳು ಬೇಕು.

ಕವಿ ಸಾಹಿತಿಗಳ ಪಾಲಿಗೆ ವಿವಿಧ ತರದ ಬದುಕಿನ ಅನುಭವ ಬಹಳ ಮುಖ್ಯವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅದು ನಾವೆಗೆ ನೀರಿದ್ದಂತೆ. ಜೀವನದ ಅನುಭವಗಳನ್ನು ಅವರು ಗಳಿಸಿಕೊಂಡಷ್ಟು ಕಾವ್ಯದ ಶೋಭೆ ಮತ್ತು ವರ್ಚಸ್ಸು ವರ್ಧಿಸುತ್ತದೆ. ವಿಧವಿಧವಾದ ಮೂಲಗಳಿಂದ ತಿಳಿವನ್ನು ಆಪೋಶಿಸಿ ಮನಸ್ಸನ್ನು ಮೋಪಾಗಿಸಿಕೊಳ್ಳಬೇಕು; ಹೃದಯವನ್ನು ಹೃಷ್ಟಗೊಳಿಸಿಕೊಳ್ಳಬೇಕು. ಅನೇಕಾನೇಕ ಒಳ್ಳೆಯ ಪ್ರಭಾವಗಳನ್ನು ವಾತಾಪಿಸಿಕೊಂಡು, ಅವು ಅವರ ಚೇತನಗಳಿಗೆ ಹಿತಪ್ರದವಾಗುವಂತೆ ಪರಿವರ್ತಿಸಿಕೊಂಡು ಸುವಿಚಾರ, ಸ್ವಸಂವೇದನೆಗಳನ್ನಾಗಿಸಿ ಮಾರ್ಪಡಿಸಿಕೊಳ್ಳಬೇಕು. ಹಾಲನ್ನು ಅಮೃತವಾಗಿಸಿಕೊಳ್ಳುವ, ಜಲವನ್ನು ಗಂಗಾತೀರ್ಥವನ್ನಾಗಿ ಪರಿವರ್ತನೆ ಮಾಡಿಕೊಳ್ಳುವ ಸ್ವಂತತನ ಲೇಖಕನಿಗೆ ಇರಬೇಕು.

ಕವಿಯಾದವನಿಗೆ ದೃಶ್ಯ ಜಗತ್ತಿನ ನಾದಗಳ, ನೋಟಗಳ, ಗಂಧಗಳ ಸಜೀವ ಗ್ರಹಿಕೆ ಅಗತ್ಯವಾಗಿರುವ ಹಾಗೆ ಅವುಗಳನ್ನು ಶಬ್ದಗಳಲ್ಲಿ ಪುನರ್‌ಸೃಷ್ಟಿಸಿ ತದ್ವತ್ತಾಗಿ ಸಂವಹನಿಸುವ ಕೌಶಲ ಬಹಳ ಮಹತ್ವದ್ದೆನ್ನಿಸುತ್ತದೆ. ಹಾಗಾದಾಗ ಮಾತ್ರ ಕವನ

ನೈಸರ್ಗಿಕ ವಸ್ತು ಮತ್ತು ದೃಶ್ಯಗಳ ನವನವೋನ್ಮೇಷತೆಯ ಭಾವನೆಯನ್ನು ನಮ್ಮಲ್ಲಿ ಮೂಡಿಸುತ್ತದೆ.

ನಮ್ಮ ದೈನಂದಿನ ಅನುಭವಗಳನ್ನು ಸಾಹಿತ್ಯಮಾನ್ಯ ಸಾಮಗ್ರಿಯಾಗಿ ಮಾರ್ಪಡಿಸುವುದು ಗುಹ್ಯವಾದ ಮನಃಪ್ರಕ್ರಿಯೆ ಎನ್ನುವುದು ಸರ್ವವಿದಿತ. ಇದು ನೆರವೇರುವುದು ಕವಿ ಹುಟ್ಟಿನಿಂದ ಪಡೆದು ಬಂದ ಒಂದು ಅಪರೂಪದ ಗುಣದ ಮೂಲಕ. ಒಬ್ಬ ಕವಿಯಾಗುವುದಕ್ಕೆ ಅವನ ಅಂತರಂಗದಲ್ಲಿ ಜನ್ಮತಃ ಪ್ರಾಪ್ತವಾಗಿಸಿ ಕೊಂಡ ಕಿಡಿಯೊಂದು ಇರಬೇಕು. ಕವನವನ್ನು ಬರೆಯುವ ಸಮಯದಲ್ಲಿ ಇದರ ಅರಿವು ಅವನ ನೆನಪಿನಲ್ಲಿ ಸುಳಿಯಬಹುದು. ಕವಿ ಅದನ್ನು ಆರಿ ಹೋಗದ ಹಾಗೆ ಪರಿಶ್ರಮ ಪೂರ್ವಕವಾದ ಜೀವನಾನುಭವ, ಓದು, ವಿಚಾರ, ಮಂಥನ, ಧ್ಯಾನಗಳ ಉರುವಲನ್ನೊಡ್ಡಿ ಈ ಕಿಡಿಯನ್ನು ಕೆಂಡವನ್ನಾಗಿ ಮಾರ್ಪಡಿಸಿ ಕೊಂಡಾಗ, ಅದರ ಕಾವು ಮತ್ತು ದೀಪ್ತಿಗಳಿಂದ ಸತ್ಕಾವ್ಯ ಹುಟ್ಟು ಪಡೆಯುತ್ತದೆ.

ಇದನ್ನು ಆಗಗೊಳಿಸುವ ಕವಿಯ ಗುಣ ವಿಶೇಷವನ್ನು 'ಪ್ರತಿಭೆ' ಎಂದು ಗುರುತಿಸುತ್ತೇವೆ. ಅದೊಂದು ಸ್ಫೂರ್ತ ಕ್ಷಣಗಳ ಅಪೂರ್ವವಾದ ಸೃಜನಶೀಲ ಸುಮುಹೂರ್ತ. ಮಾಮೂಲಿಯಲ್ಲಿ ಮಹಿಮಾನ್ವಿತವಾದುದನ್ನು; ಸಾಧಾರಣದಲ್ಲಿ ಸತತ ಹೊಚ್ಚ ಹೊಸತಾದ ಅಸಾಮಾನ್ಯವನ್ನು ದರ್ಶನ ಮಾಡಿಸುವ, ಅನುಸೃಷ್ಟಿಸುವ ಪ್ರತ್ಯುತ್ಪನ್ನಮತಿ ಸಾಮರ್ಥ್ಯ ಈ ಪ್ರತಿಭೆ. ಇದೊಂದು ವಿರೋಧಗಳ ಅವಿನಾ ರೀತಿಯ ಸಮರಸಾವಸ್ಥೆ. ಸೌದೆಯ ವಾಸ್ತವದಲ್ಲಿ ಮರದ ಸಜೀವ ಕಲಾತ್ಮಕತೆಯನ್ನು ಮನದಟ್ಟಾಗಿಸುವ ಅಸದೃಶ ಕೌಶಲ. ಪ್ರತಿಭೆ ಒಂದು ಹೊಳಪು, ಮಿಂಚು. ಬಿಡಿಗಾಳಿನಲ್ಲಿ ಕಂಗೊಳಿಸುವ ಗದ್ದೆಯನ್ನು, ಮಗ್ಗಿ ಪುಸ್ತಕದ ಅಂಕಿಗಳಲ್ಲಿ ವಿಜ್ಞಾನಿ ಐನ್‌ಸ್ಟೈನ್‌ನ ಸಾಪೇಕ್ಷ ಸಿದ್ಧಾಂತವನ್ನು ಮನಗಾಣಿಸುವ ವಿರಳ ವಿಭಾವನೆಯ ಕಾಣ್ಕೆ. ಲೋಕ ಸಾಧಾರಣವಾದ, ವ್ಯವಹಾರಸ್ಥವಾದ ತರ್ಕಯುಕ್ತಿಗಳಿಗೂ ಪ್ರತಿಭೆಗೂ ಭಾರಿ ವ್ಯತ್ಯಾಸವಿದೆ. ಒಂದರದು ಬುವಿಯ ಕುಪ್ಪಳಿಕೆ, ಇನ್ನೊಂದರದು ಬಾನಲೆತ. ಅಪೂರ್ವತೆ, ವಿಸ್ಮಯಗಳು ಪ್ರತಿಭಾ ವೈನತೇಯನ ರೆಕ್ಕೆಗಳು.

ಒಂದು ಮನಸ್ಸಿಗೆ ಹೊಳೆದಾಗ, ಅದನ್ನು ಹಿಂಬಾಲಿಸಿ ನೆಗಸುಕ್ಕಿ ನುಗ್ಗುವ ಸಮಾನಗಳು ಮತ್ತು ಸದೃಶಗಳು; ಹೊರಗೆ ಸಂಬಂಧವನ್ನು ವ್ಯಕ್ತಗೊಳಿಸಿಕೊಳ್ಳದೆ ಒಳ ಕೊಂಡಿಗಳಿಂದ ಕೂಡಿಕೊಂಡು ತನಗೇ ಸೋಜಿಗ ತರಿಸುವ ನೇಪಥ್ಯದ ತಥ್ಯಗಳು; ಹಾಗೆಯೇ, ಅವುಗಳ ಕ್ಷಿಪ್ರವಾದ ಗ್ರಹಿಕೆ ಪ್ರಥಮ ದರ್ಜೆಯ ಕವಿ ಪ್ರತಿಭೆಗೆ ಹೆಗ್ಗುರುತು. ಮಂತ್ರಕ್ಕೆ ಮೈಯಾಕಾರ ನೀಡಿ ಮಂಡಲವನ್ನಾಗಿಸುವ ಅಪರೂಪದ ಮಾಟಗಾರಿಕೆ ಪ್ರತಿಭೆಯದು. ಲೋಕತಥ್ಯ ಭಾವಸತ್ಯವಾಗಿ ಅಪರೂಪದ ಮಾಟಗಾರಿಕೆ ಪ್ರತಿಭೆಯದು. ಲೋಕತಥ್ಯ ಭಾವಸತ್ಯವಾಗಿ ಮಾರ್ಪಾಟಾಗುವ ಪ್ರಕ್ರಿಯೆಯ ಅರ್ಥೈಕೆ ಮತ್ತು ಗ್ರಹಿಕೆ ಅಗಮ್ಯವೆನ್ನಿಸಿದರೂ ಅದರ ಫಲವಾಗಿ ಮೈ ತಳೆದ ರಚನೆಯನ್ನು ಯಥಾರ್ಥವಾದ ಪ್ರಾಪಂಚಿಕ ಘಟನೆಗಳ ಜೊತೆಗೆ ಇಟ್ಟು ತಾಳೆ ಹಾಕಿದಾಗ ನಮಗೆ ತಿಳಿಯುವುದು ಎಂತಹ ಅಮೋಘ, ಅನಿರೀಕ್ಷಿತ ಪವಾಡ ಜರುಗಿದೆ ಎಂದು. ಹೊರಗಿನ

ಘಟನೆಯೊಂದು ಬೆಳೆದು ಪವಾಡ ಜರುಗಿದೆ ಎಂದು. ಹೊರಗಿನ ಘಟನೆಯೊಂದು ಬೆಳೆದು ಪುಷ್ಟಿಗೊಂಡು ಕವಲಿಸಿಕೊಂಡ ರೀತಿ ಮತ್ತು ಕಲ್ಪನೆ; ಹಾಗೂ ಇವು ನುಡಿಗಾರಿಕೆಯ ಮಾಟವನ್ನು ಆಕೃತಿಸಿಕೊಂಡ ರೀತಿ–ಕೊರಡು ಕೊನರುವ ಅದ್ಭುತವನ್ನು ಮನವರಿಕೆ ಮಾಡಿಸುತ್ತದೆ. ಎತ್ತಣ ವಾಸ್ತವಾನುಭವ, ಎತ್ತಣ ಸಾಹಿತ್ಯಸೃಷ್ಟಿ? ಎತ್ತಣ ಕನ್ಯಾಪಾದ, ಎತ್ತಣ ಅಶೋಕ? ಎಂದು ಮೂಕವಿಸ್ಮಿತರಾಗುತ್ತೇವೆ. ಪ್ರತಿಭೆಯ ಪವಾಡ ಈ ಬಗೆಯದು.

ಕವಿಗೆ ಇರಲೇಬೇಕಾದ ಬಹು ಮುಖ್ಯ ಸಾಧನಗಳಲ್ಲಿ ಭಾಷೆಯ ಮೇಲಿನ ಯಜಮಾನ್ಯ ಮತ್ತು ಆಳವಾದ ಪರಿಜ್ಞಾನ ಸಹ ಒಂದು. ಅವನಿಗೆ ಭಾಷೆ ಕೇವಲ ವಿವರಗಳನ್ನು, ಅಂಕಿ ಅಂಶ ಮಾಹಿತಿಗಳನ್ನು ಪೇರಿಸುವ ಪರಿಕರವಲ್ಲ. ಇಲ್ಲವೇ, ಶಬ್ದಗಳ ಅರ್ಥವನ್ನು ಸೂಚಿಸಿ ತಟಸ್ಥವಾಗಿ ದೂರ ಸರಿದು ನಿಲ್ಲುವ ಸಲಕರಣವಲ್ಲ. ಕವಿಗೆ ಭಾಷೆ ಅರ್ಥವರ್ಧಕ, ಅತಿಶಯಾರ್ಥ ದ್ಯೋತಕ. ಅವನ ಪಾಲಿಗೆ ಶಬ್ದಗಳೆಂದರೆ ಜೀವಂತ ವಸ್ತುಗಳಿದ್ದ ಹಾಗೆ. ಆ ಶಬ್ದಗಳ ಸಚೇತನ ಸೂಕ್ಷ್ಮಾಂಶಗಳು, ಬಾಗು ಬಳಕುಗಳು, ಸೆಖೆ ಶೀತಗಳು, ಕುಸುಮತ್ವ ವಜ್ರತ್ವಗಳು ಸುಪರಿಚಿತವಾಗಿ, ಅವುಗಳನ್ನು ಗುರುತಿಸುವಷ್ಟು ತಜ್ಞತೆ ಕವಿಗೆ ಇರಬೇಕು. ಪದಗಳನ್ನು ತನ್ನ ಇಂಗಿತಕ್ಕೆ ಅನುಗುಣವಾಗಿ ರಸೋಚಿತವಾಗಿ ಬಳಸಿಕೊಳ್ಳುವ ರಸಿಕತೆ ಮತ್ತು ಜಾಣತನ ಸಿದ್ಧಿಸಿರಬೇಕು. ಕಾವ್ಯ ರಚನೆಯ ಹೊತ್ತಿನಲ್ಲಿ ಆತ ಭಾಷೆಯ ಬಗ್ಗೆ ತಾಳಬೇಕಾದ ಎಚ್ಚರ ಮತ್ತು ಗೌರವ ಮಾತಿಗೆ ಮೀರಿದ್ದು.

ಕವಿ ಮಾತಿನ ಜೊತೆ ಚೆಲ್ಲಾಟವಾಡಬೇಕು. ಅದನ್ನು ರಮಿಸಿ ಒಲಿಸಿಕೊಳ್ಳಬೇಕು. ಅದರ ಕೃಪಾಕಟಾಕ್ಷಕ್ಕೆ ಕಂಬನಿಗೆರೆಯಬೇಕು. ಸಮಯ ಬಂದಾಗ ಬಲ ಪ್ರದರ್ಶನಕ್ಕೂ ಸಿದ್ಧವಾಗಬೇಕು. ಅದರ ವೀರಾವೇಶ, ತಟಸ್ಥ ಅವಸ್ಥೆಯನ್ನು ತನ್ನ ಪ್ಯಾಷನ್ನಿನಿಂದ (Passion) ಕಾವೇರಿಸಿ ಸುರತಕ್ಕೆ ಸಿದ್ಧಗೊಳಿಸಬೇಕು. ಹೀಗಾದಾಗಷ್ಟೇ ಅದು ಫಲಪ್ರದವಾಗುವುದು ಸಾಧ್ಯ. ಕವಿಯೊಬ್ಬನ ವಿಶೇಷತೆಯ ಧಾತುಗಳನ್ನು, ಸ್ವಂತಿಕೆಯ ಕಣಗಳನ್ನು ಅವನು ಬಳಸುವ ಮಾತು ಒಳಹೊಗಿಸಿಕೊಳ್ಳಬೇಕು. ಹೀಗಾಗದಿದ್ದಲ್ಲಿ ಕವಿಯ ಪುರುಷ ಸಮರ್ಥನೆಗೆ ಸಾಕ್ಷ್ಯ ದೊರೆಯದು.

ಭಾಷೆಯ ಮಹತ್ವ, ಎಂಥದ್ದೆನ್ನುವುದಕ್ಕೆ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳ ಅಧ್ಯಯನ ತಕ್ಕ ಪುರಾವೆಯನ್ನು ಒದಗಿಸುತ್ತದೆ. ಮನುಷ್ಯನ ಎಲ್ಲಾ ವಹಿವಾಟುಗಳಿಗೂ ಭಾಷೆಯೇ ಪ್ರಮುಖ ಸಾಧನವಾಗಿದ್ದರೂ ಬೇರೆ ಬೇರೆ ಆಶಯಗಳ ಪ್ರಕಾಶನಕ್ಕೆ ಬೇರೆ ಬೇರೆ ರೀತಿಯು ಅಭಿವ್ಯಂಜನ ಕ್ರಮ ಅಗತ್ಯವೆನ್ನಿಸುತ್ತದೆ. ವಿದ್ಯುತ್ತಿನ ಪ್ರವಹನೆಗೆ ಎಲ್ಲ ತಂತಿಗಳಿಗಿಂತ ತಾಮ್ರದ ತಂತಿ ಸುಪ್ರಶಸ್ತವಾಗಿರುವಂತೆ, ಬೆಳಕಿನ ಕಿರಣದ ವಿವಿಧ ವರ್ಣಗಳ ಪ್ರತಿಫಲನದ ಗರಿಷ್ಠ ಪರಿಣಾಮಕ್ಕೆ ರತ್ನಗಳಲ್ಲಿ ವಜ್ರ ಸರ್ವಸೂಕ್ತ ವೆನ್ನುವಂತೆ ಕವಿಯ ಅಂತರಾಳದ ಇಂಗಿತಾಭಿವ್ಯಕ್ತಿಗೆ ಮಾರ್ಮಿಕ ಸಾಧ್ಯತೆಗಳ ಸಾಧನವಾದ ಸಾಹಿತ್ಯಕ ಭಾಷೆ ಅತ್ಯಧಿಕ ಸೂಕ್ತ ಎನ್ನಿಸುತ್ತದೆ. ಸಂವಹನ ಕ್ರಿಯೆಯಲ್ಲಿ, ಅದರಲ್ಲೂ ಕಾವ್ಯಾಭಿವ್ಯಕ್ತಿಗೆ ಸಂಬಂಧಿಸಿದ ಹಾಗೆ ಭಾಷೆಗೆ ವಾಚ್ಯದ ಮತ್ತು ವ್ಯಂಗ್ಯಗಳ

ಮಗ್ಗಲುಗಳಿರುವುದು ಒಂದು ವಿಶೇಷ. ಇವೆರಡಕ್ಕೂ ಸಾಹಿತ್ಯದಲ್ಲಿ ಸ್ವವಿಶಿಷ್ಟ ಕರ್ತವ್ಯ ಮತ್ತು ಸ್ಥಾನಮಾನಗಳಿವೆ. ಇವೆರಡು ಗುಣಗಳ ಸರಿಯಾದ ತಿಳಿವಳಿಕೆ ಮತ್ತು ಯುಕ್ತವಾದ ಬಳಕೆ ಲಾಭಾಯಕವೆನ್ನಿಸುತ್ತದೆ. ಟಿ.ವಿ., ವಿಡಿಯೋ, ಕಂಪ್ಯೂಟರ್, ಮೈಕ್ರೋಫಿಲ್ಮ್ ಮೊದಲಾದ ತರಹಾವರಿ ವಿಜ್ಞಾನದತ್ತ ಬಲಿಷ್ಠ ಮನೋರಂಜನೆಯ ಹಾಗೂ ಜ್ಞಾನ ಪ್ರಸರಣ ಸಾಧನೆಗಳ ನಿರಂಕುಶ ರಾರಾಜಿಕೆ, ಕಣ್‌ಕುಕ್ಕುವ ಪಂಚು ಬೆಳಕಿನ ಮೆರೆತ, ಈಗಾಗಲೇ ಗ್ರಂಥಗಳನ್ನು ಮೋಂಬತ್ತಿಯ ಪ್ರಭೆಯ ಸ್ಥಾನಕ್ಕೆ ಸರಿಸುತ್ತಿರುವುದನ್ನು ಗಮನಿಸಿದರೆ, ಮುಂದೇನು ಕಾದಿದೆಯೋ ಎಂದು ಮನಸ್ಸು ಕಸಿವಿಸಿಗೊಳ್ಳುತ್ತದೆ. ಮನಸ್ಸನ್ನು ಮುದಗೊಳಿಸುವ, ರಂಗೇರಿಸುವ, ಹುಚ್ಚೆಬ್ಬಿಸುವ ತತ್ಕಾಲೀನ ಕೀಳು ರಂಜನೆಯೇ ಜನತೆಗೆ ಮುಖ್ಯವೆನ್ನಿಸಿದ್ದು, ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗುವ, ಅಭಿರುಚಿಯನ್ನು ತಿದ್ದುವ ಉತ್ತಮ ಸಾಹಿತ್ಯವನ್ನು ಬಯಸುವವರು ಕ್ಷೀಣಿಸುತ್ತಿದ್ದಾರೆ.

ಇಂದು ಸಾಮಾಜಿಕ ಮೌಲ್ಯಗಳು, ವ್ಯಕ್ತಿತ್ವದ ಉನ್ನತಿ ಮುಂತಾದ ವಿಷಯಗಳಿಗೆ ಹೆಚ್ಚು ಗಮನ ಕೊಡದೆ ಮನುಷ್ಯ ಕೇವಲ ಹಣ ಸಂಪಾದನೆಯಲ್ಲಷ್ಟೇ ಹಾಗೂ ತ್ವರಿತವಾಗಿ ಮೇಲೇರುವ ಸನ್ನಾವಾಹದಲ್ಲಷ್ಟೇ ತನ್ನ ಅಮೂಲ್ಯ ಸಮಯವನ್ನು ವ್ಯಯ ಮಾಡುತ್ತಿದ್ದಾನೆ. ಇಂದು ನಾವು ಕಾಣುತ್ತಿರುವ ಎಷ್ಟೋ ಸಾಮಾಜಿಕ ಸಮಸ್ಯೆಗಳಿಗೆ, ಅನಿಷ್ಟಗಳಿಗೆ, ಶಾಪಗಳಿಗೆ ಈ ಧೋರಣೆಯೇ ಕಾರಣವಾಗಿದೆ. ಇದರಿಂದ ಹೊರಬಂದ ಹೊರತು ಸಮಾಜದ ಉದ್ಧಾರ ಸಾಧ್ಯವಿಲ್ಲ.

ಈಗಿನ ಕಾಲ ತ್ವರೆ, ಧಾವಂತಗಳದ್ದು. ಆಧುನಿಕತೆಯ ಹೆಸರಿನಲ್ಲಿ ಮನುಷ್ಯ ತನ್ನ ನೆಮ್ಮದಿ, ಸಂತೋಷಗಳಿಗೆ ಸಂಚಕಾರ ತಂದುಕೊಳ್ಳುತ್ತಿದ್ದಾನೆ. ಇಂದು ಮನುಷ್ಯ ಹಸಿ ಹಸಿ ಮನೋರಂಜನೆಯ ಮೂಲಕ ಕುಣಿದು ಕುಪ್ಪಳಿಸುವುದನ್ನೇ ಸಂತೋಷ ಎಂದು ತಿಳಿದಿದ್ದಾನೆ. ಇದು ಮುಂದೊಂದು ದಿನ ತನ್ನ ನಿಜವಾದ ನೆಮ್ಮದಿಗೆ ಎರವಾಗಿ ಪರಿಣಮಿಸುತ್ತದೆ ಎಂಬ ಅರಿವಿಲ್ಲದಿರುವುದು ದುರದೃಷ್ಟಕರ.

ಇಂದು ನಮ್ಮ ಆಲೋಚನೆ, ಅನಿಸಿಕೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ. ಎಲ್ಲವೂ ದಿಢೀರಾಗಿ, ಷಾರ್ಟ್‌ಕಟ್‌ನಲ್ಲಿ ಲಭ್ಯವಾಗಬೇಕು. ಕೂತು ಉಣ್ಣುವುದಕ್ಕೂ ಸಮಯ ಸಹನೆಗಳಿಲ್ಲ. ಹೀಗಾಗಿ, ಹೊತ್ತಗೆಯೋದಿಗೆ ಬೇಕಾಗುವ ಸಮಯ, ಸಂಯಮ, ಪರಿಶ್ರಮ, ಏಕಾಗ್ರತೆಗಳಿಗಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಸಾನಾಗಿ ಮೋಜು ಮಜಗಳನ್ನು ಹಂಚುವ ಪಣವನ್ನು ವೈಜ್ಞಾನಿಕ ಉಪಕರಣಗಳು ತೊಟ್ಟಿವೆ. ಸಾಮಾನ್ಯ ನಿರಕ್ಷರಸ್ಥನಿರಲಿ, ವಿದ್ಯಾವಿಭೂಷಿತರೆನ್ನಿಸಿಕೊಂಡವರೂ ಈ ಅತ್ಯಾಧುನಿಕ ಆವಿಷ್ಕಾರಗಳಿಗೆ ಮನ ಸೋತಿದ್ದಾರೆ. ತಮ್ಮ ಚಿಂತೆಯೇ ತಮಗೆ ಹಾಸಲುಂಟು ಹೊದೆಯಲುಂಟು ಎನ್ನುವ ಪ್ರಸಕ್ತ ದಿವಸಗಳಲ್ಲಿ ಜ್ಞಾನಾರ್ಜನೆ, ಚಿಂತನೆ, ಚರ್ಚೆ, ವಿಚಾರ ವಿನಿಮಯಾದಿಗಳಿಗೆ ಖರ್ಚು ಮಾಡಲು ಜನರಿಗೆ ಮನಸ್ಸು, ವೇಳೆಯೆಲ್ಲಿದೆ?

ಈ ಮಿತಿ ಮೇರೆಗಳ ಅರಿವಿದ್ದೂ ನಾವು ಇಂದು ಹಲವು ತೆರನಾದ ಗ್ರಂಥಗಳ ವಾಚನ ಹವ್ಯಾಸವನ್ನು ಕುದುರಿಸಲು ಮಾರ್ಗೋಪಾಯಗಳನ್ನು ಕುರಿತು

ಚಿಂತಿಸುವುದು ಅಸಾಂದರ್ಭಿಕ ಎನ್ನಿಸದು. ಬದಲಿಗೆ, ಅದೊಂದು ಅಮೋಘವಾದ ಸಮಾಜೋಪಕಾರವೇ ಆದೀತು. ಈ ಕೃತಾರ್ಥ ಕಾಯಕದಲ್ಲಿ ಪತ್ರಿಕೆಗಳ, ಸಂಘ ಸಂಸ್ಥೆಗಳ, ಸರ್ಕಾರದ, ವ್ಯಕ್ತಿ ಮಟ್ಟದ ಪ್ರಯತ್ನಗಳೂ ಪಾಲ್ಗೊಳ್ಳಬೇಕಾದದ್ದು ಅನಿವಾರ್ಯವಾಗಿದೆ. ಅದೊಂದು ಚಳವಳಿಯ ಸ್ವರೂಪ ಪಡೆಯಬೇಕಾದ ಅಗತ್ಯ ಇಂದು ಉದ್ಭವಿಸಿದೆ. ಕೃತಿ ರಚನೆಯಷ್ಟೇ ಪ್ರಚಾರ ಪರಿಚರ್ಯೆಯೂ ಸಮಾನ ಸಾರ್ಥಕ್ಯ ಸಮಾರಾಧನೆ ಎನ್ನಿಸಿಕೊಳ್ಳುತ್ತದೆ.

ಒಂದು ಪುಸ್ತಕ ಬರೆದಾದ ಮೇಲೆ ಸಾಹಿತ್ಯ ಪ್ರಕ್ರಿಯೆಯ ಒಂದು ಮಜಲು ಮಾತ್ರ ಮುಗಿಯುತ್ತದೆ. ಸಾಹಿತ್ಯದ ಅಸ್ತಿತ್ವ, ಸಜೀವತೆ, ಉತ್ಕರ್ಷಗಳ ದೃಷ್ಟಿಯಿಂದ; ಕಾಲ ದೇಶಗಳನ್ನು ಮೀರಿ ಅದು ಪ್ರಸರಣಗೊಳ್ಳಬೇಕಾದ ದೃಷ್ಟಿಯಿಂದ ವಾಚಕರ ಸೃಷ್ಟಿಯೂ ಆಗುತ್ತಲೇ ಇರಬೇಕು. ಈ ಕ್ರಿಯೆಗೆ ಮುಗಿವೆಂಬುದಿಲ್ಲ. ಇದರಲ್ಲಿ ಸಾಹಿತ್ಯ ಪರಿಚಾರಕರ, ವಿಮರ್ಶಕರ, ಮೆಚ್ಚಿಗೆಗಾರರ ಪಾತ್ರ ಎಣೆಯಿಲ್ಲದ್ದು. ಕಾಲ ಕಾಲಕ್ಕೆ ಹೊಸ ಹೊಸ ಸಂದರ್ಭಗಳ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳ ಪುನರ್ಮೌಲ್ಯೀಕರಣ, ಆಶಯ ವಿವರಣೆ ಕೃತಿ ಸಮಾಲೋಚಕರಿಂದ ನಡೆಯುತ್ತಿರಬೇಕು. ಆ ಕೃತಿಗಳು ಜನಪದದ ನೆನಪಿನಿಂದ ಮಾಸಿ ಹೋಗದಂತೆ ಎಚ್ಚರಿಸುತ್ತಿರುವ, ಅವುಗಳನ್ನು ಓದಬೇಕೆಂಬ ಆಸೆ ಸಾಹಿತ್ಯೇತರ ಕಾಳಜಿಗಳಿಂದ ಕಮರಿಹೋಗದಂತೆ ಕಾಪಾಡುವ ಕ್ರಮಸಾಧ್ಯ ಪ್ರಯತ್ನಗಳನ್ನು ಸಹೃದಯ ವರ್ಗ ಕೈಗೊಳ್ಳಬೇಕು.

ಇಂಥ ಸಾಹಿತ್ಯ ಪ್ರಚಾರ ಕಾರ್ಯಕ್ಕೆ ಪೂರ್ವಭಾವಿಯಾಗಿ, ಭಿನ್ನ ಅಭಿರುಚಿ ಆಸಕ್ತಿಗಳನ್ನು ತಣಿಸುವ; ಜನ ತಮ್ಮ ಮೇಲ್ಮೆ, ಸಂಸ್ಕೃತಿ, ಪುರುಷಾರ್ಥ, ಪುಷ್ಟಿ, ನೋವು ನಲಿವುಗಳನ್ನು ಗುರುತಿಸಿಕೊಳ್ಳುವ ಕೃತಿಗಳು ಲಭ್ಯವಿರಬೇಕು. ಇವುಗಳ ಜೊತೆಗೆ ಒಂದು ಮಿಗಿಲಾಗಿ, ತೀರಾ ತುಟ್ಟಿ ಎನ್ನಿಸಿದ, ಕೈಗೆಟಕುವ ಬೆಲೆಯ ಪುಸ್ತಕಗಳು ಜನ ಸಾಮಾನ್ಯರಿಗೆ ಸುಲಭವಾಗಿ ಸಿಕ್ಕುವಂತಿರಬೇಕು. ಈ ದಿಸೆಯಲ್ಲಿ ಹಿಂದಿನ ಸರ್ಕಾರಗಳು 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಪ್ರಕಟಿಸಿದ ವಿವಿಧ ಪುಸ್ತಕಗಳು ಮತ್ತು ಡಿ.ವಿ.ಜಿ., ಅಂಬೇಡ್ಕರ್, ಲೋಹಿಯಾ ಅವರ ಕೃತಿಗಳನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಬಹುದು. ನಮ್ಮ ಬಹುತರ ಖಾಸಗಿ ಪ್ರಕಾಶರ ಪುಸ್ತಕಗಳು ವಾಚಕರ ಸಲುವಾಗಿ ಪ್ರಕಟವಾಗುತ್ತಿವೆಯೋ? ಕಾಲೇಜು ಶಾಲಾ ಗ್ರಂಥಾಲಯಗಳನ್ನು ತುಂಬಲು, ಸರ್ಕಾರದ ಸಗಟು ಖರೀದಿಯ ಸವಲತ್ತನ್ನು ಬಳಸಿಕೊಳ್ಳಲು ಪ್ರಕಾಶಿತವಾಗುತ್ತಿವೆಯೋ? ತಿಳಿಯವುದು ಕಷ್ಟ. ವೈಯಕ್ತಿಕವಾಗಿ ಖರೀದಿಸುವ ಸಾಹಿತ್ಯಾಸಕ್ತರ ಸಂಖ್ಯೆ ಎಂಬ ರಾಮಪಾದ ಸೋಕದ ಹೊರತು ಓದುಗಾರಿಕೆಯ ಅಹಲ್ಯಾ ಶಿಲಾಶಾಪ ನೀಗದು. ಜಿ.ಪಿ. ರಾಜರತ್ನಂ ಹೇಳುವಂತೆ 'ಪುಸ್ತಕಗಳನ್ನು ಕೊಂಡಾಡಿದರೆ ಸಾಲದು, ಕೊಂಡು ಆಡಬೇಕು?'

ಸಾಹಿತ್ಯವನ್ನು ಬದುಕಿನ ಮತಿಬಿಂಬ ಎನ್ನಬಹುದು. ದೇಶ ಕಾಲಗಳ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಮುನ್ನಡೆಯುವ ಸಾಮಾಜಿಕ ಜೀವನದ ಅಭಿಲಾಷೆ-ಆಶೋತ್ತರಗಳ, ನುಡಿ-ನಡೆವಳಿಕೆಗಳ, ನೋವು-ನಲಿವುಗಳ ಒಂದು ಯಥಾರ್ಥವಾದ

ಪ್ರತಿಬಿಂಬ ಸಾಹಿತ್ಯದಲ್ಲಿ ಮೈ ತಳೆದಿರುತ್ತದೆ. ಈ ನಿಟ್ಟಿನಿಂದ ನೋಡಿದಾಗ, ಒಂದು ನಾಡಿನ ಜನಪದದ ಸಂಸ್ಕೃತಿಗೆ ಸಾಹಿತ್ಯ ಕೈಗನ್ನಡಿಯಾಗುತ್ತದೆ. ಸಾಹಿತ್ಯದ ಅರ್ಥೈಸುವಿಕೆಯಿಂದ ಮನುಷ್ಯರ ಬದುಕಿಗೆ ಒಂದು ಸೂಕ್ಷ್ಮಾವಲೋಕನ ಹಾಗೂ ವಿಚಾರಶೀಲ ಸಾಮರ್ಥ್ಯ ಒದಗುತ್ತದೆ. ಹಾಗೆಯೇ, ಬದುಕಿನಿಂದ ಸಾಹಿತ್ಯದ ಸೃಷ್ಟಿಗೆ ಪ್ರೇರಣೆ, ಜಿನಿಸು ಪುಷ್ಕಳವಾಗಿ ದೊರೆಯುತ್ತವೆ. ಸಾಹಿತ್ಯ, ಸಮಾಜ ಜೀವಿಗಳ ಮೇಲೆ ಬೀರುವ ಪ್ರಭಾವ ಹಾಗೂ ಒಳ್ಳೆಯದನ್ನು ಮಾಡುವ ಅಂಶದ ಬಗೆಗೆ ಭಾರತೀಯ ಪ್ರಾಚೀನ ಮೀಮಾಂಸಕ ವರ್ಗದಲ್ಲಿ ಏಕಕಂಠತೆ ಇಲ್ಲ. ಇದೇ ರೀತಿ ಪಾಶ್ಚಾತ್ಯ ಸಾಹಿತ್ಯ ಪರಾಮರ್ಶಕರಲ್ಲೂ ಸಹಮತದ ಸಾಮ್ಯ ಕಾಣಿಸದು. ಬಹುಶಃ ಸಾಹಿತ್ಯದ ಇಂತಹ ನಿಶ್ಚಿತವಲ್ಲದ ಧೋರಣೆಯಲ್ಲಿ ಮತ್ತು ಅದರ ಬಗೆಗಿನ ಅಭಿಪ್ರಾಯ ಭೇದದಲ್ಲಿ ಅದರ ಮಹತ್ವ ಮತ್ತು ಅಗ್ಗಳಿಕೆ ಅಡಗಿರಬಹುದು. ಇದರಿಂದ, ಸಾಹಿತ್ಯದ ಪರಿಮಿತಿಗೆ ಬದ್ಧವಾಗದ ಒಂದು ಮೇಲ್ಮೆ ಖಚಿತಪಡುತ್ತದೆ.

ಮನುಷ್ಯ ಜೀವಿತದ ಲೌಕಿಕ ಸ್ವರೂಪದ ಲಾಭಗಳಿಂದ ಹಿಡಿದು ಪಾರಲೌಕಿಕ ಮತ್ತು ಶ್ರೇಯೋದಾಯಕ ಕೃತಾರ್ಥತೆಯವರೆಗೆ ಸಾಹಿತ್ಯದ ಪ್ರಭಾವ ವಲಯ ಹಬ್ಬಿರುವುದನ್ನು ಗಣ್ಯರ ವಿವೇಚನೆಯಿಂದ ನಮಗೆ ತಿಳಿದುಬರುತ್ತದೆ. ಒಂದಂತು ಸಿದ್ಧ ಸತ್ಯ. ಅದು, ಸಾಹಿತ್ಯದ ಬಹು ಕಾಲದ ಅಧ್ಯಯನ ಮನನ ಮಂಥನಗಳಿಂದ ನಮ್ಮ ಮನಸ್ಸಿನ ಸಂವೇದನೆ ಸೂಕ್ಷ್ಮತರ ಮತ್ತು ಶ್ರೀಮಂತಗೊಳ್ಳುವುದು. ನಮ್ಮ ದೈನಂದಿನ ಪುನರಾವರ್ತನೆಯ ಸಪ್ಪೆತನದ ಮಾಮೂಲು ಬದುಕಿನ ವಿಧಾನಕ್ಕೆ, ಕೋಟಲೆ ಸಂಕಷ್ಟಗಳ ಲಾಗಾಯ್ತಿನ ಸ್ವಾರಸ್ಯರಹಿತ ದಿನಚರಿಗೆ ರುಚಿಕರ ವ್ಯಂಜನಗಳನ್ನು, ಸವಿ ಬೆಳಕು ಸೊಗಸುಗಳನ್ನು ಕೂಡಿಸಿ ಜೀವನವನ್ನು ವಿಶೇಷತರವಾದ ಆಸಕ್ತಿ ಕುತೂಹಲಗಳಿಂದ ಎದುರಾಗುವ ಹೆಚ್ಚುಗಾರಿಕೆಯನ್ನು ಸಂಪಾದಿಸಿಕೊಳ್ಳುತ್ತೇವೆ. ಅಂದರೆ, ಹಿಂದಿಲ್ಲದ ಹೊಸದಾದ ದೃಷ್ಟಿ ನಮಗೆ ಪ್ರಾಪ್ತವಾಗುತ್ತದೆ. ಈ ಅರ್ಥದಲ್ಲಿ ಸಾಧಾರಣ ಸಾಮಾಜಿಕನ ಜೊತೆ ಒಬ್ಬ ದೀರ್ಘ ಅಧ್ಯಯನದ ಸಾಹಿತ್ಯ ವಿಲಾಸಿಯನ್ನು ಹೋಲಿಸಿದಾಗ ಈ ಎರಡನೆಯವನ ಬಾಳು ಅಧಿಕ ಅರ್ಥಪೂರ್ಣ, ಭವ್ಯತಮ ಮತ್ತು ಸಹ್ಯವೆನಿಸುತ್ತದೆ. ಮನುಷ್ಯನ ಸಾರ್ಥಕತೆಯ ದೃಷ್ಟಿಯಿಂದ ನೋಡಿದಾಗ ಇದೊಂದು ಮಹತ್ತರ ಲಾಭ ಎನ್ನಿಸದಿರದು.

ವಿಜ್ಞಾನ ತಂತ್ರಜ್ಞಾನಗಳ ಮುನ್ನಡೆ, ಹೊಸ ಸಂಶೋಧನೆಯ ಆವಿಷ್ಕಾರಗಳ ಅವಿರತ ಪ್ರಯತ್ನ ನಮ್ಮ ಬದುಕನ್ನು ತುಂಬ ಸೌಲಭ್ಯವಂತ, ಸುಲಭಪ್ರಾಯ ಗೊಳಿಸುವದುರಲ್ಲಿ ಸಂದೇಹವೇ ಇಲ್ಲ. ವಿಜ್ಞಾನವನ್ನು ಉಳಿದು ಅರೆ ಕ್ಷಣವೂ ಆಧುನಿಕ ಮನುಷ್ಯ ಉಸಿರಾಡುವಂತಿಲ್ಲ. ಪ್ರಾಣ ವಾಯುವಿನಷ್ಟೇ ಅನಿವಾರ್ಯ ವಾಗಿದೆ ಅವನ ಬದುಕಿಗೆ ವಿಜ್ಞಾನ. ವಿಜ್ಞಾನ ತಂತ್ರಜ್ಞಾನಗಳ ದೆಸೆಯಿಂದ ಜಗತ್ತು ಹಿಂದೆಲ್ಲಾ ಕಾಲಕ್ಕಿಂತ ಇಂದು ಅತ್ಯಂತ ನಿಕಟವಾಗಿದೆ ಮತ್ತು ಪರಸ್ಪರ ಸಹಕಾರ, ವಿನಿಮಯ, ಲಾಭ ಮತ್ತು ಅರ್ಥೈಕದೃಷ್ಟಿಯಿಂದ ಅಭೂತಪೂರ್ವವಾದ ಹೆಗ್ಗಳಿಕೆಯನ್ನು ಹೊಂದಿದೆ.

ವಿಜ್ಞಾನದ ಈ ಒಂದು ಅತ್ಯಗತ್ಯವಾದ, ಯಶಸ್ಕರವಾದ ಉಪಕಾರಕ್ಕೆ ನಮ್ಮ ಆಧುನಿಕ ಬದುಕು ತುಂಬ ಕೃತಜ್ಞವಾಗಿರಬೇಕು ಮತ್ತು ವಿಜ್ಞಾನ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯ ಕೊಡಬೇಕು. ಆದರೆ ಇಲ್ಲೇ ಒಂದು ಅಪಾಯವನ್ನು ಸೂಚಿಸುವುದೂ ಸೂಕ್ತ. ಒಂದು ಕಡೆ ವಿಜ್ಞಾನ ತಂತ್ರಜ್ಞಾನಗಳ ಅಭ್ಯುದಯದಿಂದ ನಮ್ಮ ಸಾಮಾಜಿಕ ಬಾಳು ಸುಧಾರಣೆಗೊಳ್ಳುತ್ತಿರುವಂತೆ, ಇನ್ನೊಂದು ಕಡೆ ದಾನವೀಯವಾಗಿ ವರ್ತಿಸುತ್ತಿರುವುದೂ ಸತ್ಯ ಸಂಗತಿಯಾಗಿದೆ. ವಿಜ್ಞಾನದಿಂದ ನಮಗೆ ಲಭಿಸುತ್ತಿರುವ ಲೌಕಿಕ ಸ್ವರೂಪದ ಸೌಲಭ್ಯಾನುಕೂಲಗಳನ್ನು ವಶಪಡಿಸಿ ಕೊಳ್ಳುವ ದಿನನಿತ್ಯದ ತುರ್ತಿನಲ್ಲಿ ಮನುಷ್ಯರ ಮಧ್ಯೆ ನಿರಂತರ ಸ್ಪರ್ಧೆ ಕರುಬು ಮಾತ್ಸರ್ಯ ಅಸಹಿಷ್ಣುತೆ ಮತ್ತು ಪರಸ್ಪರ ಅವಿಶ್ವಾಸ ಮುಗಿಲನ್ನು ಮುಟ್ಟಿದೆ. ಸಂಶೋಧನೆಗಳ ಪರಿಣಾಮವಾಗಿ ಹೊಸ ಹೊಸದಾದ ಅಸಂಖ್ಯ ವಸ್ತು ಸಲಕರಣೆ ಮತ್ತು ಪರಿಕರಗಳು ಮಿತಿಮೇರೆಯಿಲ್ಲದೆ ಹೆಚ್ಚುತ್ತಿವೆ. ಇವುಗಳನ್ನು ಪಡೆಯಲು ಮನುಷ್ಯ ವ್ಯಯಿಸುತ್ತಿರುವ ಸಮಯ, ದ್ರವ್ಯ ಮತ್ತು ಮನಸ್ಸಿನ ನೆಮ್ಮದಿಗಳಿಗೆ ಪರ್ಯಾಯವಿಲ್ಲ. ಕೊಳ್ಳುಬಾಕ ಸಂಸ್ಕೃತಿಯ ಈ ದುಷ್ಪರಿಣಾಮ ಮನುಷ್ಯನನ್ನು ಸದಾ ಅಸ್ವಸ್ಥನನ್ನಾಗಿ, ಉದ್ವಿಗ್ನನನ್ನಾಗಿ ಮಾಡಿ ಅವನನ್ನು ಮಾರಕ ಪರಿಣಾಮದ ಕಂದರದತ್ತ ಒಯ್ಯುತ್ತಿದೆ. ಜಾಗತೀಕರಣ, ಉದಾರೀಕರಣ ಮುಂತಾದ ವೈವಿಧ್ಯ ಭಂಜಕ ಹಾಗೂ ಸ್ವಸಂಸ್ಕೃತಿ ವಿನಾಶಕ ಕೇಡುಗಳು ಜನ ಜೀವನವನ್ನು ಆಮರಿ ಕೊಳ್ಳುತ್ತಿರುವುದು ಬಹು ಜನರ ಗಮನಕ್ಕಾಗಲಿ, ಆಲೋಚನೆಗಾಗಲಿ ಪಕ್ಕಾಗದಿರುವುದು ಶೋಚನೀಯ.

ಇಂದು ನಾವು ವಿಕ್ರಯಿಸಿದ್ದನ್ನು ನಾಳೆಯ ಹೊತ್ತಿಗೆ, ನಾಳೆ ನಾವು ಕೊಳ್ಳುವುದು ನಾಡಿದ್ದರ ವೇಳೆಗೆ ಹಳಸಲಾಗಿ, ಆಸಕ್ತಿವಿಹೀನವಾಗಿ ಕಂಡು ಬಂದು, ಮರಳಿ ಹೊಸದನ್ನು ದಾಸ್ತಾನಿಸಿಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ತಲಪಿದ್ದೇವೆ. ಭೋಗ ತೃಷೆ ನಮ್ಮ ಬದುಕುಗಳನ್ನು ಅನಾರೋಗ್ಯಕರಗೊಳಿಸುತ್ತಿರುವ ಜೊತೆಗೆ, ನಮ್ಮಲ್ಲಿ ಪರರ ಬಗೆಗೆ ಹಿಂದೆ ಇದ್ದ ಆತ್ಮೀಯತೆ ಹಾಗೂ ನಿಕಟತೆಗಳು ಕಡಿಮೆಯಾಗುವಂತೆ ಎಸಗುತ್ತಿವೆ. ನಮ್ಮ ಕಮಾಯಿಗೆ ದಕ್ಕದಿರುವ ವಸ್ತುಗಳ ಸಮುಚ್ಚಯ ನಮ್ಮ ಕಣ್ಣು ಹಾಯ್ದ ಕಡೆಯೆಲ್ಲ ಎದ್ದು ತೋರುತ್ತಿದೆ; ಕಣ್ಮಿಟುಕಿಸಿ ಕುಲಟೆಯಂತೆ ಪ್ರಲೋಭಿಸುತ್ತಿದೆ. ಇದರ ಅಡ್ಡ ಪರಿಣಾಮವೆಂದರೆ, ವ್ಯಕ್ತಿ ತನ್ನ ಸೀಮಿತ ವರಮಾನದಲ್ಲಿ ಸರಳ ಜೀವನವನ್ನು ನಡೆಸುವುದು ದುಷ್ಕರವಾಗಿ ಅಕ್ರಮ ಗಳಿಕೆಯ ವಕ್ರ ಮಾರ್ಗವನ್ನು ಆಲಂಗಿಸದೆ ವಿಧಿಯಿಲ್ಲ ಎನ್ನಿಸುತ್ತದೆ. ಇವೆಲ್ಲವುಗಳ ಫಲಶ್ರುತಿ ಎಂದರೆ, ಮನುಷ್ಯ ದಿನ ಕಳೆದಂತೆ ಮಾನಸಿಕವಾದ ಅನಾರೋಗ್ಯ, ಅಶಾಂತಿ ಮತ್ತು ಅಸಂತೃಪ್ತಿಗಳಿಗೆ ಬಲಿಪಶುವಾಗುತ್ತಿದ್ದಾನೆ. ತನ್ನ ಗೋರಿಯ ಗುಣಿಯನ್ನು ತಾನಾಗಿಯೇ ತೋಡಿಕೊಳ್ಳುತ್ತಿದ್ದಾನೆ.

ವಿಜ್ಞಾನದ ಈ ಅನಿಯಂತ್ರಿತ ಅಕಾಂಡ ತಾಂಡವ ಸ್ವರೂಪದ ಸಂಶೋಧನೆಗಳ ಪ್ರಭಾವ ಜೀವನದ ಪಡಿನೆಳಲಾದ ಸಾಹಿತ್ಯದ ಮೇಲೂ ಬಿದ್ದಿರುವುದು ಈಚಿನ ದಿನಗಳಲ್ಲಿ ಸ್ಪಷ್ಟವಾಗಿದೆ. ಇದರಿಂದ ಸಾಹಿತ್ಯ ಕೃತಿಗಳ ಭವಿಷ್ಯ ಮಂಕಾಗಿ

ಗೋಚರಿಸುವುದು ಸ್ವಾಭಾವಿಕ. ಹೀಗಾಗಿ, ಸಾಹಿತ್ಯದಿಂದ ಮಾನವನಿಗೆ ಆಗಬೇಕಾಗಿರುವ ಸಹಾಯ ಮತ್ತು ಅದರ ಅವಶ್ಯಕತೆ ಹಿಂದೆಂದಿನ ಕಾಲಕ್ಕಿಂತ ಇವೊತ್ತು ಹೆಚ್ಚಾಗಿರುವುದು ಗಮನಾರ್ಹ.

ಅತ್ಯಂತ ಸ್ವಾರ್ಥ ಸ್ವರೂಪಿಯೂ ರಾಜಕೀಯ ಕಲುಷಿತವೂ ಆಗಿರುವ ನಮ್ಮ ಜೀವಿತದ ಕಗ್ಗತ್ತಲಿನ ಕಂದಕದಲ್ಲಿ ಕುಸಿದು ದಿಕ್ಕು ದೆಸೆ ಕಾಣದ ಸಾಮಾಜಿಕರಿಗೆ ಇಂದು ಆತ್ಮಸ್ಥೈರ್ಯ, ಭರವಸೆ ಮತ್ತು ಉನ್ನತ ಧ್ಯೇಯಾದರ್ಶಗಳ ತಾರಕ ಹಸ್ತದ ನೆರವು ಅತ್ಯಧಿಕವಾಗಿದೆ. ನೀತಿ ಬಾಹಿರವಾದ ಅಘರಾತಘರಾ ದುರ್ವಿದ್ಯಮಾನಗಳ ದೆಸೆಯಿಂದ ದಿಢೀರಾಗಿ ಅಧಿಕಾರ, ಹಣ ಮತ್ತು ಪ್ರಚಾರಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ರಾಜಕೀಯ ಪಕ್ಷಗಳಿಂದ ಹಿಡಿದು ವ್ಯಕ್ತಿ ಮಟ್ಟದವರೆಗೂ ಸಮಾಜದಲ್ಲಿ ಪರಸ್ಪರ ಪೋಟಾಪೋಟಿ ನಡೆಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ, ನೇರವಾದ ರೀತಿಯಿಂದ, ಋಜುಮಾರ್ಗದಿಂದ ಬದುಕನ್ನು ನಿರ್ವಹಿಸುತ್ತೇವೆಂಬ ನಿಸ್ಪೃಹ ನೀಯತ್ತಿಗರು ವ್ಯವಹಾರವರಿಯದ ಮಂಕುದಿಣ್ಣೆಗಳೆಂಬ ಕಟಕಿ, ಲೇವಡಿಗಳಿಗೆ ಗುರಿಯಾಗುತ್ತಿರುವ ಇಂದಿನ ಕಾಲದಲ್ಲಿ ಬಾಳಿನ ನಿಜವಾದ ಪುರುಷಾರ್ಥಗಳನ್ನು, ನಿಜ ಸ್ಥಿತಿಯನ್ನು ಜನರಿಗೆ ಅರಿವು ಉಂಟು ಮಾಡುವುದರಲ್ಲಿ ಸಾಹಿತ್ಯದ ಪಾತ್ರ ಮಿಗಿಲಾದದ್ದು. ಆದ್ದರಿಂದ ಪಾರಂಪರಿಕವಾದ ಸಾರಾಸಾರ ವಿವೇಕದ ಸನ್ಮೌಲ್ಯಗಳ ಪ್ರಜ್ಞೆಯನ್ನು ಮಹಾ ಜನತೆಯ ನೆನಪಿನಲ್ಲಿ ನಾಟಿಸುವಲ್ಲಿ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಹೊಣೆಗಾರಿಕೆಯಿದೆ; ಅಮಿತಾವಕಾಶವಿದೆ, ಪ್ರಶ್ನಾತೀತ ನಾಣ್ಯತೆ ಇದೆ.

ವಿಷಯೋಪಭೋಗದ ಅಮಲಿನಲ್ಲಿ ಪರವಶನಾಗಿರುವ ಮನುಷ್ಯ, ಜೀವನದ ಅಲ್ಪ ಮಿತಿ, ಅನಿಶ್ಚಯತೆ, ಕ್ಷಣಿಕತೆಯ ಭಾವವನ್ನು ಮರೆತು ಅಜ್ಞಾನವಶನಾಗಿ ಹೆಣಗಾಡುತ್ತಿರುವಾಗ ಅವನ ಬಾಳಿಗೆ ಧರ್ಮಾಧರ್ಮ ವಿವೇಚನೆಯ, ಆತ್ಮೋನ್ನತಿಯ ಹಾಗೂ ಮತಿ ವಿವೇಕದ ಅಮೃತ ಸೇಚನವನ್ನು ಮಾಡಿಸಿ ಕಾಪಾಡುವುದರಲ್ಲಿ ಸಾಹಿತ್ಯಕ್ಕೆ ಚಿಕಿತ್ಸಕನ ಸ್ಥಾನಮಾನ, ಹಿರಿಮೆಗಳಿವೆ. ಸುಖಾರ್ದ್ರ ಸಂವೇದನೆಗಳಿಂದ ಹಸನುಗೊಳಿಸುವುದು, ಮೌಲ್ಯ ಮಹತ್ತರತೆಗಳನ್ನು ಕೊಡಿಸುವುದು ಸಾಹಿತ್ಯ ಕಲೆಗಳು ಜನ ಜೀವನಕ್ಕೆ ಎಸಗುವ ಉಪಾಕಾರ, ನದಿ ಹೇಗೆ ವ್ಯವಸಾಯ, ವಿದ್ಯುದುತ್ಪಾದನೆಗಳೆರಡಕ್ಕೂ ಸಹಾಯಕವೋ, ಹಾಗೆಯೇ ಸಾಹಿತ್ಯ ಕೂಡ ದ್ವಿಮುಖ ಉಪಯೋಗಿ: ನಲಿವು ಮತ್ತು ತಿಳಿವು ಅದರ ಸತ್‌ಪ್ರಯೋಜನಗಳು. ಇಂದಿನ ವಿದ್ಯುನ್ಮಾನ ವಸ್ತು ವಿಶೇಷಗಳಿಂದ ಹಾಗೂ ಟಿ.ವಿ. ಮೊದಲಾದ ಮಾಧ್ಯಮಗಳ ದೈನಂದಿನ ದುಶ್ಚಟರೂಪಿ ಬಳಕೆಯಿಂದ ಸಾಹಿತ್ಯ ಕೃತಿಗಳ ಅಭಿವೃದ್ಧಿಗೆ ಹಿನ್ನಡೆ ಒದಗುವ ಸಂದರ್ಭವಿದ್ದರೂ ಆ ಉದ್ಗ್ರಂಥಗಳು ಕಾಲಕಾಲಕ್ಕೆ ಅಲ್ಪಸಂಖ್ಯಾತರಾದ ಬುದ್ಧಿಜೀವಿಗಳ ನೆರವಿನಿಂದ ಬಹುಸಂಖ್ಯೆಯ ಜನಪದದ ಲಕ್ಷ್ಯವನ್ನು ಸೆಳೆಯುತ್ತಿರುತ್ತವೆ. ಅವರ ಓದಿನ ಅಷ್ಟೋ ಇಷ್ಟೋ ಆಸಕ್ತಿಯನ್ನು ಕುದುರಿಸುತ್ತಿರುತ್ತವೆ. ಈ ಕಾರಣಕ್ಕಾಗಿಯೇ ಬಾಳಿಗೆ ಉತ್ತೇಜಕವಾದ, ಪುರುಷಾರ್ಥ ಸಾಧಕವಾದ ಅಭಿಜಾತ ರೂಪದ ಸಾಹಿತ್ಯ ಗ್ರಂಥಗಳಿಗೆ ಮತ್ತು ಅವು ನೀಡುವ ಮಾನವ

ಕಲ್ಯಾಣಕಾರಿ ಸಂದೇಶಗಳಿಗೆ ಅಳಿವು ಇರುವುದಿಲ್ಲ; ತಾತ್ಕಾಲಿಕವಾಗಿ ಹಿಂಬಡ್ತಿ ಪಡೆದಿದ್ದರೂ ಅವು ಪೂರ್ಣ ಅವಸಾನವನ್ನು ಕಾಣುವುದಿಲ್ಲ. ಈ ನಿಟ್ಟಿನಿಂದ ವಿವೇಚಿಸಿದಾಗ, ಅವು ಬಹು ಶತಮಾನಾಯುಷಿಗಳು; ಸಂತತ ವರ್ತಮಾನಸ್ಥ ಜೀವಾಳ ಸ್ವರೂಪಿಗಳು. ಮನುಷ್ಯನ ಬಾಳ್ವೆಯನ್ನು ಉತ್ತಮ ಸಾಹಿತ್ಯ ಉತ್ಕರ್ಷಗೊಳಿಸುವುದರಿಂದ, ಅದು ಎರಡು ಬಗೆಯಲ್ಲಿ ಕ್ರಿಯಾತ್ಮಕವಾಗಿರಬೇಕಾಗುತ್ತದೆ. ಒಂದು : ವಿಜ್ಞಾನದ ವೈಚಾರಿಕ ದೃಷ್ಟಿಯನ್ನು, ಎರಡು : ಧರ್ಮದ ನೀತಿಯಾಧಾರಿತ ಸದಾಚಾರ ಹಾಗೂ ಆತ್ಮೋನ್ನತಿಯನ್ನು ಸಮನ್ವಯಿಸಿಕೊಂಡ ದೃಷ್ಟಿಯನ್ನು ಹೊಂದಿರಬೇಕಾಗುತ್ತದೆ.

ಸಾಹಿತ್ಯದಷ್ಟೇ ಅಥವಾ ಅದಕ್ಕಿಂತ ಶೀಘ್ರವಾಗಿ ಮತ್ತು ಸಾದಾಸೀದಾ ನೇರ ರೀತಿಯಲ್ಲಿ, ಸಂಕ್ಷಿಪ್ತವಾಗಿ ಮಾನವ ಬದುಕಿನ ವಿವಿಧ ಚಟುವಟಿಕೆಗಳ, ಭಾವಾಲೋಚನೆಗಳ, ಕಷ್ಟ ಕಾರ್ಪಣ್ಯಗಳ, ಸಂತೋಷ ಸಂಭ್ರಮ, ಹತಾಶೆ ಭಗ್ನ ಮನೋರಥಗಳ ಅರಿವನ್ನು ಮತ್ತು ಅವುಗಳನ್ನು ಒಟ್ಟಾರೆ ಬದುಕಿನ ಹಿತಕ್ಕಾಗಿ ವಿನಿಯೋಗಿಸುವ ಕಾರ್ಯೋನ್ಮುಖತೆಯನ್ನು ಮನವರಿಕೆ ಮಾಡುವ ನಿಟ್ಟಿನಲ್ಲಿ ಟಿ.ವಿ., ಪತ್ರಿಕೆ, ಅಂತರ್ಜಾಲ ಮುಂತಾದ ಸಮೂಹ ಮತ್ತು ಸುದ್ದಿ ಮಾಧ್ಯಮಗಳು ಬಲವತ್ತರವಾದ ಪಾತ್ರವನ್ನುವಹಿಸುತ್ತವೆ. ಅವು ದಿನಂಪ್ರತಿ ಮನುಷ್ಯನನ್ನು ಎಚ್ಚರಿಸಿ ತಿದ್ದಿ, ಪರಿಷ್ಕರಿಸಿ, ಉಪಕಾರ ಎಸಗುವುದರಲ್ಲಿ ವಹಿಸುವ ಪಾತ್ರ ತುಂಬ ಮಹತ್ವದ್ದು. ಆದ್ದರಿಂದ, ಅದರ ನಿರ್ವಹಣೆಯನ್ನು ವಹಿಸುವವರ ಹೊಣೆ, ಮುಂಜಾಗರೂಕತೆ ಮತ್ತು ಸರಿಸಮಾನತೆಯ ನಿಷ್ಪಕ್ಷಪಾತ ದೃಷ್ಟಿ, ಸತ್ಯವನ್ನು ಮಂಡಿಸುವಾಗ ರಾಜಿ ಮಾಡಿಕೊಳ್ಳದ ಆತ್ಮಸಾಕ್ಷಿ ವಿಧೇಯ ನಿಶ್ಚಲ ನಿಲವು ಮತ್ತು ಆತ್ಮಸ್ಥೈರ್ಯ ಸಾಮಾನ್ಯ ಸಾಮಾಜಿಕರಿಗಿಂತ ಹಲವು ಪಾಲು ಹಿರಿಯದು, ವಿಶಿಷ್ಟವಾದುದು. ಲಾಭ, ಅಂತಸ್ತು, ಪ್ರಚಾರ ಇತ್ಯಾದಿ ಸ್ವಹಿತಪರ ಧೋರಣೆಗಿಂತ ಈ ವ್ಯಕ್ತಿಗಳ ದಿಟ್ಟ ಮತ್ತು ನಿರ್ಭೀತ ವ್ಯಕ್ತಿತ್ವ ಸಮಾಜಕ್ಕೆ ಮಾದರಿಯಾಗಬೇಕಾಗುವಂಥದ್ದು.

ಆದರೆ ಇಂದಿನ ವಸ್ತು ಸ್ಥಿತಿ, ಕೆಲವೊಂದು ಅಪರೂಪದ ನಿದರ್ಶನಗಳನ್ನು ಬಿಟ್ಟರೆ, ಮೇಲೆ ಪ್ರಸ್ತಾಪಿಸಿದ ಸದಂಶಗಳಿಗೆ ವ್ಯತಿರಿಕ್ತವಾಗಿದೆ; ಸಮಾಜದ ಒಟ್ಟಂದದ ಒಳಿತಿಗೆ ಮಾರಕವಾಗಿದೆ. 'ಜನಪರ' ಎನ್ನುವ ಹೆಸರಿನಲ್ಲಿ ಜನಗಳಿಗೆ ಪ್ರಿಯವಾದ ಮತ್ತು ರೋಚಕವಾದ ಮೋಜಿನ ಸಂಗತಿಗಳನ್ನೂ ಸಮಾಜದಲ್ಲಿ ದಿನವಹಿ ನಡೆಯುತ್ತಿರುವ ಅಪರಾಧದ ತಲ್ಲಣಗೊಳಿಸುವ ಘಟನೆಗಳ ವೈಭವೀಕರಿಸಿದ ವಿವರಪೂರ್ಣ ವರದಿಗಳನ್ನೂ ಕೀಳುಮಟ್ಟದ ಭಾಷೆ ಮತ್ತು ಭಾವನೆಗಳನ್ನೂ ಎತ್ತಿ ಮೆರೆಸುವ ದಂಧೆಯಲ್ಲಿ ಈ ನಮ್ಮ ಸಮಾಜದ ಅನೇಕ 'ಕಾವಲು ನಾಯಿಗಳು' ತಮ್ಮ ಶಕ್ತಿಯನ್ನು ಪೋಲು ಮಾಡುತ್ತಿರುವುದು ದುರದೃಷ್ಟಕರ. ಜನ ಬಯಸಿದ್ದನ್ನು ನೀಡುವುದರಲ್ಲಿ ಸಿದ್ಧಹಸ್ತರಾಗಿರುವ ಈ ಜನರಿಂದ ಸಮಾಜಕ್ಕೆ ಅಪಕಾರ ವಾಗಿದೆಯೇ ವಿನಾ ಒಳ್ಳೆಯದಾಗುತ್ತಿಲ್ಲ. ಜನರ ಜೀವನ ಅರ್ಥಪೂರ್ಣವಾಗಲು, ಹಿತಪ್ರದವಾಗಲು, ಜೀವನದ ಸದುದ್ದೇಶದ ಮನವರಿಕೆಯಾಗಲು ಈ

ಮಾಧ್ಯಮಗಳು ಶ್ರಮಿಸುತ್ತಿರುವುದು ಕಡಮೆ. ಇಂದು ಪ್ರಚಲಿತವಾಗಿರುವ ಯಶಸ್ಸು ಮತ್ತು ಜನಪ್ರಿಯತೆಗಳನ್ನೇ ಪ್ರಧಾನ ಪುರುಷಾರ್ಥಗಳೆಂದು ಪರಿಗಣಿಸುತ್ತಿವೆ. ಬದುಕಿನ ಉನ್ನತಿಗೆ ಮತ್ತು ಶಾಂತಿ ನೆಮ್ಮದಿಗಳಿಗೆ ಬೆಲೆ ನೀಡದೆ ಕ್ಷಣಿಕ ಸುಖಕ್ಕೆ ಸಂಬಂಧಿಸಿದ ಅಂಶಗ್ಳಳನ್ನು ಭೂತಗನ್ನಡಿಸುವ ಚಾಳಿಯನ್ನು ಅನುಸರಿಸುತ್ತಿರುವ ಲಾಭಬಡುಕ ಪ್ರವೃತ್ತಿಯ ಅನೇಕ ಪತ್ರಿಕೆಗಳು ಒಟ್ಟಾರೆ ದೇಶದ ಒಳಿತಿಗೇ ಕುಠಾರಪ್ರಾಯವೆಂದರೆ ತಪ್ಪಾಗಲಾರದು. ಇಂದು ಚಮಕಿ, ಮತಾಪಿನಂತೆ ವರ್ಣರಂಜಿತವಾಗಿ ಕಣ್ಣು ಕೋರೈಸಿ, ನಾಳೆಗೆ ಮರೆವಿನ ಕಂದರದಲ್ಲಿ ಮೈಗರೆಯುವ ಕ್ಷುಲ್ಲಕ ವಿಷಯಗಳನ್ನು, ವ್ಯಕ್ತಿಗಳನ್ನ ಉತ್ಸವಿಸಿ ವೈಭವೀಕರಿಸುವ ಪ್ರವೃತ್ತಿಯಿಂದ ನಮ್ಮ ಜನಗಳ, ಅದರಲ್ಲೂ ಯುವ ಜನಾಂಗದ ಮತ್ತು ಎಳೆಯರ ಜೀವನ ಕ್ರಮ ಅಡ್ಡ ದಾರಿಯನ್ನು ಹಿಡಿಯುತ್ತಿದೆ.

ಕೊಳ್ಳುಬಾಕ ಸಂಸ್ಕೃತಿಯ ಅಗ್ಗದ ಅಶ್ಲೀಲ ಜಾಹೀರಾತುಗಳಿಂದ ಹಿಡಿದು ಸಮಯವನ್ನು ಪೋಲುಗೊಳಿಸುವ ಕೆಟ್ಟ ಅಭಿರುಚಿಯ ಚಲಚ್ಚಿತ್ರಗಳನ್ನು; ಅವುಗಳ ರಂಗುರಂಗಾದ, ಆದರೆ ಅರ್ಥಶೂನ್ಯವಾದ ಹಾಡು, ಕುಣಿತಗಳನ್ನು; ರಾಜಕಾರಣಿಗಳ ಪೆದ್ದು ಪೆದ್ದಾದ ಅಪ್ರಾಮಾಣಿಕ ಉವಾಚಗಳನ್ನು ಮತ್ತು ಅವರ ಅಕ್ರಮ ಮಾರ್ಗದ ಯಶೋಗಾಥೆಯನ್ನು ಹಾಗೂ ದಿನಗಟ್ಟಲೆಯ ಕಾಲವನ್ನು ಕಬಳಿಸಿ ಸೋಂಭೇರಿ ನಿಷ್ಕ್ರಿಯರನ್ನಾಗಿಸುವ ಕ್ರಿಕೆಟ್‌ನಂಥ 'ಜನಪ್ರಿಯ' ಕ್ರೀಡೆಯನ್ನು ದಿನ ನಿತ್ಯ ಪ್ರಸಾರಿಸುವ ಮೂಲಕ ನಿಧಾನವಾಗಿ ಅಭಿರುಚಿಯನ್ನು ಕುಲಗೆಡಿಸುತ್ತಿರುವ, ಬದುಕನ್ನು ಅಧೋಗತಿಗೆ ತಳ್ಳುತ್ತಿರುವ ಸುದ್ದಿ ಮಾಧ್ಯಮಗಳ ಬಗ್ಗೆ ಮತ್ತೂ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಅವು ಬಹು ಬೇಗ ನಮ್ಮ ದೇಶವನ್ನು, ಜನಾಂಗವನ್ನು ಉದಾತ್ತೀಕರಿಸುವ ಸಂಕಲ್ಪವನ್ನು ತಳೆಯಲೆಂದು ಹಾರೈಸೋಣ. ಸುಖಕ್ಕಿಂತ ಹಿತ, ಯಶಸ್ಸಿಗಿಂತ ಶ್ರೇಯಸ್ಸು, ಸ್ವಾರ್ಥೈಕ ದೃಷ್ಟಿಗಿಂತ ಪರೋಪಕಾರಿ ಭಾವನೆ ಮನುಷ್ಯರ ಕಲ್ಯಾಣಕ್ಕೆ ಮತ್ತು ದೇಶದ ಪುರೋಭಿವೃದ್ಧಿಗೆ ಅಗತ್ಯವೆಂಬ ತಿಳಿವಳಿಕೆ ಈ ನಮ್ಮ ಸಮೂಹ ಮಾಧ್ಯಮಗಳಿಗೆ ಮನವರಿಕೆಯಾಗಲೆಂದು ಆಶಿಸೋಣ.

ಪತ್ರಿಕೆಗಳು ಸಾಹಿತ್ಯಕ್ಕೆ ತುಂಬು ಉಪಕಾರವನ್ನು ಎಸಗುವ ಸಂಗತಿ ಹಲವರಿಗೆ ತಿಳಿದೇ ಇದೆ. ಅವು ಸಾಹಿತ್ಯ ಗ್ರಂಥಗಳ ಭಾಷೆಯನ್ನು ಬದಲಿಸುವ, ಯುಗ ಧರ್ಮಕ್ಕೆ ತಕ್ಕ ಹೊಸ ಹೊಸ ಪದಗಳನ್ನು ಟಂಕಿಸಿ ಮತ್ತು ನುಡಿಗಟ್ಟುಗಳನ್ನು ಹಾಗೂ ವಾಕ್ಯ ರಚನಾಕ್ರಮವನ್ನು ಪರಿಷ್ಕರಿಸಿ ಕ್ರಾಂತಿಯುಂಟುಮಾಡುವಂಥ ಅಗ್ಗಳಿಕೆಯವು. ಪತ್ರಿಕೆಯ ಭಾಷೆಯ ಅಡಕತೆ, ನಿರೂಪಣೆಯ ಮಿತ ಪದ ಬಳಕೆ ಮತ್ತು ಅರ್ಥೈಕೆಯ ಖಚಿತತೆ; ಎಲ್ಲಕ್ಕಿಂತ ಮಿಗಿಲಾಗಿ ಆ ಭಾಷೆಯ ನಿರಾಡಂಬರ ಸರಳತೆ ಸಾಹಿತ್ಯಕ್ಕೆ ಉಪಾದೇಯ ಎನ್ನಿಸುವ ಸಂಗತಿಗಳು. ಜ್ಞಾನ ಬೆಳೆದಂತೆ, ಜೀವನದ ಘಟನೆಗಳು ಹೆಚ್ಚಿದಂತೆ ಅವಕ್ಕೆ ಅನುಗುಣವಾಗಿ ಹೊಸ ಹೊಸ ಪದಗಳು ಸೃಷ್ಟಿಯಾಗುತ್ತಿರುತ್ತವೆ. ಅವುಗಳನ್ನು ಮೊಟ್ಟಮೊದಲು ಬಳಸಿ ಜನಾದರಣೀಯ ಗೊಳಿಸುವುವು ವಿವಿಧ ಪತ್ರಿಕೆಗಳು. ಸಾಹಿತ್ಯಕೃತಿಗಳ ಶೈಲಿಯನ್ನು

ಬದಲಾಯಿಸುವುದರಲ್ಲಿ ಇವುಗಳ ಪಾತ್ರ ಮಹತ್ವದ್ದು. ಈ ಕಾರಣಕ್ಕಾಗಿಯೂ ಪತ್ರಿಕೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಜವಾಬ್ದಾರಿ ಹೆಚ್ಚಿನದು ಎನ್ನಿಸುತ್ತದೆ.

ಆದರೆ ಪತ್ರಿಕೆಗಳ ವರದಿಗಳಿಗೆ ಬಳಸುವ ಭಾಷೆಯನ್ನು ಸಾಹಿತ್ಯದ ಗಂಭೀರ ಹಾಗೂ ಉದಾತ್ತ ಬಗೆಯ ಚಿಂತನೆಗಳಿಗೂ ಹಾಗೆ ಹಾಗೆ ಬಳಸುವುದು ಅಸಾಧುವಷ್ಟೇ ಅಲ್ಲ, ಅನುಚಿತವೂ ಹೌದು. ಇಂದು ಯುಕ್ತಿ ಪ್ರಧಾನವಾದ ಬರವಣಿಗೆಗಳು ಮೇಲ್ಮೈಯನ್ನು ಸಾಧಿಸಿವೆ. ರಂಜಕತೆ, ಚಮತ್ಕೃತಿಗಳ ಪಕ್ಕ ವಾದ್ಯಗಳ ಕಿವುಡೆಬ್ಬಿಸುವ ಗದ್ದಲದ ನಡುವೆ ಗಂಭೀರ ಭಾವ ವಿಚಾರಗಳ ಜೀವಶೋಧಕ ಗುಣದ ಹಾಡುಗಾರಿಕೆ ಮುರುಟಿ ಹೋಗುತ್ತಿವೆ. ಇದರ ಅರಿವು ಸಾಹಿತ್ಯ ರಚಕನ ಪಾಲಿಗೆ ಜೀವ ಜಲವಿದ್ದಂತೆ. ಸಾಂದರ್ಭಿಕ ವಿಷಯಗಳನ್ನು ಸುದ್ದಿ ರೂಪದಲ್ಲಿ ಸಾದರಪಡಿಸುವುದು ಪತ್ರಿಕಾ ಮನೋದೃಷ್ಟಿಯ ಪ್ರಥಮ ಉದ್ದೇಶ. ಇಂದಿನ ಹಲವು ಬಗೆಯ ಸಾಹಿತ್ಯದ ಪುಸ್ತಕಗಳ ಮೇಲೂ ಪತ್ರಿಕೆಯ ಈ ಅಂಶದ ಪ್ರಭಾವ ದಟ್ಟವಾಗಿ ಬಿದ್ದಿದೆ. ಇಂಥ ಸಾಮಯಿಕ ಸ್ವರೂಪದ ರಂಜನೀಯ ಲಿಖಾವಟ್ಟುಗಳಿಗೂ ಗಹನ ಮತ್ತು ಗಂಭೀರ ಜಾಯಮಾನದ ಉತ್ತಮ ಸಾಹಿತ್ಯ ರಚನೆಗಳಿಗೂ ವ್ಯತ್ಯಾಸವಿರುವುದನ್ನು ಸಾಹಿತ್ಯಕರ್ತ ಗುರುತಿಸಿ ಮನದಟ್ಟು ಮಾಡಿಕೊಳ್ಳಬೇಕಾದದ್ದು ಅಗತ್ಯ. ಇವೆರಡು ಕ್ಷೇತ್ರಗಳ ಲಿಖಿತಗಳು ನೀಡುವ ನಲಿವು ಮತ್ತು ತಿಳಿವುಗಳ ನಡುವೆ ಇರುವ ಅಂತಸ್ತಿನ ವಿವೇಚನೆ ಲೇಖಕನ ಪಾಲಿಗೆ ಲಾಭಕರ. ಈ ಎರಡು ಬಗೆಯ ಲೇಖಕನ ಪ್ರಕಾರಗಳಲ್ಲಿ ಮೋದ ಮತ್ತು ಬೋಧಗಳ ಅಂಶಗಳು ಅಡಕವಾಗಿದ್ದರೂ ಒಂದರದು ಸ್ವಲ್ಪ ಪ್ರಮಾಣದ ತಾತ್ಕಾಲಿಕ ಮಿಂಚಿನ ಅನುಭವ; ಇನ್ನೊಂದರದು ಹೆಚ್ಚಿನ ಪ್ರಮಾಣದ ನಿತ್ಯ ಸ್ವರೂಪಿಯಾದ ನಕ್ಷಾತ್ರಾನುಭೂತಿ. ನೀರಿಗೆ ಒಂದು ಕರ್ತವ್ಯವಿರುತ್ತದೆ. ಹಾಗೆಯೇ ಪನ್ನೀರಿಗೊಂದು ಮೌಲ್ಯವಿರುತ್ತದೆ. ಇವೆರಡರ ಕಲಸುಮೇಲೋಗರವೋ, ಸ್ಥಾನಮಾನದ ಅದಲುಬದಲಿಕೆಯೋ ಆದಾಗ ವಿವೇಚನೆ ಹಾದಿ ತಪ್ಪಿ ಸಾಹಿತ್ಯದ ವಿಹಾರಿಗಳನ್ನು ಗೊಂದಲಗೆಡಿಸುತ್ತದೆ.

ಪತ್ರಿಕಾ ಮನೋಭಾವದ ತತ್‌ಕ್ಷಣಿಕವಾದ, ರುಚಿಕರ, ರಂಜನಾಕರ್ಷಕ, ಮೋಜು ಮಜ ಕೊಡತಕ್ಕ ಬರವಣಿಗೆಯ ವಿಧಾನವೇ ಹಿತಕಾರಿ ಎಂದೂ ಹಾಗಲ್ಲದ ಗಂಭೀರ ಭಾವಾಲೋಚನೆಯ ಮನಃ ಸಂಸ್ಕಾರಕ ಕೃತಿಯ ವಸ್ತು ಭೈರಿಗೆಯದೆಂದು ಎಣಿಸುವ ಓದುಗರ ಸಂಖ್ಯೆ ಕಡಮೆ ಇಲ್ಲ. ಮೈಗೆ ಒಳ್ಳೆಯದನ್ನು ಎಸಗುವುದು ಯಾವಾಗಲೂ ರುಚಿಕರವಾಗಿರಬೇಕಾಗಿಲ್ಲ. ನಾಲಿಗೆಯ ಸವಿ ಅದನ್ನು ನಿರ್ಧರಿಸದು. ಮನುಷ್ಯನ ಜೀವಿತಕ್ಕೆ ಒಳಿತನ್ನ ಎಸಗುವಂಥದ್ದು, ಉತ್ಕರ್ಷಪ್ರಾಯ ವಾದದ್ದು ದಕ್ಕುವುದು ವಿರಳವಿರುವಂತೆಯೇ, ಹಲವರ ಪಾಲಿಗೆ ಗುರುತಿಸಲು ಅಶಕ್ಯ. ಗುಡಾಣದ ಕಳಪೆ ದಿನಿಸನ್ನು ಕಬಳಿಸುವ ಇಲಿಗೂ, ಗಣೇಶ ಸಂಗಾತಿಯಾದ ಮೂಷಿಕಕ್ಕೂ ಸಾಮ್ಯವೆಲ್ಲಿಯದು? ತತ್ತಿಗಳೆಲ್ಲ ಹೊರಕ್ಕೆ ಒಂದೇ ಥರ. ಒಳಗನ್ನು ಪರೀಕ್ಷೆ ಮಾಡದೆ ಒಳ್ಳೆಯದೋ ಕೆಟ್ಟದೋ ಎಂದು ನಿರ್ಧರಿಸುವುದು ಅಸಾಧ್ಯ. ಹಸನಾದ ಸಾಮಾಜಿಕ ಸಹಬಾಳ್ವೆ ಅಮೋಘವಾದ ಸಾಹಿತ್ಯ ರಚನೆಗೆ ಪ್ರಚೋದಕವಾದರೆ, ಸಮೂಹ

ಮಾಧ್ಯಮದವರಿಗೆ ದಾರಿದೀಪವಾಗುತ್ತದೆ. ಸಮಾಜ ಹೇಗೋ ಹಾಗೆ ಸಾಹಿತಿ ಮತ್ತು ಪತ್ರಕರ್ತ. ವಾತಾವರಣದಲ್ಲಿರುವ ಸುವಾಸನೆಯನ್ನೋ ದುರ್ಗಂಧವನ್ನೋ ಒಯ್ಯುವ ಹವೆ ಅವರು. ಮಳೆ ಮತ್ತು ಇಳೆಗೆ ಇರುವ ಬಗೆಯ ನಿಸರ್ಗದತ್ತ ಜೈವಿಕ ಸಂಬಂಧ ಸಾಹಿತಿ, ಪತ್ರಿಕಾಕರ್ತ, ಹಾಗೂ ಸಮಾಜದ್ದು.

ಇವೊತ್ತು ನಮ್ಮ ನಾಡಿನ ಸಾಮುದಾಯಿಕ ಜೀವನ ಕ್ರಮದಲ್ಲಿ ಆಗಿರುವ ಮೌಲ್ಯಗಳ ಇಳಿಮುಖದ ಕತೆಯೇ ಸಾಹಿತ್ಯ ಕ್ಷೇತ್ರದಲ್ಲೂ ಸಹ ಮುಂದುವರಿಯುತ್ತಾ ಸಾಗಿದೆ. ಸ್ವಂತದ ಶ್ರೇಯಸ್ಸಾಗಲಿ, ಪರಹಿತದ ಸಾಧನೆಯಾಗಲಿ ನೆರವೇರದೆ ವಂಚನೆಗೆ ಒಳಗಾಗಿರುವ ವಾಸ್ತವ ಅಭಿವ್ಯಕ್ತಿಯ ಗ್ರೀಷ್ಮತೆ ಮತ್ತು ಬೋಳುತನಗಳು ವೈದೃಶ್ಯದಿಂದ ಹಿಂದಿನ ಘನೋದ್ದೇಶದ ಹಿರಿಮೆಯನ್ನು ಇನ್ನಷ್ಟು ದೇದೀಪ್ಯಮಾನವಾಗಿ ಜ್ಞಾಪಿಸಿ ಅವುಗಳ ಪ್ರಸಕ್ತ ಅನಿವಾರ್ಯತೆಯನ್ನು ಸಾರಿವೆ. ಮಿರಿಮಿರಿ ಚುಕ್ಕಿಯಂತೆ ಮಿನುಗಿ ಸ್ವಂತ ಮುಖದ ಸಮ್ಮೋಹಕತೆಯನ್ನು ಮೆರೆಸಿದ್ದಲ್ಲದೆ ಬೇರೆಯವರ ಶಹಬಾಸ್‌ಗಿರಿಗೂ ನಿಮಿತ್ತವಾಗಿದ್ದ ಮಾಣಿಕ್ಯದ ವರ್ಣಾಕರ್ಷಕ ನತ್ತು ಮರೆಯಾಗಿದೆ. ಹೀಗಾಗಿದ್ದರಿಂದ ಸೂಜಿಯ ತೂತು ಮಾತ್ರ ಮೂಗಿನ ಮೇಲೆ ಭಣಭಣಿಸಿದೆ; ನೋಡುವವರ ದೃಷ್ಟಿಗೆ ಬೇಸರವಾಗಿ ಕಂಡಿದೆ. ಉಳಿದಿರುವ ಆ ನೆನಪು ಸಹ ಲೋಪವನ್ನು ಇನ್ನಷ್ಟು ಎತ್ತಿ ತೋರುವ ಕುರುಹಾಗಿ ಕಾಡಿದೆ.

ಮಹತ್ಕೃತಿಗಳ ಅಂದರೆ, ಮಹಾಕಾವ್ಯ, ಮಹಾಕಾದಂಬರಿ, ಮಹಾ ನಾಟಕಗಳ ಕಡೆಗೆ, ಗಂಭೀತರ ತತ್ವ ಸಮೃದ್ಧ ಬರವಣಿಗೆಗಳ ಕಡೆಗೆ ಸಾಧಾರಣರ ಆಸಕ್ತಿ ಸಹಜವಾಗಿಯೇ ಹೊರಳದು. ಆ ಅನುಪಮ ಗ್ರಂಥಗಳು ಅಂಥವರ ಪಾಲಿಗೆ ತಲೆ ತಿನ್ನುವ ತ್ರಾಸದ ಭಾರಿ ಭೈರಿಗೆಗಳು. ಅವರ ಲಘುವಾದ ಅಭಿರುಚಿಗಳಿಗೆ ಸರಿಯಾದದ್ದನ್ನು ಮೇಯಿಸಲು ಕೆಲವು ಪತ್ರಿಕೆಗಳು, ಅವುಗಳ ಬರಹಗಾರರು ಹಾಗೂ ದೂರದರ್ಶನ ವಾಹಿನಿಗಳ ಪ್ರತಿನಿಧಿಗಳ ಸತತ ಸಿದ್ಧವಾಗಿ ತುದಿಗಾಲಲ್ಲಿ ನಿಂತಿರುತ್ತಾರೆ. ಅವರು ನೀಡುವ ಘನತೆಗೇಡಿ ಲಘು ಉಣಿಸಿಗೆ ಪ್ರತ್ಯೇಕ ಪ್ರಚಾರವೇ ಬೇಕಾಗಿರುವುದಿಲ್ಲ. ಸ್ವತಃ ಅವೇ ತಮ್ಮ ಜಾಹೀರಾತನ್ನು ಮಾಡಿಕೊಳ್ಳುತವೆ. 'ಹೆಗ್ಗಣ ಸತ್ತು ಬಿದ್ದಿದೆ. ಬಿಜಯಂಗೈಯ್ಯಿರಿ' ಎಂದು ಕಾಗೆಗಳಿಗೆ ಕರೆಯೋಲೆ ಕಳುಹಿಸಬೇಕೆ? ನಾತವೇ ನಾಸಿಕಕ್ಕೆ ನಡೆಮಡಿ ಹಾಸದೆ? ಮಹತ್ವದ ಗದ್ಯಕಾರರ ಲೇಖನಗಳ ಐರಾವತ ಗಾಂಭೀರ್ಯದ ಪೂರ್ಣ ಅನುಭವವನ್ನು ಪಡೆಯುವ ಸೌಭಾಗ್ಯ, ಸುರೇಂದ್ರಸಮ ಸಂಪದ್ವೈಭವದಿಂದ ಸಮುಜ್ವಲಗೊಂಡ ಸಂವೇದನಾ ಸಾಮರ್ಥ್ಯ ವಿರುವವರಿಗೆ ಮಾತ್ರ ಸಾಧ್ಯ. ಇಂದ್ರಿಯಗಳನ್ನು ಪ್ರಚೋದಿಸುವ ಬೀಡಾಡಿ ಸಾಹಿತ್ಯದ ನಾಡಾಡಿ ಕುದುರೆಗಳ ವೇಗದ ಮತ್ತು ಆತುರದ ಸವಾರರಿಗೆ ಆ ಧೀರಗಜಗಮನ ವನ್ನು ಶ್ಲಾಘಿಸಿ, ಆನಂದಿಸುವ ಸದಭಿರುಚಿ ಇರುವುದಿಲ್ಲ. ಅಷ್ಟೇ ಏಕೆ, ಅದರ ಕಲ್ಪನೆ ಸಹ ಇರುವುದು ದುಃಸಂಭವ.

ವೈದೃಶ್ಯದ ದೃಷ್ಟಿಯಿಂದ ಪತ್ರಿಕೆಯ ಬರಹಗಳ ಹಂಗಾಮಿ ತಣಿವಿನ ಜಾಯಮಾನಕ್ಕೂ ಉದ್ದಾಮ ಸಾಹಿತ್ಯ ಕೃತಿಗಳ ಅಂತಃಸ್ವಭಾವಕ್ಕೂ ಮಹದಂತರವಿದೆ.

ಮಹತ್ಕೃತಿಗಳೆನ್ನುವುದು ಮಾನವ ಮನಸ್ಸಿನ ಮಹಾ ದಾಖಲೆಗಳು. ಉದಾತ್ತ ಚೇತನಗಳ ಒಳದೃಷ್ಟಿ ಕಾಲಕಾಲಕ್ಕೆ ತಾನು ಗ್ರಹಿಸಿರುವ ನಿತ್ಯಸತ್ಯಗಳನ್ನಲ್ಲದೆ ದೈನಂದಿನ ಜೀವನದ ಒಳಿತಿಗೆ ಬೇಕಾಗಿರುವ ನೀತಿ ನಡಾವಳಿ ನಿತ್ಯಾಚರಣೆಗಳನ್ನು, ಶಾಸ್ತ್ರ ವಿಧಿಗಳನ್ನು ಈ ಉದ್ಗ್ರಂಥಗಳು ನಮಗೆ ಕರುಣಿಸುತ್ತವೆ. ಈ ದೃಷ್ಟಿಯಿಂದ ಗ್ರಂಥ ವೈವಿಧ್ಯ ಮಾನವನ ಚಿಂತನ ಪ್ರವೃತ್ತಿಯ ಉದ್ದಗಲಗಳ ಅಳತೆಗೋಲು. ಇದನ್ನು ಪರ್ಯಾಲೋಚಿಸಿದಾಗ ನಮಗೆ ವಿದಿತವಾಗುವ ತಥ್ಯವೆಂದರೆ ಯಶಸ್ಸು ಮತ್ತು ಶ್ರೇಯಸ್ಸು ಬೇರೆ ಬೇರೆ ಎನ್ನುವುದು. ಗೆಲುವಿನ ರೂಪದ ಯಶಸ್ಸು ಸಮಸ್ತ ಕಾಲಕ್ಕೂ ಸತ್ವಾಧಾರಿಯಲ್ಲ, ರಾಜಮಾರ್ಗಾನುಸಾರಿಯಲ್ಲ. ಅದು ರಾಜಕಾರಣ, ಜಾತಿ, ಅಂತಸ್ತು, ದ್ರವ್ಯ ಮತ್ತು ಅಂಥವೇ ಗಲ್ಲಿ ಅಲೆತಗಳ ಮೂಲಕ ಲಪಟಾಯಿಸುವ ಹವಣುಳ್ಳದ್ದು. ಶ್ರೇಯಸ್ಸು ಈ ನಮೂನೆಯದಲ್ಲ. ಬಹಳ ಕಾಲದ ಅಂತಃತಪಸ್ಸಿಲ್ಲದೆ ಅದು ಸಿದ್ಧಿಸುವುದು ದುರ್ಲಭ. ಶ್ರೇಯಸ್ಸನ್ನು ನಿರ್ಣಯಿಸುವುದು ಸಮಕಾಲೀನ ವಿಮರ್ಶಕ ಬುದ್ಧಿಜೀವಿ ವರ್ಗವಲ್ಲ; ಜರಡಿ ರೂಪದ ಪಕ್ಷಪಾತರಹಿತ ಕಾಲ.

ಸಾಹಿತ್ಯದಲ್ಲಿ ವಸ್ತುವಿನ ಪಾತ್ರವನ್ನು ಕುರಿತು ಒಂದಿಷ್ಟು ವಿಚಾರ ಮಾಡಬಹುದು. ಕಾವ್ಯ ಕರ್ಮದ ಕಸುಬುಗಾರಿಕೆಗಿಂತ ವಸ್ತು ಯಾವತ್ತೂ ಮಹತ್ವದ್ದು. ಪರಿಪಾಕಕ್ಕೆ ಪಾಚನ ಪ್ರಕ್ರಿಯೆಯ ಪರಿಣತಿಯೊಂದಿಗೆ ಪರಿಕರವೂ ಪರಮಾಯಿಷಿಯದಿರ ಬೇಕು. ಇದರ ಬಗೆಗೆ ಸಹ ವಿಮರ್ಶಕರಲ್ಲಿ ಸಮಾನಾಭಿಪ್ರಾಯವಿಲ್ಲ. ವಸ್ತು, ಲೇಖಕನಿಗೆ ಬಹುಮುಖ್ಯವಾದ ಕಾವ್ಯ ಪರಿಕರ. ಒಂದು ರೀತಿಯಲ್ಲಿ ಅದು ಕವಿಯ ಆಯ್ಕೆಯ, ಅಭಿರುಚಿಯ, ನಿರ್ವಹಣೆಯ ಸಾಮರ್ಥ್ಯಕ್ಕೆ ಸೂಚಕವೆನ್ನಿಸುತ್ತದೆ. ಕೃತಿಯ ಮೌಲ್ಯ ನಿರ್ಣಯದಲ್ಲಿ ಅನೇಕ ಅಂಗೋಪಾಂಗಗಳು ಮಾನದಂಡವಾಗಿರು ವಂತೆ ವಸ್ತುವೂ ಸಹ ಒಂದು ಪ್ರಮುಖ ಅಳತೆಗೋಲಾಗುವ ಹೆಚ್ಚುಗಾರಿಕೆಯನ್ನು ಹೊಂದಿದೆ. ನೂಲಿನ ಹಾಗೆ ಮಾಲು. ಒಳ್ಳೆಯ ಬಟ್ಟೆಯ ತಯಾರಿಕೆಗೆ ಘನವಾದ ನೂಲಿನ ಪೂರ್ವಭಾವಿ ಒದಗಣೆ ಮುಖ್ಯ. ಶ್ರೇಷ್ಠ ವಸ್ತ್ರದ ಥಾನಿನ ಉದ್ದಗಲಕ್ಕೂ ತೆಳ್ಳನೆಯ ದಾರದೆಳೆಗಳ ದೋಷಮುಕ್ತವಾದ ಒಳರಚನೆಯ ಕಾರಣಕ್ಕೆ ಒಂದು ನಯ ಸೂಕ್ಷ್ಮತೆ, ಬೆಲೆಯನ್ನು ಗೊತ್ತುಪಡಿಸುವ ರಮ್ಯಾತಿಶಯತೆ ನಮ್ಮ ಕಣ್ಣಿಗೆ ಮತ್ತು ಕೈಯ್ಯ ಸ್ಪರ್ಶಕ್ಕೆ ಥಟ್ಟನೆ ಅನುಭವ ಆಗುತ್ತದೆ. ಆದರೆ ಕಳಪೆ ದರ್ಜೆಯ ಬಟ್ಟೆಯ ಮೇಲೆ ಸಣ್ಣ ಸಿಕ್ಕಿನ ಗಂಟು, ಕಿರಿದಾದ ದಾರದ ಎಳೆ ಗಮನವನ್ನು ಸೆಳೆಯುತ್ತದೆ.

ನೇಕಾರನ ಲಾಳಿಯ ಆಟದ ಹಾಸುಹೊಕ್ಕಿನ ಕ್ರಿಯೆಯಲ್ಲಿ ಲೋಪ ಇಲ್ಲದಿದ್ದರೂ ಬಟ್ಟೆಯ ಮೂಲದ್ರವ್ಯವಾದ ನೂಲೇ ಅಲ್ಪಯೋಗ್ಯತೆಯದೂ ನಿರ್ಬಲವೂ ಆಗಿದ್ದರೆ, ಇಂಥ ಜುಜುಬಿ ಮಾಲು ನಿಶ್ಚಿತ. ಈ ಹೋಲಿಕೆಯಂತೆಯೇ, ಸಾಹಿತ್ಯ ಕ್ಷೇತ್ರದಲ್ಲಿ ವಸ್ತುವಿನ ಗುಣಗಣ್ಯತೆ. ವಸ್ತುವಿಗೆ ತನ್ನದೇ ಆದ ಹಿರಿಮೆ, ಹೆಗ್ಗಳಿಕೆ ಇರುವುದನ್ನು ಮತ್ತೊಂದು ನಿದರ್ಶನದಿಂದ ಮನಗಾಣಬಹುದು. ಮಹದ್ವಸ್ತು ಮಾತ್ರ ಮಹದ್ದರ್ಶನ ಪ್ರೇರಕ; ವಿಶ್ವದ ಜೀವಿಗಳಲ್ಲಿ ಬೃಹತ್‌ಗಾತ್ರದ ತಿಮಿಂಗಲಕ್ಕೆ ಕಡಲಲ್ಲದೆ ಕರೆ ಕುಂಟೆ ಆಡುಂಬೊಲ ಆಗುವುದಿಲ್ಲ. ಪಟ್ಟಣದ ಸುಲಭ ಲಭ್ಯ

ಪಾರ್ಕುಗಳಲ್ಲಿ ನಮಗೆದುರಾಗುವ ಪ್ರಕೃತಿಯ ಪುಟ್ಟ ಪಾಳೆಯ ಪಟ್ಟುಗಳನ್ನು ಕಂಡಾಗ ಅಲ್ಲ, ದುರ್ಗಮವೂ ದುರ್ಭೇದ್ಯವೂ ಆದ ನಿಬಿಡಾರಣ್ಯದ ನಿಸ್ಸೀಮ ನಿಜಮಿಕೆಯ ನೋಟ್ಟಕರಾದಾಗ ನಮಗೆ ಸೃಷ್ಟಿಯ ರಮ್ಯ ರುದ್ರಾನ್ವಿತ ಭವ್ಯತೆ, ಅನುಭವವೇದ್ಯವಾಗುವುದು. ಉದ್ದಾಮ ಲೇಖಕರ ಬರಹಗಳ ಮಹಾನುಭಾವತೆ ಈ ತೆರನದು. ವಸ್ತುವಿನ ಜೊತೆಗೆ ವಿಚಾರ ಮತ್ತು ಶೈಲಿಗಳ ಒಂದು ಸಮ ಹದತ್ವ, ಸಹ ಮಹತ್ವ ಅತಿಶಯವಾದದ್ದು, ಚಿಂತನಶೀಲವಾದದ್ದು, ಇದು ಇಲ್ಲದೇ ಬೇರೆ ಯಾವುದಿದ್ದರೂ ಬರಹ ಕುರುಡು ಮತ್ತು ಜೀವಕಳಾಶೂನ್ಯ. ಈ ಬಗೆಯ ಬರವಣಿಗೆ ಬಣ್ಣ ಬಣ್ಣದ್ದಾಗಿರಬಹುದು. ಸಂರಚನೆಯಲ್ಲಿ ಸುವ್ಯವಸ್ಥೆಯನ್ನು ವ್ಯಕ್ತಪಡಿಸಬಹುದು; ಆದರೂ ಅದು ಹೆರಳು ತಳೆಯಲು ಹಂಬಲಿಸುವ ಕಂಪಿಲ್ಲದ ಕುಸುಮ ; ಭ್ರಮರ ಪ್ರದಕ್ಷಿಸದ ಬಂಡಿಲ್ಲದ ಬಡಿವಾರ.

ಮಹದ್ವಸ್ತುವಿನಿಂದ ಪ್ರೇರಿತರಾಗಿ, ಅದರ ನೆರವಿನಿಂದ ತಮ್ಮ ಅನನ್ಯ ದರ್ಶನವನ್ನು ಪ್ರಫುಲ್ಲಿಸುವ ಪ್ರತಿಭಾವಂತರು ಅಪರೂಪ, ಮಲೆನಾಡಿನ ಮಹಾರಣ್ಯಗಳಲ್ಲಿ ಶ್ರೀಗಂಧವಾಗುವ ನಸೀಬು ಕೆಲವಕ್ಕೆ ಅಷ್ಟೆ. ಉಳಿದವು ಸೌದೆ, ಮರಮುಟ್ಟುಗಳಿಗೆ ಮೀಸಲು. ಸಮರ್ಥ ಕವಿ, ಸಾಹಿತಿಯ ಕೈಗೆ ಸಿಕ್ಕಿದ ಲೋಕ ವಸ್ತು– ಶಿಲ್ಪಿಯೋಗಿಯ ಉಳಿಗೆ ಸಿಕ್ಕಿದ ಒರಟುಗಲ್ಲು, ಕೇವಲ ಕಲೆಯಲ್ಲ, ಅತ್ಯುದ್ಭುತ 'ಮಿರಾಕಲ್ಲು'– ಅನ್ನುವ ಹಾಗೆ ಅನೂಹ್ಯ ಅತಿಶಯತೆಯನ್ನು ಪಡೆಯುತ್ತದೆ.

ವಸ್ತುವಿನ ಬಗೆಗೆ ಮತ್ತೊಂದು ಮಾತೂ ಉಪಾದೇಯ. ಜೀವನದ ಇತರ ಇಲಾಖೆಗಳಲ್ಲಿದ್ದ ಹಾಗೆಯೇ ಸಾಹಿತ್ಯದಲ್ಲೂ ಸಹ ಸೃಜನಶೀಲ ಸಾಧಕನಿಗೆ ತನ್ನತನ, ಸ್ವಂತಿಕೆ ಎನ್ನುವುವು ಮಹೋನ್ನತಿಗೆ ಏರಿಸುವ ಮೆಟ್ಟಿಲುಗಳು. ಹೆಬ್ಬಯಲಿನಂತಹ ಸಾರ್ವಜನಿಕ ಆಕಾರಹೀನ ವಸ್ತು, ವೈಯಕ್ತಿವಾದ ವಸತಿಯ ನಿರ್ದಿಷ್ಟವಾದ ಆಕೃತಿಯನ್ನು ಹೊಂದಿ ಲೋಕಮಾನ್ಯವಾಗುವುದು ವ್ಯಕ್ತಿ ವಿಶಿಷ್ಟತೆಯ ರೂಪದ ದರ್ಶನದ ಇಟ್ಟಿಗೆ ಗಾರೆಗಳಿಂದ ಸಾಹಿತ್ಯದ ಸ್ವಧರ್ಮ ನಿಷ್ಠೆಯೆನ್ನುವುದು ಸದ್ಗೃಹಸ್ಥೆಯಂತೆ. ಸಾಂಕರ್ಯದ ಸವತಿಯನ್ನು ಸರ್ವಥಾ ಸಹಿಸಧು.

ಈ ಕಾರಣದಿಂದ ವಸ್ತುವಿನ ನಿರ್ವಹಣೆಯ ನೈಪುಣ್ಯ ಸಾಹಿತಿಗೆ ಅತಿ ಮುಖ್ಯ. ಯಾವ ಆಶಯ ಪೂರ್ತಿಗಾಗಿ ವಸ್ತುವಿನ ಯಾವ ಅಂಶ ಮತ್ತು ಸ್ವರೂಪವನ್ನು ಅಭಿವ್ಯಕ್ತಿಸಬೇಕೆಂಬ ಅಭ್ಯಾಸಜನ್ಯ ಅರಿವೇ ಔಚಿತ್ಯ. ವಸ್ತುವಿನ ವ್ಯಾಪಕತೆ, ಸ್ವರೂಪ ಮತ್ತು ಗುಣ ಲಕ್ಷಣಗಳಿಗೆ ಅನುಸಾರವಾಗಿ ಅದನ್ನು ತನ್ನ ವೈಯಕ್ತಿಕ ಅಗತ್ಯಗಳೊಂದಿಗೆ ತಾಳೆಯಾಗಿಸಿಕೊಳ್ಳುವ ಕಲೆಗಾರಿಕೆ ಲೇಖಕನಾದವನಿಗೆ ಸಿದ್ಧಿಸಬೇಕು. ಹಾಗೆಯೇ, ವಸ್ತುವಿನ ಸ್ಥೂಲ ಮತ್ತು ಸೂಕ್ಷ್ಮ, ಸಾಧಾರಣ ಮತ್ತು ವಿಶೇಷ ಸ್ವರೂಪಗಳ ಅರಿವು ಲೇಖಕನಿಗೆ ತಕ್ಕಷ್ಟು ಇದ್ದು, ಅವುಗಳನ್ನು ಬಳಸಿಕೊಳ್ಳುವ ಚಾತುರ್ಯ ಕರಗತವಾಗಿರಬೇಕು.

ಸಾಹಿತ್ಯದ ಸಾರ್ಥಕತೆಯನ್ನು ಪರಿಗಣಿಸುವಾಗ ಸಾಹಿತಿ ಹಾಗೂ ವಾಚಕ ಸಹೃದಯರಿಬ್ಬರ ಸಮಾನವಾದ ಸಹಯೋಗ ಬಹಳ ಮುಖ್ಯವಾಗುತ್ತದೆ. ಬೀಸುವ

ಮಹತ್ಕೃತಿಗಳೆನ್ನುವುದು ಮಾನವ ಮನಸ್ಸಿನ ಮಹಾ ದಾಖಲೆಗಳು. ಉದಾತ್ತ ಚೇತನಗಳ ಒಳದೃಷ್ಟಿ ಕಾಲಕಾಲಕ್ಕೆ ತಾನು ಗ್ರಹಿಸಿರುವ ನಿತ್ಯಸತ್ಯಗಳನ್ನಲ್ಲದೆ ದೈನಂದಿನ ಜೀವನದ ಒಳಿತಿಗೆ ಬೇಕಾಗಿರುವ ನೀತಿ ನಡಾವಳಿ ನಿತ್ಯಾಚರಣೆಗಳನ್ನು, ಶಾಸ್ತ್ರ ವಿಧಿಗಳನ್ನು ಈ ಉದ್ಗ್ರಂಥಗಳು ನಮಗೆ ಕರುಣಿಸುತ್ತವೆ. ಈ ದೃಷ್ಟಿಯಿಂದ ಗ್ರಂಥ ವೈವಿಧ್ಯ ಮಾನವನ ಚಿಂತನ ಪ್ರವೃತ್ತಿಯ ಉದ್ದಗಲಗಳ ಅಳತೆಗೋಲು. ಇದನ್ನು ಪರ್ಯಾಲೋಚಿಸಿದಾಗ ನಮಗೆ ವಿದಿತವಾಗುವ ತಥ್ಯವೆಂದರೆ ಯಶಸ್ಸು ಮತ್ತು ಶ್ರೇಯಸ್ಸು ಬೇರೆ ಬೇರೆ ಎನ್ನುವುದು. ಗೆಲುವಿನ ರೂಪದ ಯಶಸ್ಸು ಸಮಸ್ತ ಕಾಲಕ್ಕೂ ಸತ್ವಾಧಾರಿಯಲ್ಲ, ರಾಜಮಾರ್ಗಾನುಸಾರಿಯಲ್ಲ. ಅದು ರಾಜಕಾರಣ, ಜಾತಿ, ಅಂತಸ್ತು, ದ್ರವ್ಯ ಮತ್ತು ಅಂಥವೇ ಗಲ್ಲಿ ಅಲೆತಗಳ ಮೂಲಕ ಲಪಟಾಯಿಸುವ ಹವಣುಳ್ಳದ್ದು. ಶ್ರೇಯಸ್ಸು ಈ ನಮೂನೆಯದಲ್ಲ. ಬಹಳ ಕಾಲದ ಅಂತಃತಪಸ್ಸಿಲ್ಲದೆ ಅದು ಸಿದ್ಧಿಸುವುದು ದುರ್ಲಭ. ಶ್ರೇಯಸ್ಸನ್ನು ನಿರ್ಣಯಿಸುವುದು ಸಮಕಾಲೀನ ವಿಮರ್ಶಕ ಬುದ್ಧಿಜೀವಿ ವರ್ಗವಲ್ಲ; ಜರಡಿ ರೂಪದ ಪಕ್ಷಪಾತರಹಿತ ಕಾಲ.

ಸಾಹಿತ್ಯದಲ್ಲಿ ವಸ್ತುವಿನ ಪಾತ್ರವನ್ನು ಕುರಿತು ಒಂದಿಷ್ಟು ವಿಚಾರ ಮಾಡಬಹುದು. ಕಾವ್ಯ ಕರ್ಮದ ಕಸುಬುಗಾರಿಕೆಗಿಂತ ವಸ್ತು ಯಾವತ್ತೂ ಮಹತ್ವದ್ದು. ಪರಿಪಾಕಕ್ಕೆ ಪಾಚನ ಪ್ರಕ್ರಿಯೆಯ ಪರಿಣತಿಯೊಂದಿಗೆ ಪರಿಕರವೂ ಪರಮಾಯಿಷಿಯದಿರ ಬೇಕು. ಇದರ ಬಗೆಗೆ ಸಹ ವಿಮರ್ಶಕರಲ್ಲಿ ಸಮಾನಾಭಿಪ್ರಾಯವಿಲ್ಲ. ವಸ್ತು, ಲೇಖಕನಿಗೆ ಬಹುಮುಖ್ಯವಾದ ಕಾವ್ಯ ಪರಿಕರ. ಒಂದು ರೀತಿಯಲ್ಲಿ ಅದು ಕವಿಯ ಆಯ್ಕೆಯ, ಅಭಿರುಚಿಯ, ನಿರ್ವಹಣೆಯ ಸಾಮರ್ಥ್ಯಕ್ಕೆ ಸೂಚಕವೆನ್ನಿಸುತ್ತದೆ. ಕೃತಿಯ ಮೌಲ್ಯ ನಿರ್ಣಯದಲ್ಲಿ ಅನೇಕ ಅಂಗೋಪಾಂಗಗಳು ಮಾನದಂಡವಾಗಿರು ವಂತೆ ವಸ್ತುವೂ ಸಹ ಒಂದು ಪ್ರಮುಖ ಅಳತೆಗೋಲಾಗುವ ಹೆಚ್ಚುಗಾರಿಕೆಯನ್ನು ಹೊಂದಿದೆ. ನೂಲಿನ ಹಾಗೆ ಮಾಲು. ಒಳ್ಳೆಯ ಬಟ್ಟೆಯ ತಯಾರಿಕೆಗೆ ಘನವಾದ ನೂಲಿನ ಪೂರ್ವಭಾವಿ ಒದಗಣೆ ಮುಖ್ಯ. ಶ್ರೇಷ್ಠ ವಸ್ತ್ರದ ಥಾನಿನ ಉದ್ದಗಲಕ್ಕೂ ತೆಳ್ಳನೆಯ ದಾರದೆಳೆಗಳ ದೋಷಮುಕ್ತವಾದ ಒಳರಚನೆಯ ಕಾರಣಕ್ಕೆ ಒಂದು ನಯ ಸೂಕ್ಷ್ಮತೆ, ಬೆಲೆಯನ್ನು ಗೊತ್ತುಪಡಿಸುವ ರಮ್ಯಾತಿಶಯತೆ ನಮ್ಮ ಕಣ್ಣಿಗೆ ಮತ್ತು ಕೈಯ್ಯ ಸ್ಪರ್ಶಕ್ಕೆ ಥಟ್ಟನೆ ಅನುಭವ ಆಗುತ್ತದೆ. ಆದರೆ ಕಳಪೆ ದರ್ಜೆಯ ಬಟ್ಟೆಯ ಮೇಲೆ ಸಣ್ಣ ಸಿಕ್ಕಿನ ಗಂಟು, ಕಿರಿದಾದ ದಾರದ ಎಳೆ ಗಮನವನ್ನು ಸೆಳೆಯುತ್ತದೆ.

ನೇಕಾರನ ಲಾಳಿಯ ಆಟದ ಹಾಸುಹೊಕ್ಕಿನ ಕ್ರಿಯೆಯಲ್ಲಿ ಲೋಪ ಇಲ್ಲದಿದ್ದರೂ ಬಟ್ಟೆಯ ಮೂಲದ್ರವ್ಯವಾದ ನೂಲೇ ಅಲ್ಪಯೋಗ್ಯತೆಯದೂ ನಿರ್ಬಲವೂ ಆಗಿದ್ದರೆ, ಇಂಥ ಜುಜುಬಿ ಮಾಲು ನಿಶ್ಚಿತ. ಈ ಹೋಲಿಕೆಯಂತೆಯೇ, ಸಾಹಿತ್ಯ ಕ್ಷೇತ್ರದಲ್ಲಿ ವಸ್ತುವಿನ ಗುಣಗಣ್ಯತೆ. ವಸ್ತುವಿಗೆ ತನ್ನದೇ ಆದ ಹಿರಿಮೆ, ಹೆಗ್ಗಳಿಕೆ ಇರುವುದನ್ನು ಮತ್ತೊಂದು ನಿದರ್ಶನದಿಂದ ಮನಗಾಣಬಹುದು. ಮಹದ್ವಸ್ತು ಮಾತ್ರ ಮಹದ್ದರ್ಶನ ಪ್ರೇರಕ; ವಿಶ್ವದ ಜೀವಿಗಳಲ್ಲಿ ಬೃಹತ್‌ಗಾತ್ರದ ತಿಮಿಂಗಲಕ್ಕೆ ಕಡಲಲ್ಲದೆ ಕರೆ ಕುಂಟೆ ಆಡುಂಬೊಲ ಆಗುವುದಿಲ್ಲ. ಪಟ್ಟಣದ ಸುಲಭ ಲಭ್ಯ

ಪಾರ್ಕುಗಳಲ್ಲಿ ನಮಗೆದುರಾಗುವ ಪ್ರಕೃತಿಯ ಪುಟ್ಟ ಪಾಳೆಯ ಪಟ್ಟುಗಳನ್ನು ಕಂಡಾಗ ಅಲ್ಲ, ದುರ್ಗಮವೂ ದುರ್ಭೇದ್ಯವೂ ಆದ ನಿಬಿಡಾರಣ್ಯದ ನಿಸ್ಸೀಮ ನಿಜಮಿಕೆಯ ನೋಟಕರಾದಾಗ ನಮಗೆ ಸೃಷ್ಟಿಯ ರಮ್ಯ ರುದ್ರಾನ್ವಿತ ಭವ್ಯತೆ, ಅನುಭವವೇದ್ಯವಾಗುವುದು. ಉದ್ದಾಮ ಲೇಖಕರ ಬರಹಗಳ ಮಹಾನುಭಾವತೆ ಈ ತೆರನದು. ವಸ್ತುವಿನ ಜೊತೆಗೆ ವಿಚಾರ ಮತ್ತು ಶೈಲಿಗಳ ಒಂದು ಸಮ ಹದತ್ವ, ಸಹ ಮಹತ್ವ ಅತಿಶಯವಾದದ್ದು, ಚಿಂತನಶೀಲವಾದದ್ದು, ಇದು ಇಲ್ಲದೇ ಬೇರೆ ಯಾವುದಿದ್ದರೂ ಬರಹ ಕುರುಡು ಮತ್ತು ಜೀವಕಳಾಶೂನ್ಯ. ಈ ಬಗೆಯ ಬರವಣಿಗೆ ಬಣ್ಣ ಬಣ್ಣದ್ದಾಗಿರಬಹುದು. ಸಂರಚನೆಯಲ್ಲಿ ಸುವ್ಯವಸ್ಥೆಯನ್ನು ವ್ಯಕ್ತಪಡಿಸಬಹುದು; ಆದರೂ ಅದು ಹೆರಳು ತಳೆಯಲು ಹಂಬಲಿಸುವ ಕಂಪಿಲ್ಲದ ಕುಸುಮ ; ಭ್ರಮರ ಪ್ರದಕ್ಷಿಸದ ಬಂಡಿಲ್ಲದ ಬಡಿವಾರ.

ಮಹದ್ವಸ್ತುವಿನಿಂದ ಪ್ರೇರಿತರಾಗಿ, ಅದರ ನೆರವಿನಿಂದ ತಮ್ಮ ಅನನ್ಯ ದರ್ಶನವನ್ನು ಪ್ರಫುಲ್ಲಿಸುವ ಪ್ರತಿಭಾವಂತರು ಅಪರೂಪ, ಮಲೆನಾಡಿನ ಮಹಾರಣ್ಯಗಳಲ್ಲಿ ಶ್ರೀಗಂಧವಾಗುವ ನಸೀಬು ಕೆಲವಕ್ಕೆ ಅಷ್ಟೆ. ಉಳಿದವು ಸೌದೆ, ಮರಮುಟ್ಟುಗಳಿಗೆ ಮೀಸಲು. ಸಮರ್ಥ ಕವಿ, ಸಾಹಿತಿಯ ಕೈಗೆ ಸಿಕ್ಕಿದ ಲೋಕ ವಸ್ತು– ಶಿಲ್ಪಿಯೋಗಿಯ ಉಳಿಗೆ ಸಿಕ್ಕಿದ ಒರಟುಗಲ್ಲು, ಕೇವಲ ಕಲೆಯಲ್ಲ, ಅತ್ಯದ್ಭುತ 'ಮಿರಾಕಲ್ಲು'– ಅನ್ನುವ ಹಾಗೆ ಅನೂಹ್ಯ ಅತಿಶಯತೆಯನ್ನು ಪಡೆಯುತ್ತದೆ.

ವಸ್ತುವಿನ ಬಗೆಗೆ ಮತ್ತೊಂದು ಮಾತೂ ಉಪಾದೇಯ. ಜೀವನದ ಇತರ ಇಲಾಖೆಗಳಲ್ಲಿದ್ದ ಹಾಗೆಯೇ ಸಾಹಿತ್ಯದಲ್ಲೂ ಸಹ ಸೃಜನಶೀಲ ಸಾಧಕನಿಗೆ ತನ್ನತನ, ಸ್ವಂತಿಕೆ ಎನ್ನುವುವು ಮಹೋನ್ನತಿಗೆ ಏರಿಸುವ ಮೆಟ್ಟಿಲುಗಳು. ಹೆಬ್ಬಯಲಿನಂತಹ ಸಾರ್ವಜನಿಕ ಆಕಾರಹೀನ ವಸ್ತು, ವೈಯಕ್ತಿವಾದ ವಸತಿಯ ನಿರ್ದಿಷ್ಟವಾದ ಆಕೃತಿಯನ್ನು ಹೊಂದಿ ಲೋಕಮಾನ್ಯವಾಗುವುದು ವ್ಯಕ್ತಿ ವಿಶಿಷ್ಟತೆಯ ರೂಪದ ದರ್ಶನದ ಇಟ್ಟಿಗೆ ಗಾರೆಗಳಿಂದ ಸಾಹಿತ್ಯದ ಸ್ವಧರ್ಮ ನಿಷ್ಠೆಯೆನ್ನುವುದು ಸದ್ಗೃಹಸ್ಥೆಯಂತೆ. ಸಾಂಕರ್ಯದ ಸವತಿಯನ್ನು ಸರ್ವಥಾ ಸಹಿಸದು.

ಈ ಕಾರಣದಿಂದ ವಸ್ತುವಿನ ನಿರ್ವಹಣೆಯ ನೈಪುಣ್ಯ ಸಾಹಿತಿಗೆ ಅತಿ ಮುಖ್ಯ. ಯಾವ ಆಶಯ ಪೂರ್ತಿಗಾಗಿ ವಸ್ತುವಿನ ಯಾವ ಅಂಶ ಮತ್ತು ಸ್ವರೂಪವನ್ನು ಅಭಿವ್ಯಕ್ತಿಸಬೇಕೆಂಬ ಅಭ್ಯಾಸಜನ್ಯ ಅರಿವೇ ಔಚಿತ್ಯ. ವಸ್ತುವಿನ ವ್ಯಾಪಕತೆ, ಸ್ವರೂಪ ಮತ್ತು ಗುಣ ಲಕ್ಷಣಗಳಿಗೆ ಅನುಸಾರವಾಗಿ ಅದನ್ನು ತನ್ನ ವೈಯಕ್ತಿಕ ಅಗತ್ಯಗಳೊಂದಿಗೆ ತಾಳೆಯಾಗಿಸಿಕೊಳ್ಳುವ ಕಲೆಗಾರಿಕೆ ಲೇಖಕನಾದವನಿಗೆ ಸಿದ್ಧಿಸಬೇಕು. ಹಾಗೆಯೇ, ವಸ್ತುವಿನ ಸ್ಥೂಲ ಮತ್ತು ಸೂಕ್ಷ್ಮ, ಸಾಧಾರಣ ಮತ್ತು ವಿಶೇಷ ಸ್ವರೂಪಗಳ ಅರಿವು ಲೇಖಕನಿಗೆ ತಕ್ಕಷ್ಟು ಇದ್ದು, ಅವುಗಳನ್ನು ಬಳಸಿಕೊಳ್ಳುವ ಚಾತುರ್ಯ ಕರಗತವಾಗಿರಬೇಕು.

ಸಾಹಿತ್ಯದ ಸಾರ್ಥಕತೆಯನ್ನು ಪರಿಗಣಿಸುವಾಗ ಸಾಹಿತಿ ಹಾಗೂ ವಾಚಕ ಸಹೃದಯರಿಬ್ಬರ ಸಮಾನವಾದ ಸಹಯೋಗ ಬಹಳ ಮುಖ್ಯವಾಗುತ್ತದೆ. ಬೀಸುವ

ಕಲ್ಲು ಒಂದೇ ಆದರೆ ಕಾಳು ಹಿಟ್ಟಾಗದು; ಚಿಟಿಕೆಗೆ ಒಂದು ಬೆರಳು ಸಾಲದು. ಅಂದಮೇಲೆ, ಸಾಹಿತ್ಯದ ಸಾರ್ಥಕ್ಯಕ್ಕೆ ಸಾಹಿತಿಯಷ್ಟೆ ಸಹೃದಯನೂ ಮುಖ್ಯ. ಒಂದು ಸಾಹಿತ್ಯ ಕೃತಿಯ ಅರ್ಥೈಕೆಗೆ ಹಾಗೂ ಹೃದಯಪೂರ್ವಕವಾಗಿ ಸ್ವಾನುಭವಿಸುವಿಕೆಗೆ ಓದುಗನ ಮನಃಪರಿಣತಿಯೂ ಮುಖ್ಯವೆನ್ನುವುದನ್ನು ಮರೆಯುವಂತಿಲ್ಲ. ಇದನ್ನು ಅನವರತವಾದ ಓದು, ಚಿಂತನ ಮತ್ತು ವಿಮರ್ಶಕರ ನೆರವಿನಿಂದ ಸಂಪಾದಿಸಿಕೊಳ್ಳಬಹುದು.

ಕವಿ ಸಾಹಿತಿಗಳಲ್ಲಿ ಹೇಗೆ ಗುಣಮಟ್ಟದ ಭೇದವಿದೆಯೋ, ಅವರ ಒಲವು ಅಭಿರುಚಿಗಳಲ್ಲಿ ತರತಮದ ಅಂತರವಿದೆಯೋ ಹಾಗೆಯೇ ವಾಚಕರ ನಡುವೆಯೂ ಅನೇಕ ವ್ಯತ್ಯಾಸದ ಸ್ತರಗಳಿವೆ. ಸಾಹಿತ್ಯ ಕ್ಷೇತ್ರದ ವಾಚಕ ವೃಂದದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರಕಾರ ಮೆಚ್ಚಾಗಿರುವುದು ಸಾಮಾನ್ಯ. ಅಪರೂಪಕ್ಕೆ ಮತ್ತು ಗ್ರಹಿಕೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಒಬ್ಬನಿಗೇ ಸಾಹಿತ್ಯದ ವಿವಿಧ ಪ್ರಭೇದಗಳ ಬಗೆಗೆ ಹೆಚ್ಚು ಕಡಿಮೆ ಸಮಾನವಾದ ಒಲವಿರುವುದೂ ಅಸಂಭವವಲ್ಲ. ಹೀಗೆ, ಹಲವು ವಿಭೇದಗಳು ಓದುಗನೊಬ್ಬನಿಗೆ ಮೆಚ್ಚಿಗೆಯಾಗಿರುವ ಕಾರಣಕ್ಕೆ ಯಾವುದೋ ಒಂದು ಹೆಚ್ಚು, ಇನ್ನೊಂದು ಅಧಮ ಎಂದು ಭೇದದ ಎಣಿಕೆ ಮಾಡುವುದು ಸರ್ವಥಾ ಸರಿ ಎನ್ನಿಸುವುದಿಲ್ಲ. ಉದಾಹರಣೆಗೆ, 'ಡಾಕ್ಟರ್' ಎನ್ನುವುದು ಒಂದು ಒಟ್ಟಂದದ ಪದ. ದೇಹವೊಂದರ ಎಲ್ಲಾ ಅಂಗಗಳಿಗೂ ಒಬ್ಬನೇ ವೈದ್ಯನಿರುವುದಿಲ್ಲ. ಬೇರೆ ಬೇರೆ ರೋಗಗಳಿಗೆ, ಶರೀರದ ವಿವಿಧ ಭಾಗಗಳಿಗೆ ಪ್ರತ್ಯೇಕವಾಗಿ ಹಲವು ತಜ್ಞರಿರುತ್ತಾರೆ. ಇವರಲ್ಲಿ ಯಾರು ಹೆಚ್ಚು, ಯಾರು ಕಡಮೆ ಎನ್ನುವ ಪ್ರಶ್ನೆಯೇ ಅಸಂಗತ. ಅವರವರ ಪ್ರಕಾರಗಳಲ್ಲಿ ಅವರವರು ನಿಪುಣರೇ, ಶ್ಲಾಘ್ಯರೇ, ವ್ಯಾಧಿಗ್ರಸ್ಥರ ಅಗತ್ಯಕ್ಕೆ ತಕ್ಕ ಹಾಗೆ ಒಬ್ಬೊಬ್ಬ ವೈದ್ಯನ, ಅವನು ನೀಡುವ ಚಿಕಿತ್ಸೆಯ ಪ್ರಯೋಜನ ಅವರಿಗೆ ಲಭಿಸಬೇಕಾಗಬಹುದು. ಅಂತೆಯೇ, ವಾಚಕನಿಗೆ ಸಾಹಿತ್ಯದ ವಿವಿಧ ವಿಭಾಗಗಳ ಬಗೆಗಿನ ಆಸಕ್ತಿ ಹಾಗೂ ಅವಶ್ಯಕತೆ.

ಇದರೊಂದಿಗೆ ಇನ್ನೂ ಒಂದು ಸಂಗತಿಯೂ ವಿಚಾರಣೀಯವೆನಿಸುತ್ತದೆ. ಸಾಹಿತ್ಯ ಪ್ರಕಾರದಲ್ಲಿ ಇರುವ ಬೇರೆ ಬೇರೆ ತೆರನಾದ ಪ್ರಭೇದಗಳಲ್ಲಿ ಸಾಪೇಕ್ಷವಾಗಿ ಯಾವುದಕ್ಕೆ ಅತಿಶಯವಾದ ಮಹತ್ವ, ಯಾವುದಕ್ಕೆ ಅಲ್ಪ ಮಹತ್ವ ನೀಡಬೇಕು ಎನ್ನುವ ಪ್ರಶ್ನೆ, ಯಾವುದು ವಾಚಕನ ಚೇತನಕ್ಕೆ ಅಧಿಕ ಶ್ರೇಯಸ್ಕಾರಕ, ಯಾವುದು ಅಲ್ಲ ಎನ್ನುವ ಜಿಜ್ಞಾಸೆ ನಮ್ಮ ಚಿಂತನೆಗೆ ತಕ್ಕದ್ದು. ಕವಿತೆಯೊ, ಕಾದಂಬರಿಯೊ, ಕಥೆಯೊ, ನಾಟಕವೊ, ಪ್ರಬಂಧವೊ, ಜೀವನ ಚರಿತ್ರೆಯೊ? ಇದು ಬಹುಶಃ ಹೆಚ್ಚು ತಲೆ ಕೆಡಿಸುವಂತೆ ಭಾಸವಾದರೂ ಮೊತ್ತದಲ್ಲಿ ಉತ್ತರ ಸರಳ, ಸಂಕ್ಷಿಪ್ತ; ಎಲ್ಲ. ಆಕಳಿನದೋ, ಎಮ್ಮೆಯದೋ, ಮೇಕೆಯದೋ ಸತ್ವತಃ ಅದು ಹಾಲೇ. ಪುಷ್ಟಪ್ರದ ಶಕ್ತಿ ಎಲ್ಲದರಲ್ಲೂ ಇದೆ.

ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶೆಯ ಪಾತ್ರ ತುಂಬ ಗಂಭೀರವಾದದ್ದು ಹಾಗೂ ಸಾಹಿತ್ಯದ ಬೆಳವಣಿಗೆಗೆ, ಗುಣಮಟ್ಟದ ಏರಿಕೆಗೆ ಮತ್ತು ಪ್ರಚಾರಕ್ಕೆ ವಿಮರ್ಶೆಯಿಂದ

ಆಗುವ ಉಪಕಾರ ಎಣೆಯಿಲ್ಲದ್ದು. ಒಬ್ಬ ಲೇಖಕ ಕೃತಿ ರಚನೆಯ ವೇಳೆಯೇ ವಿಮರ್ಶಕನೂ ಆಗಿರುತ್ತಾನೆ ಎನ್ನುವ ಮಾತು ಹಳೆಯದು; ಆದರೆ ಎಲ್ಲ ಕಾಲಕ್ಕೂ ಸತ್ಯಸ್ಯಸತ್ಯ. ವಸ್ತುವಿನ ಆಯ್ಕೆಯಲ್ಲಿ ತಂತ್ರಾಭಿವ್ಯಕ್ತಿಯ ಯೋಜನೆಯಲ್ಲಿ, ಭಾಷೆಯನ್ನು ಔಚಿತ್ಯವರಿತು ಬಳಸುವುದರಲ್ಲಿ, ಉಪಮೆ ರೂಪಕಾದಿ ಪ್ರತಿಮೆಗಳ ತಕ್ಕನಾದ ವಿವೇಚನೆಯಲ್ಲಿ ಅವನು ಯುಕ್ತಾಯುಕ್ತ ಪರಿಜ್ಞಾನವನ್ನು ಕೆಲಸಕ್ಕೆ ತೊಡಗಿಸಿರುತ್ತಾನೆ. ಇದು ವಿಚಾರಪೂರ್ವಕವಾಗಿದ್ದು ವಿಮರ್ಶೆಯ ಸ್ವರೂಪವನ್ನು ಪಡೆದಿರುತ್ತದೆ. ಇಷ್ಟಾಗಿಯೂ ಸಾಹಿತಿಗೂ ಕೃತಿಗೂ ನಿಕಟ ನಂಟಿರುವುದರಿಂದ ಅವನಿಗೆ ಅದರಲ್ಲಿನ ಕೆಲವೊಂದು ಸೂಕ್ಷ್ಮ ಅರೆಕೊರೆಗಳು ಗೋಚರಿಸದೆ ಹೋಗಬಹುದು. ಇದು ಆಗಬೇಕಾದ್ದಲ್ಲಿ ಒಂದು ಬಗೆಯ ಮಾನಸಿಕ ದೂರ(Psychic distance) ಕೃತಿಯ ಮತ್ತು ಅವನ ನಡುವೆ ಅಗತ್ಯವಾಗುತ್ತದೆ. ತಾನೇ ರಚಿಸಿದ ಕೃತಿ ತನಗೇ ಅಪರಿಚಿತವಾಗ, ಇತರರದೆಂಬಂತೆ ನಿರ್ಮೋಹಕವಾಗಿ ತೋರಬೇಕು. ಕೃತಿ ರಚನೆಯ ಕಾಲಾನಂತರದಲ್ಲಿ ಇಂತಹ ಒಂದು ಸಮಭಾವದ ತಟಸ್ಥ ಮನೋಸ್ಥಿತಿ ಒದಗಬಹುದು. ಆಗ ಬಹುಶಃ ಸಾಹಿತಿಗೆ ತನ್ನ ಕೃತಿಯಲ್ಲಿನ ಕುಂದುಕೊರತೆಗಳು ಕಾಣಿಸಿಕೊಳ್ಳಬಹುದು.

ಸಮರ್ಥ ವಿಮರ್ಶಕನಾದವನು ಕೃತಿಯ ಮೌಲ್ಯ ವಿವೇಚನೆಯನ್ನು ಮಾಡುವಾಗ ಕೃತಿನಿಷ್ಠವಾಗಿರುವುದರ ಜೊತೆಗೇ ಆ ಸಾಹಿತಿಯ ಪಾಲಿಗೆ ಮಾರ್ಗದರ್ಶಕಪ್ರಾಯವೂ ಆಗಿರುತ್ತಾನೆ. ಅಲ್ಲದೇ, ಆ ಕೃತಿಯಲ್ಲಿರಬಹುದಾದ ಹೆಚ್ಚುಗಾರಿಕೆಯನ್ನು ಪ್ರಚುರಗೊಳಿಸಿ ಅದು ಬಹುಜನ ಶಿಷ್ಟವಾಚಕರ ಆಸಕ್ತಿಗೆ ಪಾತ್ರವಾಗಲು ನೆರವಾಗಬಹುದು. ಹಾಗೆಯೇ, ಕಾಲ ದೇಶಗಳಲ್ಲಿ ಆ ಕೃತಿ ನಿತ್ಯ ವರ್ತಮಾನಸ್ಥ ಸ್ಥಾನಮಾನವನ್ನು ಸಂಪಾದಿಸಿಕೊಳ್ಳುವಂತೆ, ಆ ಭಾಷೆಯ ಸಾಹಿತ್ಯಕ್ಕೇ ಅಮೂಲ್ಯ ಕೊಡುಗೆಯಾಗಿ ಪರಿಣಮಿಸುವಂತೆ ಅವನು ಎಸಗಬಹುದು.

ಒಂದು ದೃಷ್ಟಿಯಲ್ಲಿ ಲೇಖಕನಷ್ಟೇ, ಅವನಿಗಿಂತ ಮಿಗಿಲಾಗಿಯೇ ವಿಮರ್ಶಕ ಸಾಹಿತ್ಯಕ್ಕ ಅನಿವಾರ್ಯವೆನ್ನಿಸುತ್ತಾನೆ. ಆದ್ದರಿಂದ ಕೃತಿಯೊಂದನ್ನು ವಿವೇಚಿಸುವಾಗ ಅವನಿಗೆ ಜವಾಬ್ದಾರಿ, ಎಚ್ಚರ, ಪೂರ್ವಾಗ್ರಹ ಪೀಡಿತ ಮುಕ್ತ ಮನಸ್ಸು ಮತ್ತು ಸೂಕ್ಷ್ಮತಾಗ್ರಹಣಶಕ್ತಿ ಪೂರ್ವಭಾವಿಯಾಗಿ ಇರಲೇಬೇಕಾದ ಆದ್ಯಂಶಗಳು. ಅವನಿಗೆ ತನ್ನ ಭಾಷೆಯ ಸಾಹಿತ್ಯವಲ್ಲದೆ, ಇತರ ವಾಙ್ಮಯದ ಗಣನೀಯ ಜ್ಞಾನವೂ ಇರಬೇಕಾಗುತ್ತದೆ. ಜೊತೆಗೇ, ಅವನು ವಿಶ್ಲೇಷಣೆ ಪರಾಮರ್ಶೆಗಳ ಬುದ್ಧಿಪೂರ್ವಕ ವಿಧಾನದಲ್ಲಿ ಪರಿಣತಿಯನ್ನು ಹೊಂದಿರುವಂತೆ, ಆ ಕೃತಿಯನ್ನು ಮೊದಲು ರಸಾನುಭವಿಸುವ ಶಕ್ತಿಯನ್ನು ಪಡೆದಿರಬೇಕು. ಅಂದರೆ ಅವನಲ್ಲಿ ಸಹೃದಯತ್ವದ ವಿಶೇಷ ಗುಣ ಇರಬೇಕು.

ಕನ್ನಡದಲ್ಲಿ ಅತ್ಯುತ್ತಮ ವಿಮರ್ಶಕರಿಗೆ ಕೊರತೆಯಿಲ್ಲ. ಹೀಗಿದ್ದೂ ಕೆಲವು ಪಂಥಾನುಯಾಯಿಗಳ ಏರುಪೇರಿನ ವಿಮರ್ಶೆಯ ಹೆಸರಿನ ಸ್ವಜ್ಞಾನ ಪ್ರದರ್ಶನ ಮತ್ತು ಸುತ್ತು ಬಳಸಿನ ದಿಗ್ಗೆಡಿಸುವ ಪಾರಿಭಾಷಿಕ ವಾಗ್ಜಾಲ ಹಾಗೂ ಯಾವುದಾದರೂ ಲೌಕಿಕ ಆಮಿಷಗಳ ಲಾಭೋದ್ದೇಶಕ್ಕೆ ಮಾರುಹೋಗುವ ಚಾಳಿ,

ವಿಮರ್ಶೆಯ ನಿಷ್ಪಕ್ಷತೆಯ ಮೂಲ ತತ್ವಕ್ಕೇ ಅಪಚಾರವೆಸಗುವಂತಹುದು. ಇದರೊಂದಿಗೆ ಜಾತಿ, ಧರ್ಮ, ಅಧಿಕಾರ, ಅಂತಸ್ತು ಮುಂತಾದವುಗಳ ಎಣಿಕೆಯೂ ಕೃತಿ ಪರಾಮರ್ಶೆಯಲ್ಲಿ ತಲೆ ಹಾಯಿಸದೇ ಇಲ್ಲ. ತನ್ನ ಪ್ರೀತಿಪಾತ್ರರ ಬಗೆಗೆ ಉದಾರತೆ, ಅನ್ಯರ ಬಗೆಗೆ ನಿಷ್ಠುರ ನಿರ್ಲಕ್ಷ್ಯ, ಇಲ್ಲವೇ ಟೀಕಾಸ್ತ್ರ ಪ್ರಯೋಗ – ಇವು ನಮ್ಮ ವಿಮರ್ಶಾ ಪ್ರಪಂಚದ ಕೆಲವರ ವಿಲಕ್ಷಣ ಹುನ್ನಾರುಗಳು. ಕುವೆಂಪು ಒಂದು ಸಂದರ್ಭದಲ್ಲಿ ಸೂಕ್ತವಾಗಿ ನುಡಿದಿರುವಂತೆ ನಮ್ಮಲ್ಲಿರುವುದು ಇಬ್ಬಗೆಯ ವಿಮರ್ಶೆ: 'ಜೈ ವಿಮರ್ಶೆ, ಇಲ್ಲವೇ ಬೈ ವಿಮರ್ಶೆ'.

ಪ್ರಸ್ತುತ ಕಾಲದಲ್ಲಿ ವೈಭವಯುತವಾಗಿ ವಿಜೃಂಭಿಸಿ, ಮುಂದೆ ಮೂಲೆಗೆ ಸಂದು ಕಣ್ಮರೆಯಾಗಿ ಹೋಗುವ ತಾತ್ಕಾಲಿಕ ಫ್ಯಾಷನ್ನಿನ ಸಾಹಿತ್ಯ ರಚನೆ ಹಾಗೂ ಪಾಶ್ಚಾತ್ಯ ಅನುಕರಣೆಯ ಪ್ರಯೋಗಶೀಲತೆಗೆ ತುತ್ತೂರಿ ಊದುತ್ತ, ನಾಯಿ ಕೊಡೆಗಳಿಗೆ ಲೋಹದ ಚೌಕಟ್ಟನ್ನು ತೊಡಿಸುವ ಕಸುಬಿನಲ್ಲಿ ಮಗ್ನವಾಗಿರುವ ಸಮಕಾಲೀನ ವಿಮರ್ಶೆ, ದೀರ್ಘ ಆಯುಷ್ಯದ ಉದ್ದಾಮ ಗ್ರಂಥಗಳಿಗೆ ನಿರ್ಲಕ್ಷ್ಯ ತೋರಿದ ಮಾತ್ರಕ್ಕೆ ಅವುಗಳ ಶೋಭೆ ಕುಂದಿಬಿಡುವುದಿಲ್ಲ. ಪ್ರಚಲಿತತೆ ಕುಗ್ಗಿಬಿಡುವುದಿಲ್ಲ. ಮುಂದೊಮ್ಮೆ ಅವು ತಮ್ಮ ಅಂತಃಸತ್ವದಿಂದ, ಸ್ವಂತ ಮಹಿಮೆಯಿಂದ ಪುಟಿದೆದ್ದು ಹೊಸ ಹುಮ್ಮಸ್ಸಿನಿಂದ ಶೋಭಿಸಿಯೇ ತೀರುತ್ತವೆ. ಹೃದಯವಂತ ಸಾಹಿತ್ಯಾಸಕ್ತರ ಅಚ್ಚುಮೆಚ್ಚುಗಳಾಗಿ ಮುಂದೆ ಸಾಗಿ ಮೆರೆದೇ ಮೆರೆಯುತ್ತವೆ. ಸಚ್ಚಿಂತನೆ, ಮಹದ್ಭಾವಗಳಿಗೆ ಫೀನಿಕ್ಸ್ ಪಕ್ಷಿಯಂಥ ಸ್ವಭಾವಗತವಾದ ಚಿರಂಜೀವತ್ವ ಪ್ರಾಪ್ತವಾಗಿರುತ್ತದೆ. ಅವುಗಳ ಪರವಾಗಿ ಕಾಲವೇ ಸಾಕ್ಷ್ಯ ಹೇಳುತ್ತದೆ; ಮತ್ತು ಅದೇ ವಿಮರ್ಶಕನ ಪಾತ್ರವನ್ನೂ ವಹಿಸುತ್ತದೆ. ಕಾಲದ ವಕಾಲತ್ತಿನೆದುರು ವಿಮರ್ಶಕರ ತಾಕತ್ತು ಏನೇನೂ ಅಲ್ಲ.

ವಿಮರ್ಶೆ ಮತ್ತು ಮೌಲ್ಯ ವಿವೇಚನೆ ಸರಳ ಸ್ವರೂಪದ ಬುದ್ಧಿಕ್ರಿಯೆಯಲ್ಲ. ಅದರಲ್ಲೂ, ಮನುಷ್ಯರ ಗಹನವೂ ಅಗಮ್ಯವೂ ಆದ ಆಂತರ್ಯದ ವರ್ತನೆಯ ವೈಲಕ್ಷಣ್ಯಗಳನ್ನು, ವ್ಯಕ್ತಿಗಳ ಸ್ವಭಾವದ ರಾಗಭಾವಗಳ ಅನಿರೀಕ್ಷಿತ ಚಲನವಲನಗಳನ್ನು ಒಳಗೊಂಡಿರುವ ಅಮೂರ್ತ ರೂಪದ ಸಾಹಿತ್ಯ ಕೃತಿಯನ್ನು ಸಮಾಲೋಚಿಸಿ ಬೆಲೆ ಕಟ್ಟುವುದು ಸಾಮಾನ್ಯ ಕೆಲಸವಲ್ಲ. ಸಾಹಿತ್ಯದ ಅತ್ಯುತ್ತಮವೆನ್ನಿಸುವ ಕೃತಿಗಳ ವಿವೇಚನೆ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದಷ್ಟು ಸುಸೂತ್ರವೋ ಸಡಿಲವೋ ಅಲ್ಲ. ಸರ್ವೋತ್ತಮ ಮತ್ತು ಉತ್ತಮ ಗ್ರಂಥಗಳ ನಡುವೆ ಇರುವ ವ್ಯತ್ಯಾಸ ಹೇಗೆ ತೆಳುವೋ, ಕೋಮಲವೋ, ಉತ್ಕೃಷ್ಟ ಹಾಗೂ ಸಾಧಾರಣ ಕೃತಿಗಳ ಮಧ್ಯದ ಅಂತರ ಸಹ ತೆಳುವ ಮತ್ತು ಸುಕುಮಾರವಾಗಿರುವುದು ಸಾಧ್ಯ. ಸ್ಥೂಲ ನಿದರ್ಶನವನ್ನು ನೀಡಬಹುದಾದರೆ, ಓಡುವ ಪಂದ್ಯದಲ್ಲಿ ಮೊದಲನೆಯ ಸ್ಥಾನ ಪಡೆದಿರುವ ಕುದುರೆಗೂ ಅದಾದ ಮೇಲಿನ ಎರಡನೆಯ ಕುದುರೆಯಿರಲಿ, ಐದು, ಆರನೆಯ ಸ್ಥಾನ ಗಳಿಸದಿರುವುದಕ್ಕೂ ಹಲವು ಸಲ ವ್ಯತ್ಯಾಸವಿರುವುದು ಒಂದು ಅಂಗುಲಕ್ಕಿಂತ ಕಡಮೆ ಅಂತರದಲ್ಲಿ ಮಾತ್ರ. ಹೀಗಿರುವುದರಿಂದ ವಿಮರ್ಶಕನ

ಬುದ್ಧಿಮತ್ತೆ ವಿವೇಚನೆಯ ಕಾಲದಲ್ಲಿ ಸದಾ ಜಾಗೃತ ಮತ್ತು ಸೂಕ್ಷ್ಮದ್ದಾಗಿರಬೇಕಾಗಿರುತ್ತದೆ.

ನಾನು ಈ ಹಿಂದೆಯೇ ತಿಳಿಸಿದಂತೆ, ಸಾಹಿತ್ಯ ಕಲೆಗಳ ಸೃಷ್ಟಿಯ ಜೊತೆಯಲ್ಲೇ ವಿಜ್ಞಾನದ ಸಮಕಾಲೀನ ಪರಿಜ್ಞಾನ ಸಹ ನಮ್ಮನಾಡಿನ ಶಿಕ್ಷಣದಲ್ಲಿ ಪ್ರಥಮ ಆದ್ಯತೆಯನ್ನು ಪಡೆಯಬೇಕು. ಇಂದು ವಿಜ್ಞಾನ ನಿರ್ಲಕ್ಷ್ಯ ಅಕ್ಷಮ್ಯವಷ್ಟೇ ಅಲ್ಲ, ಅಪಾರ ನಷ್ಟಕರವೂ ಹೌದು. ಇದು ಮಾತ್ರವಲ್ಲದೆ ಇನ್ನೊಂದು ವಿಚಾರವೂ ನೆನಪಿನಲ್ಲಿ ಇರಬೇಕಾದದ್ದು ಅತಿ ಮುಖ್ಯ. ವಿಜ್ಞಾನ-ತಂತ್ರಜ್ಞಾನವನ್ನು ಕೇವಲ ನಮ್ಮ ಪ್ರಯೋಜನಾರ್ಥ ತಿಳಿಯಲು ಹವಣಿಸಿ, ಅದರ ಮೂಲಭೂತವಾದ ತಾತ್ತ್ವಿಕ ಸ್ವರೂಪಕ್ಕೆ ಹಿಂದಿರುಗಿಸುವುದು ವಿಹಿತವೆನ್ನಿಸದು. ಆಚರಣೆಗೆ ಬಾರದ ವಿಜ್ಞಾನ, ಅಜ್ಞಾನಕ್ಕೊಂದು ಗೌರವಯುತ ಅಭಿಧಾನವೆನ್ನಿಸುವುದು ದಿಟವಾದರೂ ವಿಜ್ಞಾನದ ಫಲಗಳನ್ನು ಭೋಗಿಸುತ್ತ ವೈಜ್ಞಾನಿಕ ಧೋರಣೆಗಳನ್ನು ರೂಢಿಸಿಕೊಳ್ಳದ ಜನರು, ಗುಡಿಯನ್ನು ಪ್ರದಕ್ಷಿಸಿದ ದೇವರ ದರ್ಶನ ಮಾಡದ ಹಾಗೆ ಅಕೃತಾರ್ಥತೆಗೆ ಭಾಜನರು. ಅದರ ಆಧಾರ ಸ್ವರೂಪವೂ, ಮೂಲಭೂತವೂ ಆದ ತರ್ಕವಿಚಾರಗಳ ಆಶಯವನ್ನು, ಅದರ ಸತ್ಯಶೋಧಕ ದೃಷ್ಟಿಯನ್ನು ನಾವು ತಿಳಿದು, ಬದುಕಿನಲ್ಲಿ ಅಳವಡಿಸಿಕೊಳ್ಳದಿದ್ದರೆ, ವಿಜ್ಞಾನಕ್ಕೆ ಅಪಚಾರವೆಸಗಿದಂತೆ. ಅಂದರೆ, ವಿಜ್ಞಾನದ ಔಪಯೋಗಿಕ ಸ್ವರೂಪ ಎಷ್ಟು ಆದರಣೀಯವೋ, ಪರಿಪಾಲನ ಯೋಗ್ಯವೋ ಅಷ್ಟೇ ಅದರ ಸೈದ್ಧಾಂತಿಕ ರೂಪ ಕೂಡ ಪ್ರಸಕ್ತ; ಪ್ರಶಸ್ತ. ತರ್ಕ, ಬುದ್ಧಿ, ಚಿಂತನೆಗಳ ವಿಲಾಸವನ್ನು; ಅನುಮಾನ, ಪ್ರತ್ಯಕ್ಷ ಪ್ರಮಾಣ ಪ್ರಯೋಗಗಳ ಬಳಕೆಯ ಹೆಚ್ಚಳವನ್ನು ಮತ್ತು ಇದೆಲ್ಲಕ್ಕಿಂತ ಬಹು ಮುಖ್ಯವಾಗಿ ಅದರ ಸಾಧನೆ ಸಿದ್ಧಿಗಳಿಗೆ ಆತ್ಮ ಪ್ರಾಯದಂತಿರುವ ವೈಜ್ಞಾನಿಕ ಮನೋಭಾವ ಮತ್ತು ಪೂರ್ವಾಗ್ರಹ ಪೀಡಿತವಲ್ಲದ ಮುಕ್ತ ದೃಷ್ಟಿಕೋನವನ್ನು ಗೌರವಿಸಿ ಅವುಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಳ್ಳುವುದು ಇಂದಿನ ತುರ್ತುಗಳಲ್ಲಿ ಅಗ್ರಮಾನ್ಯವಾಗಿದೆ. ಕೇವಲ ವಿಶೇಷ ಜ್ಞಾನ ಮಾತ್ರವಲ್ಲ ವಿಜ್ಞಾನ. ಅದೊಂದು ಅನುಭವಸಂಪನ್ನ ಬದುಕಿನ ವಿಧಾನ. ಬೌದ್ಧಿಕ ಸಾಹಸದ ಫಲರೂಪಿ ವರ ದಾನ. ನಮ್ಮ ಸಾಹಿತ್ಯಕರ್ತರಿಗೆ, ಅದರಲ್ಲೂ, ಧರ್ಮ, ದೇಶ, ದೇವರು, ಸಂಸ್ಕೃತಿ, ಭಾಷೆ ಮುಂತಾದ ವಿಷಯಗಳಲ್ಲಿ ಭಾವಾವೇಶಿಗಳಾಗಿ ವರ್ತಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಇಂತಹ ವೈಜ್ಞಾನಿಕ ಹಾಗೂ ವೈಚಾರಿಕ ದೃಷ್ಟಿಯ ಅಗತ್ಯ ಹಿಂದೆಂದಿಗಿಂತ ಹೆಚ್ಚಾಗಿದೆ; ಲಾಭಕರವಾಗಿದೆ. ಇದರಿಂದ ವಿವೇಕಯುತ ನಿಲವು, ನಿಷ್ಪಕ್ಷಪಾತವಾದ ಒಲವು ವ್ಯಕ್ತಿತ್ವಕ್ಕೆ ಕೂಡಿಕೊಳ್ಳುವುದರಲ್ಲಿ ಸಂದೇಹವಿಲ್ಲ. ನಮ್ಮ ಕನ್ನಡದ ಹಿರಿಯ ಲೇಖಕರಲ್ಲಿ ಈ ಅಂಶಗಳನ್ನು ತಮ್ಮ ಕೃತಿಗಳಲ್ಲಿ ಧಾರಾಳವಾಗಿ ವ್ಯಕ್ತಪಡಿಸಿದವರೆಂದರೆ ರಾಷ್ಟ್ರ ಕವಿ ಕುವೆಂಪು ಮತ್ತು ಧೀಮಂತ ಸಾಹಿತಿ ಶಿವರಾಮ ಕಾರಂತ.

ವಿಜ್ಞಾನದ ಬೋಧನೆಯಲ್ಲಿ ನಾವು ಅನುಸರಿಸುತ್ತಿರುವ ಯಾಂತ್ರಿಕ ಮತ್ತು ಸ್ವಾರಸ್ಯವಿಹೀನ ವಿಧಾನ ವಿದ್ಯಾರ್ಥಿಗಳಲ್ಲಿ ಅಸಡ್ಡೆ ಮೂಡುವಂತೆ ಮಾಡಿರುವುದು

ಸುಳ್ಳಲ್ಲ. ವಿಜ್ಞಾನದ ಕ್ಲಿಷ್ಟವಾದ ಸಂಗತಿಗಳನ್ನು, ವಿವರಗಳನ್ನು ಹೋಲಿಕೆ ಸಾಮತಿ ಮುಂತಾದ ರೀತಿಗಳಿಂದ ರೋಚಕವಾಗಿ ಬಣ್ಣಿಸುವುದು, ತನ್ಮೂಲಕ ವಿಷಯವನ್ನು ಮನದಟ್ಟಾಗಿಸುವುದು ಸಾಧ್ಯವೆಂಬುದನ್ನು ನಾನು ನನ್ನ ಮೂವತ್ತೈದು ವರ್ಷಗಳ ಭೂವಿಜ್ಞಾನದ ಅಧ್ಯಾಪನದಲ್ಲಿ ಕಂಡುಕೊಂಡಿದ್ದೇನೆ. ಅದರಲ್ಲೂ, ಇಂಗ್ಲೀಷಿನಲ್ಲಿ ಸಾಂಪ್ರದಾಯಿಕವಾಗಿ ಉಪನ್ಯಸಿಸಿದ ಬಳಿಕ ಅದನ್ನು ತಿಳಿಗನ್ನಡದಲ್ಲಿ ವಿವರಿಸಿದಾಗ ವಿದ್ಯಾರ್ಥಿಗಳ ಗಂಭೀರ ಮುಖದ ಮೇಲೆ ಮೂಡುತ್ತಿದ್ದ ಪ್ರಫುಲ್ಲತೆಯ ಕಳೆಯನ್ನು ಕಂಡು ಬೆರಗಾಗಿದ್ದೇನೆ.

ವಿಜ್ಞಾನ ಗಂಡಭೇರುಂಡದ ಹಾಗೆ: ಅದರ ಒಂದು ಕಡೆ ಮಾನವೋತ್ಸವದ, ಧೀ ಸಾಹಸದ ಪ್ರಸನ್ನ ಮುಖಮುದ್ರೆ ಇದೆ. ಮತ್ತೊಂದರಲ್ಲಿ ಅವಾಂತರ ಅನಾಹುತದ, ಸಂಕಟ ಸಾವಿನ ವಿಕಟಾಟ್ಟಹಾಸದ ರೌದ್ರಭಂಗಿಯಿದೆ. ಏನೇ ಇರಲಿ, ಎರಡು-ಎರಡೂವರೆ ಶತಮಾನಗಳಿಂದ ಲೋಕ ಜೀವನದ ಮುನ್ನಡೆಯ ಶೈಲಿ ವೇಗಗಳನ್ನು ಗುರುತಿಸಲು ಕಷ್ಟಸಾಧ್ಯವಾಗುವಷ್ಟು ಬದಲಿಸುವಲ್ಲಿ ಅದು ಮಹತ್ತರ ಪಾತ್ರವನ್ನು ವಹಿಸಿದೆ. ಮುಂದೆಯೂ ಅದಕ್ಕೆ ಕಡಾಣಿ ಹಾಕುವುದು ಸಾಧ್ಯವಾಗದು.

ವೈಜ್ಞಾನಿಕ ಅನ್ವೇಷಣೆ, ಆವಿಷ್ಕಾರಗಳು ಜಗತ್ತಿನ ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಚಿಂತನೆಗಳನ್ನು ತಿದ್ದಿ ಹೊಸದಾಗಿ ರೂಪಿಸುತ್ತಿರುವುದರ ಜೊತೆಗೆ ಮನುಷ್ಯನ ನೈತಿಕ ಕಲ್ಪನೆಗಳನ್ನು ಬದಲಿಸುತ್ತಿವೆ. ಊರಿದ್ದಲ್ಲಿ ಹೊಲೆಗೇರಿ ಇರುವಂತೆ, ವಿಜ್ಞಾನದ ಈ ಕೈಚಾಚಿನಲ್ಲೇ, ವ್ಯಕ್ತಿಮಟ್ಟದಿಂದ ರಾಷ್ಟ್ರದ ಹಂತದವರೆಗೆ ಲೋಭ, ಸ್ವಾರ್ಥ, ಸ್ಪರ್ಧಾಭಾವಗಳನ್ನು ಪ್ರಚೋದಿಸುವ ಅಸಹ್ಯ ಹುನ್ನಾರಗಳು ಸಹ ನಡೆದಿವೆ. ಹೀಗಿದ್ದಾಗಲೂ ಅನೇಕ ಸಂಪ್ರದಾಯ, ಮತಧರ್ಮ, ಆಚಾರ ವಿಚಾರ, ವರ್ಗ, ವರ್ಣಗಳ ವಿಭಿನ್ನ ಜರನ್ನು ಒಂದುಗೂಡಿಸಿರುವ ಅಗ್ಗಳಿಕೆ ವಿಜ್ಞಾನದ್ದು. ವಿಜ್ಞಾನ ಮತ್ತು ತಂತ್ರಜ್ಞಾನ ದತ್ತವಾದ ಸಂಚಾರ ವ್ಯವಸ್ಥೆ, ದೂರಗಾಮಿ ತಂತಿ ಸೌಕರ್ಯಗಳು, ಟಿ.ವಿ., ರೇಡಿಯೊ, ಗಣಕ ಯಂತ್ರ, ನಿತ್ಯ ಗೃಹಪಯೋಗಿ ಸಲಕರಣೆಗಳು ಮೊದಲಾದವುಗಳಿಂದ; ಏಕ ರೀತಿಯ ಉಡುಗೆ ತೊಡುಗೆಗಳ ತಯಾರಿಕೆಯಿಂದ; ಒಂದೇ ರೀತಿಯ ದೈನಂದಿನ ಅಭ್ಯಾಸಗಳಿಂದ ವಿವಿಧ ಮನೋಧರ್ಮದ, ವರ್ಗದ ಸಾಮಾಜಿಕರಲ್ಲಿ ಒಂದು ವ್ಯವಸ್ಥಿತ ಹಾಗೂ ಅಂತಃಸಂಬಂಧಿಯಾದ ಹೊಂದಾವಣೆ ನೆಲೆಗೊಂಡಿದೆ. ಕೋಟ್ಯಾಂತರ ಭಿನ್ನ ಬಗೆಯ ವ್ಯಕ್ತಿಗಳನ್ನು ಒಂದುಗೂಡಿಸಿರುವ ವಿಜ್ಞಾನದ ಈ ಸಾಮರ್ಥ್ಯವನ್ನು ಹಿಂದಿನ ಶತಮಾನಗಳಲ್ಲಿ ಬೇರಾವುದೂ ಪಡೆದಿರಲಿಲ್ಲವೆಂದರೆ ಅತ್ಯುಕ್ತಿಯಾಗದು. ಮತ ಧರ್ಮ ಸಹ ಇದಕ್ಕೆ ಹೊರತಲ್ಲ. ಹೀಗಾಗಿ, 'ವಿಜ್ಞಾನ ಸಂಸ್ಕೃತಿ' ನಿರ್ದಿಗಂತಸ್ವರೂಪಿಯಾದದ್ದು.

ವಿಜ್ಞಾನದ ತಿಳಿವಳಿಕೆಯಿಂದ ಸೃಷ್ಟಿಯ ನಿಸ್ಸೀಮತೆ ಅಮೇಯತೆಗಳ ಅರಿವು, ಸಚರಾಚರ ಸಕಲವೂ ಒಂದು ವಿಹಿತವಾದ ಬಾಂಧವ್ಯದಲ್ಲಿ ಐಕ್ಯತ್ವವನ್ನು ಸ್ಥಾಪಿಸಿಕೊಂಡಿರುವ ತಿಳಿವು, ನಿಸರ್ಗವನ್ನು ಪಳಗಿಸಿ ವಶಮಾಡಿಕೊಂಡು ಉತ್ತುಂಗತೆಗೆ ಏರುತ್ತಿರುವ ಮಾನವ ಸಾಹಸ ಹಾಗೂ ಮೇಲ್ಮೆ ನಮಗೆ ಮನದಟ್ಟಾಗುತ್ತದೆ.

ಇವುಗಳಿಂದ ನಮ್ಮಲ್ಲಿ ಮೂಡುವ ಸಮ್ಯಕ್ ದರ್ಶನದ ಭಾವನೆ ಆಧ್ಯಾತ್ಮಿಕತೆಯ ಕಡೆಗೆ ಮನಸ್ಸನ್ನು ಹೊರಳಿಸಲು ಸಹಕಾರಿಯಾಗಬಲ್ಲದು. ಸೃಷ್ಟಿಯ ಕೂಲಂಕಷವಾದ ವಿವೇಚನಾಧ್ಯಯಗಳ ಉಪಕಾರದಿಂದ ಅದರ ಅಪಾರತೆ, ಅಗಮ್ಯತೆಗಳ ವಿಸ್ಮಯಕರ ಕಲ್ಪನೆ ನಮ್ಮಲ್ಲಿ ಮೂಡುತ್ತದೆ. ಆದಿಭೌತಿಕ ಶಕ್ತಿಯ ಅಸ್ತಿತ್ವ, ಮತ್ತು ಸಾರ್ವಭೌಮತ್ವಗಳ ಅರಿವನ್ನು ನಾವು ಹೊಂದಲು, ಆ ದಿಸೆಯಲ್ಲಿ ಚಿಂತಿಸಲು ಅನುವಾಗುತ್ತದೆ. ಈ ನಿಟ್ಟಿನಿಂದ ನೋಡಿದಾಗ ವಿಜ್ಞಾನದ ಸಂಶೋಧನೆಗಳು ಅಧ್ಯಾತ್ಮ, ಧರ್ಮಗಳಿಗೆ ವಿರೋಧಿಯಾಗಬೇಕಾಗಿಲ್ಲ. ಮಹಾವಿಜ್ಞಾನಿ ಐನ್‌ಸ್ಟೈನ್ ಅವರು ಹೇಳುವ 'Metaphysics beings when physics ends' ಎನ್ನುವ ಮಾತು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ವಿಜ್ಞಾನದ ತರ್ಕ, ವಿಚಾರಗಳ ಸೀಮೆ ಮುಗಿದ ಅನಂತರ ಅಧ್ಯಾತ್ಮದ ಭವ್ಯ ಅಂತರ್‌ಲೋಕ ಅನಾವರಣಗೊಳ್ಳುತ್ತದೆ. ವಿಜ್ಞಾನ ನೀಡುವ ಅನುಭವಕ್ಕೂ ಪರಾನುಭೂತಿಗೂ ಇರುವಂತಹ ಅವಿನಾ ಸ್ವರೂಪದ ಬಾಂಧವ್ಯವನ್ನು ವಿದ್ವತ್‌ಕವಿ ಡಿ.ವಿ.ಜಿ. ಅಭಿವ್ಯಕ್ತಿಸಿರುವುದು ಹೀಗೆ :

ಆಮೂಲಮದರಿರವನ್ ಅರಸಲ್ ಅದು ವಿಜ್ಞಾನ ।
ಸಾಮಗ್ರ್ಯದಿಂ ಕಾಣಲ್ ಅದುವೆ ದಿವ್ಯಜ್ಞಾನ ॥

– ಹೀಗೆ ಸಾಧನೆಗೆ ಪೂರಕವಾದ ಅವುಗಳ ಮೌಲ್ಯಕ್ಕೆ ಮಿತಿ ಮೇರೆ ಇರದು. ಹೀಗಲ್ಲದೆ, ವಿನಾಶಾತ್ಮಕ ಉದ್ದೇಶಗಳಿಗೆ ಉಪಬಳಕೆಯಾದಾಗ ಜಗದ್ವಸ್ತುಗಳ ನೈತಿಕ ಬೆಲೆ ಪ್ರಪಾತಕ್ಕೆ ಕುಸಿದುಹೋಗುತ್ತವೆ. ಒಟ್ಟಿನಲ್ಲಿ, ಹಲವು ಶತಕಗಳ ಪಾರತಂತ್ರ್ಯದ ದೆಸೆಯಿಂದ ಸಕಲ ಸಂಪನ್ಮೂಲಗಳನ್ನು ಪರಕೀಯರ ಪುರೋಭಿವೃದ್ಧಿಗೆ ಪೋಲುಗೊಳಿಸಿ ಕೈ ಚೆಲ್ಲಿ ಕೂತಿರುವ ನಮ್ಮ ಮಹಾನ್‌ರಾಷ್ಟ್ರದಲ್ಲಿ ಇಂದು ಮೊದಲ ಮಾನ್ಯತೆ ಸಿಗಬೇಕಾದದ್ದು ವಿಜ್ಞಾನದ ವಾಸ್ತವತೆಯ ಗಟ್ಟಿ ನೆಲಕ್ಕೆ ವಿನಾ ಭಾವನಾವಶಿಯಾಗಿಸುವ ಜೀವನ ವಿಮುಖಿ ವಿಷಯಗಳ ಅಮೂರ್ತ ನೀಲಿಮೆಗಲ್ಲ.

ವಿಜ್ಞಾನದ ಕಲ್ಪನೆ ಮನುಷ್ಯ ಯೋಚಿಸಲು ಪ್ರಾರಂಭಿಸಿದಾಗಿನಿಂದಲೂ ಅವನ ಬಾಳಿನೊಂದಿಗೆ ಬೆಸೆದುಹೋಗಿದೆ. ಮುಂದುವರಿದಿರುವ ಇಂದಿನ ಕಾಲಕ್ಕಿಂತ ಹಿಂದೆ ಅದು ಆವಿಷ್ಕರಿಸಿದ, ಪ್ರಸ್ತುತ ಕಾಲಕ್ಕೆ ಸಾಧಾರಣವೆನ್ನಿಸಬಹುದಾದ ಸಂಗತಿಗಳು ಹೆಚ್ಚು ಮಹತ್ವಪೂರ್ಣ ಮತ್ತು ಕೌತುಕದಾಯಕವೆನ್ನಿಸುತ್ತವೆ. ನೀರಿನಿಂದ ವಿದ್ಯುತ್ತನ್ನು ಸೆಳೆದುಕೊಂಡದ್ದು ವಿಜ್ಞಾನದ ಹಿರಿಮೆಯಲ್ಲ. ಚಕಮಕಿ ಕಲ್ಲಿನಿಂದ ಕಿಡಿ ಹೊಮ್ಮಿಸಿ ಉರಿಯನ್ನಾಗಿಸಿ ಬಳಸಿದು ಮಹತ್ಸಾಧನೆ.

ಭೌತಿಕ ಸೌಕರ್ಯಗಳನ್ನು ಹೆಚ್ಚಿಸುವ ವಸ್ತುಗಳ ಉತ್ಪಾದನೆ, ಮಾಹಿತಿ ತಂತ್ರಜ್ಞಾನದ ವಿಸ್ಮಯಕರ ಬೆಳವಣಿಗೆ ಮತ್ತು ಬಳಕೆ ಇಂದು ಅಗಾಧವಾಗಿದೆ; ಶಕ್ತಿಪೂರ್ಣವಾಗಿದೆ. ಆದರೆ, ಅದನ್ನು ಸರಿಸಮವಾಗಿ ಜೀವನದ ಎಲ್ಲಾ ಸ್ತರಗಳಿಗೆ ವಿತರಿಸುವಲ್ಲಿ ಮಾತ್ರ ನಮ್ಮ ದೇಶ ವೈಫಲ್ಯವನ್ನು ಅನುಭವಿಸುತ್ತಿದೆ. ಇದರ ದೆಸೆಯಿಂದ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಬದುಕನ್ನು ಹೋಲಿಸುವುದಿರಲಿ, ನಗರದಲ್ಲೇ ಹಲವು ಪದರದ ಜೀವಿತ ವಿಧಾನಗಳು ಏರ್ಪಟ್ಟಿರುವುದು ಸುವಿದಿತವಾಗುತ್ತಿದೆ.

ಒಂದು ರಾಷ್ಟ್ರದ ವಿವಿಧ ಭಾಗಗಳಲ್ಲಿ ಹಲವು ತೆರನಾದ ಹಾಗೂ ಮಟ್ಟದ ಜೀವನ ವಿಧಾನಗಳಿದ್ದರೆ ಅದು ಘನತೆ, ಗೌರವದ ಸಂಗತಿ ಎನ್ನಿಸುವುದಿಲ್ಲ; ಪಡೆದ ಸ್ವಾತಂತ್ರ್ಯಕ್ಕೆ ಅರ್ಥವೂ ಉಳಿಯುವುದಿಲ್ಲ. ಒಟ್ಟಂದದಲ್ಲಿ ಹಲವಾರು ಆಳಗಳ ದಾರಿದ್ರ್ಯದ ಕಡಲಿನಲ್ಲಿ ವಾಸ್ತವದ ಅಣಕದಂತೆ ಅನುಕೂಲವಂತಿಕೆಯ, ಸಿರಿತನದ ಕೆಲವು ದ್ವೀಪಗಳು ತೇಲಿರುವುದು ಶೋಚನೀಯ ಎನ್ನಿಸುತ್ತದೆ. ಇದರ ಪರಿಣಾಮವೆಂದರೆ ಒಟ್ಟು ಜನಪದದಲ್ಲಿ ಸಮಗ್ರ ಎಚ್ಚರವಾಗಲಿ, ಏಕೋದೃಢವಾದ ರಾಷ್ಟ್ರೀಯ ಭಾವನೆಯಾಗಲಿ ಕಾಣೆಯಾಗಿರುವುದು. ತಿಳಿವು ಅವಿವೇಕದ ಜೊತೆಗೆ, ಸಾಹಸ ಪ್ರವೃತ್ತಿ ಜೋಬದ್ರ ಜಡತೆಯೊಂದಿಗೆ ಕೈ ಮಿಲಾಯಿಸಿ ಹೆಜ್ಜೆ ಹಾಕಿದೆ.

ನಮ್ಮ ಪ್ರತಿಭಾವಂತ ವೈಜ್ಞಾನಿಕರು, ತಂತ್ರಜ್ಞರು, ವಿಜ್ಞಾನವಿಷಯ ಬೋಧಕರು ಪ್ರಯೋಗಾಲಯಗಳಲ್ಲಿ ಕಾರ್ಯೋನ್ಮುಖರಾಗಿರುವಾಗ ವ್ಯಕ್ತಗೊಳಿಸುವ ಸತ್ಯೋಪಾಸಕರ ನಿಷ್ಠುರ ನೀತಿಗೂ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದಾಗ ತಾಳುವ ರಾಜಿ ಸಮಜಾಯಿಷಿಗಳ ಅವೈಚಾರಿಕ ನಿಲವಿಗೂ ಅರ್ಥಾರ್ಥ ಸಂಬಂಧ ಗೋಚರಿಸುವುದು. ಅಮೇರಿಕದಲ್ಲಿ ನಡೆಯುವ ವಿಶ್ವ ವಿಜ್ಞಾನಾಧಿವೇಶನದಲ್ಲಿ ಭಾಗವಹಿಸಲು ಹೋಗುವಾಗ ರಾಹುಕಾಲ, ಗುಳಿಕ ಕಾಲದ ಪರಿಗಣನೆ, ಶುಭ ಶಕುನಗಳ ನಿರೀಕ್ಷೆ ಇತ್ಯಾದಿ ಅಂಧ ಶ್ರದ್ಧೆಗಳು ಭಾರತೀಯ ವಿಜ್ಞಾನಿಯ ಮನಸ್ಸನ್ನು ಆವರಿಸದಿದ್ದರೆ ಅಚ್ಚರಿ ಪಡಬೇಕು. ಇದರ ಜೊತೆಗೆ ನಮ್ಮ ವಿದ್ಯಾರ್ಥಿಗಳಿಗೆ ವಿಜ್ಞಾನ ಎನ್ನುವುದು ಪರೀಕ್ಷೆಗಳನ್ನು ದಾಟಿಸುವ ಕೇವಲ ತತ್ವರೂಪಿಯಾದ ಕಲಿಕೆಯೇ ಹೊರತು ಅದನ್ನು ಬದುಕಿನಲ್ಲಿ ರೂಢಿಸಿಕೊಳ್ಳುವ ಪ್ರಾಯೋಗಿಕ ಸ್ವರೂಪವದ ವಾಸ್ತವತೆಯಲ್ಲ.

ಪ್ರಯೋಗ ಶಾಲೆಗಳಲ್ಲಿ ಕಪ್ಪೆ, ಜಿರಲೆ ಮತ್ತು ಸಸ್ಯಗಳನ್ನು ನೀಟಾಗಿ ಛೇದಿಸಿ ಜೋಡಿಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮನೆಯಲ್ಲಿ ತಮ್ಮ ಸಾಮಾನು ಗಳನ್ನೋ, ಪುಸ್ತಕಗಳನ್ನೋ ಪೇರಿಸಿಡುವ ಪರಿ ಮತ್ತು ತರಕಾರಿಯನ್ನು ಹೆಚ್ಚುವ ಅವೈಜ್ಞಾನಿಕ ವಿಧಾನ ನಗೆ ತರಿಸುತ್ತದೆ. ಮೊತ್ತದಲ್ಲಿ, ಮನುಷ್ಯನಿಗೆ ವಿಜ್ಞಾನದಿಂದ ಉಪಕಾರವಾಗಬೇಕಾದದ್ದು ಇಬ್ಬಗೆಯಲ್ಲಿ; ಅದರ ಪ್ರಾಯೋಗಿಕ ವಸ್ತು ಸಮುಚ್ಚಯದ ತಯಾರಿಕೆಯಿಂದ ಸಮಷ್ಟಿಯ ಐಹಿಕಾಭಿವೃದ್ಧಿ ಮತ್ತು ಅದರ ಸೈದ್ಧಾಂತಿಕ ಸ್ವರೂಪದ ಬುನಾದಿಯಾಗಿರುವ ವೈಜ್ಞಾನಿಕ ಮನೋಭೂಮಿಕೆ ಮತ್ತು ವಿಚಾರಪರತೆಯನ್ನು ವ್ಯಷ್ಟಿ ಹಂತದಲ್ಲಿ ಮೈಗೂಡಿಸಿಕೊಳ್ಳುವ ತುರ್ತು.

'ಕಲೆಗಾಗಿ ಕಲೆ' ಎನ್ನುವುದು ಎಷ್ಟು ಅಸಂಗತವೋ, 'ವಿಜ್ಞಾನಕ್ಕಾಗಿ ವಿಜ್ಞಾನ' ಎನ್ನುವ ಹೇಳಿಕೆ ಸಹ ಅಷ್ಟೇ ಅರ್ಥಗೇಡಿ. ಅಧ್ಯಯನ ಸಂಶೋಧನೆಗಳು ಜನಪರವಾಗಿ ಯಾವುದಾದರೂ ಒಂದು ಬಗೆಯಲ್ಲಿ ಬಾಳಿಗೆ ಅನ್ವಯವಾಗದಿದ್ದರೆ ಅವುಗಳ ತೊಡಗುವಿಕೆ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೆ. ಸಂಶೋಧನೆಗಳು

ಹೆದ್ದಾರಿಗಳಿದ್ದ ಹಾಗೆ. ತಮಗೆ ತಾವೇ ಪೂರ್ಣವಲ್ಲ. ಅವು ಅಂತಿಮ ಗುರಿಯಲ್ಲಿ ಕೊಡಬೇಕು; ಅಪೇಕ್ಷಿತ ಗಮ್ಯಕ್ಕೆ ಒಯ್ಯಬೇಕು. ವಿಶೇಷಾಧ್ಯಯನ ಶೋಧಗಳು ಪರಸ್ಪರ ಹೊಂದಾಣಿಕೆಯಾಗಿ ಸುಸಂಘಟಿತಗೊಂಡು ಅರ್ಥಪೂರ್ಣವಾದ ಅಂತ್ಯದಲ್ಲಿ ಐಕ್ಯಗೊಳ್ಳಬೇಕು. ಈ ಬಗೆಯಲ್ಲಿ, ಬಿಡಿಗಳು ಇಡಿಯಲ್ಲಿ ಸಂಲಗ್ನ ಗೊಂಡಾಗ ವಿಜ್ಞಾನಕ್ಕೆ ಪ್ರಾಯೋಗಿಕ ಮಹತ್ವದ ಅಂತಸ್ತು ಲಭಿಸುತ್ತದೆ.

ಇದೇ ಸಂದರ್ಭದಲ್ಲಿ ವಿಜ್ಞಾನದ ಪರಮೋಚ್ಚ ಸಾಧನೆಗಳಲ್ಲಿ ಒಂದೆಂದು ಭಾವಿಸಬಹುದಾದ ಗಣಕ ಯಂತ್ರಗಳ ಬಗ್ಗೆ ಹೇಳದಿದ್ದರೆ ನನ್ನ ಅಧ್ಯಕ್ಷೋಪನ್ಯಾಸ ಅಪೂರ್ಣವೆನ್ನಿಸುತ್ತದೆ ಮತ್ತು ಅದರ ಬಹುಮುಖ ಸಾಧನೆಯ ಪ್ರಸ್ತುತತೆಯನ್ನು ಕಡೆಗಣಿಸಿದಂತಾಗುತ್ತದೆ. ಒಂದು ಅರ್ಥದಲ್ಲಿ ಇಂದಿನದು ಗಣಕ ಯಂತ್ರಗಳ ಅಥವಾ ಕಂಪ್ಯೂಟರ್‌ಗಳ ಯುಗ. ಗಣಕ ಯಂತ್ರಗಳು ಇಂದು ಜಗತ್ತಿನ ಎಲ್ಲೆಡೆಗಳಲ್ಲಿ, ಹಳ್ಳಿ ಪಟ್ಟಣಗಳ ವ್ಯತ್ಯಾಸವಿಲ್ಲದಂತೆ ಪ್ರತಿ ರಾಷ್ಟ್ರದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದೆ. ಅವುಗಳಿಲ್ಲದೆ ನಮ್ಮ ಜೀವನ ಮುಂದಡಿ ಇಡಲಾಗದೆಂಬ ಮಹತ್ವವನ್ನು, ಅನಿವಾರ್ಯತೆಯನ್ನು ಪಡೆಯುತ್ತಿವೆ. ಹಾದಿ ಬೀದಿಗಳಲ್ಲಿ ಅವುಗಳ ಬಳಕೆಗಾಗಿ ತೆರೆದಿರುವ ಅಂಗಡಿಗಳಿರಲಿ, ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿರಲಿ, ವೈಯಕ್ತಿಕವಾಗಿ ಕೂಡ ಮನೆಮನೆಗಳಲ್ಲೂ ಅನಿವಾರ್ಯವೆಂಬಂತೆ ಅವು ರಾರಾಜಿಸುತ್ತಿವೆ. ಕಂಪ್ಯೂಟರ್‌ಗಳ ಮೂಲಕ ಅನಾವರಗೊಳ್ಳುತ್ತಿರುವ ವಿವಿಧ ರೀತಿಯ ಅದ್ಭುತ ಜ್ಞಾನದ ಆಕರಗಳು ಮನುಷ್ಯನ ಧೀಮಂತಿಕೆಯ ಮಹೋನ್ನತ ಮತ್ತು ಪ್ರತಿಷ್ಠಿತ ಸಂಕೇತಗಳಾಗಿವೆ. ಕೆಲವೇ ದಶಕಗಳ ಅವಧಿಯಲ್ಲಿ ಅವು ಗಳಿಸಿರುವ ವ್ಯಾಪ್ತಿ, ಬಳಕೆಯ ವಿವಿಧತೆ ಮತ್ತು ಪಡೆದಿರುವ ಹಾಗೂ ಪಡೆಯುತ್ತಿರುವ ಜನಾದರಣೀಯತೆಗೆ ಮತ್ತಾವ ಆಧುನಿಕ ಸಂಶೋಧನೆಯೂ ಸರಿಸಾಟಿಯಾಗದು. ಅತ್ಯಂತ ಹಿಂದುಳಿದ ನಿರ್ಲಕ್ಷಿತ ಪ್ರದೇಶಗಳಲ್ಲೂ ಇಂದು ಗಣಕ ಯಂತ್ರ ಪ್ರಚಲಿತವಾಗಿದೆ ಎಂದರೆ, ಜನ ಜೀವನದಲ್ಲಿ ಅದರ ಪಾತ್ರದ ಮಹತ್ವ ನಮಗೆ ಮನವರಿಕೆ ಆಗಬಲ್ಲದು.

ಆರ್ಥಿಕ ನಿಟ್ಟಿನಿಂದ ಗಮನಿಸಿದಾಗ ಗಣಕ ಯಂತ್ರಗಳು ಇಂದು ರಾಷ್ಟ್ರಗಳಿಗೆ ವರದಾನಗಳಾಗಿ ಪರಿಣಮಿಸಿವೆ. ಹಾಗೂ ಪ್ರಗತಿಯ ಎಣಿಕೆಯಲ್ಲಿ ಪ್ರಮುಖ ಮಾನದಂಡವೆನ್ನಿಸಿವೆ. ದೇಶಗಳಿಗೆ ಸಂಪತ್ಸಮೃದ್ಧಿಯನ್ನು ದಯಪಾಲಿಸುವುದರ ಜೊತೆಗೆ ಅಭೂತಪೂರ್ವವಾದ ಉದ್ಯೋಗ ಸೃಷ್ಟಿಯನ್ನೂ ಮಾಡಿವೆ. ತತ್ಫಲವಾಗಿ ಬದುಕಿನ ಮಟ್ಟವನ್ನು ಎತ್ತರಿಸುತ್ತಿವೆ. ಇವು ನಮ್ಮ ಶತಮಾನದ ಜನ ಜೀವನದ ಅವಿಭಾಜ್ಯ ಅಂಗಗಳು. ಬಾಳಿನ ಎಲ್ಲ ಆಗುಹೋಗುಗಳು, ಸರ್ವ ವಹಿವಾಟುಗಳು ಮತ್ತು ವ್ಯವಹಾರಗಳು ಈ ಪುಟ್ಟ ಯಂತ್ರವನ್ನು ಅವಲಂಬಿಸಿರುವುದು ಆಶ್ಚರ್ಯಕರ ವೆನ್ನಿಸುತ್ತದೆ. ಇಂದು ಅತ್ಯಂತ ತ್ವರಿತ ಗತಿಯಲ್ಲಿ ಮುಂದುವರಿಯುತ್ತಿರುವ ಆಧುನಿಕ ಮಾಹಿತಿ ತಂತ್ರಜ್ಞಾನವನ್ನು ಈ ಯಂತ್ರಗಳು ಅಳವಡಿಸಿಕೊಂಡು ಜನ ಸಾಮಾನ್ಯರ ಬಳಕೆಗೂ ನಿಲುಕುವಂಥ ಗಣಕ ಪರಿಕರಗಳನ್ನು ಇಂದಿನ ಕಾಲದಲ್ಲಿ ಸರ್ವತ್ರವಾಗಿ ಉಪಯೋಗಕ್ಕೆ ತರುತ್ತಿವೆ. ಬಹು ಮುಖ್ಯವಾಗಿ ಮತ್ತು ಕನ್ನಡಿಗರು ಹೆಮ್ಮೆ ಪಡುವಂತೆ

ಬೆಂಗಳೂರಿನ ಮಾಹಿತಿ ತಂತ್ರಜ್ಞಾನದ ಪರಿಣತಿ ವಿಶ್ವದಲ್ಲೇ ಅಗ್ರಗಣ್ಯವೆನಿಸಿದೆ, ಲೋಕ ವಿಖ್ಯಾತಿ ಪಡೆದಿದೆ.

ಭಾಷೆಗೆ ಸಂಬಂಧಿಸಿದಂತೆ ಗಣಕ ಯಂತ್ರ ಹೆಚ್ಚು ಉಪಕಾರಕ ಮತ್ತು ಉಪಯೋಗಸಾಧ್ಯವೆನ್ನಿಸುತ್ತಿರುವುದು ಸಂತೋಷ ಪಡಬೇಕಾದ ವಿಚಾರ. ಕನ್ನಡ ಮತ್ತು ಕಂಪ್ಯೂಟರ್‌ನ ನಂಟು, ಸಹಯೋಗ ಸಹಕಾರಗಳು ಈಗಾಗಲೇ ಶ್ಲಾಘ್ಯವೆನ್ನಿಸುವಷ್ಟು ಪ್ರಗತಿ ಪಥದಲ್ಲಿ ಸಾಗುತ್ತಿವೆ. ಇನ್ನೂ ಹೆಚ್ಚಿನ ವೇಗ ಮತ್ತು ಮುನ್ನಡೆಯನ್ನು ಸದ್ಯದ ಭವಿಷ್ಯತ್ತಿನಲ್ಲೇ ಪಡೆದು ಸಾಗುವುದರಲ್ಲಿ ಸಂದೇಹವಿಲ್ಲ. ಮುಖ್ಯವಾಗಿ ಸಂಗತಿ ಎಂದರೆ, ಈ ಕ್ಷೇತ್ರದಲ್ಲಿ ಮೂಲ ಇಂಗ್ಲೀಷನಷ್ಟೇ ಸುಸೂತ್ರವಾಗಿ ಮತ್ತು ಯಶಸ್ವಿಯಾಗಿ ಕನ್ನಡವನ್ನು ಬಳಸಲು ಸಾಧ್ಯವಾಗುವಂತಹ ತಾಂತ್ರಿಕತೆಯ ಅಭಿವೃದ್ಧಿಯಾಗಿರುವುದು ಹಾಗೂ ಈ ನಿಟ್ಟಿನಲ್ಲಿ ಇತರ ಭಾರತೀಯ ಭಾಷೆಗಳಿಗಿಂತ ಗಣನೀಯವಾದ ಪ್ರಗತಿಯನ್ನು ಸಾಧಿಸಿರುವುದು. ಈ ಉದ್ದೇಶದಿಂದ ಕನ್ನಡ ಭಾಷೆಯ ಸಂಸ್ಕರಣೆಯ ಹಲವಾರು ತಾಂತ್ರಿಕ ಪರಿಕರಗಳು ಇಂದು ಸಿದ್ಧವಾಗಿವೆ ಹಾಗೂ ಉಪಯೋಗಕ್ಕೆ ಬರುತ್ತಿವೆ. ಇಂತಹ ಹಿನ್ನೆಲೆಯಲ್ಲಿ ನಮ್ಮ ನಾಡು ನುಡಿ ಮತ್ತು ಜನಪದಕ್ಕೆ ಸಂಬಂಧಿಸಿದ ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಇನ್ನಿತರ ಪ್ರಕಾರಗಳಲ್ಲೂ ನಮ್ಮ ಭಾಷೆಯನ್ನು ವ್ಯಾಪಕವಾಗಿ, ಹೆಚ್ಚು, ವೈವಿಧ್ಯಮಯವಾಗಿ ಬಳಸುವುದು ನಮ್ಮ ಅಂತಿಮ ಆಶಯವಾಗಿರುತ್ತದೆ. ಆದ್ದರಿಂದ ಭಾಷೆಯ ಸಂಸ್ಕಾರಗಳಿಗೆ ಅಣಿಯಾಗಿರುವ ಹಲವು ಬಗೆಯ ತಾಂತ್ರಿಕ ಪರಿಕರಗಳನ್ನು ಆಯ್ಕೆ ಮಾಡಿ ಉಪಯೋಗಿಸಿಕೊಳ್ಳುವುದು ಈಗ ಅಗತ್ಯವಾಗಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಈವರೆವಿಗೂ ಆಗಿರುವ ಮತ್ತು ಮುಂದೆ ಆಗಬೇಕಾಗಿರುವ ಪ್ರಗತಿಪರ ಕೆಲಸಗಳನ್ನು ಗಮನಿಸಬಹುದು.

ನಮ್ಮ ಸರ್ಕಾರ ಕ್ರಮಕ್ರಮವಾಗಿ ಆಡಳಿತದಲ್ಲಿ ವಿದ್ಯುನ್ಮಾನದ ಬಳಕೆಯನ್ನು ಜಾರಿಗೆ ತರುತ್ತಿರುವುದು ಪ್ರಶಂಸನೀಯ. ಸದ್ಯಕ್ಕೆ ಇವುಗಳಲ್ಲಿ ಕೆಲವು ಕನ್ನಡದಲ್ಲಿವೆ. ಮುಂದೆ ಈ ಆಡಳಿತ ಪೂರ್ತಿಯಾಗಿ ನಮ್ಮ ನುಡಿಯಲ್ಲೇ ಇರಬೇಕಾಗುತ್ತದೆ. ಇದಕ್ಕೆ ಸಾರ್ವಜನಿಕ ಹಕ್ಕೊತ್ತಾಯದ ಮಂಡನೆ ಅಗತ್ಯ.

ನುಡಿಯ ವಿವಿಧ ಆಯಾಮದ ಬೆಳವಣಿಗೆ ಹಾಗೂ ಬಹೂಪಯೋಗದ ಜೊತೆಯಲ್ಲೇ ಗಣಕ ಯಂತ್ರದಿಂದ ಸಾಹಿತ್ಯಕ್ಕೆ ಆಗಿರುವ ಮತ್ತು ಆಗಬೇಕಾಗಿರುವ ಸಹಾಯ ಅಪಾರ. ಇಂದು ಅದು ನೆರವೇರಿಸಿರುವ ಮುದ್ರಣ ಜಗತ್ತಿನ ಕ್ರಾಂತಿಕಾರಕ ಎನ್ನಿಸುವ ವರ್ಣಾಕರ್ಷಕ ವೈವಿಧ್ಯಕ್ಕೆ, ಅಕ್ಷರಗಳ ವಿಶಿಷ್ಟ ಮತ್ತು ಹಲವು ತೆರನಾದ ಬಳಕೆಗೆ ಗಣಕ ಯಂತ್ರದ ತಂತ್ರಾಂಶಗಳ ದೇಣಿಗೆ ಅತ್ಯಮೂಲ್ಯವಾದುದು. ಇಂದಿನ ಅಚ್ಚಿನ ಕಲಾತ್ಮಕತೆ ಆಶ್ಚರ್ಯಜನಕವಾದದ್ದು. ಸಾಂದ್ರಿಕೆ(ಸಿ.ಡಿ)ಗಳಲ್ಲಿ ಇದು ನಾನೇ ಟಂಕಿಸಿರುವ ಪದ) ಸಹಸ್ರಾರು ಪುಟಗಳ ಬೃಹತ್ ಗ್ರಂಥಗಳ ವಿಷಯಗಳನ್ನೇ ಅತ್ಯಂತ ಅಡಕಗೊಳಿಸಿ ಶೇಖರಿಸಿಡುವ ವಿಧಾನ ಮತ್ತಿತರ ಸಂಗತಿಗಳನ್ನು

ಗಮನಿಸಿದಾಗ ನಮ್ಮ ಭವಿಷ್ಯದಲ್ಲಿ ಸಾಹಿತ್ಯ ವಿತರಣ ಸೌಲಭ್ಯ ಯಾವ ಹಂತವನ್ನು ಮುಟ್ಟಬಹುದು ಎಂಬ ಕಲ್ಪನೆ ನಮಗಾಗಬಹುದು.

ಖಾಸಗಿ ಮತ್ತು ಸರಕಾರಿ ಅಂತರ್ಜಾಲ ತಾಣಗಳು ಇಂದು ಕನ್ನಡ ಮಾಧ್ಯಮದಲ್ಲಿರುವುದು ಹೆಮ್ಮೆ ಮೂಡಿಸುವ ವಿಚಾರ. ಇಲ್ಲಿ ಒಂದು ಸಂತಸದ ಸಂಗತಿಯನ್ನು ನಿವೇದಿಸುವುದು ಪ್ರಸ್ತುತವೆನಿಸುತ್ತದೆ. ಅದೇಂದರೆ, ನಮ್ಮ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಉತ್ಸಾಹಿ ತಂತ್ರಾಂಶ ತಯಾರಿಕೆ ಸಂಸ್ಥೆಗಳು ಇಪ್ಪತ್ತಕ್ಕೂ ಮಿಕ್ಕು ಸಹಕಾರಿ ಬ್ಯಾಂಕುಗಳ ವ್ಯವಹಾರ ವಹಿವಾಟುಗಳನ್ನು ಪೂರ್ತಿ ನಮ್ಮ ನುಡಿಯಲ್ಲೇ ಗಣಕೀಕರಣ ಮಾಡಿರುವುದು. ಹಾಗೆಯೇ, ಕನ್ನಡ ಸಾಹಿತ್ಯ ಪರಿಷತ್ತು ತನ್ನ ಕನ್ನಡ-ಕನ್ನಡ ಸಂಕ್ಷಿಪ್ತ ನಿಘಂಟನ್ನು ಸಾಂದ್ರಿಕೆ ಹೆಸರಿನ ಅಡಕ ಮುದ್ರಿಕೆಗೆ ಅಳವಡಿಸಿದೆ. ಜೊತೆಗೇ ಇ-ಪುಸ್ತಕ ಮಾದರಿಯಾಗುವಂತಹ 'ಪಂಪ ಭಾರತ' ಮತ್ತು 'ಆದಿ ಪುರಾಣ'ಗಳನ್ನು ಕೂಡ ಗಣಕೀರಿಸಿರುವುದು ಉಲ್ಲೇಖನೀಯ. ಮೈಸೂರು ವಿಶ್ವವಿದ್ಯಾನಿಲಯದ ಸಾವಿರಾರು ಪುಟಗಳ ಹದಿನಾಲ್ಕು ಸಂಪುಟಗಳ 'ಕನ್ನಡ ವಿಶ್ವಕೋಶ' ಸಾಂದ್ರಿಕೆ(ಸಿ.ಡಿ.)ಯ ರೂಪದಲ್ಲಿ ಈಗಾಗಲೇ ಅಣಿಯಾಗಿರುವುದು ಅಭಿನಂದನೀಯ ವಿಚಾರ. ಇವೊತ್ತು ಜಗತ್ತಿನ ಮೂಲೆ ಮೂಲೆಗಳಲ್ಲಿ ನಮ್ಮ ಕನ್ನಡದ ಪ್ರಮುಖ ಪತ್ರಿಕೆಗಳು ಅಂತರ್ಜಾಲದಲ್ಲಿ ಪ್ರಚಾರಗೊಳ್ಳುತ್ತಿವೆ. ಅಷ್ಟೇ ಅಲ್ಲದೆ, ಕೆಲವೊಂದು ಅಂತರ್ಜಾಲ ಕನ್ನಡ ಪತ್ರಿಕೆಗಳು ಸಹ ಇಂದು ಗಣನೀಯ ಯಶಸ್ಸನ್ನು ಗಳಿಸುತ್ತಿವೆ.

ಇಂತಹ ಇನ್ನೂ ಹಲವಾರು ಕನ್ನಡಪರ ಕಾರ್ಯಕ್ರಮಗಳನ್ನು ಸಮೀಕ್ಷಿಸಿದಾಗ ಗಣಕೀಕರಣಕ್ಕೆ ವಿವಿಧ ಬಗೆಯ ತಂತ್ರಾಂಶಗಳನ್ನು ಸಿದ್ಧಮಾಡಿ ಬಳಕೆಗೆ ತರುವುದು ಮಾಹಿತಿ ತಂತ್ರಜ್ಞಾನದ ಆದ್ಯ ಕಾರ್ಯಕ್ರಮ ಆಗಬೇಕಾಗುತ್ತದೆ. ಈ ರೀತಿಯಲ್ಲಿ ಮೂಡಿಬರುವ ಅನ್ವಯಿಕ ತಂತ್ರಾಂಶಗಳ ಪೈಕಿ ವಾಣಿಜ್ಯ ವ್ಯವಹಾರಗಳಲ್ಲಿ ಬೆಳಕಿಗೆ ಬರುವಂಥವು ಸಾರ್ವಜನಿಕ ವಲಯದಲ್ಲಿ ಗಣನೀಯ ಪಾತ್ರ ವಹಿಸುತ್ತವೆ. ಕರ್ನಾಟಕದ ವಾಣಿಜ್ಯರಂಗ ಮುಂದೆ ಏರುಗತಿಯುನ್ನು ಸಾಧಿಸಿ ಸಂಪೂರ್ಣವಾಗಿ ಗಣಕೀಕರಣಗೊಂಡಾಗ ಕನ್ನಡ ಭಾಷೆಗೆ ಆ ರಂಗದಲ್ಲಿ ಮಹತ್ವ ಹೆಚ್ಚುತ್ತದೆ. ಏಕೆಂದರೆ ಅಲ್ಲಿನ ಅಗತ್ಯಕ್ಕೆ ಕನ್ನಡ ಭಾಷೆಯ ಉಪಯೋಗದಿಂದ ಅಧಿಕ ಅನುಕೂಲ ಹಾಗೂ ಸೌಲಭ್ಯ ದೊರಕುತ್ತದೆ.

ಭಾರತದಂತಹ ದೊಡ್ಡ ರಾಷ್ಟ್ರದಲ್ಲಿ ಪಟ್ಟಣಗಳಿಗಿಂತ ಹಳ್ಳಿಗಾಡಿನ ಪ್ರದೇಶಗಳೇ ಅಧಿಕವಾಗಿವೆಯಷ್ಟೆ? ಗಾಂಧೀಜಿ ಈ ಪ್ರದೇಶಗಳಿಗೆ ಅತ್ಯಂತ ಹೆಚ್ಚಿನ ಒತ್ತು ನೀಡಿದ್ದು ಸಮಂಜಸವಾಗಿದೆ. ಈ ಪ್ರದೇಶದ ರೈತಾಪಿ ಜನಗಳಿಗೆ ಇಂಗ್ಲಿಷ್ ಭಾಷೆ ಗೊತ್ತಿರುವುದು ಅಸಂಭವ. ಈ ಕಾರಣದಿಂದ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡಭಾಷೆಯಲ್ಲೇ ಗಣಕೀಕರಣ ತಂತ್ರಾಂಶಗಳು ದೊರಕಿದಲ್ಲಿ ಅಲ್ಲಿನ ವ್ಯವಹಾರ ವಹಿವಾಟುಗಳಲ್ಲಿ ಪಾರದರ್ಶಕತೆ ಹೆಚ್ಚಿ, ಹಲವಾರು ಸೌಕರ್ಯಗಳು ಜನತೆಗೆ ಲಭಿಸುವುದರಲ್ಲಿ ಸಂದೇಹವಿಲ್ಲ. ಈಗ ವಾಣಿಜ್ಯ ವ್ಯವಹಾರಗಳಲ್ಲಿ

ಬಳಕೆಯಾಗುತ್ತಿರುವುದು ಇಂಗ್ಲಿಷ್ ಭಾಷೆಯ ತಂತ್ರಾಂಶಗಳು ಮಾತ್ರ. ಕನ್ನಡ ಭಾಷೆಯ ತಂತ್ರಾಂಶಗಳನ್ನು ಅಧಿಕ ಸಂಖ್ಯೆಯಲ್ಲಿ ಅಭಿವೃದ್ಧಿಪಡಿಸಿದೆ ಇರುವುದು ಇದಕ್ಕೆ ಪ್ರಮುಖ ಕಾರಣ. ಈಗಾಗಲೇ ನಮ್ಮಲ್ಲಿ ಬಳಕೆಯಲ್ಲಿರುವ ವಾಣಿಜ್ಯ ತಂತ್ರಾಂಶಗಳ ತಯಾರಕರು ಕನ್ನಡನುಡಿಯಲ್ಲಿ ತಂತ್ರಾಂಶಗಳನ್ನು ಅಣಿಗೊಳಿಸಲು ಸಜ್ಜಾಗದಿರುವುದು ಅವರಿಗೆ ಕನ್ನಡದ ಬಗ್ಗೆ ಪ್ರೀತಿ ಇಲ್ಲದಿರುವುದೇ ಕಾರಣ. ಇದೇ ಮಾತನ್ನು ನಾವು ಬಳಕೆದಾರರಿಗೂ ಅನ್ವಯಿಸಬಹುದು. ಈ ಸ್ಥಿತಿಯನ್ನು ಅಂತ್ಯಗೊಳಿಸಲು ಪ್ರಜ್ಞಾವಂತ ಜನರೆಲ್ಲಾ ಒಂದಾಗಿ ಸಕಲ ರೀತಿಯ ಪ್ರಯತ್ನಗಳನ್ನು ಕೈಗೊಳ್ಳಬೇಕು.

ಗಣಕಗಳಲ್ಲಿ ಕನ್ನಡದ ಉಪಯೋಗಕ್ಕೆ ಸಂಬಂಧಪಟ್ಟಂತೆ ನಾವು ಗಂಭೀರವಾಗಿ ಆಲೋಚಿಸಬೇಕಾದ ಇನ್ನೊಂದು ಬಹು ಮುಖ್ಯ ವಿಚಾರವೆಂದರೆ, ಕನ್ನಡವನ್ನು ಮೂಡಿಸುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಇಚ್ಛಿಸುವ ಸಂಸ್ಥೆಗಳು ಕನ್ನಡ ಲಿಪಿ ಮತ್ತು ಭಾಷೆಗೆ ಸಂಬಂಧಿಸಿದಂತೆ ಯಾವುದೇ ಅಪಚಾರವನ್ನು ಮಾಡಬಾರದು ಎಂಬುದು. ಇಂಥವುಗಳನ್ನು ಗುರುತಿಸಿ ಸಂಬಂಧಪಟ್ಟ ಸಂಸ್ಥೆಳ ಗಮನಕ್ಕೆ ತಂದು ಅವುಗಳನ್ನು ಸರಿಪಡಿಸುವ ಹಾಗೆ ಹಕ್ಕೊತ್ತಾಯಗಳನ್ನು ಮಂಡಿಸಬೇಕಾದದ್ದು ಅತಿ ಮುಖ್ಯವಾಗಿ ನಮ್ಮ ಭಾಷಾ ವಿದ್ವಾಂಸರ ಅಷ್ಟೇಕೆ, ಸಮಸ್ತ ಕನ್ನಡಿಗರ ಆದ್ಯ ಕರ್ತವ್ಯ.

ಕನ್ನಡದಲ್ಲಿ ವಿಜ್ಞಾನವನ್ನು ಶಾಲಾ ಕಾಲೇಜುಗಳಲ್ಲಿ ಬೋಧಿಸುವುದಕ್ಕೆ ಪೂರ್ವಭಾವಿಯಾಗಿ ಕೆಲವೊಂದು ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅತ್ಯಗತ್ಯ. ಇವುಗಳಲ್ಲಿ ಮೊಟ್ಟಮೊದಲಿಗೆ ಆಗಬೇಕಾದದದು ಸರಳ ಸುಲಭ ಮತ್ತು ದೋಷರಹಿತ ಪಠ್ಯಪುಸ್ತಕಗಳ ರಚನೆ. ಅದರಲ್ಲೂ ಪಾರಿಭಾಷಿಕ ಪದಗಳನ್ನು ಬಳಸುವಾಗಿನ ಔಚಿತ್ಯಪೂರಿತ ಪ್ರಜ್ಞೆ ಅಂತರ್ರಾಷ್ಟ್ರೀಯ ಚಾಲ್ತಿಯ ಪದಗಳನ್ನು ಹಾಗೆಯೇ ಉಳಿಸಿಕೊಳ್ಳುವುದೋ, ಕೆಲವನ್ನು ಹೊಸದಾಗಿ ಅಗತ್ಯಕ್ಕೆ ತಕ್ಕಂತೆ ಟಂಕಿಸಿಕೊಳ್ಳುವುದೋ, ಇಲ್ಲವೇ ಈ ಮೊದಲೇ ನಮ್ಮ ಹಳೆಯ ಗ್ರಂಥಗಳಲ್ಲಿ ಬಳಕೆಯಾಗಿ ಈಗ ಚಾಲ್ತಿ ತಪ್ಪಿ ನಮಗೆ ಎರವಾಗಿರವ ಪದಗಳನ್ನು ಹುಡುಕಿ ಸೂಕ್ತವಾಗಿ ಅವುಗಳನ್ನು ಬಳಕೆಗೆ ತರುವುದೋ–ಎನ್ನುವುದಕ್ಕೆ ಹೆಚ್ಚು ಗಮನವನ್ನು ನೀಡಬೇಕಾದ ಅಗತ್ಯ ಈಗ ಮೂಡಿದೆ. ಹಾಗೆಯೇ, ಪಠ್ಯಪುಸ್ತಕಗಳು ಆವಶ್ಯಕತೆಗೆ ಅನುಸಾರವಾಗಿ ಚಿತ್ರಗಳಿಂದ ಕೂಡಿರುವುದು ಸಹ ಬಹಳ ಮುಖ್ಯ. ಏಕೆಂದರೆ, ಎಳೆಯ ವಿದ್ಯಾರ್ಥಿಗಳಿಗೆ ಅಕ್ಷರ ರೂಪದ ತಮ್ಮ ಓದನ್ನು ಅಧಿಕವಾಗಿ ಸ್ಪಷ್ಟಪಡಿಸುವ ಹಾಗೂ ಹೆಚ್ಚು ಕಾಲ ನೆನಪಿನಲ್ಲಿ ಇರಿಸುವ ಉಪಕಾರವನ್ನು ಸಮಂಜಸವಾಗಿ ಬಳಸಿದ ಚಿತ್ರಗಳು ಎಸಗಬಲ್ಲವು. ನಮ್ಮ ಅನೇಕ ಪ್ರಚಲಿತ ವಿಜ್ಞಾನದ ಪಠ್ಯಪುಸ್ತಕಗಳು ಭಾಷೆಯ ಕೃತಕತೆಯಿಂದ, ವಿಷಯ ನಿರೂಪಣೆಯ ಸಂದಿಗ್ಧ ಗೊಂದಲದಿಂದ ಮತ್ತು ಮನೋಜ್ಞ ಶೈಲಿಯ ಕೊರತೆಯ ಕಾರಣದಿಂದ ಸ್ವಾರಸ್ಯಶೂನ್ಯ ಭೈರಿಗೆ ಎನ್ನಿಸಿ ಮನಸ್ಸಿಗೆ ಜುಗುಪ್ಸೆಯನ್ನು ಹುಟ್ಟಿಸುತ್ತದೆ.

ಇಂಥ ವಿವಿಧ ವಿಜ್ಞಾನ ಪ್ರಕಾರದ ಪುಸ್ತಕಗಳನ್ನು ಮೂರು-ನಾಲ್ಕು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯ ಬರೆಸಿದ್ದು ಪ್ರಶಂಸೆಯ ವಿಚಾರವೆನ್ನಿಸಿದರೂ ಅವು ಅಸಮರ್ಥವಾಗಿ ರಚಿತವಾಗಿದ್ದುದರಿಂದ ಇಂದು ಮೂಲೆಗುಂಪಾಗಿ ಹೋಗಿವೆ. ಹಾಗೆ ನೋಡಿದರೆ ಕೆಲವು ಕನ್ನಡ ಪತ್ರಿಕೆಗಳಲ್ಲಿ ಮತ್ತು ನಿಯತ ಕಾಲಿಕೆಗಳಲ್ಲಿ ಬರುವ ವಿಜ್ಞಾನದ ಬಿಡಿ ಲೇಖನಗಳು ಹೊಗಳಿಕೆಗೆ ತಕ್ಕದ್ದಾಗಿವೆ; ಅವು ಪ್ರಸ್ತುತವೂ ಆಗಿರುವುದು ಇನ್ನೊಂದು ಸಂತೋಷದ ವಿಷಯ. ಇದರ ಜೊತೆಗೆ ಹಲವಾರು ವಿಜ್ಞಾನವನ್ನು ಜನಪ್ರಿಯ ರೀತಿಯಲ್ಲಿ ನಿರೂಪಿಸಿರುವ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಆದರೆ, ಅವುಗಳಿಗೆ ಪಠ್ಯ ಪುಸ್ತಕದ ಶಾಸ್ತ್ರೀಯ ಸ್ವರೂಪ ಅಷ್ಟಾಗಿ ಕಂಡುಬರುವುದು ಬಹಳ ಅಪರೂಪ. ಕೊಂಚಮಟ್ಟಿಗೆ ಅವು ಮೂಲ ಪಠ್ಯಪುಸ್ತಕಳಿಗೆ ಪೋಷಕ ಕೃತಿಗಳಾಗಿ ಮಾನ್ಯತೆ ಪಡೆಯಬಹುದು. ಇದೆಲ್ಲಕ್ಕೂ ಮುಖ್ಯವಾಗಿ ಕನ್ನಡ ಮಾಧ್ಯಮದಲ್ಲಿ ನಮ್ಮ ಶಿಕ್ಷಣ ಹೆಚ್ಚು ಹೆಚ್ಚು ಅವಕಾಶ ಪಡೆದಂತೆ ವಿಜ್ಞಾನದ ವಿವಿಧ ಶಾಖೆಯ ಪುಸ್ತಕಗಳೂ ಆ ಅಗತ್ಯವನ್ನು ಪೂರೈಸಲು ತಾವಾಗಿ ಸಿದ್ಧಗೊಳ್ಳುತ್ತವೆ. ಆದ್ದರಿಂದ ನನ್ನ ಬಹುಮುಖ್ಯ ಲಾಗಾಯ್ತಿನ ಕಳಕಳಿ ಎಂದರೆ ಕನ್ನಡ ಮಾಧ್ಯದಲ್ಲಿ ಇತರ ವಿಷಯಗಳನ್ನು ಬೋಧಿಸುವ ರೀತಿಯಲ್ಲೇ ವಿಜ್ಞಾನವನ್ನು ಕಲಿಸಲು ಬಲು ಬೇಗ ಕ್ರಮಗಳ ಕೈಗೊಳ್ಳುವುದು. ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ತಲೆಯಾಳುಗಳು ಈ ಬಗ್ಗೆ ತುರ್ತಾಗಿ ಚಿಂತಿಸಬೇಕಾದ ಅಗತ್ಯ ಜರೂರಿನದಾಗಿದೆ.

೧೯೫೦ರ ಹೊತ್ತಿಗೆ ಗಂಭೀರವಾಗಿ ಮುಂದುವರಿದ ನನ್ನ ಕವನ ರಚನೆಯ ಕರ್ಮ ಇಂದಿಗೂ ಸಾಗಿ ಬಂದಿದೆ. ಶಿವಮೊಗ್ಗೆಯನ್ನು ಬಿಟ್ಟರೆ ಬೆಂಗಳೂರಿನ ಗಾಂಧಿಬಜಾರ್ ಮತ್ತು ಲಾಲ್‌ಬಾಗ್ ನನ್ನ ಭಾವನಾತ್ಮಕ ಬದುಕಿನ ಶ್ವಾಸಕೋಶಗಳು.

ಕನ್ನಡ ನನ್ನ ಕಲಿಕೆಯ ಭಾಷೆ, ಉರ್ದು ಮನೆ ಮಾತು. ನಾನು ಕಸ್ತೂರಿ ಕನ್ನಡವನ್ನು ಮೊದಲಿನಿಂದ ಪ್ರೀತಿಸುತ್ತಾ, ಗೌರವಿಸುತ್ತಾ ಬಂದವನು. ಈ ಭಾಷೆಗೆ ವಾಸ್ತವ ಬದುಕಿನ ವ್ಯವಹಾರಗಳನ್ನು ಹೇಗೋ ಹಾಗೆ ಭಾವಲೋಕದ ಅಪೂರ್ವಾನುಭವಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಶಕ್ತಿ ಇದೆ, ಪದ ಸಮೃದ್ಧಿ ಇದೆ ಹಾಗೂ ಬಹು ಕಾಲದ ಬಳಕೆಯಿಂದ ಆರ್ಜಿಸಿಕೊಂಡ ವೈವಿಧ್ಯಮಯ ನುಡಿಗಟ್ಟಿನ ಸಿದ್ಧಿ ಇದೆ. ಏಕೀಕರಣವಾದ ಮೇಲಾದರೂ ಇದು ನಮ್ಮ ಶಿಕ್ಷಣದ, ನ್ಯಾಯಾಂಗದ, ಆಡಳಿತದ ಭಾಷೆಯಾಗಿ ಮೆರೆಯಬೇಕಾಗಿತ್ತು. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ, ನಮ್ಮ ನಾಡಿನ ಮಹಾಜನರ ಔದಾಸೀನ್ಯಪೂರ್ವಕ ಅಭಿಮಾನ ಶೂನ್ಯತೆಯ ದೆಸೆಯಿಂದ ಅದು ಇನ್ನೂ ಇಂಗ್ಲೀಷಿನ ಧಣಿತನದಲ್ಲಿ ತಲೆ ಎತ್ತಿ, ಮೆರೆಯದೆ ಸೊರಗುತ್ತಿದೆ. ಎಲ್ಲಿಯ ತನಕ ನಮ್ಮ ಜನಪದದ ಆಡುಮಾತಿನ ಮತ್ತು ದೈನಿಕ ವಹಿವಾಟುಗಳ ಭಾಷೆ ರಾಜ್ಯದ ವ್ಯವಹಾರಮಾನ್ಯ ಭಾಷೆಯಾಗು ವುದಿಲ್ಲವೋ ಅಲ್ಲಿಯತನಕ ನಾವು ಸರ್ವಸ್ವತಂತ್ರರಾದವೆಂದು ಘೋಷಿಸಿಕೊಳ್ಳುವುದು ಗಾಂಪತನವಾದೀತು. ನಮ್ಮನ್ನು ಆಳುವ ಮಂದಿಯಲ್ಲಿ ಕೆಲವರಲ್ಲಾದರೂ ಇನ್ನೂ

ಕನ್ನಡ ಪರವಾದ ಒಲವಿನ ಕಿಡಿ ಜೀವಂತವಾಗಿದೆ. ಇದನ್ನು ಸದಭಿಮಾನದ ಊದುಗೊಳವೆಯಿಂದ ಉರುಬಿ ಕೆಂಡಮಾಡಿಕೊಂಡಾಗ, ಬಹುಶಃ ನಮ್ಮ ಜನ ಅದರ ಕಾವು ಮತ್ತು ದೀಪ್ತಿಗಳಿಂದ ಪ್ರಯೋಜನ ಪಡೆದಾರು. ನಮ್ಮ ಹಿರಿಯ ಅಧಿಕಾರಿಗಳು ಈ ನಿಟ್ಟಿನಲ್ಲಿ ಈಗಲಾದರೂ ತಮ್ಮ ಮನಸ್ಸನ್ನು ಹಾಯಿಸಬೇಕು. ಕೇವಲ ಕನ್ನಡ ಪರವಾದ ಆದೇಶಗಳನ್ನು ಪುಂಖಾನುಪುಂಖವಾಗಿ ಬಿಡುಗಡೆ ಮಾಡಿದರೆ ಸಾಲದು, ಕಟ್ಟುನಿಟ್ಟಾಗಿ ಕಾರ್ಯಶೀಲರಾಗಬೇಕು. ಆದರೆ ಯಾಕೋ ಇನ್ನೂ ಇಂತಹ ಸಂಕಲ್ಪ ಮಾಡಿಲ್ಲ.

ಕರ್ನಾಟಕದ ಹೆಮ್ಮೆಯ ರಾಜಧಾನಿ ಎನ್ನಿಸಿರುವ ಬೆಂಗಳೂರು ಮಹಾನಗರದಲ್ಲಿ ಕನ್ನಡಿಗರ, ಕನ್ನಡದ ಸ್ಥಿತಿಗತಿಯಂತೂ ಮತ್ತೂ ಕರುಣಾಜನಕ, ಮಾಹಿತಿ ತಂತ್ರಜ್ಞಾನದ ದೆಸೆಯಿಂದ, ಇತರೇ ಉದ್ಯಮಗಳ ವಹಿವಾಟುಗಳ ಕಾರಣದಿಂದ, ವ್ಯಾಪಾರದ ಹತೋಟಿ ಮೀರಿದ ಹೆಚ್ಚಳದ ನಿಮಿತ್ತದಿಂದ ಪರ ಭಾಷಿಕರು ತಡೆಯಿಲ್ಲದೆ ನಮ್ಮ ರಾಜಧಾನಿಯಲ್ಲಿ ಬೇರುಗಳನ್ನು ಹರಡಿ ಬಲಗೊಳ್ಳುತ್ತಿದ್ದಾರೆ. ಹಲವು ವರ್ಷಗಳ ಕಾಲದಿಂದ ಇಲ್ಲಿ ಬಾಳುತ್ತಿದ್ದವರೂ ನಮ್ಮ ಭಾಷೆಯನ್ನು ಆಡುವ, ಕಲಿಯವ ಗೋಜಿಗೆ ಹೋಗದಿರುವುದಕ್ಕೆ ನಮ್ಮ ಕನ್ನಡಿಗರ ಅನಪೇಕ್ಷಿತ ಔದಾರ್ಯ, ಮೃದು ಧೋರಣೆಯೇ ಕಾರಣ. ಸ್ವತಃ ನಮ್ಮವರಲ್ಲೇ ಹಲವಾರು, ಅದರಲ್ಲೂ ಸಾಮಾಜಿಕವಾಗಿ ಮೇಲ್ಮಟ್ಟದಲ್ಲಿರುವವರು, ಕನ್ನಡದ ಬಗ್ಗೆ ತಳೆದಿರುವ ತಾತ್ಸಾರ ಮತ್ತು ನಿರಭಿಮಾನ ನಾಚಿಕೆಗೇಡಿನದಾಗಿದೆ. ಕನ್ನಡಿಗರ ಸಂಖ್ಯೆ ಇಳಿಮುಖವಾಗುತ್ತಿರುವುದು ಮತ್ತು ಇಲ್ಲಿನ ಖಾಸಗಿ ಹಾಗೂ ಕೇಂದ್ರ ಸರ್ಕಾರದ ಅಧೀನದ ಉದ್ಯಮ ಸಂಸ್ಥೆಗಳಲ್ಲಿ, ಕಾರ್ಖಾನೆಗಳಲ್ಲಿ ಮತ್ತು ವಿವಿಧ ವ್ಯಾಪಾರಗಳ ಕ್ಷೇತ್ರದಲ್ಲ ಕನ್ನಡಿಗರಿಗೆ ಉದ್ಯೋಗದ ಮಾನ್ಯತೆ ಇಲ್ಲದಿರುವುದು ಮುಂದಿನ ಕರಾಳ ಭವಿಷ್ಯಕ್ಕೆ ಕೈ ಮರವಾಗಿದೆ. ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಕನ್ನಡಿಗರು ಅನುಭವಿಸಬೇಕಾದ ಕಷ್ಟನಷ್ಟಗಳನ್ನು, ಸೋಲು ಅವಮಾನಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಶಿಕ್ಷಣ ಸಂಸ್ಥೆಗಳ ವಿಷಯಕ್ಕೆ ಬಂದಾಗ ಏನನ್ನು ಹೇಳಿದರೂ ಪುನರುಕ್ತಿ ಎನ್ನಿಸುತ್ತದೆ. ಕಾನ್ವೆಂಟುಗಳ ನಿರಂಕುಶನ ಹೆಚ್ಚಳಕ್ಕೆ ಜನಗಳಲ್ಲಿ ಇಂಗ್ಲೀಷಿನ ಬಗೆಗೆ ಬೆಳೆಸಿಕೊಂಡ ವ್ಯವಹಾರಮಾನ್ಯ ವ್ಯಾಮೋಹದ ಜೊತೆಗೆ, ನಮ್ಮ ಸರ್ಕಾರದ ಧೋರಣೆಯೂ ಅಸಮಾಧಾನಕರವಾಗಿದೆ. ಒಂದು ಕಡೆ ಅನಧಿಕೃತ ಶಾಲೆಗಳನ್ನು ಪಟ್ಟಿ ಮಾಡಿ ಮುಚ್ಚುವುದಾಗಿ ಬೆದರಿಸುತ್ತ, ಮತ್ತೊಂದು ಕಡೆ ಮುಂದಿನ ವರ್ಷದವರೆಗೂ ರಿಯಾಯಿತಿಯನ್ನು ನೀಡುವ ನಾಟಕವಾಡುತ್ತ, ಶೈಕ್ಷಣಿಕ ಕ್ಷೇತ್ರದ ಪಟ್ಟಭದ್ರರು ನ್ಯಾಯಾಲಯದ ಮೆಟ್ಟಲನ್ನು ಏರಿ ಬಚಾವಾಗುವ ವಿಧಾನಗಳನ್ನು ಹುಡುಕಿಕೊಳ್ಳಲು ಅವಕಾಶ ಮಾಡಿಕೊಡುತ್ತ ಹೊಣೆಗಾರಿಕೆಯಿಂದ ಜಾರಿಕೊಳ್ಳುವುದು ಅತ್ಯಂತ ಖಂಡನೀಯ. ಇಷ್ಟೇ ಅಲ್ಲದೆ, ಆಂಗ್ಲ ಶಾಲೆಗಳಲ್ಲಿ ಕನ್ನಡವನ್ನು ಕಲಿಸುತ್ತೇವೆ ಎಂದು ಮುಚ್ಚಳಿಕೆಯನ್ನು ಬರೆದು ಕೊಟ್ಟು ವಿಶೇಷ ಸವಲತ್ತುಗಳನ್ನು ದಕ್ಕಿಸಿಕೊಳ್ಳುತ್ತ

ಇಂಗ್ಲಿಷನ್ನು ಪ್ರಚ್ಛನ್ನವಾಗಿ ಬಲಿಷ್ಠಗೊಳಿಸುತ್ತಿರುವ ಆಷಾಢಭೂತಿಗಳ ಕುತ್ಸಿತ ಕುಯುಕ್ತಿಯ ಬಗೆಗೆ ತಿಳಿದಿದ್ದರೂ ಸರ್ಕಾರ ಸಂಬಂಧಿಸಿದವರನ್ನು ದಂಡಿಸದೆ ಇರುವ ಪರಿಯನ್ನು ಗಮನಿಸಿದಾಗ ಕನ್ನಡಿಗರಿಗೆ ಸರ್ಕಾರದ ನಿರ್ಲಕ್ಷ್ಯ ಮತ್ತು ಸಡಿಲ ನೀರಿ ಜುಗುಪ್ಸೆಯನ್ನು ಹುಟ್ಟಿಸುತ್ತದೆ. ಇನ್ನು ಮೇಲಾದರೂ ನಮ್ಮ ನಾಯಕರು, ಸಂಬಂಧಪಟ್ಟ ಆಡಳಿತಾಧಿಕಾರಿಗಳು ಕನ್ನಡಕ್ಕೆ ನ್ಯಾಯ ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುವರೆಂದು ಆಶಿಸೋಣ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ಪಡೆಯುವ ಬಗ್ಗೆಯೂ ನಮ್ಮ ಸಂಸದರ ಮತ್ತು ಇಲ್ಲಿನ ರಾಜಕೀಯ ಧುರೀಣರ ನಿರಾಸಕ್ತಿಯ, ಆಲಸ್ಯ ಧೋರಣೆ ಬೇಸರ ಹುಟ್ಟಿಸುತ್ತದೆ. ಕೇಂದ್ರದಲ್ಲಿರಲು, ಉತ್ತರ ಭಾರತದ ಇತರ ರಾಜ್ಯಗಳಲ್ಲಿ ನಮ್ಮ ಮುಂದಾಳುಗಳ ಬಗೆಗಾಗಲಿ, ನಮ್ಮ ನಾಡಿನ ಬಗೆಗಾಗಲಿ ಇರುವ ತಾತ್ಸಾರದ ಮನೋಭಾವ ನಿಜಕ್ಕೂ ವಿಷಾದನೀಯ. ನೆರೆ ರಾಜ್ಯ ತನಗೆ ನಿಗದಿತವಾದ ಅನುದಾನಕ್ಕಿಂತ ಹಲವು ಪಟ್ಟಿನಷ್ಟು ಸದ್ದಿಲ್ಲದೆ ಲಪಟಾಯಿಸುತ್ತಿರುವಾಗ, ನಮ್ಮವರು ಅಗತ್ಯಕ್ಕಿಂತ ಕಡಿಮೆಯಷ್ಟನ್ನಾದರೂ ಮಂಜೂರು ಮಾಡಿಸಿ ತರುವುದರಲ್ಲಿ ವಿಫಲರಾಗುತ್ತಿರುವುದಂತೂ ಲಜ್ಜಾಸ್ಪದ ಸಂಗತಿ. ರಾಜ್ಯ, ಭಾಷೆ, ಸಂಸ್ಕೃತಿಗಳ ಹಿತ ಕಾಪಾಡುವುದರಲ್ಲಿ ನಮ್ಮ ಸಂಸದರಲ್ಲಿ ಒಗ್ಗಟ್ಟಿಲ್ಲದಿರುವುದು, ಪಕ್ಷದ ನಿಷ್ಠೆಯೇ ಎಲ್ಲಕ್ಕಿಂತ ಪರಮವೆಂದು ತಿಳಿದಿರುವುದು, ರಾಷ್ಟ್ರೀಯ ನಾಯಕರೆದುದರು ಅದಬ್ಬಿನಿಂದ ವರ್ತಿಸುತ್ತಾ ಅವರ ಮುಖೋಲ್ಲಾಸ ಮಾಡುವುದು ಪುರುಷಾರ್ಥವೆಂದು ಭಾವಿಸಿರುವುದು, ನಮ್ಮ ನಾಡು ನುಡಿಯ ಹಿತಕ್ಕೆ ಅನೇಕ ದಶಕಗಳಿಂದ ಎಂತಹ ವಂಚನೆಯನ್ನು ಎಸಗಿದೆ ಎನ್ನುವುದನ್ನು ಹಿಂದಿನ ದಿನಪತ್ರಿಕೆಗಳ ಪುಟಗಳನ್ನು ತಿರುವಿ ಹಾಕಿದರೆ ಮನವರಿಕೆಯಾದೀತು.

ಹೆಚ್ಚು ಕಡಿಮೆ ತಮಿಳಿನಷ್ಟೇ ನಮ್ಮ ಸಿರಿಗನ್ನಡವೂ ಪ್ರಾಚೀನ. ಸ್ವಾಭಾವಿಕ ಶಾಸ್ತ್ರೀಯ ಸ್ಥಾನಮಾನದ ಮಕುಟ ನಮ್ಮ ತಾಯ್ನುಡಿಯ ಮುಡಿಯ ಮೇಲೆ ವಿರಾಜಿಸಬೇಕಾದದ್ದು ನ್ಯಾಯಯುತವೇ. ಈಚೆಗೆ ಅದರ ಸದ್ದನ್ನು ಅಡಗಿಸುವ ತಂತ್ರ ಸಹ ನಡೆದಿರುವುದು ದೌರ್ಭಾಗ್ಯ. ಇದರ ಬಗ್ಗೆ ಜನ ಬೆಂಬಲ ಅನಿವಾರ್ಯ. ಒತ್ತಡವಿಲ್ಲದೆ ರಾಜಕೀಯವಾಗಿ ಯಾವ ಕೆಲಸವೂ ಕೈಗೂಡದು. ಆದ್ದರಿಂದ ಕನ್ನಡಿಗರೆಲ್ಲರೂ ಒಟ್ಟಾಗಿ ಕೂಡಿ ನಮ್ಮ ತಾಯಿಯನ್ನು ಗೌರವದರಗಳಿಂದ ಉತ್ಸವಿಸುವ ಕೈಂಕರ್ಯದಲ್ಲಿ ಪಾಲ್ಗೊಳ್ಳಬೇಕಾಗಿದೆ.

ಮೊದಲೇ ಸೂಚಿಸಿದಂತೆ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಅನ್ಯಭಾಷಿಕ ಹಣಹದ್ದುಗಳ ದೊಡ್ಡದೊಡ್ಡ ಕಾರ್ಖಾನೆಗಳಲ್ಲಾಗಲಿ, ವಿವಿಧ ಉದ್ಯಮ ಸಂಸ್ಥೆಗಳಲ್ಲಾಗಲಿ, ಮಾಹಿತಿ ತಂತ್ರಜ್ಞಾನದ ಅಮರಾವತಿ ಸದೃಶ ಬೃಹತ್ ಸಂಕೀರ್ಣಗಳಲ್ಲಿ ಆಗಲಿ ನಮ್ಮ ಜನರಿಗೆ ಲಭಿಸರುವ ಅಲ್ಪಾತಿಅಲ್ಪ ಉದ್ಯೋಗಾವಕಾಶಗಳು ಎಂಥವರನ್ನಾದರೂ ಆಕ್ರೋಶದಿಂದ ಕೆರಳಿಸುವಂಥವು. ಕನ್ನಡನಾಡಿನ ನೆಲ, ಜಲ, ಗಾಳಿ, ವಿದ್ಯುಚ್ಛಕ್ತಿ ಮೊದಲಾದ ಅತ್ಯಮೂಲ್ಯ ಸವಲತ್ತುಗಳನ್ನು ಕಬಳಿಸುತ್ತ, ಕನ್ನಡಿಗರ

ಬದಲು ಪರಭಾಷಿಕರನ್ನು ತಂದು ಗಿಡಿಯುತ್ತಿರುವುದನ್ನು ನೋಡಿಯೂ ನೋಡದಂತಿರುವ ನಮ್ಮ ಆಡಳಿತ ವ್ಯವಸ್ಥೆಯ ಹಾಗೂ ಮಹಾಜನತೆಯ ಔದಾಸೀನ್ಯ, ನಿಷ್ಕ್ರಿಯ ಪ್ರವೃತ್ತಿಗಳಿಗೆ ಏನೆನ್ನಬೇಕೋ ಕಾಣೆ. ಈ ನಿಟ್ಟಿನಲ್ಲಿ ಕೆಲವು ಕನ್ನಡಪರ ಸಂಘಟನೆಗಳು ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿ ಮಾಡದೆ ಈ ಅನ್ಯಾಯವನ್ನು ಖಂಡಿಸಿ ಪ್ರತಿಭಟಿಸುತ್ತಿರುವುದು ಅಭಿಮಾನದ ಸಂಗತಿ. ಇಂಥವರ ಪೀಳಿಗೆ ವರ್ಧಿಸಲಿ. ಸಂಬಂಧಪಟ್ಟವರ ಕಣ್ತೆರೆಸುವುದರಲ್ಲಿ ಇಂತಹ ಕನ್ನಡದ ಕಟ್ಟಾಳುಗಳ ಪ್ರಯತ್ನ ಪರಿಶ್ರಮಗಳು ಸಫಲವಾಗಲಿ.

ಇನ್ನು ಗಡಿಯ ವಿಷಯ, ಸಮಸ್ಯೆ ಮಾತ್ರವಲ್ಲ, ಒಂದು ಕಗ್ಗಂಟಾಗಿ ಪರಿಣಮಿಸಿದೆ. ಬೆಳಗಾವಿ ಮತ್ತು ಕಾಸರಗೋಡು ಸಮಸ್ಯೆ, ಕನ್ನಡಿಗರ ಪ್ರತಿಷ್ಠೆಯ, ನ್ಯಾಯಯುತವಾದ ನಿಲವಿನ ಬುಡಕ್ಕೇ ಕೊಡಲಿ ಹಾಕಿರುವಂಥವು; ಅವು ನಮ್ಮ ನಾಡಿನ ಅವಿಭಾಜ್ಯ ಭಾಗಗಳು. ಬೆಳಗಾವಿಯ ಸಮಸ್ಯೆ ಮೆಹರ್‌ಚಂದ್ ಮಹಾಜನ್ ಅವರ ವರದಿಯ ಮೂಲಕ ದಶಕಗಳ ಹಿಂದೆಯೇ ಇತ್ಯರ್ಥವಾಗಿಹೋಗಿದೆ. ಆದರೂ ನೆರೆನಾಡಿನ ಕೆಲವು ರಾಜಕೀಯ ಪ್ರಚೋದಿತ ಹುಲು ವ್ಯಕ್ತಿಗಳ ಚಿತಾವಣೆಯಿಂದ, ಸ್ವಾರ್ಥಾಸಕ್ತಿಯ ದೆಸೆಯಿಂದ ಆಗಾಗ್ಗೆ ಭುಗಿಲೇಳುತ್ತದೆ. ಗಡಿನಾಡಿನ ಪ್ರದೇಶದಲ್ಲಿ ಸೌಹಾರ್ದಯುತವಾಗಿ ಬಾಳುತ್ತಿರುವ ಜನಗಳಲ್ಲಿ ನಂಜಿನ ಬೀಜವನ್ನು ಬಿತ್ತಿ ಭಾರತದ ಐಕಮತ್ಯ ಮತ್ತು ಸಮಗ್ರತೆಗೆ ಭಂಗ ಉಂಟು ಮಾಡುತ್ತಿರುವ ಕುಹಕಿಗಳನ್ನು ಸರ್ಕಾರ ಮತ್ತು ಕನ್ನಡ ಜನ ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು. ದಂಡಿಸಬೇಕು. ಇತ್ತೀಚೆಗೆ ನಮ್ಮ ಸರ್ಕಾರ ಬೆಳಗಾವಿಯಲ್ಲಿ ವಿಶೇಷ ವಿಧಾನ ಸಭೆಯನ್ನು ನಡೆಸಿ ಕೆಚ್ಚೆದೆಯ ಅದಟನ್ನು ಪ್ರದರ್ಶಿಸಿದೆ. ಬೆಳಗಾವಿಯ ನೆಲ ಮತ್ತು ಜನಗಳ ಬಗೆಗಿನ ಕಾಳಜಿಯನ್ನು ನಿಸ್ಸಂದೇಹವಾಗಿ ವ್ಯಕ್ತಪಡಿಸಿದೆ. ಇಂತಹ ದಿಟ್ಟ ಮತ್ತು ಸಂದರ್ಭೋಚಿತ ನಿಲವನ್ನು ಸರ್ಕಾರ ಇತರೇ ಗಡಿನಾಡ ಪ್ರದೇಶಗಳ ಬಗೆಗೆ, ಅಲ್ಲಿನ ವಿಶಿಷ್ಟ ಸಮಸ್ಯೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಪ್ರದೇಶದ ಕನ್ನಡಿಗರ ಆತ್ಮವಿಶ್ವಾಸ ಮತ್ತು ಸ್ಥೈರ್ಯವನ್ನು ವರ್ಧಿಸುವ ಕೆಲಸವನ್ನು ಕೈಗೊಳ್ಳುವುದು ಸ್ವಾಗತಾರ್ಹವಷ್ಟೇ ಅಲ್ಲ, ಗುರುತರ ಜವಾಬ್ದಾರಯಾಗಿದೆ. ನಮ್ಮ ನೆರೆಯ ರಾಜ್ಯಗಳ ಕನ್ನಡ ಶಾಲೆಗಳಿಗೆ ಒದಗುತ್ತಿರುವ ಅಧೋಗತಿಯನ್ನು ನಿವಾರಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸಮಯೋಚಿತವಾಗಿದೆ.

ಕಾಸರಗೋಡಿನ ವಿಲೀನದ ಪ್ರಶ್ನೆ ಸಹ ನೆನೆಗುದಿಗೆ ಬೀಳುತ್ತಿದೆ. ಕನ್ನಡಿಗರ ಜನಸಂಖ್ಯೆ ಅಧಿಕವಾಗಿರುವ ಚಂದ್ರಗಿರಿಯ ಉತ್ತರದ ಭೂಪ್ರದೇಶ ನಮಗೆ ಸೇರಬೇಕಾದದ್ದು ಕಾನೂನಿನ ರೀತ್ಯವೂ ಸೂಕ್ತವಾಗಿದೆ. ಆ ಜಿಲ್ಲೆಯನ್ನು ಕರ್ನಾಟಕದಲ್ಲಿ ಸೇರಿಸುವ ಚಳವಳಿ ಅನೇಕ ದಶಕಗಳಿಂದ ಮುಂದುವರಿದಿದ್ದರೂ ಅದಕ್ಕೆ ಆದ್ಯಗಮನವನ್ನು ಸರ್ಕಾರ ಕೊಡದಿರುವುದು ಸರಿ ಎನ್ನಿಸುವುದಿಲ್ಲ. ಇದು ಅಲ್ಲಿನ ನಮ್ಮ ಕನ್ನಡಜನತೆಯ ಭಾಷೆ, ಸಂಸ್ಕೃತಿ, ಮತ್ತು ಉಳಿವಿನ ಪ್ರಶ್ನೆ ಅಷ್ಟೇ ಅಲ್ಲ,

ಸಮಸ್ತ ಕನ್ನಡಿಗರ ಪ್ರತಿಷ್ಠೆ ಮತ್ತು ಆತ್ಮ ಗೌರವದ ಪ್ರಶ್ನೆಯೂ ಆಗಿದೆ ಎಂದು ನನ್ನ ದೃಢವಾದ ಭಾವನೆ.

ನಮ್ಮ ರಾಷ್ಟ್ರದ ಹಾಲಿ ಸ್ಥಿತಿಗತಿಗಳು ಪ್ರಕ್ಷುಬ್ಧ ಸ್ವರೂಪದ್ದಾಗಿವೆ. ಹಿಂದೆ ಬಿಗಡಾಯಿಸಿದ್ದಕ್ಕಿಂತ ಹೆಚ್ಚಾಗಿ ಈಚೆಗಿನ ಒಂದು-ಒಂದೂವರೆ ದಶಕಗಳಲ್ಲಿ ಕುಲಗೆಟ್ಟು ಹೋಗಿವೆ. ಒಂದೊಂದು ರಾಜ್ಯದ ಜನಗಳದ್ದೂ ಒಂದೊಂದು ವಿಶಿಷ್ಟವಾದ ಸಮಸ್ಯೆ. ಇದರೊಂದಿಗೆ ಜಾತಿ ಧರ್ಮ ಜನಾಂಗೀಯ ದುರ್ವ್ಯಾಮೋಹ ಬೆರಣಿಯ ಬೆಂಕಿಯ ಹಗೆ ಒಳಗೊಳಗೇ ಹೊಗೆಯನ್ನು ಕಾರಿ ಈಚೆಗೆ ವೈಷಮ್ಯ ವೈರಗಳ ಉಗ್ರರೂಪವನ್ನು ತಳೆದು ದಳ್ಳುರಿದು ಅಮಾಯಕ ಹೆಣ್ಣು ಗಂಡು ಹಸುಳೆಗಳ ಪ್ರಾಣಹಾನಿಯನ್ನು; ಆಸ್ತಿಪಾಸ್ತಿಗಳ, ಸಾರ್ವಜನಿಕ ಕಟ್ಟಡ ವಾಹನ ಮುಂತಾದವುಗಳ ಸರ್ವನಾಶವನ್ನು ನಡೆಸಿರುವ ಲೆಕ್ಕವಿರದಷ್ಟು ಪುರಾವೆಗಳು ನಮ್ಮೆದುರಿಗಿವೆ. ಇದರ ಜೊತೆಗೇ, ಧರ್ಮಾಂಧತೆಯ ಕವಚ ತೊಟ್ಟ ಭಯೋತ್ಪಾದನೆಯ ರಾಕ್ಷಸೀ ಕೃತ್ಯ ಇಡೀ ರಾಷ್ಟ್ರದಲ್ಲಿ ಭುಗಿಲೆದ್ದು ಭಯಾತಂಕಗಳನ್ನು ದಿನನಿತ್ಯ ಹೆಚ್ಚಿಸಿ, ನೆಮ್ಮದಿಯಿಂದ ಬಾಳುತ್ತಿದ್ದವರ ನಡುವೆ ಹುಳಿ ಹಿಂಡತೊಡಗಿದೆ. ಪೈಶಾಚಿಕ ಮಾರಣ ನೃತ್ಯಕ್ಕೆ ಬಲಿಯಾಗುತ್ತಿರುವ ಮುಗ್ಧರ ಸಂಖ್ಯೆ ಕಡಿಮೆಯೇನಲ್ಲ. ಜಾತಿ, ಮತ, ಧರ್ಮ, ರಾಜ್ಯ ಮೊದಲಾದ ಭೇದವಿಲ್ಲದೆ ಎಲ್ಲರೂ ಒಮ್ಮನಸ್ಸಿನಿಂದ ಒಗ್ಗೂಡಿ ಇಂತಹ ದಾನವೀಯ ಪ್ರವೃತ್ತಿಯನ್ನು ಪ್ರತಿಭಟಿಬೇಕು. ಇಷ್ಟು ಮಾತ್ರವಲ್ಲದೆ ಭಾರತೀಯರೆಲ್ಲರೂ ತಮ್ಮ ನಡುವಿನ ಭೇದಗಳೇನಿದ್ದರೂ ಸದ್ಯ ಮರೆತು ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತು ಉಚ್ಚಾಟಿಸುವ ದಿಟ್ಟತನವನ್ನು ತೋರುವುದೂ ಕೂಡ ರಾಷ್ಟ್ರದ ಹಿತದೃಷ್ಟಿಯಿಂದ ಅತ್ಯಂತ ತುರ್ತಿನ ವಿಷಯವಾಗಿದೆ.

ರಾಷ್ಟ್ರದ ದುರಂತವೆಂದರೆ ನಮ್ಮ ಹಿತವನ್ನು ಕಾಪಾಡುವ, ಸಂಕಷ್ಟದಲ್ಲಿ ನಮ್ಮನ್ನು ರಕ್ಷಿಸಿ ಪಾರು ಮಾಡುವ ವಾಗ್ದಾನವನ್ನು ಮಾಡಿ ಆಯ್ಕೆಯಾದ ಹುದ್ದರಿಗಳಿಗೆ ರಾಷ್ಟ್ರದ ಒಟ್ಟಾರೆ ಒಳಿತಿನ ಬಗೆಗೆ, ಅವಿಚ್ಛಿನ್ನ ಸಮಗ್ರತೆಯ ಬಗೆಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ಪುರುಸೊತ್ತಿರುವುದಿಲ್ಲ. ತಮ್ಮ ತಮ್ಮಲ್ಲೇ ಕಚ್ಚಾಡುತ್ತಾ ಸ್ವಂತ ಏಳಿಗೆಯ ಬಗೆಗೆ ಹಗಲಿರುಳು ಚಿಂತಿಸುತ್ತಾ ಮೆರೆಯುವುದಕ್ಕೆ ಧಾರಾಳವಾಗಿ ಸಮಯ ಇರುತ್ತದೆ. ಸಮಸ್ಯೆಗಳನ್ನು ನೀಗಿಸುವುದಿರಲಿ, ಅವುಗಳನ್ನು ಸದಾ ಜ್ವಲಂತವಾಗಿಡುವ, ಸಮಸ್ಯೆಗಳು ಇಲ್ಲದಿದ್ದಲ್ಲಿ ಹೊಸದಾಗಿ ಸಮಸ್ಯೆಗಳನ್ನು ಹುಟ್ಟು ಹಾಕುವ ಕಲೆಯನ್ನು ಕರಗತ ಮಾಡಿಕೊಂಡಿರುವ ಈ ಇಬ್ಬಂದಿ ವ್ಯಕ್ತಿತ್ವದ ಮಂದಿ ಇವರು. ಮೂರು ಹೊತ್ತೂ ದೇಶದ ಒಳಿತಿನ ಜಪ ಮಾಡುತ್ತಲೇ ಸ್ವಂತ ಬೇಳೆಯನ್ನು ಬೇಯಿಸಿಕೊಳ್ಳುವುದರಲ್ಲಿ ಅದ್ವಿತೀಯರು.

ಬಹು ರತ್ನಗರ್ಭೆಯೂ ನಿತ್ಯಹರಿದ್ವರ್ಣ ತರುಲತಾದಿ ನದೀನದ ಸಂಪನ್ಮೂಲ ಸಂಪನ್ನೆಯೂ ಸೌಭಾಗ್ಯ ಸಮೃದ್ಧಿಪ್ರದಾಯಿನಿಯೂ ಆದ ನಮ್ಮ ಕನ್ನಡಮ್ಮನನ್ನು ಹಾಡುಹಗಲೇ ವಿವಸ್ತ್ರಗೊಳಿಸಿ ಶೋಷಿಸುತ್ತಿರುವ ದುಶ್ಶಕ್ತಿಗಳಲ್ಲಿ ಪರ ರಾಜ್ಯದ

ಬಂಡವಾಳಗಳಿಗೆ ರಾವಣಾಸುರರೇ ಅಲ್ಲದೆ, ನಮ್ಮ ಸ್ವಂತ ಧನಪಿಶಾಚಿ ದುರ್ಯೋಧನರೂ ಕೈ ಮಿಲಾಯಿಸಿದ್ದಾರೆ. ಇದಲ್ಲದೆ ಸ್ವತಃ ಸರಕಾರಗಳೇ ಕೆಲವು ಜನಪರವಾದ ಯೋಜನೆಗಳ ಹೆಸರಿನಲ್ಲಿ ನಮ್ಮ ಸಿರಿವಂತ ಗಿರಿ ದರಿಗಳ ಹಸುರಿನ ಹಚ್ಚನೆಯ ಖಜಾನೆಯನ್ನು, ಬೆಲೆ ಕಟ್ಟಲಾಗದ ಲೋಹ ಧಾತುಗಳನ್ನು, ಶಿಲೆಗಳನ್ನು ಸದಾ ಕಾಲಕ್ಕೂ ಬರಿದಾಗಿಸಿ ಬಿಟ್ಟಿದ್ದಾರೆ. ಒಮ್ಮೆ ಪ್ರಕೃತಿಯ ಅತ್ಯಮೂಲ್ಯ ಮಹದೈಸಿರಿಯನ್ನು ವಿವೇಚನೆಯಿಲ್ಲದೆ ಖಾಲಿಗೊಳಿಸಿಬಿಟ್ಟರೆ, ಮತ್ತೆ ಅಂಥದ್ದನ್ನು ಬೆಳೆಸಿ ಉಳಿಸಲಾಗದು, ಅದಕ್ಕೆ ಪರ್ಯಾಯಗಳನ್ನು ಕಂಡುಕೊಳ್ಳಲಾಗದು ಎಂಬ ಸರಳ ಸತ್ಯ ಸಂಗತಿಯೂ ಅವರಿಗೆ ಹೊಳೆಯದಿರುವುದು ಅಥವಾ ಗೊತ್ತಿದ್ದೂ ನಿಸರ್ಗದ ಮೇಲೆ ಇಂತಹ ಘೋರ ಅತ್ಯಾಚಾರ ಎಸುಗುವುದು ಮಹಾ ಪಾಪಕರ ಮತ್ತು ಖಂಡನೀಯ.

ನಮ್ಮ ಶಿವಮೊಗ್ಗೆಯ ಮತ್ತು ದಕ್ಷಿಣ ಕನ್ನಡದ ಅಗ್ಗಳಿಕೆಯ ಪಶ್ಚಿಮ ಘಟ್ಟಗಳಲ್ಲಿ, ಕೊಡಗಿನಲ್ಲಿ ಹಾಗೂ ಕರ್ನಾಟಕದ ಇತರ ಹಲವಾರು ಭಾಗಗಳಲ್ಲಿ ಪರ್ವತಾರಣ್ಯಗಳ ವೈವಿಧ್ಯಮಯ ವನಸ್ಪತಿಯ, ಅನರ್ಘ್ಯ ಶಿಲೆ ಖನಿಜ ಪ್ರಾಣಿ ಪಕ್ಷಿಗಳ ನಾಮಾವಶೇಷದ ಪ್ರಮಾಣಕ್ಕೆ ಸಾಟಿಯಾದದ್ದು ನಮ್ಮ ರಾಷ್ಟ್ರದ ಇತರೆಡೆಗಳಲ್ಲಿ ಇಲ್ಲವೆನ್ನಬೇಕು. ಶತಮಾನಗಳಿಂದ ಕಾಡುಮೇಡುಗಳ ಸ್ವಾಭಾವಿಕ ಅಂಗವೆಂಬಂತೆ ಅವಿನಾ ರೀತಿಯಿಂದ ಬಾಳಿ ಬದುಕಿದ್ದ ಅಮಾಯಕ ಜನರನ್ನು, ಪ್ರಾಣಿ ಪಕ್ಷಿಗಳನ್ನು ಅಹಿತವಾದ ಪರಿಸರಗಳಿಗೆ ಒಕ್ಕಲೆಬ್ಬಿಸಿ ಸ್ವಂತದ ಬೇಳೆಯನ್ನು ಬೇಯಿಸಿ ಕೊಳ್ಳುತ್ತಿರುವ ಬಂಡವಾಳಶಾಹಿ ಖದೀಮರಿಗೆ ಕಡಿವಾಣವೇ ಇಲ್ಲ. ಎಲ್ಲೆಲ್ಲೂ ಸರ್ವವ್ಯಾಪಿ ಯಾಗಿರುವ ಭ್ರಷ್ಟಾಚಾರದ ಸಂಸ್ಕರಣೆ ಅವರಿಗಿರುವುದರಿಂದ, ಅಧಿಕಾರಿಗಳಾದಿ ಯಾಗಿ ಸರಕಾರದ ಉನ್ನತ ಅಂತಸ್ತಿನಲ್ಲಿ ವಿರಾಜಮಾನರಾಗಿರುವ ಪ್ರಭೃತಿಗಳ ಕೃಪಾಕಟಾಕ್ಷಕಕ್ಕೆ ಆ ಶ್ರೀಮಂತ ಪಟ್ಟಭದ್ರ ಪ್ರಭೃತಿಗಳು ಪಾತ್ರರಾಗಿರುವುದರಿಂದ, ಈ ಖದೀಮರ ಪ್ರಕೃತಿ ವಿನಾಶಕ, ಪರಿಸರ ನಿರ್ನಾಮಕ ಹೊಲೆ ಬುದ್ಧಿಗೆ ಅಂಕುಶವೇ ಇಲ್ಲ. ಈ ನಿಟ್ಟಿನಲ್ಲಿ ನಡೆಯುವ ಜನಹಿತಪರ ಚಳವಳಿ, ಪ್ರತಿಭಟನೆಗಳಿಗೆ ಹೆಚ್ಚಿನ ಒತ್ತಾಸೆ ಬೆಂಬಲಗಳು ಸಿಕ್ಕದೆ, ಹಾಳಾಗುತ್ತಿರುವ ಅರಣ್ಯಗಳಂತೆಯೇ ಅವೂ ಅರಣ್ಯರೋದನ ಮಾತ್ರವಾಗುತ್ತಿವೆ.

ಸ್ಥಾವರಗಳಿಗೆ, ಭಾರೀ ಉದ್ಯಮಾಗಾರಗಳಿಗೆ ಉತ್ತೇಜನ ನೀಡುವುದು ಆಡಳಿತದ ಕರ್ತವ್ಯವೇ ಆಗಿದ್ದರೂ ಉಚಿತಾನುಚಿತ ಪ್ರಜ್ಞೆಯ ಕೊರತೆಯ ದೆಸೆಯಿಂದ ಅಗತ್ಯಕ್ಕಿಂತ ನೂರು ಪಾಲು ಹೆಚ್ಚಿನ ಪ್ರಕೃತಿಯನ್ನು, ಅದರ ಅನರ್ಘ್ಯ ಸಂಪನ್ಮೂಲಗಳನ್ನು ಹಾಳ್ಗೆಡಿಸುವುದು ಮಹಾ ಅಪರಾಧವೆನ್ನದೆ ವಿಧಿಯಿಲ್ಲ.

ಶತಮಾನಗಳಿಂದ ಮನುಷ್ಯ ಮತ್ತು ಇತರ ಜೀವ ಸಂಕುಗಳಿಗೆ ಸಂಜೀವಿನೀ ಪ್ರಾಯವಾದ ನಿಸರ್ಗವನ್ನು ಹುಟ್ಟಳಿಸಿಹಾಕುವುದರಿಂದ, ತಿರುಪತಿಯ ಕ್ಷೌರದಂತೆ ಅದರ ಅವಿಚ್ಛಿನ್ನ ಅಂಗಗಳನ್ನು ವಿವೇಕವಿಲ್ಲದೆ ಅಲ್ಲಿ ಇಲ್ಲಿ ಹಾಚುಪಾಚಾಗಿ, ಅವ್ಯವಸ್ಥಿತವಾಗಿ ನಾಶಪಡಿಸಿ ಇಡೀ ಪ್ರದೇಶವನ್ನು ಅಪ್ರಯೋಜಕಗೊಳಿಸುವುದರಿಂದ ಪ್ರಕೃತಿ ಕನಲಿ ಎಂತಹ ಭೀಕರ ಸೇಡನ್ನು ತೀರಿಸಿಕೊಳ್ಳುತ್ತದೆ ಎನ್ನುವುದಕ್ಕೆ ಅನಾವೃಷ್ಟಿ

ಬರಗಳಲ್ಲದೆ, ಅಕಾಲಿಕ ಮಳೆಯ ಹಾವಳಿಯಿಂದ ಮಳೆ, ಬೆಳೆ, ಪರಿಸರದ ಏರುಪೇರು ಹಾಗೂ ಹವಾಮಾನದ ವೈಪರೀತ್ಯ, ವಾಯು ಮಾಲಿನ್ಯ ಮುಂತಾದ ಗಂಡಾಂತರಕಾರಿ ಪ್ರಾಕೃತಿಕ ಘಟನೆಗಳು ಮನುಷ್ಯ ಹಾಗೂ ಇತರೆ ಜೀವಿಗಳ ಬದುಕಿಗೆ ಎಂತಹ ಸಂಚಕಾರವನ್ನು ತರುತ್ತವೆ ಎನ್ನುವುದರ ಅರಿವು ಈಚಿನ ವರ್ಷಗಳಲ್ಲಿ ನಮಗಾಗಿದೆ. ಬೇಗ ಎಚ್ಚೆತ್ತುಕೊಂಡು ನಿಸರ್ಗದ ಮೇಲಿನ ಮಾನಭಂಗವನ್ನು ತಡೆಯದಿದ್ದರೆ, ಭವಿಷ್ಯದಲ್ಲಿ ನಮ್ಮೆಲ್ಲರ ಬದುಕು ದುರಂತಮಯ ವಾಗುವುದರಲ್ಲಿ ಸಂದೇಹವಿಲ್ಲ.

ಇಂದಿನ ಸಂದಿಗ್ಧ ಸಮಯದಲ್ಲಿ ನಮ್ಮ ರಾಷ್ಟ್ರಕ್ಕೆ ಅನಿವಾರ್ಯವಾಗಿರುವುದು ವೈಚಾರಿಕ ಸ್ವರೂಪದ ಮಾರ್ಗೋಪಾಯಗಳ ಜೊತೆಗೆ ಅಥವಾ ಅದಕ್ಕಿಂತ ಅತ್ಯಧಿಕ ಮಿಗಿಲಾಗಿ ಭಾವಾತ್ಮಕ ಸ್ವರೂಪಿಯಾದ ಕಾರ್ಯಾಚರಣೆ. ಇದು ಸಾಹಿತ್ಯ ಮತ್ತು ವಿವಿಧ ಕಲೆಗಳ ಮೂಲಕ ನೆರವೇರುವಂಥದ್ದು. ಅದರಲ್ಲೂ, ಸಾಹಿತ್ಯ ಇಂತಹ ಒಂದು ರಾಷ್ಟ್ರಕಲ್ಯಾಣಕಾರಿ ಕಾಯಕದಲ್ಲಿ ಪ್ರಮುಖ ಪಾತ್ರವನ್ನು ವಹಿಸಬಹುದು; ಹೆಚ್ಚು ಜನಪರ ಮತ್ತು ಸಮಾಜೋಪಕಾರಿಯಾಗಬಹುದು. ಅದರ ಮಾನವೀಯವೂ, ಹೃದ್ಯವೂ ಆಗಿರುವ ಉದಾರ ಸಂದೇಶ ಸಿಡಿದು ಹೋಗುತ್ತಿರುವ ರಾಷ್ಟ್ರ ಜೀವನದ ಅಲಾಯದಗೊಂಡ ಚೂರುಗಳನ್ನು ಮತ್ತೆ ಸೌಹಾರ್ದ ಸೌಮನಸ್ಯಗಳಿಂದ ಬೆಸೆದು ಒಗ್ಗೂಡಿಸುವ ದಿಸೆಯಲ್ಲಿ ಸಮರ್ಥ ಸಾಧನವಾಗ ಬಹುದು.

'ಭಾವೈಕ್ಯ' ಎನ್ನುವ ಪದ ಅರ್ಥಪೂರ್ಣ ನಿಜ. ಈ ಪದ ಇಂದು ರಾಜಕೀಯ ಮತ್ತು ಆಡಳಿತದ ವಲಯಗಳಲ್ಲಿ ಹೆಚ್ಚು ಚಾಲ್ತಿಯನ್ನು ಪಡೆದಿದೆ. ಆದರೆ ಭಾವೈಕ್ಯಕ್ಕಿಂತ 'ಭಾವ ಸಮನ್ವಯ' ಅಥವಾ 'ಭಾವ ಸಾಮರಸ್ಯ' ಹೆಚ್ಚು ಸೂಕ್ತವಾದ ಮಾತೆಂದು ನನ್ನ ಎಣಿಕೆ. ಭಾವೈಕ್ಯದಲ್ಲಿ ಎಲ್ಲವೂ ಒಂದಾಗಿ ತಮ್ಮ ತಮ್ಮ ವಿಶಿಷ್ಟ ಚಹರೆಗಳನ್ನು ಕಳೆದುಕೊಳ್ಳುವ ಅರ್ಥಾಚ್ಛಾಯೆಯ ಭಯವಿದೆ. ದೇಶದ ಸಮಗ್ರ ಮತ್ತು ಏಕತೆಯ ಹೆಸರಿನಲ್ಲಿ ವ್ಯಕ್ತಿ ಮತ್ತು ಸಮೂಹದ ವಿಶಿಷ್ಟವಾದ ಆಚಾರ ವಿಚಾರಗಳು, ಉಡುಗೆ ತೊಡುಗೆಗಳು, ಉಣಿಸು, ಮತ ಧರ್ಮದ ಶ್ರದ್ಧಾಭಾವನೆಗಳು ಇನ್ನಿತರ ಜನಾಂಗೀಯ ಸ್ವಂತಿಕೆಗಳು ಭಾವೈಕ್ಯದಲ್ಲಿ ತಮ್ಮ ಅತಿಶಯತೆಯನ್ನು ನೀಗಿಕೊಂದು, ಚಹರೆ ನೀಗಿದ ಸೈನಿಕ ಕವಾಯತನ್ನು ಹೋಲಬಹುದು. ನಮ್ಮ ವೈಯಕ್ತಿಕವಾದ ವೈಶಿಷ್ಟ್ಯಗಳನ್ನು, ವೈವಿಧ್ಯಗಳನ್ನು ಮತ್ತು ವೈಲಕ್ಷಣ್ಯಗಳನ್ನು ಹಾಗೆಯೇ ಉಳಿಸಿಕೊಂಡೂ ನಾವೆಲ್ಲ ಒಂದೆನ್ನುವ ಭಾವನೆ ಈ ದೇಶದಲ್ಲಿ ಶತಮಾನಗಳಿಂದ ಜಗತ್ತಿಗೊಂಡು ಅಪ್ರತಿಮ ಉದಾಹರಣೆಯಾಗಿ ಸಂದಿದೆ. ಹಾಗೆಂದು ನಮ್ಮ ನಮ್ಮಲ್ಲಿ ಒಡಕು, ಅಸಹಿಷ್ಣುತೆ, ಮತ್ಸರ ಮುಂತಾದ ಮಾರಕ ಭಾವನೆಗಳಿಲ್ಲವೆಂದಲ್ಲ. ಆದರೆ ರಾಷ್ಟ್ರಹಿತದ ಪ್ರಶ್ನೆ ಎದುರಾದಾಗ ನಮ್ಮನಾಡಿನ ಗಡಿ ಪ್ರದೇಶಗಳಲ್ಲಿ ನೆರೆಯ ದುರಾಕ್ರಮಣಗಳ ಉಪಟಳ ಹೆಚ್ಚಾದಾಗ ನಾವೆಲ್ಲ ನಮ್ಮ ನಡುವಣ ಸಣ್ಣಪುಟ್ಟ ಭೇದಗಳನ್ನು ಮರೆತು ಹಿಂದೆಲ್ಲ ಒಂದಾಗಿದ್ದೇವೆ. ಮುಂದೆಯೂ ಇದನ್ನು ಸಂದೇಹಿಸಬೇಕಾದ್ದಿಲ್ಲ.

ಬಹು ಸಂಸ್ಕೃತಿಯ ಈ ನಮ್ಮ ಮಹಾನ್ ದೇಶಕ್ಕೆ 'ಭಾವ ಸಾಮರಸ್ಯ'ದ ಪರಿಕಲ್ಪನೆಯೇ ಸೂಕ್ತ ಹಾಗೂ ಸುಸಂಗತ. ಒಂದು ತೋಟದಲ್ಲಿ ಒಂದೇ ಬಗೆಯ

ಹೂವಿದ್ದರೆ ಅದರ ನೋಟ ಏಕತಾನತೆಯ ಬೇಸರ ಉಂಟು ಮಾಡುತ್ತದೆ. ಹೀಗೆಯೇ ಭಾವೈಕ್ಯದ ಪರಿಕಲ್ಪನೆ ಸಹ. ನಮ್ಮೆಲ್ಲಾ ವಿಶೇಷತೆಗಳನ್ನು ತೊಡೆದು ಒಂದೇ ಬಗೆಯ ಬದುಕಿನ ರೀತಿ ಮತ್ತು ಆಶೋತ್ತರಗಳನ್ನು ಹೊಂದಿದಾಗ, ಅರ್ಥಾತ್ ಏಕ ಸಂಸ್ಕೃತಿಯ ಭಾವನೆಗೆ ಇಂಬು ಕೊಟ್ಟಾಗ ಅದು ಒಂದೇ ಬಗೆಯ ಪುಷ್ಪವನದಂತೆ ಕಂಡೀತು, ಅದೇ, ಒಂದು ಉದ್ಯಾನದಲ್ಲಿ ಹಲವು ಬಗೆಯ ಪುಷ್ಪಗಳಿದ್ದಾಗ, ಉದಾಹರಣೆಗೆ ಮಲ್ಲಿಗೆ, ಜಾಜಿ, ಇರುವಂತಿಗೆ, ಕನಕಾಂಬರ, ಚೆಂಡು ಹೂ ಇತ್ಯಾದಿಗಳಿದ್ದಾಗ, ಅವು ಕಂಪು ಆಕಾರ ಮತ್ತು ಬಣ್ಣಗಳಲ್ಲಿ ಭಿನ್ನವಾಗಿದ್ದರೂ ಪರಸ್ಪರ ಸಹಕರಿಸಿಕೊಂಡು ಇಡೀ ಆ ಉಪವನಕ್ಕೆ ಒಂದು ವೈವಿಧ್ಯದ, ವೈಶಿಷ್ಟ್ಯದ ಹೆಚ್ಚುಗಾರಿಕೆ ಹಾಗೂ ಶೋಭೆಯನ್ನು ತರುತ್ತದೆ. ನೋಡುವವರ ಕಣ್ಮನಗಳನ್ನು ಆಪ್ಯಾಯನಗೊಳಿಸುತ್ತವೆ. ಇದೇ, 'ಭಾವೈಕ್ಯ' ಮತ್ತು 'ಭಾವ ಸಾಮರಸ್ಯ'ಕ್ಕೆ ಇರುವ ವ್ಯತ್ಯಾಸ. ಇಂದು ನಮಗೆ ಬೇಕಾಗಿರುವುದು ಮನಸ್ಸುಗಳನ್ನು ಒಗ್ಗೂಡಿಸುವ, ಪರಸ್ಪರ ಸೋದರತ್ವದ ತತ್ತ್ವವನ್ನು ಸಮ್ಮತಿಸಿದ, ವಿಭಿನ್ನತೆಯಲ್ಲಿ ಏಕತೆಯನ್ನು ದರ್ಶಿಸುವ ಇಂತಹ ಸಮರಸತೆ.

ಒಟ್ಟಿನಲ್ಲಿ, ಪಿತ್ತೋದ್ರೇಕವಿಲ್ಲದ ದೇಶ ಪ್ರೀತಿ, ಪರಾಕ್ರಮಣಶೀಲವಲ್ಲದ ಸ್ವಭಾಷೆ ಸ್ವಸಂಸ್ಕೃತಿಗಳ ಸದಭಿಮಾನ ಹಾಗೂ ನಾಗರೀಕತೆಯ ಮೆರೆತಕ್ಕೆ ಅನುರೂಪಾದ ಅಂತಸ್ಸಂಸ್ಕೃತಿಯ ಶಿಕ್ಷಣ – ಸಹಬಾಳ್ವೆಯ ಬಗೆಗೆ ಯುಕ್ತ ತಿಳುವಳಿಕೆಯನ್ನು ನೀಡಿ ಮಹಾಜನರ 'ಮಂದಿತನ'ವನ್ನು ನೀಗಿ, ಅವರನ್ನು ಪೌರಪ್ರಜ್ಞರನ್ನಾಗಿ ಪರಿವರ್ತಿಸುವ ಸತ್ಕಾರ್ಯದಲ್ಲಿ ಸಾಹಿತ್ಯ ಗಣನೀಯ ಪಾತ್ರವನ್ನು ವಹಿಸಬಹುದು. ವಿಶ್ವಮಾನವತೆಯ ಭಾವನೆಯನ್ನು ನಮ್ಮ ಹೆಮ್ಮೆಯ ನಾಡಿನ ಮುಂಬಾಳಿನ ಏಳಿಗೆಯ ಏಕಮಾತ್ರ ಭರವಸೆಯಾದ ಯುವ ಪೀಳಿಗೆಯಲ್ಲಿ ಬೇರೂರಿಸುವಲ್ಲಿ ಹೊಸ ಆಶೋತ್ತರಗಳ ಹಾಗೂ ದೃಷ್ಟ್ಯಂತರ ಉಳ್ಳ ಸಾಹಿತ್ಯ ಸಾರ್ಥಕವಾಗಬಹುದು.

ಬದುಕಿನ ಇಳಿಜಾರಿನ ಈ ಹಂತದಲ್ಲಿ ನಿಂತು ಆಲೋಚಿಸಿದಾಗ ನಾನು ಎಷ್ಟನ್ನೋ ಗಳಿಸಿದ್ದೇನೆ; ಮತ್ತೆಷ್ಟನ್ನೋ ಕಳೆದುಕೊಂಡಿದ್ದೇನೆ. ಎಷ್ಟೋ ನನಗರಿವಿಲ್ಲದೆಯೇ ನನ್ನ ಕೈಯಿಂದ ಜಾರಿಕೊಂಡಿದೆ. ಇನ್ನೂ ಎಷ್ಟನ್ನೋ ಗಳಿಸಬೇಕೆಂಬ ಆಸೆಯನ್ನು ಬೆಳೆಸಿಕೊಂಡಿದ್ದೇನೆ. ಅವು ಕೈಗೂಡುವುವೋ ಇಲ್ಲವೋ ಎನ್ನುವ ಶಂಕೆಯೂ ಕಾಡದೆ ಇಲ್ಲ. ಇದು ಹೇಗೇ ಇರಲಿ, ನನ್ನ ಬದುಕಿನಲ್ಲಿ ಯಾವುದೋ ಒಂದು ಕಾಲ ಮತ್ತು ನೆಲೆಯಲ್ಲಿ ಅನಿರೀಕ್ಷಿತವಾಗಿ ಪ್ರವೇಶಿಸಿ ಇದ್ದಷ್ಟು ಕಾಲ ಸ್ನೇಹ, ಪ್ರೀತಿ, ಹೃದಯ ಸಂಪನ್ನತೆ, ಉಲ್ಲಾಸಗಳನ್ನು ಧಾರಾಳವಾಗಿ ನನಗೆ ಧಾರೆ ಎರೆದು, ತಾವು ನನ್ನಿಂದ ಏನನ್ನು ಪಡೆದರೋ ಏನನ್ನು ಇಲ್ಲವೋ, ಬಹಳಷ್ಟನ್ನು ಗಳಿಸಿಕೊಂಡೆವು ಎಂದು ನನಗೆ ಭರವಸೆಯನ್ನಿತ್ತು ಹಾದಿ ಮಧ್ಯದಲ್ಲೇ ಮರೆಯಾದ ಆತ್ಮೀಯರನ್ನು ನಾನು ನೆನೆದಾಗ ಒಂದು ಬಗೆಯ ಖೇದಭರಿತ ವಿಷಣ್ಣ ಭಾವ ಅಂತರಂಗವನ್ನು ಆಚ್ಛಾದಿಸುತ್ತದೆ. ಅಂತಹ ಹಲವು ಹಿರಿಯ ಕಿರಿಯ ಸಾರ್ಥಕ ಚೇತನಗಳಲ್ಲಿ ಸಂಕೇತಪ್ರಾಯವಾಗಿ ಒಬ್ಬರನ್ನು ಮನದಾಳದಿಂದ ನಾನು ಸ್ಮರಿಸಬೇಕು. ಈಚೆಗೆ

ನಮ್ಮನ್ನು ಅಗಲಿದ, ವಿನಯ ಸಜ್ಜನಿಕೆಗಳ ಸಕಾರವೆನ್ನಿಸಿದ ಹಿರಿಯ ಮಿತ್ರರೂ ಕನ್ನಡ ಚಲನಚಿತ್ರ ಜಗತ್ತಿನ ಶಕ ಪುರುಷರೂ ಆದ ಡಾ. ರಾಜಕುಮಾರ್.

ಮತ್ತೆ ಕೆಲವರು ಎಂದೋ ಒಮ್ಮೆ ನನ್ನ ಒಡನಾಡಿಗಳಾಗಿ, ನೋವು ನಲಿವಿನ ಪಾಲುಗಾರರಾಗಿ ತಮ್ಮ ಸ್ವಂತ ಅಗಚಾಟಲುಗಳನ್ನು ಮರೆಸಿ, ಪ್ರಸನ್ನತೆಯನ್ನು ಪ್ರದರ್ಶಿಸುತ್ತಾ ಜೊತೆ ಜೊತೆಗೆ ಹೆಜ್ಜೆ ಹಾಕುತ್ತ ಬಂದಿದ್ದಾರೆ. ಇಂತಹ ಸ್ನೇಹ ಜೀವಿಗಳ ಸಂಗದ ಪಾವಿತ್ರ್ಯವನ್ನು ನೆನೆದಾಗ ಬದುಕಿಗೆ ಮೂಡುವ ಧನ್ಯತಾಭಾವ ವಾಗತೀತವಾದದ್ದು. ನನಗೆ ಜನ್ಮಗಳಲ್ಲಿ ನಂಬಿಕೆ ಇಲ್ಲ. ಒಂದು ವೇಳೆ ಅವು ಇದ್ದರೆ, ಎಷ್ಟೇ ಕಷ್ಟ ನಷ್ಟವಾಗಿದ್ದರೂ ನಾನು ಹಲವಾರು ಜನ್ಮಗಳನ್ನು ನನ್ನ ಸಂಗಡಿಗ ಸ್ನೇಹ ಜೀವಿಗಳ ಸಹವಾಸದಲ್ಲಿ, ಮಹಾನ್ ಪರಂಪರೆಯ ಈ ನನ್ನ ಭಾರತ ದೇಶದಲ್ಲಿ, ಅದರಲ್ಲೂ ನನ್ನ ಅಚ್ಚುಮೆಚ್ಚಿನ ಕರ್ನಾಟಕದಲ್ಲಿ, ಮಿಗಿಲಾಗಿ ಬೆಂಗಳೂರು ಮತ್ತದರ ಲಾಲ್‌ಬಾಗ್ ಹಾಗೂ ಗಾಂಧಿಬಜಾರಿನ ಚೇತನೋತ್ಸಾಹದ ಜೀವೋತ್ಕರ್ಷಕಾರಕ ಪರಿಸರದಲ್ಲಿ ಮೈ ತಳೆಯಬೇಕೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಹಾಗೆಯೇ, ನನ್ನ ಉಸಿರಾದ ಕನ್ನಡನುಡಿಯ ಮೂಲಕ ಕರುನಾಡ ತಾಯಿಯ ಪಾವನತರ ಸೇವೆಯನ್ನು ಮಾಡುವ ಅವಕಾಶಕ್ಕೆ ನೀವೆಲ್ಲರೂ ಹರಸಿ ಹಾರೈಸಬೇಕೆಂದು ವಿನಮ್ರವಾಗಿ ಬಿನ್ನವಿಸುತ್ತೇನೆ.

ಸಮಾಜದ ಸಮಸ್ತರಲ್ಲಿ ರಾಷ್ಟ್ರಕತೆಯ ಭಾವನೆಯನ್ನು ಅಭಿವರ್ಧಿಸಿ ನಮ್ಮ ದೇಶದ ಸಮಗ್ರತೆ ಮತ್ತು ಸುಭದ್ರತೆಯನ್ನು ಹೆಚ್ಚಿಸುವ ಸತ್ಕಾರ್ಯದಲ್ಲಿ ನಮ್ಮ ಅಕ್ಷರ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಪರಸ್ಪರ ಪೂರಕವಾಗಿ ಪಾಲ್ಗೊಳ್ಳುವುದು ಇಂದಿನ ಅಗ್ರಮಾನ್ಯ ಆದ್ಯತೆಯಾಗಿದೆ, ಒಡೆದು, ಸಿಡಿದು, ಸೆಟೆದು ಸದಾ ಸೆಣಸಾಟಕ್ಕೆ ಸಜ್ಜಾದಂತಿರುವ ವಿವಿಧ ವರ್ಗ, ಮತಧರ್ಮ, ಸಂಸ್ಕೃತಿಗಳ ಸಾಮಾಜಿಕರನ್ನು; ಭಾಷೆ, ನಿಸರ್ಗದ ಸಂಪನ್ಮೂಲ, ಗಡಿ ಇನ್ನಿತರ ನೆವಗಳಿಂದ ವಿಘಟಿತಗೊಳ್ಳುತ್ತ ಅಪಾರ್ಥತೆಯ, ಹಗೆಯ ಹುತ್ತಗಳಾಗಿ ರಾಷ್ಟ್ರದ ಸೌಹಾರ್ದಯುತ ಜೀವನವನ್ನು ನಂಜೇರಿಸುತ್ತಿರುವ ಸಂದರ್ಭದಲ್ಲಿ ನಾಡವರನ್ನು ಭಾವಾತ್ಮಕವಾಗಿ ಬೆಸೆದು ಒಗ್ಗೂಡಿಸುವ ಧನ್ಯತರ ಕರ್ತವ್ಯವನ್ನು ನಮ್ಮ ಸಾಹಿತ್ಯ ಕಲೆಗಳ ಜೊತೆಗೆ ವ್ಯಾಪಾರೀ ಚರ್ಯೆಯ ಚಲನಚಿತ್ರಗಳು, ಟಿ.ವಿ. ಧಾರಾವಾಹಿಗಳು ಮತ್ತು ಪತ್ರಿಕೆಗಳು ನೆರವೇರಿಸ ಬೇಕಾದ ತುರ್ತನ್ನು ಸಾರಿ ನುಡಿಯಬೇಕಿಲ್ಲ.

ನಮ್ಮ ಇತಿಹಾಸ ಮತ್ತು ಹಿಂದಿನ ಹಾಗೂ ಇಂದಿನ ಜನ ಜೀವನದಲ್ಲಿರ ಬಹುದಾದ ಮಾನವೀಯ ಮತ್ತು ಸ್ನೇಹ–ಸೋದರತ್ವದ ಕಥಾನಕ, ಘಟನೆಗಳನ್ನು ಮತ್ತು ಪ್ರೀತಿ ವಿಶ್ವಾಸಗಳನ್ನು ಕುದುರಿಸುವ ಪ್ರಕರಣಗಳನ್ನು ಆಯ್ದು ಪದೇ ಪದೇ ಅವುಗಳನ್ನು ನಮ್ಮ ದೇಶಿಗರ ಮನಸುಗಳಲ್ಲಿ ಪರಿಣಾಮಕಾರಿಯಾಗಿ ಬೇರೂರುವಂತೆ, ಅವರ ಹೃದಯ ಪರಿವರ್ತಿಸುವಂತೆ ಎಲ್ಲ ಶಬ್ದ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಪ್ರಯತ್ನಿಸಬೇಕಾಗಿದೆ. ಪರಸ್ಪರ ನಂಬಿಕೆ, ವಿಚಾರ ವಿನಿಮಯ, ಔದಾರ್ಯಯುತ ಕೊಳುಕೊಡೆಯ ಪ್ರವೃತ್ತಿ ರಾಷ್ಟ್ರಿಗರಲ್ಲಿ ಅಧಿಕಗೊಳ್ಳಬೇಕಾಗಿದೆ. ಭೂತಕಾಲದಿಂದ

ಪಾಠ ಕಲಿಯುವುದು ವರ್ತಮಾನಸ್ಥರಿಗೆ ಭವಿಷ್ಯೋನ್ಮುಖ ರಾಗುವ ದಿಸೆಯಲ್ಲಿ ಲಾಭದಾಯಕ. ಚರಿತ್ರೆಯ ಗತಕಾಲೀನ ಮತ್ತು ಸಾಮಾಜಿಕ ಬಾಳ್ವೆಯ ಕೆಲವೊಂದು ಅವಿವೇಕಯುತ ವಿಚ್ಛಿದ್ರಕಾರಿ ಮತ್ತು ಭಾವೋನ್ಮತ್ತ ಜೀವ ಹನನಕಾರಿ ನಿದರ್ಶನಗಳನ್ನು ಉಪ್ಪು ಖಾರ ಹಚ್ಚಿ ಸ್ವಾದಿಷ್ಟಗೊಳಿಸಿ ಮಾಧ್ಯಮಗಳಲ್ಲಿ ಮೆರೆಸಿ, ಮೊದಲೇ ಬಿಗಡಾಯಿಸಿರುವ ಮನಸ್ಸುಗಳನ್ನು ಮತ್ತಷ್ಟು ಕಹಿಗೊಳಿಸಿ ದೂರ ಸಿಡಿಸುವ ಬದಲು, ಸಮಾಜವನ್ನು ಸೌಮನಸ್ಯದಲ್ಲಿ ಸುಸಂಘಟಿಸುವ ಉದಾಹರಣೆಗಳನ್ನು ಪ್ರಚುರಪಡಿಸುವುದು ಅತ್ಯಗತ್ಯವಾಗುತ್ತದೆ. ನಾವೆಲ್ಲ ಒಂದೇ ದೈವ ಸೃಷ್ಟಿಯ ಜೀವೋತ್ಪತ್ತಿಗಳೆಂದು, ಎಲ್ಲರಿಗೂ ಶಾಂತಿ ಸಮಾಧಾನ ಸುಖ ಸಮೃದ್ಧಿಗಳ ಬದುಕಿನ ಹಕ್ಕಿರುವುದೆಂದು ಮನಗಂಡು ಉದಾತ್ತವೂ ನೀತಿ ಪ್ರೇರಕವೂ ಆದ ಸಂಗತಿಗಳನ್ನು ಸಾದರಪಡಿಸುವುದು ಇಂದು ಅತ್ಯಂತ ಜರೂರಾಗಿದೆ. ಇದರ ಪರಿಣಾಮವಾಗಿ ಭಯೋತ್ಪಾದನೆ; ಆಸ್ತಿಪಾಸ್ತಿಯ ಮತ್ತು ಪೌರರ ಜೀವ ಹಾನಿ; ಧಾರ್ಮಿಕ, ಸಾಮಾಜಿಕ ನೆಲೆಗಳ ವಿನಾಶ– ಮತ್ತಿತರ ಸಾಮಾಜಿಕ ಪಿಡುಗುಗಳ ರೌದ್ರಾಟ್ಟಹಾಸ ಕಾಲಾನಂತರದಲ್ಲಿ ಹೆಡೆ ಮುದುಡಿ ಪಲಾಯನಿಸಬಹುದು.

ಕೊಂಚ ಶ್ರಮವಹಿಸಿ ಚರಿತ್ರೆಯನ್ನೋ, ನಮ್ಮ ನಾಡಿನ ಹಿಂದಿನ ಜೀವನ ರೀತಿಯನ್ನೋ ಕೆದಕಿದರೆ ನಮ್ಮ ಬದುಕುಗಳನ್ನು ಹಸನುಗೊಳಿಸಿ ಸೊಗಸಿಸುವ, ಭಾವೋದ್ದೀಪ್ತವಾಗಿಸುವ ಸನ್ಮಾರ್ಗ ಸೂಕಚವಾಗುವಂತಹ ಅಗಣಿತ ವಿಷಯಗಳು ಗೋಚರಿಸಿಯಾವು. ವಿದ್ಯಾವಂತ ಪ್ರಜ್ಞಾಶಾಲಿಗಳು ಇಂತಹವನ್ನು ಆಯ್ದು ಮಾಧ್ಯಮಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಅದರಲ್ಲೂ, ನಮ್ಮ ಎಳೆಯ ಹಾಗೂ ಹರೆಯವಂತ ಯುವ ಪೀಳಿಗೆಗೆ ಇಂತಹ ಸಂದೇಶವನ್ನು ಮುಟ್ಟಿಸುವುದಂತೂ ಎಲ್ಲ ವಿವೇಕ ನಾಗರಿಕರ ಹೊಣೆಯಾಗಿದೆ. ಹಾಗೆಯೇ, ಮಹಾವ್ಯಕ್ತಿಗಳ ಬದುಕಿನ ಘಟಿತಗಳ ಹಾಗೂ ಸಾಧನೆಗಳ ತಕ್ಕ ಮಟ್ಟಿನ ಪರಿಚಯ ಸಹ ಜಾತಿ ಮತ ಭೇದವಿಲ್ಲದೆ ಸಮಸ್ತ ಪ್ರಜಾವರ್ಗಕ್ಕೂ ಆಗಬೇಕಾದುದು ಆದೇಯವಾಗಿದೆ. ಪ್ರಾಚೀನರ ಜೊತೆಗೆ ಈಚಿನವರಾದ ರಾಮಕೃಷ್ಣ ಪರಮಹಂಸ, ಸೂಫೀ ಸಂತು, ಗಾಂಧೀಜಿ, ಮದರ್ ತೆರೇಸ ಮೊದಲಾದ ವಿಭೂತಿ ಚೇತನಗಳ ಬದುಕಿನ, ಚಿಂತನೆಯ ಸಂದೇಶ ಇಂದಿಗೆ ಅತ್ಯುಪಯುಕ್ತವೆನ್ನಿಸುತ್ತದೆ.

ಈ ಸಂದರ್ಭದಲ್ಲಿ ನಾನು ಓದಿದ ಒಂದು ಭಾವ ಸಾಮರಸ್ಯದ ನಿದರ್ಶನ ನೆನಪಾಗುತ್ತಿದೆ. ಇಂತಹ ಹಲವು ಐಕ್ಯಸಾಧಕ ಸಂಗತಿಗಳು ನಮ್ಮವರ ಕೃತಿಗಳಲ್ಲಿ ನಿರೂಪಿತವಾಗಿವೆ. ಅವುಗಳನ್ನು ಮತ್ತೆ ಸಾಮಾಜಿಕರ ಎದುರು ಬಿಚ್ಚಿಡುವುದು ಪ್ರಸ್ತುತವೆನ್ನಿಸುತ್ತದೆ. ಈ ಪ್ರಕರಣ ಹಿರಿಯ ಲೇಖಕರಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ರಚಿಸಿ ಪ್ರಕಾಶಿಸಿದ ಕೊನೆಯ ಕೃತಿ "ಮಾತುಗಾರ ರಾಮಣ್ಣ" ಕೃತಿಯಲ್ಲಿದೆ. ಇದು ಹಿಂದಿನ ಶೃಂಗೇರಿ ಸ್ವಾಮಿಯೊಬ್ಬರಿಗೆ ಸಂಬಂಧಿಸಿದ್ದು. ಇದನ್ನು ಲೇಖಕರ ಬಾಯಿಯಲ್ಲೇ ಕೇಳಿ : 'ಇದು ಒಂದು ಸಲ ನಮ್ಮ ಒಂದು ದೊಡ್ಡ ಊರಿನಲ್ಲಿ ಸ್ವಾಮಿಗಳು ತಂಗಿದ್ದಾಗ ಕಂಡಿತು. ಆ ಊರಿನಲ್ಲಿ ಮುಸಲ್ಮಾನ ಜನ

ತಕ್ಕಷ್ಟು ಉಂಟು. ಸ್ವಾಮಿಗಳು, ಮೇನೇಲಿ ಕುಳಿತು ಹೋಗುವ ದಾರಿ, ಈ ಜನರ ಮಸೀದಿ ಇರೋ ಇಂಥ ದಾರೀಲಿ ಹಾಯಬೇಕಾದರೆ ಯಾವಾಗಲೂ ಸ್ವಲ್ಪ ಚರ್ಚೆ ಎದ್ದೇ ಏಳುತ್ತೆ. ನಮ್ಮ ಮಸೀದಿ ಮುಂದೆ ವಾಲಗ ಮಾಡಿಸಿಕೊಂಡು ಹೋಗಕೂಡದು ಅಂತ ಅವರು ನಮ್ಮ ಜನರಿಗೆ ಹೇಳುತ್ತಾರೆ.

'ನಮ್ಮ ಜನ, ನೂರು ಜನ ಹೋಗೋ ಬೀದೀಲಿ ನಾವು ಓಲಗ ಮಾಡಿಸಿಕೊಂಡು ಹೋದರೆ ನಿಮಗೇನು ತೊಂದರೆ? ಅಂದು ಅವರನ್ನು ಕೇಳುತ್ತಾರೆ. ಇದು ತೊಂದರೆ ಆಯಿತೇ, ಆಗಲಿಲ್ಲವೇ ಅನ್ನೋ ಮಾತಲ್ಲ, ದೊಡ್ಡಸ್ತಿಕೆಯ ಮಾತು. ಸ್ವಾಮಿಗಳು ಮೇನೇಲಿ ಕುಳಿತು ಈ ದಾರೀಲಿ ಹೋಗೋ ಮಾತು ಕೇಳಿದಾಗ ಮುಸಲ್ಮಾನರ ಪ್ರಮುಖರು ಇಲ್ಲಿ ಹೋಗುತ್ತಾ ಓಲಗ ನಿಲ್ಲಿಸಬೇಕು ಅಂತ ನಮ್ಮ ಜನಕ್ಕೆ ತಿಳಿಸಿದರು. ಇದಕ್ಕೆ ಯಾತಕ್ಕೆ ಒಪ್ಪಿಕೊಳ್ಳೋದು ಅಂತ ನಮ್ಮವರ ಹಟ. ಇವರಿವರು ಮಾತಾಡಿಕೊಳ್ಳುತ್ತಾ ಇದ್ದಾರೆ. ಇದೇನೋ ಚರ್ಚೆ ನಡೆಯುತಾ ಇದೆ ಅಂತ ಸ್ವಾಮಿಗಳಿಗೆ ತೋಚಿತು. ಏನು ಸಂಗತಿ ಅಂತ ಅವರು ವಿಚಾರಿಸಿದರು. ಸಂಗತಿ ಏನು ಅಂಥ ಇವರು ಹೇಳಿದರು. 'ಆ ಮುಸಲ್ಮಾನ ಜನರಿಗೆ ಬೇಸರ ಆಗೋ ಹಾಗೆ ನಾವು ಏನೂ ಮಾಡೋದಿಲ್ಲ ಅಂತ ಧೈರ್ಯ ಹೇಳಿ. ಮೇನೆಯಲ್ಲಿ ಕುಳಿತು ನಾವು ಆ ಸ್ಥಳಕ್ಕೆ ಬಂದು ಏನು ಸರಿ ಅಂತ ಅನ್ನಿಸುತ್ತೆ ಅದನ್ನ ಮಾಡುತ್ತೇವೆ, ಎಲ್ಲ ಏರ್ಪಾಡು ನಡೆಯಲಿ' ಎಂದರು.

'ಮಾರನೆಯ ದಿನ ಮೆರವಣಿಗೆ ಹೊರಟಿತು. ಮೇನೆ, ಮಸೀದಿ ಇನ್ನೇನು ಹತ್ತು ಗಜದಲ್ಲಿ ಇದೆ ಅನ್ನುವಲ್ಲಿಗೆ ಬಂದಿತು. ಮುಸಲ್ಮಾನ ಜನ ಮಸೀದಿ ಎದುರಿಗೆ ಗುಂಪು ಗುಂಪಾಗಿ ನಿಂತಿದಾರೆ. ಸ್ವಲ್ಪ ಹೆಚ್ಚು ಕಡಿಮೆಯಾದರೆ ಬಡಿದಾಟವೇ ಆಗಬೇಕು. ಸ್ವಾಮಿಗಳು 'ಓಲಗ ನಿಲ್ಲಿಸಿ' ಅಂದರು. ಓಲಗ ನಿಂತಿತು. ಕ್ಷಣ ಬಿಟ್ಟು ಸ್ವಾಮಿಗಳು ಮೇನೆಯಿಂದ ಕೆಳಕ್ಕೆ ಇಳಿದು ಮಸೀದಿ ಎದುರಿಗೆ ನಡೆದುಕೊಂಡು ಬಂದರು. ಮುಸಲ್ಮಾನ ಜನ ಸಲಾಂ ಮಾಡಿದ್ದೂ ಮಾಡಿದ್ದೇ. ದಯಮಾಡಬೇಕು, ದಯಮಾಡಬೇಕು ಅಂದದ್ದೂ ಅಂದದ್ದೇ. ನಮ್ಮ ಜನರ ಮುಖ ಕ್ಷಣ ಪೆಚ್ಚಾಯಿತು. ಒಂದು ಕ್ಷಣದಾಚೆಗೆ ಆಶ್ಚರ್ಯವೋ ಆಶ್ಚರ್ಯ, ಸ್ವಾಮಿಗಳು ಎಂಥ ಜ್ಞಾನಿಗಳು, ಎಂಥ ದೊಡ್ಡವರು ಅಂತ!

'ಆ ಮಸೀದಿಯ ಎದುರಲ್ಲಿ ಎರಡು ನಿಮಿಷ ನಿಂತು ಸ್ವಾಮಿಗಳು ಹತ್ತಿರವಿದ್ದ ಜನಕ್ಕೆ, 'ಈ ನಮ್ಮ ಜನಕ್ಕೆ, 'ಈ ನಮ್ಮ ಜನಕ್ಕೆ ಹೇಳಿ, ಮಸೀದಿಯಲ್ಲಿ ಇವರ ಪ್ರಾರ್ಥನೆಯನ್ನು ಕೇಳೋ ದೇವರು ಮಠದಲ್ಲಿ ನಾವು ದಿನಾ ಪೂಜೆ ಮಾಡುವ ದೇವರೇ. ಆ ಸನ್ನಿಧಿಯಲ್ಲಿ ಓಲಗ ಕೂಡದು ಅಂತ ಇವರು ಹೇಳುತ್ತಾರೆ. ನಾವು ಆ ಸನ್ನಿಧಿಯಲ್ಲಿ ಮೇನೆಯಲ್ಲಿ ಕೂಡ ಕುಳಿತುಕೊಳ್ಳುವುದಿಲ್ಲ. ದೇವರ ಸನ್ನಿಧಿಯಲ್ಲಿ ಭಕ್ತಿಯಿಂದ ನಡೆದುಕೊಳ್ಳಬೇಕು ಎನ್ನುವ ಇವರ ಅಪೇಕ್ಷೆ ನಮಗೆ ತೀರ ಸಮ್ಮತ' ಅಂತ ಅಪ್ಪಣೆ ಕೊಡಿಸಿದರು. ಹತ್ತಿರದ ಜನ ಈ ಮಾತನ್ನು ಮುಸಲ್ಮಾನ ಪ್ರಮುಖರಿಗೆ ತಿಳಿಸಿದರು. ಸ್ವಾಮಿಗಳು ಮೇನೆಯಿಂದ ಇಳಿದದ್ದನ್ನು ನೋಡಿಯೇ ಅವರಲ್ಲಿ

ಒಬ್ಬನು ಸುಳಿವನ್ನು ತಿಳಿದುಕೊಂಡು ಒಳಗಡೆ ಓಡಿ ಹೋಗಿ ಒಂದು ತಟ್ಟೆಯಲ್ಲಿ ಎಲೆ ಅಡಿಕೆ, ಹೂವು, ಹಣ್ಣು ಇರಿಸಿಕೊಂಡು ಬಂದು, ಸ್ವಾಮಿಗಳ ಮಾತು ತನಗೆ ಮುಟ್ಟಿದ ಮೇಲೆ ಆ ಜನರ ಆ ತಟ್ಟೆಯನ್ನು ಮಠದ ಸೇವಕರ ಕೈಗೆ ಕೊಟ್ಟು, ಇದನ್ನು ಸ್ವಾಮಿಗಳಿಗೆ ಒಪ್ಪಿಸಬೇಕೆಂದು ಕೇಳಿಕೊಂಡ. ಸ್ವಾಮಿಗಳು ನಗು ಮುಖದಿಂದ 'ನಮಗೆ ಅದು ಬಂದಿದೆ' ಎಂದು ಹೇಳಿ, ಇನ್ನ ಹತ್ತು ಹೆಜ್ಜೆ ನಡೆದು ಮಸೀದಿಯ ಬಾಗಿಲ ಎಡೆಯನ್ನು ದಾಟಿ ನಿಂತರು, 'ಮೇನೆ ಬರಲಿ' ಎಂದು ಸನ್ನೆ ಮಾಡಿದರು. ಅದು ಬಂದಿತು. ಸ್ವಾಮಿಗಳು ಅದರಲ್ಲಿ ಕುಳಿತರು. ಮೆರವಣಿಗೆ ಮುಂದಕ್ಕೆ ನಡೆಯಿತು.

'ಮೆರವಣಿಗೆ ಮುಗಿದು ಪೂಜ್ಯರ ಬಿಡಾರಕ್ಕೆ ಹಿಂದಿರುಗುವ ವೇಳೆಗೆ ಮುಸಲ್ಮಾನ ಪ್ರಮುಖರು ನಾಲ್ವರು ಅಲ್ಲಿಗೆ ಬಂದಿದ್ದರು. 'ಸ್ವಾಮಿಗಳು, ಆಗಬೇಕು' ಎಂದರು. ಸ್ವಾಮಿಗಳು 'ಅವಶ್ಯ ಆಗಲಿ' ಎಂದರು. ಆ ದಿನ ಚಂದ್ರಮೌಳೇಶ್ವರ ಸ್ವಾಮಿಯ ಪೂಜೆಯೆಲ್ಲಾ ಊರಿನ ಮುಸಲ್ಮಾನರ ಪರವಾಗಿ ನಡೆಯಿತು.'

– ಇಲ್ಲಿ ಸ್ವಾಮಿಗಳ ಮಹಾನುಭಾವತೆ ಯಾವ ರೀತಿಯದು ಎಂಬ ಅಂಶ ಎಲ್ಲರಿಗೂ ಭಾವವೇದ್ಯವಾಗುತ್ತದೆ. ಕವಿ ರವೀಂದ್ರನಾಥ ಠಾಕೂರರು ಹೇಳುವಂತೆ 'We come nearest to the great, when we are great in Huminity' : ನಮ್ಮ ವಿನಯಶಾಲೀನತೆ ಹೆಚ್ಚಿದಂತೆ ನಾವು ಮಹಾತ್ಮರಿಗೆ ಹತ್ತಿರವಾಗುತ್ತೇವೆ. ಈ ನಿದರ್ಶನದಿಂದ ಮತವಂತರು ಮತಿವಂತರಾಗಲೆಂದು ಹಾರೈಸೋಣ. ಹಾಗೆಯೇ, ಜನ ಸಾಮಾನ್ಯರೂ ಇಂಥ ಮಹೋದಾರ ನಡಾವಳಿಯನ್ನು ಗೌರವಿಸಿ, ತಮ್ಮ ಸಂಕುಚಿತ ಮನೋಭಾವವನ್ನು ತಿದ್ದಿಕೊಳ್ಳಲೆಂದು ಆಶಿಸೋಣ.

ನಮ್ಮ ದೇಶ ಪಾರತಂತ್ರ್ಯದಿಂದ ಪಾರಾಗಿ ೫೯ ವರ್ಷಗಳು ಕಳೆದಿವೆ. ನಾವು ಪ್ರಜಾಪ್ರಭುತ್ವವನ್ನು ಸಮುಚಿತವಾಗಿಯೇ ಅಂಗೀಕರಿಸಿದ್ದೇವೆ. ಜೊತೆಗೆ ಧರ್ಮ ನಿರಪೇಕ್ಷತೆಯನ್ನು ಸಂವಿದಾನವಿಧೇಯವಾಗಿ ಒಪ್ಪಿಕೊಂಡಿದ್ದೇವೆ. ಹೀಗಿರುವಾಗ ಹಳ್ಳಿ – ನಗರವೆನ್ನದೆ; ಜಾತಿ, ಮತಧರ್ಮ, ಸಾಮಾಜಿಕ ರೀತಿ ರಿವಾಜುಗಳೆನ್ನದೆ ನಾವೆಲ್ಲರೂ ಭೇದಭಾವರಹಿತ ಸಮಾನರು ಎಂಬ ಉದಾತ್ತ ತತ್ತ್ವವನ್ನು ಸಮ್ಮತಿಸಿದ್ದೇವೆ. ಆದರೆ ವಾಸ್ತವದಲ್ಲಿ ಇದಕ್ಕೆ ತಿಲಾಂಜಲಿ ನೀಡಿದ್ದೇವೆ. ಸಮಾಜದಲ್ಲಿ ಪ್ರತಿ ನಿತ್ಯ ಒಂದಲ್ಲ ಒಂದು ಅಸಮಾನತೆಯ ನಿರ್ದಯ ನಿದರ್ಶನ ತನ್ನೆಲ್ಲ ನಿಷ್ಠುರ ಕ್ರೌರ್ಯ ದಬ್ಬಾಳಿಕೆಯೊಂದಿಗೆ, ಪೈಶಾಚಿಕ ನಡೆ–ನುಡಿಗಳ ಕರಾಳತೆಯೊಂದಿಗೆ ಪತ್ರಿಕೆ, ಟಿವಿಗಳಲ್ಲಿ ಬಣ್ಣಿತವಾಗುತ್ತಿದೆ. ಮನುಷ್ಯ ಮನುಷ್ಯರ ನಡುವಣ ಅಮಾನವೀಯ ಮತ್ತು ಶೋಷಣೆಯ ಪರಿ ಜಗತ್ತಿನೆದುರು ನಮ್ಮನ್ನು ತಲೆ ತಗ್ಗಿಸುವಂತೆ ಮಾಡಿದೆ. ಪ್ರಜಾತಂತ್ರವಿರುವ ಅತ್ಯತಿ ಬೃಹದ್ದೇಶ ನಮ್ಮದೆಂಬ ಹೆಮ್ಮೆ ಎಂದೋ ಮಣ್ಣು ಮುಕ್ಕಿದೆ.

ಜಗತ್ತು ವೈಜ್ಞಾನಿಕ ಹಾಗೂ ವೈಚಾರಿಕವಾಗಿ ಮುಂದೋಡುತ್ತಿರುವ ಇವೊತ್ತಿನ ಕಾಲದಲ್ಲೂ ಮನುಷ್ಯರು ತಮ್ಮ ಸಹಜೀವಿಗಳಾದ ಇತರ ಮನುಷ್ಯರನ್ನು, ಅದರಲ್ಲೂ

ದಲಿತ ವರ್ಗವನ್ನು ದಮನಿಸಿ ಅಪಮಾನಿಸುತ್ತಿರುವ, ಸವಲತ್ತು ಹಕ್ಕುಗಳಿಂದ ವಂಚಿಸುತ್ತಿರುವ ರೀತಿ ಎಂತಹವರನ್ನೂ ಅವಾಕ್ಕಾಗಿಸುತ್ತದೆ, ಕ್ರೋಧದಿಂದ ಕುದಿಯುವಂತೆ ಮಾಡುತ್ತದೆ. ಆದರೆ ಈ ಕ್ರೋಧ, ವ್ಯವಸ್ಥೆಯ ಶಕ್ತಿ ಹಾಗೂ ಗಡುಸತ್ವದ ಎದುರು ನಿಷ್ಪ್ರಯೋಜಕವೆನ್ನಿಸಿ ಬಿಡುತ್ತದೆ. ದಲಿತರ ಹೆಸರಿನಲ್ಲಿ ಸರ್ಕಾರದ ಸವಲತ್ತುಗಳನ್ನು ತಾವು ಫಲಾನುಭವಿಸುತ್ತಾ, ಹಳ್ಳಿಗಾಡಿನ ತಮ್ಮ ಕುಲದ ಅನಕ್ಷರಸ್ಥ ನಿರ್ಗತಿಕ ಬಂಧುಗಳನ್ನು ಹಿಂದಿನ ಯಥಾಸ್ಥಿತಿಯಲ್ಲಿ ಆ ವರ್ಗದ ಮುಂದಾಳುಗಳು ಇರಿಸಿರುವುದು ಶೋಚನೀಯವೆನ್ನಿಸುತ್ತದೆ. ಕೇವಲ ಭಾಷಣಗಳಲ್ಲಿ, ಮೆರವಣಿಗೆಗಳಲ್ಲಿ ಆ ನತದೃಷ್ಟ ದಮನಿತ್ಯರ ಉದ್ಧಾರದ ಬಗ್ಗೆ ಘೋಷಿಸುವ ಇಂತಹ ಮಹಾಸ್ವಾರ್ಥಿ ಆಷಾಢಭೂತಿಗಳು ರಾಜಕೀಯದಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮತ್ತು ಇತರೇ ಸಾರ್ವಜನಿಕ ಕ್ಷೇತ್ರಗಳಲ್ಲಿ ಅಂಕೆಯಿಲ್ಲದೆ ಕೊಬ್ಬಿ ಮೆರೆದಿದ್ದಾರೆ.

ನಮ್ಮ ದೇಶದಂತಹ ನಿರಕ್ಷರಸ್ಥ, ಗ್ರಾಮ ಪ್ರಮುಖ ಸಮಾಜ ವ್ಯವಸ್ಥೆಯಲ್ಲಂತೂ ಸರಿ ಸಮಾನತೆಗೆ ಅರ್ಥವೇ ಇಲ್ಲ. ಯಾವ ಸರಕಾರ ಬಂದರೂ ಅತ್ಯಂತ ದಯನೀಯ ಬದುಕಿನ ಶೌಚ ಕೂಪದಿಂದ ಆ ಹತಭಾಗ್ಯ ಕಂಗಾಲರನ್ನು ಮೇಲೆತ್ತಲಾರದು; ಮನುಷ್ಯರೆಂದು ಪರಿಗಣಿಸಲಾರದು. ಅವರು ಅನುಭವಿಸುತ್ತಿರುವ ವೈಷಮ್ಯ, ಅಸೌಹಾರ್ದತೆ, ಅಪಮಾನ ಜಟಿಲ ಸ್ವರೂಪದ್ದು, ಪಾಶವೀ ಪರಿಯದ್ದು; ಅತ್ಯಂತ ಅಮಾನುಷ ಸ್ವರೂಪದ್ದು, ಸುದ್ದಿ ಮಾಧ್ಯಮಗಳ ಮೂಲಕ ನಮಗೆ ತಿಳಿದು ಬರುವ ಅದರ ಕರಾಳ ಚಹರೆಯನ್ನು ನೆನೆದರೆ, ನಾವೆಲ್ಲ ಪರೋಕ್ಷವಾಗಿಯೋ ನೇರವಾಗಿಯೋ ಪಾಲುಗೊಂಡಿರುವ ಪಾಪಭಾವನೆ ಮೂಡುವುದು ಸಹಜ. ದೀನ ದಲಿತರು, ನಿರ್ಗತಿಕರು ಅಸಂಘಟಿತರಾಗಿ ನಿರುಪಾಯರಾಗಿ ಬಾಳನ್ನು ಸವೆಸಬೇಕಾದ ಅನಿವಾರ್ಯವನ್ನು ನಿರ್ಮಿಸಿರುವ ಗ್ರಾಮೀಣ ಪರಿಸರ ಬದಲಾಯಿಸುವ ಸೂಚನೆಗಳೇ ಕಾಣುತ್ತಿಲ್ಲ.

ಹಳ್ಳಿಗಾಡಿನಲ್ಲಿ ಮನುಷ್ಯ, ಪ್ರಾಣಿಗೂ ಕಡೆ ಎಂಬ ಅರಿವು ನನಗೆ ಮೊದಲು ಆದದ್ದು ಈಗ್ಗೆ ನಲವತ್ತೆಂಟು ವರ್ಷಗಳ ಹಿಂದೆ, ಅಂದರೆ ೧೯೫೦ರಲ್ಲಿ. ಬೆಂಗಳೂರಿನಲ್ಲಿ ಓದು ಮುಗಿಸಿ ಸಹಾಯಕ ಭೂವಿಜ್ಞಾನಿಯಾಗಿ ಗುಲ್ಬರ್ಗಕ್ಕೆ ಹೋದಾಗ. ಭೂಮಿಯನ್ನು ನೀರನ್ನು ಪತ್ತೆ ಹಚ್ಚುವ ಕೆಲಸದಲ್ಲಿ ಕಾಮಗಾರಿ ಇಲಾಖೆಗೆ ನೆರವಾಗುವ ಅವಕಾಶ ನನಗೊದಗಿತು. ಗ್ರಾಮಾಂತರ ಪ್ರದೇಶಗಳಲ್ಲಿ ಬಾವಿಗಳನ್ನು ತೋಡಿಸುವುದು ಈ ಜಲಾನ್ವೇಷಣೆಯ ಉದ್ದೇಶವಾಗಿತ್ತು. ಗುಲ್ಬರ್ಗ –ಸೇಡಂ ರಸ್ತೆಯ ಒಂದು ಕುಗ್ರಾಮಕ್ಕೆ ಸಹೋದ್ಯೋಗಿಯ ಜೊತೆಗೆ ಹೊರಟೆ. ಮುಖ್ಯ ರಸ್ತೆಯಿಂದ ಸುಮಾರು ಏಳೆಂಟು ಮೈಲಿಗಳ ದೂರದಲ್ಲಿನ ಆ ಕೊಂಪೆಗೆ ಸಾರಿಗೆ ಸಂಪರ್ಕವಾಗಲಿ, ಸಮತಟ್ಟಾದ ಹಾದಿಯಾಗಲಿ ಇರಲಿಲ್ಲ. ಬಿಸಿಲಿನಲ್ಲಿ ಪ್ರಯಾಸಪಟ್ಟು ಆ ಹಳ್ಳಿಯನ್ನು ಸಮೀಪಸಿದ್ದಾಯಿತು. ಇನ್ನೂ ಎರಡು ಜೋಪಡಿಗಳು ಕಂಡವು. ಒಬ್ಬ ವೃದ್ಧ ಹಾಗೂ ಕೆಲವು ಹಸುಳೆಗಳ ವಿನಾ ಯಾರೂ ಇದ್ದಂತೆ ತೋರಲಿಲ್ಲ. ದಣಿಗಳ ಹೊಲದ ಕೆಲಸಕ್ಕೆ ಹೋಗಿರಬೇಕು. ಗುಡಿಸಿಲಿನ ಎದುರು

ಆ ವೃದ್ಧ ಮಲಗಿದ್ದ. ನಾನು ಹತ್ತಿರ ಹೋದಾಗ ನಾಯಿಗಳು ಬೊಗಳಿದ್ದರಿಂದ ನಿದ್ದೆಯಿಂದೆ ಎಚ್ಚೆತ್ತು ಪ್ರಶ್ನಾರ್ಥವಾಗಿ ನಮ್ಮನ್ನು ದುರುಗುಟ್ಟಿ ನೋಡುತ್ತ ಮುದುಡಿ ನಿಂತ.

ದಾರಿದ್ರ್ಯವೇ ಮೈ ತಳೆದಂತಿದ್ದ ಅವನ ಜೊತೆ ಅದೂ ಇದು ಮಾತಾಡಿಯಾದ ಮೇಲೆ, ಆ ಹಳ್ಳಿಯ ಪಟವಾರಿ (ಪಟೇಲ)ರ ಮನೆಯನ್ನು ತೋರಿಸಲು ಅವನನ್ನು ಕೇಳಿದೆ. ಮುದುಕನ ಮುಖದಲ್ಲಿ ಗಾಬರಿ ಆತಂಕಗಳು ನೆರಳಾಡಿದ್ದನ್ನು ಗಮನಿಸಿದೆ. ಅವನು ಸಾಧ್ಯವಿಲ್ಲವೆನ್ನುವಂತೆ ತಲೆಯಲ್ಲಾಡಿಸಿ, ತನ್ನ ಪ್ರಾದೇಶಿಕ ಮಾತಿನ ಧಾಟಿಯಲ್ಲಿ ಹೇಳಿದ: 'ಇಲ್ಲ ಸಾಹೇಬರೆ, ನಾವು ಹಾಗೆ ಊರೊಳಕ್ಕೆ ಕಾಲಿಡುವಂತಿಲ್ಲ. ಗ್ರಾಮ ದೇವತೆಯ ಉತ್ಸವಕ್ಕೆ ತಮಟೆ ಬಾರಿಸಲು ವರ್ಷಕ್ಕೊಂದಾವರ್ತಿ ಮಾತ್ರ ನಮಗೆ ಊರಿನ ಪ್ರವೇಶ. ಬೇರೆ ಹೊತ್ತಿನಲ್ಲಿ ನಾವು ಪ್ರವೇಶಿಸಿದರೆ ಊರಿನವರು ನಮ್ಮನ್ನು ಸುಟ್ಟುಬಿಡುತ್ತಾರೆ.'

ನಾವು ಎಷ್ಟೇ ಧೈರ್ಯ ತುಂಬಿದರೂ ಅವನು ನಮ್ಮ ಜೊತೆ ಊರೊಳಕ್ಕೆ ಬರಲು ಒಪ್ಪಲಿಲ್ಲ. ತುಂಬಾ ಖೇದಗೊಂಡು ನಾವು ಮುದುಕನನ್ನು ಅಗಲಿ ನಡೆದಾಗ, ಅವನ ಬಡಕಲು ನಾಯಿ ನಮ್ಮ ಜೊತೆ ಹಳ್ಳಿಯ ಮೂಲೆ ಮೂಲೆಯಲ್ಲಿ ನಿರಾತಂಕವಾಗಿ ಅಲೆದಾಡಿತು! ಅದನ್ನು ಯಾರೂ ತಡೆಯಲಿಲ್ಲ, ಸುಡಲಿಲ್ಲ

– ಸಾಧಾರಣವಾದರೂ ಈ ಕರುಣಾಜನಕ ಚಿತ್ರ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಅಸಮಾನತೆಯ ಈ ದುಷ್ಟ ಪರಿಸ್ಥಿತಿಯ ನಿವಾರಣೆಗೆ ಇನ್ನೆಷ್ಟು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ಗಳು ಈ ಪುಣ್ಯ ಭೂಮಿಯಲ್ಲಿ ಜನ್ಮ ತಾಳಬೇಕೋ ಏನೋ!

ಪ್ರಸ್ತುತ, ಇಂತಹ ದಲಿತರಿಗಿಂತ ಇತರ ಕಡುಬಡವ ಜನಸಾಮಾನ್ಯರ ಮತ್ತು ಅಲ್ಪಸಂಖ್ಯಾತರ ಸ್ಥಿತಿಗತಿಗಳು ಕೊಂಚಮಟ್ಟಿಗೆ ವಾಸಿ ಎನ್ನಿಸಿದರೂ ನಮ್ಮ ಸಮಾಜದ ಇತರ ಮೇಲು ವರ್ಗಗಳಿಗೆ ಹೋಲಿಸಿದಾಗ, ಅವರದೂ ವಂಚಿತ ಹಾಗೂ ದಾರುಣ ಬಾಳ್ವೆ ಎನ್ನದೆ ವಿಧಿಯಿಲ್ಲ. ಈ ವರ್ಗಗಳಲ್ಲೂ ವಿದ್ಯೆ, ಆರ್ಥಿಕ ಆದಾಯ ತದಿತರ ಅನುಕೂಲಕರ ಅವಕಾಶಗಳ ದೆಸೆಯಿಂದ ಕೆಲವೊಂದು ಸಾಮಾಜಿಕ ಸ್ತರಗಳು ನಿರ್ಮಿತವಾಗಿವೆ. ಇಲ್ಲಿಯೂ ಮೇಲಿರುವವರು ಸ್ಲಮ್ಮಿಗರನ್ನು, ಗ್ರಾಮ್ಯ ಪ್ರದೇಶದಲ್ಲಿನ ಕಂಗಾಲರನ್ನು ಉಪೇಕ್ಷಿಸಿ ತಾವು ಸವಲತ್ತುಗಾರ ಸರದಾರರಾಗಿ ಮೆರೆದು ದಬ್ಬಾಳಿಕೆ ನಡೆಸುತ್ತಿರುವುದು, ಸರ್ಕಾರ ಹಾಗೂ ಸಾರ್ವಜನಿಕ ಸಂಘಟನೆಗಳ ಎದುರು ತಮ್ಮ ವರ್ಗದ ತುಳಿತಕ್ಕೆ ಒಳಗಾದ ಜನತೆಯ ಬಗೆಗೆ ಆಗ್ರಹಪೂರ್ವಕವಾಗಿ ಹಕ್ಕೊತ್ತಾಯಕ್ಕಾಗಿ ವಾದಿಸಿ ಅಹವಾಲಿಸದಿರುವುದು ಭಾರತದ ಅಲ್ಪ ಸಂಖ್ಯಾತರ ದೌರ್ಭಾಗ್ಯ. ಅವರ ಹಿತಕ್ಕಾಗಿ ಮುಡುಪಾದ ಸರ್ವ ಸೂಕ್ತ ಸಂಘಟನೆ ಇಲ್ಲ; ಅವರ ಕಂಬನಿಯನ್ನು ತೊಡೆಯುವ ಸಹಾನುಭೂತಶೀಲ ಸಮರ್ಥ ನಾಯಕತ್ವವಿಲ್ಲ.

ಕೊನೆಯದಾಗಿ, ನಮ್ಮ ಕನ್ನಡ ಜನತೆಯಲ್ಲಿ ನನ್ನ ಅಂತರಂಗದ ಮುಖ್ಯ ಆಶಯಗಳನ್ನು ಅರಿಕೆ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ನಾಡುನುಡಿಗಳ ಬಗೆಗೆ ಅಪಾರವಾದ ಅಭಿಮಾನವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯ ಹಿಂದೆಲ್ಲ ಕಾಲಕ್ಕಿಂತ ಇಂದು ಅತಿ ತುರ್ತಿನದಾಗಿದೆ. ನಮ್ಮ ಒಟ್ಟಾರೆಯ ಬದುಕು ಸಮೃದ್ಧಗೊಳ್ಳದಿದ್ದರೆ ಇತರರೆದುರು ತಲೆ ಎತ್ತಿ ಬೀಗಲಾರೆವು. ಮೊದಲು ಕನ್ನಡಿಗರ ಸ್ಥಿತಿಗತಿಗಳು ಸುಧಾರಿಸಬೇಕು. ದ್ರವ್ಯಾರ್ಜನೆ ಮಾಡದೇ ಇದು ಸಾಧ್ಯವಾಗದು. ಬಾಳ ಬಂಡಿಯ ಸುಸೂತ್ರ ಸಾಗಣೆಗೆ ಹಣಗಳಿಕೆ ಕೀಲೆಣ್ಣೆಯ ಹಾಗೆ. ನಮ್ಮ ನಾಡಿನ ಸಂಪನ್ಮೂಲಗಳನ್ನು ಬೇಕಾಬಿಟ್ಟಿ ದಿನೇದಿನೇ ಬರಿದುಕೊಳ್ಳುತ್ತಿರುವ ಲಾಭಬಡುಕ ಅನ್ಯಭಾಷಿಕರ ಪ್ರತಿಷ್ಠೆಯನ್ನು ತಗ್ಗಿಸುವಂತೆ ನಾವೆಲ್ಲ ಒಗ್ಗೂಡಿ ದುಡಿಯಬೇಕು. ನಮ್ಮ ಜನ ಅಲಸಿಗಳೆಂಬ, ನಿಸ್ಸಾಹಸಿಗಳೆಂಬ ಕೀಳೆಣಿಕೆ ಇತರರ ಮನಸ್ಸಿನಿಂದ ತೊಲಗಬೇಕು. ಹಣವಿರುವನಿಗಷ್ಟೇ ವ್ಯವಹಾರನಿಷ್ಠ ಸಮಾಜದಲ್ಲಿ ಗುಣ ಗಣ್ಯತೆ; ಮರ್ಯಾದೆಯ ಮಾನ್ಯತೆ. ನಮ್ಮ ಬದುಕು ಹೆಮ್ಮೆಯಿಂದ, ಗೌರವದಿಂದ ಮುನ್ನಡೆಯಬೇಕಾದರೆ, ಅಡಿಯಾಳುಗಳಾಗದೆ ಧಣಿತನವನ್ನು ಮೆರೆಯಬೇಕಾದರೆ ಮೊದಲು ನಾವು ಸಂಪನ್ನರಾಗಬೇಕೆಂಬುದನ್ನು ಒತ್ತಿಒತ್ತಿ ಹೇಳಬೇಕಾಗಿದೆ.

ಹೀಗೆಂದ ಮಾತ್ರಕ್ಕೆ ರೊಕ್ಕವೇ ಸರ್ವಸ್ವ, ಅದರ ಮೇರೆ ಮೀರಿದ ಸಂಗ್ರಹಣೆಯೇ ಜೀವಿತದ ಪುರುಷಾರ್ಥ ಎಂಬ ಧನ ದಾಸರ ಧೋರಣೆ ಸಲ್ಲದು. ಕೇವಲ ಅರ್ಥಮಾತ್ರದಿಂದ ಅನರ್ಥಕ್ಕೆ ಅಸ್ತಿವಾರ ಬೀಳಬಹುದೆಂಬ ಯಥಾರ್ಥ ಅನೇಕರಿಗೆ ಅನುಭವಸಿದ್ಧವಾಗದ ಹೊರತು ಬುದ್ಧಿ ಬಾರದು. ಆದ್ದರಿಂದ ಆರ್ಜನೆಯ ಜೊತೆಗೆ ಹಣದ ಪರಿಮಿತ ಸ್ವರೂಪದ ಪರಿಜ್ಞಾನ ಸಹ ಮನುಷ್ಯನಿಗೆ ಆಗಾಗ್ಗೆ ನೆನಪಾಗುತ್ತಿರಬೇಕು. ಬಾಳಿನಲ್ಲಿ ಹಿತದ ಏರುವೆಗೆ ಮಿತಿಯರಿವೇ ಮೊದಲ ಮೆಟ್ಟಿಲು. ಈ ಕಾರಣಕ್ಕೆ ನಮ್ಮ ನೆಮ್ಮದಿಯುತ ಬಾಳಿಗೆ ಇತಿಮಿತಿಗಳ ಪ್ರಜ್ಞೆ, ತಾರತಮ್ಯ ವಿವೇಚನೆ ಅತ್ಯಗತ್ಯ. ಕಟ್ಟುಪಾಡಿಲ್ಲದವರು ಬದುಕಿನಲ್ಲಿ ಕೆಟ್ಟಪಾಡುಗಳನ್ನು ಅನುಭವಿಸದೇ ವಿಧಿಯಿಲ್ಲ.

ನಮ್ಮ ಜನರ ಕಡೆಗಣಿಸಲಾಗದ ಅವಗುಣವೆಂದರೆ ಇತರರ ಹಿರಿಮೆ, ಅಗ್ಗಳಿಕೆಯನ್ನು ಅವಶ್ಯಕತೆಗಿಂತ ಅಧಿಕವಾಗಿ ಕೊಂಡಾಡುವುದು ಮತ್ತು ತಮ್ಮಲ್ಲಿ ಇರುವ ಕೊರತೆಯನ್ನು ನೆನೆದು ಗೋಣಗಾಡುವುದು. ಇರುವುದರ ಹೆಚ್ಚುಗಾರಿಕೆಯನ್ನು ಮನಗಾಣುವುದು ವಿವೇಕವಂತರ ಹೆಗ್ಗುರುತು. ಆದರೆ ನಮ್ಮಲ್ಲಿ ಈ ಅಂಶ ಕೊಂಚ ಕಡಿಮೆ ಎಂದರೆ ತಪ್ಪಾಗಲಾರದು. ಅಭಾವದ ಬಗೆಗಿನ ಅಳಲಿಗಿಂತ ಅಸ್ತಿತ್ವದಲ್ಲಿರುವುದರ ಅವಜ್ಞೆ, ಅಜ್ಞಾನ ಅಧಿಕ ಆತಂಕಕಾರಿ.


ನಮ್ಮೆಲ್ಲರ ಜೀವನ ಅಸಮ ಪ್ರಮಾಣದ ಶುಭಾಶುಭಗಳ, ಒಳಿತು ಕೆಡಕುಗಳ ಸಂಮಿಶ್ರಣ. ಅದನ್ನು ಒಪ್ಪಿಕೊಂಡು ತಕ್ಕ ಮನಸ್ಸಿದ್ಧತೆಯಿಂದ ಮುಂದುವರೆಯುವುದೇ ಮನುಷ್ಯನ ಮುಂದಿರುವ ಮಾರ್ಗ. ಒಳ್ಳೆಯದನ್ನು ಬಯಸುವವರು ಕೊಂಚ ಕಾಲ ಕೆಟ್ಟದ್ದನ್ನು ಸ್ವಾನುಭವಿಸಲೂ ಸಿದ್ಧರಿರಬೇಕು. ಹಾಲನ್ನು ಪಡೆಯುವ ಮುಂಚೆ

ಹಸುವಿನ ಕಾಲೊದೆತಗಳನ್ನು ಸಹಿಸಿಕೊಳ್ಳಲು ಅಣಿಯಾಗಿರಬೇಕು. ಅಲ್ಲದೇ, ಕಷ್ಟದ ಕಾರಿರುಳು ಮನುಷ್ಯನ ಬಾಳಿನಲ್ಲಿ ಹಾಯ್ದಾಗ, ಸುಖದ ಸೂರ್ಯೋದಯದ ಸೊಗಸು ಇಮ್ಮಡಿಸುತ್ತದೆ. ನಮ್ಮೆಲ್ಲರ ಬಾಳಿನಲ್ಲಿ ಸುಖ ಸೌಭಾಗ್ಯಗಳು ಹೊನಲುಕ್ಕಿ ಹರಿದಿರಲೆಂದು ಹಾರ್ದಿಕವಾಗಿ ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ

ಜೈ ಹಿಂದ್

◆



ಪ್ರೊ. ಎಲ್. ಎಸ್. ಶೇಷಗಿರಿರಾವ್

ಏಳ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೧೨, ೧೩, ೧೪. ೧೫ ಡಿಸೆಂಬರ್ ೨೦೦೭, ಸ್ಥಳ : ಉಡುಪಿ

ಪರಿಚಯ

ಪ್ರೊ. ಎಲ್. ಎಸ್. ಶೇಷಗಿರಿರಾವ್

ಶಿಕ್ಷಣ : ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಪ್ರಬುದ್ಧ ವಿಮರ್ಶಕರೆನಿಸಿರುವ ಎಲ್. ಎಸ್. ಶೇಷಗಿರಿರಾಯರು ಸ್ವಾಮಿರಾವ್-ಕಮಲಾಬಾಯಿ ದಂಪತಿಗಳ ಸುಪುತ್ರರಾಗಿ ೧೬ ಫೆಬ್ರವರಿ ೧೯೨೫ರಲ್ಲಿ ಜನಿಸಿದರು. ನಾಗಪುರದ ವಿ.ವಿ. ಇಂಗ್ಲಿಷ್ ಎಂ. ಎ. ಪದವೀಧರರಾದ ಇವರು ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದರು.

ಉದ್ಯೋಗ : ಕಾಲೇಜು ಶಿಕ್ಷಣ ಇಲಾಖೆಗೆ ಸೇರಿ ಕೋಲಾರ, ಮಡಿಕೇರಿ, ಬೆಂಗಳೂರುಗಳಲ್ಲಿ ಕಾಲೇಜು ಅಧ್ಯಾಪಕರಾಗಿ ಕೊನೆಯಲ್ಲಿ ಕೆಲವು ಕಾಲ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

ಸೇವೆ : ೧೯೪೭-೫೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌ ॥ ಕಾರ್ಯದರ್ಶಿಗಳಾಗಿ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಥಮ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ನ್ಯಾಷನಲ್ ಬುಕ್‌ಟ್ರಸ್ಟ್ ಮೊದಲಾದ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಮನ್ನಣೆ : ಇವರ ಇಂಗ್ಲಿಷ್ ಸಾಹಿತ್ಯ ಚರಿತ್ರೆ (೧೯೯೬) ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಆಧುನಿಕ ಸಾಹಿತ್ಯ ವಿಮರ್ಶೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅನಕೃ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ ಮೊದಲಾದವು ಲಭ್ಯವಾಗಿವೆ.

ಸಾಹಿತ್ಯ ಸೇವೆ : ಇವರ ಕೆಲವು ಸುಪ್ರಸಿದ್ಧ ಕೃತಿಗಳು ಹೀಗಿವೆ :

ಕನ್ನಡದ ಅಳಿವು ಉಳಿವು (ಪ್ರಬಂಧ)

ಸಿರಿಸಂಪದ (ವ್ಯಕ್ತಿಚಿತ್ರ)

ಆಕಾಂಕ್ಷೆ ಮತ್ತು ಆಸೆ (ನಾಟಕ)

ಹೊಸಗನ್ನಡ ಸಾಹಿತ್ಯ (ವಿಮರ್ಶೆ)

ವಿಲಿಯಂ ಷೇಕ್ಸ್‌ಪಿಯರ್

ಫ್ರಾನ್ಜ್ ಕಾಫ್ಕ

ಭಾರತೀಯ ಸಾಹಿತ್ಯ ಸಮೀಕ್ಷೆ, ಇತ್ಯಾದಿ.

ಇಂಗ್ಲಿಷಿನಲ್ಲಿ ಹಲವಾರು ಕಾದಂಬರಿಗಳನ್ನು ರಚಿಸಿದ್ದಾರೆ.

◆

ಪ್ರೊ. ಎಲ್. ಎಸ್. ಶೇಷಗಿರಿರಾವ್

೭೪ನೇ ಸಮ್ಮೇಳನಾಧ್ಯಕ್ಷರ ಭಾಷಣ

೨೦೦೭

ಕಾರ್ಯಕರ್ತರ ನಡುವೆ ಕಾರ್ಯಕರ್ತ

ಕನ್ನಡ ಸಾಹಿತ್ಯ ಪರಿಷತ್ತಿನ ಬಂಧುಗಳು ಮತ್ತು ಈ ಸಮ್ಮೇಳನದ ಸ್ವಾಗತ ಸಮಿತಿಯ ಬಂಧುಗಳು ನನ್ನನ್ನು ಸಮ್ಮೇಳನಾಧ್ಯಕ್ಷನೆಂದು ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ಆದರೆ ನಾನು ಕನ್ನಡ ಕಾರ್ಯಕರ್ತನಾಗಿ ಬರುತ್ತಿದ್ದೇನೆ. ಈ ಗಳಿಗೆಯಲ್ಲಿ ನನ್ನ ಕಣ್ಣಮುಂದೆ ಕನ್ನಡದ ಪ್ರೀತಿ, ಅಭಿಮಾನಗಳು ತುಂಬಿ ತುಳುಕುತ್ತಿರುವ ಸಹಸ್ರಾರು ಮಂದಿ ಕನ್ನಡ ಬಂಧುಗಳಿದ್ದಾರೆ. ಇವರೊಂದಿಗೆ ಕನ್ನಡಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡಿದ ಇನ್ನೂ ಸಹಸ್ರಾರು ಮಂದಿ ಕಾರ್ಯಕರ್ತರಿದ್ದಾರೆ. ಕನ್ನಡನಾಡಿನ ಏಕೀಕರಣಕ್ಕಾಗಿ ನಾಡಿನ ಎಲ್ಲ ಭಾಗಗಳಲ್ಲಿ ಶ್ರಮಿಸಿದ, ಹೋರಾಡಿದ ನುಡಿಭಕ್ತರು, ಬೇರೆ ಬೇರೆ ಕಾಲಗಳಲ್ಲಿ ಚಳವಳಿಗಳಲ್ಲಿ ಭಾಗವಹಿಸಿದ ಕನ್ನಡ ಕಾರ್ಯಕರ್ತರು ನನ್ನ ಮನಸ್ಸಿನ ಕಣ್ಣ ಮುಂದೆ ಇದ್ದಾರೆ. ಸುಳ್ಳು ಆಪಾದನೆಗಳ ಮೇಲೆ ಬಂಧಿತರಾದ ಕಾರ್ಯಕರ್ತರ ನೆರವಿಗೆ ಹೋಗಲು ರಿಕ್ಷಾಗೆ ಕೊಡಲು ಹಣವಿಲ್ಲದೆ ನಡೆದೇ ಹೋದ ಮ. ರಾಮಮೂರ್ತಿಯವರು, ಅವರ ಜೊತೆಗಾರರು, ರೈಲುತಡೆ ಕಾರ್ಯಕ್ರಮದಲ್ಲಿ ರೈಲಿಗೆ ಸಿಕ್ಕು ಗಾಯಗೊಂಡ ಕಾರ್ಯಕರ್ತರು ಮತ್ತು ರೈಲಿಗೆ ಸಿಕ್ಕಿ ಪ್ರಾಣಕೊಟ್ಟ ಗೋವಿಂದರಾಜು ಇಂಥ ಕಾರ್ಯಕರ್ತರು ನನ್ನ ಕಣ್ಣ ಮುಂದಿದ್ದಾರೆ. ಬೆಂಗಳೂರಿನ ದೂರದರ್ಶನದಲ್ಲಿ ಕನ್ನಡಕ್ಕೆ ಗೌರವದ ಸ್ಥಾನಕ್ಕಾಗಿ, ಇಡೀ ರಾಷ್ಟ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ದೂರದರ್ಶನ ಕೇಂದ್ರವನ್ನು ವಶಮಾಡಿಕೊಂಡು ಪ್ರಧಾನಿ ಇಂದಿರಾ ಗಾಂಧಿಯ ಸ್ವಾತಂತ್ರ್ಯ ದಿನದ ಭಾಷಣವನ್ನು, ರಾಮಾಯಣದ ಪ್ರಸಾರವನ್ನು, ತೀವ್ರ ಶಿಕ್ಷೆಯ ಅಪಾಯವನ್ನು ಎದುರಿಸಿ ತಡೆದ ಕಾರ್ಯಕರ್ತರು ನನ್ನ ಕಣ್ಣಮುಂದೆ ಇದ್ದಾರೆ. ಪೊಲೀಸರು ಬಂಧಿಸಿ ರಾತ್ರಿ ಊರಿನಾಚೆ ಕಾಡಿನಲ್ಲಿ ಬಿಟ್ಟಾಗ ಹೇಗೋ ಊರಿಗೆ ಬಂದು ಸೇರಿದ ಕಾರ್ಯಕರ್ತರಿದ್ದಾರೆ. ಕಚೇರಿ–ಕಾರ್ಖಾನೆಗಳಿಗೆ ರಜೆ ಹಾಕಿ ಧರಣಿ, ಮೆರವಣಿಗೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಾರ್ಯಕರ್ತರಿದ್ದಾರೆ. ಮೊಕದ್ದಮೆಗಳನ್ನು ಎದುರಿಸಿ ತಿಂಗಳುಗಟ್ಟಲೆ ನ್ಯಾಯಾಲಯಕ್ಕೆ ಅಲೆದ ಕಾರ್ಯಕರ್ತರಿದ್ದಾರೆ. ಎಲ್ಲ ಕಾಲಗಳಲ್ಲಿ ಕನ್ನಡ ನಾಡು – ನುಡಿಗಳ

ಪರವಾದ ಹೋರಾಟದಲ್ಲಿ ಭಾಗವಹಿಸಿದ, ವಹಿಸುತ್ತಿರುವ ಎಲ್ಲ ಕಾರ್ಯಕರ್ತರಿಗೆ ನನ್ನ ಅಭಿಮಾನಪೂರ್ವಕವಾದ ನಮನಗಳು. ಕನ್ನಡನಾಡು–ನುಡಿಗಳ ಪರವಾದ ಎಲ್ಲ ಕೆಲಸಗಳಲ್ಲಿ ಪ್ರೀತಿಯಿಂದ ದುಡಿಯುವ ಈ ಕಾರ್ಯಕರ್ತರು ಹಾರಗಳನ್ನು ಹಾಕಿಸಿಕೊಳ್ಳುವುದಿಲ್ಲ. ವೇದಿಕೆಗಳಿಂದ ಭಾಷಣ ಮಾಡುವುದಿಲ್ಲ. ಇಡೀ ಕಟ್ಟಡದ ಭಾರವನ್ನು ಹೊತ್ತು ಯಾರಿಗೂ ಕಾಣದೆ ನೆಲದಲ್ಲಿ ಅಸ್ತಿಭಾರವು ಮರೆಯಾದಂತೆ ಮರೆಯಲ್ಲಿರುವ ಈ ಕಾರ್ಯಕರ್ತರು ನಮ್ಮ ಎಲ್ಲ ಸಾಧನೆಗಳ ಅಸ್ತಿಭಾರ. ಇವರಿಗೆ ಕನ್ನಡ ನಾಡಿನ ಪರವಾಗಿ ಕೃತಜ್ಞತೆಯ ನಮನಗಳು.

ನಾನು ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ಒಂದಿಷ್ಟು ಕೆಲಸ ಮಾಡಿದ್ದರೆ ಅದು ಮಹತ್ವದ ಸಂಗತಿಯಲ್ಲ; ಹಾಗೆ ಕೆಲಸ ಮಾಡದಿದ್ದರೆ ತಪ್ಪಾಗುತ್ತಿತ್ತು. ಅ.ನ.ಕೃಷ್ಣರಾಯರು ಒಂದು ಸಂದರ್ಭದಲ್ಲಿ ಹೇಳಿದಂತೆ, "ಕನ್ನಡಕ್ಕೆ ನನ್ನಂತಹವರು ಸಾವಿರ ಮಂದಿ ಇದ್ದಾರೆ. ನನಗಿರುವುದು ಒಂದೇ ತಾಯ್ನುಡಿ, ಕನ್ನಡ". ನಾನು ನಲವತ್ತೊಂದು ವರ್ಷ ಇಂಗ್ಲಿಷ್ ಪಾಠ ಹೇಳಿದ್ದರೂ ಇಂದು ಕಾಲಿಗೆ ಮುಳ್ಳು ಚುಚ್ಚಿದರೆ 'ಅಯ್ಯೋ' ಎನ್ನುತ್ತೇನೆ. 'ಅಲಾಸ್' ಎನ್ನುವುದಿಲ್ಲ. ದಿಗ್ಭ್ರಾಂತನಾದಾಗ ಥಟ್ಟನೆ ನೆನಪಿಗೆ ಬರುವುದು 'ಲೀಡ್, ಕೈನ್‌ಡ್ಲಿ ಲೈಟ್' ಅಲ್ಲ. 'ಕರುಣಾಳು ಬಾ ಬೆಳಕೆ'. ನಾನು ಮಾಡಿರುವ ಒಂದಿಷ್ಟು ಕೆಲಸವನ್ನು ಔದಾರ್ಯದಿಂದ ಕಂಡು ನನ್ನನ್ನು ಈ ಪೀಠಕ್ಕೆ ತಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಪ್ರೊ. ಚಂದ್ರಶೇಖರ ಪಾಟೀಲರಿಗೂ, ಕಾರ್ಯಕಾರಿ ಸಮಿತಿಗೂ, ಎಲ್ಲ ಕನ್ನಡಿಗರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಹಿರಿಯರಿಗೆ ನಮನ

ಕೃಷ್ಣನ ಪವಿತ್ರ ಕ್ಷೇತ್ರವಾದ ಉಡುಪಿಯಲ್ಲಿ ಸಮ್ಮೇಳನಾಧ್ಯಕ್ಷನಾಗಿರುವುದು ನನ್ನ ಭಾಗ್ಯ ಎಂದುಕೊಂಡಿದ್ದೇನೆ. ಇಲ್ಲಿ ಶ್ರೀ ಕೃಷ್ಣನ ಸೇವೆಗೆ ಮುಡಿಪಾದ ಅಷ್ಟಮಠಗಳಿವೆ. ಇದು, ದಾಸಶ್ರೇಷ್ಠರಾದ ಕನಕದಾಸರು ಭಕ್ತಿಯ ಮಂಗಳಕರ ಶಕ್ತಿಯನ್ನು ತೋರಿಸಿಕೊಟ್ಟ ಪುಣ್ಯಕ್ಷೇತ್ರ. ಶಿಕ್ಷಣದ ಅಭಿವೃದ್ಧಿಗೆ ರಾಜ್ಯದಲ್ಲಿ ಪ್ರಥಮ ಪಂಕ್ತಿಯಲ್ಲಿರುವ ಜಿಲ್ಲೆ ಉಡುಪಿ. ಶೇಕಡಾ ೭೫ರಷ್ಟು ಮಂದಿ ಅಕ್ಷರಸ್ಥರಾಗಿರುವ ಈ ಪ್ರದೇಶವು ಉನ್ನತಶಿಕ್ಷಣ ಮತ್ತು ಸಂಶೋಧನೆಗಳ ತವರಾಗಿದೆ. ಸಾಹಿತ್ಯ ಮತ್ತು ಎಲ್ಲ ಕಲೆಗಳ ತವರೂರು ಈ ಪ್ರದೇಶ. ಶ್ರಮಜೀವಿಗಳಿಗೂ ಬುದ್ಧಿವಂತರೂ ಸಾಹಸ ಪ್ರವೃತ್ತಿಯವರೂ ಆದ ಈ ಪ್ರದೇಶದ ನನ್ನ ಬಂಧುಗಳು ಬ್ಯಾಂಕಿಂಗ್, ವ್ಯವಹಾರ ಮತ್ತು ಉದ್ಯಮಗಳಲ್ಲಿ ತಾವು ಬೆಳೆದು ನಾಡನ್ನೂ ಬೆಳೆಸಿದ್ದಾರೆ. ದೈವಾನುಗ್ರಹ, ಪ್ರಾಮಾಣಿಕ ಶ್ರಮ, ವಿದ್ಯೆ, ಸಾಹಸ ಮತ್ತು ಸೌಜನ್ಯಗಳ ಸಂಗಮವಾದ ಉಡುಪಿಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವುದು 'ಇದು ಭಾಗ್ಯ, ಇದು ಭಾಗ್ಯ.'

ಇಂದು ಈ ವೇದಿಕೆಯ ಮೇಲೆ ನಿಂತಾಗ ನನ್ನ ಮನಸ್ಸು ಸಮ್ಮೇಳನಾಧ್ಯಕ್ಷರಾಗಿ ಈ ಪೀಠಕ್ಕೆ ಗೌರವವನ್ನು ತಂದ ಹಿರಿಯರತ್ತ ಗೌರವದಿಂದ ತಿರುಗುತ್ತದೆ. ಅವರಲ್ಲಿ ಹಲವರ ವಿದ್ಯಾರ್ಥಿಯಾಗಿದ್ದ ಭಾಗ್ಯ ನನ್ನದು. ಆಚಾರ್ಯ ಶ್ರೀ ಅವರು, ಎಸ್.ವಿ.ರಂಗಣ್ಣನವರು, ವಿ.ಸೀ. ಅವರು, ಕುವೆಂಪು ಅವರು, ರಾಜರತ್ನಂ ಅವರು, ವಿ.ಕೃ. ಗೋಕಾಕರು ನನ್ನ ಗುರುಗಳು, ಕೆಲವರು ನನ್ನ ಓರಿಗೆಯವರು, ಗೆಳೆಯರು, ಆತ್ಮೀಯರು; ಅವರನ್ನೆಲ್ಲ ಗೌರವದಿಂದ, ಆದರದಿಂದ ಸ್ಮರಿಸುತ್ತೇನೆ. ನಾನು ಇಂದು ಈ ಗೌರವಸ್ಥಾನಕ್ಕೆ ಪಾತ್ರನಾಗುವುದಕ್ಕೆ ಕಾರಣರಾದ ಎಲ್ಲ ಗುರುಗಳಿಗೆ, ಗುರು ಸಮಾನರಿಗೆ ನನ್ನ ನಮನಗಳು. ನನ್ನ ಸಾಹಿತ್ಯ ಪ್ರೀತಿಯನ್ನು ಬೆಳೆಸಿದ ತಂದೆತಾಯಿಯರಿಗೆ ಭಕ್ತಿಪೂರ್ವಕ ನಮನಗಳು.

ನಾಡಿನ ಹಿರಿಯರನ್ನು ಸ್ಮರಿಸುವ ಈ ಗಳಿಗೆಯಲ್ಲಿ ಒಂದು ಮಾತನ್ನು ಬಿನ್ನವಿಸಬೇಕು. ಇಬ್ಬರು ಹಿರಿಯರ ಜನ್ಮಶತಮಾನೋತ್ಸವ, ಇಬ್ಬರ ಜನ್ಮ ಶತಮಾನ ವರ್ಷದ ಪ್ರಾರಂಭ ೨೦೦೮ರಲ್ಲಿ ನಮ್ಮನ್ನು ಬೆಳಗಲಿವೆ. ಅ.ನ.ಕೃ. ಅವರ ಜನ್ಮ ಶತಮಾನೋತ್ಸವ ೨೦೦೮ರ ಮೇ ತಿಂಗಳಲ್ಲಿ, ಜಿ.ಪಿ. ರಾಜರತ್ನಂ ಅವರ ಜನ್ಮ ಶತಮಾನೋತ್ಸವ ಡಿಸೆಂಬರ್ ತಿಂಗಳಿನಲ್ಲಿ, ವಿ.ಕೃ. ಗೋಕಾಕರು ಹುಟ್ಟಿದ್ದು ೧೯೦೯ರ ಆಗಸ್ಟ್ ೯ರಂದು, ದಿನಕರ ದೇಸಾಯಿಯವರು ಹುಟ್ಟಿದ್ದು ೧೯೦೯ರ ಸೆಪ್ಟೆಂಬರ್ ೧೦ರಂದು. ಈ ಎಲ್ಲ ಹಿರಿಯರನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತಲೇ ಅ.ನ.ಕೃ. ಎಂದೇ ಪ್ರಸಿದ್ಧರಾದ ಅ.ನ.ಕೃಷ್ಣರಾಯರ ವಿಷಯ ವೈಯಕ್ತಿಕವಾಗಿ ಒಂದು ಮಾತನ್ನು ಹೇಳಬೇಕು. ಆಚಾರ್ಯ ಬಿ.ಎಂ.ಶ್ರೀ ಅವರಿಂದ ಕರ್ನಾಟಕದ ಪುನಃಶ್ಚೇತನಕ್ಕೆ ಒಂದು ಸಾಂಸ್ಕೃತಿಕ ಚಳವಳಿ ಪ್ರಾರಂಭವಾಯಿತು. ಈ ಮನೋಧರ್ಮದಲ್ಲಿ ಕನ್ನಡ ಕೆಲಸವನ್ನು ಪ್ರಾರಂಭಿಸಿದವರು ನಾನು ಮತ್ತು ನನ್ನಂತಹ ಹಲವಾರು ವಿದ್ಯಾವಂತ ತರುಣರು. ಆದರೆ ಕನ್ನಡಕ್ಕಾಗಿ ಬೀದಿಗೆ ಇಳಿದು ಘನತೆಯಿಂದ, ಗೌರವದಿಂದ ಚಳವಳಿ ಮಾಡುವುದು ವಿದ್ಯಾವಂತರಿಗೆ ಅಪಮಾನವಲ್ಲ ಎಂದು ತೋರಿಸಿಕೊಟ್ಟು ನಮ್ಮನ್ನು ಕನ್ನಡದ ಕಾರ್ಯಕರ್ತರನ್ನಾಗಿ ರೂಪಿಸಿದವರು ಅ.ನ.ಕೃ. ಕನ್ನಡ ಜನತೆ ಈ ಎಲ್ಲ ಹಿರಿಯರ ಸಾಹಿತ್ಯ ಮತ್ತು ಚಿಂತನೆಯನ್ನು ಮತ್ತೆ ಅಧ್ಯಯನ ಮಾಡಿ ಇವರ ಜನ್ಮದಿನಗಳನ್ನು ಗೌರವದಿಂದ, ಕೃತಜ್ಞತೆಯಿಂದ ಆಚರಿಸುತ್ತದೆ. ಕರ್ನಾಟಕ ಸರ್ಕಾರವೂ ಈ ಉಜ್ವಲ ಭಾಗ್ಯನಿಧಿಗಳಿಗೆ ಅವರ ಹಿರಿಮೆ, ನಮ್ಮ ಪ್ರೀತಿ ಕೃತಜ್ಞತೆಗಳಿಗೆ ಉಚಿತವಾದ ರೀತಿಯಲ್ಲಿ ನಮನವನ್ನು ಸಲ್ಲಿಸುತ್ತದೆ ಎಂಬ ವಿಶ್ವಾಸ ನನಗಿದೆ.

ಬದುಕಿಗೆ ನನ್ನ ಸ್ಪಂದನ

ನನ್ನ ವಿಷಯವಾಗಿ ನಾನು ಹೆಚ್ಚು ಮಾತನಾಡಲು ಬಯಸುವುದಿಲ್ಲ. ಆದರೆ ನನ್ನ ಬದುಕಿನುದ್ದಕ್ಕೂ ನನ್ನಲ್ಲಿ ಮೂಡಿಬಂದಿರುವ ಮನೋಧರ್ಮವನ್ನು ಸಂಗ್ರಹವಾಗಿ ತಮ್ಮ ಮುಂದಿಡಲು ಬಯಸುತ್ತೇನೆ. ಈ ವಿವರಣೆಯನ್ನು ಇಪ್ಪತ್ತೊಂದು ವರ್ಷಗಳ ಹಿಂದೆ 'ತುಷಾರ' ಮಾಸಪತ್ರಿಕೆಯಲ್ಲಿ ಮತ್ತು ಆಕಾಶವಾಣಿಗಾಗಿ ಬರೆದೆ.

"ಈ ಸೂರ್ಯ, ಈ ಚಂದ್ರ, ಈ ಹಿಮಾಲಯ, ಈ ಅಟ್ಲಾಂಟಿಕ್, ಈ ಸಿಡಿಲು, ಈ ಭೂಕಂಪ ಎಲ್ಲದರ ಮಧ್ಯೆ ನಾನು (ಎಂದರೆ ಮನುಷ್ಯ) ಎಷ್ಟರವನು! ಆದರೆ ಈ ಸೂರ್ಯ, ಈ ಚಂದ್ರ... ಎಲ್ಲಕ್ಕೆ ಅರ್ಥ ಬರುವುದು ನನ್ನಿಂದ (ಎಂದರೆ ಮನುಷ್ಯನಿಂದ). ನಾನಿಲ್ಲದಿದ್ದರೆ ಈ ಸೂರ್ಯನನ್ನು ನೋಡಿ ಬೆರಗಾಗುವವರು, ಈ ಚಂದ್ರನನ್ನು ನೋಡಿ ಮನಸೋಲುವವರು, ಈ ಹಿಮಾಲಯಕ್ಕೆ ಗೌರವದಿಂದ ತಲೆ ಬಾಗುವವರು ಯಾರು?

"ವಿಶ್ವದಲ್ಲಿ ನಾನೆಷ್ಟು ಅಮುಖ್ಯ, ವಿಶ್ವದಲ್ಲಿ ನಾನೆಷ್ಟು ಮುಖ್ಯ ಈ ಅರಿವುಗಳ ತುಯ್ತ ನನ್ನಲ್ಲಿರುವಾಗ ನಾನು ನಿಜವಾಗಿ ಜೀವಂತನಾಗಿರುತ್ತೇನೆ. ಪ್ರತಿಷ್ಠೆಗಾಗಿ, ಹಣಕ್ಕಾಗಿ ಶ್ರಮಿಸುವ ಕಾಲದಲ್ಲಿ ನನಗೆ ನಾನೇ ಮೋಸ ಮಾಡಿಕೊಳ್ಳುತ್ತಿದ್ದೇನೆ. ಬಾಳಿರುವುದೇ ಪ್ರತಿಷ್ಠೆಯನ್ನು ಪಡೆಯಲಿಕ್ಕೆ, ಹಣಗಳಿಸಲಿಕ್ಕೆ ಎಂಬ ಭ್ರಾಂತಿಗಳಿಲ್ಲದೆ ನಾನು ಕಳೆಯುವ ಕಾಲದಲ್ಲೆ ನಾನು ನಿಜವಾಗಿ, ಸಾರ್ಥಕವಾಗಿ ಬದುಕಲು ಸಾಧ್ಯ. ಇಂಥ ಕಾಲದಲ್ಲಿ ನಾನು ನಾನಾಗಿ, ವ್ಯಕ್ತಿಯಾಗಿ ಇದ್ದೂ ಸಮಸ್ತ ಬಾಳಿನ ಭಾಗವಾಗಿರಲು ಸಾಧ್ಯ, ಇದನ್ನು ಸಾಧಿಸಲು ನನಗಿರುವ ಸಾಧನಗಳಲ್ಲಿ ಸಾಹಿತ್ಯ ಒಂದು. 'ನನ್ನಿಂದ' ನಾನು ತಪ್ಪಿಸಿಕೊಂಡೂ ನಾನಾಗಿ ಉಳಿಯುವುದನ್ನು ಸಾಹಿತ್ಯ ಸಾಧ್ಯಮಾಡುತ್ತದೆ.

"ಇದು ನನ್ನ ಬದುಕು. ನೂರಾರು ಮಂದಿ ಪ್ರತಿಭಾವಂತ ವಿಜ್ಞಾನಿಗಳು ಬಿಡಿಸಿ ಬಗೆದು ನೋಡುತ್ತಿದ್ದರೂ ನನ್ನ ಸ್ವರೂಪವನ್ನು ಬಿಟ್ಟುಕೊಡದ ಸೃಷ್ಟಿಯ ವಿಷಯ ತಿಳಿದುಕೊಳ್ಳಲು ಒಂದು ಅವಕಾಶ. ದುಃಖ ನೋವುಗಳಲ್ಲಿರುವವರಿಗೆ ನನ್ನ ಕೈಯಲ್ಲಾದುದನ್ನು ಮಾಡುವ, ಏನೂ ಆಗದಿದ್ದಾಗ 'ಅಯ್ಯೋ' ಎಂದು ಮರುಗುವ ಅವಕಾಶ. ಒಂದು ರೀತಿಯಲ್ಲಿ ಬದುಕು ಒಂದು ಬಗೆಯ 'ಟಗ್ ಆಪ್ ವಾರ್' ನನ್ನೊಳಗಿನ ಸಣ್ಣತನ, ಕ್ರೌರ್ಯ, ಅಜ್ಞಾನ ಒಂದು ಕಡೆ, ನನ್ನ ಹೊರಗೆ ಕಾಣುವ, ನನ್ನನ್ನು ಕರೆಯುವ ದೊಡ್ಡತನ, ಜ್ಞಾನ, ಕರುಣೆ ಇವುಗಳು ಇನ್ನೊಂದು ಕಡೆ. ಇವುಗಳ ನಡುವೆ ಸೆಣಸಾಟ, ಮತ್ತೊಂದು ರೀತಿಯಲ್ಲಿ ಬದುಕು, ನಿಗೂಢಗಳೂ ಅಪಾಯಗಳೂ ತುಂಬಿದ ಕಾಡಿನಲ್ಲಿ ಒಂದು ಪಾತ್ರೆಯನ್ನು ಹಿಡಿದು ಪಯಣ. ಆ ನಿಗೂಢಗಳನ್ನಾಗಲಿ, ಅಪಾಯಗಳನ್ನಾಗೀ, ನೋವನ್ನಾಗಲೀ ಮರೆಯುವುದು ಸಾಧ್ಯವೇ ಇಲ್ಲ. ಆದರೂ, ೬೦ ವರ್ಷ ೭೦ ವರ್ಷ ಪಯಣ ಸಾಗಿದ ಮೇಲೆ ಬದುಕಾಗಲಿ ಸಾವಾಗಲಿ, "ನಿನ್ನ ಪಾತ್ರೆಯಲ್ಲಿ ಏನು ತುಂಬಿಕೊಂಡೆ?" ಎಂದು ಕೇಳಿದರೆ "ಕಹಿ ನೆನಪುಗಳನ್ನು, ದೂರುಗಳನ್ನು, ನನ್ನ ಗೋಳುಗಳನ್ನು ತುಂಬಿಕೊಂಡೆ" ಎಂದು ಉತ್ತರ ಹೇಳುವಂತಾಗಬಾರದು ಒಂದಿಷ್ಟು ತಿಳಿವಳಿಕೆ, ಒಂದಿಷ್ಟು ಉಲ್ಲಾಸ, ಒಂದಿಷ್ಟು ಇತರರಿಗಾಗಿ ಮರುಗಿದ ಅನುಭವ, ಒಂದಿಷ್ಟು ಬೆಳಕು ನನ್ನ ಈ ಪಾತ್ರೆಯಲ್ಲಿವೆ ಎನ್ನಲು ಸಾಧ್ಯವಾಗಬೇಕು. ಅನ್ಯಾಯ, ನಿಗೂಢತೆಗಳ ನೆರಳಿನಲ್ಲಿ ಇರುವ ಬದುಕು ಸಹ ಒಂದು ಅವಕಾಶ, ಒಂದು ಆಹ್ವಾನ, ಈ

ನೆರಳಿನಲ್ಲಿಯೂ ತಿಳುವಳಿಕೆ, ಕ್ಷೇಮ, ವಿಶ್ವಾಸ, ಸಹಾನುಭೂತಿಗಳಿವೆ. ಅದರಿಂದಲೇ ಬದುಕು ಒಂದು ಅವಕಾಶವಾದಂತೆ, ಬದುಕು ಪಾವನವೂ ಹೌದು. ಅಮೂಲ್ಯವೂ ಹೌದು.

"ಹೀಗೆ ಹೇಳುವಾಗ ನಾನು ಸಾಹಿತ್ಯದ ಸಾಮಾಜಿಕ ಹೊಣೆಯನ್ನು ಕಡೆಗಣಿಸುತ್ತಿಲ್ಲ. ಸಾಹಿತ್ಯದ ಯಾವ ವಿದ್ಯಾರ್ಥಿಯೂ ಇದನ್ನು ಕಡೆಗಣಿಸುವಂತಿಲ್ಲ. ಏಕೆಂದರೆ, ಸಾಹಿತ್ಯದ ಮಾಧ್ಯಮವೇ ಭಾಷೆ. ಭಾಷೆ ಸಮಾಜದಲ್ಲಿಯೇ ಹುಟ್ಟಿದ್ದು... ಅಲ್ಲದೆ ಬರೆಯುವುದು ಇತರರನ್ನು ಮುಟ್ಟಲಿ ಎಂದು. ಆ 'ಇತರರು' ಯಾರು? ಸಾರ್ತ್ರೆ ಹೇಳಿದ, "ನೀವು ಯಾರಿಗಾಗಿ ಬರೆಯುತ್ತೀರಿ? ಗುಲಾಮರಿಗಾಗಿ ಬರೆಯಲಾಗದು", ಅಲ್ಲದೆ, ಇನ್ನೊಬ್ಬರ ಮನಸ್ಸಿನಲ್ಲಿ ನಾನಿರಿಸಬಯಸುವುದರ ಸ್ವರೂಪ ಎಂಥದು? ಎಷ್ಟು ಆರೋಗ್ಯಕರ? ಇವೆಲ್ಲ ಪ್ರಶ್ನೆಗಳು ಬರಹಗಾರನಾಗಿ ನನ್ನ ಮುಂದಿವೆ. ಅದರಿಂದಲೇ ಭಾಷಾ ಶಾಸ್ತ್ರಜ್ಞ ಚೋಮ್‌ಸ್ಕಿ ಹೇಳಿದ್ದು 'ಬರೆಯುವುದು ಒಂದು ಸಾಮಾಜಿಕ ಕ್ರಿಯೆ' (Writing is a social act).

"ಇದೆಲ್ಲವನ್ನೂ ನೆನಪಿಟ್ಟೂ ನನಗೆ ಎನ್ನಿಸುತ್ತದೆ. 'ನನ್ನಿಂದ' ನಾನು ತಪ್ಪಿಸಿಕೊಂಡು ನಾನಾಗಿ ಉಳಿಯುವುದನ್ನು ಸಾಧ್ಯವನ್ನಾಗಿ ಮಾಡುವುದರಿಂದ ಸಾಹಿತ್ಯ ನನಗೆ ಮುಖ್ಯ. ಏಕೆಂದರೆ ಈ ಸ್ಥಿತಿಯನ್ನು ನಾನು ಮುಟ್ಟಿದಾಗ, ನನ್ನ ಸಂವೇದನೆಗಳು ಸೂಕ್ಷ್ಮಗೊಂಡಾಗ ಸಾಮಾಜಿಕ ಅನ್ಯಾಯ ಅಸಮಾನತೆಗಳಿಗೆ ನಾನು ಕಣ್ಮುಚ್ಚಿರಲಾರೆ. ಮಾಸ್ತಿಯವರ 'ಮಂತ್ರೋದಯ', ದೇವನೂರು ಮಹಾದೇವರ 'ಅಮಾಸೆ', ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ಕುಂ. ವೀರಭದ್ರಪ್ಪನವರ 'ದೇವರ ಸಾವು' ಎಲ್ಲವೂ ನನ್ನನ್ನು ಬೆಳೆಸುತ್ತವೆ.

"ನೀನು ಹೀಗೆಯೇ ಪ್ರತಿಕ್ರಿಯೆ ತೋರಿಸಬೇಕು ಎಂದು ಹೇಳುವ ಧರ್ಮವಾಗಲಿ ಪಂಥವಾಗಲಿ ನನ್ನ ವ್ಯಕ್ತಿತ್ವವನ್ನು ಸಂವೇದನೆಗಳನ್ನು ಬೆಳೆಸಲಾರದು. ವೈಯಕ್ತಿಕ ಜೀವನ, ಸಾಮಾಜಿಕ ಜೀವನ ಅಥವಾ ಒಟ್ಟಿನಲ್ಲಿ ಜೀವನ ಇವುಗಳಲ್ಲಿ ಯಾವುದರಲ್ಲಿಯೇ ಆಗಲಿ ಹೊರ ರೂಪವನ್ನು ದಾಟಿ ವಾಸ್ತವಿಕತೆಯನ್ನು ನನ್ನ ಅನುಭವಕ್ಕೆ ತಂದುಕೊಡುವ ಕೃತಿ ನನ್ನನ್ನು ಬೆಳೆಸೀತು. ಮಾನಸಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಯುತ್ತಲೇ ಹೋಗಬೇಕೆಂದು ಬಯಸುವ ಚೇತನವನ್ನು ಬೆಳೆಸಬಲ್ಲ ಶಬ್ದರಚನೆ ಶ್ರೇಷ್ಠ ಸಾಹಿತ್ಯ."

ಈವರೆಗೆ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕಾದಂಬರಿಕಾರರು, ಕವಿಗಳು, ಸಣ್ಣಕಥೆಗಳ ಬರಹಗಾರರು, ನಾಟಕಕಾರರು, ಪ್ರಬಂಧಕಾರರು ಅಲ್ಲದೆ ಮಹಾನ್ ವಿದ್ವಾಂಸರನ್ನು ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರನ್ನಾಗಿ ಆರಿಸಿ, ನಾಡು ಗೌರವಿಸಿದೆ. ಮೊದಲಬಾರಿಗೆ ವಿಮರ್ಶಕನೆಂದೇ ಗುರುತಿಸಲಾಗುವ ಸಾಹಿತಿಯನ್ನು ಈ ಪೀಠಕ್ಕೆ ನಾಡು ಆರಿಸಿದೆ. ಸಾಹಿತ್ಯ ವಿಮರ್ಶೆಗಳನ್ನು ಕುರಿತು

ಕೆಲವು ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅದಕ್ಕೆ ಮೊದಲು ಒಂದು ಮಾತನ್ನು ನಿವೇದಿಸಬೇಕು. ನಾನು ಸಾಹಿತ್ಯವನ್ನು ಪ್ರವೇಶಿಸಿದ್ದು ಸಣ್ಣಕಥೆಗಳ ಬರಹಗ್ಗಾರರನಾಗಿ, ೧೯೫೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಅಖಿಲ ಕರ್ನಾಟಕ ಸಣ್ಣಕಥೆಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದೆ. ನನ್ನ ನಾಲ್ಕು ಕಥೆಗಳ ಸಂಗ್ರಹಗಳು ಪ್ರಕಟವಾಗಿವೆ.

ಸಾಹಿತ್ಯವು ನನ್ನನ್ನು ಮೊದಲು ಆಕರ್ಷಿಸಿದ್ದು ಅದು ತಂದುಕೊಡಬಲ್ಲ ಅನುಭವಗಳ ವೈವಿಧ್ಯ ಮತ್ತು ಶ್ರೀಮಂತಿಕೆಯಿಂದ ಕೆ.ವಿ. ಅಯ್ಯರ್ ಅವರ ಮಹಾನ್ ಚಕ್ರವರ್ತಿನಿ ಶಾಂತಳ ನಾನಾಗುತ್ತೇನೆ. ನಿರಂಜನರ ಕಥೆ 'ಕೊನೆಯ ಗಿರಾಕಿ'ಯಲ್ಲಿ, ರೈಲ್ವೆ ನಿಲ್ದಾಣದಲ್ಲಿ ಕಾಮುಕರಿಗೆ ಬಲಿಯಾಗಿ ಕಡೆಯ ಗಿರಾಕಿ ಮೇಲೆ ಸುತ್ತುತ್ತಿರುವ ಹದ್ದನ್ನು ಬಿಡುಗಣ್ಣುಗಳಿಂದ ನೋಡುತ್ತಿರುವ ಹೆಸರೂ ಇಲ್ಲದ ಮೂಕ ಭಿಕ್ಷುಕಿ ನಾನಾಗುತ್ತೇನೆ, ಇಂಗ್ಲಿಷ್ ನಾಟಕಕಾರನೊಬ್ಬನ ನಾಟಕದಲ್ಲಿ ತಾನು ಸೋಲಿಸಿದ ರಾಜರನ್ನು ರಥಕ್ಕೆ ಕಟ್ಟಿ "ಕೊಬ್ಬಿದ ಸೋಮಾರಿ ಕುದುರೆಗಳೇ, ದಿನಕ್ಕೆ ಹದಿನಾರು ಮೈಲಿಗಳು ಮಾತ್ರವೇ ನೀವು ರಥ ಎಳೆಯುವುದು?" ಎಂದು ಎಂದು ಚಾಟಿಯಿಂದ ಹೊಡೆಯುವ ಉನ್ಮತ್ತ ತೈಮೂರ್‌ಲಂಗ್ ನಾನಾಗುತ್ತೇನೆ. ಪ್ರಾಚೀನ ಗ್ರೀಕ್ ಮಹಾಕಾವ್ಯದಲ್ಲಿ ಮಗನನ್ನು ಕೊಂದು ಅವನ ಹೆಣವನ್ನು ರಥಕ್ಕೆ ಕಟ್ಟಿ ಎಳೆಯುವ ಪೈಶಾಚಿಕ ಯೋಧನ ಕೈಗೆ ದೈನ್ಯದಿಂದ ಮುತ್ತಿಟ್ಟು 'ಮಗನ ಶವನನ್ನು ಕೊಡು' ಎಂದು ಬೇಡುವ ಅತಿವೃದ್ಧ ರಾಜ ಪ್ರಿಯಾಮ್ ನಾನಾಗುತ್ತೇನೆ. ಈ ವಿಸ್ತಾರವಾದ ಬದುಕಿನ ಶಿಖರಗಳಲ್ಲಿ ಪಾತಾಳಿಗಳಲ್ಲಿ, ಮನುಷ್ಯ ಸ್ವಭಾವದ ಉದಾತ್ತತೆ ಮತ್ತು ನೀಚತನಗಳಲ್ಲಿ, ದೈವೀ ಪ್ರೇಮ ದಿವ್ಯ ಸ್ನೇಹ ಪೈಶಾಚಿಕ ದ್ವೇಷಗಳಲ್ಲಿ ನನ್ನನ್ನು ಇಡಬಲ್ಲ ಸಾಹಿತ್ಯವು ನನ್ನ ಸಂವೇದನೆಯನ್ನು ಸೂಕ್ಷ್ಮಗೊಳಿಸದೆ ಹೋದರೆ ಯಾವುದು ನನ್ನನ್ನು ಸೂಕ್ಷ್ಮ ಸಂವೇದನೆಯ ಮನುಷ್ಯನನ್ನಾಗಿ ಮಾಡಬಲ್ಲದು? ಭಾವಬುದ್ಧಿಗಳಮಲ ವಿದ್ಯುದಾಲಿಂಗನವಾದ ಸಾಹಿತ್ಯದ ರಚನೆಯೂ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಹೊಣೆಗಾರಿಕೆಯ ಕೆಲಸ, ಸಾಹಿತ್ಯ ವಿಮರ್ಶೆಯೂ ಹೊಣೆಗಾರಿಕೆಯ ಕೆಲಸ.

ಸಾಹಿತ್ಯ ಕೃತಿಯು ಅರ್ಥವತ್ತಾದ ಅನುಭವ, ವ್ಯವಸ್ಥಿತವಾದ ಅನುಭವ. ಸಾಹಿತಿಯ ಸಂವೇದನೆಯು ಸೂಕ್ಷ್ಮವಾದಷ್ಟು ಅವನ ಕೃತಿಯು ಸೂಕ್ಷ್ಮ ನೈತಿಕ ಎಂದರೆ ಜೀವನಪರ ಅಂಶಗಳ ಶೋಧನೆಯೂ ಆಗುತ್ತದೆ. ಶಾಸ್ತ್ರಗಳು ಲಭ್ಯ ಮಾಡುವ ಜ್ಞಾನವನ್ನು ನೇರವಾಗಿ ಹೇಳಿಕೆಗಳ ಮೂಲಕ ಸಂವಹನ ಮಾಡಬಹುದು. ಸಾಹಿತ್ಯವೂ ಒಂದು ಬಗೆಯ ಜ್ಞಾನವೇ. ಸಾಹಿತ್ಯ ಕೃತಿಯ ಅನುಭವವು ಓದುಗನ ವ್ಯಕ್ತಿತ್ವದ ಭಾಗವಾಗಲು ಆ ಅನುಭವವನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ. ನಿಜ ಜೀವನದ ಅನುಭವಕ್ಕೆ ವ್ಯವಸ್ಥೆ ಇಲ್ಲ. ಸಾಹಿತ್ಯ ಕೃತಿಯಲ್ಲಿ ಅದರ ಅನುಭವವನ್ನು ವ್ಯವಸ್ಥೆಗೊಳಿಸುವ ವಿಧಾನವೇ ತಂತ್ರ. ಸಾಹಿತ್ಯ ಕೃತಿಯ ಸ್ವರೂಪ ಮತ್ತು ಅರ್ಥಗಳ ನಡುವಣ ಸೇತುವೆಯೇ ತಂತ್ರ.

ಎಫ್. ಆರ್. ಲೀವಿಸ್ ಎನ್ನುವ ಪ್ರಸಿದ್ಧ ವಿಮರ್ಶಕನು ಸಾಹಿತ್ಯ ವಿಮರ್ಶೆಯು ಪ್ರಾಣದಾಯಕವಾಗಿರಬೇಕು. 'ಲೈಫ್‌ಗಿವಿಂಗ್' ಆಗಿರಬೇಕು ಎಂದ. ಅದು ಸಾಹಿತಿಯನ್ನು ಓದುಗನನ್ನು ಬೆಳೆಸುವಂತಿರಬೇಕು. ನನ್ನ ಅಭಿಪ್ರಾಯದಲ್ಲಿ, ಯಾವ ಸಾಹಿತ್ಯ ಕೃತಿಯ ವಿಮರ್ಶೆಯೇ ಆಗಲಿ ಮೊದಲು ನನಗೆ ಹೇಳಬೇಕಾದದ್ದು, ಆ ಕೃತಿಯನ್ನು ಓದಲು ನನ್ನ ಆಯುಸ್ಸಿನ ನಾಲ್ಕು ಗಂಟೆಗಳನ್ನೋ ನಾಲ್ಕು ದಿನಗಳನ್ನೋ ಏಕೆ ಕೊಡಬೇಕು ಎಂಬ ಪ್ರಶ್ನೆಗೆ ಉತ್ತರ. ಸಾಹಿತ್ಯದಲ್ಲಿ ಮೌಲ್ಯಮಾಪನದ ಪ್ರಶ್ನೆ ಜಟಿಲವಾದದ್ದು ಎಂದೂ, ಸ್ಟ್ರಕ್ಚರಲ್ ಕ್ರಿಟಿಸಿಸಂ, ಡಿಕನ್‌ಸ್ಟ್ರಕ್ಷನ್ ಮೊದಲಾದ ಪಂಥಗಳು ಮೌಲ್ಯಮಾಪನಕ್ಕೆ ಗಮನ ಕೊಡುವುದಿಲ್ಲವೆಂದೂ ನಾನು ಬಲ್ಲೆ. ಸಾಹಿತ್ಯ ವಿಮರ್ಶೆಯ ಕಾರ್ಯ ಎರಡು ಹಂತಗಳಲ್ಲಿ ನಡೆಯುತ್ತದೆ ಎಂದು ನನ್ನ ಭಾವನೆ. ಮೊದಲ ಘಟ್ಟದಲ್ಲಿ ವಿಮರ್ಶಕ– ಓದುಗರ ಸಂವಾದ. ಗಂಭೀರವಾಗಿ ಸಾಹಿತ್ಯವನ್ನು ಓದುವ ಓದುಗರು ಈ ಘಟ್ಟದಲ್ಲಿ ಭಾಗಿಗಳು. ಈ ಘಟ್ಟದಲ್ಲಿ ಮೌಲ್ಯಮಾಪನ ಅನಿವಾರ್ಯ. ಸಾಹಿತ್ಯ ವಿಮರ್ಶೆಯು ಸಾಹಿತ್ಯವನ್ನು ಓದುವ ಬಹುಮಂದಿಗೆ ಪ್ರಸ್ತುತವಾಗಬೇಕಾದರೆ, 'ನಾನೇಕೆ ಕೃತಿಯನ್ನು ಓದಬೇಕು?' ಎಂಬ ಪ್ರಶ್ನೆಗೆ ಉತ್ತರ ದೊರೆಯಲೇಬೇಕು. ಎರಡನೆಯ ಘಟ್ಟ, ವಿಮರ್ಶಕ–ವಿಮರ್ಶಕರ ಸಂವಾದ. ಇಲ್ಲಿ ವಿಮರ್ಶಕ ಎಂದರೆ ಬಿಡಿ ಸಾಹಿತ್ಯ ಕೃತಿಗಳಲ್ಲಿ ಅಥವಾ ಸಾಹಿತಿಗಳಲ್ಲಿ ಮಾತ್ರವೇ ಆಸಕ್ತಿ ಹೊಂದದೆ, ಒಟ್ಟಾರೆ ಸಾಹಿತ್ಯದ ಅಧ್ಯಯನದಲ್ಲಿ ಆಸಕ್ತಿ ಇರುವ ಓದುಗನೂ ಸೇರುತ್ತಾನೆ. ಯಾವುದೇ ಸಾಹಿತ್ಯ ವಿಮರ್ಶೆಗೆ ಪ್ರಬುದ್ಧತೆಯನ್ನು ಆಳವನ್ನು ತಂದುಕೊಡುವುದು ಈ ಘಟ್ಟ. ಆದರೆ ಮೊದಲನೆಯ ಘಟ್ಟವನ್ನು ನಾವು ಕಡೆಗಣಿಸುತ್ತಿದ್ದೇವೆ ಎಂದು ನನಗೆನ್ನಿಸುತ್ತಿದೆ. ಶ್ರೇಷ್ಠ ಸಾಹಿತ್ಯ ವಿಮರ್ಶಕರೂ ಗಂಭೀರ ಆಸಕ್ತಿಯ ಓದುಗರೊಡನೆ ನೇರವಾದ ಸಂಪರ್ಕವನ್ನು ಉಳಿಸಿಕೊಳ್ಳಬೇಕು. ಮತ್ತೊಂದು ಮಾತು – ಸಾಹಿತಿ, ವಿಮರ್ಶಕ ಇಬ್ಬರೂ ಸಾಹಿತ್ಯವನ್ನು ಗಂಭೀರವಾಗಿ ಸ್ವೀಕರಿಸುವವರು. ಮನುಷ್ಯನ ಅತ್ಯಂತ ಮುಖ್ಯವಾದ, ಹೊಣೆಗಾರಿಕೆಯ ಚಟುವಟಿಕೆಗಳಲ್ಲಿ ಸಾಹಿತ್ಯ ಒಂದು ಎಂದು ಪರಿಗಣಿಸುತ್ತಾರೆ. ಆದುದರಿಂದ, ಅವರ ನಿಷ್ಠೆ ಸಾಹಿತ್ಯಕ್ಕೆ ಮೀಸಲಾಗಬೇಕು. ಸಾಹಿತಿಗಳಾಗಲಿ ವಿಮರ್ಶಕರಿಗಾಗಲಿ ಬದುಕಿನ ಒಂದು 'ವಿಷನ್', ಸಮಗ್ರ ದರ್ಶನ ಇರುತ್ತದೆ. ಇದಕ್ಕೆ ಬದ್ಧವಾಗಿ ಇಬ್ಬರೂ ಬರೆಯಬೇಕು. ಯಾವುದೇ ಪಂಥದ ಸಿದ್ಧಾಂತವು ಸಾಹಿತಿಯ ಅಥವಾ ವಿಮರ್ಶಕನ ಸಮಗ್ರ ದರ್ಶನದ ಭಾಗವಾಗಿ ಅವನ ಬರಹಕ್ಕಿಳಿದು ಬರುವುದೇ ಬೇರೆ, ಪ್ರಜ್ಞಾಪೂರ್ವಕವಾಗಿ ಅವನು ತನ್ನ ಬರಹವನ್ನು ಒಂದು ಸಿದ್ಧಾಂತದ ರಥಕ್ಕೆ ಹೂಡುವುದೇ ಬೇರೆ. ಸಾಹಿತ್ಯವಾಗಲಿ, ಸಾಹಿತ್ಯ ವಿಮರ್ಶೆಯಾಗಲಿ ಯಾವುದೇ ಸಿದ್ಧಾಂತದ ಸಖಿಯಾಗಬೇಕಾಗಿಲ್ಲ.

ಈ ಸಂದರ್ಭದಲ್ಲಿ ಸಂಗ್ರಹವಾಗಿ ಒಂದು ವಿಷಯವನ್ನು ಪ್ರಸ್ತಾಪಿಸ ಬಯಸುತ್ತೇನೆ. ಇದು ಪತ್ರಿಕೆಗಳಿಂದ ವಿಮರ್ಶೆ ಆಗಿರುವ ಉಪಕಾರ. ಪ್ರಬುದ್ಧ

ಕರ್ನಾಟಕ, ಶ್ರೀ ಕೃಷ್ಣ ಸೂಕ್ತಿ, ಜಯ ಕರ್ನಾಟಕ, ಜಯಂತಿ. ರಂಗಭೂಮಿಗಳ ಕಾಲದಿಂದ ಸಾಹಿತ್ಯ ಚಿಂತನೆಗೆ ವಿಶೇಷ ಗಮನ ನೀಡಿದ ಈ ಪತ್ರಿಕೆಗಳು ಹೊಣೆಗಾರಿಕೆಯರಿತ ವಿಮರ್ಶೆಗೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿದವು. ಅದನ್ನು ಪೋಷಿಸಿದವು. ಕಳೆದ ಕೆಲವು ದಶಕಗಳಲ್ಲಿ ವಿಶಿಷ್ಟ ಕೆಲಸ ಮಾಡಿರುವ ಪತ್ರಿಕೆಗಳನ್ನು ಮೆಚ್ಚಿಕೆಯಿಂದ ಸ್ಮರಿಸಬೇಕು. ಬಹುಮಿತವಾದ ಚಂದಾದಾರರ ಸಂಖ್ಯೆ, ಏರುತ್ತಿರುವ ಮುದ್ರಣ ಮತ್ತು ಪ್ರಕಾಶನದ ವೆಚ್ಚ ಇವುಗಳ ನಡುವೆಯೂ 'ಸಾಕ್ಷಿ', 'ರುಜುವಾತು', 'ಸಂಕ್ರಮಣ', 'ಶೂದ್ರ' ಪತ್ರಿಕೆಗಳಿಂದ ಪ್ರಾರಂಭವಾಗಿ 'ಸಂಚಯ', 'ಸಂಕುಲ', 'ಮಾನಸ', 'ಸಂಕಲನ', 'ದೇಶಕಾಲ' 'ಶಬ್ದಗುಣ'ಗಳವರೆಗೆ ಪತ್ರಿಕೆಗಳು ಸಾಹಿತ್ಯ ಚಿಂತನೆ ಮತ್ತು ಚರ್ಚೆಗಳಿಗೆ ತೆರೆದಿಟ್ಟ ವೇದಿಕೆ, ಹೊಸ ಹೊಸ ಆಯಾಮಗಳಿಗೆ ಅವಕಾಶ ಹೊಸ ಮನಸ್ಸುಗಳನ್ನು ಬರಮಾಡಿಕೊಂಡದ್ದು ಎಲ್ಲ ಅಮೂಲ್ಯ ಸಾಧನೆ. ಈ ಪತ್ರಿಕೆಗಳ ಕೆಲವು ಸಂಚಿಕೆಗಳು ಒಂದು ಗಂಭೀರ ವಿಚಾರ ಸಂಕಿರಣದಷ್ಟೆ ಸಾಧನೆಯನ್ನು ಕೈಗೂಡಿಸಿಕೊಂಡಿವೆ. ಪ್ರಸಿದ್ಧಿಯ ಹಂಬಲವಿಲ್ಲದೆ ತಮ್ಮ ಮಿತಿಯಲ್ಲಿ ಈ ಪತ್ರಿಕೆಗಳು ನಡೆಸಿಕೊಂಡು ಬಂದಿರುವ ಸೇವಾವ್ರತಕ್ಕೆ ನಾಡು ಕೃತಜ್ಞವಾಗಿರಬೇಕು.

ಸೃಜನಾತ್ಮಕ ಪ್ರತಿಭೆಗೆ ಕೈಮರವಾಗುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಒಂದು ಮಾತನ್ನು ನಿವೇದಿಸಬಯಸುತ್ತೇನೆ. ಸೃಜನಾತ್ಮಕ ಪ್ರತಿಭೆಯ ಮುಂದೆ ಮಹತ್ವದ ಸವಾಲುಗಳಿವೆ. ಸಾಹಿತ್ಯ ಪ್ರತಿಭೆಯು ನಾವು ಊಹಿಸಿಕೊಳ್ಳಲೂ ಸುಲಭವಲ್ಲದ, ನಾಳಿನ ಜಗತ್ತಿಗಾಗಿ ಸೃಷ್ಟಿಮಾಡಬೇಕಾಗುತ್ತದೆ. ಅಂತರ್‌ಗ್ರಹ ಸಂಚಾರವೂ ಆಕಾಶ ನಿಲ್ದಾಣಗಳೂ ಸಾಧ್ಯವಾಗಿ ಕುಟುಂಬ ವ್ಯವಸ್ಥೆಯೂ ಸಮುದಾಯ ಜೀವನವೂ ಹೊಸ ಸೆಳೆವುಗಳಿಗೆ ಒಳಗಾಗುವ ಜಗತ್ತು ಅದು. ಭಯೋತ್ಪಾದಕರಿಂದಾಗಿ ರೈಲ್ವೆ ನಿಲ್ದಾಣ, ಪೂಜಾಸ್ಥಳ, ಮಾರುಕಟ್ಟೆಗಳಿಗೆ ಬರುವುದೂ ಧೈರ್ಯದ ಮಾತಾಗಬಹುದಾದ ಜಗತ್ತು. ನೀರಿಗೂ ಯುದ್ಧಗಳಾಗಬಹುದಾದ ಜಗತ್ತು. ಸರ್ಕಾರಗಳು ಜನತೆಗೆ ಉಚಿತವಾಗಿ ಮಾತ್ರೆಗಳನ್ನು ಹಂಚಿ ತಿನ್ನಿಸಿ, ಅವರಿಗೆ ಹಸಿವಿನ ಅರಿವೇ ಆಗದಂತೆ ಖಚಿತಮಾಡಿಕೊಳ್ಳಬಹುದಾದ ಜಗತ್ತು. ಹಿಮಾಲಯವು ಮಾಯವಾಗಲು ಹಿಮ ಕರಗುತ್ತದೆ ಎಂದು ವಿಜ್ಞಾನಿಗಳು ಹೇಳುವ ಜಗತ್ತು. ಕ್ರಮೇಣ ಹಿಂದಿನ ಅನುಭವದ ಉಪಯುಕ್ತತೆ ಕಡಿಮೆಯಾಗುತ್ತ ಹೋಗಿ ಮನುಷ್ಯ ಹೊಂದಾಣಿಕೆಯ ಶಕ್ತಿಯು ದೈತ್ಯ ಸವಾಲುಗಳನ್ನು ಎದುರಿಸಬೇಕಾಗುವ ಜಗತ್ತು.

ತೌಲನಿಕ ಸಾಹಿತ್ಯ ಅಧ್ಯಯನ

ಸಾಹಿತ್ಯ ವಿಮರ್ಶೆಯನ್ನು ಕುರಿತು ಕೆಲವು ಮಾತುಗಳನ್ನು ನಿವೇದಿಸ ಬಯಸುತ್ತೇನೆ. ನನಗೆ ತೌಲನಿಕ ಸಾಹಿತ್ಯದಲ್ಲಿ ಒಲವು. ನಾನು ವಿದ್ಯಾರ್ಥಿಯಾಗಿದ್ದ ಮೈಸೂರು ವಿಶ್ವವಿದ್ಯಾನಿಲಯವು ಇಂಗ್ಲಿಷ್ ಆನರ್ಸ್ ಪಾಠ ಕ್ರಮದಲ್ಲಿ Comparative Drama ಎನ್ನುವ ಭಾಗವನ್ನು ಸೇರಿಸಿತ್ತು. ಭಾರತದ ಬೇರೆ ಯಾವುದೇ

ವಿಶ್ವವಿದ್ಯಾನಿಲಯದಲ್ಲಿ ಈ ಅಧ್ಯಯನ ಇರಲಿಲ್ಲ. ಇಂಗ್ಲಿಷ್ ನಾಟಕಗಳನ್ನಲ್ಲದೆ ನಮ್ಮ ಮಟ್ಟಿಗೆ ಪ್ರಾಚೀನ ಗ್ರೀಕ್, ಸಂಸ್ಕೃತ, ಫ್ರೆಂಚ್, ಭಾಷೆಗಳ ನಾಟಕಗಳನ್ನು ಅನುವಾದಗಳಲ್ಲಿ ಅಭ್ಯಾಸ ಮಾಡುವುದು ಈ ಶಿಸ್ತು. ಇದು ನನಗೆ ತೌಲನಿಕ ಸಾಹಿತ್ಯದ ಅಧ್ಯಯನದ ಪ್ರಭಾವವನ್ನು ಮನದಟ್ಟು ಮಾಡಿತು. ಕಳೆದ ಕೆಲವು ದಶಕಗಳಲ್ಲಿ ತೌಲನಿಕ ಸಾಹಿತ್ಯದ ಅಧ್ಯಯನವು ಹಲವು ಕೇಂದ್ರಗಳಲ್ಲಿ ನಡೆಯುತ್ತಿದೆ ಎನ್ನುವುದು ನನಗೆ ಗೊತ್ತು, ಕನ್ನಡ ನಾಡಿನಲ್ಲಿ ತೌಲನಿಕ ಅಧ್ಯಯನವು ಇನ್ನೂ ಚುರುಕಾಗಬೇಕು, ವಿಸ್ತಾರವಾಗಬೇಕು. ಕನ್ನಡ ಕೃತಿಗಳನ್ನು ಒಳಗೊಳ್ಳಬೇಕು. ನಿಜವಾದ ಸಂಶೋಧನೆ ನಡೆಯಬೇಕು, ಶ್ರದ್ಧೆ ಪ್ರತಿಭೆಗಳ ಆಧಾರದ ಮೇಲೂ ನಡೆಯುವ ಅಧ್ಯಯನದ ಫಲಿತಾಂಶಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿ ಅಂತಾರಾಷ್ಟ್ರೀಯ ವಿದ್ವತ್ ಜಗತ್ತಿನ ಗಮನ ಸೆಳೆಯಬೇಕು. ವಸಾಹತುಶಾಹಿಯ ದೃಷ್ಟಿಯಿಂದ ಈ ಬಗೆಯ ಅಧ್ಯಯನಗಳು ಈಗಾಗಲೇ ನಡೆದಿವೆ. ಈಗ ನಮಗೆ ಆಫ್ರಿಕದ ಸಾಹಿತ್ಯಗಳು, ಇಸ್‌ರೇಲಿನ ಸಾಹಿತ್ಯ ಎಲ್ಲ ಲಭ್ಯವಿದೆ. ಬದುಕಿನಲ್ಲಿ ಯಂತ್ರಗಳು, ಪರಂಪರೆ ಮತ್ತು ಪ್ರಗತಿ, ಒಂದು ನಾಡಿನಲ್ಲಿ ಬೇರೆ ಬೇರೆ ನಾಗರಿಕತೆಗಳ ಮುಖಾಮುಖಿ, ಸಾಹಿತ್ಯದಲ್ಲಿ ಸ್ತ್ರೀ ಮತ್ತು ಪುರುಷ ಸಂವೇದನೆಗಳು ಮುಂತಾಗಿ ತೌಲನಿಕ ಅಧ್ಯಯನಕ್ಕೆ ವಿಷಯಗಳ ಗಣಿಯೇ ತೆರೆದುಕೊಂಡಿದೆ.

ತೌಲನಿಕ ಅಧ್ಯಯನವು ಇನ್ನಷ್ಟು ವಿಸ್ತಾರವನ್ನು ಪಡೆದುಕೊಂಡು ಮತ್ತೊಂದು ಆಯಾಮವನ್ನು ಕಂಡುಕೊಳ್ಳಬಹುದು. ನಮ್ಮಲ್ಲಿ ಶಿವರಾಮ ಕಾರಂತ, ಅ.ನ.ಕೃ. ಪರಂಪರೆ ಒಂದಿದೆ. ಈ ಪರಂಪರೆಯಲ್ಲಿ ಒಂದೇ ಕಲೆಗೆ ಮುಡಿಪು ಎಂದಿಲ್ಲ. ಇವರ ಆಸಕ್ತಿ ಮೂಲತಃ ಕಲೆಯಲ್ಲಿ, ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಚಿತ್ರಕಲೆ, ಶಿಲ್ಪಕಲೆ ಎಲ್ಲದರಲ್ಲಿ ಇವರ ಆಸಕ್ತಿ. ಶಿವರಾಮ ಕಾರಂತರ ಕೃತಿಗಳನ್ನು ಯಕ್ಷಗಾನ ಕಲೆಗೆ ಅವರ ಕೊಡುಗೆಯನ್ನು ನಾನು ಇಲ್ಲಿ ವಿವರಿಸಬೇಕಾಗಿಲ್ಲ. ಅ.ನ.ಕೃ. ಅವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ' ಕೃತಿ ಈಗ ಕರ್ನಾಟಕದಾಚೆ ಚರ್ಚೆಯಾಗುತ್ತಿದೆ. ಅವರು ಭಾರತೀಯ ಚಿತ್ರಕಲೆಯನ್ನು ಕುರಿತು ಬರೆದಿದ್ದಾರೆ. ವಚನಗಳನ್ನು ಹಾಡುವ ಸಾಧ್ಯತೆಯನ್ನು ಅವರು ಮಲ್ಲಿಕಾರ್ಜುನ ಮನ್ಸೂರರಿಗೆ ಸೂಚಿಸಿದರು. ಇನ್ನು ಮುಂದೆ ಸಾಹಿತ್ಯ ವಿಮರ್ಶೆಯು ಎಲ್ಲ ಕಲಾ ಸೃಷ್ಟಿಯ ಅಧ್ಯಯನವನ್ನೂ, ಎಲ್ಲ ಕಲೆಗಳ ಮೂಲದ ಅಧ್ಯಯನವನ್ನೂ ಕಲೆಗಳ ಪರಸ್ಪರ ಬಾಂಧವ್ಯದ ಅಧ್ಯಯನವನ್ನೂ ಮಾಡಬಹುದು. ಈ ಸಂದರ್ಭದಲ್ಲಿ ಪ್ರೊ. ಎಂ. ಎಚ್. ಕೃಷ್ಣಯ್ಯನವರು ಕುವೆಂಪು ಅವರ ಜನ್ಮಶತಮಾನೋತ್ಸವದ ನೆನಪಿಗಾಗಿ ಸಂಪಾದಿಸಿದ 'ಕುವೆಂಪು ಸಾಹಿತ್ಯ ಚಿತ್ರ ಸಂಪುಟ'ವನ್ನು ಸ್ಮರಿಸಬೇಕು.

೧೯೭೦ರಿಂದ ಹೊಸ ಚೈತನ್ಯ

ತೌಲನಿಕ ಸಾಹಿತ್ಯ ಅಧ್ಯಯನವು ಜಾಗತೀಕರಣದ ಒಂದು ಸ್ವಾಗತಾರ್ಹ ಆಯಾಮ. ಆದರೆ ಜಾಗತೀಕರಣ ಎನ್ನುವುದು ನಿಜವಾಗಿ ಅಮೆರಿಕೀಕರಣವಾಗುತ್ತಿದೆ.

ಕೊಳ್ಳುಬಾಕ ಸಂಸ್ಕೃತಿ, ಹಣದ ಮತ್ತು ಶಕ್ತಿಯ ಆರಾಧನೆ ಇವು ನಮ್ಮ ಮನೋಧರ್ಮವನ್ನು ರೂಪಿಸುತ್ತಿವೆ. ಈ ಅಮೇರಿಕೀರಣವು ನಮ್ಮ ಪತ್ರಿಕಾ ಪ್ರಪಂಚ ಮತ್ತು ವಿಶ್ವವಿದ್ಯಾನಿಲಯಗಳಿಗೂ ತನ್ನ ಕಬಂಧಬಾಹುಗಳನ್ನು ಚಾಚುತ್ತಿದೆ. ಶಿಕ್ಷಣ ಕ್ಷೇತ್ರ ಮತ್ತು ಸಮೂಹಮಾಧ್ಯಮಗಳ ಕ್ಷೇತ್ರಗಳಲ್ಲಿ ಅಮೆರಿಕದ ನೇರ ಅಥವಾ ಪರೋಕ್ಷ ಪ್ರಭಾವಕ್ಕೆ ಅವಕಾಶಕೊಡುವುದು ನಮ್ಮ ಬೌದ್ಧಿಕ ಸ್ವಾತಂತ್ರ್ಯಕ್ಕೆ ಚಿಂತನ ಸ್ವಾತಂತ್ರ್ಯಕ್ಕೆ ಮಾರಕ. ಇದನ್ನು ತಡೆಯಬಲ್ಲ ಶಕ್ತಿಗಳಲ್ಲಿ ಒಂದು ಸಾಹಿತ್ಯ. ೧೯೭೦ರಿಂದೀಚೆಗೆ ನಮ್ಮ ಸಾಹಿತ್ಯ ಮತ್ತು ಜನಜೀವನವು ದೇಸಿಯತ್ತ ತಿರುಗುತ್ತಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ. ಈ ಅವಧಿಯಲ್ಲಿ ದಲಿತ ಸಾಹಿತ್ಯವು ಅರಳಿದ್ದು, ೧೯೭೦ರಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಚೈತನ್ಯ ನುಗ್ಗಿ ಬಂದಿದೆ. ಆರು ದಶಕಗಳಿಂದ ಕನ್ನಡ ಸಾಹಿತ್ಯದ ನಡೆಗೆ ಸಾಕ್ಷಿಯಾಗಿ ಬಾಳಿದ ನಾನು ಖುಷಿಯಿಂದ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವೂ ವಿಮರ್ಶೆಯೂ ಒಂದು ಹೊಸ ಚೈತನ್ಯವನ್ನೂ, ತಮ್ಮತನವನ್ನೂ, ದಿಟ್ಟತನವನ್ನೂ ತೋರಿಸಿವೆ. ಕನ್ನಡ ನಾಡಿನ ಕಾರಯಿತ್ರೀ ಪ್ರತಿಭೆ, ಭಾವಯತ್ರೀ ಪ್ರತಿಭೆ ಎರಡೂ ಹೊಸ ಶಕ್ತಿಯಿಂದ ಕಾರ್ಯಪ್ರವೃತ್ತವಾದಂತೆ ಭಾಸವಾಗುತ್ತದೆ. 'ಫೆಮಿನಿಸಂ' ಸ್ತ್ರೀವಾದವಾಗಿ ಪ್ರಾರಂಭವಾಗಿ ಅದನ್ನು ಒಳಗೊಂಡು ಆದರೆ ಮೀರಿ ಸ್ತ್ರೀ ಸಂವೇದನೆಯ ಸಾಹಿತ್ಯ ಮತ್ತು ವಿಮರ್ಶೆಯಾಗಿ ಬೆಳೆಯುತ್ತಿರುವುದು ಒಂದು ಸಂತೋಷದ ಬೆಳವಣಿಗೆ. ಜಾನಪದದ ಅಧ್ಯಯನವಂತೂ ವ್ಯವಸ್ಥಿತವಾಗಿ ಬಹುಮುಖವಾಗಿ ಬೆಳೆಯುತ್ತಿದೆ. ಈ ಅಧ್ಯಯನಕ್ಕೆ ಪ್ರತಿಭೆ ಮನಸ್ಸು ಮಾಡಿದರೆ ಎಷ್ಟು ಫಲಪ್ರದವಾಗಬಹುದು ಎಂಬುದನ್ನೇ ಪ್ರೊ. ಸಿ.ಎಸ್. ರಾಮಚಂದ್ರನ್ ಅವರ 'ಹೊಸ ನುಡಿಯ ಮೇಲೆ ಚದುರಂಗ'ದಂಥ ಕೃತಿಯಲ್ಲಿ ಕಾಣಬಹುದು.

ಕನ್ನಡ ಭಾಷೆ ಬೆಳವಣಿಗೆ

ಕನ್ನಡ ಭಾಷೆಯ ಬೆಳವಣಿಗೆಯ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕು. ಮತ್ತು ಈ ಕಾರ್ಯದಲ್ಲಿ ನಿರತವಾದ ಸಂಸ್ಥೆಗಳ ನಡುವೆ ವ್ಯವಸ್ಥಿತವಾದ ಹೊಂದಾಣಿಕೆಯ ಅಗತ್ಯವಿದೆ. ಕನ್ನಡ ವಿಶ್ವವಿದ್ಯಾನಿಲಯ, ಎಲ್ಲ ವಿಶ್ವವಿದ್ಯಾನಿಲಯಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಈ ಎಲ್ಲ ಸಂಸ್ಥೆಗಳ ಯೋಜನೆಗಳು ಮತ್ತು ಪ್ರಕಟಣೆಗಳ ವಿಷಯಗಳಲ್ಲಿ ಹೊಂದಾಣಿಕೆಗೆ ವ್ಯವಸ್ಥೆಯ ಅಗತ್ಯವಿದೆ.

ಸುತ್ತಲಿನ ಬದುಕು ಬೆಳೆದಂತೆ ಕನ್ನಡ ಬೆಳೆಯಬೇಕು. ಕನ್ನಡವು ಆಧುನಿಕ ಭಾಷೆಯಾಗಬೇಕು. ಯಾವಾಗ ಆಧುನಿಕ ಭಾಷೆಯಾಗುತ್ತದೆ? ಜಗತ್ತಿನಲ್ಲಿನ ಅತ್ಯಾಧುನಿಕ ಜ್ಞಾನವನ್ನು ನಿಖರವಾಗಿ ಅಭಿವ್ಯಕ್ತಿ ಮಾಡುವ ಸಾಮರ್ಥ್ಯ ಬಂದರೆ ಅದು ಆಧುನಿಕ ಭಾಷೆಯಾಗುತ್ತದೆ. ಇಂದು ಅತ್ಯಾಧುನಿಕ ಜ್ಞಾನವನ್ನು ಕನ್ನಡದಲ್ಲಿ

ಅಭಿವ್ಯಕ್ತಿ ಮಾಡಲು ಯಾರು ತಾನೆ ಏಕೆ ಪ್ರಯತ್ನಿಸುತ್ತಾರೆ? ಪುಸ್ತಕ ಬರೆದರೆ ಆ ಮಟ್ಟದ ಪುಸ್ತಕವನ್ನು ಕೊಳ್ಳುವವರು ಯಾರು? ಓದುವವರು ಯಾರು?

ಸಮಸ್ಯೆಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಕನ್ನಡವು ಆಧುನಿಕ ಜ್ಞಾನವನ್ನು ಸಂವಹನ ಮಾಡಬಲ್ಲ ಭಾಷೆಯಾಗಬೇಕಾದರೆ ಅದನ್ನು ಉನ್ನತ ಮಟ್ಟದಲ್ಲಿ ಬಳಸಿ ಪುಸ್ತಕಗಳನ್ನು ಬರೆಯಬೇಕು. ಪುಸ್ತಕಗಳನ್ನು ಬರೆಯ ಬೇಕಾದರೆ ಅವನ್ನು ಓದುವವರಿರಬೇಕು. ಅವನ್ನು ಓದುವವರಿರಬೇಕಾದರೆ ಕನ್ನಡ ಭಾಷೆಯ ಬೋಧನೆಯ ಮಾಧ್ಯಮವಾಗಬೇಕು. ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಸಂತೋಷ ಕೊಡುವಂತಿರಬೇಕು. ಪಠ್ಯಪುಸ್ತಕ ರಚನೆಗೆ ತರಬೇತಿ ಅಗತ್ಯ. ಒಳ್ಳೆಯ ಶಿಕ್ಷಕರೆಲ್ಲ ಒಳ್ಳೆಯ ಪಠ್ಯಪುಸ್ತಕಗಳನ್ನು ರಚಿಸಲಾರರು. ನಮ್ಮಲ್ಲಿ ಅನೇಕ ಪಠ್ಯಪುಸ್ತಕಗಳು ಕಣ್ಣಿನಲ್ಲಿ ನೀರು ತರಿಸುವಷ್ಟು ನೀರಸವಾಗಿದೆ.

ನಾಡಿನಲ್ಲಿ ವಿದ್ವತ್ತಿನ ಅನ್ವೇಷಣೆಗೆ ಪೋಷಕವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಸರ್ಕಾರದಲ್ಲಿಯೂ ವಿಶ್ವವಿದ್ಯಾನಿಲಯಗಳಲ್ಲಿಯೂ **ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ** ನನ್ನ ಮನವಿ. ಹಳಗನ್ನಡ, ವ್ಯಾಕರಣ, ಛಂದಸ್ಸು ಮೊದಲಾದವುಗಳ ಅಧ್ಯಯನವು ಮುಂದುವರಿಯಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನಿಘಂಟಿನ ಕಾರ್ಯ ಮುಂದುವರೆಯಲು ಗ್ರಂಥಾಲಯವನ್ನು ಸಜ್ಜು ಗೊಳಿಸಬೇಕು. ಸರ್ಕಾರವು ಹಣ ಸಹಾಯವನ್ನು ನೀಡಬೇಕು. ವಿಶ್ವವಿದ್ಯಾನಿಲಯ ಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಯಬೇಕು. ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವ ಸಾಮಾನ್ಯ ನಿಯಮಗಳೇನೋ ಇವೆ. ಇವು ಆಡಳಿತಕ್ಕೆ ಅನ್ವಯಿಸುವುವು. ವಿದ್ವತ್ತಿನ ಕೆಲಸಕ್ಕೆ ಹೊಂದಾಣಿಕೆಯ ಅಭಾವವಿದೆ. ಜಗತ್ತಿನ ಇನ್ನೂರು ಅತ್ಯುತ್ತಮ ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ಭಾರತದ ಒಂದೂ ವಿಶ್ವವಿದ್ಯಾನಿಲಯದ ಹೆಸರಿಲ್ಲ. ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಸುಧಾರಿಸಿ ಕರ್ನಾಟಕದ ವಿಶ್ವವಿದ್ಯಾನಿಲಯಗಳನ್ನು ಜಾಗತಿಕ ಮಟ್ಟಕ್ಕೆ ಏರಿಸುವ ಸಂಕಲ್ಪವನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಮಾಡಬೇಕು, ಉನ್ನತಮಟ್ಟದ ವಿದ್ವತ್ ಪತ್ರಿಕೆಗಳು ಕನ್ನಡದಲ್ಲಿ ಎಷ್ಟಿವೆ? ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಮೊದಲಾದ ಸಂಸ್ಥೆಗಳಿಗೆ ಶಿಕ್ಷಣ ಕ್ಷೇತ್ರದೊಡನೆ ಸಂಬಂಧವಿರುವವರನ್ನು ಮಾತ್ರ ಆಯ್ಕೆ ಮಾಡಬೇಕು.

ಇದಕ್ಕೆಲ್ಲ ಅಡಿಪಾಯವಾಗಿ ನಿರ್ಮಿಸಬೇಕಾದದ್ದು ಪ್ರಾಥಮಿಕ ಶಾಲೆಯ ಸ್ಥಿತಿಯನ್ನು, ಬೋಧನೆಯನ್ನು, ಆ ಮಟ್ಟದಲ್ಲಿ ಕನ್ನಡದ ಕಲಿಕೆ ಕೇಂದ್ರೀಯ ಶಾಲೆಗಳಲ್ಲಿ ಕಡ್ಡಾಯವಾಗಬೇಕು. ಬಿಸಿ ಊಟ, ಉಚಿತ ಪಠ್ಯಪುಸ್ತಕಗಳು ಮೊದಲಾದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಶಾಲೆಗಳನ್ನು ಬಿಟ್ಟಿದ್ದ ಸಾವಿರಾರು ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ತಂದ ಶಿಕ್ಷಣ ಇಲಾಖೆಯನ್ನು ಅಭಿನಂದಿಸಬೇಕು. ಆದರೆ ಎಲ್ಲ ಶಾಲೆಗಳಿಗೆ ಸೂಕ್ತವಾದ ಮತ್ತು ಶೌಚಾಲಯಗಳಿರುವ ಕಟ್ಟಡಗಳನ್ನು

ಲಭ್ಯ ಮಾಡಬೇಕು. ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಪೋಷಕರಿಗೆ ಸಂತೋಷವಾಗುವಂತೆ ಆ ಶಾಲೆಗಳನ್ನು ನಿರ್ವಹಿಸಬೇಕು. ಸರ್ಕಾರಿ ಶಾಲೆಗಳು ಮಾದರಿ ಶಾಲೆಗಳಾಗಬೇಕು. ಕನ್ನಡ ನಾಡಿನಲ್ಲಿ ಯಾವುದೇ ಉದ್ಯೋಗಕ್ಕೆ ಕನ್ನಡದ ತಿಳಿವಳಿಕೆ ಕಡ್ಡಾಯವಾಗಬೇಕು. ಕನ್ನಡ ಅನ್ನವನ್ನು ಕೊಡಬಲ್ಲ ಭಾಷೆಯಾಗಬೇಕು. ಕನ್ನಡವು ಶಿಕ್ಷಣದ ಮಾಧ್ಯಮವಾಗಬೇಕು. ಇಂಗ್ಲಿಷನ್ನು ಮೊದಲನೆಯ ತರಗತಿ ಯಿಂದ ಬೋಧಿಸುವುದಕ್ಕೆ ಈಗಲೂ ನನ್ನ ವಿರೋಧವಿದೆ. ಕನ್ನಡದಿಂದ ತೀರ ವಿಭಿನ್ನವಾದ ಇಂಗ್ಲಿಷ್ ಭಾಷೆಯನ್ನು ಕನ್ನಡದೊಂದಿಗೇ ಕಲಿಯುವಾಗ, ಇಂಗ್ಲಿಷ್ ಬಳಕೆಯ ವಾತಾವರಣವಿಲ್ಲದ ಗ್ರಾಮೀಣ ಪ್ರದೇಶದಲ್ಲಿ, ಮಗುವಿನ ಮನಸ್ಸಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳ ವಾಕ್ಯಗಳ ರಚನೆಗಳು, ರೀತಿಗಳು ಗೊಂದಲವನ್ನು ಉಂಟು ಮಾಡುತ್ತವೆ. ಇಂಗ್ಲಿಷ್ ಬೋಧನೆಯನ್ನು ಪ್ರಾರಂಭಿಸಿದ ಮೇಲೆ, ಅದು ಎಷ್ಟು ಸಾರ್ಥಕವಾಗಿದೆ ಎನ್ನುವುದನ್ನು ನಿರ್ಧರಿಸಲು ಏನೂ ಪ್ರಯತ್ನ ನಡೆದಿಲ್ಲ. ಇದೊಂದು ದೊಡ್ಡ ಲೋಪ. ಪ್ರಾಥಮಿಕ ತರಗತಿಯಿಂದ ಪದವಿ ತರಗತಿಯವರೆಗೆ ಇಂಗ್ಲಿಷ್ ಬೋಧನೆಯ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಸಮಗ್ರವಾಗಿ ಶಿಫಾರಸು ಮಾಡಲು ಇಂಗ್ಲಿಷ್ ಬೋಧನೆಯ ತಜ್ಞರೂ ಇರುವ ಸಮಿತಿಯೊಂದನ್ನು ಸರ್ಕಾರವಾಗಲಿ ಕನ್ನಡ ಸಾಹಿತ್ಯ ಪರಿಷತ್ತಾಗಲಿ ರಚಿಸುವುದು ಸೂಕ್ತ. ಮುಖ್ಯವಾಗಿ, ಕನ್ನಡ ನಾಡಿನ ಇಡೀ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದಕ್ಕಬೇಕು.

ಮಕ್ಕಳಿಗೆ ಸಾಹಿತ್ಯ

ಎರಡು ಪ್ರಶ್ನೆಗಳು ಆಗಾಗ ನನ್ನ ಮುಂದೆ ಬರುತ್ತವೆ – ಒಂದು, ನಮ್ಮ ನಾಡಿನಲ್ಲಿ ಮಹಿಳಾ ವ್ಯಂಗ್ಯ ಚಿತ್ರಕಾರರು ಏಕೆ ಕಾಣುವುದಿಲ್ಲ? ಮಹಿಳೆಯರಿಗೆ 'ವ್ಯಂಗ್ಯದ ಕಣ್ಣಿಲ್ಲ' ಎನ್ನಬಹುದೇ? ಎರಡನೆಯದು, ನಮ್ಮ ನಾಡಿನಲ್ಲಿ 'ಆಲಿಸ್ ಇನ್ ವಂಡರ್‌ಲೆಂಡ್'ನಂತೆ ವಿಚಿತ್ರ ಆದರೆ 'ಎಕ್ಸೈಟಿಂಗ್' ಆದ ಕಲ್ಪನಾ ಅನುಭವ ಗಳನ್ನು ಹೆಣದೆ ಮಕ್ಕಳ ಕಥೆ ಏಕೆ ಬಂದಿಲ್ಲ? ಅದೇ ಅನುಭವಗಳು ಎಂದು ನಾನು ಹೇಳುತ್ತಿಲ್ಲ. ಆದರೆ ಕಿರಿದ ಹಲ್ಲಿನ ನಗುವನ್ನು ಹಿಂದೆ ಬಿಟ್ಟು ಮಾಯವಾಗುವ ಬೆಕ್ಕು, 'ನಾನು ಬಳಸಿದ ಪದಕ್ಕೆ ನಾನು ಇಟ್ಟಿದ್ದೇ ಅರ್ಥ ಯಜಮಾನರು ಯಾರು – ನಾನೋ ಪದವೋ?' ಎನ್ನುವ ಮಹಿಳೆ, ಇಂಥ ವಿಶಿಷ್ಟ ಘಟನೆಗಳನ್ನು ನಾವು ಕಲ್ಪಿಸಿಕೊಳ್ಳಲಾರವೆ? ಅನುವಾದ ಮಾಡಿ ಬೇರೆ ದೇಶಗಳಿಗೆ ಕಳಿಸಿದರೆ ಅಲ್ಲಿನ ಮಕ್ಕಳು ಖುಷಿಯಿಂದ ಓದಬಹುದಾದ ಮಕ್ಕಳ ಸಾಹಿತ್ಯ ನಾವೆಷ್ಟು ಕೊಡಬಲ್ಲೆವು?

ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಾತಿದೆ. 'ಪ್ರತಿಯೊಂದು ಮಗುವು ಹುಟ್ಟಿದಾಗಲೂ ಮಾನವ ಕುಲ ಮರುಹುಟ್ಟನ್ನು ಪಡೆಯುತ್ತದೆ'. ಏಕೆಂದರೆ ಆಗ ಹುಟ್ಟಿದ ಮಗು ಒಳಿತಿಗಾಗಿ ಕೆಡಕಿಗಾಗಿ ಮಾನವಕುಲದ ಎಲ್ಲ ಸಾಧ್ಯತೆಗಳನ್ನು ಅಳವಡಿಸಿಕೊಂಡು

ಹುಟ್ಟುತ್ತದೆ. ಅದು ಒಬ್ಬ ಕಬೀರ ಆಗಬಹುದು, ಒಬ್ಬ ಗಾಂಧಿ ಆಗಬಹುದು, ಒಬ್ಬ ಐನ್‌ಸ್ಟೈನ್ ಆಗಬಹುದು, ಒಬ್ಬ ಮೇಡಂ ಕ್ಯೂರಿ ಆಗಬಹುದು, ಒಬ್ಬ ಸಂತ ಮೀರಾ ಆಗಬಹುದು, ಒಬ್ಬ ಅಬ್ಬಕ್ಕ ಆಗಬಹುದು, ಒಬ್ಬ ಭಗತ್ ಸಿಂಗ್ ಆಗಬಹುದು, ಒಬ್ಬ ಹಿಟ್ಲರ್ ಆಗಬಹುದು, ಒಬ್ಬ ವೀರಪ್ಪನ್ ಆಗಬಹುದು. ಅದು ಹೇಗೆ ಅರಳುತ್ತದೆ ಎನ್ನುವುದು ಸ್ವಲ್ಪಮಟ್ಟಿಗಾದರೂ ಸಮಾಜವು ಒದಗಿಸುವ ವಾತಾವರಣವನ್ನು ಅವಲಂಬಿಸುತ್ತದೆ. ನಾವು ಮಕ್ಕಳಿಂದ ಬಾಲ್ಯವನ್ನು ಕಸಿದುಕೊಂಡಿದ್ದೇವೆ. ಅರಳುವ ಮನಸ್ಸಿನ ಮೇಲೆ ಸ್ಪರ್ಧೆಯ ಬಂಡೆಯನ್ನು ಹೇರಿದ್ದೇವೆ. ಆಟವಾಡಲು ದೊಡ್ಡ ನಗರಗಳಲ್ಲಿ ಮೈದಾನಗಳಿಲ್ಲ. ಕೆಲವು ವರ್ಷಗಳ ಹಿಂದೆ ಒಂದು ಇಂಗ್ಲಿಷ್ ದೈನಿಕವು ವಿವಿಧ ಪರೀಕ್ಷೆಗಳಲ್ಲಿ ಮೊದಲನೆಯ ಅಥವಾ ಎರಡನೆಯ ಸ್ಥಾನವನ್ನು ಪಡೆದ ೧೫ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯ ರೊಂದಿಗೆ ಸಂದರ್ಶನಗಳನ್ನು ಪ್ರಕಟಿಸಿತು. “ನೀವು ಯಾವ ಆಟ ಆಡುತ್ತೀರಿ?” ಎಂದು ಪ್ರಶ್ನಿಸಿದಾಗ ಹತ್ತು ಮಂದಿ ಹೇಳಿದ್ದು ‘ವಿಡಿಯೋ ಗೇಮ್ಸ್’. ಬಯಲಿನಲ್ಲಿ ತಮ್ಮ ವಯಸ್ಸಿನವರೊಡನೆ ಬೆಳಕು ಗಾಳಿಗಳಲ್ಲಿ ಆಡುತ್ತ, ಜಗಳವಾಡಿ ಮತ್ತೆ ಸ್ನೇಹಿತರಾಗಿ ಖುಷಿಯಾಗಿ ಕಾಲ ಕಳೆದು ಸಹಬಾಳ್ವೆಯನ್ನು ರಕ್ತಗತ ಮಾಡಿಕೊಳ್ಳ ಬೇಕಾದ ವಯಸ್ಸಿನಲ್ಲಿ ಮನೆಯಲ್ಲಿ ಕುಳಿತು ಜೀವರಹಿತ ಬೊಂಬೆಗಳೊಡನೆ ಆಟ, ಹಗಲು ರಾತ್ರಿ ಸ್ಪರ್ಧೆಯ ಮನೋಧರ್ಮವನ್ನು ಮಕ್ಕಳಲ್ಲಿ ಬೆಳೆಸಿ, ಸಹಕಾರ–ಸಾಮರಸ್ಯಗಳ ಸಮಾಜವನ್ನು ಕಟ್ಟುವ ಕನಸನ್ನು ಕಾಣುತ್ತೇವೆ. ಮಕ್ಕಳ ಮನಸ್ಸನ್ನು ಆರೋಗ್ಯಕರವಾಗಿ ರೂಪಿಸುವ ಸಾಹಿತ್ಯವನ್ನು ಕೊಡಬಲ್ಲ ಸಂಸ್ಥೆಯೊಂದರ ಅಗತ್ಯವಿದೆ. ಇದನ್ನು ಯಾವ ಹೆಸರಿನಿಂದಲಾದರೂ ಕರೆಯಿರಿ. ಅದರಲ್ಲಿ ಒಬ್ಬ ಮಕ್ಕಳ ಮನಶ್ಶಾಸ್ತ್ರದ ತಜ್ಞರು, ಒಬ್ಬರು ಚಿಕ್ಕವಯಸ್ಸಿನ ಮಕ್ಕಳಿಗೆ ಪಾಠ ಹೇಳಿದ ನುರಿತ ಶಿಕ್ಷಕರು, ಒಬ್ಬರು ಚಿತ್ರಕಾರರು ಇರಲೇಬೇಕು. ಈ ಸಂಸ್ಥೆಯು ಮಕ್ಕಳೆಂದು ನಾವು ನಿರ್ದೇಶಿಸುವ ವಯೋಮಾನದವರಲ್ಲಿ ಬೇರೆ ಬೇರೆ ಘಟ್ಟಗಳವರು ಇರುತ್ತಾರೆ. ಇವರಿಗೆ ಬೇರೆ ಬೇರೆ ಲಕ್ಷಣಗಳ ಕೃತಿಗಳು ಅಗತ್ಯ ಎನ್ನುವುದನ್ನು ಗುರುತಿಸಬೇಕು. ಪ್ರತಿಯೊಂದು ಕೃತಿಯನ್ನು ಪ್ರಕಟಿಸುವ ಮೊದಲು ಬೇರೆ ಬೇರೆ ಶಾಲೆಗಳ ಕೆಲವು ಮಕ್ಕಳನ್ನು ಸೇರಿಸಿ ಅವರಿಗೆ ಓದಲು ಕೊಟ್ಟು ಅವರ ಪ್ರತಿಕ್ರಿಯೆಯನ್ನು ಪರಿಗಣಿಸಿ ಕೃತಿಯನ್ನು ಪ್ರಕಟಿಸಬೇಕು ಮತ್ತು ಸಮಾಜದ ಬಹುಮಂದಿಗೆ ಎಟಕುವ ಬೆಲೆಯಲ್ಲಿ ಮಾರಲು ಸರ್ಕಾರವು ನೆರವಾಗಬೇಕು. ಸರ್ಕಾರವು ಸುಲಭ ಬೆಲೆ ಇಟ್ಟು ಮಕ್ಕಳ ಕೈಯಲ್ಲಿ ಉಪದೇಶದ ಅತಿಭಾರವಿಲ್ಲದ, ಖುಷಿ ಕೊಡುವ ಪುಸ್ತಕಗಳನ್ನು ಇಡಲಿ ಎಂದು ಪ್ರಾರ್ಥಿಸುತ್ತೇನೆ.

ನಮ್ಮ ಪರಂಪರೆಯನ್ನು ರಕ್ಷಿಸಿ

ನನ್ನ ಮನಸ್ಸಿಗೆ ಬಹಳ ನೋವನ್ನು ಕೊಟ್ಟಿರುವ ಸಂಗತಿಯನ್ನು ಪ್ರಸ್ತಾಪಿಸ ಬಯಸುತ್ತೇನೆ. ನಮ್ಮ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯವನ್ನು ಬರೆದ

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ಮತ್ತು ನಾಡಿನ ಪುಣ್ಯಕ್ಷೇತ್ರವಾದ ಗೋಕರ್ಣಗಳ ದುಃಸ್ಥಿತಿ. ಈ ವಿಷಯಕ್ಕೆ ಜಾತಿಮತಧರ್ಮಗಳ ಗಂಟು ಹಾಕುವುದು ಬೇಡ. ಹಂಪೆಯ ಸ್ಥಿತಿಯನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಗೋಕರ್ಣದ ವಿಷಯ ಅಲ್ಲಿಯವರೇ ಹೇಳುವುದನ್ನು ಕೇಳಿದ್ದೇನೆ. ಹಂಪೆಯ ಅವಶೇಷಗಳನ್ನು ಸ್ವಚ್ಛವಾಗಿಟ್ಟು ಯಾವ ಅಪಚಾರವಾಗದಂತೆ ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಈ ಕರ್ತವ್ಯದಲ್ಲಿ ತೀರ ಲೋಪವಾಗುತ್ತಿದೆ. ಅವುಗಳ ಪಾವಿತ್ರ್ಯಕ್ಕೆ ಕುಂದು ತರುವ ಕಾರ್ಯಗಳು ನಡೆಯುತ್ತಿವೆ. ಹಂಪಿ, ಗೋಕರ್ಣ ಎರಡು ಸ್ಥಳಗಳಲ್ಲಿಯೂ ಪ್ರವಾಸಿಗರು ಅಥವಾ ಪ್ರವಾಸಿಗರ ವೇಷದಲ್ಲಿ ಬೇರೆ ಉದ್ದೇಶಗಳಿಂದ ಬರುವವರು ಹೇಗೆ ಬೇಕಾದರೂ ನಡೆದುಕೊಳ್ಳಬಹುದು ಎನ್ನುವಂತಾಗಿದೆ. ಪ್ರವಾಸಿಗರಿಂದ ಬರುವ ಹಣಕ್ಕೆ ಕರ್ನಾಟಕವು ತನ್ನ ಮಾನವನ್ನು ಮಾರಿಕೊಳ್ಳುವುದೆ? ಹಂಪೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಖಾಯಂ ಆಯುಕ್ತರಿಲ್ಲ ಎಂದು ವರದಿಯಾಗಿದೆ. ಹಂಪಿಯ ಸ್ಥಿತಿ ಕನ್ನಡಿಗರಿಗೊಂದು ಅಪಮಾನ. ಗೋಕರ್ಣದಲ್ಲಿಯೂ ಪ್ರವಾಸಿಗರ ಸ್ವಚ್ಛಂದ ರೀತಿಗಳು ನಾಗರಿಕ ಸಮಾಜಕ್ಕೆ ಕಳಂಕ. ರಾಜ್ಯ ಸರ್ಕಾರವು ಇತ್ತ ಗಮನ ಹರಿಸಬೇಕು.

ಶಾಸ್ತ್ರೀಯ ಭಾಷೆ

ಕನ್ನಡ ಶಾಸ್ತ್ರೀಯ ಭಾಷೆಯ ಮನ್ನಣೆಯನ್ನು ನೀಡುವ ವಿಷಯ. ಹಲವರು ವಿದ್ವಾಂಸರು ಈ ಮನ್ನಣೆ ಲಭ್ಯವಾಗದಿದ್ದರೆ ನಷ್ಟವಿಲ್ಲ ಎಂದು ಹೇಳುವುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಇಂದು ಭಾರತ ಸರ್ಕಾರವು ಜಗತ್ತಿಗೆ ಹೇಳುತ್ತಿದೆ, "ಭಾರತದಲ್ಲಿ ಒಂದೂವರೆ ಸಾವಿರ ವರ್ಷಗಳಷ್ಟು ಇತಿಹಾಸವಿರುವ ಭಾಷೆಗಳು ಎರಡೇ ಎರಡು. ತಮಿಳು ಮತ್ತು ಸಂಸ್ಕೃತ" ಇದು ಕನ್ನಡಕ್ಕೆ ಅಪಚಾರವಲ್ಲವೆ? ಇದನ್ನೇಕೆ ಸಹಿಸಿಕೊಳ್ಳಬೇಕು? ಅಲ್ಲದೆ, ತಮಿಳು ಭಾಷೆಯ ಬೆಳವಣಿಗೆಗೆಂದೇ ಆಗಲೇ ಮೈಸೂರಿನಲ್ಲಿ ಕಟ್ಟಡ ಸಿದ್ಧವಾಗಿದೆ. ಇದರ ಬೆಳವಣಿಗೆಗಾಗಿ ಯೋಜನೆ ಸಿದ್ಧವಾಗಿದೆ. ಹಲವು ಕೇಂದ್ರ ವಿಶ್ವವಿದ್ಯಾನಿಲಯಗಳಲ್ಲಿ ತಮಿಳು ಪೀಠಗಳು ಸ್ಥಾಪನೆಯಾಗಲಿವೆ. ಕನ್ನಡಿಗರೂ ಕೇಂದ್ರ ಸರ್ಕಾರಕ್ಕೆ ತೆರಿಗೆಗಳನ್ನು ಕೊಡುವುದಿಲ್ಲವೇ? ಈ ವಿಷಯವನ್ನು ಕುರಿತು ಸ್ನೇಹಿತರೊಬ್ಬರು ಪ್ರತ್ಯೇಕವಾಗಿ ಮಾತನಾಡಲಿರುವುದರಿಂದ ನಾನು ಇದನ್ನು ಬೆಳೆಸುವುದಿಲ್ಲ. ಒಂದು ಮಾತನ್ನು ನಿವೇದಿಸಬಯಸುತ್ತೇನೆ. ತಮಿಳುನಾಡಿನ ಭಾಷಾ ವಿದ್ವಾಂಸರಾದ ಡಾ. ಇರಾವತಿ ಮಹದೇವನ್ ಅವರ 'Early Tamil Epigraphy' ಎನ್ನುವ ಪುಸ್ತಕದಿಂದ ಈ ಮಾತುಗಳನ್ನು ಉದ್ಧರಿಸ ಬಯಸುತ್ತೇನೆ.

"ಲಭ್ಯವಾಗಿರುವ ಅತ್ಯಂತ ಹಳೆಯ ಕನ್ನಡ ಶಾಸನಗಳು ಮತ್ತು ಸಾಹಿತ್ಯಕ್ಕೆ ಮೊದಲಿನಿಂದಲೇ ಸುಮಾರು ಕ್ರಿಪೂ. ಎರಡನೆಯ ಶತಮಾನದಿಂದ ಕ್ರಿಶ. ನಾಲ್ಕನೆಯ ಶತಮಾನದ ಅವಧಿಯಲ್ಲಿ ತಮಿಳು-ಬ್ರಾಹ್ಮಿ ಲಿಪಿಗಳ ಮೇಲೆ ಈವರೆಗೆ ಊಹಿಸದಿದ್ದ

ಹಳಗನ್ನಡದ ಪ್ರಭಾವವನ್ನು ಈ ಅಧ್ಯಯನವು ಬೆಳಕಿಗೆ ತಂದಿದೆ." ಎಂದರೆ, ತಮಿಳುನಾಡಿನ ಈ ಸಂಶೋಧಕರು ಹೇಳುವಂತೆ ಕನ್ನಡ ಲಿಪಿಯು ಕ್ರಿಪೂ. ಎರಡನೆಯ ಶತಮಾನದ ಹೊತ್ತಿಗೆ ಸಾಕಷ್ಟು ಕಾಲ ಅಸ್ತಿತ್ವದಲ್ಲಿದ್ದಿರಬೇಕು.

ಒಂದೂವರೆ ವರ್ಷಕ್ಕಿಂತ ಹಿಂದೆ ಪ್ರಧಾನಿ ಡಾ. ಮನಮೋಹನಸಿಂಗ್ ಅವರು ಬೆಂಗಳೂರಿಗೆ ಬಂದಾಗ ರಾಜಭವನದಲ್ಲಿ ನಡೆದ ಸಭೆಯಲ್ಲಿ ಡಾ. ಪಾಟೀಲ ಪುಟ್ಟಪ್ಪನವರು, ಡಾ. ದೇಜಗೌ, ಡಾ. ಎಂ. ಚಿದಾನಂದಮೂರ್ತಿ ಮತ್ತು ನಾನು ಭಾಷಣ ಮಾಡಿ ಕನ್ನಡಕ್ಕಾದ ಅನ್ಯಾಯವನ್ನು ವಿವರಿಸಿದೆವು. ಆದರೆ ಕೇಂದ್ರ ಸರ್ಕಾರವು ನೇಮಿಸಿದ ತಜ್ಞರ ಸಮಿತಿಯ ಸಭೆಯನ್ನು ಸಹ ಕರೆದಿಲ್ಲ. ಶಾಸ್ತ್ರೀಯ ಭಾಷೆಯ ಪ್ರಕರಣ ಕೇಂದ್ರ ಸರ್ಕಾರವು ಕನ್ನಡಿಗರ ವಿಷಯದಲ್ಲಿ ಉದ್ದೇಶ ಪೂರ್ವಕವಾಗಿ ಮಾಡಿದ ಅವಮಾನ.

ಗಡಿನಾಡಿನ ಸಮಸ್ಯೆ ಮೊದಲಾದವುಗಳನ್ನು ಬೇರೆ ಗೋಷ್ಠಿಗಳಲ್ಲಿ ಪರಿಶೀಲಿಸಲಿರುವುದರಿಂದ ನಾನು ಅವನ್ನು ಪ್ರಸ್ತಾಪಿಸುತ್ತಿಲ್ಲ. ಆದರೆ ಗಡಿಗಳ ವಿಷಯದಲ್ಲಿ ಕರ್ನಾಟಕದ ಪರ ವಾದವನ್ನು ಸಮರ್ಥವಾಗಿ ಮಂಡಿಸಲು ಸಂಬಂಧಪಟ್ಟವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕೆಂದು ಎಚ್ಚರದ ಮಾತನ್ನು ಹೇಳಬಯಸುತ್ತೇನೆ.

ಎರಡನೆಯ ದರ್ಜೆಯ ಪ್ರಜೆಗಳಾಗಬೇಡಿ

ಬಂಧುಗಳೆ, ಈಗ ನಾನು ನನ್ನ ಭಾಷಣದ ಎರಡನೆಯ ಭಾಗಕ್ಕೆ ಬರುತ್ತಿದ್ದೇನೆ. ಇದನ್ನು ಸಂಗ್ರಹವಾಗಿ ಹೀಗೆ ಹೇಳಬಹುದು : "ಕರ್ನಾಟಕದ ನಾಯಕರೆ, ಕನ್ನಡಿಗರು ಭಾರತದಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗುವಂತೆ ಮಾಡಬೇಡಿ. ಕನ್ನಡಿಗರೆ, ಭಾರತದಲ್ಲಿ ಎರಡನೆಯ ದರ್ಜೆಯ ನಾಗರಿಕರಾಗಲು ಒಪ್ಪಬೇಡಿ. ಕನ್ನಡಿಗರಿರುವುದು ಕೇಂದ್ರ ಸರ್ಕಾರಕ್ಕೆ ತೆರಿಗೆಕೊಟ್ಟು, ಸೈನ್ಯದಲ್ಲಿ ಬಲಿದಾನಕ್ಕೆ ಸಿದ್ಧವಾಗಿ ಸೇವೆ ಸಲ್ಲಿಸಿ ಕೇಂದ್ರವು ಅನುಗ್ರಹ ಮಾಡಿದುದನ್ನು ದೈನ್ಯತೆಯಿಂದ ಸ್ವೀಕರಿಸುವುದಕ್ಕಲ್ಲ."

ಆತ್ಮೀಯ ಕನ್ನಡಿಗರೇ, ಇವು ಉದ್ವೇಗದ ಮಾತುಗಳು ಎಂದು ದಯಮಾಡಿ ಭಾವಿಸಬೇಡಿ. ಕೆಲವು ವಾಸ್ತವಾಂಶಗಳತ್ತ ಕಣ್ಣು ಹೊರಳಿಸಿ. ಕೇಂದ್ರ ಸರ್ಕಾರದಲ್ಲಿ ಸಂಪುಟ ಕ್ಯಾಬಿನೆಟ್ ದರ್ಜೆಯ ಸಚಿವರು ೨೭ ಮಂದಿ ಇದ್ದಾರೆ. ೨೭ ಮಂದಿಯಲ್ಲಿ ಒಬ್ಬರೂ ಕನ್ನಡಿಗರಿಲ್ಲ. ಕರ್ನಾಟಕಕ್ಕೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವಾಗ ಕರ್ನಾಟಕದ ಪರ ದನಿ ಎತ್ತಲು ಒಬ್ಬ ಕನ್ನಡಿಗನೂ ಇಲ್ಲ, ಕರ್ನಾಟಕಕ್ಕೆ ಸಂಬಂಧಪಟ್ಟ ಇಂಥ ವಿಷಯವನ್ನು ಕೇಂದ್ರ ಸರ್ಕಾರ ಪರಿಶೀಲಿಸಬೇಕು ಎಂದು ಹೇಳಲು ಒಬ್ಬರೂ ಇಲ್ಲ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆ ನೀಡುವ ವಿಷಯದ ಕಥೆಯನ್ನು ಸ್ಮರಿಸಿಕೊಳ್ಳಿ.

ಬಂಧುಗಳೆ! ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರ ಪಾಲಿಕೆಯು ನೌಕರರನ್ನು ನೇಮಿಸಿಕೊಳ್ಳುವಾಗ ಪತ್ರಿಕೆಗಳಲ್ಲಿ ನೀಡುವ ಜಾಹಿರಾತಿನಲ್ಲಿ ಯಾವ ಭಾಷೆಯ ಜ್ಞಾನ ಕಡ್ಡಾಯ ಎಂದು ವಿಧಿಸುತ್ತದೆ ಎಂದು ನಿರೀಕ್ಷಿಸುತ್ತೀರಿ? ಒಂದು ಜಾಹಿರಾತನ್ನು ತಮ್ಮ ಮುಂದಿಡುತ್ತೇನೆ. 'ನಗರಪಾಲಿಕೆಯ ಆರ್ಟಿಸ್ಟ್ ಪೇಯ್ನ್ಟರ್ ಹುದ್ದೆಗೆ ತಮಿಳು, ತೆಲುಗು ಭಾಷಾಜ್ಞಾನ ಕಡ್ಡಾಯ' ಇದು ಸುಮಾರು ೪೫ ವರ್ಷಗಳ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಒಂದು ಜಾಹಿರಾತು.

ಆತ್ಮೀಯತೆ, ಕರ್ನಾಟಕದ ರಾಜಧಾನಿಯದ ಬೆಂಗಳೂರನ್ನು ಕನ್ನಡವಾಗಿ ಉಳಿಸಿಕೊಳ್ಳುವ ಅಗತ್ಯವು ಕರ್ನಾಟಕ ಸರ್ಕಾರದ ಗಮನಕ್ಕಾಗಲಿ ಬೆಂಗಳೂರು ಮಹಾನಗರ ಪಾಲಿಕೆಯ ಗಮನಕ್ಕಾಗಲಿ ಬೆಂಗಳೂರಿನಾಚೆ ಇರುವ ಕನ್ನಡಿಗರ ಗಮನಕ್ಕಾಗಲಿ ಸಾಕಷ್ಟು ಸ್ಪಷ್ಟವಾಗಿ ಬಂದಂತೆ ತೋರುವುದಿಲ್ಲ. ರಾಜ್ಯದ ರಾಜಧಾನಿಯಲ್ಲಿಯೆ ಕನ್ನಡಿಗರಿಗೆ ಸ್ಥಾನವಿಲ್ಲದಿದ್ದರೆ, ಕನ್ನಡಕ್ಕೆ ಸ್ಥಾನವಿಲ್ಲದಿದ್ದರೆ ಕರ್ನಾಟಕದ ಪ್ರತಿಷ್ಠೆ ಎಲ್ಲಿ ಉಳಿಯಿತು? ಅದರ ಹಿತರಕ್ಷಣೆ ಹೇಗೆ ಸಾಧ್ಯ? ಕರ್ನಾಟಕ ಏಕೀಕರಣವಾದರೂ ೧೯೫೬ರ ನವೆಂಬರ್ ಒಂದರ ಅನಂತರ ನಾಲ್ಕು ವರ್ಷ ಸರ್ಕಾರವು ರಾಜ್ಯೋತ್ಸವಕ್ಕೆ ರಜಾ ಘೋಷಿಸಲಿಲ್ಲ. ರಾಜ್ಯೋತ್ಸವನ್ನು ಆಚರಿಸಲಿಲ್ಲ. ರಾಜ್ಯೋತ್ಸವಕ್ಕೆ ರಜಾ ಘೋಷಿಸಿದ ಸರ್ಕಾರವು ಇಂಗ್ಲೆಂಡ್ ಮತ್ತು ಅಧ್ಯಕ್ಷರ ತಂಡಗಳ ನಡುವೆ ನಡೆದ ಕ್ರಿಕೆಟ್ ಪಂದ್ಯಕ್ಕೆ ರಜ ಘೋಷಿಸಿತು.

ಇಂದು ಬೆಂಗಳೂರು ನಗರದಲ್ಲಿ ಒಂದು ನೂರು ಜನರಲ್ಲಿ ೩೬ ಜನ ಮಾತ್ರ ಕನ್ನಡಿಗರು, ಎಂದರೆ ಬೆಂಗಳೂರಿನಲ್ಲಿ ಕನ್ನಡಿಗರಲ್ಲದವರು ಸುಮಾರು ೪೨ ಲಕ್ಷ ಮಂದಿ ಇದ್ದಾರೆ. ದಿನಕ್ಕೆ ೩೦೦ ಸಂಸಾರಗಳು ಇಲ್ಲಿಗೆ ಬರುತ್ತವೆ ಎಂದರೆ ದಿನಕ್ಕೆ ಸುಮಾರು ಒಂದೂವರೆ ಸಾವಿರ ಮಂದಿ ಬರುತ್ತಾರೆ. ಇವರಲ್ಲಿ ಒಂದು ಸಾವಿರದ ಇನ್ನೂರರಷ್ಟು ಮಂದಿಯಾದರೂ ಕರ್ನಾಟಕದ ಹೊರಗಡೆ ಯಿಂದ ಬಂದವರು. ವೋಟ್ ಬ್ಯಾಂಕ್ ಲೆಕ್ಕಾಚಾರದಿಂದ ನಮ್ಮ ನಾಯಕರೇ ಹೊರಗಿನಿಂದ ತಂದಿರಿಸಿದ ಸಂಸಾರಗಳ ಕೊಳೆಗೇರಿಗಳು ಬೆಂಗಳೂರಿನಲ್ಲಿವೆ. ೨೦೦೭ರ ನವೆಂಬರ್ ೧೨ರಂದು ಹಲವು ಪತ್ರಿಕೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒಂದು ಪ್ರಕಟಣೆ ಬಂದಿದೆ. 'ಯಾವುದೇ ಜಾಹೀರಾತಿನಲ್ಲಿ ಕನ್ನಡ ಪದ ಬಳಕೆಗೆ ಆದ್ಯತೆ ಕೊಡಬೇಕು. ವ್ಯಾಕರಣ ದೋಷ ಇಲ್ಲದಂತೆ ಕಾಳಜಿ ವಹಿಸಬೇಕು. ಈ ಆದೇಶ ಮೀರಿದ ಫಲಕಗಳನ್ನು ಅಕ್ರಮವೆಂದು ಪರಿಗಣಿಸುವುದು,' ಎಂದು ಮಹಾನಗರ ಪಾಲಿಕೆ ತಿಳಿಸಿದೆ. ಬಂಧುಗಳೇ, ಇದು ೨೦೦೭ರ ನವೆಂಬರ್ ೧೨ರಂದು. ೧೯೮೪ರ ಅಕ್ಟೋಬರ್ ೧೦ ರಂದು ಕರ್ನಾಟಕ ಸರ್ಕಾರ, "ಕರ್ನಾಟಕದಲ್ಲಿರುವ ಎಲ್ಲ ವಾಣಿಜ್ಯ ಮತ್ತು ವ್ಯವಹಾರ ಸಂಘಗಳ ನಾಮಫಲಕಗಳು ಕನ್ನಡದಲ್ಲಿಯೇ ಇರತಕ್ಕದ್ದು" ಎಂದು ವಿಧಿಸಿತು. ರಾಜ್ಯ ಸರ್ಕಾರದ ಈ ಆಜ್ಞೆಯು

ಹೊರಬಿದ್ದ ೨೩ ವರ್ಷಗಳ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿರುವ ಪ್ರಕಟಣೆಯು ಕನ್ನಡದ ಬಳಕೆಯಲ್ಲಿ ಸರ್ಕಾರಕ್ಕೆ ಮತ್ತು ನಗರ ಪಾಲಿಕೆಗೆ ಇರುವ ಆಸಕ್ತಿಗೆ ಹಿಡಿದ ಕನ್ನಡಿ.

ಕರ್ನಾಟಕದ ರಾಜಧಾನಿಯನ್ನು ಕನ್ನಡವಾಗಿ ಉಳಿಸಿ

ಬಂಧುಗಳೇ, ಬೆಂಗಳೂರಿನಲ್ಲಿ ನಿಮಗೆ ಕನ್ನಡ ಕಿವಿಗೆ ಬೀಳುವುದು ಅಪರೂಪ. ಕಚೇರಿ, ಬ್ಯಾಂಕ್‌ಗಳಿಗೆ ಹೋದರೆ ಕನ್ನಡ ಹೆಚ್ಚಾಗಿ ಕೇಳಿಸುವುದಿಲ್ಲ. ಬೆಂಗಳೂರು ಮಾಹಿತಿ ತಂತ್ರಜ್ಞಾನ ಉದ್ಯಮದ ರಾಜಧಾನಿಯಾದನಂತರವಂತೂ ಕೆಲಸಗಳು, ನಿವೇಶನಗಳು, ಮನೆಗಳು ಕನ್ನಡಿಗರಲ್ಲದವರ ಪಾಲಿಗೆ ಹೋಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಮನವಿ ಮಾಡಲು ಬಯಸುತ್ತೇನೆ. ಪ್ರಾಧಿಕಾರವನ್ನು ಪ್ರಾರಂಭಿಸಿದಾಗ ಮುಖ್ಯವಾಗಿ ಎರಡು ಉದ್ದೇಶಗಳಿದ್ದವು. ಮೊದಲನೆಯದು, ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಮಾಡುವುದು ಮತ್ತು ಈ ಭಾಷೆಗೆ ಕರ್ನಾಟಕದಲ್ಲಿ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವುದು, ಎರಡನೆಯದು ಕನ್ನಡಿಗರಿಗೆ ಉದ್ಯೋಗಾವಕಾಶಗಳಲ್ಲಿ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವುದು. ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಗೆ ಒಂದಿಷ್ಟು ಗಮನ ದೊರೆತಿದೆ. ಇದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ. ಒಂದು ಪ್ರಶ್ನೆ ನಮ್ಮ ಮುಂದಿದೆ. ಯಾವ ಕಡತದಲ್ಲಿ ಟಿಪ್ಪಣಿ ಕನ್ನಡದಲ್ಲಿ ಇಲ್ಲವೋ ಆ ಕಡತವನ್ನು ನೋಡುವುದಿಲ್ಲ ಎಂದು ಹೇಳಲು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಏಕೆ ಆಗುವುದಿಲ್ಲ? ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಮತ್ತು ಖಾಸಗಿ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ನ್ಯಾಯ ದೊರಕುತ್ತಿಲ್ಲ. ದೊರಕಿಸಿಕೊಡಲು ಪ್ರಾಧಿಕಾರವು ಇನ್ನಷ್ಟು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬೆಂಗಳೂರಿನ ಒಂದು ಕಾರ್ಖಾನೆಯ ಆಡಳಿತ ಮಂಡಳಿಯ ತರಬೇತಿಗಾಗಿ ೨೫೦ ಮಂದಿಯನ್ನು ಆಯ್ಕೆ ಮಾಡಿದ್ದಾರೆ. ಇವರಲ್ಲಿ ೨೦೦ ಮಂದಿ ಕರ್ನಾಟಕದವರಲ್ಲ. ಕರ್ನಾಟಕದವರಾದ ೫೦ ಮಂದಿಯಲ್ಲಿ ಕನ್ನಡಿಗರು ಮೂರು ಮಂದಿ. ಈ ಅನ್ಯಾಯವನ್ನು ಯಾರ ಬಳಿ ಹೇಳಿಕೊಳ್ಳುವುದು? ಪ್ರಾಧಿಕಾರದ ಅಧ್ಯಕ್ಷರಿಗೆ ರಾಜ್ಯದ ಸಂಪುಟ ಸಚಿವರ ಸ್ಥಾನಮಾನವಿದೆ, ಎಂದರೆ ಸಾಕಷ್ಟು ಅಧಿಕಾರವೂ ಇದೆ. ಇದು ಕನ್ನಡಿಗರ ಅನ್ನದ ಪ್ರಶ್ನೆ. ಸರೋಜಿನಿ ಮಹಿಷಿ ವರದಿಯು ಸೂಚಿಸಿದಷ್ಟು ಉದ್ಯೋಗಾವಕಾಶ ವಾದರೂ ಕನಿಷ್ಠ ಪಕ್ಷ ಕನ್ನಡಿಗರಿಗೆ ದೊರೆಯಬೇಕು. ಕನ್ನಡಿಗರು ನಿರ್ವಹಿಸುತ್ತಿದ್ದ ಹಲವು ವೃತ್ತಿಗಳು, ವಸ್ತುಗಳ ವ್ಯಾಪಾರದ ಅವಕಾಶ ಈಗ ಕನ್ನಡಿಗರ ಕೈಯಿಂದ ಜಾರಿಹೋಗುತ್ತಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಇತ್ತ ಗಮನ ಹರಿಸಿ ಕನ್ನಡಿಗರಿಗೆ ಅಗತ್ಯವಾದ ಹಣದ ಬೆಂಬಲಕ್ಕೆ ವ್ಯವಸ್ಥೆ ಮಾಡಬೇಕು. ಕರ್ನಾಟಕದ ಹೊರಗಿನಿಂದ ಬಂದು ಹಣದ ಥೈಲಿಗಳು ಒಂದು ದೊಡ್ಡ ಪ್ರಮಾಣದಲ್ಲಿ ವ್ಯವಹಾರ ಪ್ರಾರಂಭಿಸಿದಾಗ ಸ್ಥಳೀಯರ ಸ್ಥಿತಿ ಏನು? ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಬೆಂಗಳೂರು ತವರಾದರೂ

ಕನ್ನಡಿಗರಿಗೆ ಅಲ್ಲಿ ಉದ್ಯೋಗಿಗಳು ದೊರೆಯುತ್ತಿಲ್ಲ. ಕನ್ನಡಿಗರಿಗೆ ಮೀಸಲಾತಿಯ ಸೌಲಭ್ಯ ಮಾಡಿಕೊಡುವ ಅಗತ್ಯವಿದೆ. ಕನ್ನಡದಲ್ಲಿ, ಕನ್ನಡಿಗರಲ್ಲಿ ಸಾಕಷ್ಟು ಕಳಕಳಿ ಇರುವ ಅಧ್ಯಕ್ಷರು ಮನವೊಲಿಕೆ, ಅಧಿಕಾರ ಎರಡನ್ನೂ ಬಳಸಿ ಕನ್ನಡಿಗರಿಗೆ ಉದ್ಯೋಗದ ವಿಷಯದಲ್ಲಿ ನ್ಯಾಯವನ್ನು ದೊರಕಿಸಿ ಕೊಡಬೇಕು. ಕನ್ನಡಿಗರೆಲ್ಲ ಅವರ ಬೆಂಬಲಕ್ಕಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ನನ್ನದೊಂದು ವಿನಂತಿ. ಕರ್ನಾಟಕದ ರಾಜಧಾನಿಯಲ್ಲಿ ಕನ್ನಡಪರ ವಾತಾವರಣವನ್ನು ಬೆಳೆಸಲು ಕೈಕೊಳ್ಳಬೇಕಾದ ಕ್ರಮಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲಹೆ ನೀಡಲು ಮಿತವಾದ ಸಂಖ್ಯೆಯ ಸದಸ್ಯರ ಸಮಿತಿಯನ್ನು ನೇಮಿಸಬೇಕು. ಇದರಲ್ಲಿ ಕಡೆಯ ಪಕ್ಷ ಒಬ್ಬ ವಾಸ್ತುಶಿಲ್ಪಿ ಅಥವಾ ಆರ್ಕಿಟೆಕ್ಟ್, ಒಬ್ಬ ಇಂಜಿನಿಯರ್, ಒಬ್ಬ ಚಿತ್ರಕಲಾವಿದ, ಒಬ್ಬ ಸಾಹಿತಿ, ಒಬ್ಬ ಪತ್ರಕರ್ತರು ಸದಸ್ಯರಾಗಿರಬೇಕು. ಮಹಾನಗರ ಪಾಲಿಕೆಯೊಡನೆ ಸಮಾಲೋಚನೆ ಮಾಡಿ ಸಮಿತಿಯನ್ನು ನೇಮಕ ಮಾಡಬೇಕು. ಇದು ನಿರ್ದಿಷ್ಟ ಕಾಲದಲ್ಲಿ ಸರ್ಕಾರಕ್ಕೆ ವರದಿಯನ್ನು ಕೊಡಬೇಕು. ಸರ್ಕಾರವು ವಿಳಂಬವಿಲ್ಲದೆ ವರದಿಯನ್ನು ಕಾರ್ಯಗತ ಮಾಡಬೇಕು.

ಕನ್ನಡಿಗರಿಗೆ, ಕರ್ನಾಟಕದ ಸರ್ಕಾರಕ್ಕೆ ನನ್ನ ಪ್ರಾರ್ಥನೆ. ರಾಜ್ಯದ ಜನಸಂಖ್ಯೆಯಲ್ಲಿ ಒಂಬತ್ತರಲ್ಲಿ ಒಂದು ಭಾಗ ವಾಸಿಸುವುದು ಬೆಂಗಳೂರಿನಲ್ಲಿ ಬೆಂಗಳೂರನ್ನು ಕನ್ನಡವಾಗಿ ಉಳಿಸಿ!

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೇ ನೆನಪಿಗೆ ಬರುವುದು ಕನ್ನಡ ಪುಸ್ತಕ ಪ್ರಾಧಿಕಾರ. ಸ್ವತಃ ಸಾಹಿತಿಗಳೂ ಪುಸ್ತಕಪ್ರಿಯರೂ ಆದ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಪುಸ್ತಕ ಪ್ರಾಧಿಕಾರದ ಸ್ಥಾಪನೆಯಾಯಿತು. ಪುಸ್ತಕ ಪ್ರಕಾಶನ ಮತ್ತು ಮಾರಾಟವನ್ನು ಒಂದು ಉದ್ಯಮವನ್ನಾಗಿ ರೂಪಿಸುವ ಮಹತ್ವಾಕಾಂಕ್ಷೆ ಶ್ರೀ ವೀರಪ್ಪ ಮೊಯಿಲಿ ಅವರದು. ಕರ್ನಾಟಕ ಸರ್ಕಾರವು ನನ್ನನ್ನು ಪ್ರಾಧಿಕಾರದ ಮೊದಲನೆಯ ಅಧ್ಯಕ್ಷನನ್ನಾಗಿ ನೇಮಿಸಿತು. ಸರ್ಕಾರವು ಒಂದು ಸಂಸ್ಕೃತಿ ನೀತಿಯನ್ನು, ಅದರ ಭಾಗವಾಗಿ ಪುಸ್ತಕ ನೀತಿಯನ್ನು ಪ್ರಕಟಿಸಬೇಕೆಂದು ಆಗಲೇ ಸೂಚಿಸಿದ್ದೆ. ಇಂಥ ನೀತಿಯನ್ನು ಸ್ಪಷ್ಟವಾಗಿ ರೂಪಿಸುವುದು ಅಗತ್ಯ ಎಂದು ನನಗೆ ಈಗಲೂ ತೋರುತ್ತಿದೆ. ಕನ್ನಡಿಗರ ಪುಸ್ತಕಾಭಿರುಚಿಯ ಸಮೀಕ್ಷೆಯನ್ನು ನಡೆಸಬೇಕೆಂದು ನಾನು ಕೆಲಸ ಪ್ರಾರಂಭಿಸಿದೆ. ಬೇರೆ ಬೇರೆ ವಿಭಾಗಗಳ ಮತ್ತು ವರ್ಗಗಳ ಓದುಗರು ಎಂಥ ಪುಸ್ತಕಗಳನ್ನು ಕೊಳ್ಳುತ್ತಾರೆ. ಅಪೇಕ್ಷಿಸುತ್ತಾರೆ. ಈ ವಿಷಯದಲ್ಲಿ ನಗರ ಪ್ರದೇಶಕ್ಕೂ ಗ್ರಾಮೀಣ ಪ್ರದೇಶಕ್ಕೂ ವ್ಯತ್ಯಾಸಗಳುಂಟೆ, ಯುವಜನರ ಅಭಿರುಚಿ ಎಂಥದು, ಪುರುಷರಿಗೂ ಸ್ತ್ರೀಯರಿಗೂ ಓದುವ ಅಭಿರುಚಿಯಲ್ಲಿ ವ್ಯತ್ಯಾಸಗಳುಂಟೆ ಇಂಥ ಹಲವು ಅಂಶಗಳನ್ನು ಗಮನಿಸಿ ಸಮೀಕ್ಷೆ ನಡೆಸುವುದು ನನ್ನ ಉದ್ದೇಶವಾಗಿತ್ತು. ಈಗ ನಾವು ಪುಸ್ತಕ ಪ್ರಕಟಣೆ

ಮತ್ತು ಮಾರಾಟದ ವಿಷಯವನ್ನು ಕುರಿತು ಯೋಚಿಸುವಾಗ ಓದುಗರ ವಿಷಯ ಖಚಿತ ಮಾಹಿತಿ ಲಭ್ಯವಿಲ್ಲ. ಈ ಸಮೀಕ್ಷೆಗೆ ಸಿದ್ಧತೆಯಾಗುವ ಹೊತ್ತಿಗೆ ಚುನಾವಣೆಗಳಾಗಿ, ಅಧಿಕಾರಕ್ಕೆ ಬಂದ ಸರ್ಕಾರವು ನನ್ನ ರಾಜೀನಾಮೆ ಕೇಳಿತು. ಈಗಲೂ ಇಂಥ ಸಮೀಕ್ಷೆಯ ಅಗತ್ಯವಿದೆ ಎಂದು ನನ್ನ ಭಾವನೆ. ೧೯೭೦ರ ದಶಕದಲ್ಲಿ ಅಮೆರಿಕದಲ್ಲಿ ನಡೆದ ಒಂದು ಸಮೀಕ್ಷೆ ಪ್ರಕಾಶಕರ ಕಣ್ಣು ತೆರೆಸಿ ಪುಸ್ತಕ ಪ್ರಕಟಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೆ ಮಾಡಿತು.

ದುಃಖದ ಸಂಗತಿ ಎಂದರೆ, ಸಣ್ಣ ವಿಷಯಗಳಲ್ಲಿ ದೊಡ್ಡ ವಿಷಯಗಳಲ್ಲಿ ರಾಜ್ಯದ ಅಧಿಕಾರಿಗಳಿಗೆ ರಾಜ್ಯದ ಪರವಾಗಿ, ರಾಜ್ಯದ ಜನರ ಪರವಾಗಿ ಎಚ್ಚರ ವಹಿಸಿ ಕೆಲಸ ಮಾಡಬೇಕು ಎಂಬ ಕಾಳಜಿ ಇದ್ದಂತಿಲ್ಲ. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳ ಒಂದು ನೂರು ಹಳ್ಳಿಗಳನ್ನು ಗೋವಕ್ಕೆ ಸೇರಿಸುವ ಪ್ರಯತ್ನಗಳೂ ನಡೆಯುತ್ತಿವೆ ಎಂದು ವರದಿಯಾಗಿದೆ. ಈ ಪ್ರದೇಶದಲ್ಲಿ ಸಾಕಷ್ಟು ಕಾಲೇಜುಗಳಿಲ್ಲ. ಐವತ್ತು ವರ್ಷಗಳಲ್ಲಿ ಸರ್ಕಾರದ ಒಂದೇ ಒಂದು ಉದ್ದಿಮೆಯೂ ಆ ಪ್ರದೇಶಕ್ಕೆ ಕಾಲಿಟ್ಟಿಲ್ಲ, ಆದುದರಿಂದ ಅಲ್ಲಿಯ ಜನರಲ್ಲಿ ಕೆಲವರಾದರೂ ಗೋವಾದತ್ತ ಮುಖ ಮಾಡುತ್ತಾರೆ ಎಂದು ವರದಿಗಳು ಬರುತ್ತಿವೆ. ಸರ್ಕಾರ ಸ್ಪಷ್ಟನೆ ನೀಡಿಲ್ಲ.

ಕರ್ನಾಟಕ ಮತ್ತು ಕೇಂದ್ರ ಸರ್ಕಾರ

ಭಾಷಣಗಳಲ್ಲಿ ಅಂಕಿ ಅಂಶಗಳನ್ನು ಗ್ರಹಿಸಿ ನೆನಪಿಟ್ಟುಕೊಳ್ಳುವುದು ಕಷ್ಟ ಎಂದು ನನಗೆ ಗೊತ್ತು. ಆದರೂ, ಭಾರತದಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗ ಬೇಡಿ ಎಂದು ನಾನು ಒತ್ತಾದಯ ಮನವಿ ಮಾಡಲು ಕಾರಣಗಳನ್ನು ಸ್ಪಷ್ಟಪಡಿಸಬೇಕು. ೧೯೭೪೮ರಲ್ಲಿ ಭಾರತವು ಸ್ವತಂತ್ರವಾದಾಗಿನಿಂದ ಕೇಂದ್ರ ಸರ್ಕಾರವು ೨೩೫೪ ಅಂಚೆ ಚೀಟಿಗಳನ್ನು ಹೊರತಂದಿದೆ. ಕರ್ನಾಟಕಕ್ಕೆ ಸಂಬಂಧಿಸಿದ್ದು ೩೦ ಎಂದು ಅಧಿಕಾರಿಗಳು ಹೇಳುತ್ತಾರೆ. ಒಂದು ಭತ್ತದ ಹೊಲದ ಚಿತ್ರವಿರುವ ಅಂಚೆ ಚೀಟಿ, ದ್ವಾರಂ ವೆಂಕಟಸ್ವಾಮಿ ನಾಯುಡು ಅವರ ಅಂಚೆ ಚೀಟಿ ಎಲ್ಲವನ್ನು ಈ ೩೦ ರಲ್ಲಿ ಸೇರಿಸುತ್ತಾರೆ. ಭಾರತದ ಎಲ್ಲ ಉಪರಾಷ್ಟ್ರಪತಿಗಳ ಅಂಚೆಚೀಟಿಗಳು ಬಂದಿವೆ. ಬಿ.ಡಿ.ಜತ್ತಿಯವರನ್ನು ಬಿಟ್ಟು, ವೇಮನ, ತಿರುವಳ್ಳುವರ್ ಅವರ ಅಂಚೆ ಚೀಟಿ ಬಂದಿದೆ, ಸರ್ವಜ್ಞನಿಲ್ಲ. ತಮಿಳುನಾಡಿನ ಐವರು ಮುಖ್ಯಮಂತ್ರಿಗಳ ಅಂಚೆ ಚೀಟಿಗಳು ಬಂದಿವೆ, ಕರ್ನಾಟಕದಲ್ಲಿ ಎಸ್. ನಿಲಿಂಗಪ್ಪನವರು ಮಾತ್ರ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಲಾಲ್‌ಬಾಗಿನ ಗಾಜಿನ ಮನೆಯ ಶತಮಾನೋತ್ಸವಕ್ಕೆ ಅಂಚೆ ಚೀಟಿ ತರಲು ಎಲ್ಲ ಸಿದ್ಧತೆ ನಡೆದಿತ್ತು. ಅದು ಬರಲೇ ಇಲ್ಲ. ಒಟ್ಟು ೩೫ ನಾಣ್ಯಗಳು ಬಂದಿವೆ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಸವೇಶ್ವರರದು ಮಾತ್ರ. ನ್ಯಾಷನಲ್ ಬುಕ್ ಟ್ರಸ್ಟ್ ಎಲ್ಲ ರಾಜ್ಯಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಿದೆ,

ಕರ್ನಾಟಕವನ್ನು ಕುರಿತ ಪುಸ್ತಕ ಇಲ್ಲ. ಭಾರತದ ದುರ್ಗಗಳ ಮೇಲೆ ಅಂಚೆ ಚೀಟಿಗಳ ಮಾಲೆ ಬಂತು – ಕರ್ನಾಟಕದ ಒಂದು ದುರ್ಗವೂ ಈ ಮಾಲೆಯಲ್ಲಿಲ್ಲ. ಹನ್ನೆರಡು ವಿಶ್ವವಿದ್ಯಾಲಯಗಳಿಗೆ ಅಂಚೆಚೀಟಿಯ ಗೌರವ ಸಂದಿದೆ. ಭಾರತದಲ್ಲಿ ದೇಶೀಯ ಸಂಸ್ಥಾನದಲ್ಲಿ ಮೊಟ್ಟ ಮೊದಲು ಸ್ಥಾಪಿತವಾದ ಮೈಸೂರು ವಿಶ್ವ ವಿದ್ಯಾಲಯದ ನೆನಪು ಕೇಂದ್ರಕ್ಕೆ ಬರಲಿಲ್ಲ. ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರಕ್ಕ ಸೇರಿದ ಜನರಲ್ ಪೋಸ್ಟ್ ಆಫೀಸ್ ಕಟ್ಟಡ ಅಂಚೆಚೀಟಿಯಲ್ಲಿ ಹೊಳೆಯುತ್ತದೆ, ಕರ್ನಾಟಕ ಸರ್ಕಾರದ ವಿಧಾನಸೌಧಕ್ಕೆ ಜಾಗವಿಲ್ಲ.

ಸ್ನೇಹಿತರೆ, ನಾನು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿಯನ್ನು ಮಾಡುತ್ತಿದ್ದೇನೆ ಎನ್ನಿಸಬಹದು. ಆದರೆ ವಾಸ್ತವಾಂಶಗಳು ಹೀಗಿರುವಾಗ ನಾನು ಕನ್ನಡಿಗರಿಗೆ, ಕರ್ನಾಟಕ ಸರ್ಕಾರಕ್ಕೆ ನೆನಪು ಕೊಡದೆ ಏನು ಮಾಡಲಿ? ಹೈದರಾಬಾದ್ ಕರ್ನಾಟಕದ ರೈಲ್ವೆ ಮಾರ್ಗಗಳನ್ನು ನೈಋತ್ಯ ವಲಯದ ವ್ಯಾಪ್ತಿಯಿಂದ ಹೊರಗಿಟ್ಟಿರುವುದೇಕೆ? ಕನ್ನಡಿಗರೊಬ್ಬರು ಪತ್ರಿಕೆಯಲ್ಲಿ, "ರಾಯಚೂರು, ಗುಲ್ಬರ್ಗ ಜಿಲ್ಲೆಗಳ ಯೋಜನೆಗಳು ಸೌಲಭ್ಯಗಳಿಗಾಗಿ ಮುಂಬಯಿ ಹಾಗೂ ಸಿಕಂದರಾಬಾದ್ ವಲಯ ಕಚೇರಿಗಳತ್ತ ನೋಡಬೇಕಾಗುತ್ತದೆ" ಎಂದು ದುಃಖ ತೋಡಿಕೊಂಡಿದ್ದಾರೆ. ಬೆಂಗಳೂರಿನಿಂದ – ಮಂಗಳೂರು ರೈಲು ಎಂದು ಹೇಳಲಾಗುವ ರೈಲಿನ ಚರಿತ್ರೆಯನ್ನು ಉಡುಪಿಯಲ್ಲಿ ನಾನು ವಿವರಿಸಬೇಕಾಗಿಲ್ಲ, ರಾಜ್ಯದ ರಾಜಧಾನಿಯಿಂದ ಕರಾವಳಿ ಪ್ರದೇಶಕ್ಕೆ ರೈಲು ಸಂಚಾರವಿಲ್ಲದ ಭಾರತದ ಒಂದೇ ಒಂದು ರಾಜ್ಯ ಕರ್ನಾಟಕ ಎಂದು ಓದಿದ್ದೇನೆ. ರೈಲು ಬಂಡಿಗಳ ಮೇಲೆ ತಮಿಳು ಅಕ್ಷರಗಳನ್ನು ಬರೆಯಬಹುದು, ಕನ್ನಡ ಅಕ್ಷರಗಳನ್ನು ಬರೆದರೆ ಮೈಲಿಗೆ ಎಂದು ಕೇಂದ್ರ ರೈಲು ಸಚಿವರು ಭಾವಿಸುವಂತೆ ಕಾಣುತ್ತದೆ. ನನ್ನ ರಾಜ್ಯದಲ್ಲಿರುವ ಊರಿನ ಹೆಸರನ್ನು ಬೆಳಗಾಂನಿಂದ ಬೆಳಗಾವಿ ಎಂದು ತಿದ್ದಲು ನಮಗೆ ಮಹಾರಾಷ್ಟ್ರದ ಅನುಮತಿ ಬೇಕು, ಕರ್ನಾಟಕದ ವಿಷಯದಲ್ಲಿ ಮಹಾರಾಷ್ಟ್ರಕ್ಕೆ ವೀಟೋ ಅಧಿಕಾರ. ಕನ್ನಡಿಗರು ಆತ್ಮಗೌರವನ್ನು ಯಾವ ಕಾರಣಕ್ಕೂ ಬಲಿ ಕೊಡಬಾರದು. ಕನ್ನಡಿಗರ ಆತ್ಮಗೌರವಕ್ಕೆ ಗುರಾಣಿಯಾಗುವ ಪಕ್ಷವೇ ಕನ್ನಡಿಗರ ಪಕ್ಷ. ನಿಜವಾದ ಭಾರತದರ್ಶನವು ಭಾರತದ ಎಲ್ಲ ಭಾಗಗಳನ್ನು ಗೌರವಿಸಿ ಎಲ್ಲ ಭಾಗಗಳಿಗೂ ನ್ಯಾಯ ದೊರಕಿಸಿ ಕೊಡುವುದರಲ್ಲಿದೆ ಎಂಬುದನ್ನು ಗುರುತಿಸಬೇಕು. ಎಲ್ಲ ಕನ್ನಡಿಗರಿಗಿರುವ ಹೈಕಮ್ಯಾಂಡ್ ಒಂದೇ, ಭಾರತದ ಹಿತಕ್ಕೆ ಧಕ್ಕೆ ತಾರದ ಕನ್ನಡ ನಾಡಿನ ಹಿತ.

ಬಂಧುಗಳೇ, ಕನ್ನಡ ನಾಡಿನಲ್ಲಿ ಅಂಕೋಲ ಸತ್ಯಾಗ್ರಹ, ವಿದುರಾಶ್ವತ್ಥ ಹೋರಾಟ, ಕಾಗೋಡು ಸತ್ಯಾಗ್ರಹ, ಗೋಕಾಕ ವರದಿ ಚಳವಳಿ ಎಲ್ಲ ನಡೆದಿವೆ. ಉಗ್ರ ಹೋರಾಟವನ್ನು ಕನ್ನಡಿಗರು ಪ್ರಾರಂಭಿಸಲೇಬೇಕಾದದ್ದು ಅನಿವಾರ್ಯವಾಗು ತ್ತಿದೆಯೇ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಇಂಥ ಉಗ್ರ ಹೋರಾಟಕ್ಕೆ ಕರೆ ಕೊಡಲು ನನಗೆ ಮನಸ್ಸಿಲ್ಲ. ಭಾರತದ ಅಖಂಡತೆ, ಸಮಗ್ರತೆ, ವಿವಿಧ

ಸಮುದಾಯಗಳಲ್ಲಿ ಸೌಹಾರ್ದ ಇವು ಅತ್ಯಂತ ಮುಖ್ಯವಾದವು. ಕನ್ನಡಿಗರ ಮನಸ್ಸು ತೀರ ಕಹಿಯಾಗದಂತೆ ನಡೆದುಕೊಳ್ಳುವ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದು, ರಾಜಕೀಯ ಪಕ್ಷಗಳ ಸ್ಥಳೀಯ ನಾಯಕರದು.

ಪ್ರತ್ಯೇಕತೆಯ ಕೂಗು

ಸುವರ್ಣ ಕರ್ನಾಟಕದ ಹಬ್ಬವನ್ನು ಆಚರಿಸಿದ ನಂತರವೂ ಒಂದು ಕೊರಗು ಉಳಿಯುತ್ತದೆ. ಇನ್ನೂ ಪ್ರತ್ಯೇಕತೆಯ ದನಿ ಕೇಳುತ್ತಲೇ ಇದೆ. ಹಲವು ದಶಕಗಳ ಕಾಲ ಹೋರಾಟ ನಡೆಸಿ ಕರ್ನಾಟಕ ಏಕೀಕರಣವನ್ನು ಸಾಧಿಸಿದ್ದು ಈ ಭಾಗ್ಯಕ್ಕೇ? ಪ್ರತ್ಯೇಕತೆಯನ್ನು ಬೇಡುವವರು ಯೋಚಿಸಬೇಕು. ಸಣ್ಣ ರಾಜ್ಯಗಳ ದಿನಗಳು ಆಗಿಹೋದವು. ವಿಜ್ಞಾನ, ತಂತ್ರಜ್ಞಾನಗಳು ನೈಸರ್ಗಿಕ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಸಾರ್ಥಕವಾಗಿ ಬಳಸುವುದನ್ನು ಸಾಧ್ಯಮಾಡುತ್ತಿವೆ. ನೈಸರ್ಗಿಕ ಸಂಪನ್ಮೂಲಗಳನ್ನು ಬೇರೆ ಬೇರೆ ಆಡಳಿತಗಳಿಗೆ ಒಳಪಡಿಸುವುದರಿಂದ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ. ಇಂದು ಕನ್ನಡ ನಾಡಿನಲ್ಲಿ ಒಂಬತ್ತು ಬಗೆಯ ಮಣ್ಣುಗಳಿದ್ದು ಸಸ್ಯ ಶ್ರೀಮಂತಿಕೆಗೆ ಅದು ಕಾರಣವಾಗಿದೆ. ಏಳು ದೊಡ್ಡ ನದಿಗಳು, ಅಲ್ಲದೆ ಕನ್ನಡನಾಡಿನ ಅರಣ್ಯ ಸಂಪತ್ತು ಎಷ್ಟು ಸರ್ಕಾರಗಳ ಕೈಗಳಲ್ಲಿತ್ತು ಯೋಚಿಸಿ. ಕೃಷಿ, ಕೈಗಾರಿಕೆ, ವಿದ್ಯುಚ್ಛಕ್ತಿ ಎಲ್ಲದರ ಅಭಿವೃದ್ಧಿಗೆ ಸಂಪನ್ಮೂಲಗಳು ಒಂದು ಆಡಳಿತಕ್ಕೆ ಸೇರಿರುವುದು ಸಹಾಯಕ. ಕರ್ನಾಟಕದ ಎಲ್ಲ ಪ್ರದೇಶಗಳ ಕನ್ನಡಿಗರೂ ಪ್ರತ್ಯೇಕತೆಯ ಯೋಚನೆಯನ್ನು ಬಿಟ್ಟು, ಅಖಂಡ ಕರ್ನಾಟಕದಲ್ಲಿ ಭಾಗ್ಯವನ್ನು ಬೆಳೆಸಿ ತಮ್ಮ ಭಾಗ್ಯವನ್ನೂ ಬೆಳೆಸಿಕೊಳ್ಳುವ ಯೋಚನೆ ಮಾಡಬೇಕು.

ಈ ಪ್ರತ್ಯೇಕತೆಯ ಕೂಗಿಗೆ ಮುಖ್ಯ ಕಾರಣ, ಪ್ರದೇಶಗಳಲ್ಲಿ ಅಸಮತೋಲನ, ಕೆಲವು ಪ್ರದೇಶಗಳಿಗೆ ಸಾಕಷ್ಟು ಗಮನ ಲಭ್ಯವಾಗಿಲ್ಲ ಎಂಬ ಕಹಿಭಾವನೆ, ಆಯಾ ಪ್ರದೇಶಗಳವರೇ ಮುಖ್ಯಮಂತ್ರಿಗಳು ಅಥವಾ ಪ್ರಮುಖ ಖಾತೆಗಳ ಮಂತ್ರಿಗಳಾಗಿದ್ದಾಗ ತಮ್ಮ ಪ್ರದೇಶಕ್ಕೆ ಎಷ್ಟು ನ್ಯಾಯ ಒದಗಿಸಿದರು? ಮುಖ್ಯಮಂತ್ರಿಗಳು ಅಥವಾ ಪ್ರಮುಖ ಮಂತ್ರಿಗಳು ಆಗಿದ್ದವರ ಕ್ಷೇತ್ರಗಳಲ್ಲಿಯೇ ಎಷ್ಟು ಪ್ರಗತಿಯಾಗಿದೆ? ಕಹಿಯನ್ನು ಒತ್ತಟ್ಟಿಗಿಟ್ಟು ಸಮಗ್ರ ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ನಾಡಿನ ಪ್ರಗತಿಯಾಗುವ ವ್ಯವಸ್ಥೆಯ ಯೋಚನೆ ಮಾಡಬೇಕು. ಡಾ. ಡಿ.ಎಂ. ನಂಜುಂಡಪ್ಪನವರ ವರದಿಯನ್ನು ಕಾರ್ಯಗತ ಮಾಡಲು ಮನಸ್ಸು ಮಾಡಬೇಕು, ಅಗತ್ಯವಾದ ಪ್ರದೇಶಗಳಿಗೆ ವಿಶೇಷ ಸೌಲಭ್ಯ ಒದಗಿಸುವ ಯೋಚನೆ ಮಾಡಬೇಕು. ಬಹಳ ಮುಖ್ಯವಾದ ಸಂಗತಿ, ಎಲ್ಲಕ್ಕೂ ರಾಜಕೀಯವನ್ನು ಪಕ್ಷ ಹಿತವನ್ನು ಬೆರೆಸುವ ಮನೋಧರ್ಮವನ್ನು ಬಿಟ್ಟು, ಬದುಕಿನಲ್ಲಿ ಪಕ್ಷಾತೀತವಾದ, ರಾಜಕೀಯವನ್ನು ಮೀರಿದ ಅಮೂಲ್ಯ ಸಂಗತಿಗಳಿವೆ ಎನ್ನುವುದನ್ನು ರಕ್ತಗತ ಮಾಡಿಕೊಳ್ಳುವುದು. ನೆನಪಿಡೋಣ; ಕರ್ನಾಟಕ ಏಕೀಕರಣ ಸುಲಭವಾಗಿ ಕೈಗೂಡಲಿಲ್ಲ. ಹಲವು ದಶಕಗಳ ಹೋರಾಟದ ನಂತರವೂ

೧೯೫೩ರ ಜನವರಿಯಲ್ಲಿ ಹೈದರಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಆಂಧ್ರರಾಜ್ಯವನ್ನು ಬಿಟ್ಟು ಬೇರಾವ ಭಾಷಾಪ್ರಾಂತ್ಯವನ್ನೂ ರಚಿಸುವುದಿಲ್ಲ ಎಂದು ನಿರ್ಣಯಿಸಿತು. ಕೆಂಗಲ್ ಹನುಮಂತಯ್ಯನವರು ಇದನ್ನು ವಿರೋಧಿಸುವ ಕೆಚ್ಚನ್ನು ಪ್ರದರ್ಶಿಸಿದರು. ಧಾರವಾಡ ಜಿಲ್ಲೆಯಲ್ಲಿ ಅದರಗುಂಚಿ ಶಂಕರಗೌಡರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಉಗ್ರ ಚಳವಳಿ ಪ್ರಾರಂಭವಾಯಿತು.

ರೈತರು, ಮಹಿಳೆಯರು

ಕರ್ನಾಟಕದಲ್ಲಿ ರೈತರ ಮತ್ತು ಮಹಿಳೆಯರ ಅಗತ್ಯಗಳಿಗೆ ಸಾಕಷ್ಟು ಗಮನ ದೊರೆಯುತ್ತಿಲ್ಲ. ಈ ವಿಷಯದಲ್ಲಿ ನಾನು ಪರಿಣತನಲ್ಲ. ಆದರೂ ಸಾಮಾನ್ಯ ಕನ್ನಡಿಗನಾಗಿ ನನ್ನ ಅನಿಸಿಕೆಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ೧೯೬೦ರ ದಶಕದಲ್ಲಿ ಅಂತಾರಾಷ್ಟ್ರೀಯ ನಿಪುಣರು ಭಾರತವು ಆಹಾರದ ಕೊರತೆಯಿಂದ ಕಷ್ಟಪಡಬೇಕಾಗುತ್ತದೆ, ಆಹಾರಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗುತ್ತದೆ ಎಂದು ಭವಿಷ್ಯ ನುಡಿದರು. ಅದನ್ನು ಸುಳ್ಳಾಗಿಸಿದವರು ನಮ್ಮ ಧೀರ ಶ್ರಮಜೀವಿ ರೈತರು. ಇಂತಹ ರೈತವರ್ಗ ನಾಡಿನ ಬೆನ್ನೆಲುಬು. ಇವರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ತಲುಪಿದ್ದಾರೆ ಎನ್ನುವುದು ಯಾವ ಸಮಾಜಕ್ಕಾದರೂ ಅಪಮಾನವೇ. ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಾಗಿನಿಂದ ಕೈಗಾರಿಕಾ ವಲಯಕ್ಕೆ ಸಿಕ್ಕ ಪ್ರಾಧಾನ್ಯ ಕೃಷಿ ಕ್ಷೇತ್ರಕ್ಕೆ ಲಭ್ಯವಾಗಲಿಲ್ಲ. ರೈತರ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು ಕೃತಜ್ಞತಾಭಾವವಿರುವ ಸಮಾಜದ ಆದ್ಯ ಕರ್ತವ್ಯ. ವಿದ್ಯಾಭ್ಯಾಸಕ್ಕೆ ಮತ್ತು ಉದ್ಯೋಗಕ್ಕೆ ಧೈರ್ಯಮಾಡಿ ಬರುತ್ತಿರುವ ಹೆಣ್ಣುಮಕ್ಕಳ ರಕ್ಷಣೆ ಸಮಾಜದ ಕರ್ತವ್ಯ. ಶಾಲಾ ಕಾಲೇಜುಗಳಿಗೆ ಅಥವಾ ತಮ್ಮ ಉದ್ಯೋಗದ ಕೇಂದ್ರಗಳಿಗೆ ಹೋಗುವುದಕ್ಕೆ ಅಧೈರ್ಯ ಪಡುವ ಸ್ಥಿತಿಯಲ್ಲಿ ಮಹಿಳೆಯರಿದ್ದಾರೆ. ಕೆಲಸ ಮಾಡುವ ಸ್ಥಳಗಳಲ್ಲಿ ಹೇಳಿಕೊಳ್ಳಲಾರದ ಹಿಂಸೆಯನ್ನು ಅನುಭವಿಸುತ್ತಾರೆ. ನಮ್ಮ ನಿತ್ಯಜೀವನದ ವಾತಾವರಣವೇ ಬದಲಾಗಬೇಕಾಗಿದೆ. ಇನ್ನೂ ನಾಗರಿಕವಾಗಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹಳೆಯ ನಂಬಿಕೆಗಳು, ಪದ್ಧತಿಗಳು ಇನ್ನೂ ಪ್ರಬಲವಾಗಿದ್ದು ಹೆಣ್ಣುಮಕ್ಕಳ ಸ್ಥಿತಿ ಸಮಾಧಾನಕರವಾಗಿಲ್ಲ. ಮಹಿಳೆಯರನ್ನು ನಗ್ನಗೊಳಿಸುವ ಪೈಶಾಚಿಕ ಕೃತ್ಯಗಳು ನಡೆಯುತ್ತಿರುವುದರಿಂದ ಇಡೀ ಸಮಾಜವು ತಲೆತಗ್ಗಿಸಬೇಕಾಗಿದೆ. ಕೃಷಿ ಯಂತ್ರಗಳನ್ನು, ಸಲಕರಣೆಗಳನ್ನು ಉತ್ಪಾದಿಸುವಾಗ ಅವು ಮಹಿಳೆಯರ ಬಳಕೆಗೆ ಸುಲಭವಾಗಿವೆಯೇ ಎಂಬ ಅಂಶಕ್ಕೆ ಗಮನಕೊಡಬೇಕು. ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳನ್ನು ಉತ್ತಮಗೊಳಿಸುವುದು ಆದ್ಯತೆಯನ್ನು ಪಡೆಯಬೇಕು.

ಯಾವುದೇ ಸಮುದಾಯವು ಅಭಿವೃದ್ಧಿಯನ್ನು ಕಾಣಬೇಕಾದರೆ ಮೂರು ಭಾಗ್ಯಗಳಿರಬೇಕು. ಒಂದು, ನೈಸರ್ಗಿಕ ಸಂಪನ್ಮೂಲ, ಎರಡು, ಮಾನವ ಸಂಪನ್ಮೂಲ,

ಮೂರು,ಅಭಿವೃದ್ಧಿ ಸಾಧಿಸಬೇಕೆಂಬ ಸಾಮುದಾಯಿಕ ಸಂಕಲ್ಪ. ಸಾಮುದಾಯಿಕ ಸಂಕಲ್ಪವು ರಾಜಕೀಯ ಸಂಕಲ್ಪವಾಗಿ ಕ್ರಿಯಾತ್ಮಕವಾಗಬೇಕು. ಕನ್ನಡ ನಾಡಿಗೆ ನೈಸರ್ಗಿಕ ಸಂಪನ್ಮೂಲದ ಕೊರತೆ ಇಲ್ಲ, ಮಾನವ ಸಂಪನ್ಮೂಲಕ್ಕೆ ಬರವಿಲ್ಲ. ಇಲ್ಲದಿರುವುದು ರಾಜಕೀಯ ಸಂಕಲ್ಪ.

ಆತ್ಮೀಯ ಕನ್ನಡಿಗರೇ, ಈವರೆಗೆ ಬಹುಮಟ್ಟಿಗೆ ನಾನು ಒಬ್ಬ ಸಾಹಿತಿಯಾಗಿ, ವ್ಯಕ್ತಿಯಾಗಿ ಮಾತನಾಡಿದ್ದೇನೆ. ಕಡೆಯಲ್ಲಿ ಎಲ್ಲ ಕನ್ನಡಿಗರ ಅನಿಸಿಕೆಗೆ ದನಿಯಾಗಿ ಕೆಲವು ಮಾತುಗಳನ್ನು ನಿವೇದಿಸುತ್ತೇನೆ ಎಂದರೆ ದಯಮಾಡಿ ಇದನ್ನು ಉದ್ಧಟತನ ಎಂದು ಭಾವಿಸಬಾರದು ಎಂದು ವಿನಂತಿ ಮಾಡುತ್ತೇನೆ.

ಕನ್ನಡ ಸಂಸ್ಕೃತಿ ಬದುಕಿನಲ್ಲಿ ಬೆಳಗಲಿ

ನಮ್ಮೆಲ್ಲರಿಗೆ, ಐದೂವರೆ ಕೋಟಿ ಕನ್ನಡಿಗರಿಗೆ, ಕನ್ನಡ ಸಂಸ್ಕೃತಿ ಎಂದರೆ ಪ್ರೀತಿ, ಹೆಮ್ಮೆ. ಈ ಸಂಸ್ಕೃತಿ ಒಂದು ಕಾಲದಲ್ಲಿ ಜೀವಂತ ಶಕ್ತಿಯಾಗಿದ್ದು. ಈಗ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿರುವ ವಸ್ತುವಲ್ಲ. ಅದು ನಮ್ಮ ಉಡುಗೆಯಂತೆ ಬೇಕಾದಾಗ ತೊಟ್ಟು ಬೇಡಾದಾಗ ತೆಗೆದಿಡುವ ವಸ್ತುವಲ್ಲ. ಇಂದು ನಮ್ಮ ಸುತ್ತಮುತ್ತಲಿನವರು ಕರ್ನಾಟಕದ ಸಂಸ್ಕೃತಿಯನ್ನು ಗ್ರಹಿಸುವಾಗ ಪಂಪ, ವಚನ ಸಾಹಿತ್ಯ, ದಾಸ ಸಾಹಿತ್ಯ, ನಾವು ಗಳಿಸಿದ ಜ್ಞಾನಪೀಠ ಪುರಸ್ಕಾರಗಳು. ಶೇಷಣ್ಣನವರ ವೀಣೆ, ಗಂಗೂಬಾಯಿ ಹಾನಗಲ್ ಅವರ ಸಂಗೀತ, ಮೈಸೂರು ದಸರಾ ಮೊದಲಾದವುಗಳನ್ನೇ ಆಧಾರ ಮಾಡಿಕೊಳ್ಳುವುದಿಲ್ಲ. ಇವುಗಳಲ್ಲಿ ಎಷ್ಟೋ ಅವರ ಗಮನಕ್ಕೆ ಬಂದೇ ಇಲ್ಲದಿರಬಹುದು. ನಮ್ಮ ಸಾರ್ವಜನಿಕ ಜೀವನದ ರೀತಿ, ನಮ್ಮ ನಡತೆ, ನಮ್ಮ ಸಾಮಾಜಿಕ ವಾಗ್ವಾದಗಳನ್ನು, ರಾಜಕೀಯ ಭಿನ್ನಾಭಿಪ್ರಾಯಗಳನ್ನು ನಾವು ನಿರ್ವಹಿಸುವ ರೀತಿ ಇವು ಅವರ ಕಣ್ಣಿಗೆ ರಾಚುತ್ತವೆ. ಕನ್ನಡ ಸಂಸ್ಕೃತಿ ಹೊರಗಿನವರಿಗೆ ಅರಿವಾಗುವುದು ಅವರ ಕಣ್ಣ ಮುಂದಿರುವ ಆಗುಹೋಗುಗಳಿಂದ, ನಮ್ಮ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನಗಳ ಘನತೆಯಿಂದ. ಅತಿ ತೀಕ್ಷ್ಣವಾದ, ಧಗಧಗ ಉರಿಯುವ ವಾದ ವಿವಾದಗಳಲ್ಲಿಯೂ ಘನತೆಯನ್ನು ಕಾಪಾಡಿಕೊಳ್ಳುವುದು ಸಾಧ್ಯ. ನಮ್ಮ ಸಾರ್ವಜನಿಕ ಜೀವನದ ಎಲ್ಲ ವಲಯಗಳ ಮುಖಂಡರೂ ಘನತೆಯನ್ನು ಪ್ರದರ್ಶಿಸಬೇಕೆಂದು ಬಿನ್ನವಿಸುತ್ತೇನೆ. ಕನ್ನಡ ನಾಡಿಗೆ ಮತ್ತು ಸಂಸ್ಕೃತಿಗೆ ಗೌರವ ತರುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಬಿನ್ನವಿಸುತ್ತೇನೆ. ಈ ಮಾತನ್ನು ಹೇಳುವಾಗ ಎಲ್ಲ ಕನ್ನಡಿಗರ ದನಿಯಾಗಿದ್ದೇನೆ ಎಂದು ಭಾವಿಸುತ್ತೇನೆ.

ನೀವು ಗೌರವಿಸುವ ಆದರ್ಶಕ್ಕೆ ಕ್ರಿಯಾಶೀಲವಾಗಿ ಬೆಂಬಲ ನೀಡಿ

ನಾಡಿನಲ್ಲಿ ಹಿಂಸೆ ಹೆಚ್ಚುತಿರುವುದು ಎಲ್ಲರಿಗೂ ಆತಂಕವನ್ನು ಉಂಟು ಮಾಡುವ ಸಂಗತಿ. ಇದಕ್ಕೆ ಹಲವಾರು ಕಾರಣಗಳುಂಟು. ಈ ದೇಶ ಮತ್ತು ಆಳಿದವರ ಹೊಣೆಗಾರಿಕೆ ಏನೂ ಸ್ವಲ್ಪವಲ್ಲ. ತಮ್ಮ ಕಣ್ಣೆದುರಿಗೇ ಕೋಟಿಕೋಟಿ

ರೂಪಾಯಿಗಳನ್ನು ಅಧಿಕಾರಕ್ಕೆ ಅಥವಾ ತಮ್ಮ ಪ್ರತಿಷ್ಠೆಗಾಗಿ ಅಥವಾ ಭೋಗಕ್ಕಾಗಿ ಚೆಲ್ಲುತ್ತ ಎಲ್ಲಾ ಅಪರಾಧಗಳನ್ನು ಮಾಡಿ ಕೆಲವರು ಮೆರೆಯುತ್ತಿರುವಾಗ, ಎರಡು ಹೊತ್ತು ಊಟ, ಮೈ ತುಂಬ ಬಟ್ಟೆ, ಶೌಚಾಲಯ ಇರುವ ಒಂದು ಮನೆ, ಪ್ರಾರಂಭದ ಶಿಕ್ಷಣ, ಆರೋಗ್ಯ ಇವುಗಳೂ ಇಲ್ಲದಿರುವವರು ಹಿಂಸಾಚಾರಕ್ಕೆ ಎಳೆಸುವುದರಲ್ಲಿ ಆಶ್ಚರ್ಯವೇನು? ಅತ್ಯಂತ ಘೋರ ಅಪರಾಧಗಳ ವಿಚಾರಣೆಯೂ ದಶಕಗಳಗಟ್ಟಲೆ ನಡೆದಾಗ ಯುವ ಜನಾಂಗಕ್ಕೆ ನ್ಯಾಯ ವ್ಯವಸ್ಥೆಯಲ್ಲಿ ನ್ಯಾಯ ತೀರ್ಮಾನವನ್ನು ನಿರಾಕರಿಸಿದಂತೆ ಮಾತ್ರವಲ್ಲ, ನ್ಯಾಯ ತೀರ್ಮಾನಕ್ಕೆ ಅಪಮಾನ ಮಾಡಿ ಕೊಲೆ ಮಾಡಿದಂತೆ. ಇದೇ ಮಾತು ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರಿಗಳಿಗೂ ಅನ್ವಯಿಸುತ್ತದೆ. ನಡತೆಯ ಔಚಿತ್ಯ, ಕನಿಷ್ಠ ಪ್ರಮಾಣದ ನೈತಿಕತೆ, ನಾಚಿಕೆ, ಮಾನವೀಯತೆಗಳನ್ನು ಸಾರ್ವಜನಿಕವಾಗಿ ಗಾಳಿಗೆ ತೂರುವ ನಾಯಕರು, ಅಧಿಕಾರಿಗಳು ಇಂಥ ಸಿನಿಕತನದ ವಿಷವನ್ನು ಸಮಾಜದ ಬದುಕಿನ ಗಾಳಿಯಲ್ಲಿ ಬೆರೆಸುತ್ತಾರೆ. ಮಾರುತವನ್ನು ಬಿತ್ತಿ ಚಂಡಮಾರುತವನ್ನು ಬೆಳೆಯುವ ಈ ಸಮಾಜವು ಹಿಂಸೆಗೆ ಹೊಣೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಸ್ನೇಹಿತರೇ, ನಾವೆಲ್ಲ ಭಷ್ಟಾಚಾರದ ವಿರುದ್ಧವೇ ಇದ್ದೇವೆ, ಪ್ರಾಮಾಣಿಕತೆಯ ಪರವಾಗಿಯೇ ಇದ್ದೇವೆ. ಕನ್ನಡ ನಾಡಿನಲ್ಲಿ ಬಹು ಮಂದಿ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಘನತೆಗಳ ಪರವಾಗಿದ್ದಾರೆ, ನೇರ ನಡೆ ನುಡಿಗಳ ಪರವಾಗಿದ್ದಾರೆ. ಆದರೂ ಒಂದು ಕನಿಷ್ಠ ಪ್ರಮಾಣದ ಪ್ರಾಮಾಣಿಕತೆಯ ಭರವಸೆ ಇಲ್ಲದಿರುವುದೇಕೆ? ಪ್ರಾಯಶಃ, ಕಾರಣ ಇದು. ಧರ್ಮ, ನ್ಯಾಯ, ಪ್ರಾಮಾಣಿಕತೆ ಗೆಲ್ಲಬೇಕೆಂದು ಲಕ್ಷ ಲಕ್ಷ ಸಾತ್ವಿಕ ಜನ ಹಂಬಲಿಸುತ್ತಾರೆ. ಪ್ರಾಮಾಣಿಕವಾಗಿ ಹಂಬಲಿಸುತ್ತಾರೆ. ಆದರೆ ನ್ಯಾಯ, ಪ್ರಾಮಾಣಿಕತೆ ತಾವೇ ಗೆಲ್ಲಲಾರವು. ದ್ರೌಪದಿಯ ವಸ್ತ್ರಾಪಹರಣವಾಗುತ್ತಿದ್ದಾಗ ಕೈಕೈ ಹಿಸುಕಿಕೊಳ್ಳುತ್ತಿದ್ದ ಧರ್ಮಪರಾಯಣರಿಂದ ಏನೂ ಆಗಲಿಲ್ಲ. ಅವನ್ನು ಗೆಲ್ಲಿಸಬೇಕು, ಒಂದಿಷ್ಟು ಕೊತ್ತಂಬರಿ ಬೇಕೆಂದರೂ ಅದರ ಬೆಲೆಯನ್ನು ಒಂದು ರೂಪಾಯಿಯನ್ನೋ ಎರಡು ರೂಪಾಯಿಯನ್ನೋ ಕೊಡಬೇಕು. ಹಾಗಿರುವಾಗ ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆ ಮತ್ತು ಪ್ರಾಮಾಣಿಕತೆ ಗೆಲ್ಲಬೇಕಾದರೆ ಅದರ ಬೆಲೆಯನ್ನು ತೆರಬೇಡವೇ? ಬದುಕಿನಲ್ಲಿ ಪ್ರತಿಯೊಂದೂ ತನ್ನ ಬೆಲೆಯನ್ನು ಬೇಡುತ್ತದೆ. ಬೆಲೆ ತೆರೆದೆ ನಾವು ಏನನ್ನೂ ಪಡೆಯಲಾರೆವು. ಪ್ರಾಮಾಣಿಕತೆ, ನ್ಯಾಯ ಗೆಲ್ಲಬೇಕೆನ್ನುವ ಹಂಬಲ ಕ್ರಿಯಾಶೀಲವಾಗಬೇಕು. ಅವುಗಳಿಗಾಗಿ ಹೋರಾಡಲು ಸಿದ್ಧವಾಗಿರಬೇಕು. ಈ ಮನವಿಯನ್ನು ವಿಶೇಷಾಗಿ ಯುವಜನತೆಗೆ ಮಾಡಿಕೊಳ್ಳುತ್ತೇನೆ. ಶೌರ್ಯ ಮತ್ತು ಸುರಕ್ಷತೆ ಒಟ್ಟಿಗೆ ಹೋಗಲಾರವು. ನಾವು ಅಧರ್ಮದೊಡನೆ ರಾಜಿ ಮಾಡಿಕೊಳ್ಳುತ್ತಿದ್ದೇವೆ, ಧರ್ಮ ಗೆಲ್ಲಬೇಕೆಂದು ಹಂಬಲಿಸುತ್ತೇವೆ ಎಂದರೆ ಆಗದು. ನಾವು ಪ್ರಾಮಾಣಿಕತೆಯ, ನ್ಯಾಯದ ಪರವಾಗಿದ್ದರೆ ಅವುಗಳಿಗಾಗಿ ಕೂಡ ಯುದ್ಧಮಾಡಬೇಕು, ಬೆಲೆ ತೆರಬೇಕು. ಅಬ್ಬಕ್ಕ ತೆತ್ತಂತೆ, ಕಿತ್ತೂರಿನ ರಾಣಿ ತೆತ್ತಂತೆ,


ಅಂಕೋಲದ ಸತ್ಯಾಗ್ರಹಿಗಳು ತೆತ್ತಂತೆ. ಆ ದಿಟ್ಟತನ ನಮ್ಮದಾಗಲಿ, ಕನ್ನಡ ನಾಡಿನ ಸಾರ್ವಜನಿಕ ಬದುಕನ್ನು ಅದರ ಜೀವಂತ ಸಂಸ್ಕೃತಿ ನಡೆಸಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

ಕನ್ನಡ ನಾಡಿಗೆ ಜನತೆಗೆ ಶುಭವಾಗಲಿ!

ಜೈ ಹಿಂದ್ !

◆



ಡಾ. ಎಲ್. ಬಸವರಾಜು

೭೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ : ಫೆಬ್ರವರಿ ೪, ೫, ೬, ೭, ೨೦೦೯

ಸ್ಥಳ : ಚಿತ್ರದುರ್ಗ

ಪರಿಚಯ

ಡಾ. ಎಲ್. ಬಸವರಾಜು

ಶಿಕ್ಷಣ : ಕನ್ನಡದಲ್ಲಿ ಶ್ರೇಷ್ಠವಿದ್ವಾಂಸರಾಗಿ ಹಳೆಗನ್ನಡದಲ್ಲಿ ಪ್ರಭುತ್ವ ಪಡೆದ ಎಲ್. ಬಸವರಾಜು ಅವರು ಕೋಲಾರದ ಇಡಗೂರಿನಲ್ಲಿ ೭-೧೦-೧೯೧೯ರಲ್ಲಿ ಲಿಂಗಪ್ಪ ಈರಮ್ಮ ದಂಪತಿಗಳಿಗೆ ಸುಪುತ್ರರಾಗಿ ಜನಿಸಿದರು. ಬಾಲ್ಯದಲ್ಲಿ ಬಡತನದ ಬವಣೆಯಿಂದ ಊರಿನ ಭೀಮೇಶ್ವರ ದೇಗುದಲ್ಲಿ ಅರ್ಚಕರಾಗಿದ್ದು ಕೊಂಡು ಸಿದ್ಧಗಂಗೆಯಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ಮೈಸೂರಿನಲ್ಲಿ ಕನ್ನಡ ಎಂ.ಎ. (೧೯೫೧) ಪದವಿಯನ್ನು ಮೈ. ವಿ. ವಿ. ಪಡೆದರು. ೧೯೬೮ರಲ್ಲಿ ಮೈ.ವಿ.ವಿ. ಡಿ.ಲಿಟ್. ಪದವಿ ಪಡೆದರು.

ಉದ್ಯೋಗ : ದಾವಣಗೆರೆ ಡಿ. ಆರ್. ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಕೆಲಕಾಲಾನಂತರ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು, ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ಅನಂತರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಮನ್ನಣೆ : ಇವರ ಸಾಹಿತ್ಯ ಕೈಂಕರ್ಯಕ್ಕಾಗಿ ನಾಡಿನ ಅನೇಕ ಸಂಸ್ಥೆಗಳು ಸನ್ಮಾಸಿವೆ, ಗೌರವಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೭) ಕನ್ನಡ ರಾಜ್ಯೋತ್ಸವ ಪ್ರಶಸ್ತಿ (೧೯೯೪) ಚಿದಾನಂದ ಪ್ರಶಸ್ತಿ (೧೯೯೪), ಪಂಪ ಪ್ರಶಸ್ತಿ (೨೦೦೦) ಚಾವುಂಡರಾಯ ಪ್ರಶಸ್ತಿ (೨೦೦೨) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೨೦೦೦) ಇತ್ಯಾದಿ ಸಂದಿವೆ.

ಸಾಹಿತ್ಯ ಸೇವೆ : ಸಂಶೋಧಕರಾಗಿ ಗ್ರಂಥಸಂಪಾದಕರಾಗಿ ಇವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಅಮೋಘವಾದುದು.

ಪಂಪನ ಸರಳ ಪಂಪಭಾರತ (೧೯೯೯)

ಪಂಪನ ಆದಿಪುರಾಣ (ಸಂಪಾದನೆ)

ರನ್ನನ ಸರಳ ಗದಾಯುದ್ಧ

ಅಲ್ಲಮನ ವಚನ ಚಂದ್ರಿಕೆ (ಸಂಶೋಧನೆ)

ಶಿವದಾಸ ಗೀತಾಂಜಲಿ (ಸಂಶೋಧನೆ)

ಬಸವಣ್ಣನವರ ವಚನಗಳು

ಕೇಶಿರಾಜನ ಶಬ್ದಮಣಿ ದರ್ಪಣ ಇತ್ಯಾದಿ.

ಎಲ್ ಬಸವರಾಜು ಅವರು ೧೩-೪-೨೦೦೮ರಲ್ಲಿ ನಿಧನರಾದರು.

ಡಾ. ಎಲ್. ಬಸವರಾಜು

೭೫ ನೇ ಸಮ್ಮೇಳನಾಧ್ಯಕ್ಷರ ಭಾಷಣ

೨೦೦೯

ನಮ್ಮ ಕರ್ನಾಟಕದ ಕೆಲವು ಭಾಗಗಳೂ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತೆಂಬುದನ್ನು – ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಮತ್ತು ಕೊಪ್ಪಳದಲ್ಲಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ, ಸಿದ್ಧಾಪುರದಲ್ಲಿ ಮತ್ತು ಜಟ್ಟಿಂಗ ರಾಮೇಶ್ವರದಲ್ಲಿ ಸಿಕ್ಕಿರುವ ಅವನ ಬ್ರಾಹ್ಮೀಲಿಪಿಯ ಪ್ರಾಕೃತ ಭಾಷೆಯ ಶಾಸನಗಳು ದೃಢಪಡಿಸುತ್ತಿವೆ.

ಮತ್ತು ಆ ಶಾಸನಗಳಲ್ಲಿ ಸ್ವತಃ ಅಶೋಕನೇ ಹೇಳಿಕೊಂಡಿರುವಂತೆ–ಹೆಚ್ಚು ಶ್ರಮವಹಿಸಿ ಅವನು ತನ್ನನ್ನು ತಾನೇ ಧರ್ಮಸುಧಾರಣೆಯ ಕೆಲಸದಲ್ಲಿ ತೊಡಗಿಸಿ ಕೊಂಡಿದ್ದರಿಂದ–ಜಂಬೂ ದ್ವೀಪದ ಯಾವ ಜನ ಬೌದ್ಧಧರ್ಮದೊಡನೆ ಬೆರೆಯಲಾಗಿರಲಿಲ್ಲವೋ ಅವರೆಲ್ಲಾ ಬೆರೆಯಲು ಸಾಧ್ಯವಾಯಿತೆಂದೂ–ಈ ಧಾರ್ಮಿಕ ಸತ್ಫಲಗಳನ್ನು ಕೇವಲ ಉತ್ತಮ ಸ್ಥಿತಿಯಲ್ಲಿರುವವರೇ ಅಲ್ಲ ಕೆಳಸ್ಥಿತಿಯಲ್ಲಿರುವವರೂ ಪಡೆಯುವಂತಾಯಿತೆಂದು ಆಶಾದಾಯಕವಾಗಿ ಆ ಅಶೋಕನು ಆಡಿರುವ ಆ ಮಾತಿನಲ್ಲಿ–ಕರ್ನಾಟಕದ ಅಸಂಖ್ಯಾತ ದಲಿತ ವರ್ಗದ ಜನರೂ ಬೌದ್ಧರಾಗಿದ್ದ ರೆಂಬುದನ್ನು ಸೂಚಿಸುತ್ತದೆ.

ಹೀಗಾಗಿ ದಲಿತರಿಗೆ ಈ ಬೌದ್ಧ ಧರ್ಮವಾದರೂ ಮಾನ್ಯತೆಯನ್ನು ಕೊಟ್ಟು ಅವರ ಆತ್ಮವಿಶ್ವಾಸವನ್ನೂ ಆತ್ಮಗೌರವವನ್ನೂ ಹೆಚ್ಚಿಸಲು ನೆರವಾಯಿತಲ್ಲಾ ಎನ್ನುವಂತಾದರೂ ಅದು ವೈದಿಕರಿಗೆ ಕಿರಿಕಿರಿಯನ್ನೇ ಉಂಟು ಮಾಡಿದಂತಾಗ ಬಹುದು. ಅಶೋಕನು ತನ್ನ ಹಲವು ಶಾಸನಗಳಲ್ಲಿ ತನ್ನನ್ನು "ದೇವಾನಾಂ ಪ್ರಿಯ" ಎಂದು ಕರೆದುಕೊಂಡಿರುವುದನ್ನು ಆ ವೈದಿಕರು ಗೇಲಿ ಮಾಡುವುದು ನಡೆದೇ ಇತ್ತು! ಈಗಲೂ ಸಂಸ್ಕೃತದಲ್ಲಿ "ದೇವಾನಾಂ ಪ್ರಿಯ"ನೆಂದರೆ ಮೂರ್ಖನೆಂಬ ಅರ್ಥವಿದೆಯಂತೆ! ಆದ್ದರಿಂದ ಆ ವೈದಿಕರಿಗೆ ಬೌದ್ಧಧರ್ಮದ ಮೇಲೆ ಮತ್ತು ಅದರ ಪ್ರಚಾರಕರ ಮೇಲೆ ಏನೊಂದು ತಿರಸ್ಕಾರ ದ್ವೇಷವಿತ್ತೆಂಬುದನ್ನು ಊಹಿಸಬಹುದಾಗಿದೆ.

ಅದೇನೇ ಇರಲಿ–ಕರ್ನಾಟಕದಲ್ಲಿ ಕ್ರಿ.ಪೂ.ಮೂರನೇ ಶತಮಾನದಿಂದಲೂ ಬೌದ್ಧಧರ್ಮ ಎಲ್ಲ ಹಂತಗಳಲ್ಲಿ ಪ್ರಚುರವಾಗಿದ್ದಿತಾದರೂ ಆ ಧರ್ಮವನ್ನು ಪ್ರಚಾರ

ಮಾಡಲು ಕನ್ನಡದಲ್ಲಿ ಆ ಯಾರೂ ಕಾವ್ಯಗಳನ್ನು ಬರೆಯಲಿಲ್ಲವೆಂದರೆ ಅದೊಂದು ಅಸಂಬದ್ಧ ತೀರ್ಮಾನವೇ ಆದೀತು.

ಕಾಲಾಂತರದಲ್ಲಿ ಬೌದ್ಧಧರ್ಮವು ಭಾರತದಿಂದಲೇ ಪರದೇಶಿಯಾಗಿ ಹೋಯಿತೆಂದ ಮೇಲೆ –ಕರ್ನಾಟಕದಲ್ಲಿಯಾದರೂ ಅದು ಆಗ ಕೇವಲ ಹೆಸರಿಗೆ ಮಾತ್ರ ಉಳಿದಿತ್ತೆಂಬುದರಲ್ಲಿ ಸತ್ಯಾಂಶವಿದೆ ಎನಿಸುವುದಾದರೂ–೯ನೇ ಶತಮಾನದ ಆ ಕವಿರಾಜಮಾರ್ಗ ಗ್ರಂಥದಲ್ಲಿ ಹೇಳಿರುವಂತೆ–ಆ ವೇಳೆಗಾಗಲೇ ವಿಮಲೋದಯ – ನಾಗಾರ್ಜುನ–ಜಯಬಂಧು–ದುರ್ವಿನೀತ ಮುಂತಾದವರು ಕನ್ನಡ ಚಂಪೂಕಾವ್ಯಗಳನ್ನು ಬರೆದು "ಗದ್ಯಾಶ್ಯಮ ಗುರುತಾಪ್ರತೀತಿ"ಯನ್ನು ಪಡೆದಿದ್ದರು ಎಂಬಲ್ಲಿ ಆ "ನಾಗಾರ್ಜುನ"ನೆಂಬುವನಾದರೂ ಬೌದ್ಧಧರ್ಮಕ್ಕೆ ಸೇರಿದ ಒಬ್ಬ ಕನ್ನಡ ಕವಿಯಾಗಿರಲಾರನೇನು ಎಂಬುದೊಂದು ಅತ್ಯಾಶೆ!

ಆದರೇನು ಹತ್ತನೇ ಶತಮಾನದ ನಮ್ಮ ಮಹಾಕವಿ ಪಂಪನು ಬರೆದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯವೆಂಬ ಎರಡು ಕಾವ್ಯಗಳು ಅಂದಿನ ಕನ್ನಡ ಸಹೃದಯರಿಗೆ ಅದೆಷ್ಟು ರಸತೃಪ್ತಿಯನ್ನು ತಂದವೆಂದರೆ– ಆ ಹಿಂದಿನ ಕನ್ನಡ ಕವಿಗಳ ಯಾವ ಕಾವ್ಯವಾಗಲಿ ನಾಮಾವಶೇಷವಾದ ಹಳಗನ್ನಡ ಗ್ರಂಥಗಳ ಪಟ್ಟಿಯಲ್ಲಿ ತಮ್ಮ ಹೆಸರನ್ನು ಬರೆಸಿ ಹಾಗೇ ಮಂಗಮಾಯವಾಗಿ ಹೋದವು– ಅಸಗ (ಕ್ರಿ.ಶ.೮೫೩), ಗುಣನಂದಿ (ಕ್ರಿ.ಶ.೯೦೦). ಒಂದನೇ ಗುಣವರ್ಮ ಎಂದು ಮುಂತಾಗಿ ಆ ಪಟ್ಟಿಯೂ ಬೆಳೆಯುತ್ತಲೇ ಹೋದೀತು!

ಇದುವರೆಗೂ ನಾವು ಪ್ರಸ್ತಾಪಿಸಿದ ಕನ್ನಡ ಸಾಹಿತ್ಯವೆಲ್ಲವೂ ಕ್ರಿ.ಶ. ಹತ್ತನೇ ಶತಮಾನದವರೆಗಿನ ಮಾರ್ಗ ಅಥವಾ ಆ ಮಾರ್ಗ ಮತ್ತು ದೇಶೀ ಮಿಶ್ರವಾದ ಕನ್ನಡ ವಿದ್ವತ್ ಪ್ರಕಾರದವೇ ಆಗಿವೆ. ಅವನ್ನು ರಾಜಾಸ್ಥಾನದಲ್ಲಿ ಮತ್ತು ವಿದ್ವತ್ ಗೋಷ್ಠಿಗಳಲ್ಲಿ ಪಂಡಿತರು ಮಾತ್ರವೇ ಓದಲು ಅಥವಾ ಓದಿ ಹೇಳಲು ಸಾಧ್ಯವಿತ್ತು– ಅಂದರೆ ಅವು ಜನಸಾಮಾನ್ಯರ ಮತ್ತು ನತದೃಷ್ಟ ದಲಿತರ ಸರಳ ವಲಯದಿಂದ ದೂರವೇ ಉಳಿದಿದ್ದವು.

ಇಷ್ಟೆಲ್ಲ ಸಾರಸ್ವತನಷ್ಟವಾದಾಗಲೂ ಕನ್ನಡ ಜನಸಾಮಾನ್ಯರು – ಅದರಲ್ಲೂ ಮುಖ್ಯವಾಗಿ ದಲಿತ ಜನ ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳುವ ದುರದೃಷ್ಟ ಪ್ರಮೇಯವಿರಲಿಲ್ಲ! ಯಾಕೆಂದರೆ – ಆ ಜನಸಾಮಾನ್ಯರಿಗೆ ಮತ್ತು ದಲಿತರಿಗೆ – "ಬೆದಂಡೆ" ಎಂಬ ಒಂದು ದೇಸೀ ಕಾವ್ಯಪ್ರಕಾರವು–ಆತ್ಮೀಯವಾಗಿ ಒಗ್ಗಿ ಬಂದಿತ್ತು.

ಈ ಜನಪದ ಸಾಹಿತ್ಯ ಪ್ರಕಾರದ ಈ "ಬೆದಂಡೆ"ಯು ಕ್ರಿಸ್ತಪೂರ್ವ ಕಾಲದಲ್ಲಿರಲಿ– ಆಮೇಲೆ ಕ್ರಿಸ್ತಶಕಾರಂಭದಿಂದ ಹಿಡಿದು ಆ ೭–೮ನೇ ಶತಮಾನದವರೆಗಾಗಲೀ ಇರಲಿಲ್ಲವೆಂಬುದು – ಆಗ್ಗೆ ಕನ್ನಡದಲ್ಲಿ ಮಾತಾಡುವ ಹಾಡುವ ಜನರೇ ಇರಲಿಲ್ಲ– ಇದ್ದರೆಂಬುದಾದರೂ ಅವರು ಕಾವ್ಯಾಸ್ವಾದನೆಯನ್ನೇ ಅರಿಯದವರಾಗಿ ತೀರ

ಕಾಡು ಜನರಂತಿದ್ದರೆಂದಂತಾಗುವುದು. ಇದು ಇಡಿಯಾಗಿ ನಮ್ಮ ಭಾರತೀಯ ಸಂಸ್ಕೃತಿ ಚರಿತ್ರೆಯನ್ನೇ ಅರಿಯದವರ ಎಗ್ಗು ಸಿಗ್ಗಿಲ್ಲದ ಮಾತಾದೀತು! ಆದ್ದರಿಂದಲೇ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಕನ್ನಡ ಜನಕ್ಕೇ ವಿಶಿಷ್ಟವಾದ (ಅಂದರೆ ಅವರ ಮನವನ್ನು ಸಾರಸ್ವತವಾಗಿ ಸೂರೆಗೊಂಡಿದ್ದ) ಕಾವ್ಯಪ್ರಕಾರವೊಂದು "ಬೆದಂಡೆ" ಎಂಬ ಹೆಸರಿನಲ್ಲಿ ಕಾಲದಿಂದಲೂ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು.

ಅದರ ಲಕ್ಷಣ ಆ ಕವಿರಾಜಮಾರ್ಗದ ಪ್ರಕಾರವೇ ಈ ಮುಂದಿನಂತಿದೆ:

"ನುಡಿಗೆಲ್ಲಂ ಸಲ್ಲದ ಕನ್ನಡದೊಳ್
ಚತ್ತಾಣಮುಂ ಬೆದಂಡೆಯುಮೆಂದು
ಈಗಡಿನ ನೆಗಟ್ತೆಯ ಕಬ್ಬದೊಳ್
ಒಡಂಬಡಂ ಮಾಡಿದರ್ ಪುರಾತನ ಕವಿಗಳ್"

(ಕವಿರಾಜಮಾರ್ಗ -೧-೩೨)

"ಕಂದಂಗಳ್ ಅಲ್ಪಮಾಗಿರೆ
ಸುಂದರ ವೃತ್ತಂಗಳ್ ಅಕ್ಕರಂ ಚೌಪದಿ
ಮತ್ತಂ ದಲ್ ಗೀತಿಕೆ ತಿವದಿಗಳ್
ಅಂದಂಬೆತ್ತೆಸೆಯೆ ಪೇಟ್ದೊಡೆ
ಅದು ಚತ್ತಾಣಂ"

(ಕವಿರಾಜಮಾರ್ಗ೧-೩೩)

ಕಂದಮುಂ ಅಮಳಿನ ವೃತ್ತಮುಮ್
ಒಂದೊಂದು
ಎಡೆಗೊಂದು ಜಾತಿ
ಜಾಣೆಸೆಯೆ ಬೆಡಂಗೊಂದಿ ಅವಟೊಳಮರೆ
ಪೇವಿಲ್ ಸುಂದರ ರೂಪಿಂ
ಬೆದಂಡೆಗಬ್ಬಮದಕ್ಕುಂ!

(ಕವಿರಾಜಮಾರ್ಗ ೧-೩೪)

---

* ಮೇಲಣ ಮೂರೂ ಪದ್ಯಗಳಿಗೆ ಕ್ರಮವಾಗಿ ಅರ್ಥ : ಈ ಪದ್ಯಕಾವ್ಯ ಪ್ರಕಾರದಲ್ಲೇ ನಮ್ಮ ಪುರಾತನ ಕವಿಗಳು ಕನ್ನಡಕ್ಕೇ ವಿಶಿಷ್ಟವಾದ ಚತ್ತಾಣ ಮತ್ತು ಬೆದಂಡೆ ಎಂಬ ಎರಡು ಕಾವ್ಯ ಪ್ರಕಾರಗಳನ್ನು ಅಂತರ್ಗತಗೊಳಿಸಿದರು (೩೨)

ಕೆಲವೇ ಕಂದಗಳಿದ್ದು ವೃತ್ತ-ಅಕ್ಕರ-ಚೌಪದಿ-ಗೀತಿಕೆ ಮತ್ತು ತ್ರಿಪದಿಗಳು ಸಮರಸವಾಗಿ ಕೂಡಿಬಂದರೆ ಅದೇ "ಚತ್ತಾಣ'.(೩೩)

ಒಂದೊಂದು ಕಂದ ಮತ್ತು ವೃತ್ತವೂ – ಆ ಎರಡರ ನಡುವೆ ಒಂದು "ಜಾತಿ"ಯೂ ಸೇರಿಬಂದರೆ [ಅಥವಾ ಕಂದವೂ ವೃತ್ತವೂ ಒಂದೊಂದೆಡೆಗೆ ಒಂ[ದೊಂ]ದೂ-ಇವುಗಳ ಜೊತೆಗೆ "ಜಾತಿ"ಯೂ ಹೊಂದಿಕೊಂಡು ಬಂದರೆ – ಅದೇ ಸುಂದರ ರೂಪಿನ ಬೆದಂಡೆ ಆಗುವುದು. (೩೪)

ಕವಿರಾಜಮಾರ್ಗದ ಮೇಲಣ ಉಲ್ಲೇಖದಲ್ಲಿ ಅಸ್ಪಷ್ಟವಾದ ಭಾಗವೆಂದರೆ– ಇಡಿಯಾಗಿ ಚತ್ತಾಣ ಮತ್ತು ಬೆದಂಡೆಗಳನ್ನು ಕುರಿತುದು.

ಅದರೊಳಗೂ ಅಸ್ಪಷ್ಟತಮವಾದುದೆಂದರೆ ಈ "ಬೆದಂಡೆ"ಎಂಬುದನ್ನು ಕುರಿತ ೩೪ನೇ ಪದ್ಯ.

ಅದರೊಳಗೂ ಅಸ್ಪಷ್ಟತಮವಾದುದೆಂದರೆ ಕಗ್ಗಂಟಿನಂತಹ ಅರ್ಥಗ್ರಂಥಿಯನ್ನು ಒಳಗೊಂಡಿರುವ "ಜಾತಿ" ಎಂಬ ಶಬ್ದ! ಆದುದರಿಂದಲೇ ಈ ೩೪ನೇ ಕಂದಪದ್ಯ ಹುತ್ತದೊಳಣ ವೃತ್ತದಂತಿದ್ದು ನೆಲೆಗಾಣುವ ಪ್ರಯತ್ನ(ದಲ್ಲಿ) ಇದು ಸರ್ಪಕ್ಕೇ ಸವಾಲಿನಂತಿದೆ. ಈ ಬಗ್ಗೆ ತೀ.ನಂ.ಶ್ರೀ.ಯವರು ಈ ಸಂಬಂಧವಾಗಿ ಮಾಡಿರುವ ಸಂಶೋಧಿತ ನಿರ್ಣಯ ಈ ಮುಂದಿನಂತಿದೆ:

"ಈ ಜಾತಿ(ಬೆದಂಡೆ)ಯ ಕಾವ್ಯದಲ್ಲಿ ಸಂಖ್ಯಾವಿಭೇದಗಳನ್ನು ಬಿಟ್ಟರೆ ಒಂದು ಮುಖ್ಯಾಂಶ ಎದ್ದು ಕಾಣುತ್ತದೆ. ಇದರಲ್ಲಿ ಬರುವ ಛಂದಸ್ಸು ಎರಡೇ ಬಗೆಯದು– ಕಂದ, ಜೊತೆಗೆ ಯಾವುದಾದರೂ ಒಂದು ಪ್ರಸಿದ್ಧ ವೃತ್ತ. ಹೆಚ್ಚಿನ ವೈವಿಧ್ಯಕ್ಕೆ ಇಲ್ಲಿ ಅವಕಾಶವಿಲ್ಲ. ಅಂತೂ ಕವಿರಾಜಮರ್ಗ– ಕಾವ್ಯಲೋಕನ ಈ ಎರಡರ ಮತದಂತೆಯೂ ಬೆದಂಡೆಯಲ್ಲಿ ಕಂದಗಳೂ ನಡುನಡುವೆ ಒಂದೇ ಜಾತಿಯ ವೃತ್ತಗಳು ಸೇರಿ ಬಂದಿರಬೇಕೆಂದು ನಿರ್ಣಯಿಸಬಹುದು" (ಪ್ರಬುದ್ಧ ಕರ್ನಾಟಕ, ಸಂಪುಟ ೪೪, ಸಂಚಿಕೆ ೪, ಪುಟ ೮೭–೮೮) ಎಂದಿರುವಾಗ ಪೂಜ್ಯ ತೀ.ನಂ.ಶ್ರೀಯವರು ಕವಿರಾಜಮಾರ್ಗದ ಆ ೩೪ನೇ ಕಂದಪದ್ಯದೊಳಗಣ ಜಾತಿ ಎಂಬ ಪದವು ವಿಧ ಎಂಬ ಸಾಮಾನ್ಯಾರ್ಥವಾಹಿಯಾಗಿರದೆ – ಸಂಗೀತಶಾಸ್ತ್ರದ ಒಂದು ಪರಿಭಾಷೆಯಾಗಿದೆ ಎಂಬುದನ್ನು ಗುರುತಿಸಲಿಲ್ಲ. ಅವರು "ಜಾತಿ" ಎಂಬುದರ ಅರ್ಥಗ್ರಂಥಿಯನ್ನು "ದೃಷ್ಟಿಸದೆ– ಅದು ಬಿಡುವತ್ತ ಬಿಡಿಸದೆ– ಮನ ಬಂದತ್ತ ಎಳೆಯನ್ನು ತುಯ್ದೆಳೆದರು – ಫಲಿತಾಂಶ: ಅದು ಕಗ್ಗಂಟಾಯಿತು.

ಪ್ರಸ್ತುತ ೩೪ನೇ ಕಂದ್ಯಪದ್ಯದ ಪ್ರಕಾರ "ಬೆದಂಡೆಯಲ್ಲಿ ಕಂದಗಳ ಜೊತೆಗೆ ಬಳಸುವ ವೃತ್ತಗಳಲ್ಲಿ ವೈವಿಧ್ಯವಿರಬೇಕೇ ಬೇಡವೇ ಎಂಬುದಲ್ಲ ವಿಚಾರಣೀಯ ಅಂಶ! ಬೆದಂಡೆಗಬ್ಬದಲ್ಲಿ ಇರಬೇಕಾದುದು ಕಂದ ಮತ್ತು ವೃತ್ತಗಳು ಮಾತ್ರವೋ? ಜೊತೆಗೆ ಮೂರನೆಯದಾಗಿ (ಆ ನಡುವೆ) "ಜಾತಿ" ಎಂಬುದೂ ಇರಬೇಡವೋ? ಇರುವುದಾದರೆ ಆ "ಜಾತಿ" ಎಂಬುದರ ಪರಿಭಾಷೆ (=ಸ್ವರೂಪ) ಏನು ಎಂಬುದು!

ಕವಿರಾಜಮಾರ್ಗದ ಪ್ರಕಾರ – ಚತ್ತಾಣ ಬೆದಂಡೆ ಎಂಬ ಎರಡು ಪದ್ಯಕಾವ್ಯ ಪ್ರಕಾರಗಳಲ್ಲೂ ಕಂದ–ವೃತ್ತಗಳಿರಬೇಕೆನ್ನುವುದು ಸಮಾನಾಂಶ. ಹೀಗಿರುವಲ್ಲಿ ಕಂದವೃತ್ತಗಳ ಜೊತೆಗೆ ಅಕ್ಕರ ಚೌಪದಿ ಗೀತಿಕೆ ತ್ರಿಪದಿಗಳು ಸೇರ್ಪಡೆಯಾಗಿದ್ದರೆ 'ಚತ್ತಾಣ'ವೆನಿಸಿ–ಆ ಅಕ್ಕರ ಚೌಪದಿ ಗೀತಿಕೆ ತ್ರಿಪದಿಗಳಿಗೆ ಬದಲಾಗಿ "ಜಾತಿ" ಎಂಬುದು ಸೇರ್ಪಡೆಯಾಗಿದ್ದರೆ "ಬೆದಂಡೆ" ಎನಿಸಿಕೊಳ್ಳುವುದೆಂಬುದು ಕವಿರಾಜಮಾರ್ಗಕಾರನ ೧–೩೪ನೇ ಮಾತಿನ ಮುಖ್ಯಾರ್ಥ!

ಹಾಗಾದರೆ ಚತ್ತಾಣದಿಂದ ಬೆದಂಡೆಯನ್ನು ಬೇರ್ಪಡಿಸುವ ವಿಶಿಷ್ಟಾಂಶವಾದ "ಜಾತಿ" ಎಂದರೇನು? ಈಗ ಅದರತ್ತ ನಮ್ಮ ವಿಚಾರವನ್ನು ಹೊರಳಿಸಬಹುದು:

ನೇಮಿಚಂದ್ರನ ಒಂದು ಪದ್ಯವನ್ನು ನೋಡಿರಿ- ಲೀಲಾವತಿಯ ಬಳಿಗೆ ಅವಳ ಪ್ರಿಯತಮನಾದ ಕಂದರ್ಪನನ್ನು ಕರೆತಂದ ಪರಿಯನ್ನು ವರ್ಣಿಸಿರುವ ಸಂದರ್ಭವದು:

ರತಿಗಳ್ ಶೃಂಗಾರಮಂ, ಶೋಭೆಗಳತಿಶಯಮಂ
ಜಾತಿಗಳ್ ರಾಗಮಂ, ದೇ
ವತೆಗಳ್ ಕಾಮ್ಯಾರ್ಥಮಂ, ನೀತಿಗಳುದಯಮನಾಕ್ಷೇಪದಿಂ
ತರ್ಪವೋಲು ।
ದ್ಧತೆಯರ್ ತತ್‌ಕಾಂತೆಯರ್ಕಳ್ ತೆರ –ಮಧು ಸಹಿತಂ
ಕಂತು ಬರ್ಪಂತೆ ಬಂದಂ
ಚತುರಾಮಾತ್ಯ ಪ್ರಯುಕ್ತಂ ಸರಸಕೃತಿ ಕಲಾ
ನರ್ತಕೀ ನೃತ್ಯರಂಗಂ ॥

(ಲೀಲಾವತಿ ೧೧.೯೫)

ರತಿಯು ಶೃಂಗಾರವನ್ನೂ, ಶೋಭೆಗಳು ಅತಿಶಯವನ್ನೂ, ಜಾತಿಯ ರಾಗವನ್ನೂ.... ಒಡಗೊಂಡು ಬರುವಂತೆ ಸಖೀನಿವಹವು ಕಂದರ್ಪನನ್ನು ಕರೆತಂದಿತೆಂಬುದೇ ಈ ಮೇಲಣ ಪದ್ಯದ ತಾತ್ಪರ್ಯ.

ಇಲ್ಲಿ "ಜಾತಿ" ಎಂದರೆ – ಬೇರೆಬೇರೆ ರಾಗದೊಡಗೂಡಿದ "ವಾಗ್ಗೇಯ"ದ ಒಂದು ಬಂಧವಿರಬಹುದೆಂದು ಊಹಿಸುವುದು ಅರ್ಥವಿವರ ದೊರೆತು ಬೆದಂಡೆಯ ಸ್ವರೂಪವು ಇನ್ನೂ ನಿಚ್ಚಳವಾಗಬೇಕಾದರೆ – ಅದೇ ಬೆದಂಡೆಯನ್ನು ಕುರಿತು ಪ್ರಸ್ತಾಪಿಸಿರುವ ನಾಗವರ್ಮನ ಕಾವ್ಯಾವಲೋಕನದ ಮುಂದಿನ ಮೂರು ಪದ್ಯಗಳನ್ನು ನೋಡಬಹುದು :

ಸಂದಿಸಿರೆ ಕಂದಮುಂ ಪೆಱ
ತೊಂದಱಿಕೆಯ ವೃತ್ತ ಜಾತಿಯುಂ, ಪದಮವು ತ
ಳ್ತೊಂದಿರೆ ಪನ್ನೆರಡುವರಂ-
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ (೯೫೨)

ಪದಿನಯ್ದುಮಿರ್ಪತಯ್ದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್
ಪುದಿದೊದವಿ ನೆಗೞ್ವೊಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ

ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರಿನ್ನದು ದಲ್ ಮೆ
ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ (೯೫೪)

ಅರ್ಥಸ್ಪಷ್ಟತೆಗಾಗಿ ಮೇಲಣ ಮೂರೂ ಪದ್ಯಗಳ ಗದ್ಯಾನುವಾದ ಈ ಮುಂದಿನಂತಿದೆ ನೋಡಿ :

ಕಂದವೂ ಇನ್ನೊಂದು ಪ್ರಸಿದ್ಧ ವೃತ್ತವೂ (ಮತ್ತು ಆ ಎರಡರ ನಡುವೆ) "ಪದ"ಗಳು ಸಂಖ್ಯೆಯಲ್ಲಿ ಹನ್ನೆರಡರವರೆಗೆ ಸೇರಿಕೊಂಡಿದ್ದರೆ – ಅದು ಕನ್ನಡದಲ್ಲಿ ಮೆಲ್ವಾಡು ಎನಿಸಿಕೊಳ್ಳುವುದು. (೯೫೨)

ಆ ಕಂದ ಮತ್ತು ವೃತ್ತದ ನಡುವೆ – "ಪದ"ಗಳು ಸಂಖ್ಯೆಯಲ್ಲಿ ಹದಿನೈದು – ಇಪ್ಪತ್ತೈದರವರೆಗೆ ಸೇರಿಕೊಂಡಿದ್ದರೆ (ಅದು ಕನ್ನಡದಲ್ಲಿ) ಪಾಡು–ಪದ–ಅಥವಾ ಹಾಡು ಎನಿಸುವುದು. (೯೫೩)

ಪಾಡುಗಳಿಂದ ರಚಿತವಾದುದನ್ನು ವಿದ್ವಾಂಸರು "ಪಾಡುಗಬ್ಬ"ವೆಂದು ಕೊಂಡಾಡುವರು. ಈ ಪಾಡು ಅಥವಾ ಪಾಡುಗಳಿಂದಲೇ ಅಲ್ಲವೇ ಮೆಲ್ವಾಡು ಅಥವಾ "ಬೆದಂಡೆಗಬ್ಬ"ವಾಗುವುದು! (೯೫೪)

ನಾಗವರ್ಮನ ಈ ಮೇಲಣ ವಿವರಣೆಯು ಕವಿರಾಜಮಾರ್ಗದಲ್ಲಿನ ಬೆದಂಡೆಯ ಲಕ್ಷಣವನ್ನು ಹೇಳುವ ಪದ್ಯಕ್ಕೆ ಬರೆದ ವ್ಯಾಖ್ಯಾನದಂತಿದೆ. ಬೆದಂಡೆಯೆನಿಸಬೇಕಾದರೆ ಕಂದ ವೃತ್ತಗಳ ಜೊತೆಗೆ "ಜಾತಿ" ಕೂಡಿಕೊಂಡು ಬರಬೇಕೆಂದು ಕವಿರಾಜಮಾರ್ಗಕಾರನು ಹೇಳಿದ್ದರೆ – ಪದ ಕೂಡಿಕೊಂಡು ಬರಬೇಕೆಂದು ಕಾವ್ಯಾವಲೋಕನಕಾರರು ಹೇಳಿರುವನಾದ್ದರಿಂದ – "ಜಾತಿ"ಗೆ "ಪದ"ವು ಪರ್ಯಾಯವಾಚಿಯೆಂಬುದು ಸ್ವತಸ್ಸಿದ್ಧವಾಗಿದೆ.

ಪದವೆಂಬುದು ಹಾಡು ಅಥವಾ ಹಾಡಲೆಂದೇ ರಚಿತವಾದ ಅದಕ್ಕನುಸಾರವಾಗಿ ಛಂದಸ್ಸಹಿತವಾದ ಒಂದು ಸಾಹಿತ್ಯಬಂಧವೆಂಬುದಕ್ಕೆ ನಡುಗನ್ನಡದಲ್ಲಿ ಪ್ರಯೋಗಗಳು ಹೇರಳವಾಗಿವೆ. ಆದರೆ ಇದೇ ಅರ್ಥದಲ್ಲಿ "ಪದ" ಎಂಬ ಶಬ್ದವು ಕವಿರಾಜಮಾರ್ಗದ ಕಾಲಕ್ಕೂ (ಅದಕ್ಕಿಂತ ಹಿಂದಕ್ಕೂ) ಪ್ರಯೋಗವಾಗುತ್ತಿತ್ತೇ ಎಂಬ ಸಂದೇಹ ಬರುವುದು ಸಹಜ. ಆದರೆ ಈ ಸಂದೇಹವು ಸ್ಥಾಯಿಯಾಗುವಷ್ಟು ಪ್ರಬಲವಾದುದಲ್ಲ – ಕಾಳಿದಾಸನ ಮೇಘಸಂದೇಶದ ಉತ್ತರ ಭಾಗದಲ್ಲಿ ಬರುವ ಈ ಮುಂದಿನ ಪದ್ಯವೊಂದೇ ಅದನ್ನು ನಿವಾರಿಸುವುದು.

ಉತ್ಸಂಗೇ ವಾ ಮಲಿನ ವಸನೇ ಸೌಮ್ಯ ನಿಕ್ಷಿಪ್ಯ ವೀಣಾಂ
ಮದ್ಗೋತ್ರಾಂಕಂ ವಿರಚಿತಪದಂ ಗೇಯ ಮುದ್ಗಾತುಕಾಮಾ
ತಂತ್ರೀಮಾರ್ದ್ರಾಂ ನಯನ ಸಲಿಲೈಃ ಸಾರಯಿತ್ವಾ ಕಥಂಚಿತ್
ಭೂಯೋ ಭೂಯಃ ಸ್ವಯಮಪಿ ಕೃತಾಂ ಮೂರ್ಛನಾಂ ವಿಸ್ಮರಂತೀ !

ಇಲ್ಲಿ ಯಕ್ಷಿ (ವಿರಹಿಣಿ)ಯು ತನ್ನ ಪ್ರಿಯತಮನ ಗೋತ್ರಾಂಕಿತ ಸಹಿತವಾದ "ಪದ"ವೊಂದನ್ನು ರಚಿಸಿ ತಂತ್ರೀವಾದ್ಯದೊಡನೆ ಹಾಡಬೇಕೆಂದಿದ್ದ ವಿಚಾರ ಸ್ಪಷ್ಟವಿದೆ. (ಇದೇ ಸಂದರ್ಭದಲ್ಲಿ ಶಿವದಾಸರ ಹರಿದಾಸರ ಮತ್ತು ೧೭ನೇ ಶತಮಾನದ ವೈಷ್ಣವ ಭಕ್ತರ ಹಾಡುಗಳನ್ನು "ಪದ"ವೆಂದು ವ್ಯಹರಿಸುತ್ತಿದ್ದುದನ್ನೂ ನೆನೆಯಬೇಕು.)

ನಿರ್ಧರಿಸಿ ಹೇಳುವುದಾದರೆ – ಮುಖ್ಯವಾಗಿ ಹಾಡುಗಳಿಂದ ರಚಿತವಾದ ಕಾವ್ಯಕ್ಕೆ ಅಥವಾ ಗೇಯ ಕೃತಿಗೆ "ಬೆದಂಡೆ" ಎನ್ನುತ್ತಿದ್ದರು.

ತಿರುಮಲಾರ್ಯನು ತನ್ನ ಚಿಕ್ಕದೇವರಾಜ ವಿಜಯದ ವೇಶ್ಯಾವಾಟಿಕಾ ಪ್ರಸಂಗದಲ್ಲಿ ಪ್ರಸ್ತಾಪಿಸಿರುವ ಬಣ್ಣವಾಡು ಸಿಂಗರವಾಡು ಅಥವಾ ಶೃಂಗಾರ ಪದ ಎಂಬುದನ್ನು ಗಮನಿಸಿದರೆ – ಅವು ಬೇರೇನೂ ಅಲ್ಲದೆ ಸೂಳೆಯರು ಹಾಡುತ್ತಿದ್ದ ಗೀತಾ ಪ್ರಬಂಧಗಳೇ ಆಗಿದ್ದವೆಂದೂ – ಅವು ಬೆದಂಡೆಯ ಅವಶೇಷಗಳೋ ಅಪಭ್ರಂಶಗಳೋ ಆಗಿದ್ದವೆಂದೂ ಅನ್ನಿಸದಿರದು.

ಈ ಬೆದಂಡೆಗಬ್ಬವು ಹೀಗೆ ಶೃಂಗಾರ ಪ್ರಧಾನವಾದ ಗೇಯಕೃತಿಯಾಗಿದ್ದುದರಿಂದಲೂ, ಅದನ್ನು ಚೆನ್ನಾಗಿ ವೇಶ್ಯವಾಟಿಕೆಗಳಲ್ಲೇ ಹಾಡುತ್ತಿದ್ದುದರಿಂದಲೂ – ಗರತಿಯರೂ ಗೊರವರೂ ಬೆದಂಡೆಗೆ ಕಿವಿಗೊಡಬಾರದೆಂಬ ನೀತಿವಾಕ್ಯ ಪ್ರಚುರವಾಯಿತು. ಮದನತಿಲಕವೆಂಬ ಶೃಂಗಾರಕಾವ್ಯದಲ್ಲಿಯೇ –ಬೆದಂಡೆಯನ್ನು ಹಾಡುವ ಕಡೆ ಹೆಂಡಿರನ್ನು ಸುಳಿಯಲೂ ಬಿಡಬಾರದೆಂದು ಎಚ್ಚರಿಸಲಾಗಿದೆ– "ಬೆದಂಡೆಯ ದೆಸೆ ಬೊಗಲೀಯಲಾಗದು" ಎಂದು (ಮ.ತಿಲಕ ೮.೨೯).

ಒಟ್ಟಿನಲ್ಲಿ ಮೇಲೆ ಕವಿರಾಜಮಾರ್ಗದ ಪ್ರಕಾರ ೯ನೇ ಶತಮಾನಕ್ಕಿಂತ ಹಿಂದಿನಿಂದಲೂ ಕರ್ನಾಟಕದಲ್ಲಿ ಮೆಲ್ವಾಡೆಂದೋ ಬೆದಂಡೆಯೆಂದೋ ಪ್ರಚುರವಾಗಿದ್ದ ಗೀತಾಸಾಹಿತ್ಯ ಪ್ರಕಾರವನ್ನು ವಸ್ತು ದೃಷ್ಟಿಯಿಂದ ಕಾಮದಿಂದ ದೈವಭಕ್ತಿಗೋ ಧರ್ಮಸಿದ್ಧಾಂತಕ್ಕೋ ತಿರುಗಿಸಿ ಕಡೆಯ ಪಕ್ಷ ಕ್ರಿ.ಶ. ೮–೯ನೇ ಶತಮಾನದಿಂದ ಹಿಡಿದು ೧೮–೧೯ನೇ ಶತಮಾನದವರೆಗೆ ಸುಮಾರು ಒಂದು ಸಾವಿರ ವರ್ಷಗಳ ಕಾಲ ಸ್ವರವಚನವೆಂದೋ ವಚನವೆಂದೋ ಶಿವಶರಣರೂ, ಕೀರ್ತನೆಯೆಂದೋ ಉಗಾಭೋಗವೆಂದೋ ಹರಿದಾಸರೂ–ಕರ್ನಾಟಕ ಮಾತ್ರವಲ್ಲ ಆಸೇತು ಹಿಮಾಚಲ ಭಾರತವು ಪರಕೀಯ ಧಾಳಿಗಳಿಂದ ಕಂಗೆಟ್ಟಿದ್ದ ಕಾಲದಲ್ಲಿ ನಮ್ಮ ಸಂಸ್ಕೃತಿಯನ್ನು ರಕ್ಷಿಸಿ ಕೊಳ್ಳುವುದಕ್ಕಾಗಿ ಬೇಕಾದ ಆತ್ಮಸ್ಥೈರ್ಯ ವನ್ನೂ ಶೌರ್ಯವನ್ನೂ ಜನತೆಗೆ ಕೊಟ್ಟಿತು – ಈ ಶರಣ ಮತ್ತು ಹರಿದಾಸ ಪರಂಪರೆ.

ಇದೇ ರೀತಿ ಬರುವ ನೂರಾರಲ್ಲ ಸಾವಿರಾರು ವರ್ಷಗಳ ಕಾಲವೂ ನಮ್ಮ ದೇಶವನ್ನು, ನಮ್ಮ ದೇಶೀಯ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಭಾಷೆ–ಸಾಹಿತ್ಯ–ಕಲೆ ಎಂದು ಮುಂತಾದ ಉಪಕರಣಗಳ ಕಡೆ ನಾವು ಸರಿದಾರಿಯಲ್ಲಿ ಗಮನಹರಿಸಬೇಕಾಗಿದೆ.

ಸರ್ಕಾರ ಕಡೆಗಣಿಸುತ್ತಾ ಬಂದ ಸಂಸ್ಥೆ

ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘಗಳು ಆಧುನಿಕ ಕನ್ನಡ ನಾಡು–ನುಡಿ–ಸಾಹಿತ್ಯ ಪರಂಪರೆಯ ಎರಡು ಕಣ್ಣುಗಳು. ಇವುಗಳ ಮುಖ್ಯ ದೃಷ್ಟಿ ಕರ್ನಾಟಕದ

ಏಕೀಕರಣವೆಂಬುದೂ- ಅದು ಸಾಧಿತವಾಗಿರುವುದೂ ಈಗ ಇತಿಹಾಸ. ಆ ಕಾಲದ ಒತ್ತಾಸೆಯಿಂದ ನಾಡಿನ ಮಹನೀಯರು ಕಟ್ಟಿದ ಮಹತ್ವದ ಸಂಸ್ಥೆಗಳಿವು. ಶತಮಾನದ ಸಂಭ್ರಮದ ಅಂಚಿನಲ್ಲಿರುವ ಈ ಮಹಾನ್ ಸಮಸ್ಯೆಗಳು ಈ ವೇಳೆಗಾಗಲೇ ನಾಡಿನ ಸಾರ್ವಭೌಮ ಸಂಸ್ಥೆಗಳಾಗಿ ಬೆಳೆಯಬೇಕಾಗಿತ್ತು. ಆದರೆ ಜನತೆ- ಮುಖ್ಯವಾಗಿ ಸರಕಾರ ವ್ಯವಸ್ಥಿತವಾಗಿ ಅವನ್ನು ಬೆಳೆಸುವ ಬದಲು ಕಾಲಕ್ರಮೇಣ ಕಡೆಗಣಿಸುತ್ತ ಬಂದದ್ದು ಬಹಳ ಆಶ್ಚರ್ಯಕರವಾದ ಮತ್ತು ದುರದೃಷ್ಟಕರವಾದ ಸಂಗತಿ.

ಹೊಸ ಸಂಸ್ಥೆಗಳ ಉದಯ ಸಾಧನೆ

ಬದಲಾದ ಸನ್ನಿವೇಶಗಳಿಗನುಗುಣವಾಗಿ ಅವನ್ನು ಬಲಪಡಿಸುತ್ತ ಬಂದಿದ್ದರೆ- ಇಂದು ಅವು ಮೂಲೆಗುಂಪಾಗುವ ಸ್ಥಿತಿಗೆ ಬರುತ್ತಿರಲಿಲ್ಲ. ಅಲ್ಲಿ ಕಾರ್ಯಗತಗೊಳಿಸಬಹುದಾಗಿದ್ದ ಯೋಜನೆಗಳನ್ನು ಸರಕಾರ ಒಂದೊಂದಾಗಿ ತನ್ನ ಕಡೆಗೆ ವರ್ಗಾಯಿಸಿಕೊಳ್ಳುತ್ತ ಬಂದಿದ್ದರಿಂದ- ಹೊಸ ಹೊಸ ಹೆಸರಿನ ಸರಕಾರೀ ಸಂಸ್ಥೆಗಳು ಹುಟ್ಟಿಕೊಂಡಂತಾಯಿತೇ ಹೊರತು- ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳ ವಿಕಾಸ ಸಾಧ್ಯವಾಗಲಿಲ್ಲ. ಅಂದರೆ-ಸರಕಾರ ಹೊಸದಾಗಿ ಹುಟ್ಟುಹಾಕಿದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದ ಸಂಸ್ಥೆಗಳಲ್ಲಿ ಚಟುವಟಿಕೆಗಳು ಸರಕಾರೀಕರಣಗೊಂಡು ಜನದೂರವಾಗಿ ಕನ್ನಡ ಸಂಬಂಧವಾದ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯಲಾರದೆ ಹೋದವು. ಕೆಲವೇ ಆಯ್ದ ಲೇಖಕರ ಕೃತಿಗಳ ಪ್ರಕಟಣೆ, ಕೆಲವೇ ಬಗೆಯ ವಿಚಾರ ಸಂಕೀರ್ಣ, ಅಪೂರ್ಣ ಗಡಿವೀಕ್ಷಣೆ, ಕನ್ನಡ ಆಡಳಿತ ಭಾಷಾನೀತಿಯ ಅಸಮರ್ಪಕ ನಿರ್ವಹಣೆ, ಅನಿಯಂತ್ರಿತ ಪ್ರಶಸ್ತಿ- ಪುರಸ್ಕಾರ ಪ್ರದಾನ- ಇವಿಷ್ಟೆ ತಾನೆ ಇಲ್ಲಿ ನಡೆಯುತ್ತಿರುವ ಕೆಲಸಗಳು? ಈ ಯೋಜನೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ಹಂಚಿಕೊಟ್ಟು ಕನ್ನಡ ಜನತೆಯ ಕೈಗಳನ್ನು ಬಲಪಡಿಸಬಹು ದಾಗಿತ್ತು. ಅದರೆ ಹಾಗಾಗಲಿಲ್ಲ. ಈಗಲೂ ಕಾಲ ಮಿಂಚಿಲ್ಲ; ಕನ್ನಡದ ಪರಿಚಾರಿಕೆಯನ್ನು ಕೈಗೊಂಡಿರುವ ಸರಕಾರದ ಸಂಸ್ಥೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ತಂದರೆ ಹೇಗೆ ಎಂಬುದು ಚರ್ಚಾಸ್ಪದ ವಾಗಿರುವ ಪ್ರಮೇಯವೇ ಇರುವುದಿಲ್ಲ. ಈ ವಿಲೀನ ಪ್ರಕ್ರಿಯೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ತನ್ನ ತಾನೇ ಹೊಸ ಶಕ್ತಿ ಬಂದಂತಾಗುತ್ತದೆ. ಯೋಜನೆಗಳ ನಿರ್ಬಲೀಕರಣವೂ ತಪ್ಪುತ್ತದೆ.

ಅಧಿಕೃತ ಸಂಸ್ಥೆಗಳು ಮಾಡಬಹುದಾದ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಸಂಬಂಧವಾದ ಸುಧಾರಣೆಯ ಕೆಲಸ ಕಾರ್ಯಗಳನ್ನು ಸಾರ್ವಜನಿಕ ಕ್ರಿಯಾಶಕ್ತಿಗೆ ಒಳಪಡಿಸದೆ, ಸರಕಾರೀಕರಣ ಮಾಡುವುದು ಪ್ರಜಾಪ್ರಭುತ್ವಕ್ಕೇ ವಿರುದ್ಧವಾದ ರೀತಿ-ನೀತಿ. ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳಂತಹ ಶುದ್ಧ ಜನಪರ ಸಂಸ್ಥೆಗಳು ತಮ್ಮ ಜಾಯಮಾನದಿಂದಲೇ ಈ ಕನ್ನಡದ ಕಾರ್ಯಗಳನ್ನು ಎಷ್ಟು ನವೋನವ ಉತ್ಸಾಹದಿಂದಲೂ ಜನಸಮ್ಮತಿಯಿಂದಲೂ ನಡೆಸಬಹುದಾಗಿತ್ತೋ ಅದಕ್ಕೆ ಬದಲಾಗಿ ಅನಿರೀಕ್ಷಿತ ಬದಲಾವಣೆ ತಾಳಿ ಜನದೂರ ಕಾರ್ಯ ವೈಖರಿಗಳಿಗೆ ಒಳಗಾಗುವ ಅಪಾಯದಿಂದ ಪಾರಾಗಬಹುದಾಗಿತ್ತು.

ಸಾಹಿತ್ಯವನ್ನು ಭಾಷೆಯನ್ನು ಕುರಿತಂತೆ, ಗಡಿನಾಡಿನ ಜನಗಳ ದಿಕ್ಕು ದೆಶೆ ಕುರಿತಂತೆ, ಇಡಿಯಾಗಿ ಅಕ್ಕಪಕ್ಕದ ಭಾಷೆ ಪ್ರಾಂತ್ಯ ಸಂಬಂಧವಾಗಿ ಮಾಡಬಹುದಾದ ಪರಸ್ಪರ ಕಾರ್ಯಗಳು ಕಾಲಕಾಲಕ್ಕೆ ನಿರೀಕ್ಷಿತ ರೀತಿಯಲ್ಲಿ, ಪ್ರಮಾಣದಲ್ಲಿ ನಡೆಯದ ಹೋಗಿವೆ. ಈ ಎಲ್ಲಾ ಕೊರತೆಗಳಿಗೆ, ಅಪಾಯಗಳಿಗೆ ಇನ್ನಾದರೂ ಆಸ್ಪದ ಕೊಡದೆ, ಮೇಲೆ ಹೇಳಿದ ಸಂಗ ಸಂಸ್ಥೆಗಳಿಗೆ ಈ ಕಾರ್ಯಭಾರವನ್ನು ಧಾರೆಯೆರೆದು ಕೊಡುವುದು ಶುಭಕಾರ್ಯವಾಗಿವೆ ಆಗಿದೆ.

ವಾಸ್ತವವಾಗಿ ನಾವು ವಿಷಯಗಳ ಸಂಬಂಧವಾಗಿಯೇ ಖಾಸಗೀಕರಣ ಮತ್ತು ಉದಾರೀಕರಣ ತತ್ವಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಆಗ ಕನ್ನಡಿಗರು ಅಧಿಕೃತವಾಗಿ ತಮ್ಮ ಕನಸಿನ ಸಂಸ್ಥೆಗಳಾದ ಪರಿಷತ್ತು, ವಿದ್ಯಾವರ್ಧಕ ಸಂಘಗಳ ಮೂಲಕ ತಮ್ಮ ಕನ್ನಡನುಡಿ ಮತ್ತು ಕನ್ನಡ ಸಾಹಿತ್ಯದ ಜವಾಬ್ದಾರಿಗಳನ್ನು ತಾವೇ ನೇರವಾಗಿ ನಿರ್ವಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರಕಾರ ವ್ಯವಸಾಯ, ಕಂದಾಯ, ಅಬಕಾರಿ, ಲೋಕೋಪಯೋಗಿ ಮತ್ತಿತರ ವ್ಯಾವಹಾರಿಕ - ಆವಶ್ಯಕ ಕರ್ತವ್ಯಗಳಲ್ಲಿ ತೊಡಗಿರಲಿ. ಹೀಗಾದರೆ ಜನರ ಆಶೋತ್ತರಗಳನ್ನು, ಆವೇಶಗಳನ್ನು ಕನಸು ಮನಸುಗಳನ್ನು ನೋಯಿಸದೆ ನೆರವೇರಿಸಲು ಅನುವಾಗುತ್ತದೆ. ಸರಕಾರ ಪ್ರವೇಶ ಮಾಡಬಾರದಂತಹ, ದೂರನಿಂತು, ಗೌರವದಿಂದ ಪ್ರೋತ್ಸಾಹ ನೀಡಬೇಕಾದಂತಹ ರೀತಿ ಇದಾಗುವುದಿಲ್ಲವೆ. ಸಾಹಿತ್ಯವೆನ್ನುವುದು ಸರಕಾರದಿಂದ ನಿರ್ಣಯವಾಗುವಂಥದ್ದಲ್ಲ, ಅದು ತೀರ ಭಾವನಾತ್ಮಕವಾದ ವಿಚಾರ. ಇದನ್ನೆಲ್ಲ ನೇರವಾಗಿ ಜನತೆ ತನ್ನ ಸಂಘಸಂಸ್ಥೆಗಳ ಮೂಲಕ ತಾನೇ ನಿರ್ವಹಿಸಿಕೊಳ್ಳಬೇಕಾದ್ದು ಹಲವು ಧಾರ್ಮಿಕ ವಿಚಾರಗಳಿಗೆ ಇಂದೂ ಕೂಡ ಸರಕಾರ ಪ್ರವೇಶ ಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೇ ಇಂಥ ಭಾವನಾತ್ಮಕ ಆವೇಶಭರಿತ ವಿಷಯಗಳ ಗೊಡವೆಗೆ ಹೋಗದಿರುವುದು ಜನಕ್ಕೂ ಜನಪರ ಅಭಿವೃದ್ಧಿಗಾಗಿ ನಡೆಯುತ್ತಿರುವ ಸರಕಾರಗಳಿಗೂ ಶೋಭೆ ತರುವಂಥದ್ದು, ಈ ಕೆಲಸ ಅಂದರೆ- ಸಾಹಿತ್ಯ ಅಕಾಡೆಮಿ,

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ ಮತ್ತು ಸಂಸ್ಕೃತಿ ಇಲಾಖೆ- ಇವನ್ನೆಲ್ಲಾ ಸರಕಾರ **ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳಿಗೆ ವರ್ಗಾಯಿಸುವುದು ಅಗತ್ಯ** ಈ ಸಂಸ್ಥೆಗಳನ್ನು ಎರಡು ಸ್ವಾಯತ್ತ ವಿಶ್ವವಿದ್ಯಾನಿಲಯಗಳನ್ನಾಗಿ ಪರಿವರ್ತಿಸಲಿ. ಆಗ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಭಿವೃದ್ಧಿ ಇತೋಪ್ಯತಿಶಯವಾಗಿ ನಡೆಯುತ್ತದೆ. ಕಾಲಕ್ರಮದಲ್ಲಿ ಅವು ಸ್ವತಂತ್ರ ಜನತಾ ಸಂಸ್ಥೆಗಳಾಗಿ ಬೆಳೆದು ದೇಶ ವಿದೇಶ, ಇಡಿಯಾಗಿ ವಿಶ್ವದಲ್ಲಿ ಕನ್ನಡ ಭಾಷೆ- ಸಾಹಿತ್ಯ- ಸಂಸ್ಕೃತಿ ಪ್ರಸಾರ ಕಾರ್ಯಗಳನ್ನು ಕೈಗೊಳ್ಳಲು ಸಮರ್ಥವಾಗುತ್ತದೆ.

ನಾನು ಈ ವೇದಿಕೆಯಿಂದ ನನಗೆ ಅತ್ಯಂತ ಗೌರವ ಪಾತ್ರರದ ಕನ್ನಡ ಜನತೆಯನ್ನು ಈ ಸಂಬಂಧವಾಗಿ ಪ್ರಚೋದಿಸುತ್ತಿದ್ದೇನೆ; ಇರುವ, ಬರುವ ಸರಕಾರಗಳನ್ನು ಪ್ರೀತಿಯಿಂದಲೇ ಎಚ್ಚರಿಸುತ್ತಲೂ ಇದ್ದೇನೆ. ಪ್ರೀತಿಯ ಮಕ್ಕಳು ತಮ್ಮ ಖಾಸಾ ಜವಾಬ್ದಾರಿಗಳನ್ನು ನಿರ್ವಹಿಸಿಕೊಳ್ಳಲು ಉತ್ಸುಕರೂ ಸಮರ್ಥರೂ ಆಗಿರುವರು ಎಂದಾಗ ಯಜಮಾನರಂತಹ ಸರಕಾರಗಳು ಮೆಚ್ಚಿ ಅದಕ್ಕೆ ಪ್ರೋತ್ಸಾಹ ಕೊಡದಿದ್ದರೆ ಹೇಗೆ?

* * * *

ನಾನು ಹಿಂದೆ ಹೇಳಿದಂತೆ ಶಿವಶರಣರು ಹರಿದಾಸರು ತಮ್ಮ ಸಾಹಿತ್ಯದಿಂದ ಒಂದು ಸಾವಿರ ವರ್ಷಗಳ ಉದ್ದಕ್ಕೂ ಮಾಡಿಕೊಂಡು ಬಂದ ಸುಧಾರಣೆಯ ಕೆಲಸವನ್ನು ಒಟ್ಟಾರೆಯಾಗಿ ಈಗ ಸಾಹಿತಿಗಳು ಸಾಧಿಸಲಾಗದಿರುವುದಕ್ಕೆ ಕಾರಣವೇನು? ನಮಗೆ ಬಹಳ ಪೂಜ್ಯನಾದ ಸಂತನಾದ ಜೀವಿತಾದರ್ಶನದ ಪ್ರತೀಕರೂಪವಾದ ಸಾಹಿತಿ ಯಾರು ಎಂದರೆ - ಕುವೆಂಪು ಅವರೆಂದೂ ಬೇಂದ್ರೆಯವರೆಂದೂ ಕೈಬೆರಳೆಣಿಕೆಯಷ್ಟು ಜನಸಿಗಬಹುದು. ಆದರೆ ಈ ಕಲಿಗಾಲಕ್ಕೆ ಅದೂ ಸಾಲದು. ಮತ್ತು ಆಧುನಿಕ ಪಂಥಗಳು ಶರಣ-ಹರಿದಾಸ ಪಂಥಗಳಷ್ಟು ಸಾಮಾನ್ಯ ಜನತೆಯ ಮನಃಪರಿಪಾಕವನ್ನು ಕಾಲಾನುಗುಣವಾಗಿ ತಿದ್ದಬಲ್ಲಂಥ ಪಂಥಗಳಾಗಲಿಲ್ಲ. ಧರ್ಮದ ಹೆಸರಿನಲ್ಲಿ ಅಂದಿನ ಶರಣ-ದಾಸ ಪಂಥಗಳು ವೈರಾಗ್ಯದ ಹೆಸರಿನಲ್ಲಿ ಕಾಯಕದ ಹೆಸರಿನಲ್ಲಿ ಭಕ್ತಿಯ ಹೆಸರಿನಲ್ಲಿ ಏನೆಲ್ಲ ತ್ಯಾಗ ಮಾಡಿ ನಿಷ್ಠೆಯಿಂದ ಜನಸೇವೆಯಲ್ಲಿ ತೊಡಗಿದವೊ ಅಂತಹ ಸಾಹಿತ್ಯ ಸಮೂಹಗಳನ್ನೆ ಇಂದು ನಾವು ಕಾಣಲಾರೆವು. ಆದ್ದರಿಂದಲೇ ಇವತ್ತಿನವರ ಸಾಹಿತ್ಯ ರಚನೆಗಳು ಕೇವಲ ಶಬ್ದಾಡಂಬರವೆನಿಸಿ ಜನ ಅವುಗಳಿಂದ ಪ್ರೇರಿತರಾಗಲಿಲ್ಲ. ಅಂಥ ಪ್ರೇರಣೆ ಉಂಟುಮಾಡಲು ಇಂದು ಹೊಸದೊಂದು ಸಾಹಿತ್ಯಪಂಥ ಜಾತ್ಯತೀತವಾಗಿ ಸರ್ವಜನಪ್ರಿಯವಾಗಿ ಜಾಗತಿಕ ಆಗುಹೋಗುಗಳ ಹಿನ್ನೆಲೆಯಲ್ಲಿ ಸಂಭಾವಿತವೂ ಆಗಿ ಮೆರೆಯಬೇಕಾಗಿದೆ. ಮತ್ತು ಅದಕ್ಕೆ ಕೆಲವು ಸೃಜನಶೀಲ ಜೀವಗಳು ನಿಷ್ಠೆಯಿಂದ ಸಂಪೂರ್ಣವಾಗಿ ಕಾಯಾ-ವಾಚಾ-ಮನಸಾ ತೆತ್ತುಕೊಳ್ಳಬೇಕು. ಮನೆಯೊಳಗೆ ಒಳ್ಳೆಯ ಮಾತನಾಡಿ ಹೊರಗೆ ಹೋಗಿ ಹೆಂಡ ಕುಡಿದು ಬಂದರೆ ಏನಾಗುತ್ತದೆ?

ಸೃಜನಾತ್ಮಕ ಶಕ್ತಿಯ ಜನ ತಮ್ಮ ವಾಣಿಯಿಂದ ಅಂದರೆ ಸಾಹಿತ್ಯದಿಂದ ಜನತೆಯ ಗಮನವನ್ನು ತಮ್ಮತ್ತ ಸೆಳೆಯುವ ಅದಕ್ಕೂ ಹೆಚ್ಚಾಗಿ ತಮ್ಮಂತೆಯೆ ಪ್ರಗತಿಪರ ಕಾರ್ಯಕಲಾಪಗಳಲ್ಲಿ ತೊಡಗುವ ಸಂಕಲ್ಪವನ್ನೂ ಓದುಗರಲ್ಲಿ ಉಂಟು ಮಾಡಬೇಕು. ಮುಖ್ಯವಾಗಿ ಸಾಹಿತ್ಯ ಎನ್ನುವುದು ಒಂದು ಮಾನಸಿಕ ಸುಧಾರಣೆ. ಆ ಸುಧಾರಣೆ ಸಮಾಜದ ದೇಶದ ಉತ್ತಮಿಕೆಗೆ ಬೇಕಾದ ಕಾರ್ಯಕಲಾಪಗಳಲ್ಲಿ ಪ್ರಜೆಯನ್ನು ಪ್ರಕರ್ಷಕವಾಗಿ ತೊಡಗಿಸುವಂತಾಬೇಕು.

* * * *

ಕನ್ನಡ ದೇಶ–ಭಾಷೆ–ಸಂಸ್ಕೃತಿ–ಸಾಹಿತ್ಯ ಎಂದು ಕೊಚ್ಚಿಕೊಳ್ಳುತ್ತಿರುವ ಈ ಜನ – ಕನ್ನಡವನ್ನು ಮಾತನಾಡುವ ನಾವೆಲ್ಲ ಒಂದು ಜನಾಂಗ; ಎಲ್ಲಾ ನಮ್ಮವರು; ನಮ್ಮಿಂದ ಎಲ್ಲರಿಗೂ ಮರ್ಯಾದೆ ಸಲ್ಲಬೇಕೆಂಬ ಪ್ರಾಥಮಿಕ ಪಾಠವನ್ನೇ ಕಲಿತಿಲ್ಲ. ಕನ್ನಡ ಮಾತನಾಡುವ ಜನರನ್ನು – ಅದು, ಇದು ಎಂದು ಹೆಸರಿಟ್ಟು, ಬಹಿಷ್ಕರಿಸಿ, ಅವರನ್ನು ಊರಿಂದ ಹೊರಗಿಟ್ಟು, ಅವರಿಗೆ ಮನೆಯಿಲ್ಲದೆ ಅನ್ನವಿಲ್ಲದೆ ವಿದ್ಯೆಯಿಲ್ಲದೆ ಉದ್ಯೋಗವಿಲ್ಲದೆ ಅತ್ಯಂತ ಶೋಚನೀಯ ಸ್ಥಿತಿಯಲ್ಲಿಟ್ಟಿರುವ ಈ ಕನ್ನಡಿಗರೆಂಬ ನಾವು ಕನ್ನಡಾಂಬೆಗೆ ಕನ್ನಡ ಸರಸ್ವತಿಗೆ ಕನ್ನಡ ಭುವನೇಶ್ವರಿಗೆ ಅವಮಾನ ಮಾಡುತ್ತಿರುವಂತಾಗಿಲ್ಲವೇನು? ಇದು ಯಾರ ಮನಸ್ಸಿಗೂ ಬರುತ್ತಿಲ್ಲವೇನು? ತಮ್ಮಷ್ಟಕ್ಕೆ ತಾವು ಚಳಿಗಾಲದಲ್ಲಿ ಕಂಬಳಿ ಹೊದ್ದುಕೊಂಡವರಂತೆ ಬೆಚ್ಚಗೆ ಕುಳಿತಿರುವರಲ್ಲ? ಹೊಟ್ಟೆಗಿಲ್ಲದವನು ಸಾಯುತ್ತಿರುವಾಗ ಔತಣವನ್ನು ಉಂಡ ಉಂಡಾಡಿಯಂತೆ ದಲಿತರಲ್ಲದ ಜನ ನಿರಪರಾಧಿಗಳೆಂಬಂತೆ ಎಗ್ಗು–ಸಿಗ್ಗಿಲ್ಲದೆ ತಿರುಗುತ್ತಿರುವುದು ಒಂದು ಸಾಮಾಜಿಕ ಅಪಹಾಸ್ಯವಾಗಿದೆ. ಇದರಿಂದ ಪಾರಾಗುವ ಇಚ್ಛೆ ಮೇಲ್ವರ್ಗದವರಿಗೆ ಇರುವುದೇ ಆದರೆ ಅವರು ಈ ಅವಮಾನಕರವಾದ ಸಂದರ್ಭದಿಂದ ಮೊದಲು ಹೊರಬರಬೇಕು. ಈ ಸಂಬಂಧವಾಗಿಯೇ ನಾವು ಮಾಡಬಹುದಾದ ಮೊಟ್ಟಮೊದಲ ಅಡಿಪಾಯದ ರೀತಿಯ ಕಾರ್ಯಭಾರವೆಂದರೆ – ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಮಕ್ಕಳಿಗೆ ಶಿಶುವಿಹಾರದಿಂದ ಮೊದಲುಗೊಂಡು ರಾಜ್ಯಾಂಗದತ್ತವಾಗಿ ಒತ್ತಾಯ ಮಾಡಿರುವ ಹತ್ತನೆಯ ತರಗತಿಯವರೆಗೆ ಉಚಿತ – ಕಡ್ಡಾಯ– ಅತ್ಯುತ್ತಮ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈ ನಿರ್ಗತಿಕ ವರ್ಗದ ತಂದೆ–ತಾಯಿಯವರು ಸ್ವತಃ ವಿದ್ಯಾವಂತರಾಗಿರುವುದಿಲ್ಲವಾಗಿ ವಾಸಿಸಲು ಯೋಗ್ಯವಾದ ಮನೆಗಳೂ ಇಲ್ಲದೆ, ಶುಚಿಯಾದ ಕೇರಿಯೂ ಇರದೆ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಅವರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಯಾವುದಾದರೂ ಶಾಲೆಗೆ ಕಳಿಸುತ್ತಾರೆ ಎಂದರೆ, ಅದು ಆಗದ ಮಾತು. ಅವರನ್ನು ಒತ್ತಾಯ ಮಾಡುವುದೆಂದರೆ – ತಿನ್ನಲು ಹುಲ್ಲು ಇಲ್ಲದ ಬಡಕಲು ಕುದುರೆಯನ್ನು ಗಾಡಿಗೆ ಕಟ್ಟಿ ಚಾಟಿಯಲ್ಲಿ ಹೊಡೆದಂತೆ ಅವಿವೇಕ, ಅನಾಗರೀಕ, ಆದ್ದರಿಂದ ಸರಕಾರ ಪ್ರತಿವರ್ಷ ಅಲ್ಲ, ಪ್ರತಿನಿತ್ಯ ಹೆಸರಿಸಲು ನಾಚುವ

ಎಷ್ಟೋ 'ಯೋಜನೆ'ಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಅಪವ್ಯಯ ಎನ್ನುವುದು ಬೇಡ – ವ್ಯಯ ಮಾಡುತ್ತಿದೆ. ಅದಷ್ಟನ್ನೂ ವಿವೇಕದಿಂದ ಇದೇ ಸರಕಾರ ಆ ವರ್ಗದ ಜನರ ಮಕ್ಕಳೆಲ್ಲ. ಸುಸೂತ್ರವಾಗಿ ವಸತಿ–ಅನ್ನ–ಬಟ್ಟೆ–ವಿದ್ಯೆ– ಈ ಒಂದರಿಂದಲೂ ವಂಚಿತರಾಗದಂತೆ ಬೆಳೆಸಲು ಇರುವ ಮಾರ್ಗ ಒಂದೇ – ಅದು ಪ್ರತಿ ತಾಲ್ಲೂಕು ಮಟ್ಟದಲ್ಲಿ ಅವರಿಗೆ ಪ್ರತ್ಯೇಕವಾದ ಸುಸಜ್ಜಿತ ವಸತಿಶಾಲೆಗಳನ್ನು ತೆರೆದು ತರಬೇತಿ ಪಡೆದ ಉಪಾಧ್ಯಾಯರನ್ನು ನೇಮಿಸಿ–ಶಿಶುವಿಹಾರ, ಪ್ರಾಥಮಿಕ, ಪ್ರೌಢ ಎಂಬ ಮೂರೂ ಹಂತಗಳಲ್ಲಿ ಆ ಮಗುವಿಗೆ ಶಿಕ್ಷಣ ಕೊಡುವಂತಾಗಬೇಕು. ಈ ಕೆಲಸವನ್ನು ಮೊದಲು ಐದು ವರ್ಷ ಈ ಸರಕಾರ ಮಾಡಲಿ. ಅನಂತರ ಇದೇ ಸರಕಾರ ಆಡಳಿತಕ್ಕೆ ಬರುವುದು ಖಚಿತ. ಆ ಐದು ವರ್ಷವೂ ಆ ಸರ್ಕಾರ ಇದೇ ರೀತಿ ಅನಾಥರಕ್ಷಕವಾಗಿ ಮುಂದುವರಿದರೆ ಆಚಂದ್ರಾರ್ಕವಾಗಿ ಆ ಸರಕಾರವೇ ಆಡಳಿತದಲ್ಲಿ ಇರುತ್ತದೆ. ಈ ಮಾತು ಸರಕಾರಕ್ಕೂ ಇರಲಿ. ಜನರ ಬುದ್ಧಿಗೂ ಬರುವಂತಾಗಲಿ. ಈ ಭಾಗ್ಯೋದಯದ ಸಾರಥ್ಯವನ್ನು ನಮ್ಮ ಶ್ರೀ ಯಡಿಯೂರಪ್ಪನವರೇ ನಿರ್ವಹಿಸುವಂತಾದರೆ ನನಗಷ್ಟೆ ಅಲ್ಲ, ಇಲ್ಲಿರುವವರಿಗಷ್ಟೆ ಅಲ್ಲ, ಕರ್ನಾಟಕದಲ್ಲಿ, ಹೊರನಾಡಿನಲ್ಲಿರುವ ಕೋಟ್ಯಂತ ಕನ್ನಡಿಗರಿಗೆ ಆನಂದವಾದೀತು.

ಜೈ ಕರ್ನಾಟಕ, ಜೈ ಹಿಂದ್

◆



ಡಾ ॥ ಗೀತಾ ನಾಗಭೂಷಣ

೭೬ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೧೯,೨೦,೨೧ ಫೆಬ್ರವರಿ ೨೦೧೦ ಸ್ಥಳ : ಗದಗ

ಪರಿಚಯ

ಡಾ ॥ ಗೀತಾ ನಾಗಭೂಷಣ

ಶಿಕ್ಷಣ : ಕನ್ನಡದ ಹೆಸರಾಂತ ದಲಿತ ಲೇಖಕಿಯರಲ್ಲಿ ಒಬ್ಬರಾದ ಶ್ರೀಮತಿ ಗೀತಾ ನಾಗಭೂಷಣ ಅವರು ಗುಲ್ಬರ್ಗದಲ್ಲಿ ಬಡಕುಟುಂಬ ದಲ್ಲಿ ಶಾಂತಪ್ಪ-ಶರಣಮ್ಮ ದಂಪತಿಗಳಿಗೆ ೨೫-೩-೧೯೪೨ರಲ್ಲಿ ಜನಿಸಿದರು. ಇವರು ಮೆಟ್ರಿಕ್ ಮಾಡಿದ ಮೇಲೆ ಅನಂತರ ಕೆಲವು ಕಾಲ ಕಲೆಕ್ಟರ್ ಕಚೇರಿಯಲ್ಲಿ ಉದ್ಯೋಗ ಮಾಡಿ ಬೆಳಗಿನ ಶಾಲೆಯಲ್ಲಿ ಓದಿ ಪದವಿ ಪಡೆದರು. ಸಂಜೆ ಕಾಲೇಜಿನಲ್ಲಿ ಓದಿ ಬಿಎಡ್ ಮತ್ತು ಎಂಫ ಪದವಿ ಗಳಿಸಿದರು.

ಉದ್ಯೋಗ : ಓದುವಾಗಲೇ ಉದ್ಯೋಗ ಮಾಡುತ್ತಿದ್ದ ಇವರು ಎಂ.ಎ. ಪದವಿ ಗಳಿಸಿದನಂತರ ಶ್ರೀನಗರೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ, ಪ್ರಾಧ್ಯಾಪಕಿಯಾಗಿ ಪ್ರಾಚಾರ್ಯರಾಗಿ ೩೦ ವರ್ಷಗಳ ಸೇವೆಸಲ್ಲಿಸಿ ನಿವೃತ್ತರಾದರು.

ಮನ್ನಣೆ : 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಇವರು ದಾನ ಚಿಂತಾಮಣಿ ಪ್ರಶಸ್ತಿ (೨೦೦೨) ಕರ್ನಾಟಕ ರಾಜ್ಯ ಪ್ರಶಸ್ತಿ (೧೯೯೮) ನಾಡೋಜ ಪ್ರಶಸ್ತಿ (೨೦೦೪) ಗುಲ್ಬರ್ಗ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಪರಿಷತ್ತಿನಿಂದ ಮಲ್ಲಿಕಾ ಪ್ರಶಸ್ತಿ ಪಡೆದಿದ್ದಾರೆ. ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಹೆಗ್ಗಳಿಕೆ ಇವರದು.

ಸಾಹಿತ್ಯ ಸೇವೆ : ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೆಲವು ಮುಖ್ಯ ಕೃತಿಗಳು ಹೀಗಿವೆ :

ಹಸಿಮಾಂಸ ಮತ್ತು ಹದ್ದುಗಳು (ಕಾದಂಬರಿ) ಬದುಕು (ಕಾದಂಬರಿ), ಅವ್ವ ಮತ್ತು ಇತರ ಕಥೆಗಳು (ಕಥಾಸಂಗ್ರಹ), ಚೈತನ್ಯದ ಹಾಡು, ದುರುಗಮುರಗಿಯವರ ಸಂಸ್ಕೃತಿ (ಸಂಶೋಧನೆ) ಜ್ವಲಂತ (ಕಥಾಸಂಗ್ರಹ), ಜೋಗಿಣಿ (ನಾಟಕ) ಇತ್ಯಾದಿ.

ಡಾ ॥ ಗೀತಾ ನಾಗಭೂಷಣ

೭೬ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

೨೦೧೦

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳೆ ಭೂಮಿ ತಾಯಿ
ಎಳ್ಳು ಜೀರಿಗೆ ಬೆಳೆಯೋಳೆ ಭೂಮಿ
ತಾಯಿಯ ಎದ್ದೊಂದು ಘಳಿಗೆ ನೆನೆದೇನ.

ಬೆಳ್ಳಂಬೆಳಗಿನ ಎಳ್ಳು, ಔಷಧಿಯುಕ್ತ ಜೀರಿಗೆಯಂಥ ಅಪರೂಪದ ಧಾನ್ಯ ಬೆಳೆಯುವ ಕನ್ನಡದ ಈ ಭೂಮಿಗೆ ವಂದಿಸುವುದು ಎಂಥ ಭಾಗ್ಯದ ಕ್ಷಣವಲ್ಲವೆ? ಭೂಮಿ ತಾಯ್ತನದ ಸಂಕೇತ. ತಾಯಿ ಹೆಣ್ತನದ ಗೌರವ, ಹೆಣ್ಣು ಎಂದರೆ ಅವಳು ಮಗಳು, ತಂಗಿ, ಅಕ್ಕ, ಚಿಕ್ಕಮ್ಮ, ಅತ್ತೆ, ಸೊಸೆ, ಗೆಳತಿ ಮೇಲಾಗಿ "ಅವ್ವ" ಏನೆಲ್ಲವೂ ಮನೆಯ ಮಗಳು. ನಿಮ್ಮ ಮನೆಯ ಮಗಳಾದ ನನಗೆ ನುಡಿಹಬ್ಬದ ಅಧ್ಯಕ್ಷೀಯ ಪಟ್ಟ ಕಟ್ಟಿದೀರಿ. ನಾನಾದರೂ ಈ ಸಾಹಿತ್ಯಕ ಅಗ್ರಗಣ್ಯ ಪಟ್ಟವನ್ನು ಸಮಸ್ತ ಕನ್ನಡದ ಮಹಿಳಾ ಲೋಕಕ್ಕೆ ಸಂದ ಗೌರವವಾಗಿ ಸ್ವೀಕರಿಸುತ್ತೇನೆ. ನಿಮ್ಮ ಮಂಡೆಗೆ ಹೂವು ತಂದ ಅಗ್ಗಳಿಕೆಯ ಹರಕೆಯ ಸಂಕೇತವಾಗಿ ಇದಿರುಗೊಳ್ಳುತ್ತೇನೆ. ವಿಶ್ವವನ್ನು ಒಳಗೊಂಡಂತೆ ವಿಶಾಲ ಕನ್ನಡಮೆನಿಪ್ಪ ನಾಡೊಳು ಪಸರಿಸಿದ ಕುಲಕೋಟಿ ಬಾಂಧವರೇ ಶರಣು.

ಹಲಗೆ ಬಳಪ ಪಿಡಿಯದ, ಪದವಿಟ್ಟಳುಪದ, ಪ್ರಚಂಡ ಪ್ರತ್ಯುತ್ಪನ್ನಮತಿ ಕವಿ ಕುಮಾರವ್ಯಾಸನ ಈ ನೆಲ ಯಾವುದೇ ಕನ್ನಡಿಗರಿಗಾದರೂ ಪುಲಕಿತಗೊಳಿಸದೆ ಇರಲಾರದು.

ಕಲಿಯುಗವನ್ನು ದ್ವಾಪರಗೊಳಿಸುವ ಕುಮಾರವ್ಯಾಸನ "ಗದಗಿ"ನ ಈ ನೆಲದಿಂದ ಕನ್ನಡನಾಡು – ನುಡಿ, ಬದುಕು – ಬವಣೆ, ಚರಿತ್ರೆ, ವರ್ತಮಾನ ಕುರಿತು ಚಿಂತನೆ ಹರಿಸಲು ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿಗೂ, ಪ್ರಸ್ತುತ ಸಮ್ಮೇಳನದ ಸ್ವಾಗತ ಸಮಿತಿಯ ಸರ್ವರಿಗೂ ತುಂಬು ಹೃದಯದ ಕೃತಜ್ಞತೆಗಳು.

ಅಕ್ಷರದಲಭ್ಯಾಸಮಾಡಿ ಬರೆವ ತೊಡೆವ ಪರಿಯಿನ್ನೆಂತೊ?
ಸ್ವರೂಪವೆಂಬುದಾವುದು ನಿರೂಪವೆಂಬುದಾವುದು ಅರಿಯರಾಗಿ
ಆದಿ ನಿರಾಳ ಮಧ್ಯ ನಿರಾಳ ಊರ್ಧ್ವ ನಿರಾಳ ಗುಹೇಶ್ವರ.

ಅಲ್ಲಮನ ಈ ವಚನವು ಅಕ್ಷರದ ಮೂಲಕ ತೆರೆದುಕೊಳ್ಳುವ ಪ್ರಪಂಚದ ಮಿತಿಯನ್ನು ಕುರಿತು ಮಾತಾಡುತ್ತದೆ. ಮಾನವ ಸಮುದಾಯ. ಆಕಾರ ತಳೆದು ಎಷ್ಟೋ ವರುಷ ಗತಿಸಿದ ನಂತರ ಅಕ್ಷರವೆಂಬ ಧ್ವನಿ ಸಂಕೇತವನ್ನು ರೂಢಿಸಿಕೊಂಡಿದೆ.

ಅಂದರೆ ಅಕ್ಷರ ಸಂಕೇತ, ಆ ಮೂಲಕ ಹದಗೊಂಡ ಭಾಷೆ ಎಂಬುದು ತೀರ ಇತ್ತೀಚಿನ ಅನ್ವೇಷಣೆಯಾಗಿದೆ. ಮೌಖಿಕ ಭಾಷೆಯು ಲಿಪಿ ಸಂಕೇತತಾಳಿ, ಲಿಪಿಯಲ್ಲಿ ಭಾವ - ಭಾವನೆಗಳನ್ನು ಹಿಡಿದಿಡಿರುವ ಕಾಯಕ ಪ್ರಾರಂಭವಾದದ್ದಂತೂ ಮೊನ್ನೆ ಮೊನ್ನಿನ ವಿದ್ಯಮಾನವೇ ಹೌದು. ಇದರರ್ಥ ಅಕ್ಷರದ ವ್ಯವಹಾರ ಸುರುವಿಟ್ಟುಕೊಳ್ಳುವ ಮೊದಲಿನಿಂದಲೇ ಬದುಕು ಅಸ್ತಿತ್ವದಲ್ಲಿತ್ತು. ಭೂಮಿಯ ಮೇಲೆ ಮಾನವ ಸಮುದಾಯ ಸ್ಥಾಯಿಯಾದಂದಿನಿಂದಲೂ "ಬದುಕೆಂಬ" ಪರಿಕಲ್ಪನೆ ಘನೀಭವಿಸುತ್ತಲೆ ಸಾಗಿದೆ. ಇಂಥ ಆದಿಮ ಮತ್ತು ಅನನ್ಯವಾದ "ಬದುಕನ್ನು" ಅಕ್ಷರದಲ್ಲಿ ಹಿಡಿದಿಡುವ ಸಾಹಸವು ಅಕಾರಣವಾದುದೇನಲ್ಲ. ಆದಾಗ್ಯೂ ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸಿದಂತೆಲ್ಲ ಬದುಕು ಬಿಡಿಸಿಕೊಂಡು ಓಡುವ ಪರಿ ಇದೆಯಲ್ಲ. ಇದು ಅಲ್ಲಮನನ್ನು ಚಿಂತೆಗೀಡು ಮಾಡಿದಂತಿದೆ. ಅಂತೆಯೇ ನನಗೂ ನಿಮ್ಮೆಲ್ಲರಿಗೂ.

ಬದುಕಿನ ಈ ಭಿತ್ತಿಯನ್ನು, ಅದರ ವಿಶ್ವತೋರೂಹಾದ ಸಂಗತಿಯನ್ನು ಕುರಿತು ಪ್ರಭು ಆದಿ ನಿರಾಳ, ಮಧ್ಯವು ನಿರಾಳ, ಊರ್ಧ್ವವು ನಿರಾಳ ಎಂದು ಉದ್ಗರಿಸುತ್ತಾನೆ. ಬಾಳಿನ ವಿರಾಡ್ರೂಪ ಕಂಡು ಅಲ್ಲಮನಂಥ ಅಲ್ಲಮನೇ ಗಾಬರಿಯಾಗಿರಬೇಕಾದರೆ ಸಾಹಿತ್ಯವೆಂಬ ಪುಟ್ಟ ಉಪಲಬ್ಧಿ ಹಿಡಿದು ಹೊರಟಿರುವ ನಮ್ಮಂಥವರ ಪಾಡು ಏನಾಗಿರಬೇಡ ಹೇಳಿ?

ಬಂಧುಗಳೆ, ಒಟ್ಟಾರೆ ಸಾಹಿತ್ಯಕ್ಕಿಂತ "ಬದುಕು" ಬಹು ದೊಡ್ಡದು ತಾತ್ವಿಕವಾಗಿ ಬದುಕು ಎಷ್ಟು ದೊಡ್ಡದೋ ವಾಸ್ತವವಾಗಿ ಅದು ಅಷ್ಟೇ ಸಂಘರ್ಷಮಯವಾದದ್ದೂ ಹೌದು. ಸಂಘರ್ಷಮಯವಾದ ಬದುಕಿನೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳ ಬಯಸುವ ಸಾಹಿತ್ಯ ಸೃಷ್ಟಿಯು ಕೂಡಾ ಸೃಜನಶೀಲ ಸಂಘರ್ಷವಲ್ಲದೆ ಮತ್ತೇನೂ ಅಲ್ಲ. ಆದರೆ ಸೃಜನಶೀಲ ಸಂಘರ್ಷವು ಉಳಿದೆಲ್ಲ ಸಂಘಷಕ್ಕಿಂತ ಹೆಚ್ಚು ಅಪ್ಯಾಯಮಾನವೂ ಮೋಹಕವೂ ಆಗಿರುತ್ತದೆ. ಸಾಹಿತ್ಯದ ಈ ಮೋಹಕ ಗುಣವೇ ಮತ್ತೆ ಮತ್ತೆ ಇಂಥ. ಸಮ್ಮೇಳನಗಳನ್ನು, ಅಕ್ಷರ ಜಾತ್ರೆಗಳನ್ನು, ನುಡಿಹಬ್ಬಗಳನ್ನು ಹಮ್ಮಿಕೊಳ್ಳುವಂತೆ ಮಾಡುತ್ತದೆ. ಸಾಹಿತ್ಯದೊಂದಿಗಿನ ಬಿಡಿಸಿಕೊಳ್ಳಲಾಗ ಮೋಹಕತೆಯು ನನ್ನನ್ನು. ಅಂದರೆ ಚಾರಿತ್ರಿಕವಾಗಿ ಹಿಂದುಳಿದ ಪ್ರದೇಶವೆನಿಸಿ ಕೊಂಡಿರುವ ಹೈದ್ರಾಬಾದ ಕರ್ನಾಟಕದ ಕಗ್ಗ ಹಳ್ಳಿಯಾದ ಸಾವಳಿಗಿಯಿಂದ, ಅದೂ ಸಾಮಾನ್ಯ ವರ್ಗದಿಂದ ಬಂದ ಸಾಮಾನ್ಯ ಮಹಿಳೆಯೊಬ್ಬಳಾದ ನನ್ನನ್ನು "ಇಳೆಯ ಜಾಣರು ಮೆಚ್ಚುವಂತೆ ಕೃಷ್ಣಕಥೆಯನ್ನು ತಿಳಿಯ ಹೇಳಿದ" ನಾರಾಯಣಪ್ಪನ ಸನ್ನಿಧಿಗೆ ಎಳೆದು ತಂದಿದೆ. ಕರ್ನಾಟಕದ ಶರಣ ಪರಂಪರೆಯ ಮಠಗಳ ನಡುವೆ ವೈಚಾರಿಕ ಮಠವೆಂದೇ ಕರೆಸಿಕೊಂಡಿರುವ ತೋಂಟದಾರ್ಯರ ಫೌಳಿಯವರೆಗೆ ಮಹಿಳೆಯೊಬ್ಬಳು ಸವೆಸಿದ ಸಾಹಿತ್ಯಿಕ ದಾರಿಯು ಕನ್ನಡ ಸಂಸ್ಕೃತಿಯ ವೈಶಿಷ್ಟ್ಯವೆಂದೇ ನನಗೆ ಅನಿಸಿದೆ. ಏಕೆಂದರೆ ಎರಡು ಸಾವಿರ ವರುಷಕ್ಕೂ ಮಿಕ್ಕ ಪರಂಪರೆ ಹೊಂದಿರುವ ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಯನ್ನು ಎಷ್ಟು ಕೊಂಡಾಡಿದರೂ

ಒಟ್ಟು ಸಾಹಿತ್ಯದಲ್ಲಿ ಮಹಿಳೆಯರ ಚಿತ್ರಣ ಮತ್ತು ಸಾಹಿತಿಯಾಗಿ ಮಹಿಳೆಯ ಪಾಲುದಾರಿಕೆ ನಗಣ್ಯವೇ ಸರಿ.

ತೊಂಬತ್ತು ವರ್ಷ ಅಂದರೆ ಹತ್ತಿರ ಹತ್ತಿರವೆಂದರೂ ಒಂದು ಶತಮಾನ ಗತಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಗೌರವಾನ್ವಿತ ಸಂಸ್ಥೆಯಲ್ಲಿ ಅದು ನಡೆಸಿಕೊಂಡು ಬಂದಿರುವ ಎಪ್ಪತ್ತಾರು ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಸಂದ ಪಾಲು ಎಷ್ಟು? ಕೇವಲ ಮೂರು ಈ ಹೊತ್ತು ನಾನು ನಾಲ್ಕನೆಯವಳು. ಸುದೀರ್ಘ ಸಾಹಿತ್ಯಕ ನಡೆಯಲ್ಲಿ ನನ್ನನ್ನು ನಾಲ್ಕನೆಯವಳಾಗಿ ಗುರುತಿಸಿರುವುದಕ್ಕೆ ಅಪಾರ ಖುಶಿ ಇದೆ. ಲಿಂಗಾತೀತ ನೆಲೆಯಲ್ಲಿಯೇ ನನ್ನನ್ನು ಗಣಿಸಿರುವ ಸಾಧ್ಯತೆಯ ಬಗೆಗೆ ಹೆಮ್ಮೆಯಿದೆಯಾದರೂ ಒಟ್ಟು ಮಹಿಳಾ ಸಮುದಾಯದ ಪ್ರತಿನಿಧಿತ್ವವನ್ನು ಇದಿರುಗೊಳಿಸಿಕೊಂಡಾಗ ಖಂಡಿತ ಒಂದು ನಿಟ್ಟುಸಿರು ಹೊರಬರದೆ ಇರದು.

ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ (ಈಗ ಇಲ್ಲ) ಮಹಿಳೆಯರು ಸಾಹಿತ್ಯ ಸೃಷ್ಟಿಯಂಥ ಅನನ್ಯ ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಗೈರು ಹಾಜರಾದದ್ದು ಏಕೆ? ಹೆಣ್ಣೆಂಬ ಜೀವ ಭಾವದ ಪರಿಧಿಯೆಷ್ಟು? ಸೀಮಿತ ಪರಿಧಿಯನ್ನು ಸ್ಥಗಿತಗೊಳಿಸಿದವರು ಯಾರೂ? ಅನ್ಯ ನಿರ್ಮಿತ ಪರಧಿಗಳನ್ನು ದಾಟಿ ಬರದಂತೆ ಅವಳ ಕೈಕಾಲುಗಳಿಗೆ ಬಂಧನದ ಬೇಡಿ ಏಕೆ ತೊಡಿಸಲಾಯಿತು? ಒಂದು ಜೀವವನ್ನೇ ಹೊರಹಾಕಬಲ್ಲಂಥ ಸೃಷ್ಟಿಯ ಅದ್ಭುತ ಮತ್ತು ರಿಸ್ಕಿನ ಕಲಾಪಗಳಲ್ಲಿ ತೊಡಗುವ ಅವಳ ಆ ಅಸೀಮ ಸಾಮರ್ಥ್ಯವನ್ನು ಯಾರಿಗಾದರೂ ನಿಯಂತ್ರಿಸಲು ಅದು ಹೇಗೆ ಸಾಧ್ಯವಾಯಿತು? ಎಂಬ ಪ್ರಶ್ನೆಗಳು ಪ್ರಜ್ಞಾವಂತರೆಲ್ಲರಿಗೂ ಕಾಡಿರಲಿಕ್ಕು ಸಾಕು. ಈ ತಥಾಕಥಿತ ಚರಿತ್ರೆಯ ಹಿಂದೆ ಲಿಂಗ ತಾರತಮ್ಯದ ದೊಡ್ಡ ಪುರಾಣವೆ ಇದೆ. ಅದೇನೆ ಇರಲಿ, ಶತಮಾನಗಳ ಲಿಂಗಭೇದ ನೀತಿಯ ತಾತ್ವಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳನ್ನು ಆಧುನಿಕ ಸ್ತ್ರೀಲೋಕ ನಿಚ್ಚಳಗೊಳಿಸಿಕೊಂಡಿದೆ. ಲಿಂಗ ತಾರತಮ್ಯದ ಹಿಂದಿರುವ ದೃಷ್ಟಿ – ಧೋರಣೆಯನ್ನು ಬದಲಿಸುವ ನಿಟ್ಟಿನಲ್ಲಿ ಸಮಕಾಲೀನ ಸ್ತ್ರೀ ಸಮುದಾಯ ಸಂಚಲನಗೊಳ್ಳುತ್ತಿದೆ ಎಂಬುದೆ ಸಮಾಧಾನ ಸಂಗತಿ. ಅಷ್ಟಕ್ಕೂ ನಾವು ನೀವೆಲ್ಲರೂ ವ್ಯವಸ್ಥೆಯ ಬಲಿಪಶುಗಳೇ ಅಲ್ಲವೇ? ಸನಾತನ ವ್ಯವಸ್ಥೆಯ ಆಳದ ಬೇರುಗಳನ್ನು ಕಿತ್ತೊಗೆಯಲು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ಸಹಸ್ರಮಾನದಷ್ಟು ಹಿಂದೆಯೇ ಅಕ್ಕಮಹಾದೇವಿಯಂಥ ದಿಟ್ಟ ಮಹಿಳೆ ಟೊಂಕ ಕಟ್ಟಿ ನಿಂತಳಲ್ಲ. ಆ ವಿದ್ಯಮಾನವೇ ಮಹಿಳಾ ಲೋಕದ ಮುಕ್ಕಾಗದ ಸ್ವಾಭಿಮಾನದ ಸಂಗತಿಯಾಗಿ ಇವತ್ತಿಗೂ ನಿಂತಿದೆ. ಅಕ್ಕನೊಟ್ಟಿಗೆ ಕಾಣಿಸಿಕೊಂಡ ಸತ್ಯಕ್ಕ, ಸೂಳೆ ಸಂಕವ್ವೆ, ಗೊಗ್ಗವ್ವೆ, ರೆಮ್ಮವ್ವೆಯಂಥ ದಲಿತ ವಚನಕಾರ್ತಿಯರು ಎತ್ತಿದ ಪ್ರಶ್ನೆಗಳು ಇವತ್ತಿಗೂ ವ್ಯವಸ್ಥೆಗೆ ನುಂಗಲಾರದ ತುತ್ತಾಗಿಯೇ ಪರಿಣಮಿಸಿವೆ. ಈ ಹೊತ್ತು ನಾನು ಅಖಂಡ ಕರ್ನಾಟಕದ ಮತ್ತು ಸುದೀರ್ಘ ಕನ್ನಡ ಸಾಹಿತ್ಯದ ಲಿಂಗಾತೀತ ಪ್ರತಿನಿಧಿಯಾಗಿಯೇ ಈ ಸ್ಥಾನವನ್ನು

ನಿಭಾಯಿಸಬೇಕಾದ ಎಚ್ಚರವಿದ್ದಾಗ್ಯೂ, ನಾನು ನಡೆದು ಬಂದ ದಾರಿಯು ನನ್ನನ್ನು ಈ ಮೇಲಿನ ಕೆಲವು ಸ್ತ್ರೀಪರ ಮಾತುಗಳನ್ನಾಡಲು ಸತಾಯಿಸಿದೆ.

ಸಂಘರ್ಷ ಮತ್ತು ಕನ್ನಡ ಸಾಹಿತ್ಯ

ಈವರೆಗೆ ನಡೆದು ಬಂದ ಬಹುತೇಕ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ಒಟ್ಟು ಕನ್ನಡ ಸಾಹಿತ್ಯದ ಪರಂಪರೆ ಪ್ರಯೋಗ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದೆ. ಕೆಲವೊಮ್ಮೆಯಂತೂ ತೀರ ಚರ್ವಿತ ಚರ್ವಣ ಎನ್ನುವಷ್ಟು ಬಾರಿ ಪ್ರಸ್ತಾಪಿಸಲಾಗಿದೆ. ನಾನಂತೂ ಅಖಂಡ ಕನ್ನಡ ಸಾಹಿತ್ಯವನ್ನು ಆಯಾ ಕಾಲಘಟ್ಟದ ಸೃಜನಶೀಲ ಸಂಘರ್ಷದ ಮೊತ್ತವಾಗಿಯೇ ಗ್ರಹಿಸುತ್ತೇನೆ. ಹಲ್ಮಿಡಿಶಾಸನ ಪೂರ್ವಘಟ್ಟದ ಚಿತ್ತಾಣ ಬೆದಂಡೆಯಂಥ ನಾಡವರ ನುಡಿಗಟ್ಟು ರೂಪಗಳಿಂದ ಹಿಡಿದು ಇವತ್ತಿನ ಆಧುನಿಕೋತ್ತರ ವರ್ತಮಾನದವರೆಗೆ ನಿಶ್ಚಲ ಸಂಸ್ಕೃತಿ ಮತ್ತು ಚಲನಶೀಲ ಸಂಸ್ಕೃತಿಗಳ ಮಧ್ಯ ನಿರಂತರ ಮುಖಾಮುಖಿ ನಡೆದುಕೊಂಡು ಬಂದಿದೆ. ರಾಜ್ಯಸತ್ತೆ, ಧರ್ಮಸತ್ತೆಗಳ ಅಬ್ಬರದ ಧ್ವನಿಯ ಇದಿರು ಜನಸತ್ತೆ ಹೊಸ ಹೊಸ ಸಾಹಿತ್ಯ ರೂಪಗಳನ್ನು ಸೃಷ್ಟಿಸಿಕೊಳ್ಳುವಲ್ಲಿಯೇ ತನ್ನ ಇರುವಿಕೆಯನ್ನು ದಾಖಲಿಸುತ್ತ ಬಂದಿದೆ.

ಕನ್ನಡ ಸಾಹಿತ್ಯದ ವಸ್ತು, ಭಾಷೆ, ರೀತಿ, ತಂತ್ರ ಮತ್ತು ಒಟ್ಟು ದೃಷ್ಟಿ-ಧೋರಣೆಗಳಲ್ಲಿ ಕಾಲದಿಂದ ಕಾಲಕ್ಕೆ ಅದೆಷ್ಟು ಪಲ್ಲಟಗಳು ಸಂಭವಿಸಿವೆಯೆಂದರೆ, ಸಾಹಿತ್ಯ ವಿಮರ್ಶಕರಿಗೆ ಈವರೆಗೂ ಅವೆಲ್ಲವುಗಳನ್ನು ಹಿಡಿದಿಡಲು ಸಾಧ್ಯವಾಗುತ್ತಿಲ್ಲ. ಇದು ಕನ್ನಡಿಗರ ಜೀವಂತಿಕೆಯ ಪ್ರತೀಕವೇ ಆಗಿದೆ. ಕೇವಲ ಆಧುನಿಕ ಸಾಹಿತ್ಯ ಘಟ್ಟವೊಂದನ್ನೇ ಕುರಿತು ಪ್ರಸ್ತಾಪಿಸುವುದಾದರೂ ಅದು ದೀರ್ಘ ಚರ್ಚೆಯನ್ನು ಹುಟ್ಟುಹಾಕದೆ ಇರಲಾರದು. ಒಂದು ಶತಮಾನದ ಅವಧಿಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಮತ್ತು ಈ ಕ್ಷಣಕ್ಕೆ ಬಂಡಾಯ ದಲಿತೋತ್ತರ ಎಂದು ಗುರುತಿಸಿದರೂ ಅದೆಷ್ಟು ವೈವಿಧ್ಯ, ವೈಶಿಷ್ಟ್ಯಗಳಿವೆ ಎಂಬುದನ್ನು ಗಮನಿಸಬಹುದು. ನಾವು ಬರೆಯುತ್ತಿರುವ ಹರೆಯದಲ್ಲಿ ಅಂದರೆ ದಲಿತ – ಬಂಡಾಯ ಸಾಹಿತ್ಯ ಉಚ್ಛ್ರಾಯದ ಹಂತದಲ್ಲಿ ಕಥೆ, ಕಾದಂಬರಿ, ಕಾವ್ಯಗಳಿಗೆ ಅದೆಂಥ ಉಕ್ಕು ಇತ್ತೆಂದರೆ ಅದೊಂದು ನಮೂನಿ ಸೃಜನಶೀಲ ರೂಪಗಳ ಸುಗ್ಗಿಯ ಕಾಲ ಎನ್ನಬಹುದು.

ಹಾಗೆ ನೋಡಿದರೆ, ನವೋದಯ ಕಾಲದಿಂದಲೇ ಭಾವಗೀತೆ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ಪ್ರವಾಸ ಕಥನ, ಆತ್ಮ ಚರಿತ್ರೆ ಮುಂತಾದ ಸಾಹಿತ್ಯ ರೂಪಗಳ ಸಮೃದ್ಧತೆ ಸುರುವಿಟ್ಟುಕೊಂಡಿತ್ತು. ಪ್ರಗತಿಶೀಲ ನವ್ಯರ ಕಾಲದಲ್ಲಿಂಯೂ ಬರವಣಿಗೆಯ ವಸ್ತು, ದೃಷ್ಟಿ ಧೋರಣೆಯಲ್ಲಿ ಪಲ್ಲಟವಾಗಿದ್ದರೂ ಸಾಹಿತ್ಯ ರೂಪಗಳು ಮಾತ್ರ ಹೆಚ್ಚು ಕಡಿಮೆ ಇವೇ ಮುಂಚೂಣಿಯಲ್ಲಿ ಇದ್ದವು. ದಲಿತ – ಬಂಡಾಯ ಕಾಲಘಟ್ಟದಲ್ಲಿ ಮಾತ್ರ ಸಾಹಿತ್ಯದ ಭಾಷೆ ಮತ್ತು ರೂಪಗಳೆರಡೂ ಹೋರಾಟಗಾರರ ಕೈಯಲ್ಲಿನ ಅಸ್ತ್ರದಂತಾದವು. "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ" ಎಂಬಂಥ ಘೋಷ ವಾಕ್ಯಗಳು ಸಾಹಿತ್ಯಕ ಅಕೆಡೆಮಿಕ್ ಶಿಸ್ತಿನಾಚೆ

ಜಿಗಿದು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳಾಗಿ ಪ್ರವಹಿಸತೊಡಗಿದವು. ಕಲೆಗಾಗಿ ಕಲೆ ಅಥವಾ ಬದುಕಿಗಾಗಿ ಕಲೆ ಎಂಬಂತೆ ತೀರ ಪ್ರಾಚೀನ ವಾದಗಳು ಪರಸ್ಪರ ಡಿಕ್ಕಿ ಹೊಡೆದು ಕಲೆ ಅರ್ಥಾತ್ ಸಾಹಿತ್ಯ ಮತ್ತು ಬದುಕು ಎರಡೂ ಯಾರ ಅಂಕೆಗೂ ಸಿಗದಂತೆ ಓಡತೊಡಗಿದವು. ಹೀಗೆ ಓಡುತ್ತಿರುವಾಗಲೇ ನವ ವಸಾಹತುಶಾಹಿಯ ಆರ್ಥಿಕ ಮೂಲದ ಆಕ್ರಮಣಗಳು ಸಾಂಸ್ಕೃತಿಕ ಯಜಮಾನಿಕೆಯ ಪೋಷಾಕು ತೊಟ್ಟು ನಮ್ಮ ಧಾವಂತದ ದಿಕ್ಕನ್ನೇ ತಪ್ಪಿಸಿದವು.

ಬಂಧುಗಳೇ, ದಲಿತ – ಬಂಡಾಯ ಸಾಹಿತ್ಯ ಚಳುವಳಿಯ ಓಟದ ನೇತೃತ್ವವನ್ನು ನಮಗರಿಯದಂತೆ ಅದ್ಯಾವಾಗ ಈ ನವ ಉದಾರವಾದಿಪ್ರಭುಗಳು ವಹಿಸಿಕೊಂಡರೊ ಗೊತ್ತಾಗಲೇ ಇಲ್ಲ. ಖಾಸಗೀಕರಣ, ಉದಾರೀಕರಣ, ಜಾಗತೀಕರಣವೆಂಬ ಅರ್ಥಮೂಲದ ಪ್ರಳಯಗಳು, ಟಿ.ವಿ., ಇಂಟರನೆಟ್, ಖಾಸಗಿ ಚಾನಲ್ಲು, ಎಸ್.ಎಂ.ಎಸ್., ಎಂ.ಎಂ.ಎಸ್., ಮುಂತಾದ ಹಲವು ಬಗೆಯ ಎಲೆಕ್ಟ್ರಾನಿಕ್ ಮಾಧ್ಯಮಗಳು ಸಾಂಸ್ಕೃತಿಕ ಲೋಕದ ಗುತ್ತಿಗೆದಾರರನ್ನು ಸೃಷ್ಟಿಸಿತು. ಈ ಹೊತ್ತು ಸಾಹಿತ್ಯವು ಓದುವುದಷ್ಟಕ್ಕೆ ಮೀಸಲಾಗಿಲ್ಲ. ನೋಡುವುದಕ್ಕೆ, ಕೇಳುವುದಕ್ಕೆ, ಅಷ್ಟೇ ಏಕೆ ನೇರಾನೇರ ಮುಖಾ–ಮುಖಿಯಾಗುವುದಕ್ಕೆ ಚಾಚಿಕೊಂಡಿದೆ. ಲಿಪಿ ಮಾಧ್ಯಮದಿಂದ ಶ್ರವ್ಯ, ದೃಶ್ಯ ಮಾಧ್ಯಮಕ್ಕೆ ನಮ್ಮ ಸೃಜನಶೀಲ ಚಟುವಟಿಕೆಗಳು ವಿಸ್ತರಿಸಿಕೊಂಡಿಲ್ಲವೆ? ಸಾಹಿತ್ಯವನ್ನು ಆಸ್ವಾದಿಸುವ ಸಹೃದಯರು ಎಲ್ಲೂ ಕಳೆದು ಹೋಗಿಲ್ಲ. ಅವರು ಯಾವತ್ತೂ ನಮ್ಮೊಂದಿಗೆ ಇದ್ದಾರೆ. ಮೊದಲಿಗಿಂತಲೂ ಸೂಕ್ಷ್ಮಾತಿಸೂಕ್ಷ್ಮ ಆಪ್ತ ಭಾವಕೋಶಗಳೊಂದಿಗೆ ಕಾದು ಕುಳಿತಿದ್ದಾರೆ. ಆದರೆ ಅವರ ನಿರೀಕ್ಷೆಗೆ ತಕ್ಕ ಅಥವಾ ಅವರ ಹಂಬಲ ತಣಿಸಬಲ್ಲ ಸಾಂಸ್ಕೃತಿಕ ಕಸುಬುದಾರರಾದ ನಾವು ಎಲ್ಲಿದ್ದೇವೆ? ಒಂದು ಕ್ಷಣ ಒಂದೇ ಒಂದು ಕ್ಷಣ, ನಾವು ನಮ್ಮೊಂದಿಗೆ ಸಂಭಾಷಣೆ ನಡೆಸಿ ಕೇಳಿಕೊಳ್ಳೋಣ. ಎಲ್ಲಿ? ಎಲ್ಲಿಗೆ ಹೊರಟಿದ್ದೇವೆ ನಾವು. ಉಳ್ಳವರ ಬದುಕನ್ನು ವೈಭವಕೀಕರಿಸುವ ಮೆಗಾ ಸಿರಿಯಲ್ಲುಗಳು, ಸಂಪದ್ಭರಿತರ ಮದೋನ್ಮತ್ತ ರಿಯಾಲಿಟಿ ಷೋಗಳು, ಸಂಗೀತ ಅಭಿರುಚಿ ಹೆಸರಿನಲ್ಲಿ ನಡೆಸುತ್ತಿರುವ ಅವೈಜ್ಞಾನಿಕ ಸ್ಪರ್ಧೆಗಳೂ, ದೈವಿಕತೆ ಹೆಸರಿನ ಮೌಢ್ಯ ತುಂಬುವ ಜ್ಯೋತಿಷ್ಯ, ವಾಸ್ತು, ಪುನರ್ಜನ್ಮ, ನಾನಾ ನಮೂನಿ ಬಾಬಾಗಳ ಚಮತ್ಕಾರಗಳು ಇವೆಲ್ಲಾ ನುಡಿಸಾಹಿತ್ಯ ಇಲ್ಲವೆ? ಈ ಎಲ್ಲವುಗಳು ಆಕರ ತಳೆಯುವುದು ಭಾಷೆಯಲ್ಲಿ ತಾನೆ? ಭಾಷೆಯ ಆಕರ್ಷಕ ರೂಪವೇ ಸಾಹಿತ್ಯದ ಜೀವಾಳವಲ್ಲವೆ?

ಈ ಎಲ್ಲ ಸಮೂಹ ಮಾಧ್ಯಮಗಳು ವ್ಯಾಪಾರಿ ಲೋಕದ ಕಪಿಮುಷ್ಠಿಯಲ್ಲಿ ಬಂಧಿತವಾಗಿ ತಮಗೆ ಬೇಕಾದ ಸರಕುಗಳನ್ನು ಸೃಷ್ಟಿಸಿಕೊಳ್ಳುತ್ತಿಲ್ಲವೆ? ಆಧುನಿಕೋತ್ತರ ಮಾಹಿತಿ ತಂತ್ರಜ್ಞಾನದ ನಡುಮನೆಗೆ ಬಂದು ನಿಂತಿರುವ ನಾವು ಈ ಎಲ್ಲ ಮಾಧ್ಯಮಗಳಿಗೆ ವಿಮುಖರಾಗುವಂತಿಲ್ಲ. ವಿಮುಖರಾಗಬೇಕಾದ ಅವಶ್ಯಕತೆಯೂ ಇಲ್ಲ. ಆದರೆ ಈ ಮಾಧ್ಯಮಗಳು ತನ್ನ ಸರಕುಗಳಿಗೆ ಗ್ರಾಹಕರನ್ನು ಸೆಳೆಯುವ ಜಾಹಿರಾತು ಲೋಕದ ಹಣದ ಥೈಲಿಯಲ್ಲಿ ಬಂಧಿತವಾಗಿವೆ. ಜನ ಮಾನಸವನ್ನು ರೂಪಿಸಬೇಕಾದ ಸಾಂಸ್ಕೃತಿಕ ರೂವಾರಿಗಳು ವ್ಯಾಪಾರೀಲೋಕದ ನಿಯಂತ್ರಕರಾಗಬೇಕೇ

ಹೊರತು ನಿಯಂತ್ರಿತ ಸರಕುಗಳಾಗಬಾರದು. ಕಾಲಕಾಲಕ್ಕೆ ಬದಲಾದ ಮಾಧ್ಯಮಗಳನ್ನು ದುಡಿಸಿಕೊಳ್ಳಬೇಕಾದ ಸೃಜನಶೀಲ ಪ್ರತಿಭೆಗಳು ತಾವು ಅಖಂಡ ಜನಪದರ ಪ್ರತಿನಿಧಿಗಳು ಎಂಬ ಎಚ್ಚರದಲ್ಲಿರುವುದು ಒಳಿತು. ಈ ಎಚ್ಚರವಿದ್ದರೆ ಮಾತ್ರ ಸಾಹಿತ್ಯಕ್ಕೆ ಸಾರ್ವಕಾಲಿಕ ಧಾರಣಶಕ್ತಿ ಬರುತ್ತದೆ.

ಹಾಗೆ ನೋಡಿದರೆ ಎಂದಿಗಿಂತಲೂ ಇಂದು ಬರೆಯುವವರ ಸಂಖ್ಯೆ, ಬರೆದುದನ್ನು ಪ್ರಕಟಿಸುವ ಸಂಘ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಿದೆ. ಪುಸ್ತಕ ಮಾರಾಟದಲ್ಲಿಯೂ ಕನ್ನಡ ಪುಸ್ತಕಗಳು ಹಿಂದೆ ಬಿದ್ದಿಲ್ಲ. ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಸಾಹಿತ್ಯಕ ಸಭೆ, ಸಮಾರಂಭಗಳು ವೆಗ್ಗಳವಾಗಿ ಜರುಗುತ್ತಿವೆ. ನಾವು ಚಿಕ್ಕವರಿದ್ದಾಗ ಜಿಲ್ಲಾ ಕೇಂದ್ರಗಳಲ್ಲಿ ತಿಂಗಳಿಗೊಮ್ಮೆ ಅಥವಾ ತಿಂಗಳಿಗೆ ಎರಡು ಸಲ ಎಂಬಂತೆ ಸಾಹಿತ್ಯಕ ಕಾರ್ಯಕ್ರಮಗಳು ನಡೆಯುತ್ತಿದ್ದರೆ; ಇಂದು ಒಂದೇ ಊರಲ್ಲಿ ದಿನವೊಂದಕ್ಕೆ ಹತ್ತಾರು ಕಾರ್ಯಕ್ರಮಗಳು ನಡೆಯುತ್ತಿರುವುದನ್ನು ನಾವೆಲ್ಲ ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇವೆ. ಸಾಹಿತ್ಯಕ ಚಟುವಟಿಕೆಗಳಿಗೆ ಕೊರತೆಯಿಲ್ಲ. ಆದರೆ ಎಪ್ಪತ್ತು ಎಂಬತ್ತರ ದಶಕದಂತೆ ಇಂದು ಸಾಹಿತ್ಯಕ ಪರಿಸರ, ಅಥವಾ ಸಾಹಿತ್ಯಕ ಸಂಚಲನವುಂಟಾಗುತ್ತಿಲ್ಲ. ಬಿಡಿ ಬಿಡಿ ಸಮೂಹಗಳು ನಡೆಸುತ್ತಿರುವ ಚಟುವಟಿಕೆಗಳಿಗೆ ಸರ್ವವ್ಯಾಪ್ತಿ ಪ್ರತಿಸ್ಪಂದನ ದೊರೆಯುತ್ತಿಲ್ಲ. ಒಂದೆಡೆ ಮಾಹಿತಿ ತಂತ್ರಜ್ಞಾನ ಜಾಲ ವಿಶ್ವವನ್ನು ಹಳ್ಳಿಯಾಗಿ ನಿರ್ಮಿಸುತ್ತಿದ್ದರೆ, ಮಗದೊಂದೆಡೆ ಸಾಹಿತ್ಯದಂಥ ಸಶಕ್ತ ಮಾಧ್ಯಮವು ಅಲ್ಲಲ್ಲಿ ನಡುಗಡ್ಡೆಯಂತಾಗಿ ತಮ್ಮ ತಮ್ಮೊಳಗೆ ಹುತ್ತ ಕಟ್ಟಿಕೊಳ್ಳುತ್ತಿವೆ. ಹೆಚ್ಚೆಚ್ಚು ವಿಸ್ತಾರವಾದಷ್ಟು, ಸಾರ್ವತ್ರಿಕವಾದಷ್ಟು ಸಾಹಿತ್ಯಕ್ಕೆ ಬಲ ಮತ್ತು ಛಲ ಬರುತ್ತದೆ. ಹೀಗಾಗುತ್ತಿಲ್ಲವೆಂದಾದರೆ, ಹೀಗಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯೊಂದು ಜನತೆಯ ಪ್ರಾಬಲ್ಯವನ್ನು ಮೀರಿ ಕ್ರಿಯಾಶೀಲವಾಗುತ್ತಿದೆ ಎಂದೇ ಅರ್ಥ.

ಈಗ ಕರ್ನಾಟಕವನ್ನು ಒಳಗೊಂಡಂತೆ ಭಾರತವನ್ನು ನಿಯಂತ್ರಿಸುತ್ತಿರುವುದು ಅಂತಾರಾಷ್ಟ್ರೀಯ ಬಂಡವಾಳ ಲೋಕ. ಈ ಲೋಕಕ್ಕೆ ಮಾನವ ಬಿಡಿ ಬಿಡಿ ಗುಂಪುಗಳು ಬೇಕು. ಅಖಂಡ ಸಮುದಾಯವಲ್ಲ. ಎಪ್ಪತ್ತರ ಅಥವಾ ಆ ಪೂರ್ವದ ದಶಕಗಳಲ್ಲಿ "ವಿಷಯ" (ಇಸ್ಯೂ) ಕೇಂದ್ರಿತ ಹೋರಾಟಗಳು ಮುಂಚೂಣಿಯಲ್ಲಿದ್ದರೆ ಈಗ ನೋಡಿ ಹೇಗೆ ಜಾತಿಯಾಧಾರಿತ ಗುಂಪುಗಳು, ಪ್ರದೇಶ ಆಧಾರಿತ ಗುಂಪುಗಳು, ಉಪಭಾಷಾ ಆಧಾರಿತ ಗುಂಪುಗಳು ತುಂಡು ತುಂಡಾಗಿ ಹೋರಾಟದ ಕಾರ್ಯಕ್ರಮಕ್ಕೆ ಇಳಿಯುತ್ತಿವೆಯಲ್ಲವೆ? ಆಧುನಿಕೋತ್ತರವಾದ ದೊಡ್ಡ ವ್ಯಂಗ್ಯವೆಂದರೆ ಹೋರಾಟವೆಂಬ ವಿದ್ಯಮಾನಗಳು ಕಾರ್ಯಕ್ರಮಗಳಾಗಿ ಸಂಪನ್ನವಾಗುತ್ತಿರುವುದು. ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡು – ನುಡಿಯ ಹೆಸರಿನ ಮೇಲೆ ಹುಟ್ಟಿಕೊಳ್ಳುತಿರುವ ಸಂಘಟನೆಗಳನ್ನು ನೋಡಿದರೆ ಯಾರಿಗಾದರೂ ಗಾಬರಿಯಾಗದೆ ಇರದು.

ಹೋರಾಟದ ಹೆಸರಿನಲ್ಲಿ ಅಲ್ಲಿ ನೆರೆಯುತ್ತಿರುವ ಯುವಕರು, ಅವರ ಉತ್ಸಾಹದಾಯಕ ಚಟುವಟಿಕೆಗಳು, ಘೋಷಣೆ ಹಾಕುವ ಆ ಕಂಠಗಳು ಇವೆಲ್ಲ

ಅಲಕ್ಷಿಸುವಂತಿಲ್ಲ. ಅವರ ಅಪಾರ ಶಕ್ತಿ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಆದರೆ ನಮ್ಮ ಕುವೆಂಪು ಆ ಹೊತ್ತು ಹೇಳಿರುವಂತೆ, ಇವತ್ತು ಮತ್ತೆ ಅವರಿಗೆ ಮುಂದೊಂದು ಗುರಿಯೂ ಇಲ್ಲ. ಹಿಂದೊಬ್ಬ ಗುರುವೂ ಇಲ್ಲ. ಹೋಗಲಿ ಅಕ್ಕಪಕ್ಕದಲ್ಲಿ ಅಪಾಯ ಬಂದಾಗಲಾದರೂ ಅವರನ್ನು ಎಚ್ಚರಿಸುವ ಒಬ್ಬ ಸ್ನೇಹಿತನೂ ಇಲ್ಲ. ಜಾತ್ರೆಯ ಗದ್ದಲದಲ್ಲಿ ಅಮ್ಮ-ಅಪ್ಪರಿಂದ ಕೈ ಬಿಡಿಸಿಕೊಂಡು ಕಳೆದುಕೊಂಡಿರುವಂಥ ಪುಟ್ಟಮಗು ಕಂಡವರ ಹಿಂದೆ ಅಳುತ್ತ ಬೆನ್ನುಹತ್ತುವಂತೆ ಅವರ ಸ್ಥಿತಿಯಾಗಿದೆ.

ಪ್ರಸ್ತುತ ಜಾಗತೀಕರಣದ ಜಾತ್ರೆಯಲ್ಲಿ ಮಕ್ಕಳು ಮಾತ್ರ ಕಳಕೊಂಡಿಲ್ಲ. ಮಕ್ಕಳನ್ನು ರಕ್ಷಿಸಬೇಕಾದ ಅಪ್ಪ ಅಮ್ಮಂದಿರಂಥ ಸಾಂಸ್ಕೃತಿಕ ರೂವಾರಿಗಳೂ ಕಳೆದುಕೊಂಡಿರುವುದೇ ದುರಂತದ ಸಂಗತಿ.

ವರ್ಷಕ್ಕೆ ಪ್ರಕಟವಾಗುತ್ತಿರುವ ಪುಸ್ತಕಗಳ ಸಂಖ್ಯೆ ಗಮನಿಸಿದರೆ ಈ ಮುಂಚಿನ ಹತ್ತಾರುಪಟ್ಟು, ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ ಮತ್ತು ಮಾರಾಟವಾಗುತ್ತಿವೆ. ಕನ್ನಡದಲ್ಲಿ ಪ್ರಕಾಶನ ಸಂಸ್ಥೆಗಳಂತೂ ಇನ್ನಿಲ್ಲದಂತೆ ಬೆಳೆಯುತ್ತಿವೆ. ಭಾಂಡಗೆ, ನವಕರ್ನಾಟಕ, ಅಂಕಿತ, ಅಭಿನಯ, ಲೋಹಿಯಾ, ಲಢಾಯಿ, ವಿದ್ಯಾನಿಧಿ, ಸಿದ್ಧಲಿಂಗೇಶ್ವರ ಪ್ರಕಾಶನ, ಸುಭದ್ರ ಪ್ರಕಾಶನ, ಸಾಹಿತ್ಯ ಭಂಡಾರ, ಸಂಕ್ರಮಣ ಪ್ರಕಾಶನ ಮತ್ತು ಅಭಿಮಾನಿ ಪ್ರಕಾಶನ ಈ ಪಟ್ಟಿ ಇನ್ನೂ ದೀರ್ಘವಾಗಿ ಬೆಳೆಸಬಹುದು. ಈ ಸಂಸ್ಥೆಗಳು ಮಾಡುತ್ತಿರುವ ನುಡಿಸೇವೆ ನಿಜಕ್ಕೂ ಉಲ್ಲೇಖನಾರ್ಹ. ಕನ್ನಡದಲ್ಲೂ ಪುಸ್ತಕೋದ್ಯಮವು ಗಟ್ಟಿಗೊಳ್ಳುತ್ತಿರುವ ಸಂಕೇತ. ಆದರೆ ಈ ಎಲ್ಲ ಪ್ರಕಾಶಕರಿಗೆ ಈಡಾಗಬಲ್ಲಂಥ ಸಾಹಿತ್ಯ ಕೃತಿಗಳನ್ನು ನೀಡುವಲ್ಲಿಯೇ ಪ್ರತಿಭಾಲೋಕ ಹಿಂದೆ ಬೀಳುತ್ತಿದೆ ಎಂಬ ಗುಮಾನಿ ಬರುತ್ತಿದೆ. ಹಾಗೆ ನೋಡಿದರೆ ಇತ್ತೀಚಿನ ದಿನಗಳಲ್ಲಿ ಕಥೆ, ಕಾದಂಬರಿ, ಕವನಗಳಿಗಿಂತ ವೈಚಾರಿಕ, ವೈಜ್ಞಾನಿಕ, ಸಂಶೋಧನಾತ್ಮಕ ಲೇಖನಗಳ ಕಡೆ ಓದುಗಲೋಕ ಆಕರ್ಷಿತವಾದಂತಿದೆ. ಪತ್ರಿಕೆಗಳಲ್ಲಿ ಪ್ರಕಟ ವಾಗುತ್ತಿರುವ ಅಂಕಣಗಳು ನಿಜಕ್ಕೂ ಮೌಲಿಕವೂ, ಆಪ್ತವಾಗಿಯೂ ಬರುತ್ತಿವೆ. ಅಷ್ಟಕ್ಕೂ ಒಂದು ಕಾಲಮಾನ ತನಗೆ ಬೇಕಾದ ರೂಪವನ್ನು ತಾನೇ ಕಟ್ಟಿಕೊಳ್ಳುತ್ತದೆ. ಕಾದಂಬರಿ ರೂಪ ಒಂದಷ್ಟು ಹಿಂದೆ ಬಿದ್ದಿರಬಹುದಾದರೂ ಕಥೆ, ಕವನ ತಮ್ಮ ಎಂದಿನ "ಫ್ಯಾಷನ್" ಉಳಿಸಿಕೊಂಡು ಬರುತ್ತಿವೆ. ಆ ಕಾಲದಷ್ಟು ಕಥೆ, ಕವನಗಳ ಕ್ರೇಜ್ ಇರಲಿಕ್ಕಿಲ್ಲವಾದರೂ ಅವುಗಳನ್ನು ಇಷ್ಟಪಡುವ ವರ್ಗವೊಂದು ಇದ್ದೇ ಇದೆ. ಇತ್ತೀಚೆಗೆ ಕೆಲವರು ಕ್ಲುಪ್ತವಾದ, ಸಾಂದ್ರತೆಯುಳ್ಳ ಬರವಣಿಗೆಯತ್ತ ಧಾವಿಸುತ್ತಿದ್ದಾರೆ. ಬ್ಲಾಗು ಅಂಥದೊಂದು ತೀವ್ರವಾದ ಬರಹರೂಪವೇನೊ ಕಾದು ನೋಡಬೇಕಿದೆ. ಹೀಗೆಂದಾಗ ಕನ್ನಡದ ಪ್ರತಿಭಾ ಲೋಕ ಸ್ಥಗಿತವಾಗಿದೆ ಅಥವಾ ಮಂದವಾಗಿದೆ ಎಂತೇನೂ ಅಲ್ಲ. ಹಾಗೆ ನೋಡಿದರೆ ಇದು "ಬ್ಲಾಗು"ಗಳ ಯುಗ. ಕೆಂಡ ಸಂಪಿಗೆ, ಅವಧಿ, ಪುಸ್ತಕಪ್ರೀತಿ, ಅಂತರಂಗ, ಬುಕ್‌ಮಾರ್ಕ್, ಅನುಭವ ಮಂಟಪ, ಅನವರತ ಮತ್ತು ಅಭಿವ್ಯಕ್ತಿ ಬ್ಲಾಗುಗಳು ವಿವಿಧ ವೈಬ್‌ಸೈಟ್‌ಗಳಲ್ಲಿ ಬರುತ್ತಿರುವ ಬರಹಗಳ ಮೊನಚು, ಆಪ್ತತೆ ಎಂಥವರನ್ನೂ ದಂಗುಬಡಿಸದೆ ಇರಲಾರದು. ದಿನದ ಹೆಚ್ಚು ಹೊತ್ತು ಕಂಪ್ಯೂಟರ್ ಇರಿದು ಕುಳಿತು ಎಲ್ಲದಕ್ಕೂ ಅದನ್ನೇ ಆಶ್ರಯಿಸಿಕೊಂಡಿರುವ

ಹೈಟೆಕ್ ಸಿಟಿಗಳ ವಿದ್ಯಾವಂತರಿಗಂತೂ ಬ್ಲಾಗುಗಳ ಲೋಕ ತೀರ ಅಪ್ಯಾಯಮಾನವೆನಿಸುತ್ತಿದೆ. ಖಾಸಗಿಯಲ್ಲದ ಈ ಖಾಸಗಿ ಓದು ಸಾಫ್ಟ್‌ವೇರ್ ಜಗತ್ತಿಗೆ ಅನಿವಾರ್ಯ.

ಕರ್ನಾಟಕದ ಮೂಲೆ ಮೂಲೆಗಳಲ್ಲಿ ವಾಸಿಸುತ್ತಿರುವ ಮತ್ತು ಜೀವವನ್ನರಸಿ ದಿನನಿತ್ಯ ಸಾವಿರ ಸಾವಿರ ಸಂಖ್ಯೆಯಲ್ಲಿ ವಲಸೆ ಹೋಗುತ್ತಿರುವ ಸಾಮಾನ್ಯ ಕನ್ನಡಿಗನಿಗೂ ಈ ಬ್ಲಾಗುವಿಗೂ ಸಂಬಂಧ ಕಲ್ಪಿಸಲಾದೀತೆ? ಅಕ್ಷರಬಲ್ಲ ಲೋಕವೊಂದನ್ನೇ ಇಟ್ಟುಕೊಂಡು ಸಾಹಿತ್ಯದ ಸಾಧ್ಯತೆಯನ್ನು ಚರ್ಚಿಸುವುದು ಸಾಧುವೆ? ಸ್ವಾತಂತ್ರ್ಯ ದೊರೆತು ೬ ದಶಕ ದಾಟಿದ ಈ ಅವಧಿಯಲ್ಲಿಯೂ ಇನ್ನುವರೆಗೂ ರಾಜ್ಯದ ಪ್ರತಿಶತ ನಾಲ್ವತ್ತರಷ್ಟು ಜನತೆಗೆ ಅಕ್ಷರ ಕೊಡಲು ಸಾಧ್ಯವಾಗಿಲ್ಲ. ಶಾಲೆಯ ಮುಖವೇ ನೋಡದ ಕೋಟಿ ಕೋಟಿ ಜನರು ನಮ್ಮೊಟ್ಟಿಗೆ ಇದ್ದಾರೆ.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ತುಂಬು ಉತ್ಸುಕತೆಯಿಂದ ಕನ್ನಡ ಭಾಷೆ – ಸಂಸ್ಕೃತಿ ಬಗೆಗೆ ಮಾತಾಡಿದೆವು. ಅಂದಿನ ಜನಪ್ರತಿನಿಧಿಗಳ ಕಣ್ಣುಗಳಲ್ಲಿಯು ಹಲವು ಕನಸುಗಳು ಮೊಳೆತಿದ್ದವು. ಆದರೆ ನೋಡ ನೋಡುವಷ್ಟರಲ್ಲಿ ಆ ಕನಸುಗಳು ಕಮರಿ ಹೋದವು. ಅಷ್ಟೇ ಅಲ್ಲ ಇತ್ತೀಚೆಗಂತೂ ನಮ್ಮ ಜನಪ್ರತಿನಿಧಿಗಳಿಗೆ ಕಣ್ಣುಗಳೆ ಕಳೆದುಹೋಗಿವೆ. ನಮ್ಮ ಶಿಕ್ಷಣವ್ಯವಸ್ಥೆ ಮತ್ತು ಕನ್ನಡಮಾಧ್ಯಮದ ನೀತಿ ಇವೆರಡನ್ನು ಕುರಿತು ಮಾತಾಡುವುದೇ ವ್ಯಥಾಲಾಪ ಎಂಬಂತಾಗಿದೆ. ಸಂಪೂರ್ಣ ಶಿಕ್ಷಣ ವ್ಯವಸ್ಥೆಯೇ ಖಾಸಗಿಯವರಿಗೆ ಪರಭಾರೆಯಾಗಿ ವರ್ಷಗಳೇ ಸಂದಿರುವಾಗ ನಮ್ಮ ಪ್ರಭುತ್ವ ತುಂಬಾ ಆದರ್ಶ ವೆನಿಸುವಂಥ ಹೇಳಿಕೆಗಳನ್ನು ಕೊಡುತ್ತಲೆ ಇರುವುದು ರೇಜಿಗೆ ಬರಿಸುತ್ತಿದೆ. ಎಲ್ಲರಿಗೂ ಅಕ್ಷರ ಕೊಡಬೇಕಾದ ಪ್ರಭುತ್ವವೇ ಕೈ ಚೆಲ್ಲಿ ಕುಳಿತಿರುವಾಗ ಕನ್ನಡ ಸಾಹಿತಿಗಳ ಹೊಣೆಗಾರಿಕೆ ಏನು? ಭಾರಿ ಭಾರಿ ಖಾಸಗಿ ಶಾಲಾ, ಕಾಲೇಜು, ಸಂಘ – ಸಂಸ್ಥೆಯವರು ಕೂಡಮಾಡುತ್ತಿರುವ ಟಿ.ಎ., ಡಿ.ಎ., ಇನ್ನಿತರ ಕಾಣಿಕೆಗೆ ಆಕರ್ಷಿತರಾಗಿ ಹೋಗಿ ಅಲ್ಲಿ ಒಣ ಆದರ್ಶದ ಭಾರಿ ಭಾಷಣ ಬಿಗಿದು ಬರುವುದೆ? ಶಿಕ್ಷಣದ ಮಾಫಿಯಾದವರು ಸೃಷ್ಟಿಸಿದ ಸಂದರ್ಶಕರ ಪುಸ್ತಕದಲ್ಲಿ ನಮ್ಮ ಭಾಷಾ ಪ್ರೌಢಿಮೆ ಬಳಸಿ ಹೊಗಳಿಕೆಯ ಷರಾ ಬರೆದು ಬರುವುದೆ? ಈ ಪ್ರಶ್ನೆಗಳು ನಮ್ಮನ್ನು ಕಾಡದಿದ್ದರೆ ಸಾಹಿತ್ಯವೆಂಬ ಮಹಾನ್ ಅಸ್ತ್ರವು ನಿಷ್ಕ್ರಿಯವಾಗದೆ ಇರದು.

ಅಷ್ಟಕ್ಕೂ ಸಾಹಿತ್ಯವೆಂದರೆ ಬದುಕು ತಾನೆ? ತೀರ ಸುರಕ್ಷಿತ ಸಮೃದ್ಧ ಹಿನ್ನೆಲೆಯಿಂದ ಬಂದ ಲೇಖಕರು ಸಾಹಿತ್ಯವೆಂದರೆ ಹೇಗೆ ಗ್ರಹಿಸುತ್ತಾರೊ ನನಗೆ ಗೊತ್ತಿಲ್ಲ. ಹೇಗೆ ಗ್ರಹಿಸಿದರೂ ಅದು ಅವರ ಹಕ್ಕು. ಆದರೆ ನನಗೆ ಅಂದರೆ, ತೀರ ಹಿಂದುಳಿದ ಭಾಗದ ತಳವರ್ಗದ ಅಲಕ್ಷಿತ ಸಮುದಾಯದಿಂದ ಬಂದ ನನಗೆ ಅಕ್ಷರವೆಂದರೆ ಬೆಳಕು, ಸಾಹಿತ್ಯವೆಂದರೆ ಹಿಲಾಲು (ಪಂಜು). ಈ ಹಿಲಾಲನ್ನು ಮತ್ತೆ ಮತ್ತೆ ಪ್ರಜ್ವಲಿಸಿ ಬದುಕಿನ ಸಮಗ್ರ ಆಯಾಮಗಳನ್ನು ನೋಡುವ ಉಪಕರಣ, ಕಗ್ಗತ್ತಲಿನ ಮೂಲೆ – ಮೊಡಕುಗಳಿಗೆ ಬೆಳಕಿನ ಕಿರಣ ಹಾಯಿಸಿ ಇಂಚು ಇಂಚನ್ನು ಪ್ರಕಾಶಮಯಗೊಳಿಸುವ ಸಾಧನ. ಹೇಳಿ ಕೇಳಿ ನಾನು ವಚನ, ಕೀರ್ತನೆ, ತತ್ವಪದಕಾರರ ನಾಡಿನಿಂದ ಬಂದವಳು.

ವಚನಕಾರರ ಸಾಹಿತ್ಯಕ್ಕೆ ಧಾತುವಾದ "ಹಸಿವು" ನನ್ನನ್ನು ಮತ್ತೆ ಮತ್ತೆ ಕಾಡುತ್ತಿದೆ. ಸಹೃದಯ ಸಂಗಾತಿಗಳೇ, ಸಂವೇದನಾಶೀಲರಾದವರಿಗೆಲ್ಲ "ಹಸಿವು" ಈ ಹೊತ್ತು ಕಾಡಲೇಬೇಕಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಬಂಡವಾಳದ ಅಭಿವೃದ್ಧಿಯನ್ನೇ ದೇಶದ ಅಭಿವೃದ್ಧಿ ಎಂದು ಬಿಂಬಿಸುತ್ತಿರುವಾಗ ಅಭಿವೃದ್ಧಿಯ ಮಾನದಂಡಗಳೇ ತಲೆಕೆಳಗಾಗಿವೆ. ಅನಿಯಂತ್ರಿತ ಅಥವಾ ರೂಪಾಯಿ ಮೌಲ್ಯ ನಿಯಂತ್ರಿತ ಮಾರುಕಟ್ಟೆಯೂ ಒಂದೆಡೆ ಹಣದ ಗುಡ್ಡೆಯನ್ನೇ ಒಟ್ಟುತ್ತಿದ್ದರೆ, ಇನ್ನೊಂದೆಡೆ ರೈತರು ತಮ್ಮ ಬೆಳೆದ ಬೆಳೆಗೆ ಬೆಲೆ ಬರದೆ, ಮಾಡಿದ ಸಾಲ ತೀರಿಸಲಾಗದೆ ತಮ್ಮೂರಿನಲ್ಲಿ ಆತ್ಮಹತ್ಯೆಯತ್ತ ಮೌನವಾಗಿ ದಂಡಿ ದಂಡಿಯಾಗಿ ಸಾಗುತ್ತಿದ್ದಾರೆ. ಕೂಲಿ ಕಾರ್ಮಿಕರಿಗೆ ಕೆಲಸ ಸಿಗದೆ ಗುಂಪು ಗುಂಪಾಗಿ ಗುಳೆ ಹೋಗುತ್ತಿದ್ದಾರೆ. ಮೊನ್ನೆ ನನ್ನದೆ ಜಿಲ್ಲೆಯ ಆಳಂದ ತಾಲೂಕಿನ ಹಿತ್ತಲ ಶಿರೂರು, ಜವಳಿ–ಡಿ ಗ್ರಾಮದ ಕಾರ್ಮಿಕರು ಪುಣೆಯ ಇಟ್ಟಂಗಿ ಭಟ್ಟಿಯಲ್ಲಿ, ದುಡಿಯಲೆಂದು ಹೋಗುವಾಗ ರಸ್ತೆ ಅಪಘಾತಕ್ಕೆ ಸಿಕ್ಕು ಪೂರಾ ಇಪ್ಪತ್ತು ಜೀವಗಳು ಅಂದರೆ ಕುಟುಂಬಕ್ಕೆ ಕುಟುಂಬವೇ ಸತ್ತದ್ದು. ಸಾಮೂಹಿಕ ಶವಸಂಸ್ಕಾರ ಮಾಡಿದ ಆ ಹೃದಯ ವಿದ್ರಾವಕ ದೃಶ್ಯ ಟಿ.ವಿ. ಪರದೆ ಮೇಲೆ ನೋಡಿದ್ದನ್ನು ಮರೆಯಲು ಸಾಧ್ಯವೇ ಆಗುತ್ತಿಲ್ಲ.

ದೇಶದಲ್ಲಿರುವ ಕೆಲವು ಬೆರಳೆಣಿಕೆಯಷ್ಟು ಶ್ರೀಮಂತರ ಆದಾಯವು ನಭೋ ಮಂಡಲಕೆ ಏರಿ ಅವರ ಆದಾಯವನ್ನೇ ದೇಶದ ಸರಾಸರಿ ಆದಾಯವೆಂದು ಬಿಂಬಿಸಿ, ದೇಶವಾಸಿಗಳ ವಾರ್ಷಿಕ ತಲಾ ಆದಾಯದಲ್ಲಿ ಹೆಚ್ಚಳ ತೋರಿಸಿದರೆ ಇದೆಂಥ ಮೋಸ ಅಲ್ಲವೆ? ಈ ಎಲ್ಲ ಮಾತುಗಳನ್ನು ಹೇಳುತ್ತಿರುವಾಗಲೂ ನನ್ನ ತಲೆಯಲ್ಲಿ ಗಡಿಯಾರದ ಲಯದಂತೆ ಮತ್ತೆ ಮತ್ತೆ ಹೊಡೆದುಕೊಳ್ಳುತ್ತಿದೆ ಮೊನ್ನಿನ ಪ್ರವಾಹ.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಈ ವರ್ಷದ ಅವಧಿಯಲ್ಲಿ "ಬರ ಮತ್ತು ನೆರೆ" ಎರಡರಿಂದಲೂ ತತ್ತರಿಸಿವೆ. ಜೂನ ಜುಲೈನಲ್ಲಿ ಮಳೆ ಬಾರದೆ ಬಿತ್ತನೆ ಮಾಡದೆ, ಬಿತ್ತನೆ ಮಾಡಿದರೂ ಕಾಳು ಮೊಳಕೆ ಒಡೆಯದೆ ರೈತರ ಬದುಕು ಹಾಳಾಗಿ ಹಳ್ಳ ಹಿಡಿಯುತ್ತಿರುವಾಗಲೇ, ಈ ಹತ್ತಿಪ್ಪತ್ತು ವರ್ಷದ ಅವಧಿಯಲ್ಲಿ ಕಂಡು ಕೇಳರಿಯದಷ್ಟು ಮಳೆ ಬಂದು, ಹಳ್ಳ, ನದಿ, ನಾಲಾ, ಕೆರೆ, ಕಾಲುವೆ ಎಲ್ಲವೂ ತುಂಬಿಬಂದು ಕಣ್ಣವೆ ಪಿಳಕಿಸುವಷ್ಟರಲ್ಲಿ ಇದ್ದಬದ್ದ ಬದುಕೆಲ್ಲವೂ ಜಲಸಮಾಧಿಯಾಗಿತ್ತು. ೧೫ ಜಿಲ್ಲೆಗಳ ಬಹುತೇಕ ಹಳ್ಳಿಗಳಲ್ಲಿ ರೈತ, ಕಾರ್ಮಿಕರಾದಿಯಾಗಿ ಎಲ್ಲರ ಮನೆಗಳು ಇಸ್ಪೀಟಿನ ಎಲೆಗಳಂತೆ ಉದುರಿ ಬಿದ್ದಿದ್ದವು. ಬಿದ್ದ ಮನೆಗಳ ಕರಾರುವಕ್ಕಾದ ಲೆಕ್ಕ ಇನ್ನೂ ಸಿಕ್ಕಿಲ್ಲ. ಅವರ ಹಾಳಾದ ಆಸ್ತಿ–ಪಾಸ್ತಿ, ಜಾನುವಾರುಗಳ ಲೆಕ್ಕ ಮಾಡುವಲ್ಲಿ ಪ್ರಭುತ್ವ ಅಸಹಾಯಕತೆ ತೋರುತ್ತಿರುವುದು ತೀರ ದುರಂತದ ಸಂಗತಿ. ನೆರೆ ಬಂದ ಅವಧಿಯಲ್ಲಿ ಸರಕಾರಿಯಂತ್ರ, ಜನಪ್ರತಿನಿಧಿಗಳು ಎಷ್ಟು ಮುತುವರ್ಜಿ ವಹಿಸಿ ರಕ್ಷಣೆ ನೀಡುವ ಕೆಲಸಗಳನ್ನು ಮಾಡಿದವೋ, ನಂತರದ ಪರಿಹಾರ ನೀಡುವ ಸಂದರ್ಭದಲ್ಲಿ ಅಷ್ಟೇ

ಬೇಜವಾಬ್ದಾರಿತನ, ಅಸಡ್ಡೆ ಮಾಡಿರುವುದು ಖಂಡಿತ ಕ್ಷಮಾರ್ಹವಲ್ಲ. ನೂರಾರು ಹಳ್ಳಿಗಳಲ್ಲಿ ಈ ಕ್ಷಣಕ್ಕೂ ಜನರು ಬಿದ್ದ ಮುರುಕಲು ಮನೆಗಳಲ್ಲಿ, ತಾತ್ಕಾಲಿಕ ಶೆಡ್ಡುಗಳಲ್ಲಿ, ಶಾಲೆ ಸಮುದಾಯದ ಭವನದ ಕಟ್ಟಡಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದಂಥ ವಿಶಾಲ ಸಮೃದ್ಧಿ ಹೊಂದಿರುವ ದೇಶದಲ್ಲಿ ೧೫ ಜಿಲ್ಲೆಗಳ ಹಾನಿ ಬಹುದೊಡ್ಡದೇನಲ್ಲ. ಇಂಥ ಅವಘಡಗಳು ಸಂಭವಿಸಿದಾಗಲೆಂದೇ ಭಾರತ ಬಹು ಹಿಂದೆಯೇ "ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ" ಮತ್ತು ಅದಕ್ಕಾಗಿ ಪ್ರತ್ಯೇಕ ನಿಧಿಯನ್ನು ನಿಗದಿಪಡಿಸಿದೆ. ಆಶ್ಚರ್ಯದ ಸಂಗತಿಯೆಂದರೆ, ಆ ನಿಯಮಾವಳಿಗಳು ಆದರ್ಶವಾಗಿ ಕಡತ ಮಟ್ಟದಲ್ಲಿಯೇ ಉಳಿದಿವೆ. ವಾಸ್ತವಿಕವಾಗಿ ವಿಪತ್ತು ನಿರ್ವಹಣಾ ಸಮಿತಿಯಾಗಲಿ, ಅವಶ್ಯಕ ಸಂಪನ್ಮೂಲವಾಗಲಿ ಇಲ್ಲವೇ ಇಲ್ಲ. ಅಷ್ಟಕ್ಕೂ ವಿಜ್ಞಾನ – ತಂತ್ರಜ್ಞಾನವು ದೇದೀಪ್ಯಮಾನವಾಗಿ ಬೆಳೆದಿರುವ ಈ ಯುಗದಲ್ಲಿ ಇಂಥ ಪ್ರಾಕೃತಿಕ ವಿಕೋಪಗಳನ್ನು ಎದುರಿಸುವುದು, ಅಂಥವುಗಳಿಂದ ಜಾಸ್ತಿ ಹಾನಿಯಗದಂತೆ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಅಸಾಧ್ಯವೇನಲ್ಲ ಪಕ್ಕದ ಜಪಾನ್, ಕ್ಯೂಬಾ, ಚೀನಾದಂಥ ದೇಶಗಳು ತಮ್ಮ ನಾಡನ್ನು ಕಟ್ಟಿರುವ ಪರಿಯನ್ನು ನಾವು ನೋಡಬೇಕಿದೆ.

ಬಂಧುಗಳೇ, ನಮ್ಮ ನಾಡಿನ ಅಸಂಖ್ಯರು ಇನ್ನೂ ಬೀದಿಯ ಮೇಲೆ ಕಾಲ ಕಳೆಯುತ್ತಿದ್ದು ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿಯಲ್ಲಿರುವಾಗ ಯಾವುದೇ ಅದ್ದೂರಿ ಸಭೆ, ಸಮಾರಂಭ, ಉತ್ಸವಗಳು ಜಿಗುಪ್ಸೆಯನ್ನು ಮೂಡಿಸುತ್ತವೆ ಅಲ್ಲವೆ? ಆದ್ದರಿಂದ ನಾನು ನಾಡಿನ ನುಡಿಹಬ್ಬದ ಜವಾಬ್ದಾರಿಯುತವಾದ ಈ ವೇದಿಕೆಯನ್ನು ಬರ–ನೆರೆಗಳಿಗೆ ಸಿಕ್ಕು ನಲುಗಿದವರ ಬದುಕನ್ನು ಎತ್ತರಸುವ ಚಿಂತನಾ ಕಾರ್ಯಾಗಾರ ವಾಗಬೇಕೆಂದು ಆಶಿಸುತ್ತೇನೆ.

ಕನ್ನಡ ಮಾತು ಬಲ್ಲ ಲೋಕ ಉಳಿದಾಗಲೆ ಕನ್ನಡ ಸಾಹಿತ್ಯ ಉಳಿದು ಬೆಳೆಯಬಲ್ಲದು ಅಲ್ಲವೆ? ಅಷ್ಟಕ್ಕೂ ಈ ಹೊತ್ತು ಕನ್ನಡವನ್ನು ಉಳಿಸಿಕೊಂಡು ಬರುತ್ತಿರುವವರು ಗ್ರಾಮೀಣ ಪ್ರದೇಶದ ಜನಸಾಮಾನ್ಯರೇ ಹೊರತು, ಐಟಿ, ಬಿಟಿ ಲೋಕದ ಶ್ರೀಮಂತ ಫಲಾನುಭವಿಗಳಲ್ಲ ಎಂಬುದನ್ನು ಮರೆಯದಿರೋಣ. ಆದ್ದರಿಂದಲೇ ಕರ್ನಾಟಕದ ಗ್ರಾಮೀಣ ಜನತೆಯ ಬದುಕು, ಅದರಲ್ಲೂ ಮಹಿಳೆಯರ, ದಲಿತರ, ಅಲ್ಪಸಂಖ್ಯಾತರ ಬದುಕಿನ ಬಗೆಗೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕಿದೆ.

> "ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದರೆ
> ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ
> ಪುಣ್ಯವಂತರಿಗೆ ನೆರಳಾದೆ"

ಇಂಥ ಹತ್ತಾರು ಜಾನಪದ ತ್ರಿಪದಿಗಳು ಹೆಣ್ಣಿನ ಜನುಮದ ಬಗೆಗೆ ನಕಾರಾತ್ಮಕ ಪರಿಕಲ್ಪನೆಯನ್ನು ಕಟ್ಟಿಕೊಡುತ್ತವೆ. ಶೋಷಣೆಯ ಹಲವು ಮಜಲುಗಳಲ್ಲಿ ಬಿದ್ದು ಒದ್ದಾಡಿದ ಅಸಂಖ್ಯ ಸ್ತ್ರೀಯರು ಹೀಗಲ್ಲದೆ ಮತ್ತೇಗೆ ಹಾಡಲು ಸಾಧ್ಯವಿತ್ತು ಎಂದು ಒಮ್ಮೆ ಅನಿಸಿದರೆ,

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು ಚನ್ನ ಮಲ್ಲಿಕಾರ್ಜುನ

ಎಂದು ಅಕ್ಕನಂತೆ ಈ ಎಲ್ಲರೂ ಸಿಡಿದು ಏಳಲಿಲ್ಲವೇಕೆ? ಎಂದು ಸಾತ್ವಿಕ ಕೋಪ ಬರದೆ ಇರದು. ಆದರೆ ಯಾವುದೇ ಒಂದು ಅಸಮಾನ ವ್ಯವಸ್ಥೆಯಲ್ಲಿ ತಲಸ್ಪರ್ಶಿ ಬದಲಾವಣೆ ತರದ ಹೊರತು ಶೋಷಣೆ ನಿಲ್ಲುವುದಿಲ್ಲ ಎಂಬ ಸತ್ಯವನ್ನು ಈಗ ಮನಗಂಡಿದ್ದೇವೆ. ಆಧುನಿಕ ಗಾಳಿಯೂ ಭಾರತದ ಜಿಡ್ಡುಗಟ್ಟಿದ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆ ತಂದಿರುವಂತೆ ಮಹಿಳೆಯರ ಬದುಕಿನಲ್ಲಿಯೂ ದೊಡ್ಡಮಟ್ಟದ ಬದಲಾವಣೆ ನಿರೀಕ್ಷಿಸಲಾಗಿತ್ತು. ಆದರೆ ಹಾಗಾಗಲಿಲ್ಲ ಎಂಬುದೆ ನೋವಿನ ಸಂಗತಿ. ಸ್ತ್ರೀಯರಿಗೆ ಸಂಬಂಧಿಸಿರುವಂತೆ ಒಟ್ಟು ಬದುಕು ಆಧುನಿಕವಾಗಿದೆ. ತತ್ಪರಿಣಾಮವಾಗಿ ಶೋಷಣೆಯ ಸ್ವರೂಪ ಮತ್ತು ಗಾತ್ರದಲ್ಲಿ ಬದಲಾವಣೆ ಆಗಿದೆ ಹೊರತು ಸಂಪೂರ್ಣ ಅವಳು ಬಂಧಮುಕ್ತಳಾಗಿಲ್ಲ. ಹೆಚ್ಚುತ್ತಿರುವ ವರದಕ್ಷಿಣೆ ಕಿರುಕುಳ, ಇನ್ನೂ ಜೀವಂತವಾಗಿರುವ ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಕೌಟುಂಬಿಕ ಹಿಂಸೆ ಇವೆಲ್ಲವೂ ರೋಗಗ್ರಸ್ತ ಸಮಾಜದ ಲಕ್ಷಣಗಳೇ ಆಗಿವೆ. ಸಮಾಜದ ನಂಬಿಕೆಗಳಲ್ಲಿ ಬದಲಾವಣೆ ತರದ ಹೊರತು, ಆಧುನಿಕ ಜೀವನ ಶೈಲಿಯಲ್ಲಾದ ಎಂಥ ಕ್ರಾಂತಿಕಾರಿ ಆವಿಷ್ಕಾರಗಳಾದರೂ ಸ್ತ್ರೀಯರ ಪರವಾಗಿರುವುದಿಲ್ಲ ಎಂಬುದಕ್ಕೆ ಹೆಣ್ಣುಭ್ರೂಣಹತ್ಯೆಯೇ ಜ್ವಲಂತ ಸಾಕ್ಷಿಯಾಗಿದೆ. ಈ ನಡುವೆ ಶಹರುಗಳ ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು, ಫ್ಯಾಕ್ಟರಿಗಳಲ್ಲಿ ದುಡಿಯುತ್ತಿರುವ ಮಹಿಳೆಯರು, ನೌಕರಸ್ತ ಮಹಿಳೆಯರು ಇನ್ನಿಲ್ಲದ ಸಂಕಟಗಳಿಗೆ ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಒಂಟಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಕೊಲೆಗಳು ಹೆಚ್ಚಾಗುತ್ತಿರುವುದು ತುಂಬಾ ಆತಂಕಕಾರಿ ಸಂಗತಿಯಾಗಿ ಪರಿಣಮಿಸುತ್ತಿದೆ. ಗ್ರಾಮೀಣ ಪ್ರದೇಶದ ರೈತಾಪಿ, ಕೃಷಿ, ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಹೊಸ ಹೊಸ ರೂಪ ತೊಟ್ಟು ಎದುರಾಗುತ್ತಿವೆ. ಈ ದೇಶದಲ್ಲಿ ಮಹಿಳೆಯರಿಗೆ ಕನಿಷ್ಠ ಶೌಚಾಲಯದ ವ್ಯವಸ್ಥೆ ಇಲ್ಲ ಎಂಬ ಸಂಗತಿಯನ್ನು ಎಷ್ಟು ಸಲ ಅಂತ ಪ್ರಶ್ನಿಸುವುದು ಎಂಬಂತಾಗಿದೆ.


ಇನ್ನೊಂದೆಡೆ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಧನಿಕರ ದರ್ಬಾರಿನಲ್ಲಿ ಗಮನಕ್ಕೂ ಬರದಂತೆ ನೇಪಥ್ಯಕ್ಕೆ ಸರಿಯುತ್ತಿವೆ. ಖಾಸಗೀಕರಣದ ಸಂತೆಯಲ್ಲಿ ಮೀಸಲಾಯಿತಿಯಂಥ ಅವಕಾಶಗಳು ಹಿಂಬಾಗಿಲಿನಿಂದ ಪರಾರಿಯಾಗುತ್ತಿದೆ. ಮಗದೊಂದೆಡೆ ಕೋಮುದ್ವೇಷದ ದಂಗೆಗೆ ಬಲಿಯಾಗಿ ಜನ ಸಾಮಾನ್ಯರು ಸಹನಾ ಸಂಸ್ಕೃತಿಗೆ ತಿಲಾಂಜಲಿ ಕೊಡುತ್ತಿದ್ದಾರೆ. ದಿನ ಬೆಳಗಾದರೆ ನಡೆಯುತ್ತಿರುವ ಚರ್ಚ್ ಮೇಲಿನ ದಾಳಿಗಳು, ಭಾಷಾ ಹೆಸರಿನಿಂದ ನಡೆಯುತ್ತಿರುವ ಅನಾವಶ್ಯಕ ದೊಂಬಿ, ಗಲಭೆಗಳು, ಮತ್ತೊಂದು ಕಡೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಗಡಿಸಮಸ್ಯೆಗಳು, ರಾಜಕೀಯ ದುರಾಕ್ರಮಣಗಳು ಹೀಗೆ ಎಷ್ಟೊಂದು ಸಮಸ್ಯೆಗಳು ರಿಪಿಯಾಗಿ ಕಾಡುತ್ತಿವೆ ಈ ಎಲ್ಲವುಗಳ ಪರಿಹಾರಕ್ಕಾಗಿ

ಪ್ರಭುತ್ವಕ್ಕೆ ದೊಡ್ಡ ಇಚ್ಛಾಶಕ್ತಿ ಬೇಕು ಇಂಥ ಇಚ್ಛಾಶಕ್ತಿಯ ಸಂಚಯಕ್ಕಾಗಿ ಸಾಂಸ್ಕೃತಿಕ ರೂವಾರಿಗಳು ತಮ್ಮ ಜವಾಬ್ದಾರಿಯನ್ನು ನಿಭಾಯಿಸಲೇಬೇಕಲ್ಲವೆ? ಕನ್ನಡಕ್ಕಾಗಿ ನಾವು ಕನಸಿದ ಶಾಸ್ತ್ರೀಯ ಸ್ಥಾನಮಾನ ದೊರೆತಾಗಿದೆ. ಆದರೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ದಿಶೆಯಲ್ಲಿ ನಾವೆಲ್ಲ ಕಾರ್ಯಪ್ರವೃತ್ತವಾಗಬೇಕಿದೆ. ಒಂದು ವೇಳೆ ನಾವು ಈ ದಾರಿಯಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಟ್ಟು ಧಾಪುಗಾಲು ಹಾಕದಿದ್ದರೆ ಮುಂದೊಂದು ದಿನ ಇಂಥದ್ದು ಬರುತ್ತದೆ. ಆಗ ಒಂದು ಕಡೆ ಶೋಷಕ ಇನ್ನೊಂದು ಕಡೆ ಶೋಷಿತರು, ಒಂದು ಕಡೆ ಇದ್ದವರು, ಇನ್ನೊಂದು ಕಡೆ ಇಲ್ಲದವರು, ವಿರುದ್ಧ ದಿಕ್ಕಿನಲ್ಲಿ ಎದುರುಬದಿರಾಗಿ ನಿಲ್ಲುವ ಈ ಎರಡರಲ್ಲಿ ನಾವು ಕೇವಲ ಒಂದನ್ನು ಆರಿಸಿಕೊಳ್ಳುವ ಪರಿಸ್ಥಿತಿ ಖಂಡಿತ ಬರುತ್ತದೆ. ಅಂಥ ನಿರ್ಣಾಯಕ ಹಂತದಲ್ಲಿ ಸಾಂಸ್ಕೃತಿಕ ಯಜಮಾನನಾದ ಸಾಹಿತಿ ಯಾರ ಪರ ನಿಲ್ಲಬೇಕು? ಶೋಷಿತರ ಪರವೋ? ಅಥವಾ ಶೋಷಕರ ಪರವೋ? ನಿರ್ಧಾರ ನಿಮಗೇ ಬಿಟ್ಟಿದೆ. ಜನರು ಹಸಿವಿನಿಂದ ಸಾಯುತ್ತಿರುವಾಗ, ನಿರುದ್ಯೋಗಿಗಳು ನಿರ್ಗತಿಕ ಸ್ಥಿತಿಗೆ ದೂಡಲ್ಪಡುತ್ತಿರುವಾಗ, ನಮ್ಮೆಲ್ಲರಿಗೂ ಅನ್ನ ಹಾಕಿ ತಾನೇ ಅನ್ನಾನ್ನ ನಿರ್ಗತಿಕನಾಗಿ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಸಾಂಸ್ಕೃತಿಕ ವಕ್ತಾರರಾದ ಸಾಹಿತಿ, ಕಲಾವಿದ, ಬುದ್ಧಿಜೀವಿಗಳೇ ನಿಮ್ಮ ನಿಲುವು ಮತ್ತು ನೆಲೆಯನ್ನು ಖಚಿತಪಡಿಸಿಕೊಳ್ಳುವ ತುರ್ತು ಈಗ ಬಂದಿದೆ. ಹೇಳಿ ನೀವು ಯಾರ ಪರ? ಯಾಕೆಂದರೆ ನಿಮ್ಮ ನಿರ್ದಿಷ್ಟ ನಿಲುವೇ ಸಾಹಿತ್ಯ ಮತ್ತು ಸಮಾಜದ ಗತಿಯನ್ನು ನಿರ್ಧರಿಸಲಿದೆ.

ಒಟ್ಟಾರೆಯಾಗಿ ವಚನಕಾರರು, ಹರಿದಾಸರು, ತತ್ವಪದಕಾರರು, ಜನಪದರು ಅಂದು ತಮ್ಮ ಸಾಹಿತ್ಯದಿಂದ ಸಾವಿರಾರು ವರ್ಷಗಳ ಉದ್ದಕ್ಕೂ ಮಾಡಿಕೊಂಡು ಬಂದ ಜನಜಾಗೃತಿ, ಶಾಂತಿ ಸೌಹಾರ್ದತೆ, ಪ್ರೀತಿ ವಾತ್ಸಲ್ಯ, ಕ್ರಾಂತಿ ಚಳವಳಿಗಳ ಮೂಲಕ ಸುಧಾರಣೆ ಮತ್ತು ಜನಹಿತಕಾರ್ಯವನ್ನು ಇಂದಿನ ಸಾಹಿತಿಗಳು ಸಾಧಿಸಿ ತೋರಿಸಬೇಕಾಗಿದೆ. ಬರೀ ಶಬ್ದಾಡಂಬರದ ರಂಜನೀಯ ಸಾಹಿತ್ಯ ನಮಗೆ ಬೇಡ, ಸಾಹಿತ್ಯ ಅದೊಂದು ಮಾನಸಿಕ ಸುಧಾರಣೆಯ ಸಾಧನ. ಅದು ಸಮಾಜದ ಅಭ್ಯುದಕ್ಕಾಗಿಯ ದುಡಿಯುವಂತಾಗಬೇಕು.

ವಿಜ್ಞಾನಿಯ ತಲೆ, ಸಂತನ ಹೃದಯ ಈ ದೇಶಕ್ಕೆ ಬೇಕು. ಬುದ್ಧನ ಕರುಣೆ, ಬಸವನ ಛಲ, ಬಾಬಾ ಸಾಹೇಬರ ಸ್ವಾಭಿಮಾನ ಮತ್ತು ಗಾಂಧೀಜಿಯ ಅಹಿಂಸೆಯ ತುಡಿತ ಈ ಎಲ್ಲವನ್ನೂ ಹುರಿಗೊಳಿಸಿ ಹೊಸೆದ ಹಗ್ಗದಿಂದಲೇ ನಾವು ಸರ್ವರ ಅಭ್ಯುದಯ ಸಾಧಿಸಬಲ್ಲ ನಭೋಸ್ಪರ್ಶಿ ವ್ಯವಸ್ಥೆಗೆ ಏಣಿ ಕಟ್ಟಬೇಕಾಗಿದೆ.

ಜೈ ಕರ್ನಾಟಕ, ಜೈ ಹಿಂದ್



ಪ್ರೊ. ಜಿ. ವೆಂಕಟಸುಬ್ಬಯ್ಯ

೭೭ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೪, ೫, ೬ ಫೆಬ್ರವರಿ ೨೦೧೧ ಸ್ಥಳ : ಬೆಂಗಳೂರು

ಪರಿಚಯ

ಪ್ರೊ. ಜಿ. ವೆಂಕಟಸುಬ್ಬಯ್ಯ

ಶಿಕ್ಷಣ : ಶತಾಯುಷಿಯಾದ ಕನ್ನಡ ವಿದ್ವಾಂಸ, ನಿಘಂಟು ತಜ್ಞ, ಪ್ರೊ. ಜಿ. ವೆಂಕಟಸುಬ್ಬಯ್ಯನವರು ಶ್ರೀರಂಗಪಟ್ಟಣದ ಗಂಜಾಂ ಗ್ರಾಮಕ್ಕೆ ಸೇರಿದವರು. ಶಿಕ್ಷಕರೂ ವಿದ್ವಾಂಸರೂ ಆದ ಗಂಜಾಂ ತಿಮ್ಮಣ್ಣಯ್ಯ ಮತ್ತು ತಾಯಿ ಸುಬ್ಬಮ್ಮ ದಂಪತಿಗಳ ಜ್ಯೇಷ್ಠಪುತ್ರರಾಗಿ ೨೩-೮-೧೯೧೩ರಲ್ಲಿ ಜನಿಸಿದರು. ೧೯೨೦ರಿಂದ ೧೯೩೦ರವರೆಗೆ ಪ್ರೌಢಶಾಲೆ ಶಿಕ್ಷಣವನ್ನು ಮಧುಗಿರಿಯಲ್ಲಿ ಮುಗಿಸಿ ೧೯೩೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನು ೧೯೩೮ರಲ್ಲಿ ಬಿ.ಎ. ಪದವಿಯನ್ನು ಪಡೆದರು.

ಉದ್ಯೋಗ : ೧೯೪೫ರಿಂದ ೧೯೭೨ರವರೆಗೆ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ೧೯೭೩ರಲ್ಲಿ ನಿವೃತ್ತರಾದರು.

ಸೇವೆ : ೧೯೫೪-೫೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದರು. ೧೯೬೪-೬೯ರಲ್ಲಿ ಪರಿಷತ್ತಿನ ಅಧ್ಯಕ್ಷರಾದರು. ೧೯೭೩ರಿಂದ ೧೯೯೨ರವರೆಗೆ ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ಶ್ರಮಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಅಖಿಲ ಭಾರತ ನಿಘಂಟುಕಾರ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಮನ್ನಣೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಗ್ರಂಥ ಪ್ರಶಸ್ತಿ (೧೯೮೭)ಮಾಸ್ತಿ ಪ್ರಶಸ್ತಿ (೨೦೦೫) ಸೇಡಿಯಾಪು ಪ್ರಶಸ್ತಿ (೧೯೯೪) ನಾಡೋಜ ಪ್ರಶಸ್ತಿ. ಆಳ್ವಾಸ್ ನುಡಿಸಿರಿ ಅಧ್ಯಕ್ಷ ಗೌರವ, ಗೋಕಾಕ್ ಪ್ರಶಸ್ತಿ, ಅನಕೃ ನಿರ್ಮಾಣ್ ಸ್ವರ್ಣಪ್ರಶಸ್ತಿ ಇತ್ಯಾದಿ ಲಭಿಸಿವೆ.

ಸಾಹಿತ್ಯ ಸೇವೆ : ನಿಘಂಟು ಸಂಪಾದನೆ, ಸಾಹಿತ್ಯ ಚರಿತ್ರೆ ಗ್ರಂಥ ರಚನೆಯಲ್ಲಿ ತಜ್ಞರಾದ ಇವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಕೆಲವು ಹೀಗಿವೆ :

ನಯಸೇನ, ಅನುಕಲ್ಪನೆ, ಕಬೀರ್, ಸರ್ವಜ್ಞ, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ, ಕನ್ನಡವನ್ನು ಉಳಿಸಿ ಬೆಳೆಸಿ, ಎರವಲು ಶಬ್ದಕೋಶ, ಇಂಗ್ಲಿಷ್-ಕನ್ನಡ ನಿಘಂಟು. ಇಗೋ ಕನ್ನಡ ಇತ್ಯಾದಿ

ಪ್ರೊ. ಜಿ. ವೆಂಕಟಸುಬ್ಬಯ್ಯ

೭೭ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

೨೦೧೧

ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹರಂ
ಪ್ರವೃತ್ತಾಯನ್ಮುಖಾದ್ದೇವ ಸರ್ವಭಾಷಾ ಸರಸ್ವತೀ

– ನಾಗಮರ್ವ

ಯಾರ ಮುಖದಿಂದೆಳ್ದು ನಿಂದಳೊ
ಭಾಷೆಯೆಲ್ಲಕು ದೇವಿ ಸರಸತಿ
ಅಂಥ ದೇವಗೆ ಎಲ್ಲ ಬಲ್ಲಗೆ
ತಮವ ದೂಡುವ ಹೊಳೆವ ಬೆಳಕಿಗೆ
ಇದಿಗೆ ನನ್ನಯ ವಂದನೆ

ಎಲ್ಲ ಸಾರಸ್ವತ ಚೇತನಗಳಿಗೂ ನನ್ನ ನಮಸ್ಕಾರ,

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಲೇಖಕರಿಗೆ ನೀಡುವ ಅತ್ಯಂತ ಪ್ರಮುಖವಾದ ಗೌರವ – ಇಂಥ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷ ಪದವಿ. ನನಗೆ ಈ ಗೌರವವನ್ನು ನೀಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೂ ಇತರ ಕಾರ್ಯಕಾರಿ ಸಮಿತಿ ಸದಸ್ಯರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಕೆಲವು ಅರಿವಿನ ಮಾತುಗಳನ್ನು ಹೇಳುತ್ತೇನೆ. ಶಾಂತವಾಗಿ ಕೇಳಬೇಕೆಂದು ನನ್ನ ಬಿನ್ನಹ.

ಕನ್ನಡದ ಕಥೆ ಬಲು ದೊಡ್ಡದು

ಕನ್ನಡನಾಡಿನ ಚರಿತ್ರೆಯಲ್ಲಿ ಕ್ರಿ.ಶ. ಹದಿನೆಂಟನೆಯ ಶತಮಾನದ ಕೊನೆಯ ಭಾಗಕ್ಕೂ ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗಕ್ಕೂ ಉಂಟಾದ ಸಂಧಿಕಾಲವು ಕನ್ನಡ ಭಾಷಾ ಸಾಹಿತ್ಯಗಳ ದೃಷ್ಟಿಯಿಂದ ಒಂದು ವಿಶಿಷ್ಟ ಪರಿಸರದಲ್ಲಿ ಮುಳುಗಿದ್ದ ಕಾಲ. ರಾಜಕೀಯವಾಗಿ ಕನ್ನಡ ಪ್ರದೇಶಗಳು ವಿವಿಧ ಆಡಳಿತಗಳಿಗೆ ಸಿಕ್ಕಿಕೊಂಡು ಯಾರಿಗೂ ಯಾವ ರಾಜಾಶ್ರಯವೂ ದೊರಕದಿದ್ದ ಕಾಲ. ಇಂಥ ಸಮಯದಲ್ಲಿ ಪಾಶ್ಚಾತ್ಯ ದೇಶಗಳಿಂದ ಕ್ರಿಸ್ತಮತ ಪ್ರಚಾರಕರು ಭಾರತ ದೇಶಕ್ಕೆ ಬಂದು ಭಾರತೀಯರಲ್ಲಿದ್ದ ಶೋಷಿತವರ್ಗದ ಬಡಜನರನ್ನು ಕ್ರಿಸ್ತಮತಕ್ಕೆ ಮತಾಂತರಗೊಳಿಸುವ ಪ್ರಯತ್ನವನ್ನು ಪ್ರಾರಂಭ ಮಾಡಿದ್ದರು. ಜರ್ಮನಿಯಿಂದ ಬಂದ ಬಾಸೆಲ್ ಮಿಷನ್ನಿನ ಮತ ಪ್ರಚಾರಕರು ಭಾರತದ ಪಶ್ಚಿಮ ಕರಾವಳಿಯಲ್ಲಿ

ಮಂಗಳೂರನ್ನು ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಕರಾವಳಿಯ ಉದ್ದಕ್ಕೂ ತಮ್ಮ ಉದ್ದೇಶವನ್ನು ಸಾರ್ಥಕಗೊಳಿಸುತ್ತಿದ್ದರು. ಈ ಮತ ಪ್ರಚಾರಕರೆಲ್ಲ ತುಂಬ ಸಮರ್ಥರಾದ ಬುದ್ಧಿವಂತರು. ವಿಶ್ವವಿದ್ಯಾನಿಲಯಗಳಲ್ಲಿ ತಿಳಿವಳಿಕೆಯನ್ನು ಸಂಪಾದಿಸಿದ್ದವರು. ಮತಪ್ರಚಾರದಲ್ಲಿ ಸಿದ್ಧಹಸ್ತರು. ಅವರು ತಮ್ಮ ಮತಪ್ರಚಾರ ಕಾರ್ಯವು ಕರ್ನಾಟಕದಲ್ಲಿ ಸಫಲವಾಗಬೇಕಾದರೆ ದೇಶಭಾಷೆಯಾದ ಕನ್ನಡದ ಸಹಾಯವು ಅಗತ್ಯವೆಂಬುದನ್ನು ಮನಗಂಡು ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿತರು. ಅದರಲ್ಲಿ ವಿದ್ವಾಂಸರಾಗಿ ಕಾವ್ಯ, ವ್ಯಾಕರಣ, ನಿಘಂಟು ಇತ್ಯಾದಿ ವಿಷಯಗಳಲ್ಲಿ ನಿಷ್ಣಾತರಾಗಿ ತಮ್ಮ ಪ್ರಚಾರ ವರ್ಗದವರಿಗೆ ತಿಳಿವಳಿಕೆಯನ್ನು ನೀಡಲು ಉತ್ತಮ ಸಾಹಿತ್ಯವನ್ನು ರಚಿಸಿದರು. ಅವರು ಮಾಡಿದ ಕಾರ್ಯವೆಲ್ಲ ಸಮರ್ಥರು ಮಾಡುವ ಕಾರ್ಯವಾಗಿತ್ತು. ಅವರ ಉದ್ದೇಶ ಮತಪ್ರಚಾರವಾದರೂ ಅದು ಕನ್ನಡ ಹಳೆಯ ಗ್ರಂಥಗಳ ಪರಿಷ್ಕರಣಗಳಿಗೆ ಕಾರಣವಾಯಿತು. ಡಾ.ಫರ್ಡಿನಾಂಡ್ ಕಿಟ್ಟಲನು ೧೮೯೪ರಲ್ಲಿ ಮುದ್ರಿಸಿದ ಕನ್ನಡ – ಇಂಗ್ಲಿಷ್ ನಿಘಂಟು ಇಂಥ ಕಾರ್ಯದ ತಲೆಮಣಿಯಾಯಿತು.

ಇದೇ ವೇಳೆಗೆ ಭಾರತದ ಎಲ್ಲೆಡೆಗಳಲ್ಲಿಯೂ ಬ್ರಿಟಿಷರ ಆಡಳಿತದ ಪರಿಣಾಮವಾಗಿ ಇಂಗ್ಲಿಷ್ ಭಾಷಾ ಸಾಹಿತ್ಯಗಳನ್ನು ಬೋಧಿಸುವ ಶಾಲೆಗಳು ಸ್ಥಾಪಿತವಾದವು. ಅವುಗಳಲ್ಲಿ ವ್ಯಾಸಂಗ ಮಾಡಿದ ಭಾರತೀಯ ಯುವಕರಲ್ಲಿ ಆಂಗ್ಲ ಸಾಹಿತ್ಯದ ವಿಷಯದಲ್ಲಿ ಅಪಾರ ವಿಶ್ವಾಸವು ಬೆಳೆಯಿತು. ಅಂಥ ಸಾಹಿತ್ಯವು ಕನ್ನಡದಲ್ಲಿ ಇರಲಿಲ್ಲವಾದುದರಿಂದ ಕೆಲವು ಇಂಗ್ಲಿಷ್ ಸಾಹಿತ್ಯದ ಅತ್ಯುತ್ತಮ ಕವನಗಳನ್ನೂ ಗದ್ಯಕೃತಿಗಳನ್ನೂ ನಾಟಕಗಳನ್ನೂ ಕನ್ನಡಕ್ಕೆ ಅನುವಾದ ಮಾಡಿದರು. ಬಿಡಿಬಿಡಿಯಾಗಿ ಇಂಥ ಪ್ರಯತ್ನಗಳು ನಡೆದರೂ ಕನ್ನಡದ ಬೆಳವಣಿಗೆಗೆ ಸ್ಥಿರವಾದ ಯಾವ ಪ್ರಯತ್ನಗಳೂ ನಡೆದಿರಲಿಲ್ಲ. ಇಂಥ ಅತಂತ್ರ ಸನ್ನಿವೇಶದಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪದವಿಯನ್ನು ಪಡೆದ ಉತ್ಸಾಹಿ ತರುಣರಾದ ರಾ. ಹ. ದೇಶಪಾಂಡೆ ಅವರು ಕೆಲವರು ಸ್ನೇಹಿತರೊಡಗೂಡಿ ಧಾರವಾಡದಲ್ಲಿ ೧೮೯೦ರಲ್ಲಿ **ವಿದ್ಯಾವರ್ಧಕ ಸಂಘ**ವನ್ನು ಸ್ಥಾಪಿಸಿದ್ದರು. ಕನ್ನಡದ ಬೆಳವಣಿಗೆಗೆ ಇದೊಂದು ಪ್ರಮುಖವಾದ ಘಟನೆಯಾಯಿತು. ಈ ಸಂಘದಿಂದ ಕನ್ನಡದ ಅಭಿವೃದ್ಧಿಯ ಕೆಲಸಗಳು ಕೆಲವು ನೆರವೇರಿದವು. ಇದರ ಮುಂದಿನ ಪ್ರಮುಖವಾದ ಘಟನೆಯೂ ಅದೇ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನೆರವೇರಿತು. ಮೈಸೂರಿನಲ್ಲಿದ್ದ ಬಿ.ಎಂ. ಶ್ರೀಕಂಠಯ್ಯನವರು ಆ ಸಂಘದಲ್ಲಿ ೧೯೧೧ರಲ್ಲಿ **'ಕನ್ನಡ ಮಾತು ತಲೆ ಎತ್ತುವ ಬಗೆ'** ಎಂಬ ವಿಷಯವನ್ನು ಕುರಿತು ವಿಚಾರಪೂರ್ಣವಾದ ಒಂದು ಉಪನ್ಯಾಸವನ್ನು ಮಂಡಿಸಿದರು. ಈ ಉಪನ್ಯಾಸದ ಪ್ರಭಾವವು ಕನ್ನಡ ಜನರ ಮನಸ್ಸಿನಲ್ಲಿ ಗಾಢವಾದ ಪರಿಣಾಮವನ್ನು ಉಂಟುಮಾಡಿತು. ಜನತೆಯ ಮನಸ್ಸಿನಲ್ಲಿ ಈ ಉಪನ್ಯಾಸದ ಪರಿಣಾಮವಾಗಿ, ಕನ್ನಡದ ಅಭಿವೃದ್ಧಿಗೆ ಒಮ್ಮತದ ಕಾರ್ಯಗಳು

ನಡೆಯಬೇಕೆಂಬ ಭಾವನೆ ಬೇರೂರಿಬಿಟ್ಟಿತು. **ಇದೇ ಕನ್ನಡದ ನವೋದಯದ ಪ್ರಾರಂಭದ ಕೆಲಸ.**

ಇದೇ ೧೯೧೧ರಲ್ಲಿ ಮಂಜೇಶ್ವರದ ಗೋವಿಂದ ಪೈಗಳೂ ಒಂದು ಕ್ರಾಂತಿಕಾರಕ ಕಾರ್ಯವನ್ನು ಮಾಡಿದರು. ಕನ್ನಡದ ಪದ್ಯಗಳ ಪ್ರತಿಸಾಲಿನ ಮೊದಲಭಾಗದಲ್ಲಿ ಎರಡನೆಯ ವರ್ಣವು ಒಂದೇ ಆಗಿರಬೇಕೆಂಬ ಸಂಪ್ರದಾಯವು ಕೃತ್ರಿಮವಾದುದೆಂದು ತೀರ್ಮಾನಿಸಿ ಆ ಸಂಪ್ರದಾಯವನ್ನು ಮುರಿದು, ಪ್ರಾಸವನ್ನು ಬಿಟ್ಟು 'ಹೊಲೆಯನು ಯಾರು?' ಎಂಬ ಕವನವನ್ನು ರಚಿಸಿ 'ಸ್ವದೇಶಾಭಿಮಾನಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿಬಿಟ್ಟರು. ಇದೇ ಸಮಯದಲ್ಲಿ ಬಿ.ಎಂ. ಶ್ರೀಯವರ ಶಿಷ್ಯರಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತಮ್ಮ 'ಸಣ್ಣಕತೆಗಳು' ಎಂಬ ಪುಸ್ತಕವನ್ನು ಪ್ರಕಟಪಡಿಸಿದರು. ಈ ಕಾರ್ಯಗಳಿಂದ ಕೋಪಗೊಂಡ ಸಂಪ್ರದಾಯವಾದಿಗಳು ಪೈ ಅವರನ್ನು ಸಾಹಿತ್ಯ ಲೋಕದಲ್ಲಿ 'ಹುಲಿ' ಎಂದೂ ಮಾಸ್ತಿಯವರ ಸಣ್ಣಕತೆಗಳನ್ನು 'ಸಣ್ಣ ಕತ್ತೆ'ಗಳೆಂದೂ ಟೀಕಿಸಿದರು. ಪೈ ಅವರು ಈ ಟೀಕಕಾರರಿಗೆ ಇತ್ತ ಉತ್ತರ ಹೀಗಿತ್ತು: 'ಇಂದು ಒಬ್ಬನೇ ನಡೆದ ಮೇಕೆದಾರಿ ಮುಂದೆ ತೇರೆಳೆಯುವ ಹೆದ್ದಾರಿ'. ಮಾಸ್ತಿಯವರ ಪ್ರತಿಕ್ರಿಯೆ ಹೀಗಿತ್ತು: 'ನಿಜ. ನನ್ನ ಸಣ್ಣ ಕತ್ತೆಗಳು ನಿಮ್ಮ ಮನಸ್ಸಿನ ಮೈಲಿಗೆಯನ್ನು ಅಗಸನ ಬಳಿಗೆ ಒಯ್ಯುತ್ತವೆ'. ಶ್ರೀಯವರ ಬಗ್ಗೆ ಅವರ ಕವನಸಂಕಲನ ಪ್ರಕಟವಾದಾಗಲೂ ಇಂಥವೇ ವ್ಯಂಗ್ಯವಾದ ಮಾತುಗಳು ಬಂದವು. ಆದರೆ ಅವರು ವ್ಯಸನದಿಂದ ಆ ಬಗೆಯ ಮಾತುಗಳನ್ನು ನುಂಗಿಕೊಂಡರು. ಹೊಸಗನ್ನಡದ ನವೋದಯವು ಪ್ರಾರಂಭವಾಗಿಬಿಟ್ಟಿತ್ತು.

ಶ್ರೀಯವರ 'ಇಂಗ್ಲಿಷ್ ಗೀತಗಳು' ಪುಸ್ತಕವು ಪ್ರಕಟವಾಗಿ ಈ ಆಂದೋಳನವು ಬೃಹತ್ಪ್ರಮಾಣದಲ್ಲಿ ಮುಂದುವರೆಯಿತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಶ್ರೀಯವರ ಶಿಷ್ಯರು 'ಕಿರಿಯ ಕಾಣಿಕೆ', 'ತಳಿರು' ಎಂಬ ಹೊಸಕನ್ನಡ ಕವನ ಸಂಕಲನಗಳನ್ನು ಪ್ರಕಟಿಸಿ ಈ ಚಳವಳಿಯನ್ನು ಮುದುವರಿಸಿದರು. ಬಳಿಕ ಶ್ರೀಯವರು ಕೈಗೊಂಡ ಭಾಷಣಗಳ ಪ್ರಚಾರಕಾರ್ಯ ಗಾಢವಾಯಿತು. ನವೋದಯ ಬೆಳೆಯಿತು. ಈ ಉದಯ ದೊಡ್ಡ ಕವಿ ಕುವೆಂಪು 'ನವೀನ' ಎಂಬ ಕವನವನ್ನು ಪ್ರಕಟಿಸಿ ನವೋದಯದ ಪ್ರಭಾವವನ್ನು ಕಾವ್ಯದಲ್ಲಿ ಮೂಡಿಸಿದರು. ಆ ಕವನವು ಹೀಗಿದೆ:

ನಾಡಿನ ಪುಣ್ಯದ ಪೂರ್ವದಿಗಂತದಿ
        ನವ ಅರುಣೋದಯ ಹೊಮ್ಮುತ್ತಿದೆ!
ಚಿರನೂತನ ಚೇತನದುತ್ಸಾಹದಿ
        ನವೀನ ಜೀವನ ಚಿಮ್ಮುತ್ತಿದೆ!
ಅಭಿನವ ಮಧುಕೋಕಿಲ ಕಲಕಂಠದಿ
        ಸ್ವರ ಸುರಚಾಪಗಳುಣ್ಮುತಿವೆ !
ಶ್ಯಾಮಲ ಕಾನನ ಸುಮ ಸಮ್ಮೇಲದಿ

ಇಂಚರ ಸಾಸಿರ ಪೊಣ್ಮುತಿವೆ !
ಕಿವಿ ಕಣ್ಣಾಗುತಿದೆ !
ಕಣ್ ಕಿವಿಯಾಗುತಿದೆ !

ಈ ಸಾಲುಗಳು ಯುವಕವಿಗಳ ಬಾಯಲ್ಲಿ ಶಾಶ್ವತವಾಗಿ ನಿಂತುಬಿಟ್ಟವು. ಈ ಕಾರ್ಯಗಳೆಲ್ಲವೂ ೧೯೧೧ರ ಉಪನ್ಯಾಸದ ಪರಿಣಾಮವಾಗಿ ಕನ್ನಡ ಜನತೆ ಕಂಡ ಕನಸಿನ ಪ್ರಭಾವ. ಈ ಕನಸುಗಳು ಮೂಡಿದ್ದು ಇಂದಿಗೆ, ಈ ಬೆಂಗಳೂರಿನ ಸಾಹಿತ್ಯ ಸಮ್ಮೇಳನವು ನಡೆಯುತ್ತಿರುವ ೨೦೧೧ರ ಸಮಯಕ್ಕೆ ಸರಿಯಾಗಿ ನೂರು ವರ್ಷಗಳ ಹಿಂದೆ. ಆದ್ದರಿಂದ ಇಂದು ನೆರವೇರುತ್ತಿರುವ ಸಮ್ಮೇಳನವು **ನವೋದಯದ ಶತಮಾನದ ಉತ್ಸವ ಸಮಾರಂಭ**ವೆಂದು ನಾನು ತಿಳಿದಿದ್ದೇನೆ. ಇಂದು ಇದರಲ್ಲಿ ಭಾಗವಹಿಸಿ ತಮ್ಮೆದುರು ಮಾತನಾಡಲು ನನಗೆ ಸಂತೋಷವಾಗುತ್ತಿದೆ.

ಈ ನೂರು ವರ್ಷಗಳಲ್ಲಿ ಈ ಆಂದೋಲನದಿಂದ ನಮಗೆ ಆದ ಲಾಭವೇನು ಎಂದು ಲೆಕ್ಕ ಹಾಕುವುದು ತಪ್ಪಲ್ಲ. ಅದು ಲಾಭದಾಯಕವಾದ ಸಿಂಹಾವಲೋಕನವಾಗುತ್ತದೆ.

ಶ್ರೀಯವರ ಉದ್ದೇಶದಲ್ಲಿ ಮೂರು ಮುಖ್ಯವಾದ ವಿಷಯಗಳಿದ್ದವು.

೧. ಇಲ್ಲಿಯವರೆಗೆ ಸಂಸ್ಕೃತದ ಪೋಷಣೆಯಲ್ಲಿ ಬೆಳೆದ ಕನ್ನಡವು ಇನ್ನು ಮುಂದೆ ಇಂಗ್ಲಿಷ್ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಬೇಕು.

೨. ಹೊಸಗನ್ನಡಕ್ಕೆ ನೂತನ ಗದ್ಯದ ಶೈಲಿಯನ್ನು ತಂದುಕೊಡಬೇಕು.

೩. ಒಟ್ಟಿನಲ್ಲಿ ಉದಾರವಾದ ಜೀವನಧರ್ಮದ ಸಾರವನ್ನು ಪ್ರಚಾರ ಮಾಡಬೇಕು.

ಇಂಗ್ಲಿಷ್ ಸಾಹಿತ್ಯಕ್ಕೆ ಗ್ರೀಕ್, ಜರ್ಮನ್, ಫ್ರೆಂಚ್ ಮತ್ತು ಲ್ಯಾಟಿನ್ ಭಾಷಾ ಸಾಹಿತ್ಯಗಳ ತತ್ವಗಳು ಇಳಿದು ಬಂದಿದ್ದವು. ಆ ಎಲ್ಲ ಪ್ರಭಾವಗಳೂ ಕನ್ನಡದ ಬೆಳವಣಿಗೆಯಲ್ಲಿ ಸಹಾಯವಾಗುತ್ತವೆ ಎಂಬುದು ಶ್ರೀಯವರ ಆಸೆಯಾಗಿತ್ತು. ಕನ್ನಡದಲ್ಲಿ ಇಂದಿವನರೆಗೆ ಆಗಿರುವ ಬೆಳವಣಿಗೆಯಿಂದ ಆ ಆಸೆಯು ಈಡೇರಿದೆ ಎಂಬುದು ಸಾಬೀತಾಗುತ್ತದೆ. ನವೋದಯದ ಪರಿಣಾಮವಾಗಿ ಕನ್ನಡದ ಸಾಹಿತ್ಯದಲ್ಲಿ ಏನೇನು ಬದಲಾವಣೆಯಾಗಿವೆ ಎಂಬುದನ್ನು ಮೇಲುಸ್ತರದಲ್ಲಿ ಪರಿಶೀಲಿಸಿದರೂ ನಿಜವಾಗಿ ಆಶ್ಚರ್ಯವಾಗುತ್ತದೆ.

ಮೈಸೂರಿನಲ್ಲಿ ೧೯೧೬ರಲ್ಲಿ ವಿಶ್ವವಿದ್ಯಾನಿಲಯವು ಸ್ಥಾಪಿತವಾದ ಮೇಲೆ ಆ ಊರಿನ ಮಹಾರಾಜ ಕಾಲೇಜು ಕನ್ನಡ ಸಾಹಿತ್ಯದ ಚಟುವಟಿಕೆಗಳ ಕೇಂದ್ರ ವಾಯಿತು. ಮೈಸೂರಿನಲ್ಲಿ ಪ್ರಾಚ್ಯವಸ್ತು ಭಂಡಾರವು ಕಾರ್ಯವನ್ನು ಪ್ರಾರಂಭಿಸಿತು. ಆ ಭಂಡಾರದಲ್ಲಿ ಪ್ರಾಚೀನವಾದ ಸಂಸ್ಕೃತ, ಕನ್ನಡ ಗ್ರಂಥಗಳು ಸಂಗ್ರಹವಾದವು.

ಅನೇಕ ಹಸ್ತಪ್ರತಿಗಳು ಶೇಖರಗೊಂಡವು. ಹೊಸದಾಗಿ ಅನೇಕ ಗ್ರಂಥಗಳು ಸಂಪಾದಕರಿಂದ ಪರಿಷ್ಕರಿಸಲ್ಪಟ್ಟು ಮುದ್ರಣಕ್ಕೆ ಸಿದ್ಧವಾದವು. ಕಾಲೇಜಿನಲ್ಲಿ ಕನ್ನಡದ ಆಳವಾದ ವ್ಯಾಸಂಗ ನಡೆಯಿತು. ಹೊಸಗನ್ನಡದಲ್ಲಿ ಪ್ರಾಚೀನ ಗ್ರಂಥ ವಿಮರ್ಶೆಗಳು ರಚಿತವಾದವು. ಮೊತ್ತಮೊದಲಿಗೆ ಕುಮಾರವ್ಯಾಸ ಪ್ರಶಸ್ತಿ ರಚಿತವಾಯಿತು. ನಾಡಿನಲ್ಲೆಲ್ಲ ಹೊಸ ಹೊಸ ಕರ್ನಾಟಕ ಸಂಘಗಳು ಸ್ಥಾಪಿತವಾಗಿ ಸಾಹಿತ್ಯ ಪ್ರಚಾರಕಾರ್ಯ ನೆರವೇರಿತು. ಜನತೆಯಲ್ಲಿ ಕನ್ನಡದ ಬಗ್ಗೆ ಜಾಗೃತಿಯುಂಟಾಯಿತು.

ಸೃಷ್ಟಿಶೀಲ ಸಾಹಿತ್ಯವು ಪ್ರಕಟವಾದಂತೆಲ್ಲ ಹೊಸ ಲೇಖಕರ ಧ್ಯೇಯೋದ್ದೇಶಗಳು ಪ್ರಕಟವಾದವು. ಹಿಂದೆ ಆಧ್ಯಾತ್ಮಿಕದಲ್ಲಿ ಪ್ರಮುಖವಾದ ಆಸಕ್ತಿ ಇದ್ದದ್ದು ಈಗ ಬದಲಾಗಿ ಇಹದಲ್ಲಿರುವ ಮಾನವನ ಬಾಳಿನ ವಿಶ್ಲೇಷಣೆಯು ಹೆಚ್ಚು ಪ್ರಾಧಾನ್ಯವನ್ನು ಪಡೆಯಿತು. ಮಾನವನು ದೇವನೂ ಅಲ್ಲ ರಾಕ್ಷಸನೂ ಅಲ್ಲ – ಆದರೆ ಅವನು ಒಳಿತು ಕೆಡಕುಗಳ ಮಿಶ್ರಣವಾದ ಸೃಷ್ಟಿ. ಅವನಿಗೆ ದೇಶಪ್ರೇಮವಿದೆ, ಭಾಷಾ ಪ್ರೇಮವಿದೆ, ದೈವದಲ್ಲಿ ನಂಬಿಕೆ ಇದೆ, ಸಹಜೀವಿಗಳಲ್ಲಿ ಸ್ನೇಹವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜೀವನದಲ್ಲಿ ಶ್ರದ್ಧೆ ಇದೆ – ಭಕ್ತಿ ಭಾವನೆಯೂ ಇದೆ. ಕೆಡುಕನ್ನು ತಿರಸ್ಕರಿಸಿ ಒಳಿತನ್ನು ಬಳಸುವ, ಮಾನವನ ಸ್ವಭಾವವಾದ ನೀತಿಯುತವಾದ ಪ್ರಾಮಾಣಿಕವಾದ ಬದುಕಿನ ಆಸಕ್ತಿ ಹೆಚ್ಚಾಯಿತು, ಅವನಿಗೆ. ಭಾರತ ದೇಶದ ಅತ್ಯಂತ ಹಿರಿಯ ಚೇತನಗಳಾದ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರಬಿಂದೊ, ರವೀಂದ್ರನಾಥ, ರಾಜಾರಾಮಮೋಹನರಾಯ್ ಮುಂತಾದವರ ತಾತ್ವಿಕ ಚಿಂತನೆಗಳು ಈ ಹೊಸ ಯುವಜನಾಂಗಕ್ಕೆ ಮಾರ್ಗದರ್ಶಕವಾದವು. ಬಾಳು ನ್ಯಾಯನಿಷ್ಠೆಯಿಂದ ಕೂಡಿರಬೇಕು. ಪ್ರಾಮಾಣಿಕತೆ ಪ್ರದರ್ಶಿತವಾಗಬೇಕು, ಪಾರದರ್ಶಕವಾಗಿರಬೇಕು ಮುಂತಾದ ಉದಾತ್ತ ಭಾವನೆಗಳು ಜನತೆಗೆ ಬೇಕಾದವು. ಒಟ್ಟಿನಲ್ಲಿ ನವಭಾರತ ನಿರ್ಮಾಣವಾಗ ಬೇಕೆಂಬುದೇ ಮುಖ್ಯದೃಷ್ಟಿ.

ಈ ಹೊಸ ನಂಬಿಕೆಗಳಿಂದ ಸಾಹಿತ್ಯದ ಎಲ್ಲ ಪ್ರಕಾರಗಳೂ ಜೀವಂತವಾದವು. ಕಾವ್ಯ, ನಾಟಕ, ಕತೆ, ಕಾದಂಬರಿ, ಜೀವನಚಿತ್ರ, ಪ್ರಬಂಧ, ವಿಮರ್ಶೆ – ಇವೆಲ್ಲ ಬಹುಸಂಖ್ಯೆಯಲ್ಲಿ ಮುದ್ರಣಗೊಂಡವು. ದೇಶೋದ್ಧಾರದ ಜೊತೆಗೆ ಆತ್ಮೋದ್ಧಾರವೂ ಸೇರಿಕೊಂಡಿತು. ಶೋಷಿತರನ್ನು ಎತ್ತಿ ನಿಲ್ಲಿಸುವ ಪ್ರಯತ್ನ ಹೆಚ್ಚಾಯಿತು. ಸ್ವಾತಂತ್ರ್ಯಪ್ರಿಯತೆ ಎಷ್ಟು ಗಾಢವಾಯಿತೆಂದರೆ ಕವಿಗಳು ಹಾಡಿದರು ಹೀಗೆ :–

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ !

ಹೀಗೆ ಗಟ್ಟಿಯಾಗಿ ಘೋಷಿಸುವುದು ಸಾಧ್ಯವಾಯಿತು.

ನವ ಸಾಹಿತಿಗಳೂ ತಮ್ಮ ಕೃತಿಗಳಿಂದ ಗಳಿಸಿದ ಹಿರಿಮೆ ಪ್ರಖರವಾಗಿತ್ತು. ಪರ್ವತೋಪಮವಾದ ಪ್ರತಿಭೆಯ ಮೂವರು ಮಹಾಕವಿಗಳು ನಾಡಿನಲ್ಲಿ ಬೆಳಗಿದರು.

ಮಹಾಕಾವ್ಯಗಳ ಕಾಲ ಮುಗಿದುಹೋಯಿತು ಎಂಬಂತಿದ್ದ ಸಮಯದಲ್ಲಿ ಒಂದು ಅದ್ಭುತ ಮಹಾಕಾವ್ಯ ಸೃಷ್ಟಿಯಾಯಿತು. ಸಂಕೀರ್ಣವಾದ ಮಾನವ ಜೀವಿತದ ಸಾವಿರ ಮುಖಗಳನ್ನು ಅತ್ಯಂತ ಭಾವತೀವ್ರತೆಯಿಂದ ಜಾನಪದ ಸತ್ವದಿಂದ ಚಿತ್ರಿಸಿ ಹಾಡಿದ ಕವಿಯೊಬ್ಬರು ಮಹಾಕವಿಗೆ ಸಮಾನರಾದರು. ಹರಿಸರ್ವೋತ್ತಮತ್ವದ ಆಧ್ಯಾತ್ಮಿಕ ದೃಷ್ಟಿಯ ಮತ್ತೊಬ್ಬ ಕವಿ ಮತ್ತೊಂದು ಕಿರು ಮಹಾಕಾವ್ಯವನ್ನೇ ರಚಿಸಿದರು. ಈ ಮೂವರಿಗೆ ಕಿಂಚಿನ್ನೂನವೆಂಬಂತೆ ಅನೇಕ ಕವಿಗಳು ಆಸಕ್ತರಾದ ಓದುಗರಿಗೆ ಹೃದಯ ತುಂಬುವ ಕವಿತೆಗಳನ್ನು ರಚಿಸಿದರು. ನವ್ಯ ಕಾವ್ಯವೆಂಬ ಹೊಸ ರಚನೆಗಳನ್ನು ರಚಿಸಿ ಮತ್ತೆ ಇಬ್ಬರು ಕವಿವರ್ಯರು ಇಂಗ್ಲೆಂಡ್ ಅಮೆರಿಕಗಳ ಹೊಸಕಾವ್ಯವನ್ನು ಅನುಸರಿಸಿ ಕನ್ನಡ ಕಾವ್ಯ ರಚನೆಗೆ ಹೊಸ ಭಾಷೆಯನ್ನು ಹೊಂದಿಸಿದರು. ಕ್ರಮೇಣ ನವ್ಯತೆ ಮಾಯವಾಗಿ ಕೆಲವು ಬದಲಾವಣೆಗಳೊಡನೆ ನವೋದಯದ ಪ್ರಭಾವ ಮತ್ತು ಪ್ರಖರವಾಗುತ್ತಾ ಇದೆ. ಇಂದು ರಸಿಕರ ಮನಸ್ಸನ್ನು ಮುದಗೊಳಿಸುವ ಕಾವ್ಯರಾಶಿ ರಚಿತವಾಗುತ್ತಲೆ ಇದೆ. ಸ್ತ್ರೀಯರು ಕೂಡ ಕೆಲವು ಉತ್ತಮ ಕವನಸಂಕಲನಗಳನ್ನು ತಂದಿದ್ದಾರೆ.

ಕಾವ್ಯ ಕ್ಷೇತ್ರದಷ್ಟೇ ಪ್ರಭಾವವುಳ್ಳ ಕತೆ–ಕಾದಂಬರಿಗಳ ವಿಭಾಗವೂ ಅತ್ಯಂತ ಜೀವಂತವಾದ ಪುಸ್ತಕಗಳಿಂದ ಅಲಂಕೃತವಾಗಿದೆ. ಕನ್ನಡದ ಆಸ್ತಿಯಾದ ಸಣ್ಣ ಕತೆಗಾರರಿಂದ ಸಾವಿರ ಪುಟಗಳ ಕಾದಂಬರಿಕಾರರವರೆಗೆ ಪ್ರಭಾವಿತರಾದ ಹತ್ತಾರು ಜನ ಕಥಾಸಾಹಿತ್ಯ ನಿರ್ಮಾಪಕರು ಈಗಲೂ ಇದ್ದಾರೆ. ಪ್ರಗತಿಶೀಲವೆಂಬ ಹೆಸರಿನ ಚಳವಳಿಯಿಂದ ಪ್ರಭಾವಿತರಾದ ಕೆಲವರು ನೂರಾರು ಕಾದಂಬರಿಗಳನ್ನು ರಚಿಸಿದ್ದಾರೆ. ಆ ದಾರಿಯಲ್ಲಿಯೇ ನಂಬಿಕೆ ಇದ್ದರೂ ಚಾರಿತ್ರಿಕ ಕಾದಂಬರಿಗಳನ್ನು ರಚಿಸಿದ ಹಿರಿಯರು, ದಲಿತರ ಉದ್ಧಾರಕ್ಕೆಂದೋ ಜನತೆಯ ಬಾಳಿನ ಸೊಗಸಿಗೆಂದೋ ರಚಿಸಿದ ಅನೇಕ ಕಾದಂಬರಿಗಳು ಪ್ರಕಟವಾಗಿವೆ. ಹತ್ತು ಜನ ಕಾದಂಬರಿಕಾರರು ವಿಶ್ವಕಾವ್ಯದ ರಚನೆಯ ಮಟ್ಟಕ್ಕೆ ಬರುವ ಕಾದಂಬರಿಗಳನ್ನು ರಚಿಸಿದ್ದಾರೆ. ಇವರೆಲ್ಲರ ಕಾದಂಬರಿಗಳು ಭಾರತದ ಇತರ ಭಾಷೆಗಳಿಗೆ ಅನುವಾದ ಗೊಂಡಿವೆ. ಪ್ರಗತಿಶೀಲ ಆಂದೋಳನವು ಬಹುದಟ್ಟವಾದ ಪರಿಣಾಮವನ್ನು ಬೀರಿತು.

ನಾಟಕ ಪ್ರಕಾರವೂ ಅಷ್ಟೇ! ಮೈಸೂರರಸರ ಚರಿತ್ರೆಗೆ ಸಂಬಂಧಪಟ್ಟ ನಾಟಕಗಳು, ಸಮಾಜದ ಸಂಸಾರದ ಸಿಹಿಕಹಿ ಪ್ರಸಂಗಗಳು, ವ್ಯಂಗ್ಯಚಿತ್ರಣದ ಕನ್ನಡ – ಇಂಗ್ಲಿಷ್ ಮಿಶ್ರಭಾಷೆಯ ಹಾಸ್ಯನಾಟಕಗಳು, ಸ್ವಾತಂತ್ರ್ಯ ಹೋರಾಟದ ಸಮಯದ ವಿವಿಧ ಚಿತ್ರಗಳುಳ್ಳ ಹೃದಯವಿದ್ರಾವಕ ನಾಟಕಗಳು, ಶಾಲಾಕಾಲೇಜುಗಳ ವಾರ್ಷಿಕ ಸಮಾರಂಭಗಳಿಗೆ ಅನುಕೂಲವಾಗಿರುವ ಏಕಾಂಕಗಳು ಇತ್ಯಾದಿ ಅನೇಕ ನಾಟಕಗಳಿವೆ. ಹೆಗ್ಗೋಡಿನ ನಾಟಕ ಪ್ರದರ್ಶನ ಮತ್ತು ಅಭಿನಯ ಶಿಕ್ಷಣವು ಬೇರೊಂದು ರೀತಿಯ ಚಟುವಟಿಕೆಯಲ್ಲಿ ತೊಡಗಿದೆ. ಹೊಸ ನಾಟಕಗಳ ಪ್ರದರ್ಶನಕ್ಕೆಂದು ಬೆಂಗಳೂರಿನಲ್ಲಿಯ ರಂಗಶಂಕರವೆಂಬ ಪ್ರಾಯೋಗಿಕ ನಾಟಕಮಂದಿರವೇ ಸಿದ್ಧವಾಗಿದೆ.

ಈ ಎಲ್ಲ ಸಾಹಿತ್ಯ ರಚನೆಯನ್ನು ಬೇರೊಂದು ಮಗ್ಗುಲಿನಿಂದಲೂ ಪರಿಶೀಲಿಸಬಹುದಾಗಿದೆ. ಅದು ಒಂದು ರಸಯಾತ್ರೆಯೇ!

ನವೋದಯದ ಪರಿಣಾಮವಾಗಿ ಇಂಗ್ಲೆಂಡನ್ನೂ ಇಂಗ್ಲಿಷ್ ಭಾಷೆಯನ್ನೂ ಸಾಹಿತ್ಯವನ್ನೂ ಪ್ರೀತಿಯಿಂದ ಕಂಡು ಭಾರತೀಯ ಭಾಷಾ ಸಾಹಿತ್ಯಗಳನ್ನು ಒಂದು ಅವಗಣನೆಯ ದೃಷ್ಟಿಯಿಂದ ಕಾಣುವ ವ್ಯವಸ್ಥೆಯುಂಟಾಯಿತು. ಒಬ್ಬ ಕವಿ ಹಾಡಿದನು ಹೀಗೆ :

ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ

ಈ ಬಗೆಯ ಭಾವನೆ ಕೆಲವರಲ್ಲಿ ಬೇರೂರಿತು. ಇಂಥ ಮಾತಿನಿಂದ ಇಂಗ್ಲೆಂಡನ್ನು ತುಂಬ ಎತ್ತರದಲ್ಲಿ ನಿಲ್ಲಿಸಿದಂತೆ ಕಾಣುತ್ತದೆ. ಇದಕ್ಕೆ ಕಾರಣವಿಲ್ಲದಿಲ್ಲ. ಭಾರತದಲ್ಲಿ ಚೆನ್ನಾಗಿ ಬೇರೂರಿದ್ದ ವಿವಿಧ ಧರ್ಮಗಳ, ಜಾತಿಕೋಮುಗಳ, ಹೆಣ್ಣನ್ನು ಅವಗಣಿಸುತ್ತಿದ್ದ ಭಾವನೆಗಳ ಪರಿಣಾಮವಾಗಿ ವರ್ಗಗಳೇರ್ಪಟ್ಟು ಶೋಷಿತವರ್ಗಗಳು ಹುಟ್ಟಿಕೊಂಡಿದ್ದವು. ಇಂಗ್ಲೆಂಡಿನ ಸರ್ವಾಧಿಕಾರದ ಆಡಳಿತದಲ್ಲಿ ಶೋಷಿತವರ್ಗಗಳೆಲ್ಲ ಎದ್ದು ನಿಂತು ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಕಾಣಬಹುದು ಎಂಬ ಆಸೆಯನ್ನು ಹೊಂದಿದ್ದು ಆಶ್ಚರ್ಯವಲ್ಲ. ಅದನ್ನು ಕೆಲವರು ಕವಿಗಳು ಮೆಚ್ಚಿಕೊಂಡರು. ಅಂಥ ಅವಕಾಶವನ್ನು ಹೊಗಳಿ ಕವನಗಳನ್ನು ರಚಿಸಿರಬಹುದು.

ಸ್ವಾತಂತ್ರ್ಯದ ಹೋರಾಟದಲ್ಲಿ ಡಾ. ಅಂಬೇಡ್ಕರ್ ಅವರೂ ಅವರ ಅನುಯಾಯಿಗಳೂ ಸ್ವಾತಂತ್ರ್ಯದ ಗಳಿಕೆಗಿಂತ ಸಮಾಜದಲ್ಲಿ ಶೋಷಿತವರ್ಗಗಳಿಗೆ ಸಮಾನತೆಯನ್ನು ತರುವುದು ಅತ್ಯಗತ್ಯವಲ್ಲವೆ ಎಂಬ ಪ್ರಶ್ನೆಯನ್ನು ಎತ್ತಿಹಿಡಿದರು. ನವೋದಯದ ಕಾದಂಬರಿಗಳಲ್ಲಿಯೂ ಕತೆಗಳಲ್ಲಿಯೂ ಈ ಹೋರಾಟದ ಚಿತ್ರಗಳಿವೆ. ಇದೇನೂ ವಿರೋಧವಿಲ್ಲದ ಹೋರಾಟವಲ್ಲ. ಇಂಥ ಹೋರಾಟಕ್ಕೆ ಅಡ್ಡಿಯಾದ ಪ್ರಯತ್ನಗಳೂ ಮೂಡಿದವು. ಅಂಬೇಡ್ಕರ್ ಅವರ ವಾದವನ್ನು ವಿರೋಧಿಸಿ ಭಾರತದ ವೈಭವದ ಸಂಸ್ಕೃತಿಯ ಚರಿತ್ರೆಯನ್ನು ಎತ್ತಿ ಹಿಡಿದರು ಕೆಲವರು ಸಂಪ್ರದಾಯವಾದಿಗಳಾದ ವಿದ್ವಾಂಸರು. ಮಹಮ್ಮದೀಯರ ರಾಜ್ಯದ ಆಡಳಿತವನ್ನೂ ಮೆಚ್ಚಿ ಗ್ರಂಥ ರಚನೆ ಮಾಡಿದವರಿದ್ದಾರೆ. ಟಿಪ್ಪುವನ್ನು ಮೆಚ್ಚಿಕೊಂಡ ಕಥೆಗಳಿವೆ.

ಸ್ವಾತಂತ್ರ್ಯಾನಂತರದ ಕಥೆಯೇ ಬೇರೆ. ಹಿಂದೆ ಯಾರುಯಾರು ಶೋಷಿತರಾಗಿದ್ದಾರೋ ಅವರೆಲ್ಲ ತಲೆ ಎತ್ತಿ ನಿಲ್ಲುವ ಅವಕಾಶವುಂಟಾಯಿತು. ದಲಿತ, ಬಂಡಾಯ, ಮಹಿಳಾ ಉದ್ಧಾರ, ಮತಾಂತರ ವಿರೋಧ ಇತ್ಯಾದಿ ವಸ್ತುಗಳುಳ್ಳ ಅನೇಕ ಕಾದಂಬರಿಗಳೂ ಕತೆಗಳೂ ಇವೆ. ಕೆಲವರು ಲೇಖಕರು ಉಪಸಂಸ್ಕೃತಿಗಳ ಹೆಸರಿನಲ್ಲಿ ಕೆಳವರ್ಗದವರ ಸಾಮಾಜಿಕ ವ್ಯವಹಾರಗಳನ್ನು ಅಭ್ಯಾಸ ಮಾಡಿ ಹಿರಿಮೆಯನ್ನು ಚಿತ್ರಿಸಿದ್ದೂ ಉಂಟು.

ದಲಿತ ಸಾಹಿತ್ಯದ ಬಗ್ಗೆ ತುಂಬ ಚರ್ಚೆಯಾಯಿತು. ದಲಿತರೇ ಸ್ವಂತವಾಗಿ ಅವರ ಬಗ್ಗೆ ಬರೆದರೆ ಅದು ನಿಜವಾದ ದಲಿತ ಸಾಹಿತ್ಯ, ಬೇರೆಯವರು ಅಂಥ ಸಾಹಿತ್ಯವನ್ನು ಬರೆದರೆ ಅದು ದಲಿತಪರ ಸಾಹಿತ್ಯ ಎಂಬ ಭೇದವನ್ನು ಮಾಡಿದರು. ಇದನ್ನೂ ಕೆಲವರು ಒಪ್ಪಿದರು. ಈ ಬಗೆಯ ಎರಡು ವಿಭಾಗಗಳಲ್ಲಿಯೂ ಉತ್ತಮ ಕೃತಿಗಳು ರಚಿತವಾಗಿವೆ. ವಸಾಹತುಶಾಹಿ, ಪುರೋಹಿತಶಾಹಿ ಮುಂತಾದ ಶಬ್ದಗಳು ಆಯಾವರ್ಗದವರು ರಚಿಸಿದ ಸಾಹಿತ್ಯಕ್ಕೆ ಅನ್ವಯಿಸುತ್ತದೆ. ಇಂಥ ಸಾಹಿತ್ಯವೂ ಅಪಾರವಾಗಿದೆ.

ಹೀಗೆ ಅಧಿಕಾರಾವಧಿವಾಗಿ ಸಾಹಿತ್ಯ ರಚನೆ ಹೆಚ್ಚಿದೆ ಮೇಲೆ ಅದನ್ನು ಓದುವವರೂ ಹೆಚ್ಚಿದರು. ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಪ್ರೀತಿ ಹೆಚ್ಚಾಗಿ ಪಠ್ಯಗಳ ಜೊತೆಗೆ ಪಠ್ಯೇತರ ಗ್ರಂಥಗಳನ್ನು ವಾಚನ ಮಾಡುವುದು ಹೆಚ್ಚಾಯಿತು. ಯುವಕರಲ್ಲಿ ಹೋರಾಟದ ಬುದ್ಧಿ ಬೆಳೆಯಿತು. ವಾರ್ತಾ ಪತ್ರಿಕೆಗಳು ಹೆಚ್ಚಾದವು. ಗ್ರಂಥ ಪ್ರಕಟನೆ ಅಧಿಕವಾಯಿತು. ೧೯೪೭ರ ತನಕ ಮುದ್ರಣಗೊಂಡ ಎಲ್ಲ ಹೊಸ ಪುಸ್ತಕಗಳನ್ನು ಓದುವುದು ಸಾಧ್ಯವಾಗಿತ್ತು. ಅದಾದ ಬಳಿಕ ಗ್ರಂಥ ಪ್ರಕಟನೆ ಎಷ್ಟು ಹೆಚ್ಚಾಗಿದೆ ಎಂದರೆ ಮುದ್ರಣಗೊಂಡ ಎಲ್ಲ ಗ್ರಂಥಗಳನ್ನು ನೋಡುವುದು ಕೂಡ ಕಷ್ಟವಾಗಿದೆ. ಈಗ ವಾರ್ಷಿಕವಾಗಿ ಸುಮಾರು ಮೂರು ಸಾವಿರ ಪುಸ್ತಕಗಳು ಅಚ್ಚಾಗುತ್ತಿವೆಯಂತೆ. ಹೀಗಾಗಿ ಈ ಕಾಲದ ಸಾಹಿತ್ಯರಾಶಿ ಕನ್ನಡಕ್ಕೆ ಹೊಸತನವನ್ನು ನೀಡಿದೆ. ಅದು ವೈಭವಪೂರ್ಣವಾಗಿ ಬೆಳೆಯುತ್ತಿದೆ.

ಈ ಕಾಲದಲ್ಲಿ ಬೆಳೆದ ವಿಮರ್ಶೆಯಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿರುವ ಪುಸ್ತಕ ವಿಮರ್ಶೆಯ ಮಾರ್ಗವೇ ಪ್ರಧಾನ ಮಾರ್ಗವಾಗಿದೆ. ರಾಜಕೀಯ ತತ್ವಗಳನ್ನು, ಮಾನವಿಕ ಶಾಸ್ತ್ರಗಳನ್ನು, ಮನಶ್ಶಾಸ್ತ್ರವನ್ನು ತಳಹದಿಯಾಗಿ ಇಟ್ಟುಕೊಂಡು ವಿಮರ್ಶೆ ಬೆಳೆಯುತ್ತಿದೆ.

ಈ ಕಾಲದಲ್ಲಿ ಬೆಳೆದ ವಿಮರ್ಶೆಯಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿರುವ ಪುಸ್ತಕ ವಿಮರ್ಶೆಯ ಮಾರ್ಗವೇ ಪ್ರಧಾನ ಮಾರ್ಗವಾಗಿದೆ. ರಾಜಕೀಯ ತತ್ವಗಳನ್ನು, ಮಾನವಿಕ ಶಾಸ್ತ್ರಗಳನ್ನು, ಮನಶ್ಶಾಸ್ತ್ರವನ್ನು ತಳಹದಿಯಾಗಿ ಇಟ್ಟುಕೊಂಡು ವಿಮರ್ಶೆ ಮಾಡಿ ಕೃತಿಗಳ ಆಲೋಚನೆಗಳಿಗೆ ಬೆಲೆ ಕಟ್ಟುತ್ತಾರೆ.

ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಹಿತ್ಯವನ್ನು ರಚಿಸಿರುವ ಮಹಿಳಾ ವರ್ಗ ತುಂಬ ದೊಡ್ಡದಾಗಿದೆ. ಸುಮಾರು ೭೫ ಜನ ಉತ್ತಮ ಲೇಖಕಿಯರಿದ್ದಾರೆ. ಅವರೆಲ್ಲರ ಬಗ್ಗೆ ಒಂದು ಪರಿಚಯಗ್ರಂಥವೇ ಇದೆ. ಇವರಲ್ಲಿ ಕೆಲವರು ಹಿರಿಯ ಕವಿಗಳೂ ಕತೆಗಾರರೂ ಕಾದಂಬರಿಕಾರರೂ ವಿಮರ್ಶಕರೂ ಇದ್ದಾರೆ.

ವಿಶ್ವವಿದ್ಯಾನಿಲಯಗಳಲ್ಲಿ ತೌಲನಿಕ ವ್ಯಾಸಂಗಕ್ಕೆ ಹೆಚ್ಚು ಗಮನವನ್ನು ಕೊಡಲಾಗುತ್ತಿದೆ. ಜಾನಪದ ಸಾಹಿತ್ಯ ಅಥವಾ ಮೌಖಿಕ ಸಾಹಿತ್ಯದ ಸಂಗ್ರಹ ಪ್ರಕಟಣೆ, ವ್ಯಾಸಂಗ, ವಿಮರ್ಶೆ ಇವು ಅಧಿಕವಾಗಿವೆ. ಅಪಾರ ವಿಷಯ ಸಂಗ್ರಹವಾಗಿದೆ.

ಜಾನಪದ ಸಾಹಿತ್ಯದ ಗಂಭೀರವಾದ ಅನೇಕ ಸಂಶೋಧನೆಗಳಾಗಿವೆ. ಇವೂ ನವೋದಯದ ಪರಿಣಾಮವೇ!

ಕನ್ನಡದ ಪುಸ್ತಕ ಪ್ರಕಟಣೆ ಅಪಾರ ಅಭಿವೃದ್ಧಿಯಾಗಿದೆ. ಪುಸ್ತಕ ಪ್ರಕಟನೆಯ ಕಲೆ ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಿದೆ. ಬೃಹತ್ತಾದ ಪ್ರಕಟನೆಯೂ ಬೃಹತ್ತಾದ ಪುಸ್ತಕ ವ್ಯಾಪಾರವೂ ನಡೆಯುತ್ತಿವೆ. ಪುಸ್ತಕ ಪ್ರಕಾಶನ ಈಗ ಲಾಭದಾಯಕ ವೃತ್ತಿಯಾಗಿದೆ.

ಒಟ್ಟಿನಲ್ಲಿ ಈ ನೂರು ವರ್ಷಗಳಲ್ಲಿ ಆದ ಕನ್ನಡ ಸಾಹಿತ್ಯದ ಕೃಷಿ ಹಿಂದೆ ಯಾವ ಶತಮಾನದಲ್ಲಿಯೂ ಆಗಿರಲಿಲ್ಲ. ಕ್ರಿ.ಶ. ಹತ್ತನೆಯ ಶತಮಾನವು ಹೇಗೆ ಹಳಗನ್ನಡದ ಸುವರ್ಣಯುಗವಾಯಿತೋ ಹಾಗೆಯೇ ಈ ಇಪ್ಪತ್ತನೆಯ ಶತಮಾನವೂ ಕೂಡ ಹೊಸಗನ್ನಡದ ಸುವರ್ಣಯುಗವಾಗಿ ಪರಿಣಮಿಸಿದೆ. ಮುಂದೆ ಕನ್ನಡದ ಸಾಹಿತ್ಯ ಚರಿತ್ರೆಯನ್ನು ಬರೆಯುವಾಗ ವಿದ್ವಾಂಸರು ಈ ವಿವರವನ್ನು ಖಂಡಿತವಾಗಿ ದಾಖಲಿಸುತ್ತಾರೆ. ಈ ಶತಮಾನದ ಕನ್ನಡದ ಬೆಳಸನ್ನು ಕಂಡು ಇತರ ಭಾಷಾಪ್ರಾಂತದವರು ಕರ್ನಾಟಕವನ್ನು ಕುರಿತು ಕುರುಬುವಷ್ಟು ಸಾಹಿತ್ಯ ವರ್ಣರಂಜಿತವಾಗಿದೆ.

ನಾನು ಮಾತನಾಡುತ್ತಿರುವ ಈ ದಶಮಾನದಲ್ಲಿ ಕೂಡ ಕನ್ನಡದಲ್ಲಿ ಬರುತ್ತಿರುವ ಲೇಖನದ ಭಾಷೆಯಲ್ಲಿ ಬೇರೊಂದು ಬಗೆಯ ನವನೀತ ಕಾಣಬರುತ್ತಿದೆ. ವಾರ್ತಾಪತ್ರಿಕೆಗಳಲ್ಲಿ ಈಗ ಬರುವ ಯುವ ಲೇಖಕರು ಬಳಸುವ ಭಾಷೆಯಲ್ಲಿ ಹತ್ತು ವರ್ಷಗಳ ಹಿಂದಿನ ಭಾಷೆಗಿಂತ ಪೂರ್ಣವಾಗಿ ಬದಲಾದ ರೀತಿ ಎದ್ದು ಕಾಣುತ್ತದೆ. ಅದರಲ್ಲಿ ನಿಜವಾಗಿಯೂ ಒಂದು ಹೊಸ ಆಕರ್ಷಕ ಶೈಲಿ ರೂಪು ಗೊಳ್ಳುತ್ತಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ವಿಶೇಷವಾಗಿ ಕಲಿಯದಿದ್ದರೂ ಕನ್ನಡದಲ್ಲಿ ಲೇಖನಗಳನ್ನು ರಚಿಸುವವರನ್ನೂ ಕವನ ಕಟ್ಟಿಕೊಡುವವರನ್ನೂ ನಾನು ಕಂಡಿದ್ದೇನೆ. ಅವರು ವೈದ್ಯರು, ತಂತ್ರಜ್ಞಾನಿಗಳು, ವಿಜ್ಞಾನಿಗಳು... ಹೀಗೆ. ಅವರಿಗೆ ಉತ್ಸಾಹವಿದೆ, ದಟ್ಟವಾದ ಅರಿವಿಲ್ಲ. ಅಂಥವರ ಬರಹದಲ್ಲಿ ಸಾಮರ್ಥ್ಯ ಹೆಚ್ಚಬೇಕಾದರೆ ಹಳಗನ್ನಡದ ಹಿನ್ನೆಲೆ ಸ್ವಲ್ಪ ಇರಬೇಕು. ಇಂಥವರು ಸ್ವಲ್ಪ ಶ್ರಮಪಟ್ಟರೆ ಅವರೇ ಸ್ವಂತವಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಮಾರ್ಗವಿದೆ. ಅದು ಕುಮಾರವ್ಯಾಸನನ್ನೂ ವಚನಸಾಹಿತ್ಯವನ್ನೂ ಪ್ರತಿನಿತ್ಯ ಸ್ವಲ್ಪ ಸ್ವಲ್ಪ ಓದುವುದು, ಇಷ್ಟೆ! ಹೀಗೆ ಅವರೆಲ್ಲ ಬೆಳೆಯಲಿ ಎಂದು ಹಾರೈಸುತ್ತೇನೆ.

ಕೆಲವರು ಮಹಿಳೆಯರ ಬರಹಗಳಲ್ಲಿ, ಇದು ಪುರುಷರು ಬಳಸಲಾಗದ ಶೈಲಿ– ಎಂಬಷ್ಟು ವ್ಯತ್ಯಾಸವನ್ನು ನಾನು ಪರಿಗಣಿಸಿದ್ದೇನೆ. ನನ್ನ ಕೆಲವು ಮುನ್ನುಡಿಗಳಲ್ಲಿ ಈ ಮಾತನ್ನು ಹೇಳಿದ್ದೇನೆ ಕೂಡ. ಪ್ರಸಿದ್ಧರಾದ ಕೆಲವರು ಮಹಿಳೆಯರು ಅವರದೇ ಆದ ಶಬ್ದ ಸಮುದಾಯಗಳನ್ನು ರೂಪಸಿಕೊಂಡಿದ್ದಾರೆ. ಇದರಲ್ಲಿಯೂ ಒಂದು ಹೊಸತನವಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಶತಮಾನದ ಕೃಷಿಯಿಂದ ಕನ್ನಡದ ನೆಲ ಎಷ್ಟು ಫಲವತ್ತಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯಬರುತ್ತಿದೆ.

ಮುಂದೆ ಬರುವ ಸಾಹಿತ್ಯಕ್ಕೆ ಬೇಕಾದ ಎಲ್ಲ ಹಿನ್ನೆಲೆಯನ್ನು ಈ ಶತಮಾನ ಸೃಷ್ಟಿಸಿದೆ. ನಾವಿನ್ನು ಹೊಸದಕ್ಕೆ ದಾರಿ ಮಾಡೋಣ. ಬರುವುದನ್ನು ಪ್ರೀತಿಯಿಂದ ನಿರೀಕ್ಷಿಸೋಣ, ಎಂಬ ಆಲೋಚನೆ ನನಗೆ ಹೊಳೆದಿದೆ.

ನಾನು ಕನ್ನಡ ಭಾಷೆಯ ವ್ಯಾಸಂಗದಲ್ಲಿ ನಿರತನಾಗಿರುವವನು. ಕನ್ನಡವನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕೆಂಬ ಆಸಕ್ತಿಯುಳ್ಳ ವಿದ್ಯಾರ್ಥಿ. ಕನ್ನಡವನ್ನು ಪ್ರೀತಿಸುವ ಜನಸಮುದಾಯದಲ್ಲಿ ನಾನೂ ಒಬ್ಬ. ಆದುದರಿಂದ ಆ ಭಾಷೆಯಲ್ಲಿ ಈಗ ಏನಾಗುತ್ತಿದೆ ಎಂಬುದರ ಕಡೆಗೆ ಈ ಬೃಹತ್ಸಭೆಯ ದೃಷ್ಟಿಯನ್ನು ಸೆಳೆಯಲು ಬಯಸುತ್ತೇನೆ. ಈಗಾಗಲೇ ಹೇಳಿರುವಂತೆ ಕನ್ನಡದ ಶಬ್ದಸಂಪತ್ತು ವೃದ್ಧಿ ಹೊಂದಿದೆ ಎಂಬುದು ನಿಜ. ಆದರೆ ಬೆಂಗಳೂರು ಮತ್ತು ಇತರ ಬೃಹನ್ನಗರಗಳಲ್ಲಿ ಮಧ್ಯಮ ವರ್ಗದ ಜನರು ಕನ್ನಡ ಭಾಷೆಯನ್ನೂ ಈಗ ಉಪಯೋಗಿಸುತ್ತಿರುವ ರೀತಿಯಲ್ಲಿ ಕನ್ನಡಕ್ಕೆ ಒಂದು ಅಪಾಯ ಕಾದಿದೆ. ನಾಗರಿಕರ ಆಡುಮಾತಿನಲ್ಲಿ ಇಂಗ್ಲಿಷ್ ಶಬ್ದಗಳ ಮಿಶ್ರಣದ ಪ್ರಮಾಣದಲ್ಲಿ ಏರುಪೇರಾಗಿದೆ. ಇದನ್ನು ಲೆಕ್ಕ ಮಾಡಿದರೆ ಶೇಕಡ ೬೦ರಷ್ಟು ಇಂಗ್ಲಿಷ್ ಶಬ್ದಗಳು ಕಾಣಬರುತ್ತಿವೆ. ಅವರು ಒಂದೇ ಒಂದು ವಾಕ್ಯವನ್ನೂ ಸಂಪೂರ್ಣವಾಗಿ ಕನ್ನಡದಲ್ಲಿ ಮಾತನಾಡುವುದಿಲ್ಲ. ಹಾಗೆ ಮಾತನಾಡಲು ಅವರಿಗೆ ಕನ್ನಡದ ಸಾಮರ್ಥ್ಯವಿದ್ದರೂ ಆ ಸಾಮರ್ಥ್ಯವನ್ನು ಉಪಯೋಗಿಸುತ್ತಿಲ್ಲ. ಇದೇ ನಿಜವಾದ ಅಪಾಯ. ಅವರು ತಾವು ಆಡುತ್ತಿರುವ ಮಾತಿನ ರೀತಿಯಲ್ಲಿರುವ ಅಪಾಯವನ್ನೂ ತಿಳಿಯದೆ ಇದ್ದಾರೆ. ಸಂಪೂರ್ಣವಾಗಿ ಸಂವಾದವನ್ನೆಲ್ಲ ಇಂಗ್ಲಿಷಿನಲ್ಲಿಯೇ ಮಾಡುವ ಸಮರ್ಥರ ರೀತಿಯೇ ಬೇರೆ. ಅವರು ಇಂಗ್ಲಿಷ್ ಭಾಷೆಯಲ್ಲಿ ಪರಿಣತರು. ಅವರಲ್ಲಿ ಕೆಲವರು ಕನ್ನಡದಲ್ಲಿಯೂ ಅಷ್ಟೇ ಪರಿಣತರು. ಅಂಥವರು ಸಂಪೂರ್ಣವಾಗಿ ಕನ್ನಡವನ್ನೇ ಉಪಯೋಗಿಸುತ್ತಾರೆ. ಇಂಥ ಹಿರಿಯರನ್ನು ಕುರಿತು ನಾನು ಮಾತನಾಡುತ್ತಿಲ್ಲ. ನನ್ನ ದೃಷ್ಟಿ ಸಾಮಾನ್ಯ ವಿದ್ಯಾರ್ಥಿಗಳು, ಅವರಿಗೆ ಶಾಲಾ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಅವರವರ ವಿದ್ಯಾಕ್ಷೇತ್ರಗಳಲ್ಲಿ ಸಮರ್ಥರಾದ ಉಪಾಧ್ಯಾಯವರ್ಗ – ಇವರ ಸಂವಾದವನ್ನು ಪರಿಶೀಲಿಸುವಾಗ ಮತ್ತು ಬೀದಿಯಲ್ಲಿ ಓಡಾಡುವ ಇತರ ಸಮಾಜದ ಮಧ್ಯಮ ವರ್ಗದ ಜನರು – ಇವರ ಭಾಷೆಯನ್ನು ಕುರಿತದ್ದು.

ಬೆಂಗಳೂರಿಗೆ ಬಂದ ಗ್ರಾಮೀಣ ಪ್ರದೇಶದ ಜನರಿಗೆ ಇವರ ಮಾತನ್ನು ಕೇಳಿ ದಿಗ್ಭ್ರಮೆಯಾಗುತ್ತದೆ. ಬೆಂಗಳೂರಿನಲ್ಲಿ ಕನ್ನಡ ಸಾಯುತ್ತಿದೆ ಎಂದು ಹೇಳುತ್ತಾರೆ. ಹಾಗೆ ಹೇಳುವವರಿಗೆ ಗ್ರಾಮೀಣ ಪ್ರದೇಶದಲ್ಲಿ ಅದು ಬದುಕಿ ಉಳಿಯುತ್ತದೆ ಎಂಬ ನಂಬಿಕೆಯಿದೆ. ಕನ್ನಡದ ರಾಜಧಾನಿಯಲ್ಲಿ ಕನ್ನಡ ಸತ್ತರೆ ಗ್ರಾಮೀಣ ಪ್ರದೇಶದಲ್ಲಿ ಉಳಿಯುತ್ತದೆಯೇ?

ಇಂಥ ವಿಪರ್ಯಾಸವನ್ನು ಗಮನಿಸುತ್ತಿರುವ ನನಗೆ ಕೆಲವು ವಿವರಗಳನ್ನು ಇಂಥ ಸಭೆಯ ಮುಂದೆ ಹೇಳಲೇಬೇಕೆಂಬ ಅಪೇಕ್ಷೆಯುಂಟಾಗಿದೆ.

ಈಗಿನ ನಾವು ಬದುಕಿರುವ ಈ ಕಾಲದಲ್ಲಿ ಕನ್ನಡ ಭಾಷೆಯು ತನ್ನ ಮತ್ತೊಂದು ಹೊಸತನವನ್ನು ಪಡೆಯುತ್ತಾ ಇದೆ. ಹಿಂದೆ ಕನ್ನಡದ ಆಡುಮಾತಿಗೆ ಸಂಸ್ಕೃತ ಶಬ್ದಗಲು ಹೇಗೆ ಸೇರಿಕೊಂಡಿತೋ ಹಾಗೆ ಈಗ ಇಂಗ್ಲಿಷಿನಿಂದ ಸಾವಿರಾರು ಶಬ್ದಗಳು ನಾಗರಿಕ ಜೀವನದಲ್ಲಿ ಸೇರಿಕೊಳ್ಳುತ್ತಾ ಇದೆ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಹೀಗೆ ನಗರದ ಸಂಕೀರ್ಣ ಜನಸಮುದಾಯದಲ್ಲಿ ಇಂಗ್ಲಿಷಿನ ಮತ್ತಿತರ ಭಾಷೆಗಳ – ಅಧಿಕವಾಗಿ ಹಿಂದಿ ಮತ್ತು ಉರ್ದು ಭಾಷೆಗಳ–ಶಬ್ದಗಳು ಒಗ್ಗಟ್ಟಿನಿಂದ ನುಗ್ಗುತ್ತಿವೆ. ಕಾಲಾನುಕ್ರಮದಲ್ಲಿ ಈ ಶಬ್ದಗಳಲ್ಲಿ ಅನೇಕ ಶಬ್ದಗಳು ಹಾಗೆ ಬಳಕೆಗೆ ಬರಬೇಕಾದರೆ ಒಂದಿಪ್ಪತ್ತು ಮೂವತ್ತು ವರ್ಷಗಳು ಬೇಕಾಗುತ್ತವೆ. ಈಗಾಗಲೇ ಹಿಂದಿನ ಅನೇಕ ವರ್ಷಗಳಲ್ಲಿ ನಮ್ಮವೇ ಆದ ಎಷ್ಟೊಂದು ಇಂಗ್ಲಿಷ್ ಶಬ್ದಗಳಿವೆ ನೋಡಿ. ಕಾರು, ಬುಕ್ಕು, ಪೆನ್ನು, ಇಂಕು, ಪೇಪರ್ರು, ಆದರೆ ಈಗ ನುಗ್ಗಲು ಆತುರಪಡುತ್ತಿರುವ ಶಬ್ದಗಳು ಇಂಥ ಶಬ್ದಗಳಲ್ಲ. ಕನ್ನಡದಲ್ಲಿ ಸೊಗಸಾದ ಶಬ್ದಗಳಿರುವಾಗ ಅವುಗಳನ್ನೇ ತಳ್ಳಿ ಕನ್ನಡಕ್ಕೆ ಬರಲು ಪ್ರಯತ್ನ ಪಡುತ್ತಿರುವ ಶಬ್ದಗಳು ಉದಾಹರಣೆ: ಚಿಲ್ಲೀಸ್, ರಾಡೀಶ್, ಬೀನ್ಸ್, ಕುಕ್ಕುಂಬ್ರ, ಕ್ಯಾಪ್ಸಿಕಮ್, ನೈಫು,ಆಯಿಲ್ಲು, ಬಟ್ಟರು, ಪೌಡರು, ಗ್ರೈಂಡು ಇತ್ಯಾದಿ ಎಲ್ಲಾ ಅಡಿಗೆ ಮನೆಗೆ ನುಗ್ಗಿಬಿಟ್ಟಿವೆ. ಇದಕ್ಕೆ ಕಾರಣ ದೂರದರ್ಶನದಲ್ಲಿ 'ಹೊಸರುಚಿಯ' ಪ್ರದರ್ಶನ ಮಾಡಲು ಕನ್ನಡ ಮಹಿಳಾ ಮಣಿಗಳು ಸಂಭಾಷಣೆಯ ಪರಿಣಾಮ ಎಫ್.ಎಮ್. ರೇಡಿಯೋ ದೂರದರ್ಶನದ ಅನೇಕ ವಾಹಿನಿಗಳ ಪ್ರಭಾವ ವರ್ತಮಾನ ಪತ್ರಿಕೆಗಳಲ್ಲಿಯೂ ದೂರದರ್ಶನದಲ್ಲಿಯೂ ಆಕಾಶವಾಣಿಯಲ್ಲಿಯೂ ಪ್ರಚಾರ ವಾಗುವ ಇಂಥ ಪ್ರಯೋಗಗಳನ್ನು ನಿಲ್ಲಿಸಿ ನಮ್ಮಲ್ಲಿ ಪ್ರಚಾರದಲ್ಲಿರುವ ಕನ್ನಡ ಶಬ್ದಗಳನ್ನು ಉಪಯೋಗಿಸುವಂತೆ ಆಯಾ ಕೇಂದ್ರಗಳ ಅಧಿಕಾರಿಗಳು ನಿರ್ದೇಶಿಸಬೇಕು. ಯಾವ ಶಬ್ದ ಬೇಕಾದರೂ ನಿದಾನವಾಗಿ ತಾನೇ ತಾನಾಗಿ ಬರಲಿ. ಆದರೆ ನಾವೇ ಅವುಗಳನ್ನು ಅನಾವಶ್ಯಕವಾಗಿ ಅನುವು ಮಾಡಿಕೊಳ್ಳ ಬಾರದು. ಹಾಗೆ ಮಾಡಿದರೆ ನಮ್ಮ ಸ್ವಂತ ಶಬ್ದಸಂಪತ್ತು ಮಾಯವಾಗಿ ಬಿಡುತ್ತದೆ. ನಾವು ಅವುಗಳಿಲ್ಲದೆ ಕನ್ನಡ ಶಬ್ದದರಿದ್ರವಾಗಿಬಿಡುತ್ತವೆ. ಸಾಮಾಜಿಕ ಕಾರ್ಯಕರ್ತರು, ವಾರ್ತಾಪತ್ರಿಕೆಗಳ, ಕನ್ನಡ ಚಳುವಳಿಯ ನಾಯಕರು ಇವರೆಲ್ಲರಿಗೂ ಈ ಬಗ್ಗೆ ತಿಳುವಳಿಕೆಯನ್ನು ನೀಡಿರುವ ಒಂದು ಕನ್ನಡ ಆಂದೋಳನ ನಡೆಯಬೇಕು. ಕನ್ನಡ ಸಾಹಿತ್ಯ ಪರಿಷತ್ತು ಅದರ ಜಿಲ್ಲಾ ಮತ್ತು ತಾಲ್ಲೂಕು ಅಂಗಸಂಸ್ಥೆಗಳು, ಮಹಿಳೆಯರ ಕ್ಲಬ್ಬುಗಳು, ಬೆಳಗ್ಗೆ ವಾಯುವಿಹಾರಕ್ಕೆಂದು ಹೋಗುವ ಹಿರಿಯರ ತಂಡ ಇವರೆಲ್ಲಾ ಈ ಬಗ್ಗೆ ಎಚ್ಚರವಹಿಸಬೇಕು. ಕನ್ನಡಕ್ಕೆ ಬರುವ ಶಬ್ದಗಳು ಯಾವ ಭಾಷೆಯಿಂದ ಬೇಕಾದರೂ ಬರಲಿ. ನಿಧಾನವಾಗಿ ಬರಲಿ. ನಾವೇ ಬಲವಂತವಾಗಿ ತುರುಕುವುದು ಬೇಡ. ಅಷ್ಟೆ!

ಅನೇಕ ದೂರದರ್ಶನ ವಾಹಿನಿಗಳಲ್ಲಿ–('ಅನ್ನದಾತ', 'ಕೃಷಿದರ್ಶನ' ಮುಂತಾದ

ಕಾರ್ಯಕ್ರಮಗಳಲ್ಲಿ) ಗ್ರಾಮೀಣ ರೈತರೇ ಮಾತನಾಡುವಾಗ ಎಂಥ ಒಳ್ಳೆಯ ಕನ್ನಡ ಭಾಷೆಯ ಪ್ರಯೋಗವಾಗುತ್ತದೆ, ನೋಡಿ, ಕನ್ನಡದ ಪ್ರಾದೇಶಿಕ ಸೊಗಡಿನಿಂದ ತುಂಬಿರುವ ಅವರ ಕನ್ನಡ ತುಂಬ ಸ್ವಾರಸ್ಯಕರ. ಅವರ ಮಾತಿನಲ್ಲಿ ಕಾಣುವ ಕನ್ನಡತನವನ್ನು ನಾವು ಮಾದರಿಯಾಗಿ ಉದಾಹರಿಸಬಹುದು.

ಕನ್ನಡವು ಸಾಯುತ್ತದೆ ಎಂಬ ಮಾತನ್ನು ಯಾರೂ ಆಡಬಾರದು. ಭಾಷಾ ಶಾಸ್ತ್ರಿಗಳು ತಯಾರು ಮಾಡಿರುವ ಅಂಕಿ ಅಂಶಗಳಲ್ಲಿ ಪ್ರಪಂಚದ ಪ್ರಾಚೀನ ಪ್ರಸಿದ್ಧ ಸಮೃದ್ಧ ಭಾಷೆಗಳ ಪಟ್ಟಿಯಲ್ಲಿ ಕನ್ನಡವು ಮೊದಲ ಮೂವತ್ತು ಭಾಷೆಗಳಲ್ಲಿ ಒಂದಾಗಿದೆ. ಅದು ಸಾಯುವ ಭಾಷೆಯಲ್ಲ. ಚಂದ್ರ ಸೂರ್ಯರಿರುವ ತನಕ ಬಾಳುವ ಬೆಳೆಯುವ ಭಾಷೆ. ಕಾಲಮಾನದಲ್ಲಿ ಇದೂ ಬದಲಾವಣೆಯನ್ನು ಹೊಂದುತ್ತದೆ. ನಾವು ಈ ಬದಲಾವಣೆಯ ಕಾಲದಲ್ಲಿ ಬಾಳುತ್ತಿದ್ದೇವೆ. ನಮ್ಮ ಹೊಸ ಶಬ್ದಸಂಪತ್ತಿನ ಪ್ರಭಾವದಿಂದ ಈಗಿರುವ ಕನ್ನಡ ಶಬ್ದಸಂಪತ್ತನ್ನು ಕಳೆದುಕೊಳ್ಳಬಾರದು ಎಂಬುದನ್ನು ನಾವು ತಿಳಿದಿರಬೇಕು.

ಸಾಯುವ ಭಾಷೆ ಎಂಬ ಮಾತು ಬಂದಾಗ ಒಂದು ವಿಶಿಷ್ಟವಾದ ವಿವರವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕು. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಅಪೂರ್ವವಾದ ಭಾರತದ ಮತ್ತು ಇತರ ದೇಶಗಳ ಮೌಖಿಕ ಭಾಷೆಗಳ ಬಗ್ಗೆ ಒಂದು ಪ್ರಮುಖ ಯೋಜನೆಯನ್ನು ಕೈಗೊಂಡಿದ್ದಾರೆ. ಈಗ ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಭಾಷೆಗಳ ಸಂಖ್ಯೆ ಸುಮಾರು ೬೫೦೦. ಇವುಗಳಲ್ಲಿ ೩೫೨೪ ಭಾಷೆಗಳು ಈ ಶತಮಾನದ ಕೊನೆಯ ವೇಳೆಗೆ ಸಂಪೂರ್ಣವಾಗಿ ಮಾಯವಾಗಿಬಿಡುತ್ತವೆಂದು ನಿರೀಕ್ಷೆ. ಅವುಗಳಲ್ಲಿ ೧೫೦ ಭಾಷೆಗಳು ಆಗಲೇ ಸಾಯುವ ಸ್ಥಿತಿಯಲ್ಲಿವೆ. ಹೀಗಿರುವ ಎಲ್ಲ ಭಾಷೆಗಳ ಬಗ್ಗೆ data base ಅನ್ನು(ಅಂದರೆ ಕಂಪ್ಯೂಟರಿನಲ್ಲಿ ದೊರಕುವ ಅಂಕಿ ಅಂಶಗಳು) ಸಂಗ್ರಹಿಸಿ ಪ್ರಪಂಚದ ಎಲ್ಲರಿಗೂ ದೊರಕುವಂತೆ ಮಾಡುತ್ತಿದ್ದಾರೆ. ಇದಕ್ಕೆ ಹೆಸರು Worlds Oral Literature Project (www.oralitieruarure.org). ಈ ಭಾಷಾಶಾಸ್ತ್ರಿಗಳಿಗೆ ಎಲ್ಲ ಭಾಷೆಗಳ ಬಗ್ಗೆ ಅವು ಪ್ರತಿನಿಧಿಸುವ ಸಂಸ್ಕೃತಿಯ ಬಗ್ಗೆ ಇರುವ ಕಾಳಜಿಗೆ ನಾವು ಕೃತಜ್ಞರಾಗಿರಬೇಕು.

ಬೆಂಗಳೂರಿನ ಪ್ರಶ್ನೆಯೇ ಬೇರೆ. ಬೆಂಗಳೂರಿನಲ್ಲಿ ಕನ್ನಡವನ್ನು ಉಳಿಸುವುದು. ಸಾಧ್ಯವೇ? ಬೆಂಗಳೂರಿನಲ್ಲಿರುವ ಕನ್ನಡಿಗರ ಜನಸಂಖ್ಯೆ ಈಗ ಶೇಕಡ ೩೦ಕ್ಕೆ ಇಳಿದಿದೆ. ಇನ್ನೂ ಕಡಮೆಯಾಗುತ್ತಾ ಇದೆ. ತೆಲುಗು, ತಮಿಳು, ಹಿಂದಿ, ಉರ್ದು, ಮರಾಠಿ, ಗುಜರಾತಿ, ಬಂಗಾಳಿ, ಸಿಂಧಿ ಭಾಷೆಗಳೂ ಸ್ಪರ್ಧೆಯನ್ನು ಹೂಡುತ್ತಿವೆ. ಈ ಎಲ್ಲ ಭಾಷೆಗಳ ನಡುವೆ ಇಂಗ್ಲಿಷಿಗೆ, ಹಿಂದಿಗೆ ಅಧಿಕವಾದ ಸ್ಥಾನ ಸಿಕ್ಕಿದೆ. ಹೀಗಿರುವಾಗ ಈ ಬೃಹನ್ನಗರದಲ್ಲಿ ಕನ್ನಡವನ್ನು ಉಳಿಸಲು ಕೆಲವು ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ. ಉನ್ನತ ಕೈಗಾರಿಕೆಯ ಉದ್ಯಮಗಳಲ್ಲಿರುವ ಕನ್ನಡಿಗರಿಂದ

ಕನ್ನಡಿಗರಲ್ಲದವರಿಗೆ ಕನ್ನಡವನ್ನು ಕಲಿಸುವ ಪ್ರಯತ್ನಗಳಾಗುತ್ತವೆ. ಇಂಥ ಪ್ರಯತ್ನಗಳಿಂದ ಆಗುವ ಪ್ರತಿಫಲ ಕಡಿಮೆ. ಇದಕ್ಕಿಂತ ಹೆಚ್ಚು ತೀವ್ರವಾದ ಸಾರ್ವಜನಿಕ ಪ್ರಯತ್ನಗಳಾಗಬೇಕು. ಕರ್ನಾಟಕದಲ್ಲಿರುವ ಐಟಿ, ಬಿಟಿ ಮೊದಲಾದ ಉದ್ಯಮಗಳು ಸಾವಿರಾರು ಜನರಿಗೆ ಉದ್ಯೋಗಗಳನ್ನು ನೀಡಿವೆ. ಇವರಲ್ಲಿ ಕನ್ನಡದ ಜನ ಕಡಿಮೆ ಹೊರಗಿನವರು ಅಧಿಕ. ಹೀಗೆ ಹೊರಗಿನಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವ ಉದ್ಯೋಗಿಗಳು ಕನ್ನಡವನ್ನು ಉತ್ಸಾಹದಿಂದ ಕಲಿಯುವಂತೆ ಮಾಡುವ ಕಾರ್ಯವನ್ನು ಎಲ್ಲ ಉದ್ಯಮಪತಿಗಳು ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹೀಗೆ ಕನ್ನಡ ಕಲಿತರೆ ಅವರು ನಮ್ಮ ಕನ್ನಡಿಗರೇ ಆಗುತ್ತಾರೆ. ಇದರಿಂದ ಸೌಹಾರ್ದ ಉಂಟಾಗುತ್ತದೆ.

ಎಲ್ಲ ಕನ್ನಡಿಗರೂ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯೂ ಕರ್ನಾಟಕ ಸರಕಾರವೂ ಈ ಬಗ್ಗೆ ತುಂಬ ಎಚ್ಚರವಹಿಸಬೇಕು. ತಮಿಳು ನಾಡಿನಲ್ಲಿ ಸರಕಾರವು ಮಾಡಿರುವ ಕೆಲವು ಪ್ರಯತ್ನಗಳೂ ಸಫಲವಾಗಿವೆ. ನಾವೂ ಆ ಮಾರ್ಗವನ್ನೇ ಉಪಯೋಗಿಸಬೇಕು.

ಇದು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ. ಎಷ್ಟೇ ಭಾಷೆಗಳ ಜನ ಬೆಂಗಳೂರಿಗೆ ಬಂದು ಸೇರಿದರೂ ಆ ಭಾಷೆಯ ಜನರ ಮಕ್ಕಳಿಗೆ ವಿದ್ಯಾಭ್ಯಾಸ ಬೇಕು ತಾನೆ. ಅವರವರು ಸ್ವಂತ ಭಾಷೆಯ ಶಾಲೆಗಳನ್ನು ಮಾಡಿಕೊಂಡಿದ್ದಾರೆ. ಎಲ್ಲ ಶಾಲೆಗಳಲ್ಲಿ ಎಲ್ಲ ಮಕ್ಕಳು ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಪ್ರಥಮ ಭಾಷೆಯಾಗಿ ಕಲಿಯಲೇಬೇಕೆಂಬ ಬಿಗಿಯಾದ ಕಾನೂನನ್ನು ಸರಕಾರ ಕೂಡಲೇ ಜಾರಿಗೆ ತರಬೇಕು. ಇದು ಸಾಧ್ಯವಾದರೆ ಹತ್ತೇ ವರ್ಷಗಳಲ್ಲಿ ಎಲ್ಲ ಪರಕೀಯರ ಮಕ್ಕಳೂ ಕನ್ನಡಿಗರಾಗಿಬಿಡುತ್ತಾರೆ. ಇಂಥ ಪದ್ಧತಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ತಮಿಳುನಾಡಿಗೆ ಒಪ್ಪಿಗೆ ನೀಡಿದೆ. ಇಷ್ಟೆಲ್ಲ ಅವಕಾಶವಿದ್ದರೂ ನಾವು ಈ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತಿಲ್ಲ. ಬೆಂಗಳೂರಿನಲ್ಲಿ ಕನ್ನಡ ಉಳಿಯಬೇಕಾದರೆ ಮೊದಲು ಮಾಡಬೇಕಾದ ಕಾರ್ಯ ಇಧು. ಇದನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ– ಸಾಮಾಜಿವಾಗಿ.

ನಮ್ಮ ಸರಕಾರವೇ **'ಅಲ್ಪಸಂಖ್ಯಾತರು'** ಎಂಬ ಹೆಸರಿನ ಅಡಿಯಲ್ಲಿ ಅಂಥ ಅನೇಕ ಶಾಲೆಗಳಿಗೆ ಅವಕಾಶವನ್ನು ಕಲ್ಪಿಸಿದೆ. ಈ ಅವಕಾಶವನ್ನು ಪಡೆದವರು ವೀರಭದ್ರನಂತೆ ವರ್ತಿಸುತ್ತಿದ್ದಾರೆ. ಈ ಎಲ್ಲ ಶಾಲೆಗಳವರೂ ತಮ್ಮ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಿ, ಬಹುಸಂಖ್ಯಾತ ಕನ್ನಡಿಗರೊಡನೆ ಹಾಲು ಜೇನಿನಂತೆ ಬೆರೆತು ಬಾಳುವುದನ್ನೂ ಕಲಿಸಬೇಕು. ಅದು ಸಾಧ್ಯವಾಗದೆ ಹೋದರೆ ಸರಕಾರದ ಕಾನೂನಿನ ಅಂಕುಶವನ್ನು ಪ್ರಯೋಗಿಸಬೇಕಾದ ಪರಿಸ್ಥಿತಿ ಬರಲೇಬೇಕಾಗುತ್ತದೆ. ಅದರಿಂದ ಅಲ್ಪಸಂಖ್ಯಾತರಿಗೆ ಪ್ರಯೋಜನವೇ ಹೊರತು ಅಪಕಾರವೇನೂ ಇಲ್ಲ.

ಸ್ವಂತ ಭಾಷೆಯನ್ನು ರಕ್ಷಿಸಿ ಬೆಳೆಸುವ ರೀತಿಯಲ್ಲಿ ಚೀನಾದೇಶವು ಮಾಡುತ್ತಿರುವ ಪ್ರಯತ್ನವು ಎಲ್ಲ ಭಾಷೆಗಳವರಿಗೂ ಮಾದರಿಯಾಗಿದೆ. ಅಮೆರಿಕದಲ್ಲಿರುವ ಚೀನಾ ದೇಶದ ಆಡಳಿತ ಭಾಷೆಯಾಗಿರುವ ಮಂಡಾರಿನ್ ಭಾಷೆಯನ್ನು ಕಲಿಸುವ ಏರ್ಪಾಟನ್ನು ನಾವು ಪರಿಶೀಲಿಸಬೇಕು. ಅಮೆರಿಕದ ಚೀನಿ ಭಾಷೆಯ ಶಾಲೆಗಳಲ್ಲಿ ಕಿಂಡರ್‌ಗಾರ್ಟನ್ ಮತ್ತು ಪ್ರಥಮ ತರಗತಿಗಳಲ್ಲಿ ಪಾಠದ ಭಾಷೆಯ ಮಾಧ್ಯಮವು ಚೀನಿ ಭಾಷೆಯಲ್ಲಿಯೇ ನಡೆಯುತ್ತದೆ. ಎರಡನೆಯ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಕಲಿಸುತ್ತಾರೆ. ಆರನೆಯ ತರಗತಿಯವರೆಗೆ ಅರ್ಧ ಚೀನಿ, ಅರ್ಧ ಇಂಗ್ಲಿಷ್ ಭಾಷೆಯಲ್ಲಿ ಪಾಠಗಳಾಗುತ್ತವೆ. ಅಲ್ಲಿಯೂ ಚೀನಿ ಆವರಣದಲ್ಲಿಯೇ ಪಾಠಗಳಾಗುತ್ತವೆ. ಇಲ್ಲಿಗೆ ಬರುವ ಅಧ್ಯಾಪಕರೆಲ್ಲ ಟೈವಾನ್ ಅಥವಾ ಚೀನಾ ದೇಶದಿಂದಲೇ ಬರುತ್ತಾರೆ. ಪ್ರಾರಂಭದಲ್ಲಿ ಈ ವಿದ್ಯಾರ್ಥಿಗಳು ಇಂಗ್ಲಿಷ್ ಮಾತನಾಡುವುದರಲ್ಲಿ ಹಿಂದೆ ಬಿದ್ದರೂ ಬರಬರುತ್ತಾ ಎರಡು ಭಾಷೆಗಳಲ್ಲೂ ಸ್ಪಷ್ಟವಾಗಿ ಪರಿಣಾಮದಾಯಕವಾಗಿ ಮಾತನಾಡುತ್ತಾರೆ – ಅಲ್ಲದೆ, ಅವರ ಸೃಷ್ಟಿಶೀಲ ವ್ಯಕ್ತಿತ್ವ ಹೆಚ್ಚು ಪ್ರಭಾವ ಶಾಲಿಯಾಗಿ ಬೆಳಗುತ್ತದೆ. ಇಂಥ ಶಾಲೆಗೆ ಪ್ರಾರಂಭದಲ್ಲಿ ಏಷ್ಯಾ ಖಂಡದವರು ಹೆಚ್ಚಾಗಿ ಸೇರುತ್ತಿದ್ದರು. ಈಗ ಅಮೆರಿಕನರು, ಬಿಳಿ ಮತ್ತು ಕರಿಯ ಜನ ಮತ್ತು ಸ್ಪೇನಿನವರು ಬಂದು ಸೇರುತ್ತಿದ್ದಾರೆ. ಹೀಗೆ ಚೀನಾ ಶಾಲೆಗಳು ಜನಪ್ರಿಯವಾಗಿವೆ. ಅಮೆರಿಕದ ಸರಕಾರವು ಇಂಥ ಶಾಲೆಗಳಿಗೆ ಒಳ್ಳೆಯ ಅನುದಾನವನ್ನು ನೀಡುತ್ತಾ ಇದೆ. ಕನ್ನಡ ಜನರಿಗೂ ಇಂಗ್ಲಿಷ್ ಕಲಿಸುವ ಬಗ್ಗೆ ಇದು ಮಾದರಿಯದಾಗಿದೆ. ಕನ್ನಡವು ಎಲ್ಲ ಶಾಲೆಗಳಲ್ಲಿ ಹತ್ತನೆಯ ತರಗತಿಯವರೆಗೆ ಕಡ್ಡಾಯವಾಗುವುದಾದರೆ ಇಂಗ್ಲಿಷನ್ನು ಎರಡು ಮೂರನೆಯ ತರಗತಿಯಿಂದಲೇ ಕಲಿಸುವುದು ತಪ್ಪಾಗುವುದಿಲ್ಲ.

ಕನ್ನಡನಾಡಿನ ಸರಕಾರದ ಶಿಕ್ಷಣ ಇಲಾಖೆಯ ಬಗ್ಗೆ ನನ್ನದು ತೀವ್ರ ಆಕ್ಷೇಪಣೆ ಇದೆ. ಅದರಲ್ಲಿರುವ ಕೆಲವು ಅಧಿಕಾರಿಗಳು ಕನ್ನಡದ ಬಗ್ಗೆ ನಿರ್ಲಕ್ಷ್ಯದಿಂದ ಇದ್ದಾರೆ. ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ; ಗಮನಿಸಬೇಕು. ಕಳೆದ ಡಿಸೆಂಬರ್ ೧೮ರಂದು ಕನ್ನಡಪ್ರಭ ಪತ್ರಿಕೆಯಲ್ಲಿ ಒಂದು ಭಾರಿ ವರ್ತಮಾನ ಪ್ರಕಟವಾಗಿತ್ತು. ನಗರದ ಒಂದು ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಶಿಕ್ಷಣ ಇಲಾಖೆಯ ಮೂಗಿನ ಕೆಳಗೇ ಕನ್ನಡದ ಮಕ್ಕಳಿಗೆ ಆಂಧ್ರದ ಪಠ್ಯಪುಸ್ತಕಗಳನ್ನು ಬೋಧಿಸಲಾಗುತ್ತಿತ್ತು. ನಮ್ಮ ನಾಡು ಯಾವುದು? ಪ್ರಶ್ನೆ, ಉತ್ತರ : ಆಂಧ್ರಪ್ರದೇಶ, ನಮ್ಮ ರಾಜಧಾನಿ ಯಾವುದು? ಪ್ರಶ್ನೆ. ಉತ್ತರ : ಹೈದರಾಬಾದ್, ಆ ಮಕ್ಕಳ ಪೋಷಕರು ಮುಖ್ಯಾಧ್ಯಾಪಕರನ್ನು ಕಂಡು ಪ್ರಶ್ನಿಸಿದರೆ ಅವರು 'ನಾವು ಬೋಧಿಸುವುದೇ ಹೀಗೆ. ನಿಮಗೆ ಬೇಡದಿದ್ದರೆ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಿ' ಎಂದು ಹೇಳಿ ಗದರಿಸಿದರಂತೆ. ಆಂಧ್ರದ ಪಠ್ಯಗಳನ್ನು ಕೊಳ್ಳಲು ಪ್ರತಿಯೊಬ್ಬ ಮಗುವಿನಿಂದ ೧೮೦೦ ರೂಪಾಯಿಗಳನ್ನು ವಸೂಲಿ ಮಾಡಿದ್ದರಂತೆ. ಅವೆಲ್ಲ ಅಹಮದಾಬಾದಿನಲ್ಲಿ

ಪ್ರಕಟಿಸಿದ ಪುಸ್ತಕಗಳು. ಈ ವರ್ತಮಾನ ಬಂದ ಮೇಲೆ ಶಿಕ್ಷಣ ಇಲಾಖೆ ಏನು ಮಾಡಿತೆಂಬುದರ ಬಗ್ಗೆ ಸಾರ್ವಜನಿಕರಿಗೆ ವಿವರಗಳನ್ನು ಕೂಡಲೇ ತಿಳಿಸಬೇಕು. ಶಿಕ್ಷಣ ಇಲಾಖೆಯಲ್ಲಿ ವಿಷಯ ಪರೀಕ್ಷಕರುಗಳೆಂಬ ಅಧಿಕಾರಿಗಳು ಇರುತ್ತಾರೆ. ಅವರೇನು ಮಾಡಿದರು? ಇನ್ನು ಎಷ್ಟು ಇಂಥ ಶಾಲೆಗಳಿವೆಯೋ ಬೆಂಗಳೂರು ನಗರದಲ್ಲಿ? ಇದನ್ನು ಔದಾಸೀನ್ಯದಿಂದ ಕಾಣುವ ಇಲಾಖೆಗೆ ನಾಡಿನ ಭಾಷೆಯ ಮೇಲೆ ಪ್ರೀತಿ ಇದೆ ಎನ್ನಬಹುದೆ? ಅಂಥ ಅಧಿಕಾರಿಗಳ ಮೇಲೆ ಸರಕಾರ ಏಕೆ ಕ್ರಮ ಜರುಗಿಸಿಲ್ಲ? ಆ ಶಾಲೆಯ ಆಡಳಿತ ವರ್ಗ ಇದುವರೆಗೆ ಕನ್ನಡಿಗರ ಕ್ಷಮೆ ಯಾಕೆ ಯಾಚಿಸಿಲ್ಲ?

ನಮ್ಮ ಶಿಕ್ಷಣ ಇಲಾಖೆಯ ಗಮನಕ್ಕೆ ಮತ್ತೊಂದು ವಿಷಯವನ್ನು ತರಬೇಕಾಗಿದೆ. ನಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳಲ್ಲಿ ಕನ್ನಡದ ಬೋಧನೆಗೆ ಅರ್ಹರಾದ ಶಿಕ್ಷಕರು ದೊರಕುತ್ತಿಲ್ಲ. ಹಿಂದೆ ಕನ್ನಡ ಅಥವಾ ಸಂಸ್ಕೃತ ಭಾಷೆಗಳಲ್ಲಿ ಒಂದು ಭಾಷೆಯನ್ನು ಬೋಧಿಸುವುದಕ್ಕೆ ತರಬೇತಿ ಶಾಲೆಗಳಲ್ಲಿ ವಿಶಿಷ್ಟವಾದ ತರಬೇತಿ ಪಡೆದ ಶಿಕ್ಷಕರಿರುತ್ತಿದ್ದರು. ಅವರಿಂದ ಕನ್ನಡ ಅಥವಾ ಸಂಸ್ಕೃತವನ್ನು ಕಲಿತರೆ ಅಂಥ ವಿದ್ಯಾರ್ಥಿಗಳು, ಕಾಗುಣಿತದಲ್ಲಿ ಒಂದೂ ತಪ್ಪು ಮಾಡುತ್ತಿರಲಿಲ್ಲ. ವಾಚನವನ್ನು ಚೆನ್ನಾಗಿ ಕಲಿಯುತ್ತಿದ್ದರು. ಕಾವ್ಯಸ್ವಾದನೆಯ ಸುಖವನ್ನೂ ಅನುಭವಿಸುತ್ತಿದ್ದರು. ಈಗಲಾದರೂ ನಮ್ಮಲ್ಲಿರುವ ಕನ್ನಡ ಶಿಕ್ಷಕರಲ್ಲಿ ಅರ್ಹರಾದವರನ್ನು ಆರಿಸಿ ಕನ್ನಡ ಬೋಧನೆಯಲ್ಲಿ ಸರಿಯಾದ ಮಾರ್ಗವನ್ನು ಕಲಿಸುವ ಶಿಬಿರಗಳನ್ನು ನಡೆಸಿ ಪ್ರತಿವರ್ಷವೂ ಕೊನೆಯಪಕ್ಷ ೧೦೦೦ ಶಿಕ್ಷಕರನ್ನು ಸಿದ್ಧಗೊಳಿಸಬೇಕು. ಇದು ನಡೆಯದೆ ಇದ್ದರೆ ಕನ್ನಡ ಬಗ್ಗೆ ಬಾಲಕರಲ್ಲಿ ಪ್ರೀತಿ ಉಂಟಾಗುವುದಿಲ್ಲ. ಪ್ರೀತಿಯನ್ನು ಉಂಟುಮಾಡುವ ಶಿಕ್ಷಕರ ಸಂಖ್ಯೆ ಬೆಳೆಯಬೇಕು. ಕನ್ನಡವನ್ನು ಐಚ್ಛಿಕವಾಗಿ, ಆಳವಾಗಿ ಅಭ್ಯಾಸ ಮಾಡಿದವರೇ ಕನ್ನಡ ಶಿಕ್ಷಕರಾಗಬೇಕು. ನಮ್ಮ ನಾಡಿನ ಶಿಕ್ಷಣ ಇಲಾಖೆಗೆ ಈ ಬಗ್ಗೆ ಎಚ್ಚರಿಕೆಯನ್ನು ನಾಡಿನ ಶಾಸಕರು ನೀಡಬೇಕು.

ಎರಡನೆಯದಾಗಿ ಮತ್ತೊಂದು ಕೆಲಸ ಆಗಬೇಕು. ಕನ್ನಡ ನಾಡಿನ ಸರಕಾರದ ಎಲ್ಲ ಕಚೇರಿಗಳಲ್ಲಿಯೂ ಅಧಿಕಾರಿಗಳಿಗೆ ಬರುವ ಅರ್ಜಿಗಳು **ಯಾವಾಗಲೂ ಕನ್ನಡದಲ್ಲಿಯೇ ಇರಬೇಕು**. ಕನ್ನಡದಲ್ಲಿರದ ಯಾವ ಅರ್ಜಿಯನ್ನೂ ಸ್ವೀಕರಿಸಬಾರದು. ಹಾಗೆ ಸ್ವೀಕರಿಸಿದ ಅರ್ಜಿಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು **ಯಾವಾಗಲೂ ಕನ್ನಡದಲ್ಲಿಯೇ ಇರಬೇಕು**. ಹಾಗೆ ಮಾಡದ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಕನ್ನಡದ ಅಭಿವೃದ್ಧಿ ಪ್ರಾಧಿಕಾರವು ಅನೇಕ ಆದೇಶಗಳನ್ನು ಕಳಿಸಿದ್ದರೂ ಅಧಿಕಾರಿಗಳು ಅದನ್ನು ನಿರ್ಲಕ್ಷಿಸಿದ್ದಾರೆ. ಇದಕ್ಕೆ ಶಿಕ್ಷೆ ಇಲ್ಲದಿದ್ದರೆ ಏನು ಪ್ರಯೋಜನ? ನಮ್ಮ ಸರಕಾರ ಈ ದಿಕ್ಕಿನಲ್ಲಿ ತೀವ್ರ ಎಚ್ಚರಿಕೆಯನ್ನು ವಹಿಸಬೇಕು.

ಕನ್ನಡ ಭಾಷೆಯನ್ನು ವೃದ್ಧಿಪಡಿಸುವ ದಿಕ್ಕಿನಲ್ಲಿ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ–ಕನ್ನಡ ಏಕಭಾಷಾ ನಿಘಂಟು ಒಂದು ಘನವಾದ ಕಾರ್ಯ. ೧೯೪೪ರಲ್ಲಿ ಪ್ರಾರಂಭವಾಗಿ ೧೯೯೪ರ ತನಕ ಆ ಕೆಲಸ ನೆರವೇರಿತು. ಅಂದರೆ ಸುಮಾರು

ಐವತ್ತು ವರ್ಷಗಳು ನಿಘಂಟು ಕಚೇರಿಯಲ್ಲಿ ಆದ ಕೆಲಸ ಬಹುವ್ಯಾಪಕವಾದುದು. ಆ ಕಚೇರಿಯಲ್ಲಿ ಅನೇಕ ವಿಷಯ ಸಂಗ್ರಹಗಳಿವೆ. ಅದನ್ನು ಉಪಯೋಗಿಸುವ ಮುಂದಿನ ಕಾರ್ಯವನ್ನು ಮಾಡದೆ ಕಚೇರಿಗೆ ಬೀಗಮುದ್ರೆಯನ್ನು ಹಾಕಿ, ಶಾಶ್ವತವಾಗಿ ನೆರವೇರಬೇಕಾಗಿದ್ದ ಅತ್ಯಗತ್ಯವಾದ ಕಾರ್ಯವನ್ನು ನಿಲ್ಲಿಸಿಬಿಡುವ ಸಾಮರ್ಥ್ಯದ ಕನ್ನಡದ ಭಕ್ತರನ್ನೂ, ಪಡೆಯಿತು ನಮ್ಮ ಪರಿಷತ್ತು. ಹಿಂದೆ ಮುದ್ರಣವಾಗಿದ್ದ ನಿಘಂಟು ಸಂಪುಟಗಳು ಮಾರಾಟವಾಗಿ ಕೇಳುವವರಿಗೆ ಅನುಪಲಬ್ಧವಾಗಿತ್ತು. ಈಗಿನ ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದರು ಸರಕಾರದಿಂದ ಅನುದಾನವನ್ನು ಪಡೆದು ಆ ನಿಘಂಟಿನ ೧೦೦೦೦ ಪುಟಗಳುಳ್ಳ ಎಂಟು ಸಂಪುಟಗಳ ೧೬ ಸಾವಿರ ಪ್ರತಿಗಳನ್ನು ಪುನರ್ಮುದ್ರಣ ಮಾಡಿದ್ದಾರೆ. ಈಗ ಆ ಪ್ರತಿಗಳು ದೊರಕುತ್ತಿವೆ. ಪುನರ್ಮುದ್ರಣವಾಗುವ ವೇಳೆಗೆ ಆಗಲೇಬೇಕಾಗಿದ್ದ ತಿದ್ದುಪಾಟುಗಳನ್ನು ಸೇರಿಸಿದ್ದರೆ ಉತ್ತಮ ಕಾರ್ಯವಾಗುತ್ತಿತ್ತು. ಈಗಲೂ ಆ ಕೆಲಸವನ್ನು ಮಾಡಬೇಕಾದರೆ ಆ ಕಚೇರಿಯನ್ನು ತೆರೆದು ನಿಘಂಟು ಕಾರ್ಯವನ್ನು ಮುಂದುವರಿಸಬೇಕು. ಆ ಕೆಲಸಕ್ಕೆ ಹೊಸ ಯೋಜನೆಯಾಗಬೇಕು, ಸರಕಾರದ ಒಪ್ಪಿಗೆ ಬೇಕು. ಕೆಲಸವನ್ನು ನಿಲ್ಲಿಸುವುದು ಸುಲಭ, ಮಡಕೆಯನ್ನು ಒಡೆದಂತೆ. ಪ್ರಾರಂಭಿಸುವುದು ಕಷ್ಟ ಕುಂಬಾರನ ಕೆಲಸದಂತೆ. ಆದರೂ ಈ ಕಾರ್ಯವನ್ನು ಮಾಡಲೇಬೇಕಾಗಿದೆ.

ನಿಘಂಟು ವಿಚಾರ

ಎಲ್ಲ ಭಾಷೆಗಳಲ್ಲಿಯೂ ಹಳೆಯ ಶಬ್ದಗಳು ಕೆಲವು ಮಾಯವಾಗುತ್ತವೆ. ಹೊಸ ಶಬ್ದಗಳು ಸೇರಿ ಬಿಡುತ್ತವೆ. ಶಬ್ದಗಳ ಅರ್ಥವೂ ಬೇರೆಯಾಗಿ ಬಿಡುತ್ತವೆ. ಕೆಲವು ಅರ್ಥವಿಸ್ತಾರವನ್ನು ಪಡೆಯುತ್ತವೆ. ಕೆಲವಕ್ಕೆ ಅರ್ಥ ಸಂಕುಚಿತವಾಗುತ್ತವೆ. ಇದನ್ನು ನಿಘಂಟುಕಾರ ಕಣ್ಣಿನಲ್ಲಿ ಕಣ್ಣಿಟ್ಟು ದಾಖಲಿಸುತ್ತ ಪ್ರಧಾನಕಾರ್ಯಗಳನ್ನು ಈಗ ಮಾಡುತ್ತಿದ್ದಾರೆ. ಈ ಕೆಲಸ ಮುಂದುವರಿಯಬೇಕಾದರೆ ದ್ವಿಭಾಷಾ ನಿಘಂಟುಗಳು, ತ್ರಿಭಾಷಾ ನಿಘಂಟುಗಳು ನಿರ್ಮಾಣವಾಗಬೇಕು. ಇದಕ್ಕೆ ಇತರ ಭಾಷಾ ಸಾಹಿತ್ಯ ಸಂಸ್ಥೆಗಳೊಡನೆ ಸಂಬಂಧವನ್ನು ಬೆಳೆಸಬೇಕು. ಇದು ಕನ್ನಡ ನಿಘಂಟು ಕಚೇರಿಗೆ ಸುಲಭವಾದ ಕಾರ್ಯ. ಇತರ ಭಾಷೆಗಳಲ್ಲಿ ಇಂಥ ಸೌಲಭ್ಯವಿಲ್ಲ. ನಮ್ಮ ಕಚೇರಿಯಲ್ಲಿ ಸಮರ್ಥರಾದ ಕೆಲವರು ಉಪಸಂಪಾದಕರಿದ್ದರು. ಈಗ ಅವರನ್ನೆಲ್ಲ ನಿವೃತ್ತರನ್ನಾಗಿಸಲಾಗಿದೆ. ಮತ್ತೆ ಹೊಸ ಕಾರ್ಯಕರ್ತರ ಪಡೆಯನ್ನು ತಯಾರು ಮಾಡಬೇಕು. ಏನೇ ಆದರೂ ನಿಘಂಟು ಕಚೇರಿಯನ್ನು ಕೆಲಸವನ್ನು ಸಾಹಿತ್ಯ ಪರಿಷತ್ತು ಕೂಡಲೇ ಪುನರಾರಂಭ ಮಾಡಬೇಕು. ಎಂದೂ ಈ ಕಚೇರಿಯನ್ನು ಮುಚ್ಚಬಾರದು.

ಭಾರತದ ಇತರ ಸಾಹಿತ್ಯಗಳಲ್ಲಿರುವ ಮಹಾಕೃತಿಗಳನ್ನು ಕನ್ನಡಕ್ಕೆ ತರುವ ಮತ್ತು ಕನ್ನಡದ ಮಹಾಕೃತಿಗಳನ್ನು ಇತರೆ ಭಾಷೆಗೆ ಪ್ರದಾನ ಮಾಡುವ ಕಾರ್ಯವು ಮುಂದುವರಿಯಬೇಕಾದರೆ ಎಲ್ಲ ಭಾಷಾ ಪ್ರದೇಶಗಳಲ್ಲಿಯೂ ಕೊನೆಯಪಕ್ಷ ಎರಡು

ಭಾಷೆಗಳಲ್ಲಾದರೂ ನಿಷ್ಣಾತರಾದ ವಿದ್ವಾಂಸರು ಇರಬೇಕು. ಅವರು ಅನುವಾದ ಚತುರರಾಗಿರಬೇಕು. ಈ ದೃಷ್ಟಿಯಿಂದ ಹಿಂದೆ ಕನ್ನಡದ ಸಾಹಿತ್ಯ ಅಕಾಡೆಮಿಯು ಇಬ್ಬರು ಯುವ ವಿದ್ವಾಂಸರನ್ನು ಆಯ್ಕೆ ಮಾಡಿ ಬೇರೆ ಭಾಷೆಯ ವಿಶ್ವವಿದ್ಯಾನಿಲಯಗಳಿಗೆ ಕಳಿಸಿ ಅಲ್ಲಿಯ ಭಾಷೆಯನ್ನು ಕಲಿತು ಅದರಲ್ಲಿ ಪ್ರವೀಣರಾಗಿ ಹಿಂದಕ್ಕೆ ಕರೆತರುವ ಒಂದು ಏರ್ಪಾಟನ್ನು ಮಾಡಿತ್ತು. ಒಬ್ಬರನ್ನು ಪಶ್ಚಿಮ ಬಂಗಾಳಕ್ಕೂ ಮತ್ತೊಬ್ಬರನ್ನು ಇನ್ನೊಂದೆಡೆಗೂ ಕಳಿಸಿದ್ದ ನೆನಪು. ಅವರಲ್ಲೊಬ್ಬರು ಹಿಂದಿರುಗಿ ಒಳ್ಳೆಯ ಗ್ರಂಥವನ್ನು ಬರೆದುಕೊಟ್ಟರು. ಈಗಲೂ ಪರಿಷತ್ತಿನ ಇಂಥ ಕಾರ್ಯವನ್ನು ಪ್ರತಿವರ್ಷವೂ ಮಾಡಿದರೆ ಒಂದು ದಶಕದಲ್ಲಿ ನಮ್ಮಲ್ಲಿಯೇ ಹತ್ತು ಭಾಷೆಗಳ ಪ್ರವೀಣರು ತಯಾರಾಗುತ್ತಾರೆ. ಈಗ ಪರಿಷತ್ತು ಸರಕಾರದ ಸಹಾಯದ ದೆಸೆಯಿಂದಲೇ ಆರ್ಥಿಕವಾಗಿ ಗಟ್ಟಿಯಾಗಿ ಬೆಳೆದಿದೆ. ಆದ್ದರಿಂದ ಅದು ಗಟ್ಟಿಯಾದ ಕಾರ್ಯವನ್ನು ಮಾಡಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಮಾಡಬಹುದಾದ ಕೆಲವು ಇತರ ಕರ್ತವ್ಯಗಳನ್ನು ಈ ಸಭೆಯ ಎದುರಿಗೆ ವಿವರಿಸಲು ಇಷ್ಟಪಡುತ್ತೇನೆ.

೧. ಪರಿಷತ್ತು ಪ್ರತಿವರ್ಷವೂ ಬೆಂಗಳೂರಿನಲ್ಲಿ ಗಡಿನಾಡ–ಹೊರನಾಡ ಕನ್ನಡಿಗರ ಒಂದು ಸಮಾವೇಶವನ್ನು ನಡೆಸಬೇಕು. ನಮ್ಮ ಗಡಿನಾಡಿನ ದ್ವಿಭಾಷಾ ವಲಯಗಳಲ್ಲಿ ನೆರವೇರುವ ಸಾಹಿತ್ಯ ಕಾರ್ಯಗಳು ಮತ್ತು ಅಲ್ಲಿ ನೆಲೆಸಿರುವ ಕನ್ನಡಿಗರ ಸಮಸ್ಯೆಗಳೇನು ಎಂಬುದನ್ನು ನಾವು ತಿಳಿದುಕೊಳ್ಳುತ್ತಿರಬೇಕು. ಪುಣೆ, ಮುಂಬೈ, ನಾಗಪುರ, ಕೋಲ್ಕತ್ತ, ಚೆನ್ನೈ ಮತ್ತು ತಿರುವನಂತಪುರಗಳಲ್ಲಿ ತುಂಬ ಜನ ಕನ್ನಡಿಗರು ನೆಲೆಸಿದ್ದಾರೆ. ಅವರ ಸಂಪರ್ಕವನ್ನು ನಾವು ಸದಾ ಪಡೆದಿದ್ದರೆ ನೆರೆನಾಡುಗಳ ಎಲ್ಲ ವಿದ್ಯಮಾನಗಳನ್ನೂ ಅರಿಯುತ್ತಿರಬಹುದು. ಆದರಿಂದ ನಮಗೆ ಸಹಾಯಕವಾದ ಅನೇಕ ವಿವರಗಳು ದೊರಕುತ್ತವೆ. ಅಂತಹ ವಿವರಗಳಲ್ಲಿ ಕೆಲವು ನಮಗೆ ಅಪಾಯಕಾರಿಯೂ ಆಗಿರಬಹುದು. ಆಗ ಸೂಕ್ತ ಸಮಯದಲ್ಲಿ ನಾವು ಎಚ್ಚೆತ್ತು ಕ್ರಮ ಜರುಗಿಸಲು ಅನುಕೂಲವಾಗಿರುತ್ತದೆ. ನನ್ನ ಈ ಸೂಚನೆಯನ್ನು ಒಂದು ದೃಷ್ಟಾಂತದಿಂದ ವಿಶದಪಡಿಸುತ್ತೇನೆ. ಸುಮಾರು ಒಂದು ತಿಂಗಳ ಹಿಂದೆ ಮುಂಬೈ ನಗರದ ಥಾಣೆಯಲ್ಲಿ ಮರಾಠೀ ಸಾಹಿತ್ಯ ಸಮ್ಮೇಳನವು ನೆರವೇರಿತು. ಅದರ ಅಧ್ಯಕ್ಷರಾಗಿ ಉತ್ತಮ ಕಾಂಬ್ಳೆ ಎಂಬ ಲೇಖಕರು ಆಯ್ಕೆಯಾಗಿದ್ದರು. ಮೂಲತಃ ಅವರು ಕನ್ನಡಿಗರು. ಅವರು ಹುಟ್ಟಿದ್ದು, ವಿದ್ಯಾಭ್ಯಾಸವನ್ನು ಪಡೆದಿದ್ದು ಸಿರುಗಪ್ಪೆಯ ಸುತ್ತಮುತ್ತಲಿನಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಮಹಾಜನ್ ವರದಿಯನ್ನು ಉಲ್ಲೇಖಿಸಿ ಮಹಾರಾಷ್ಟ್ರಕ್ಕೆ ಮಹಾ ಅನ್ಯಾಯವಾಗಿದೆ ಎಂಬ ಉದ್ಗಾರವನ್ನು ತೆಗೆದರೆಂದು ವಾರ್ತಾಪತ್ರಿಕೆಗಳಿಂದ ತಿಳಿದುಬರುತ್ತದೆ. ಬೆಳಗಾಂ ಜಿಲ್ಲೆಯೂ ನಿಪ್ಪಾಣಿ ತಾಲ್ಲೂಕು ಮತ್ತು ಕಾರವಾರ ಜಿಲ್ಲೆಯ ಅನೇಕ ಭಾಗಗಳೂ ಮಹಾರಾಷ್ಟ್ರಕ್ಕೆ ಸೇರಬೇಕು. ಇದಕ್ಕೆ ಬೇಕಾದ ಘೋರ ಹೋರಾಟವನ್ನು ಮಾಡಿಯೇ

ತೀರಬೇಕು ಎಂಬ ಮರಾಠೀ ಜನರಿಗೆ ಕರೆಕೊಟ್ಟರು. ಕನ್ನಡದ ಸರಕಾರವು ಮಹಾರಾಷ್ಟ್ರೀಯರಿಗೆ ಕಿರುಕುಳ ಕೊಡುತ್ತಿದೆ ಎಂದೂ ಮರಾಠೀ ಸಂಸ್ಕೃತಿಯನ್ನೇ ಮಟ್ಟಹಾಕಲು ಸಿನಿಮಾ ಮತ್ತು ನಾಟಕಗಳನ್ನು ಉಪಯೋಗಿಸುತ್ತಿದೆ ಎಂದೂ ಕನ್ನಡ ಲೇಖಕರು ಮರಾಠಿಗರಿಗೆ ಅಗೌರವದಿಂದ ನಡೆದುಕೊಳ್ಳುತ್ತಾರೆ ಎಂದೂ ಕರ್ನಾಟಕ ಸರಕಾರಕ್ಕೂ ಕನ್ನಡ ಜನರಿಗೂ ತಕ್ಕ ಬುದ್ಧಿಯನ್ನು ಕಲಿಸಬೇಕೆಂದು ವಿರಾವೇಶದಿಂದ ಮಾತನಾಡಿದರಂತೆ! ಕನ್ನಡ ದೇಶದಲ್ಲಿರುವ ಮರಾಠಿಗರು ಇಂಥ ಸುಳ್ಳು ಹೇಳಿಕೆಗಳನ್ನು ವಿರೋಧಿಸಬೇಕು. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಅದನ್ನು ನಮ್ಮ ನಾಡಿಗೆ ಬರುವವರೆಲ್ಲರೂ ಕಲಿಯಬೇಕು. ಇದು ಅನಿವಾರ್ಯವೆಂಬ ಅಂಶವನ್ನು ನಾವು ಅವರ ಅನುಭವಕ್ಕೆ ತರಬೇಕು.

ನಿಜವಾಗಿ ಕನ್ನಡನಾಡು ಕಾಸರಗೋಡನ್ನು ಕಳೆದುಕೊಂಡಿದೆ: ಕನ್ನಡಿಗರು ಕೇರಳದೊಡನೆ ಸ್ನೇಹದಿಂದಿದ್ದು ಕಾಸರಗೋಡಿನ ವಿಚಾರವಾಗಿ ನಿಧಾನವಾಗಿ ಆಲೋಚನೆ ಮಾಡುತ್ತಿರುವಾಗ ನಮ್ಮ ನಾಡಿನ – ಕರ್ನಾಟಕದ ಒಂದು ಮುಖ್ಯಭಾಗವಾಗಿ ವೃದ್ಧಿ ಹೊಂದುತ್ತಿರುವ ಜಿಲ್ಲೆಗಳನ್ನು ತಾಲ್ಲೂಕುಗಳನ್ನು ಕಬಳಿಸುವ ಇಂಥ ಉಗ್ರರಿಂದ ಗಡಿನಾಡಿನಲ್ಲಿ ಅಸ್ಥಿರತೆ ತಲೆದೋರುತ್ತಿದೆ. ಇಂಥ ಹೇಳಿಕೆಗಳನ್ನು ನಾವು ತೀವ್ರವಾಗಿ ವಿರೋಧಿಸಬೇಕು. ಆದರೆ ಇಂಥ ಉದ್ವೇಗಕಾರಕ ವಿವರಗಳು ನಮ್ಮ ಗಮನಕ್ಕೆ ಬಾರದೆ ಹೋದರೆ ನಮಗೆ ಅಪಾಯ. ಅಚ್ಚಗನ್ನಡ ಪ್ರದೇಶಗಳ್ನು ನುಂಗಲು ಇಷ್ಟಪಡುವ ಆಕ್ರಮಶೀಲ ಪೇಶ್ವಾಯಿ ಬುದ್ಧಿಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಈ ಸಮ್ಮೇಳನದಲ್ಲಿ ಇಂಥ ಕುಹಕಿಗಳ ಕಾರ್ಯವನ್ನು ಖಂಡಿಸಿ ನಮ್ಮ ವಿರೋಧವನ್ನು ವ್ಯಕ್ತಪಡಿಸಬೇಕು. ಜನರ ಶಾಂತಿಯನ್ನು ಕದಡುವ ಉತ್ತಮ ಕಾಂಬ್ಳೆ ಅವರು ತಮ್ಮ ಆಕ್ರಮಣದ ಮಾತುಗಳನ್ನು ಹಿಂದೆ ತೆಗೆದುಕೊಳ್ಳುವಂತೆ ಮಾಡಬೇಕು. ಇಂಥ ದುರಾಚಾರಿಗಳು ಮತ್ತೊಮ್ಮೆ ಬಾಯ್ಬಿಡದಂತೆ ಮಾಡಬೇಕು.

ಪತ್ರಿಕೆ ಕನ್ನಡನುಡಿ ವಿಚಾರ

೨. ಪರಿಷತ್ತಿನ ಸದಸ್ಯರ ಸಂಖ್ಯೆ ಈಗ ಒಂದು ಲಕ್ಷದ ಹದಿನೆಂಟು ಸಾವಿರದ ನಾನ್ನೂರನ್ನು ಮುಟ್ಟುತ್ತಿದೆ. ಇನ್ನೂ ಹೆಚ್ಚಬಹುದು. ಈ ಎಲ್ಲ ಸದಸ್ಯರಿಗೂ ಪರಿಷತ್ತಿನಿಂದ ಒಂದೇ ಒಂದು ಪತ್ರವು ಹೋಗಬೇಕಾದರೂ ಸುಮಾರು ಆರು ಲಕ್ಷರೂಪಾಯಿಗಳು ಖರ್ಚಾಗುತ್ತದೆ. ಇಂಥ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಕಳಿಸಬೇಕಾದರೂ ತೆರೆದ ಅಂಚೆಗಾದರೂ ಐದು ಲಕ್ಷ ರೂಪಾಯಿಗಳು ವ್ಯಯವಾಗುತ್ತದೆ. ಕನ್ನಡನುಡಿ ಪತ್ರಿಕೆಯನ್ನು ಕಳಿಸಬೇಕಾದರೂ ತಿಂಗಳಿಗೆ ಮೂವತ್ತು ಸಾವಿರ ರೂಪಾಯಿಗಳಾಗುತ್ತವೆ. ಈಗ ಸದಸ್ಯತ್ವವನ್ನು ಎರಡು ಭಾಗ ಮಾಡಿ ಒಂದು ತಿಂಗಳ ಕನ್ನಡನುಡಿಯನ್ನು ಮೊದಲ ಭಾಗಕ್ಕೆ ಎರಡನೆಯ ತಿಂಗಳ ಕನ್ನಡನುಡಿಯನ್ನು ಮತ್ತೊಂದು ಭಾಗಕ್ಕೆ ಕಳಿಸಲಾಗುತ್ತಿವೆ ಎಂದು ಸಂಪಾದಕರು ನನಗೆ ತಿಳಿಸಿದರು. ನಿಜವಾಗಿ ಕನ್ನಡನುಡಿ ಪತ್ರಿಕೆಯನ್ನು ಯಾರು ನಿರೀಕ್ಷಿಸುತ್ತಾರೆಯೋ

ಅದನ್ನು ಪರಿಷತ್ತಿಗೆ ತಿಳಿಸಬೇಕೆಂದು ಸದಸ್ಯರನ್ನು ಕೇಳಿಕೊಂಡರೆ ಆಗ ಯಾರು ಉತ್ತರ ಕೊಡುವುದಿಲ್ಲವೋ ಅಂಥವರಿಗೆ ಕಳಿಸದೇ ಇರಬಹುದು. ಈ ಬಗ್ಗೆ ಜಿಲ್ಲೆಯ ಪ್ರತಿನಿಧಿಯಾಗಿರುವ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರು ತಮ್ಮ ಜಿಲ್ಲೆಗಳಿಂದ ಇಂಥ ಅಂಕಿ ಅಂಶಗಳನ್ನು ಪ್ರಾಮಾಣಿಕವಾಗಿ ಕಂಡುಹಿಡಿದರೆ ಒಂದು ಉತ್ತಮವಾದ ಉಳಿತಾಯದ ಕೆಲಸವಾಗುತ್ತದೆ. ನಮ್ಮ ಎಲ್ಲ ಸದಸ್ಯರೂ ಪರಿಷತ್ತಿನ ಅಭಿಮಾನಿಗಳು ನಿಜ. ಆದರೆ ಅವರ ವೃತ್ತಿಗಳ ಬಾಹುಳ್ಯದಲ್ಲಿ ಅವರಿಗೆ ಕನ್ನಡನುಡಿಯನ್ನು ಓದುವುದಕ್ಕೆ ಅವಕಾಶವೇ ಸಿಗದ ಎಷ್ಟೋ ಜನರಿರುತ್ತಾರೆ ಇದನ್ನು ತಿಳಿದುಕೊಳ್ಳುವುದರಲ್ಲಿ ತಪ್ಪೇನಿಲ್ಲ ಗಣಕಯಂತ್ರದ ಸೌಲಭ್ಯ ಇರುವ ಸದಸ್ಯರಿಗೆ ಇ–ಅಂಕೆಯ ಮೂಲಕ ಕನ್ನಡನುಡಿಯನ್ನು ಕಳುಹಿಸಿ ಅಂಚೆವೆಚ್ಚವನ್ನು ಉಳಿಸಬಹುದು.

ಪರಿಷತ್ತಿನ ಚುನಾವಣೆ

ಪರಿಷತ್ತಿನ ಅಧ್ಯಕ್ಷ ಪದವಿಗೆ ಚುನಾವಣೆಗೆ ನಿಲ್ಲುವವರು ಇನ್ನು ಮುಂದೆ ರಾಜಕೀಯ ಚುನಾವಣೆಗೆ ಖರ್ಚು ಮಾಡುವಂತೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಸಾಹಿತ್ಯದ ಕ್ಷೇತ್ರದಲ್ಲಿ ಇಂಥವರಾದರೂ ಇಲ್ಲವೆಂದು ನನ್ನ ಭಾವನೆ. ಆದ್ದರಿಂದ ಇಂಗ್ಲಿಷಿನಲ್ಲಿ Electroal Collegeಎಂದು ಕರೆಯುವ ಪದ್ಧತಿ ಇದೆ. ಸಂಸ್ಥೆಗಳಿಗೆ ಈ ಬಗೆಯ ಏರ್ಪಾಟು ಮಾದರಿ. ಅದರ ಪ್ರಕಾರ ಎಲ್ಲ ಸದಸ್ಯರು ಎಷ್ಟೇ ಜನರಿರಲಿ ಚುನಾವಣೆಗೆ ನಿಲ್ಲುವ ಮತ್ತು ಮತವನ್ನು ಚಲಾಯಿಸುವ ಒಂದು ಸದಸ್ಯ ವರ್ಗವನ್ನು ರೂಪಿಸಿಕೊಳ್ಳುತ್ತಾರೆ. ಹಾಗೆ ನಮ್ಮಲ್ಲಿ ಸಾಹಿತಿಗಳಾಗಿರುವ ಸದಸ್ಯರನ್ನೆಲ್ಲ ಕೂಡಿಸಿ ಒಂದು ಮತ ಚಲಾಯಿಸುವ ವರ್ಗವನ್ನು ನಿರ್ಮಿಸುವುದು ಸಾಧ್ಯವೇ ಎಂದು ಪರಿಶೀಲನೆ ಮಾಡಬೇಕೆಂದು ಸೂಚಿಸುತ್ತೇನೆ. ಹೀಗೆ ಮಾಡಿದರೆ ಪರಿಷತ್ತಿನ ಸಾಹಿತ್ಯ ಕಾರ್ಯಕ್ಕೆ ಬೆಂಬಲ ಹೆಚ್ಚುತ್ತದೆ. ಇಲ್ಲದಿದ್ದರೆ ಮುಂದೆ ಪರಿಷತ್ತು ರಾಜಕೀಯ ಸಂಸ್ಥೆಯಾಗಿ ಬಿಡುತ್ತದೆ. ಸಾಹಿತ್ಯಕ್ಕೆ ಇದು ಅಪಾಯ.

೩. ಪರಿಷತ್ತಿನ ಕಾರ್ಯವ್ಯಾಪ್ತಿ ಹೆಚ್ಚಾಗಿದೆ. ಜಿಲ್ಲೆ ತಾಲ್ಲೂಕುಗಳಲ್ಲಿ ಸಾಹಿತ್ಯಕಾರ್ಯ ನೆರವೇರುತ್ತಿವೆ. ಈ ಬಗೆಯ ಕಾರ್ಯಕ್ರಮಗಳಿಗೆ ಧರ್ಮಸ್ಥಳದಲ್ಲಿ ನಡೆಯುವ **ಧರ್ಮ–ಸಾಹಿತ್ಯ ಸಮ್ಮೇಳನಗಳೂ** ಮೂಡುಬಿದಿರೆಯ **ನುಡಿಸಿರಿ** ಸಮ್ಮೇಳನಗಳೂ **ವಿರಾಸತ್‌ಗಳೂ** ಮಾದರಿಯಾಗಬೇಕು. ಕೆಲವು ಮಠಗಳು ನಡೆಸುವ ಸಾಹಿತ್ಯ ಕಾರ್ಯಕ್ರಮಗಳನ್ನೂ ಮಾರ್ಗದರ್ಶಿಗಳಾಗಿ ಇಟ್ಟುಕೊಳ್ಳುವುದು ಒಳ್ಳೆಯದು. ಕೇಂದ್ರ ಪ್ರದೇಶವಾದ ಬೆಂಗಳೂರಿನಲ್ಲಿ ಸಾಹಿತ್ಯ ಕಾರ್ಯ ಕಡಿಮೆಯಾಗಿದೆ. ಈಗ ಕನ್ನಡ ಸಾಹಿತ್ಯದಲ್ಲಿ ವಿಮರ್ಶನ ಕ್ಷೇತ್ರದಲ್ಲಿ ತುಂಬ ಬದಲಾವಣೆ ನಡೆದಿದೆ. ಈಗಿನ ವಿದ್ವಾಂಸರು ನಮ್ಮ ಪ್ರಾಚೀನ ಕವಿಗಳ ಕೃತಿಗಳನ್ನು ಪುನರ್ ವಿಮರ್ಶೆ ಮಾಡುತ್ತಿದ್ದಾರೆ. ಹೊಸ ಅಲೊಚನೆಯಗಳೂ ಹೊರಹೊಮ್ಮುತ್ತಿವೆ. ಈ ದೃಷ್ಟಿಯಿಂದ ಪರಿಷತ್ತು ಬೆಂಗಳೂರಿನಲ್ಲಿ ಪ್ರತಿವರ್ಷ ಒಬ್ಬ ಪ್ರಾಚೀನ ಕವಿಯ ಬಗ್ಗೆ ಈ ಹೊಸ ಆಲೋಚನೆಗಳ

ವಿಮರ್ಶೆಯ ಒಂದು ವಿಚಾರ ಸಂಕೀರ್ಣವನ್ನು ನಡೆಯಿಸಿ ಆ ಸಭೆಯ ಉಪನ್ಯಾಸಗಳನ್ನು ಒಂದು ಪುಸ್ತಕವನ್ನಾಗಿ ಪ್ರಕಟಿಸಬೇಕೆಂದು ನನ್ನ ಮತ್ತೊಂದು ಸೂಚನೆಯನ್ನು ಪರಿಷತ್ತಿನ ಮುಂದೆ ಇಡುತ್ತೇನೆ. ಹೀಗೆಯೇ ಸಣ್ಣ ಪ್ರಮಾಣದಲ್ಲಿ ಪ್ರತಿವರ್ಷವು ಎರಡು ತಿಂಗಳಿಗೊಮ್ಮೆ **ಯುವ ಪ್ರತಿಭೆ, ಮಕ್ಕಳ ಸಾಹಿತ್ಯ, ಮಹಿಳೆಯರ ಕೃತಿಗಳು, ಒಂದು ವರ್ಷದ ಎಲ್ಲ ಪ್ರಕಾರದ ಕೃತಿಗಳ ವಿಮರ್ಶೆ** ಇತ್ಯಾದಿ ಕಾರ್ಯಕ್ರಮವನ್ನು ಇಟ್ಟುಕೊಂಡು ಅಂಥ ಸಭೆಯಲ್ಲಿ ನಡೆಯುವ ಉಪನ್ಯಾಸಗಳನ್ನು ಬರೆಸಿ ಪ್ರಕಟಿಸುವ ಕಾರ್ಯವೂ ಆಗಬೇಕು. ಆಗ ಕೇಂದ್ರದ ಕಾರ್ಯಕ್ರಮಗಳು ಜಿಲ್ಲೆಗಳಿಗೆ ಮಾದರಿಯಾಗುತ್ತವೆ. ವಿಶಿಷ್ಟವಾಗಿ ಈ ವರ್ಷ ನೇಮಿಚಂದ್ರನ ಬಗ್ಗೆ ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಬೇಕೆಂದು ನನ್ನ ಸೂಚನೆ. ನೇಮಿಚಂದ್ರನು ಅವನ ನೇಮಿಪುರಾಣವನ್ನು ಪೂರೈಸಿದ್ದರೆ ಮಹಾಕವಿಯಾಗಿ ಪರಿಗಣಿತನಾಗುತ್ತಿದ್ದನು. ಆದಾಗದೆ ಅವನು ಮಹಾಕವಿ ಶಬ್ದದಿಂದ ಪರಿಚಿತನಾಗಿದ್ದಾನೆ. ಅವನನ್ನು ಎತ್ತಿ ಹಿಡಿಯುವ ಕಾರ್ಯ ಆಗಬೇಕಾಗಿದೆ. ಹೀಗೆಯೇ **ರುದ್ರಭಟ್ಟನ, ಷಡಕ್ಷರಿಯ** ಕೃತಿಗಳನ್ನು ಪರಿಶೀಲಿಸಬೇಕಾದೀತು.

ಕನ್ನಡ ಕವಿ ಕಾವ್ಯ ವಿಚಾರ

೪. ಕನ್ನಡನಾಡಿನಲ್ಲಿ ಕನಕ, ಪುರಂದರ ಕೃತಿಗಳನ್ನು ಕುರಿತ ಅನುಚಿತವಾದ ಕೆಲವು ಹೇಳಿಕೆಗಳು ಬರುತ್ತಿವೆ. ಇಬ್ಬರೂ ಶ್ರೇಷ್ಠ ಸಂತರು. ಇವರ ಕೃತಿಗಳ ಬಗ್ಗೆ ಸತ್ಯಾಸತ್ಯತೆಯನ್ನು ವಿದ್ವತ್ತೆಯಿಂದ ಪರಿಶೀಲಿಸಿ ಸಮರ್ಥವಾಗಿ ತೀರ್ಮಾನವನ್ನು ಸ್ಥಾಪಿಸುವ ಕಾರ್ಯವಾಗಬೇಕಾಗಿದೆ. ಇದು ಒಂದು ಮುಖ್ಯ ಕಾರ್ಯ.

ನಾಡಗೀತೆ ವಿಚಾರ

೫. ಕನ್ನಡದ ನಾಡಗೀತೆಯೆಂದು ಒಂದು ಗೀತೆಯನ್ನು ಆಯ್ಕೆಮಾಡಲಾಗಿದೆ. ಕಾರ್ಯಕ್ರಮಗಳಲ್ಲಿ ಅದನ್ನು ಹಾಡುವಾಗ ಸಭೆಯ ಎಲ್ಲರೂ ನಿಲ್ಲಬೇಕೆಂದು ಸೂಚನೆಯಿದೆ. ಈ ಗೀತೆಯನ್ನು ಹಾಡುವವರು ಸಾಲುಗಳನ್ನು ಎರಡು ಮೂರು ಸಲ ಹಾಡಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಾರೆ. ನಾಡಗೀತೆ ಯಾವಾಗಲೂ ಸಂಗ್ರಹವಾಗಿ ೩ ನಿಮಿಷಕ್ಕಿಂತ ಹೆಚ್ಚಿಲ್ಲದೆ ಇರಬೇಕು. ಈ ಬಗ್ಗೆ ಪರಿಷತ್ತು ಪರಿಶೀಲನೆ ನಡೆಸಿ ಸರಕಾರಕ್ಕೆ ಸಲಹೆಯನ್ನು ನೀಡಬೇಕು.

ಶಾಸ್ತ್ರೀಯ ಭಾಷೆ

೬. **'ಶಾಸ್ತ್ರೀಯ ಭಾಷೆ'** ಎಂಬ ಅಬದ್ಧವಾದ ಶಬ್ದವು ಸಿಂಹಾಸನದ ಮೇಲೆ ಕುಳಿತುಬಿಟ್ಟಿವೆ. ಅದನ್ನು ಕೆಳಗಿಳಿಸಿ **ಅಭಿಜಾತ ಭಾಷೆ** ಅಥವಾ **ಸಮೃದ್ಧ ಪ್ರಾಚೀನ ಭಾಷೆ** ಎಂಬ ಶಬ್ದವನ್ನು ಉಪಯೋಗಿಸಬೇಕು. ಕೇಂದ್ರ ಸರಕಾರದಿಂದ ಕನ್ನಡಕ್ಕೆ ಅಭಿಜಾತ ಭಾಷೆಯೆಂಬ ಪಟ್ಟದಕ್ಕಿದೆ. ಆದರೆ ಯಾವ ಧನವೂ ನಮಗೆ ಬಂದಿಲ್ಲ. ಈ ಹಣವು ದೊರಕಿದರೆ ಆ ಹಣವನ್ನು ಹೇಗೆ ಉಪಯೋಗಿಸಬೇಕೆಂಬ ಒಂದು ಸ್ಪಷ್ಟ

ಆಲೋಚನೆಯನ್ನು ಪರಿಷತ್ತು ರಚಿಸಬೇಕು. ಅದಕ್ಕಾಗಿ ಒಂದು ವಿದ್ವಾಂಸರ ಸಮಿತಿಯನ್ನು ಸ್ಥಾಪಿಸಬೇಕು. ಇದು ಕೂಡಲೆ ಆಗಬೇಕು. ಯೋಜನೆಯನ್ನು ಕಳಿಸದಿದ್ದರೆ ಅನುದಾನ ಬರುವುದಿಲ್ಲ. ಪರಿಷತ್ತು ಈ ವಿಚಾರವಾಗಿ ನಿರ್ಣಾಯಕವಾದ ತೀರ್ಮಾನವನ್ನು ಕೈಗೊಂಡು ತಾನೇ ಮುಂಚೂಣಿಯ ನಾಯಕ ಎಂಬ ಪಟ್ಟ ಮುಟ್ಟಬೇಕು.

ಕನ್ನಡ ಬಾವುಟ ಗ್ರಂಥ

೭. ಬಿ.ಎಂ.ಶ್ರೀಯವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನವೋದಯದ ನೆನಪಿಗಾಗಿ **'ಕನ್ನಡ ಬಾವುಟ'** ಎಂಬ ಗ್ರಂಥವನ್ನು ಪ್ರಕಟಿಸಿದರು. ಅದು ಸುಮಾರು ಹತ್ತು ಸಲ ಪುನರ್ಮುದ್ರಣವಾಗಿದೆ. ಈಗ ನವೋದಯ ಶತಮಾನದ ನೆನಪಿಗಾಗಿ ಈ ವರ್ಷವೇ ಇಂದಿನ ಅಧ್ಯಕ್ಷರು ಈ ಶತಮಾನದ ಸಾಹಿತ್ಯ ಕೃಷಿಯಲ್ಲಿ ಅತ್ಯುತ್ತಮವೆಂದು ಕಂಡುಬಂದ ನೂರು ಕವನಗಳನ್ನು ಆಯ್ಕೆಮಾಡಿ ಮತ್ತೊಂದು ಕವನ ಸಂಕಲನವನ್ನು ಪ್ರಕಟಿಸಬೇಕು. ಕನ್ನಡ ಭುವನೇಶ್ವರಿಗೆ ಒಂದು ಧ್ವಜ. ಒಂದು ಶ್ವೇತಚ್ಛತ್ರ ಮುಖ್ಯ.. ಕನ್ನಡ ಭಾಷೆಗೆ ಒಂದು ಬಾವುಟವನ್ನು ಬಿ.ಎಂ.ಶ್ರೀ ನೀಡಿದರು. ಇಂದಿನ ಅಧ್ಯಕ್ಷರು ಈಗ ಒಂದು **'ಬೆಳ್ಗೊಡೆ'** ಯನ್ನು ನೀಡಲಿ ಸೂಚಿಸುತ್ತೇನೆ.

ಯಶಸ್ವಿನಿ ಯೋಜನೆ

೮. ನಮ್ಮ ಸರಕಾರವು ರೈತರ ಸಮಾಜದ ಒಳಿತಿಗಾಗಿ **'ಯಶಸ್ವಿನಿ'** ಎಂಬ ಒಂದು ಆರೋಗ್ಯ ವಿಮೆಯ ಸಹಾಯ ಯೋಜನೆಯನ್ನು ಸ್ಥಾಪಿಸಿದೆ. ಇದರಿಂದ ಲಕ್ಷಾಂತರ ರೈತರ ಕುಟುಂಬಗಳಿಗೆ ಸಹಾಯವಾಗುತ್ತಿದೆ. ಅನೇಕ ಸಾಹಿತಿಗಳಿಗೂ ಅವರ ಕುಟುಂಬಕ್ಕೂ ಈ ರೀತಿಯ ಆರೋಗ್ಯವಿಮೆಯ ಆವಶ್ಯಕತೆ ಇದೆ. ಅಂಥವರಿಗೆ ಯಶಸ್ವಿನಿ ರೀತಿಯ ಆರೋಗ್ಯ ವಿಮೆಯ ಒಂದು ಯೋಜನೆಯನ್ನು ಸ್ಥಾಪಿಸಿದರೆ ಈ ವರ್ಗಕ್ಕೆ ತುಂಬ ಉಪಕಾರವಾಗುತ್ತದೆ ಎಂದು ತಿಳಿದಿದ್ದೇನೆ. ಸಾಹಿತ್ಯ ಪರಿಷತ್ತು ಈ ಬಗ್ಗೆ ಸರಕಾರಕ್ಕೆ ಒಂದು ಶಿಫಾರಸ್ಸು ಕಳಿಸಬಹುದು.

ವಿಜ್ಞಾನ ಗ್ರಂಥಗಳ ಪ್ರಕಟಣೆ

೯. ನಮ್ಮ ರಾಷ್ಟ್ರದ ಪ್ರಸಿದ್ಧ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದಾದ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗ ಶಾಲೆಗಳು (NAL-CSR) ಎಂಬ ಹೆಸರಿನ ದೊಡ್ಡ ಸಂಸ್ಥೆಯು ಕನ್ನಡದಲ್ಲಿ ವೈಜ್ಞಾನಿಕ ಲೇಖನಗಳ ಬೆಳವಣಿಗೆ ಮಾಡಿರುವಷ್ಟು ಸಹಾಯವನ್ನು ಇತರ ಯಾವ ವೈಜ್ಞಾನಿಕ ಸಂಸ್ಥೆಯೂ ಮಾಡಿಲ್ಲ. ಅದು ಕಳೆದ ಮೂವತ್ತೈದು ವರ್ಷಗಳಿಂದ 'ಕಣಾದ' ಎಂಬ ಹೆಸರಿನ ವಾರ್ಷಿಕ ವಿಜ್ಞಾನ ಪತ್ರಿಕೆಯನ್ನು ಪ್ರಕಟಮಾಡುತ್ತ ಇದೆ. 'ಕಣಾದ' ಎಂಬುದು ನಮ್ಮ ದೇಶದ ಒಬ್ಬ ಪ್ರಾಚೀನವಾದ ಮಹರ್ಷಿಯ ಹೆಸರು. ಅವನು ಅಣುವಿಜ್ಞಾನಕ್ಕೆ ಆದ್ಯಪ್ರವರ್ತಕ. ಸುಮಾರು ಎರಡು ಸಾವಿರ ವರ್ಷಗಳಿಗೂ ಹಿಂದೆ ಅಣುತತ್ವವನ್ನು ಪ್ರತಿಪಾದಿಸಿದನು. ಆತನ ಹೆಸರನ್ನು ಆಶ್ರಯಿಸಿ ಈ ಸಂಸ್ಥೆಯಲ್ಲಿ ನಡೆಯುವ ವಿವಿಧ ಸಂಶೋಧನೆಗಳನ್ನು

ಕುರಿತ ಕನ್ನಡ ಭಾಷೆಯ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಇದೆ. ಕರ್ನಾಟಕದ ವಿದ್ಯಾರ್ಥಿಗಳಲ್ಲಿ ಮೂಲವಿಜ್ಞಾನ ಮತ್ತು ವೈಮಾನಿಕ ಕ್ಷೇತ್ರ ವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಆಸಕ್ತಿಯನ್ನು ಮೂಡಿಸುತ್ತ ಇದೆ. ಪ್ರತಿವರ್ಷ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ಹಂಚುತ್ತಾ ಇದೆ. ಈ ವರ್ಷದ ಪತ್ರಿಕೆ ೩೬ನೆಯ ಸಂಪುಟವನ್ನು ಓದಿ ನನಗೆ ಸಂತೋಷವಾಯಿತು. ಇದು ಇತರ ವಿಜ್ಞಾನ ಸಂಸ್ಥೆಗಳಿಗೆ ಮಾದರಿಯಾದ ಕಾರ್ಯವಾಗಿದೆ. ಆ ಸಂಸ್ಥೆಗಳು ಕನ್ನಡದ ಪರಂಪರೆಯನ್ನು ಹೀಗೆ ವ್ಯಕ್ತಪಡಿಸಬೇಕು. ಈ ಸಂಸ್ಥೆಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಾರ್ಗದರ್ಶನ ಮಾಡಬೇಕು.

ಸಮೂಹ ಮಾಧ್ಯಮಗಳು

೧೦. ಕನ್ನಡ ಬೆಳವಣಿಗೆಯ ದೃಷ್ಟಿಯಲ್ಲಿ ನಮ್ಮ ಸಮೂಹ ಮಾಧ್ಯಮಗಳು ಮಾಡಬಹುದಾದ ಕಾರ್ಯವು ಅಪಾರವಾಗಿದೆ. ದೂರದರ್ಶನದಲ್ಲಿಯೂ ಇತರ ಖಾಸಗಿ ಪ್ರಸಾರ ಸಂಸ್ಥೆಗಳೂ ಅವುಗಳಲ್ಲಿ ಪ್ರಸಾರಗೊಳ್ಳುವ ಧಾರವಾಹಿಗಳಲ್ಲಿಯೂ ವಾರ್ತಾವಾಚನಗಳಲ್ಲಿಯೂ ಕನ್ನಡದ ಶ್ರೀಮಂತಿಕೆಯನ್ನು ಪ್ರಕಟಿಸಬೇಕು. ಇಂಗ್ಲಿಷ್ ಶಬ್ದಗಳನ್ನು ಅನಾವಶ್ಯಕವಾಗಿ ಉಪಯೋಗ ಮಾಡುವುದನ್ನು ತಪ್ಪಿಸಬೇಕು. ಧಾರವಾಹಿಗಳ ನಟನಟಿಯರೂ ಕನ್ನಡದ ನುಡಿಗಟ್ಟುಗಳನ್ನು ಪ್ರಭಾವಯುತವಾಗಿ ಉಪಯೋಗಿಸಿದರೆ ವೀಕ್ಷಕರ ಮನಸ್ಸಿನಲ್ಲಿ ಕನ್ನಡದ ಪ್ರೀತಿ ಮೂಡುತ್ತದೆ. ಅವರೆಲ್ಲ ಈ ಕೆಲಸವನ್ನು ಆವಶ್ಯಕವಾಗಿ ಮಾಡಬೇಕು. ವಾರ್ತಾಪತ್ರಿಕೆಗಳಿಗೆ ಅಗತ್ಯವಾಗುವ ಇಂಗ್ಲಿಷ್ ಮೀಡಿಯಂಗಳಿಗೆ ಸಮಾನವಾದ ಕನ್ನಡ ನುಡಿಗಟ್ಟುಗಳನ್ನು ತಯಾರು ಮಾಡುವ ಒಂದು ವಿಧಾನವಿದೆ. ಇದನ್ನು ಕುರಿತು ಪತ್ರಿಕಾ ಬಳಗದವರು ಸಹಾಯ ಮಾಡಿದರೆ ಒಂದು ಉತ್ತಮ ನುಡಿಗಟ್ಟಿನ ನಿಘಂಟನ್ನು ತಯಾರಿಸಬಹುದು. ವಾರ್ತಾಪತ್ರಿಕೆಗಳಲ್ಲಿ ವಿವಿಧ ಕ್ಷೇತ್ರಗಳ ವರ್ತಮಾನಗಳನ್ನೂ, ವಿಶಿಷ್ಟ ಲೇಖನಗಳನ್ನೂ ಇಂಗ್ಲಿಷಿನಲ್ಲಿ ನಡೆಯುತ್ತವೆ. ಈ ಸಾಮಗ್ರಿಯಲ್ಲಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಇಂಗ್ಲಿಷ್ ಮೀಡಿಯಂಗಳು ಇರುತ್ತವೆ. ಆಯಾ ಭಾಗದ ಉಪಸಂಪಾದಕರು ಒಂದು ತಿಂಗಳ ಕಾಲ ಹಾಗೆ ಕಂಡುಬರುವ ಇಂಗ್ಲಿಷ್ ಮೀಡಿಯಂಗಳನ್ನು ಬೇರೆಯಾಗಿ ದಾಖಲಿಸಿ ಇಟ್ಟರೆ ಒಂದು ದೊಡ್ಡ ಮೀಡಿಯಂ ಭಂಡಾರ ಪ್ರಸಿದ್ಧವಾಗುತ್ತದೆ. ಬಳಿಕ ಈ ಮೀಡಿಯಂಗಳಿಗೆ ಸಮಾನವಾದ ಕನ್ನಡದ ನುಡಿಗಟ್ಟುಗಳನ್ನು ಕಂಡುಹಿಡಿಯಬಹುದು. ಇಲ್ಲದಿದ್ದರೆ ಹೊಸದಾಗಿ ನಿರ್ಮಾಣ ಮಾಡಬಹುದು. ವರ್ತಮಾನ ಪತ್ರಿಕೆಯವರು ಈ ಉಪಾಯವನ್ನು ಪ್ರಯೋಗಿಸಿದರೆ ನಾವು ಕೆಲವು ಭಾಷಾಭ್ಯಾಸಿಗಳು ನಿಮಗೆ ಶಾಶ್ವತವಾದ ಕನ್ನಡ ನುಡಿಗಟ್ಟಿನ ಕೋಶವನ್ನು ತಯಾರಿಸಿ ಹಿಂದಿರುಗಿಸುತ್ತೇವೆ. ಎಲ್ಲ ಪತ್ರಿಕೆಗಳ ಉಪಸಂಪಾದಕರು ಈ ದೃಷ್ಟಿಯನ್ನು ಪರಿಶೀಲಿಸಬೇಕೆಂದು ನನ್ನ ವಿನಂತಿ. ಪರಿಷತ್ತು ಈ ಬಗ್ಗೆ ತೀವ್ರವಾಗಿ ಅಲೋಚಿಸಬೇಕು.

ಪತ್ರಿಕಾ ಪ್ರಪಂಚ

೧೧. ಪತ್ರಿಕಾ ವೃತ್ತಿಯು ಬಹು ಪವಿತ್ರವಾದ ವೃತ್ತಿ. ಕನ್ನಡದ ಪತ್ರಿಕಾಕರ್ತರ ಹಿಂದಿನ ಚರಿತ್ರೆಯನ್ನು ಓದಿದರೆ ಎಂಥ ಶ್ರೀಮಂತ ಮನಸ್ಸಿನ ಮೇಧಾವಿಗಳೂ, ನಿಸ್ವಾರ್ಥ ಪರೋಪಕಾರಿಗಳೂ ವೃತ್ತಿಯಲ್ಲಿ ಪ್ರಾಮಾಣಿಕ, ಧರ್ಮಶ್ರದ್ಧೆ, ಸಾಮಾಜಿಕ ನ್ಯಾಯಪರತೆ ಮತ್ತು ಬಾಳಿನಬಳ್ಳಿ ಸಂದರ್ಶಕತೆ– ಇವುಗಳನ್ನು ಮೆರೆದಿದ್ದಾರೆ ಎಂಬುದು ಕಣ್ಮುಂದೆ ಕಟ್ಟುತ್ತದೆ. ಆ ಹಿರಿಯರ ಮಾದರಿ ಈಗಲೂ ಅನುಸರಿಸಲು ಅರ್ಹವಾಗಿದೆ. ಜನರ ತಪ್ಪನ್ನು ಜನರಿಗೆ ತಿಳಿಸಿ ಸರಕಾರದ ತಪ್ಪನ್ನು ಸರಕಾರಕ್ಕೆ ತಿಳಿಸಿ ನವಜೀವನಕ್ಕೆ ಅವರು ಮಾರ್ಗದರ್ಶನ ಮಾಡುತಿದ್ದರು. ಈಗ ನಮ್ಮ ಪತ್ರಿಕಾಕರ್ತರು ಅದೇ ರೀತಿ ಕನ್ನಡ ಭಾಷೆಯ ಬಗ್ಗೆ ದುಡಿಯಬೇಕಾದ ಕಾಲ ಒದಗಿ ಬಂದಿದೆ. ಪರಿಷತ್ತು ಪತ್ರಿಕಾ ಪ್ರಪಂಚದ ಜೊತೆ ತುಂಬು ವಿಶ್ವಾಸದಿಂದ ಭಾಷಾಬಾಂಧವ್ಯವನ್ನು ಬೆಳೆಸಬೇಕು.

೧೨. ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿ ಅನೇಕ ಚಿಕ್ಕ ಪುಟ್ಟ ಪತ್ರಿಕೆಗಳೂ ನಿಯತಕಾಲಿಕೆಗಳೂ ಪ್ರಕಟವಾಗುತ್ತಾ ಇವೆ. ಇವುಗಳಲ್ಲಿ ಆಯಾ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಕನ್ನಡ ನುಡಿಗಟ್ಟುಗಳೂ ಪ್ರಯೋಗವಾಗುತ್ತವೆ. ಆಡುಮಾತಿನ ಆ ಪ್ರಯೋಗಗಳೂ ತುಂಬ ಅರ್ಥವತ್ತಾಗಿರುತ್ತದೆ. ನಾನಿದನ್ನು ಗಮನಿಸಿದ್ದೇನೆ. ಆ ನುಡಿಗಟ್ಟುಗಳು, ಕೆಲವು ವಿಶಿಷ್ಟ ಶಬ್ದಗಳು ಇವುಗಳನ್ನು ನಾವು ಸಂಗ್ರಹಿಸಿ ದಾಖಲಿಸಬೇಕು. ಇಂಥ ಸಣ್ಣ ಸಣ್ಣ ಪತ್ರಿಕೆಗಳಿಗೆ ಆರ್ಥಿಕ ಬಲವಿರುವುದಿಲ್ಲ. ಇಂಥ ಸ್ಥಿತಿ ಕನ್ನಡಕ್ಕೆ ಮಾತ್ರ ಸೇರಿದ್ದಲ್ಲ ಭಾರತದ ಎಲ್ಲ ಭಾಷೆಗಳಲ್ಲಿಯೂ ಈ ಸ್ಥಿತಿ ಇದೆ. ಇಂಥ ಸ್ಥಿತಿಯಿಂದ ಈ ಸಣ್ಣ ಪತ್ರಿಕೆಗಳನ್ನು ಮೇಲಕ್ಕೆತ್ತುವ ಒಂದು ಉಪಾಯವಿದೆ. ಅದನ್ನೂ ನಾವು ಗಮನಿಸಬೇಕು. ನಮ್ಮ ದೇಶದಲ್ಲಿರುವ ಬಹುರಾಷ್ಟ್ರೀಯ ಮತ್ತು ಸ್ವದೇಶಿ ವಾಣಿಜ್ಯೋದ್ಯಮಿಗಳು ತಮ್ಮ ಜಾಹೀರಾತುಗಳನ್ನು ಪತ್ರಿಕೆಗಳಿಗೆ ದೂರದರ್ಶನ ವಾಹಿನಿಗಳಿಗೆ ನೀಡುತ್ತಾರೆ. ಇದಕ್ಕೆ ನೀಡುವ ಹಣದ ಗಾತ್ರ ಬೃಹತ್ತಾಗಿ ವರ್ಷಕ್ಕೆ ಹಲವು ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತವೆ. ಈ ಗಾತ್ರದ ಹಣದಲ್ಲಿ ಶೇಕಡ ೧೫ರಷ್ಟನ್ನು ಎಲ್ಲ ಭಾಷೆಗಳ ಚಿಕ್ಕ ಪುಟ್ಟ ಪತ್ರಿಕೆಗಳಿಗೆ, ನಿಯತಕಾಲಿಕೆಗಳಿಗೆ ಕೊಡಲೇಬೇಕೆಂಬ ಕಾನೂನನ್ನು ಕೇಂದ್ರ ಸರಕಾರ ಮಾಡಿಬಿಟ್ಟರೆ ಸಾಕು ಈ ಸಣ್ಣ ಪುಟ್ಟ ಪತ್ರಿಕೆಗಳು ಬದುಕಿ ಹೋಗುತ್ತವೆ. ಇದರಿಂದ ಭಾರತದ ಎಲ್ಲ ಭಾಷೆಗಳ ಚಿಕ್ಕಪುಟ್ಟ ಪತ್ರಿಕೆಗಳಿಗೆ ಸಹಾಯವಾಗಿ ಆ ಪತ್ರಿಕೆಗಳು ಬಳಸುವ ಪ್ರಾದೇಶಿಕ ಸೊಗಡು ಉಳಿದು ಆ ಭಾಷೆಗಳು ಬೆಳೆಯಲು ಸಹಾಯವಾಗುತ್ತದೆ. ಎಲ್ಲ ಪ್ರಾಂತದ ಎಲ್ಲ ಲೋಕಸಭೆ, ರಾಜ್ಯಸಭೆಗಳ ಸದಸ್ಯರು, ಎಲ್ಲ ಕೇಂದ್ರ ಮಂತ್ರಿಗಳು ಈ ಕೆಲಸವನ್ನು ಮಾಡಬೇಕು. ಸಣ್ಣ ಪತ್ರಿಕೆಗಳ, ನಿಯತಕಾಲಿಕೆಗಳ ಒಕ್ಕೂಟವು ಇದರ ಬಗ್ಗೆ ಪ್ರಯತ್ನಪಡಬೇಕು ಮತ್ತು ಉದ್ಯಮಗಳಿಗೆ ಇದನ್ನು ಅವರ 'ಸಾಮಾಜಿಕ ಹೊಣೆಗಾರಿಕೆ' ಎಂದು ಪರಿಗಣಿಸುವಂತೆ ಮನವರಿಕೆ ಮಾಡಿಕೊಡಬೇಕು.

ಕನ್ನಡ ಭಾಷೆ ಈಗ ನಿಜವಾಗಿ ಕಷ್ಟಕ್ಕೆ ಸಿಕ್ಕಿದೆ. ಅದರ ಮೇಲೆ ಇಂಗ್ಲಿಷಿನಂಥ ಕೊಲೆಗಡುಕ ಭಾಷೆಯ ಕಣ್ಣು ಬಿದ್ದಿದೆ. ಜಾಗತೀಕರಣದ ಪರಿಣಾಮವಾಗಿ ಕನ್ನಡವನ್ನು ಮಾತನಾಡುವ ಎಲ್ಲ ಪ್ರದೇಶಗಳಲ್ಲಿಯೂ ಇಂಗ್ಲಿಷ್ ನುಗ್ಗುತ್ತ ಇದೆ. ನಮ್ಮ ಶಿಕ್ಷಣ ಇಲಾಖೆ ಕಣ್ಣುಮುಚ್ಚಿ ಕುಳಿತಿದೆ. ಪರದೇಶಗಳ ಬೋಧನ ಪದ್ಧತಿಗಳನ್ನು ಆಮದು ಮಾಡುತ್ತಾ ಸ್ವಂತಿಕೆಯನ್ನು ಶಿಕ್ಷಕರು ಕಳೆದುಕೊಳ್ಳುತ್ತಾರೆ. ಶಿಕ್ಷಣದಲ್ಲಿ ಕನ್ನಡವನ್ನು ಉಳಿಸಿಕೊಳ್ಳಲಾರದೆ ಹೋದರೆ ಅಪಾಯ ತಪ್ಪಿದ್ದಲ್ಲ. ಇದನ್ನು ಎಷ್ಟು ಒತ್ತಿ ಹೇಳಿದರೂ ಸಾಲದಾಗಿದೆ. ಈ ಆಕ್ರಮಶೀಲದಿಂದ ನಗರಪ್ರದೇಶಗಳಲ್ಲಿ ಕನ್ನಡದ ಪ್ರಯೋಗ ಕಡಿಮೆಯಾಗುತ್ತಾ ಇದೆ. ಈ ಸ್ಥಿತಿಯನ್ನು ಒಂದು ಜನಾಂದೋಳನದ ಮೂಲಕ ಬದಲಾವಣೆ ಮಾಡಬೇಕು. ಕನ್ನಡವು ಎರಡನೆಯ ಸ್ಥಾನಕ್ಕೆ ತಳ್ಳಲ್ಪಡುವ ಅಪಾಯವಿದೆ. ಇಂಗ್ಲಿಷ್ ಭಾಷೆಯೇ ಪ್ರಧಾನವಾಗಿ ಬೆಳೆಯುತ್ತಿರುವ ಎಲ್ಲ ದೇಶಗಳಲ್ಲಿಯೂ ಈ ಹೆದರಿಕೆ ಇದೆ. ಕೆನಡಾ ದೇಶದಲ್ಲಿ ಫ್ರೆಂಚ್ ಪ್ರಥಮ ಭಾಷೆಯಾದರೂ ಇಂಗ್ಲಿಷ್ ಭಾಷೆಯಿಂದ ಅದಕ್ಕೆ ಹೆದರಿಕೆ ಇದೆ. ಇದನ್ನು ಆ ದೇಶದಲ್ಲಿ ಪ್ರಮುಖ ಸಮಸ್ಯೆ ಎಂದು ಪರಿಗಣಿಸಿರುತ್ತಾರೆ. ಕನ್ನಡ ಸಾಯುವುದಿಲ್ಲ ಎಂಬುದು ನಿಜ. ಆದರೆ ಕರ್ನಾಟಕದಲ್ಲಿ ಅದು ತನ್ನ ಪ್ರಥಮ ಸ್ಥಾನವನ್ನು ಎಂದೂ ಕಳೆದುಕೊಳ್ಳಬಾರದು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಅದನ್ನು ಸ್ಥಿರವಾಗಿ ಉಳಿಸಬೇಕು. ಕನ್ನಡ ನಾಡಿನ ಎಲ್ಲರೂ ಈ ಸ್ಥಿತಿಯನ್ನು ತೀವ್ರವಾಗಿ ಗಮನಿಸಬೇಕು. ಪತ್ರಿಕಾಕರ್ತರು ಸಮೂಹಮಾಧ್ಯಮಗಳು ಮುಖ್ಯವಾಗಿ ಸಿನಿಮಾಲೋಕ ಇದನ್ನು ತಮ್ಮ ಕರ್ತವ್ಯಗಳಲ್ಲಿ ಒಂದಾಗಿ ಪರಿಗಣಿಸಬೇಕು. ಕನ್ನಡದ ಎಲ್ಲ ಸಂಘ ಸಂಸ್ಥೆಗಳೂ ಒಟ್ಟಾಗಿ ಕಾರ್ಯವನ್ನು ನಿರ್ವಹಿಸಬೇಕು. ನನ್ನ ಮಾತನ್ನು ಎಚ್ಚರಿಕೆಯ ಗಂಟೆ ಎಂದು ಭಾವಿಸಬೇಕಾಗಿ ವಿನಂತಿ.

ಕನ್ನಡ ಸಿನಿಮಾ ಪ್ರಪಂಚವನ್ನು ನೆನೆದಾಗ ಈ ಲೋಕಕ್ಕೆ ಅಪಾಯ ಸಂಭವಿಸುತ್ತ ಇರುವುದು ನನ್ನ ಗಮನಕ್ಕೆ ಬಂದಿದೆ. ಇಷ್ಟು ದಿನಗಳೂ 'ಡಬ್ಬಿಂಗ್' ಎಂಬ ಅವ್ಯವಹಾರದಿಂದ ದೂರವಾಗಿದ್ದು ಸುಖವಾಗಿದ್ದ ಪ್ರಪಂಚಕ್ಕೆ ಈಗ 'ಡಬ್ಬಿಂಗ್' ಮತ್ತೆ ನುಗ್ಗುವ ಪ್ರಯತ್ನ ಮಾಡುತ್ತಿದೆಯಂತೆ. 'ಡಬ್ಬಿಂಗ್' ನಿಜವಾಗಿ ಕಲೆಯೇ ಅಲ್ಲ! ಅದು ಮತ್ತೆ ಕನ್ನಡ ಸಿನಿಮಾ – ದೂರದರ್ಶನಗಳಿಗೆ ತಲೆ ಹಾಕದಂತೆ ಕನ್ನಡಿಗರೆಲ್ಲರೂ ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸುತ್ತೇನೆ.

ನಮ್ಮ ಸಮಾಜದಲ್ಲಿರುವ ಶೋಷಿತರ ಬಗ್ಗೆ ಒಂದು ಸಂಗತಿಯನ್ನು ಎಲ್ಲರ ಗಮನಕ್ಕೆ ತರಲು ಉದಾಹರಣೆಯನ್ನು ನೀಡುತ್ತೇನೆ. ೧೯೭೦ರಲ್ಲಿ ನಮ್ಮ ರಾಜ್ಯದ ಮಂತ್ರಿಮಂಡಲದಲ್ಲಿ ಜನಪ್ರಿಯ ಮಂತ್ರಿಯಾಗಿದ್ದ ಬಸವಲಿಂಗಪ್ಪನವರು ಕೈಗೊಂಡ ಒಂದು ತೀರ್ಮಾನ ಎಲ್ಲ ಪ್ರಜೆಗಳ ಮನಸ್ಸಿಗೆ ಸಂತೋಷವನ್ನು ಉಂಟುಮಾಡಿತು. ಶೋಷಿತವರ್ಗದ ಒಂದು ಪಂಗಡದವರು ಮಾನವ ಮಲವನ್ನು ತಲೆಯ ಮೇಲೆ ಹೊತ್ತು ಸಾಗಿಸುತ್ತಿದ್ದರು. ಈ ಅಭ್ಯಾಸವು ಕೂಡಲೇ ನಿಲ್ಲಬೇಕೆಂದು ಆದೇಶ

ಜಾರಿಗೆ ಬಂತು. ಮಾನವ ಹಕ್ಕುಗಳನ್ನು ಚಾಲ್ತಿಗೆ ತಂದ ತೀರ್ಮಾನವಗಿತ್ತು ಅದು. **ಈ ಆದೇಶವು ಬಂದು ಸುಮಾರು ನಲವತ್ತು ವರ್ಷಗಳಾಗಿವೆ.**

ಈಚೆಗೆ ಕರ್ನಾಟಕ ಪ್ರದೇಶದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾಯಕ್ ಅವರು, ೨೦೧೦ರ ಜುಲೈ ತಿಂಗಳಲ್ಲಿ ಬರೆದ ಲೇಖನದಲ್ಲಿ, ಸವಣೂರಿನಲ್ಲಿ ಅತಿ ಶೋಷಿತವರ್ಗದವರು ತಮ್ಮ ತಲೆಯ ಮೇಲೆ ಮಾನವ ಮಲವನ್ನು ಕದಡಿದ ನೀರಿನಿಂದ ಅಭಿಷೇಕ ಮಾಡಿಕೊಂಡು ಬಂಡಾಯವನ್ನು ನಡೆಸಿದ ಬಗ್ಗೆ ಬರೆದಿದ್ದರು. ಈ ವಿಚಾರದ ಬಗ್ಗೆ ೨೦೦೮ರಲ್ಲಿಯೇ ಸರಕಾರಕ್ಕೆ ಈ ಭಂಗಿ ಪದ್ಧತಿಯನ್ನು ನಿಲ್ಲಿಸಲು ಏರ್ಪಾಡು ಮಾಡಬೇಕೆಂದು ತಿಳಿಸಿ ಪತ್ರವನ್ನು ಬರೆದಿದ್ದನ್ನು ಉಲ್ಲೇಖಿಸಿದ್ದಾರೆ. ಆದರೆ ಏನೂ ಆಗಲಿಲ್ಲವೆಂದು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಹೀಗಿದ್ದೂ ಇಂಥ ಅತಿ ಅಮಾನವೀಯವಾದ ಈ ಪದ್ಧತಿಯನ್ನು ನಿಲ್ಲಿಸುವ ಒಂದು ಕಾರ್ಯವನ್ನು ಯಾವ ಪಕ್ಷ ಮಾಡಿದ್ದರೂ ಅದರ ಕೀರ್ತಿ ಆಕಾಶಕ್ಕೇರುತ್ತಿತ್ತು. ಎಂಥ ಅವಕಾಶವನ್ನು ನಮ್ಮ ಶಾಸಕರು ಕಳೆದುಕೊಂಡರಲ್ಲ ಎಂದು ವ್ಯಥೆಯಾಗುತ್ತದೆ. ನಮ್ಮ ಕೇಂದ್ರ ಸರಕಾರವು ವಿಶ್ವಸಂಸ್ಥೆಯ ಸಾರ್ವಜನಿಕ ಸಭೆಗೆ ವರದಿಯನ್ನು ಕಳಿಸುವಾಗ ನಮ್ಮ ದೇಶದಲ್ಲಿ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಗೌರವಿಸಲಾಗಿದೆ ಎಂದೇ ಕಳಿಸುತ್ತದೆ. ಎಂಥ ವಿಪರ್ಯಾಸ. ನಾವೆಲ್ಲ ಸಾಮಾನ್ಯರಲ್ಲಿ ಸಾಮಾನ್ಯರಾದ ಜನತೆ. ಶಾಸಕರಿಗೆ ಏನು ಹೇಳಬಹುದು?

ಈಗ ಕರ್ನಾಟಕವು ಭಾರತದಲ್ಲಿಯೇ ಅತ್ಯಂತ ಭ್ರಷ್ಟವಾದ ರಾಜ್ಯ ಎಂಬ ಹೆಸರನ್ನು ಸಂಪಾದಿಸಿಬಿಟ್ಟಿದೆ. ಭಾರತದ ಸಂವಿಧಾನವು ಒಂದು ಉತ್ಕೃಷ್ಟ ರಾಜ್ಯಧರ್ಮಶಾಸ್ತ್ರದಂತೆ ಇದೆ ಎಂದು ಹೆಸರು ಪಡೆದಿದೆ. ಹೀಗಿದ್ದೂ ಅದನ್ನು ತಿರಸ್ಕರಿಸಿ ರಾಜಕೀಯ ಪಕ್ಷಗಳು ಅಧಿಕಾರ ದಾಹದಿಂದ ಕಚ್ಚಾಡುತ್ತಿವೆ. ಬಯ್ಗಳು ಅಸಮರ್ಥರ ಆಯುಧ. ಅದು ದುರ್ಬಲರು ಉಪಯೋಗಿಸುವ ಚುಚ್ಚುಗತ್ತಿ. ಅದನ್ನು ಉಪಯೋಗಿಸಬಾರದು. ಹಲವು ಶಾಸಕರ ಮಾತಿನಲ್ಲಿ, ನಡೆಯಲ್ಲಿ, ವ್ಯವಹಾರದಲ್ಲಿ, ಯಾವುದರಲ್ಲಿಯೂ ಗಾಂಭೀರ್ಯವಾಗಲಿ, ಸುಸಂಸ್ಕೃತಿಯಾಗಲಿ ಕಾಣಬರುತ್ತಿಲ್ಲ. ಪ್ರಜಾವರ್ಗದ ನೆಮ್ಮದಿ ಕೆಟ್ಟಿದೆ. ಗೊಂದಲದಿಂದ ಸಮಾಧಾನ ನಾಶವಾಗಿದೆ. ಪ್ರಜೆಗಳಲ್ಲಿ ನಾವೇಕೆ ಇಂಥ ಅಸಮರ್ಥರನ್ನು ಶಾಸಕರನ್ನಾಗಿ ಮಾಡಿದೆವು ಎಂದು ತಮ್ಮನ್ನೂ ಎಲ್ಲ ಪಕ್ಷಗಳನ್ನೂ ನಿಂದಿಸುತ್ತಾ ಇದ್ದಾರೆ. ಪ್ರಜೆಗಳನ್ನು ಕಾಪಾಡುವವರೇ ಕಾದಾಡಿದರೆ ಎಂಥ ವಿಪರ್ಯಾಸ.

ಈ ಕಾದಾಟ **ಪಕ್ಷದ್ವೇಷ ಅಥವಾ ಅಧಿಕಾರ ದಾಹ** ಎಂಬ ಒಂದು ದುರಂತ ನಾಟಕವಾಗಿಬಿಟ್ಟಿದೆ. ದಿನಕ್ಕೊಂದು ದೃಶ್ಯ, ವಾರಕ್ಕೊಂದು ಅಂಕ ಎಂಬಂತೆ ಇದು ಮುಂದುವರಿದಿದೆ. ನಮಗೆ ಇದು ದುರಂತ. ಇತರ ಪ್ರಾಂತಗಳವರಿಗೆ ಪ್ರಹಸನ. ಹೀಗೆ ಇಮ್ಮುಖವಾದ ಈ ನಾಟಕವು ಇನ್ನೂ ಕ್ಲೈಮಾಕ್ಸ್ ಎಂಬ ಶಿಖರ ತಲುಪಿಲ್ಲ. ಇಷ್ಟರಲ್ಲೇ ತಲುಪಬಹುದು. ಇನ್ನು ಡಿನೂಮೆಂಟ್ ಎಂಬ ಪರಿಣಾಮ ಏನಾಗುತ್ತದೋ ಯಾರು ಬಲ್ಲರು. ಕಾದು ನೋಡೋಣ. ನಾವೇನು ತಾನೇ ಮಾಡಬಹುದು?

ಕನ್ನಡ ತಾಯಿ ಭುವನೇಶ್ವರಿ ನಮ್ಮ ನಾಯಕಮಣಿಗಳಾದ ಈ ರಾಜಕೀಯ ವ್ಯಕ್ತಿಗಳಿಗೆ ಸನ್ಮತಿಯನ್ನು ನೀಡಲಿ ಎಂದು ಪ್ರಾರ್ಥಿಸಬೇಕಾಗಿದೆ. ರಾಜಕೀಯ ಪಕ್ಷಗಳಿಗೆ ಅಧಿಕಾರದ ಹುಚ್ಚು ದಾಹವನ್ನು ಬಿಟ್ಟು ನಾಡಿನ ಸೌಖ್ಯಕ್ಕೆ ದುಡಿಯುವ ಬುದ್ಧಿಯು ಬರಲಿ ಎಂದು ಹಾರೈಸೋಣ.

ಪ್ರಜೆಗಳಾದ ನಾವು ಇಂಥ ವರ್ಗದಿಂದ ಬೇರೆಯಾಗಿ

ತಲೆತುಂಬ ಕಲಿಯೋಣ
ತಲೆ ಎತ್ತಿ ನುಡಿಯೋಣ
ತಲೆಬಾಗಿ ಬಾಳೋಣ
ಸಿರಿಗನ್ನಡಂಗೆಲ್ಗೆ

ಬೆಂಗಳೂರು

೦೪-೦೨-೨೦೧೧

ಜಿ. ವೆಂಕಟಸುಬ್ಬಯ್ಯ

ಅನುಬಂಧ ೧

ಕನ್ನಡ ಭಾಷೆ ಮತ್ತು ಜಾಹೀರಾತುಗಳು

ಒಂದು ಭಾಷೆಯವರು ಇನ್ನೊಂದು ಭಾಷೆಯನ್ನು ಮಾತನಾಡುವವರ ಮೇಲೆ ಆಡಳಿತ ಮಾಡಿದರೆ, ಆಡಳಿತ ಮಾಡುವವರ ಭಾಷೆಯಿಂದ ಹೆಚ್ಚು ಪದಗಳು ಎರವಲಾಗಿ ಬರುತ್ತದೆ. ಇದನ್ನು ಬೇರೊಂದೆಡೆ ವಿಸ್ತಾರವಾಗಿ ತಿಳಿಸಿದ್ದೇನೆ. ನಮ್ಮ ಭಾಷೆಯ ಬೆಳವಣಿಗೆ ಕೂಡ ಆಡಳಿತ ನಡೆಸುವವರು ಎಷ್ಟರಮಟ್ಟಿಗೆ ಒತ್ತು ಕೊಡುತ್ತಾರೆ ಎಂಬುದನ್ನು ಅವಲಂಬಿಸಿದೆ. ಕನ್ನಡ ಭಾಷೆಯಲ್ಲಿ ವ್ಯವಹಾರ ಹೆಚ್ಚಿದಷ್ಟೂ ಕನ್ನಡ ಭಾಷೆ ಬೆಳೆಯುತ್ತದೆ ಎಂಬ ಸತ್ಯವನ್ನು ನಾವೆಲ್ಲರೂ ಅರಿತು ಭಾಷೆಯ ಉಪಯೋಗವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.

ಈಗ ನಮ್ಮ ಭಾಷೆಯ ಮೇಲೆ ಪ್ರಭಾವ ಬೀರುವ ಎರಡು ಗುಂಪುಗಳಿವೆ. ಮೊದಲನೆಯ ಗುಂಪಿನಲ್ಲಿ ನಮ್ಮನ್ನು ಆಳುತ್ತಿರುವ ಮಂದಿ-ಇದರಲ್ಲಿ ಶಾಸಕಾಂಗ, ಆಡಳಿತಾಂಗ ಮತ್ತು ನ್ಯಾಯಾಂಗದಲ್ಲಿರುವವರೆಲ್ಲ ಸೇರುತ್ತಾರೆ. ಇವರೆಲ್ಲ ಕನ್ನಡ ಭಾಷೆಯ ಅಭಿವೃದ್ಧಿಗೆ ಪ್ರಯತ್ನಪಡುತ್ತಿರುವುದು ಸ್ಪಷ್ಟವಾಗಿದ್ದರೂ ಅದರ ಮಟ್ಟವನ್ನು ಏರಿಸುವ ಕಾರ್ಯ ತುರ್ತಾಗಿ ಆಗಬೇಕಾಗಿದೆ. ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ- ನಮ್ಮ ರಾಜಕೀಯ ಮುಂದಾಳುಗಳು ದೆಹಲಿಯಲ್ಲಿ ರಾಜ್ಯದ ಬಗ್ಗೆ, ಮಾಧ್ಯಮಗಳ ಮುಂದೆ ಮಾತನಾಡುವಾಗ ಕನ್ನಡದಲ್ಲೇಕೆ ಮಾತನಾಡುವುದಿಲ್ಲ? ಆಂಗ್ಲ ಅಥವಾ ಹಿಂದಿ ವಾಹಿನಿಗಳಿಗೆ ಉತ್ತರಿಸುವಾಗ ಕನ್ನಡವನ್ನೇ ಬಳಸುವ ಧೀಮಂತರೇಕೆ ಆಗುವುದಿಲ್ಲ? ಅವರು ಹೇಳಿದ್ದನ್ನು ವಾಹಿನಿಗೆ ಬೇಕಾದ ಭಾಷೆಗೆ ತರ್ಜುಮೆ ಮಾಡುವ ಕೆಲಸವನ್ನು ಆಯಾ ವಾಹಿನಿಯವರಿಗೆ ಬಿಟ್ಟುಬಿಡಿ.

ಎರಡನೆಯ ಗುಂಪು ವಾಣಿಜ್ಯೋದ್ಯಮದ್ದು. ತಮ್ಮ ವಹಿವಾಟು ಮತ್ತು ಹಣದ ಪ್ರಭಾವದಿಂದ ಈ ಗುಂಪು ಭಾಷೆಗಳ ಮೇಲೆ ಒಂದು ರೀತಿಯ ಹತೋಟಿಯನ್ನು ನೇರವಲ್ಲದ ಹತೋಟಿಯನ್ನು ಸ್ಥಾಪಿಸುತ್ತದೆ. ಇದಕ್ಕೆ ಗ್ರಾಹಕರು ಕೋರುವ ಭಾಷೆಯು ಮುಖ್ಯವಾಗುತ್ತದೆ. ಬಹುರಾಷ್ಟ್ರೀಯ ಹಾಗೂ ಸ್ವದೇಶಿ ಉದ್ಯಮಗಳು ಅದರಲ್ಲೂ ನಿತ್ಯಬಳಕೆಯ ವಸ್ತುಗಳನ್ನು ತಯಾರಿಸುವವರು ತಮ್ಮ ಉತ್ಪನ್ನಗಳ ಮಾರಾಟಕ್ಕೆ ಜಾಹೀರಾತುಗಳನ್ನು ನೀಡುತ್ತವೆ ನಮ್ಮ ದೇಶದಲ್ಲಿ ಈ ಜಾಹೀರಾತು ಉದ್ಯಮವೇ ಹತ್ತಾರು ಸಾವಿರ ಕೋಟಿಗಳ ಉದ್ಯಮವಾಗಿದೆ. ಅವರು ಕೊಟ್ಟಿದ್ದನ್ನು ಮಾಧ್ಯಮಗಳು ಮುದ್ರಿಸುತ್ತವೆ ಎಲ್ಲ ಪ್ರಸಾರ ಮಾಡುತ್ತವೆ. ಈ ಕಾರ್ಯದಲ್ಲಿ ಸರಿಯಾದ ಕನ್ನಡ ಭಾಷೆ ಉಪಯೋಗವಾಗುತ್ತಿದೆಯೆ ಎಂಬುದನ್ನು ಗಮನಿಸುವ ಕಾಲ ಈಗ ಬಂದಿದೆ. ಅಲ್ಲಿ ಉಪಯೋಗವಾಗುವ ತಪ್ಪು ಭಾಷಾ ಪ್ರಯೋಗದಿಂದ, ತಪ್ಪು ಕಾಗುಣಿತದಿಂದ ಆಗುವ ಕೆಟ್ಟ ಪರಿಣಾಮ ಅಗಾಧ.

ಲಕ್ಷಾಂತರ ಮಂದಿ ಮೇಲಿಂದ ಮೇಲೆ ನೂರಾರು ಬಾರಿ ಸರಿಯಲ್ಲದ್ದನ್ನು ನೋಡುವ-ಕೇಳುವ ಕ್ರಿಯೆಯಿಂದ ಕನ್ನಡ ಪದಗಳ, ಪದಪುಂಜಗಳ ವ್ಯಾಕರಣದ ಕೊಲೆಯಾಗುತ್ತದೆ. ಈ ರೀತಿಯ 'ತಪ್ಪು ಕನ್ನಡ'ವನ್ನು ನಾವು ಸಹಿಸುವುದಿಲ್ಲ ಎನ್ನುವುದನ್ನು ನಾವು ನಿಸ್ಸಂಕೋಚವಾಗಿ ಜಾಹೀರಾತುದಾರರಿಗೂ ಜಾಹೀರಾತನ್ನು ತಯಾರಿಸುವವರಿಗೂ ಮನದಟ್ಟಾಗುವಂತೆ ತಿಳಿಸಬೇಕಾಗುತ್ತದೆ. ಇದಕ್ಕೆ ಆ ಸಂಸ್ಥೆಗಳ ಮುಖ್ಯಸ್ಥರ, ಸಾರ್ವಜನಿಕ ಸಂಪರ್ಕಾಧಿಕಾರಿಗಳ ಇ-ಅಂಚೆಪೆಟ್ಟಿಗೆಯನ್ನು ತುಂಬಿ ಮುತ್ತಿಗೆ ಹಾಕಬೇಕು. ಆ ಉದ್ಯಮಗಳ ಸಾಮಾಜಿಕ ಬಾಧ್ಯತೆಯ ನೆನಪು ಮಾಡಿಕೊಡಬೇಕು. ಈ ಕೆಲಸ ಮಾಡಲು ಸಮರ್ಥರಾದ ಕನ್ನಡ ಕಂಪ್ಯೂಟರಿಗರ ಜಾಗೃತಿ ಪಡೆಯನ್ನು ಕಟ್ಟಬೇಕಾಗಿದೆ. ಇದಕ್ಕೆ ಅಂತರ್ಜಾಲದಲ್ಲಿ ಹೆಸರು ಮಾಡಿರುವ ದಟ್ಸ್‌ಕನ್ನಡ.ಕಾಮ್. ಜಿ.ಜೆ. ವರ್ಲ್ಡ್ ಮುಂತಾದ ಇ-ಪತ್ರಿಕೆಗಳು ಮುಂದಾಳತ್ವ ವಹಿಸಬೇಕೆಂದು ನನ್ನ ಕೋರಿಕೆ. ಇದು ಕನ್ನಡವನ್ನು ಉದ್ಯಮಗಳ ದೃಷ್ಟಿಯಲ್ಲಿ ಎತ್ತರಕ್ಕೆ ಕೊಂಡೊಯ್ಯುವ ಸಾಧನವಾಗುತ್ತದೆಂದು ನನ್ನ ನಂಬಿಕೆ.

ಇದನ್ನು ಹಾಗೆ ಬಿಟ್ಟರೆ ಯಾವ ಪರಿಣಾಮವಾಗುತ್ತದೆ ಎಂಬುದು ಸುಸ್ಪಷ್ಟ! ಅದರ ಮೊದಲ ಹೆಜ್ಜೆ ಈಗಾಗಲೆ ಜಾಹೀರಾತು ಪ್ರಪಂಚದಲ್ಲಿ ಕಾಲಿಟ್ಟಿದ್ದಾಗಿದೆ! ಅದು ಕನ್ನಡವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಹಿಂದಿಯ ಜಾಹೀರಾತುಗಳನ್ನು ನಮ್ಮ ಮೇಲೆ ಹೇರುವುದು, ಇದರಿಂದ ಅವರಿಗೆ ಒಂದು ಭಾಷೆಯ ಜಾಹೀರಾತಿಗೆ ಮಾಡಬೇಕಾಗುವ ಖರ್ಚು ಉಳಿತಾಯವಾಗುತ್ತದೆ! ಇದು ಹೀಗೆ ಮುಂದುವರಿದರೆ ಕನ್ನಡವನ್ನು ಬೆಳೆಸುವುದಿರಲಿ, ಉಳಿವಿಗೆ ಹೋರಾಡಬೇಕಾದ ಸ್ಥಿತಿಯನ್ನು ನಮ್ಮ ಮುಂದಿನ ಪೀಳಿಗೆಗೆ ನೀಡಿ ಅವರ ಛೀಮಾರಿಗೆ ತುತ್ತಾಗಬೇಕಾದೀತು!

* * * *

ಅನುಬಂಧ – ೨

ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದು?

ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದೆಂದು ನನ್ನನ್ನು ಆಗಿಂದಾಗ ಉತ್ಸಾಹಿ ಯುವಕ ಯುವತಿಯರು ಕೇಳುತ್ತಿರುತ್ತಾರೆ. ಅವರಿಗೆ ತೋರ್ಗಂಬವಾಗಿ ಕೆಲವು ಸಲಹೆಗಳನ್ನು ಇಲ್ಲಿ ಕೊಟ್ಟಿದ್ದೇನೆ. ಇವುಗಳನ್ನು ಅಳವಡಿಸಿಕೊಳ್ಳಿ ಎಂದು ನನ್ನ ವಿನಂತಿ. ಇದೇ ಮಾದರಿಯ ಇತರ ಉಪಾಯಗಳನ್ನು ನಿಮ್ಮ ಬ್ಲಾಗುಗಳಲ್ಲಿ, ಇ–ಪತ್ರಿಕೆಗಳಲ್ಲಿ ಇತರರಿಗೂ ತಿಳಿಸಿ–ನಿಷ್ಠೆಯಿಂದ ಆಚರಣೆಗೆ ತನ್ನಿ.

೧. ನಿಮ್ಮ ದೂರವಾಣಿಯಿಂದಲೋ, ಮೊಬೈಲ್‌ನಿಂದಲೋ ಅನೇಕ ಸೇವೆಗಳಿಗಾಗಿ ಬ್ಯಾಂಕ್, ವಿಮೆ ಇತ್ಯಾದಿ–ಕರೆಮಾಡುತ್ತಿರುತ್ತೀರಿ. ಆಗ ನಿಮಗೆ ಎದುರಾಗುವ 'ಇಂಟರ್‍ಯಾಕ್ಟಿವ್ ವಾಯ್ಸ್ ರೆಸ್ಪಾನ್ಸ್' ಸಿಸ್ಟಮ್. ಅಲ್ಲಿ ಬರುವ ಮೊದಲ ಹೇಳಿಕೆ– 'ಇಂಗ್ಲಿಷಿಗಾಗಿ ಒಂದನ್ನು ಒತ್ತಿ, ಕನ್ನಡಕ್ಕಾಗಿ ಎರಡನ್ನು ಒತ್ತಿ' ಇತ್ಯಾದಿ. ದಯವಿಟ್ಟು ಕನ್ನಡವನ್ನೇ ಆರಿಸಿಕೊಳ್ಳಿ. ಈ ಆಯ್ಕೆಗಳ ಅಂಕಿ ಅಂಶಗಳ ಬಲದಿಂದ ಆ ಉದ್ಯಮಗಳು ಯಾವ ಭಾಷೆಗೆ ಒತ್ತು ನೀಡಬೇಕೆನ್ನುವ ನಿರ್ಧಾರ ಕೈಗೊಳ್ಳುತ್ತವೆ. ಕನ್ನಡದ ಆಯ್ಕೆಯಿಂದ ಕನ್ನಡ ಬೆಳೆಯುತ್ತದೆ.

೨. ನೀವು ಆಗಿಂದಾಗ ಅಂತರ್ಜಾಲದಲ್ಲಾಗಲೀ, ನೇರವಾಗಿಯಾಗಲೀ ಉದ್ಯಮಗಳು ನಡೆಸುವ ಸರ್ವೆಗಳಲ್ಲಿ ಭಾಗವಹಿಸುತ್ತಿರುತ್ತೀರಿ. ಮುಂದೆ ಆ ರೀತಿ ಭಾಗವಹಿಸುವಾಗ ನಿಮಗೆ ಗೊತ್ತಿರುವ ಭಾಷೆಯ ಬಗ್ಗೆ ಇರುವ ಪ್ರಶ್ನೆ 'ಕನ್ನಡ' ಎಂದು ಮಾತ್ರ ದಾಖಲಿಸಿ. ನೀವು ಓದುವ ಪತ್ರಿಕೆಗಳ ಬಗ್ಗೆ ಇರುವ ಪ್ರಶ್ನೆಗೆ ಕನ್ನಡದ ದಿನಪತ್ರಿಕೆಗಳ, ನಿಯತ ಕಾಲಿಕೆಗಳ ಹೆಸರನ್ನು ನಮೂದಿಸಿ. ಇದರಿಂದ ಆ ಸರ್ವೆಯ ಫಲವಾಗಿ ನಡೆಯುವ ಎಲ್ಲ ಕಾರ್ಯಗಳಲ್ಲೂ ಕನ್ನಡದ ಬಳಕೆಗೆ ಇಂಬುಕೊಟ್ಟಂತಾಗುತ್ತದೆ.

೩. ಇಂದು ಅನೇಕ ವಿಮೆ, ಬ್ಯಾಂಕ್, ಹಣಕಾಸಿನ ವ್ಯವಹಾರದ ಸಂಸ್ಥೆ ಮುಂತಾದ ಉದ್ಯಮಗಳು ತಮ್ಮ ಮಾರಾಟದ ಜಾಲಕ್ಕೆ ಅನೇಕ ಯುವಕರನ್ನು ನೇಮಿಸಿಕೊಂಡಿದೆ. ಇವರಲ್ಲಿ ನಿಜವಾಗಿ ಹೆಚ್ಚು ಮಂದಿ ಹೊರರಾಜ್ಯಗಳಿಂದ– ಅಕ್ಕಪಕ್ಕದ ರಾಜ್ಯಗಳಿಂದ ಇಲ್ಲಿಗೆ ಬಂದವರು. ನಮ್ಮ ಜೊತೆ ವ್ಯವಹರಿಸಲು ಕನ್ನಡ ಬಲ್ಲವರನ್ನೇ ಕಳುಹಿಸಬೇಕೆಂದು ನಾವು ಒತ್ತಾಯಿಸಿ ಕೇಳಬೇಕು. ಇದರಿಂದ ಈ ಉದ್ಯಮಗಳು ತಮ್ಮ ವ್ಯವಹಾರದಲ್ಲಿ ಕನ್ನಡವನ್ನು ಬಳಸಲೇ ಬೇಕಾದ ಪರಿಸ್ಥಿತಿ ಒದಗಿ ಬರುತ್ತದೆ. ಕನ್ನಡಿಗರಿಗೆ ಉದ್ಯೋಗವಕಾಶಗಳು ಒದಗುತ್ತವೆ.

೪. ನಿಮ್ಮ ಮನೆಗಳಿಗೆ ಕಡೆಯಪಕ್ಷ ಒಂದು ಕನ್ನಡ ವಾರ್ತಾಪತ್ರಿಕೆಯನ್ನೂ ಒಂದು ನಿಯತಕಾಲಿಕವನ್ನೂ ತರಿಸಿ–ಅವನ್ನು ಮನೆಯವರೆಲ್ಲಾ ಓದಿ.

೫. ನೀವು ಎಲ್ಲೇ ಇದ್ದರೂ ನಿಮ್ಮ ಮಕ್ಕಳೊಂದಿಗೆ ಕನ್ನಡದಲ್ಲಿ ಮಾತನಾಡಿ. ಇತರ ಕನ್ನಡಿಗರೊಡನೆ ಕನ್ನಡದಲ್ಲೇ ಮಾತನಾಡಲು ಪ್ರೋತ್ಸಾಹಿಸಿ. ಅವರಲ್ಲಿ ಕನ್ನಡ ಪ್ರೇಮದ ಜೊತೆ ಮುಂದಾಳತ್ವದ ಗುಣಗಳು ಹೆಚ್ಚುವಂತೆ ಮಾಡಿ. ಕನ್ನಡ ತಾಯಿಯರು ಈ ಕೆಲಸವನ್ನು ಪ್ರೀತಿಯಿಂದ ಮಾಡಿರಿ.


೬. ನಿಮ್ಮ ಪ್ರದೇಶದಲ್ಲಿ ನಡೆಯುವ ಕನ್ನಡದ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸಿ.

೭. ಕನ್ನಡ–ಕನ್ನಡನಾಡು–ಕನ್ನಡಿಗ ಸಾಧಕರು ಈ ಬಗ್ಗೆ ಬೇರೆ ಭಾಷೆಯವರಲ್ಲಿ ಅಭಿಮಾನದಿಂದ ಮಾತನಾಡಿ.

೮. ಆದಷ್ಟೂ ಇತರ ಕನ್ನಡಿಗರಿಗೆ ಸಹಾಯಮಾಡಿ, ಅವರ ಕಾಲನ್ನು ಎಳೆಯಬೇಡಿ. ನೀವು ಕೆಲಸಮಾಡುವ ಸ್ಥಳದಲ್ಲಿ ಇತರರು ಕನ್ನಡ ಮಾತನಾಡುವವರ ಮಧ್ಯೆ ವಿರಸವನ್ನುಂಟು ಮಾಡುವ ರೀತಿಯನ್ನು ಅನುಸರಿಸುವುದರ ಬಗ್ಗೆ ಬಹಳ ಎಚ್ಚರದಿಂದಿರಿ–ನಿಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳಿ.

೯. ಬೇರೆ ರಾಜ್ಯಗಳಿಂದ ಬಂದು ನಿಮ್ಮೊಡನೆ ಕೆಲಸಮಾಡುವ ಮಂದಿಗೆ ಕನ್ನಡ ಕಲಿತು ಅದರಲ್ಲೇ ಮಾತನಾಡಲು ಪ್ರೋತ್ಸಾಹಿಸಿ.

೧೦. ಕನ್ನಡವೆಂದರೆ ಬರಿಯ ಸಾಹಿತ್ಯವಲ್ಲ; ಸುಗಮ ಸಂಗೀತವಲ್ಲ, ಚಲನಚಿತ್ರವಲ್ಲ; ಈ ರೀತಿಯ ಇನ್ನು ಎಷ್ಟೋ ವಿಚಾರಗಳನ್ನು ಒಳಗೊಂಡ ಒಂದು ಸಂಸ್ಕೃತಿ ಎಂಬುದನ್ನು ಯಾವಾಗಲೂ ನೆನಪಿಡಿ. ಕನ್ನಡಿಗರಾಗಿರುವುದಕ್ಕೆ ಹೆಮ್ಮೆಪಡಿ.



ಡಾ. ಸಿ. ಪಿ. ಕೃಷ್ಣಕುಮಾರ್

೭೮ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೯, ೧೦, ೧೧ ಡಿಸೆಂಬರ್ ೨೦೧೧ – ಸ್ಥಳ : ಗಂಗಾವತಿ

ಪರಿಚಯ

ಡಾ. ಸಿ. ಪಿ. ಕೃಷ್ಣಕುಮಾರ್

ಶಿಕ್ಷಣ : ಸಿ.ಪಿ.ಕೆ. ಎಂಬ ಮೂರಕ್ಷರಗಳಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಚಿರಪರಿಚಿತರಾಗಿರುವ ಡಾ. ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ೮-೪-೧೯೩೯ರಲ್ಲಿ ಮೈಸೂರು ಜಿಲ್ಲೆಯ ಕೃಷ್ಣರಾಜ ನಗರದ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಚಿಕ್ಕನಾಯಕನಹಳ್ಳಿ ಸಾಲಿಗ್ರಾಮದಲ್ಲಿ ಪೂರೈಸಿ ಮೈಸೂರಿನಲ್ಲಿ ಕಾಲೇಜು ಶಿಕ್ಷಣ ಮುಂದುವರೆಸಿದರು. ೧೯೬೧ರಲ್ಲಿ ಎಂ.ಎ. ಪದವಿಗಳಿಸಿದರು.

ಉದ್ಯೋಗ : ೧೯೬೧ರಿಂದ ೧೯೬೪ರವರೆಗೆ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿ ೧೯೬೭ರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೯೯ರಲ್ಲಿ ನಿವೃತ್ತರಾದರು.

ಸೇವೆ : ನಿವೃತ್ತಿಯ ನಂತರ ಸಂದರ್ಶಕ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ಗ್ರಂಥ ಪ್ರಕಟನಾ ಅಧ್ಯಕ್ಷರಾಗಿ, ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ಪಂಪ ಪ್ರಶಸ್ತಿ ಆಯ್ಕೆ ಸಮಿತಿ, ಕನಕಪೀಠ ಸಲಹಾ ಸಮಿತಿ ಮೊದಲಾದ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನಗಳ ಗೋಷ್ಠಿ ಅಧ್ಯಕ್ಷರಾಗಿ, ಕಾರ್ಯನಿರ್ವಹಿಸಿದ ಇವರು ೨೦೧೧ರಲ್ಲಿ ಗಂಗಾವತಿಯಲ್ಲಿ ನಡೆದ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ.

ಮನ್ನಣೆ : ಅನೇಕ ಪ್ರಶಸ್ತಿಗಳನ್ನುಇವರು ಪಡೆದಿದ್ದಾರೆ. ಆ ಪೈಕಿ ಕೆಲವು ಹೀಗಿವೆ : ಬಸವಸಾಹಿತ್ಯಶ್ರೀ, ವಿದ್ವತ್ ಶಿರೋಮಣಿ, ಹನಿಗವನ ಹರಿಕಾರ, ಜಾನಪದತಜ್ಞ, ನೃಪತುಂಗ ಸಾಹಿತ್ಯ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ ಮೊದಲಾದ ಪ್ರಶಸ್ತಿಧರರಾಗಿದ್ದಾರೆ.

ಸಾಹಿತ್ಯ ಸೇವೆ : ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಪ್ರಕಾರದ ಅನೇಕ ವಿಷಯಗಳಲ್ಲಿ ಬರೆದಿದ್ದಾರೆ. ಚುಟುಕ, ವ್ಯಕ್ತಿಚಿತ್ರ, ಪ್ರಬಂಧ ಸಂಶೋಧನೆ, ಜಾನಪದ ವಿಮರ್ಶೆ, ಹಾಸ್ಯ ಭಾಷಾಂತರ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಇವರ ಕೆಲವು ಕೃತಿಗಳು ತಾರಾಸಖ, ಕನ್ನಡ ಚತುರ್ಮುಖ ಏಳು ಗ್ರೀಕ್‌ನಾಟಕಗಳು ಇತ್ಯಾದಿ

ಡಾ. ಸಿ. ಪಿ. ಕೃಷ್ಣಕುಮಾರ್
೭೮ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
೨೦೧೧

ಸಮ್ಮೇಳನದ ಲಾಭ

ಸಮಸ್ತ ಸಹೃದಯ ಕನ್ನಡ ಬಂಧು ಭಗಿನಿಯರೆ, ನಮಸ್ಕಾರ.

ಒಂದು ಘೋಷಣೆಯಿಂದ ನನ್ನ ಈ ಅಧ್ಯಕ್ಷ ಭಾಷಣವನ್ನು ಆರಂಭಿಸಬಯಸುತ್ತೇನೆ. ಆದರೆ ಇದು ನಮ್ಮ ನಿಮ್ಮ ಪಾಲಿಗೆ ಆರಂಭಶೂರತ್ವ ಆಗಬೇಕಿಲ್ಲ. ಕನ್ನಡನಾಡಿನಲ್ಲಿ ಕನ್ನಡವೇ ಸರ್ವಸ್ವ, ಸಾರ್ವಭೌಮ ಮತ್ತು ಭೂಮ; ಉಳಿದದ್ದೆಲ್ಲ ಅಲ್ಪ ಅಥವಾ ಅಗಣ್ಯ. "ನಾಲ್ಪೇ ಸುಖಮಸ್ತಿ ಭೂಮೈವ ತತ್ಸುಖಂ". ಆರು ಕೋಟಿ ಕನ್ನಡಿಗರ ಬದುಕು ಸುಖಮಯವಾಗುವುದು ಹೇಗೆ, ಸರ್ವೋದಯ ಸಿದ್ಧಿಸುವುದು ಹೇಗೆ ಎಂಬುದನ್ನು ಆಲೋಚಿಸಬೇಕಾಗಿದೆ. ಆಲೋಚನೆ ಆಚರಣೆಯಾಗಿ, ಆಯೋಜನೆಯಾಗಿ ಪರಿಣಮಿಸಬೇಕಾಗಿದೆ. ರಾಜ್ಯೋತ್ಸವ ಮಾಸದ ಬೆನ್ನಿನಲ್ಲೆ ಈ ಸಮ್ಮೇಳನ ಬಂದಿದೆ. ಕನ್ನಡಿಗರು 'ನವೆಂಬರ್ ಕನ್ನಡಿಗ'ರಾಗದೆ ನಿತ್ಯ ಕನ್ನಡಿಗರಾಗಬೇಕು; ಕನ್ನಡ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಬೇಕು; ವೃತ್ತಿ, ಪ್ರವೃತ್ತಿಗಳೆಲ್ಲ ಕನ್ನಡಮಯವಾಗಬೇಕು. ಉತ್ಸಾಹ ಕ್ಷಣಿಕವಾಗಬಾರದು.

ಕನ್ನಡ ಎಂಬುದು ಒಂದು ಭಾಷೆಯ ಹೆಸರು ಮಾತ್ರವಲ್ಲ; ಅದೊಂದು ಸಾಹಿತ್ಯದ ಹೆಸರು, ಸಂಸ್ಕೃತಿಯ ಹೆಸರು, ಜನಾಂಗದ ಮತ್ತು ಜನಜೀವನದ ಹೆಸರು ಎಂಬ ವಿಶಾಲಾರ್ಥದಲ್ಲಿ ನಾವು ಚಿಂತಿಸಬೇಕಾಗಿದೆ. ಎಲ್ಲಕ್ಕಿಂತ ಬದುಕು ದೊಡ್ಡದು; ಆದರೆ ಅದರ ಉನ್ನತಿಗೆ ಭಾಷೆ, ಸಾಹಿತ್ಯಗಳ ಕೊಡುಗೆ ಸಣ್ಣದಲ್ಲ.

ನಾನು ದೂರದ ದಕ್ಷಿಣದ ಮೈಸೂರಿನಿಂದ ಈ ಉತ್ತರದ ಹೈದರಾಬಾದು ಕರ್ನಾಟಕದ ಗಂಗಾವತಿಗೆ ಬಂದು ಪ್ರಕೃತ ಸಾಹಿತ್ಯ ಸಮ್ಮೇಳನದ ಸಾರಥ್ಯ ವಹಿಸಿರುವುದು ಅರ್ಥಪೂರ್ಣವೆಂದು ಭಾವಿಸುತ್ತೇನೆ : ಐಕ್ಯ, ಭಾವೈಕ್ಯಗಳ ದ್ಯೋತಕವಿದು. ಆದರೆ ನಾನು ಪಾರ್ಥಸಾರಥಿಯಲ್ಲ ಎಂಬ ಅರಿವು ನನಗಿದೆ.

ಕೊಪ್ಪಳ ಜಿಲ್ಲೆಯ ಒಂದು ಅಂಗ, ಈ ಗಂಗಾವತಿ. ಇದು ಬತ್ತದ ಕಣಜವೆಂದೆ ಖ್ಯಾತವಾಗಿದೆ. ಇಲ್ಲಿನ ಅಕ್ಕಿ ಅತ್ಯುತ್ತಮವಾದುದು; ಅದಕ್ಕೆ ಸಕ್ಕರೆಯ ಲೇಪ ಬೇರೆ. ಕೊಪಣ, ಕುಪಣ, ಮಹಾಕೊಪಣನಗರ ಇತ್ಯಾದಿಯಾಗಿ ಅದು ಹಿಂದೆ ಉಲ್ಲೇಖಗೊಂಡಿದೆ. ಅದು ಕನ್ನಡ ಭಾಷೆ, ಸಾಹಿತ್ಯಗಳಿಗೆ ಸಂಬಂಧಿಸಿದಂತೆ

ಪ್ರಾತಃಸ್ಮರಣೀಯವಾದ ಜೈನ ಧರ್ಮದ ಒಂದು ಪ್ರಸಿದ್ಧ ಕ್ಷೇತ್ರವಾಗಿತ್ತು. ಅತ್ತಿಮಬ್ಬೆಯನ್ನು ಕುರಿತ ರನ್ನ ಕವಿಯ ಈ ಪದ್ಯ ಅಗತ್ಯವಾಗಿ ನೆನೆಯಬೇಕಾದುದು:

ಬಿಳಿಯರಳೆಯಂತೆ ಗಂಗಾ
ಜಳದಂತೆಸೆವ ಜಿನಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಳ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಕನ್ನಡಿಗರ ವ್ಯಕ್ತಿತ್ವ ಮತ್ತು ಚಾರಿತ್ರ್ಯ ಕೊಪಣಗಿರಿಯಂತೆ ಪವಿತ್ರವಾಗಬೇಕು; ಎತ್ತರವಾಗಬೇಕು!

ಇದುವರೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದ ಹಾಗೂ ಕನ್ನಡಕ್ಕಾಗಿ ಅತಿಶಯವಾಗಿ ದುಡಿದ ಮತ್ತು ದುಡಿಯುತ್ತಿರುವ ಎಲ್ಲ ಸಾರಸ್ವತ ಧೀಮಂತ ಶ್ರೀಮಂತರ ಆಶೀರ್ವಾದದಿಂದ ನನಗೆ ಈ ಗಣ್ಯ ಗೌರವ ಪ್ರಾಪ್ತವಾಗಿದೆ ಎಂದು ನಂಬಿದ್ದೇನೆ. ಆ ಎಲ್ಲ ಹಿರಿಯರ ಮುಂದೆ ನಾನು ವಯಸ್ಸಿನಲ್ಲಿ ಅಲ್ಲದಿದ್ದರೂ ಯೋಗ್ಯತೆಯಲ್ಲಿ ಚಿಕ್ಕವನು; "ಎನಗಿಂತ ಕಿರಿಯರಿಲ್ಲ". ಆ ಪಾವನಪಂಕ್ತಿಗೆ, ಕನ್ನಡ ಜನಕೋಟಿಗೆ, ಅದನ್ನು ಪ್ರತಿನಿಧಿಸುವ, ಜನಸಾಮಾನ್ಯರ ವಿಶ್ವವಿದ್ಯಾನಿಲಯವಾಗಿ ಬೆಳೆದುಬಂದಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ನನ್ನ ಹಾರ್ದಿಕ ಧನ್ಯವಾದಗಳು.

ಸಾಹಿತ್ಯ ಸಮ್ಮೇಳನಗಳು ಜಾತ್ರೆಗಳು ಎಂದು ಅನೇಕರು ಟೀಕಿಸುವುದುಂಟು; ಟೀಕೆಯನ್ನು ಅಲ್ಲಗಳೆಯಬೇಕಿಲ್ಲ. ಆದರೆ ಜಾತ್ರೆಗಳಿಂದ, ಅಷ್ಟೇ ಅಲ್ಲ, ಸಂತೆಗಳಿಂದ ಕೂಡ ಪ್ರಯೋಜನಗಳುಂಟು ಎಂಬುದನ್ನು ಮರೆಯದಿರೋಣ. ಜಾತ್ರೆ ಎಂಬುದು 'ಯಾತ್ರೆ'ಯ, 'ಸಂತೆ' ಎಂಬುದು 'ಸಂಸ್ಥೆ'ಯ ತದ್ಭವಗಳಷ್ಟೆ. ಬದುಕು ಅಸತ್ತಿನಿಂದ ಸತ್ತಿನೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಮೃತ್ಯುವಿನಿಂದ ಅಮೃತತತ್ವದೆಡೆಗೆ ಅನಂತ ಯಾತ್ರೆಯಾಗಬೇಕು. ನಾವು ಪ್ರತಿವರ್ಷ ಒಂದು ಕಡೆ ಸೇರುವುದು, ಒಬ್ಬರ ಮುಖವನ್ನೊಬ್ಬರು ನೋಡುವುದು, ಪರಸ್ಪರ ಮಾತಾಡುವುದು, ಒಟ್ಟಿಗೆ ಉಣ್ಣುವುದು, ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡೂ ಬೆರೆಯುವುದು ಸಾಮಾನ್ಯ ಲಾಭವಲ್ಲ. 'ಸಿನಿಕ'ತನ ಬೇಡ; ಸಕಾರಾತ್ಮಕವಾಗಿ ಆಲೋಚಿಸೋಣ. ಸಾಹಿತ್ಯ ಎನ್ನುವುದು ಜಾತ್ರೆಯ ನಡುವೆ ಹುಟ್ಟುವುದಿಲ್ಲ, ಅದು ಏಕಾಂತ ಸ್ವಗತ ಪ್ರಕ್ರಿಯೆ ಎಂಬುದೂ ದಿಟ.

ನನ್ನ ಈ ಅಧ್ಯಕ್ಷ ಭಾಷಣದಲ್ಲಿ, ಹಿಂದಿನವರು ಹೇಳಿರದ ಹೊಸತೇನನ್ನೂ ಬಹುಶಃ ನಾನು ಹೇಳುತ್ತಿಲ್ಲ; ಹೇಳುವುದು ಸಾಧ್ಯವೂ ಇಲ್ಲ. ಇದು ಬಹುತೇಕ ಚರ್ವಿತಚರ್ವಣವಾಗುವುದು ಅನಿವಾರ್ಯ; ಆದರೆ ಅನುಚಿತವೇನಲ್ಲ! ಹಿಂದಿನ ಸಮ್ಮೇಳನಗಳಲ್ಲಿ ಕೈಕೊಂಡ ಅಥವಾ ಬಾಯ್ಕೊಂಡ ನಿರ್ಣಯಗಳೆಲ್ಲ ಅನುಷ್ಠಾನಗೊಂಡಿಲ್ಲ ಎಂಬ ವಿಷಾದನೀಯ ಸತ್ಯವನ್ನು ಸ್ಮರಿಸಬೇಕಾಗಿದೆ. ಹಾಗೆ ಅನುಷ್ಠಾನಗೊಂಡಿದ್ದರೆ, ಇಷ್ಟರಲ್ಲಿ ಕರ್ನಾಟಕ ಭೂತಲ ಸ್ವರ್ಗವಾಗಬಹುದಿತ್ತು! ಸಮ್ಮೇಳನಾಧ್ಯಕ್ಷ ಭಾಷಣವೂ ಪರೋಕ್ಷವಾಗಿ ನಿರ್ಣಯಗಳ ಸರಣಿಯೇ

ಆಗಿರುತ್ತದಲ್ಲವೆ? ಇದೆಲ್ಲ ಕಾರ್ಯರೂಪಕ್ಕೆ ಬರುತ್ತದೆ ಎಂಬ ಭರವಸೆಯಾಗಲಿ ಆಶಾವಾದವಾಗಲಿ ನನಗಿಲ್ಲ. ಆದರೆ ನಿರಾಶೆಯೂ ಅನಗತ್ಯ. ಆಶೆ, ನಿರಾಶೆಗಳ ಹಾಸುಹೊಕ್ಕು, ಬಧುಕು!

ಕನ್ನಡ ಸಾಹಿತ್ಯ ಸಮ್ಮೇಳನ ಎನ್ನುವಲ್ಲಿ 'ಕನ್ನಡ ಸಾಹಿತ್ಯ' ಎಂಬುದನ್ನು ಈ ಹೊತ್ತು ಏಕಶಬ್ದವಾಗಿ ಗ್ರಹಿಸದೆ, ಕನ್ನಡ, ಸಾಹಿತ್ಯ ಎಂದು ಬಿಡಿಸಿ ಪರಿಭಾವಿಸುವುದು ಯುಕ್ತವೆನಿಸುತ್ತದೆ. ಇದುವರೆಗೆ 'ಸಾಹಿತ್ಯ'ದ ಮೇಲೆ ಒತ್ತು ಹಾಕುತ್ತ ಬಂದಿದ್ದೇವೆ; ಈಗ 'ಕನ್ನಡ'ದ ಮೇಲೆ ಒತ್ತು ಹಾಕಬೇಕಾಗಿದೆ. ಭಾಷೆಯಿಲ್ಲದೆ ಸಾಹಿತ್ಯವೆಲ್ಲಿ? ಕನ್ನಡವನ್ನು ಗಟ್ಟಿಗೊಳಿಸಿ ಕಟ್ಟುವ, ತನ್ಮೂಲಕ ಸಮಷ್ಟಿ ಜೀವನವನ್ನು ಕಟ್ಟುವ ಕೆಲಸ ಇನ್ನು ಮುಂದೆ ಹಿಂದೆಂದಿಗಿಂತ ಮಿಗಿಲಾಗಿ ನಡೆಯಬೇಕಿದೆ. ಈ ದೃಷ್ಟಿಯಿಂದ 'ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು 'ಕನ್ನಡ ಸಮ್ಮೇಳನ' ಎಂದಷ್ಟೇ ಕರೆದರೆ ಸಾಕೆನಿಸುತ್ತದೆ!

ಭಗವಾನ್ ಬುದ್ಧ 'ಪ್ರಜ್ಞೆ', 'ಅಪ್ರಮಾದ' ಎಂಬ ಮಾತುಗಳನ್ನು ಮೇಲಿಂದ ಮೇಲೆ ಆಡುತ್ತಾನೆ. ನಾವು ಪ್ರಮಾದವಶರಾಗದೆ, ಪ್ರಜ್ಞಾಶಾಲಿಗಳಾಗಬೇಕು. ಆ ಪ್ರಜ್ಞೆ ಮುಖ್ಯವಾಗಿ ಕನ್ನಡದ ಪ್ರಜ್ಞೆಯೂ ಹೌದು. ಪ್ರಶ್ನೆಗಳೂ ಇರುತ್ತವೆ, ಇರಲಿ. ಕನ್ನಡ ನಮ್ಮ ಒಟ್ಟು ಬಾಳನ್ನು ತುಂಬಿಕೊಳ್ಳಬೇಕು; ತುಂಬಿ ತುಳುಕಬೇಕು. ಬರಿಯ ಥಳುಕು ಬೇಡ!

ಇಂದು ದೇಶ ಕಾಶ್ಮೀರದಿಂದ ಕನ್ಯಾಕುಮಾರಿಯತನಕ ಭ್ರಷ್ಟಾಚಾರ ಭೂಯಿಷ್ಠವಾಗಿದೆ; ಕರ್ನಾಟಕ ಹೇಗೆ ಅಪವಾದವಾದೀತು? ಅದಕ್ಕೆ ಪ್ರಥಮ ಸ್ಥಾನ ಎಂಬ ಪ್ರಶಂಸೆ ಬೇರೆ. ಆದರೆ ಭ್ರಷ್ಟಾಚಾರ ಕೇವಲ ಆರ್ಥಿಕ ಸ್ವರೂಪದ್ದಲ್ಲ; ಮಾಲಿನ್ಯ ಹೊರಗಿನದು ಮಾತ್ರವಲ್ಲ. ಅದು ಸ್ಥೂಲವೂ ಹೌದು, ಸೂಕ್ಷ್ಮವೂ ಹೌದು. "ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ" ಎಂದು ನಾಗಚಂದ್ರ ಕವಿ ಉದ್ಗರಿಸಿದ. ಇಂದು ಎಲ್ಲೆಡೆ 'ವಿಷೋದ್ಯಾನ'ಗಳ ವಿಜೃಂಭಣೆ. ಅವುಗಳನ್ನು ನಿವಾರಿಸಿ, ಅಮೃತೋದ್ಯಾನಗಳನ್ನು ಬೆಳೆಯಬೇಕು. ವಿಷವೃಕ್ಷಗಳನ್ನು, ವಿಷವೃತ್ತಗಳನ್ನು ಕತ್ತರಿಸಿ, ಅಮೃತಫಲಗಳನ್ನು ಪಡೆಯಬೇಕು. ಈ ದಿಶೆಯಲ್ಲಿ ಪ್ರವೃತ್ತವಾಗಬೇಕು, ಸಾಹಿತ್ಯ, ಕಾವ್ಯವನ್ನು ಕೇಳಿ "ಜನ ಬದುಕಬೇಕು!" ಎಂಬುದು ಕವಿ ರಾಘವಾಂಕನ ಆಶಯ.

ಯಾರು ಏನೇ ಹೇಳಲಂತೆ, ಕನ್ನಡ ಇಂದು ಕ್ರಮೇಣ ಕರಗುತ್ತಿದೆ, ಅಳಿವಿನ ಅಂಚಿನಲ್ಲಿಲ್ಲದಿದ್ದರೂ ನಿಶ್ಚಿತವಾಗಿ ಅಪಾಯದ ಹಾದಿಯಲ್ಲಿದೆ. ಈಗಾಗಲೆ ಜಗತ್ತಿನ ಎಷ್ಟೋ ಭಾಷೆಗಳು ಅಳಿದುಹೋಗಿವೆಯೆಂದು ತಿಳಿದುಬಂದಿದೆ. ಬಳಕೆ ತಪ್ಪುವುದರಿಂದ ಒಂದು ಭಾಷೆಯ ನಾಶ ಎಂದರೆ ಒಂದು ಸಂಸ್ಕೃತಿಯ ನಾಶ ಎಂದೇ ಅರ್ಥ. "ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ!" ಎಂದು ಕುವೆಂಪು ದಶಕಗಳ ಹಿಂದೆಯೆ ಎಚ್ಚರಿಸಿದರು. "ಅಳುಕದೀ ಕನ್ನಡಂ, ಅಳಿಯದೀ ಕನ್ನಡಂ, ಉಳಿವುದೀ ಕನ್ನಡಂ" ಎಂಬ ವಿಶ್ವಾಸವನ್ನೂ ಅವರು ವ್ಯಕ್ತಪಡಿಸಿದರು; ಆದರೆ ಅದು ಇನ್ನೂ ಹಿಂದೆ. ಏನೇ ಇರಲಿ, ಕನ್ನಡವನ್ನು ನಾವು ಉಳಿಸಿಕೊಳ್ಳಬೇಕಿದೆ;

ಬೆಳೆಸಬೇಕಿದೆ. "ಧರ್ಮೋ ರಕ್ಷತಿ ರಕ್ಷಿತಃ" (ಧರ್ಮವನ್ನು ನಾವು ಕಾಪಾಡಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ.) ಅಂತೆಯೆ, ಕನ್ನಡವನ್ನು ಕಾಪಾಡಿದರೆ ಕನ್ನಡ ನಮ್ಮನ್ನು ಕಾಪಾಡುತ್ತದೆ. "ಸ್ವಧರ್ಮೇ ನಿಧನಂ ಶ್ರೇಯಃ" ಎಂಬುದು ಭಗವದ್ಗೀತೆಯ ಉಕ್ತಿ. ಕನ್ನಡ ನಮ್ಮ ಧರ್ಮ; ಸ್ವಧರ್ಮ. ಕನ್ನಡದಲ್ಲೇ ನಾವು ಬದುಕಬೇಕು; ಕನ್ನಡದಲ್ಲೇ ಸಾಯಬೇಕು. ನಿಧನದ ಮಾತು ಹಾಗಿರಲಿ, ಕನ್ನಡ ನಮ್ಮ ತವನಿಧಿ ಎಂಬ ಅರಿವು ನಮಗಿರಲಿ!

ಕನ್ನಡದ ಪರಂಪರೆ ಸುದೀರ್ಘ ಶ್ರೀಮಂತವಾದುದು. "ಅನೇಕ ಶತಮಾನಗಳು ಚರಿತ್ರೆಯನ್ನು ರೂಪಿಸುತ್ತವೆ; ಚರಿತ್ರೆಯ ಅನೇಕ ಶತಮಾನಗಳು ಪರಂಪರೆಯನ್ನು ರೂಪಿಸುತ್ತವೆ" ಎಂಬ ಎಸ್. ರಾಧಾಕೃಷ್ಣನ್ ಅವರ ಉಕ್ತಿ ಕನ್ನಡಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಶಾಸನ ಕ್ಷೇತ್ರದ ದಿಗ್ಗಜ ಜೆ.ಎಫ್. ಫ್ಲೀಟ್ ಅವರು ಒಂದು ಶತಮಾನಕ್ಕೂ ಹಿಂದೆ ಹೇಳಿದರು : "ಕನ್ನಡ ಭಾಷೆ ಭಾರತೀಯ ಭಾಷೆಗಳಲ್ಲೆಲ್ಲ ಅತ್ಯಂತ ಮಧುರವಾದುದು ಮತ್ತು ಅಭಿವ್ಯಕ್ತಿ ಶಕ್ತಿಯಲ್ಲಿ ಅತ್ಯಂತ ಶ್ರೀಮಂತವಾದುದು. ಸ್ವೋಪಜ್ಞ ರಚನೆಯ ಪ್ರಮಾಣದಲ್ಲಿ ಮತ್ತು ಮೌಲ್ಯದಲ್ಲಿ ಪ್ರಾಯಃ ಅದು ಉಳಿದೆಲ್ಲ ಭಾಷೆಗಳನ್ನು ಮೀರಿಸುತ್ತದೆ. ಅವೆಲ್ಲಕ್ಕಿಂತ ಅದು ಪ್ರಾಚೀನ.

ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತಾನು ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು

ಎಂಬ ಮಹಲಿಂಗರಂಗನ 'ಅನುಭವಾಮೃತ'ದ ಪ್ರಶ್ನೆ ಇಂದಿಗೂ ಪ್ರಸ್ತುತವಾದದ್ದು. ಸಂಸ್ಕೃತ ರೂಢಮೂಲವಾಗಿದ್ದ ಕಾಲದಲ್ಲಿ ಒಬ್ಬ ವೈದಿಕ ಕವಿಯಾಗಿ ಅವನು ಹೀಗೆ ಕೇಳಿದ್ದು ಮಹತ್ವದ ಸಂಗತಿ. ಇಂದು ನಾವು "ಇಂಗ್ಲಿಷಿನೊಳಿನ್ನೇನು?" ಎಂದು ಕೇಳಬೇಕಾಗಿಲ್ಲ. ಆದರೆ ಕನ್ನಡದಲ್ಲೆ 'ಮೋಕ್ಷ' ಸಾಧ್ಯ.

ವಚನಕಾರರು ಕನ್ನಡವನ್ನು ದೇವಭಾಷೆಯ ಮಟ್ಟಕ್ಕೆ ಏರಿಸಿದರು. ಈ ಕಾಲದಲ್ಲಿ ಕುವೆಂಪು ಒಂದೆಡೆ ಆ ಕೆಲಸ ಮಾಡಿರುವುದನ್ನು ಲಕ್ಷಿಸಬಹುದು. ಅವರು ಹೇಳುತ್ತಾರೆ: "ಕನ್ನಡದಲಿ ಹರಿ ಬರೆಯುವನು, ಕನ್ನಡದಲಿ ಹರ ತಿರಿಯುವನು!" ನಾವಿಂದು ಕನ್ನಡದಲ್ಲಿ ಬರೆಯುತ್ತಿಲ್ಲ. ತಿರುಪೆಯ ಮಾತು ಬೇಡ. ಕನ್ನಡ ಹಿರಿದು!

ಕನ್ನಡದ, ಕನ್ನಡಿಗರ ಸಮಸ್ಯೆಗಳು ಒಂದಲ್ಲ, ಎರಡಲ್ಲ; ಅವು ಹಲವು ಹೆಡೆಗಳ ಆದಿಶೇಷ; ಎಷ್ಟು ಹೇಳಿದರೂ ಉಳಿದಿರುತ್ತದೆ, ಶೇಷ! ಕುವೆಂಪು ಒಮ್ಮೆ ನನ್ನೊಡನೆ ಮಾತನಾಡುತ್ತ ಹೇಳಿದರು: ``We are in the middle of the battle -field" (ರಣರಂಗದ ನಡುವೆ ಇದ್ದೇವೆ.) ಹೋರಾಟ ಮುಗಿಯುವುದೆಂದು? ಗೆಲುವು ಎಂದು?

ಕರ್ನಾಟಕದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇರುವುದು ಹೆಮ್ಮೆಯ ವಿಷಯವಲ್ಲ; ಅದು ದುರ್ದೈವದ ಸಂಗತಿಯೇ. ಹೊರ ರಾಜ್ಯಗಳಲ್ಲಿ, ಹೊರ ದೇಶಗಳಲ್ಲಿ ಅಂಥ ಸಂಸ್ಥೆಯೊಂದು ಇದ್ದರೆ, ನಾವು ಹೆಮ್ಮೆ ಪಡಬಹುದಿತ್ತು. ಅದು ಕನ್ನಡನಾಡಿನಲ್ಲೇ ಇರುವುದು ಕನ್ನಡದ ದುರವಸ್ಥೆಗೆ ಹಿಡಿದ ಕನ್ನಡಿಯೇ ಸರಿ. ವಾಸ್ತವವಾಗಿ, ಕರ್ನಾಟಕದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದೆ; ಕನ್ನಡವಿಲ್ಲ. ಹೊರಗೆ ಪ್ರಾಧಿಕಾರವಿಲ್ಲ; ಎಷ್ಟೋ ಕಡೆ ಕನ್ನಡದ ಕಳಕಳಿಯಿದೆ. ಪ್ರಾಧಿಕಾರ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು.

"ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!" ಎಂದು ಕುವೆಂಪು ಅರ್ಥಪೂರ್ಣವಾಗಿ ಹಾಡಿದರು. ಬಹ್ವಂಶಗಳಲ್ಲಿ ತಾಯಿ-ಮಗಳ ಅವಸ್ಥೆ ಒಂದೇ ಆಗಿದೆ. ಗಾಂಧೀಜಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಯುದ್ಧವೊಂದು ನಡೆದು ೬೫ ವರ್ಷಗಳ ಹಿಂದೆ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂತು. ``The king is dead, long live the King" (ರಾಜ ಸತ್ತ, ಆದರೆ ರಾಜ ದೀರ್ಘಾಯುವಾಗಲಿ) ಎಂಬ ವ್ಯಂಗ್ಯೋಕ್ತಿಯಂತೆ ಇಂಗ್ಲಿಷರು ಹೋದರು, ಆದರೆ ಇಂಗ್ಲಿಷ್ ಹೋಗಲಿಲ್ಲ. ಒಂದು ರೀತಿಯಲ್ಲಿ ವಸಾಹತುಶಾಹಿ ವ್ಯವಸ್ಥೆ ಉಳಿದುಕೊಂಡಿತು. ಮಾನಸಿಕ ಗುಲಾಮಗಿರಿ, ವೈಚಾರಿಕ ದಾಸ್ಯ ಮುಂದುವರಿಯಿತು. ವಾಮನನಾಗಿ ಬಂದ ಇಂಗ್ಲಿಷ್ ತ್ರಿವಿಕ್ರಮನಾಗಿ ವ್ಯಾಪಿಸಿತು. ಗಾಂಧೀಜಿಯ ಧ್ಯೇಯವಾದ ಸರ್ವೋದಯ ಸಿದ್ಧಿಸಲಿಲ್ಲ.

ಸ್ವಾತಂತ್ರ್ಯ ಚಳವಳಿಯ ಜೊತೆಜೊತೆಯಲ್ಲೇ ಕರ್ನಾಟಕ ಏಕೀಕರಣ ಚಳವಳಿಯೂ ನಡೆದು ೫೫ ವರ್ಷಗಳ ಹಿಂದೆ ರಾಜ್ಯೋದಯವಾಯಿತು. ಆದರೂ ಅದರ ಆಶಯ ಇಂದಿಗೂ ಈಡೇರಿಲ್ಲ. ನಾಡು, ನುಡಿಗಳ ಸರ್ವತೋಮುಖ ಅಭ್ಯುದಯ, ಕನ್ನಡಿಗರ ಏಳಿಗೆ ಸಿದ್ಧಿಸಿಲ್ಲ. ನಾವು ಪ್ರಗತಿ ಸಾಧಿಸಿಯೇ ಇಲ್ಲ ಎಂದರೆ ತಪ್ಪಾದೀತು. ಆದರೆ ಎರಡು ಹೆಜ್ಜೆ ಮುಂದಕ್ಕೆ ಹೋಗಿ, ನಾಲ್ಕು ಹೆಜ್ಜೆ ಹಿಂದಕ್ಕೆ ಬರುವುದು ನಮ್ಮ ಪ್ರಗತಿಯ ಪರಿ : ಮುಂದೆ ಹೋದದ್ದು ಕಾಣುತ್ತದೆ, ಹಿಂದೆ ಬಂದದ್ದು ಕಾಣಿಸುವುದಿಲ್ಲ. ಇದು ಪ್ರಗತಿಯ ಆಭಾಸ. ಮುಖ್ಯವಾದ, ಮೂಲಭೂತವಾದ ಸಂಗತಿಯೆಂದರೆ, ಸರ್ವೋದಯ ಅಂತ್ಯೋದಯಗಳಿಗೂ ದೇಶಭಾಷಾ ಅಥವಾ ಮಾತೃಭಾಷಾ ಮಾಧ್ಯಮಕ್ಕೂ ಅವಿನಾಭಾವ ಸಂಬಂಧವಿದೆ. ಮಾತೃಭಾಷೆ ಎಲ್ಲ ಸ್ತರಗಳಲ್ಲಿ ಆಡಳಿತ ಮಾಧ್ಯಮ ಮತ್ತು ಶಿಕ್ಷಣ ಮಾಧ್ಯಮ ಆಗಬೇಕು; ಆಗಿಲ್ಲ ಎನ್ನುವುದೇ ದುರಂತ.

ಈಗ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಎಂಬ 'ತ್ರಿಕರಣ'ಗಳ 'ಸುನಾಮಿ'ಯ ವಿರುದ್ಧ ನಾವು ತ್ರಿಕರಣಪೂರ್ವಕವಾಗಿ ಹೋರಾಡಿ 'ದೇಸಿ'ಯನ್ನು ಉಳಿಸಿಕೊಳ್ಳಬೇಕಾಗಿದೆ. ದೇಸಿಯ ಗುರಾಣಿಯನ್ನೊಡ್ಡಿ 'ಗುರುತ್ವ'ವನ್ನು ಕಾಪಾಡಿಕೊಳ್ಳ ಬೇಕಾಗಿದೆ. ಪಶ್ಚಿಮದ ಅಂಧಾನುಕರಣದಿಂದ, ಅಸಹಜ ಪ್ರಭಾವದಿಂದ ಪಾರಾಗಿ ನಮ್ಮ ಅನನ್ಯತೆಯನ್ನು, ಸ್ವಂತಿಕೆಯನ್ನು ಸ್ಥಾಪಿಸಬೇಕಾಗಿದೆ. ಒಂದರ್ಥದಲ್ಲಿ ನಾವು

ಸಾಂಸ್ಕೃತಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ; ಇನ್ನೊಂದು ಕಡೆ ರೈತರು ಅಕ್ಷರಶಃ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ! ಹಿಂದೆ ಹೇಳಿದ ಮೂರು ಕರಣಗಳಿಂದ ಒಳ್ಳೆಯದಾಗಿಲ್ಲವೆಂದಲ್ಲ; ಆದರೆ ಕೆಟ್ಟದ್ದೇ ಮಿಗಿಲು.

ಕಳೆದ ಸಮ್ಮೇಳನದಲ್ಲಿ ಅಧ್ಯಕ್ಷರಾದ ಪ್ರೊ. ವೆಂಕಟಸುಬ್ಬಯ್ಯನವರು ಇಂಗ್ಲಿಷನ್ನು 'ಕೊಲೆಗಡುಕ ಭಾಷೆ' ಎಂದು ಕರೆದರು. ಸತ್ಯಗರ್ಭಿತವಾಗಿಯೂ ಮಾತು ತುಸು ಕಟುವಾಯಿತು. ಇಂಗ್ಲಿಷಿನಿಂದ ನಮಗಾಗಿರುವ ಅಪಾರ ಉಪಕಾರವನ್ನು ಮರೆಯಬಹುದೆ? ಆದರೆ ಅದರ ಮಹಾ ಅನರ್ಥಗಳನ್ನು ಇಂದು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ರಾಷ್ಟ್ರಪಿತರ ಕೆಲವು ಹೇಳಿಕೆಗಳನ್ನು ನಾವಿಲ್ಲಿ ನೆನೆಯಬೇಕು : "ವಿನಾಶಕಾರಿಯಾದ ಪರಕೀಯ ಮಾಧ್ಯಮವೊಂದನ್ನು ದೇಶದ ತರುಣ ಜನಾಂಗದ ಮೇಲೆ ಹೊರಿಸಿದ್ದು ಪರಾಡಳಿತದ ದೊಡ್ಡ ಅನಾಹುತಗಳಲ್ಲಿ ಒಂದು"; "ಇಂದಿನ ಶಿಕ್ಷಣ ಪದ್ಧತಿ ಪಾಪದಲ್ಲಿ ಪರಿಪೋಷಿತವಾಗಿದೆ; ನಮ್ಮ ಮಕ್ಕಳನ್ನು ನಮ್ಮ ನೆಲದಲ್ಲೆ ಅಪರಿಚಿತರನ್ನಾಗಿ ಮಾಡಿದೆ"; "ನಾನು ನನ್ನ ಮಾತೃಭಾಷೆಯಾದ ಗುಜರಾತಿಯಲ್ಲಿ ಕಲಿತಿದ್ದರೆ ದೇಶಕ್ಕೆ ಇನ್ನಷ್ಟು ಸೇವೆ ಸಲ್ಲಿಸಬಹುದಿತ್ತು"; "ಒಬ್ಬ ಹುಡುಗ ತನ್ನ ತಂದೆಗೆ ಇಂಗ್ಲಿಷಿನಲ್ಲಿ ಪತ್ರ ಬರೆಯುವುದನ್ನು ನೋಡಿದಾಗ, ನನ್ನ ಕಣ್ಣಿನಲ್ಲಿ ನೀರು ಬರುತ್ತದೆ"; "ನಮ್ಮ ಪರಂಪರೆಯ ಮೇಲೆಯೆ ನಾವು ಮನೆ ಕಟ್ಟಬೇಕು".

ಈಗ ಎರಡನೆಯ ಸ್ವಾತಂತ್ರ್ಯ ಚಳವಳಿಯೊಂದು ನಡೆಯಬೇಕಾಗಿದೆ, ಎರಡು ಉದ್ದೇಶಗಳ ಸಾಧನೆಗಾಗಿ : ಒಂದು ಭ್ರಷ್ಟಾಚಾರದ ಅನಿಷ್ಟ ಶನಿಯಿಂದ ಬಿಡುಗಡೆ; ಮತ್ತೊಂದು ಪಾಶ್ಚಾತ್ಯ ನಾಗರಿಕತೆ, ಸಂಸ್ಕೃತಿಗಳ ಪ್ರಾಬಲ್ಯ, ಪ್ರಭಾವಗಳಿಂದ ಬಿಡುಗಡೆ. ಗಾಂಧಿವಾದಿ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನ, ಅದರ ಬಗೆಗೆ ಏನೇ ವಾದವಿವಾದಗಳಿದ್ದರೂ, ಅತ್ಯಂತ ಸ್ವಾಗತಾರ್ಹ ವಾದದ್ದು ಮತ್ತು ಆಶಾದಾಯಕವಾದದ್ದು. ಅದೊಂದು ಭಾರಿ ಸಂಚಲನವುಂಟು ಮಾಡಿರುವುದನ್ನು, ಯುವ ಜನತೆ ಅತ್ತ ಆಕರ್ಷಿತವಾಗಿರುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ನಿರ್ದಿಷ್ಟವಾಗಿ ಕರ್ನಾಟಕದ ವಿಷಯಕ್ಕೆ ಬರೋಣ. ಕನ್ನಡಿಗರು ಅಭಿಮಾನ ಶೂನ್ಯರೆಂಬುದು ಪ್ರಸಿದ್ಧವಾದ ಸಂಗತಿ. ಅದೇ ನಮ್ಮ ಸಮಸ್ಯೆಗಳ ತಾಯಿಬೇರಾಗಿದೆ. (ತಾಯಿಗೆ ತಕ್ಕ ಸ್ಥಾನಮಾನಗಳಿಲ್ಲವಾಗಿದೆ!) ನಮ್ಮ ಭಾಷೆ, ಸಂಸ್ಕೃತಿಗಳ ಬಗೆಗೆ ನಮಗೆ ಇರಬೇಕಾದ ಪ್ರೀತಿಯಿಲ್ಲ, ಅಭಿಮಾನವಿಲ್ಲ. ವಾಸ್ತವವಾಗಿ ಅಭಿಮಾನ ಕನ್ನಡ ಸಂಸ್ಕೃತಿಯ ಜೀವಗುಣ. 'ಕವಿರಾಜಮಾರ್ಗ'ದಲ್ಲಿ ಕನ್ನಡಿಗರನ್ನು "ಅಭಿಮಾನಿಗಳ್, ಅತ್ಯುಗ್ರರ್" ಎಂದು ಕರೆಯಲಾಗಿದೆ. ಆ ಅಭಿಮಾನವೆ ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲ ಸಾಮ್ರಾಜ್ಯವೊಂದನ್ನು ಕಟ್ಟಲು ಕಾರಣವಾಯಿತು. ಈಗ ಕನ್ನಡನಾಡು ಕಾವೇರಿಯಿಂದ ಇದೆಯಷ್ಟೆ; ಮುಂದೆ ಅದಕ್ಕೂ ಆಪೋಹವೊದಗೀತು!

ಪಂಪನ ಕರ್ಣನಾಡುವ ಒಂದು ಮಾತು ಇಂದಿಗೆ ಅತ್ಯಂತ ಪ್ರಸ್ತುತವಾಗಿದೆ: "ಗುಣಂ ಕುಲಂ, ಅಭಿಮಾನಮೊಂದೆ ಕುಲಂ". ಸಮಾಜ ಜಾತಿ, ಮತ ಜರ್ಜರಿತೆವಾಗಿರುವ ಈ ಹೊತ್ತಿನ ಪರಿಸ್ಥಿತಿಯಲ್ಲಿ ಅಭಿಮಾನವೊಂದೆ, ಗುಣಾಢ್ಯತೆಯೊಂದೆ ನಮ್ಮ ಜಾತಿಯಾಗಬೇಕಿದೆ; ಕುಲವಾಗಬೇಕಿದೆ. ನಾವು 'ಸಾಧು'ಗಳಾಗದೆ, ಸಾತ್ವಿಕ ಎನ್ನಬಹುದಾದ ಉಗ್ರತೆಯನ್ನೂ ನಮ್ಮ ವ್ಯಕ್ತಿತ್ವಕ್ಕೆ ಅಳವಡಿಸಿಕೊಂಡು, ನಮ್ಮ ನೆಲ–ಜಲಗಳನ್ನು, ನುಡಿ, ಗಡಿಗಳನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಕರ್ನಾಟಕ ಅನ್ಯಭಾಷೆಗಳ, ಅನ್ಯಭಾಷಿಕರ ಮೇಹುಗಾಡಾಗಿದೆ. ತಮ್ಮ ಔದಾರ್ಯತೆ, ಅಲಕ್ಷ್ಯತೆ ನಮಗೆ ಮುಳುವಾಗಿದೆ; ಮುಂಬರಿವಿಗೆ ಮುಳ್ಳಾಗಿದೆ. ನಮ್ಮ ನೆಲದಲ್ಲೆ ನಾವು 'ಪರದೇಶಿ'ಗಳಾಗಿದ್ದೇವೆ. ನಮ್ಮ ತಾಯಿ ಕನ್ನಡಕ್ಕೆ ಮೊದಲ ಮಣೆ, ಮನ್ನಣೆಗಳು ಸಿಗಬೇಕು; ಈಗ ಪರಿಸ್ಥಿತಿ ಅಂತಿಲ್ಲ ಎಂಬುದು ವಿಷಾದನೀಯ ವಿಪರ್ಯಾಸ. ಕನ್ನಡ ಕಲಿಯದೇ ಕನ್ನಡಿಗರೊಂದಿಗೆ ಹೊಂದಿಕೊಳ್ಳದೇ ಕನ್ನಡನಾಡಿನಲ್ಲಿ ಯಾರೂ ಬದುಕುವಂತಾಗಬಾರದು. ಕನ್ನಡದ ಅನ್ನ ತಿಂದು, ಕನ್ನ ಹಾಕುವ ಅವಕಾಶ ಯಾರಿಗೂ ಇರಕೂಡದು!

ಕರ್ಣಾಟಕದ ರಾಜಧಾನಿಯಲ್ಲಿ ಕನ್ನಡಿಗರ ಸಂಖ್ಯೆ ಶೇಕಡ ೩೦ ಎಂಬುದು ಎಂಥ ವಿಪರ್ಯಾಸ! ಅದು ಕೇಂದ್ರಾಡಳಿತ ಪ್ರದೇಶವಾಗಲಿ ಎಂಬ ಕೂಗು ಒಮ್ಮೆ ಕೇಳಿಬರಲಿಲ್ಲವೆ? ಇದನ್ನೆಲ್ಲ ನೋಡಿದರೆ "ಕುರುಧರೆಯೊಳ್ ಕುರುಪತಿಯನರಸಿದನ್ ಪವನಸುತಂ" ಎಂಬ ರನ್ನನ ಉಕ್ತಿ ನೆನಪಾಗುತ್ತದೆ. ಮುಂದೊಮ್ಮೆ ಕರ್ನಾಟಕದಲ್ಲಿ ಕನ್ನಡವನ್ನು ಅರಸುವ ಪರಿಸ್ಥಿತಿ ಪ್ರಾಪ್ತವಾಗಬಹುದು.

ಕನ್ನಡಿಗರಲ್ಲಿ ಒಗ್ಗಟ್ಟಿಲ್ಲ ಎನ್ನುವುದೊಂದು ಮೂಲಭೂತ ಸಮಸ್ಯೆ; ವಿಷಾದನೀಯ ಸತ್ಯ. ಆದ್ದರಿಂದ ಕುವೆಂಪು 'ಕರ್ಣಾಟಕ ಹೃದಯಶಿವ'ನಿಗೆ ಮೊರೆಯಿಟ್ಟರು, "ಕಚ್ಚಾಡುವವರನು ಕೂಡಿಸಿ ಒಲಿಸು, ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು!" ಎಂದು. ಕಾಲೆಳೆಯುವ ಪ್ರವೃತ್ತಿ ಕನ್ನಡಿಗರಲ್ಲಿ ವಿಶೇಷ. ಮುಂದುವರಿದು ಕುವೆಂಪು ಹೇಳುತ್ತಾರೆ: "ಸತ್ತಂತಿಹರನು ಬಡಿದೆಚ್ಚರಿಸು!" ಸತ್ತವರನ್ನು ಎಬ್ಬಿಸುವ ಪ್ರಶ್ನೆಯೆ ಇಲ್ಲ; ನಿದ್ದೆ ಮಾಡುವವರನ್ನು ಎಬ್ಬಿಸಬಹುದು. ಆದರೆ ಸತ್ತಂತಿರುವವರನ್ನು, ನಿದ್ರಿಸುವಂತೆ ನಟಿಸುವವರನ್ನು ಎಬ್ಬಿಸುವುದು ಅಸಾಧ್ಯ. ಆಚಾರ್ಯ 'ಶ್ರೀ'ಯವರ ಈ ಹೇಳಿಕೆಯನ್ನು ಪರಿಭಾವಿಸಬಹುದು. "ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ ಒಬ್ಬ ಮಹಾಪಂಡಿತನು 'ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು ಕನ್ನಡಿಗರು ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ, ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಒಗ್ಗಟ್ಟು, ಎಚ್ಚರ ಎರಡೂ ಅಪೇಕ್ಷಣೀಯ.

ಶಿಕ್ಷಣ ಮಾಧ್ಯಮದ ಪ್ರಶ್ನೆ ಜ್ವಲಂತವಾದದ್ದು. ಮಾತೃಭಾಷಾ ಮಾಧ್ಯಮ, ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಶ್ರೇಷ್ಠ ಮತ್ತು ಶ್ರೇಯಸ್ಕರ ಎಂದು ಎಲ್ಲ

ಶಿಕ್ಷಣತಜ್ಞರೂ ಮನೋವಿಜ್ಞಾನಿಗಳೂ ಭಾಷಾವಿಜ್ಞಾನಿಗಳೂ ಸಾರಿಹೇಳಿದ್ದಾರೆ. ಆದರೆ ಅವರ ಹೇಳಿಕೆಯನ್ನು ನಾವು ಕಿವುಡುಗೇಳಿದ್ದೇವೆ. ಜ್ಞಾನವಿಜ್ಞಾನಗಳ ಭಂಡಾರದ ಬಾಗಿಲು ತೆರೆಯುವ ಏಕೈಕ ಕೀಲಿಕೈ, ತಾಯ್ನುಡಿ. ಶಿಕ್ಷಣದ ಗುರಿಗಳಾದ ಸೃಜನಶೀಲತೆ, ವೈಚಾರಿಕತೆಗಳನ್ನು ಮಾತೃಭಾಷಾ ಮಾಧ್ಯಮದಲ್ಲಿ ಮಾತ್ರ ತಿಳಿಸುವುದು ಶಕ್ಯ. ಇದು ಎಸ್. ರಾಧಾಕೃಷ್ಣನ್ ಅವರ ಸೂಕ್ತಿ : "ಜ್ಞಾನವು ಆಸಕ್ತಿ, ಶಕ್ತಿಗಳ ಸತತ ಚಿಲುಮೆ. ಆದರೆ ಅದರ ದಾರಿ ಸಂಕುಚಿತ ಮತ್ತು ಕಷ್ಟಕರ. ನಮ್ಮದಲ್ಲದ ಬೇರೊಂದು ಭಾಷೆ ನೀಡುವ ಅಪರಿಚಿತವೂ ಅಸ್ಪಷ್ಟವೂ ಆದ ಬೆಳಕಿನಲ್ಲಿ ಆ ದಾರಿಯನ್ನು ಕ್ರಮಿಸುವುದು ಸುಲಭವಲ್ಲ". ಆದ್ದರಿಂದ ಇದು ಅಭಿಮಾನದ ಪ್ರಶ್ನೆ ಮಾತ್ರವಲ್ಲ, ಅನುಕೂಲತೆಯ ಪ್ರಶ್ನೆ ಕೂಡ. ಇದು ಕುವೆಂಪು ಅವರ ಮಾತು : "ಶಿಕ್ಷಣದ ಕಟ್ಟಡವನ್ನು ಕನ್ನಡದ ಇಟ್ಟಿಗೆಗಳಿಂದ ಕಟ್ಟಿ : ಅದು ಗಟ್ಟಿ!" ಇಲ್ಲಿರುವುದು ಪ್ರಾಸ ಮಾತ್ರವಲ್ಲ.

ಮಾಧ್ಯಮವಾಗಿ ಇಂಗ್ಲಿಷನ್ನು ಕಲಿಯುವುದಕ್ಕೂ ಒಂದು ಭಾಷೆಯಾಗಿ ಕಲಿಯುವುದಕ್ಕೂ ಇರುವ ಅಂತರವನ್ನು ನಮ್ಮ ಜನ ಅರ್ಥ ಮಾಡಿಕೊಳ್ಳದಿರುವುದು ದುರಂತವೆಂದೇ ಹೇಳಬೇಕು. ಒಂದು ಭಾಷೆಯಾಗಿ ಇಂಗ್ಲಿಷನ್ನು ಅತ್ಯಗತ್ಯವಾಗಿ ಕಲಿಸಬೇಕು; ಕಲಿಯಬೇಕು. ಆದರೆ ಚೆನ್ನಾಗಿ ಕಲಿಯಬೇಕು ಎಂಬುದೂ ಮುಖ್ಯ. ಕನ್ನಡದ ಬಗೆಗೂ ಈ ಮಾತು ದಿಟ. ಈಗ ನಮ್ಮ ವಿದ್ಯಾರ್ಥಿಗಳು ಅತ್ತ ಸರಿಯಾಗಿ ಇಂಗ್ಲಿಷೂ ಬರದ, ಇತ್ತ ಸರಿಯಾಗಿ ಕನ್ನಡವೂ ಬರದ ತ್ರಿಶಂಕುಸ್ಥಿತಿಯಲ್ಲಿದ್ದಾರೆ. ದಕ್ಷ ಅಧ್ಯಾಪಕರ ಕೊರತೆ ಒಂದು ದೊಡ್ಡ ಸಮಸ್ಯೆ. ಸಮರ್ಥ ವಿದ್ಯಾರ್ಥಿಗಳನ್ನು ಮಾತ್ರವಲ್ಲ, ಸಮರ್ಥ ಅಧ್ಯಾಪಕರನ್ನು ಮೊದಲು ಸೃಷ್ಟಿಸಬೇಕಾಗಿದೆ ಎಂಬುದೊಂದು ವಿಚಿತ್ರ! ಸ್ವಾಮಿ ವಿವೇಕಾನಂದರಿಗೆ ಬಾಲ್ಯದಲ್ಲಿ ಇಂಗ್ಲಿಷಿನ ಬಗ್ಗೆ ತಿರಸ್ಕಾರವೇ ಇತ್ತು. ಆದರೆ ತಂದೆತಾಯಿಗಳ ಒತ್ತಾಯದಿಂದ ಅವರು ಇಂಗ್ಲಿಷ್ ಕಲಿತರು; ಚೆನ್ನಾಗಿಯೆ ಕಲಿತರು! ಎಷ್ಟರಮಟ್ಟಿಗೆಂದರೆ, ತಮ್ಮ ಅದ್ಭುತ ವಿಚಾರಧಾರೆಯಿಂದ ಮಾತ್ರವಲ್ಲ, ಆಂಗ್ಲಭಾಷಾ ಪ್ರಭುತ್ವದಿಂದಲೂ ಜಗತ್ತನ್ನೆ ಗೆದ್ದರು. (ನಾವು ಯಾರ ಜಗತ್ತನ್ನು ಗೆಲ್ಲಬೇಕಿದೆ?) ಆದರೂ ಅವರು ಹೇಳುತ್ತಾರೆ : "ಜನರಿಗೆ ಅವರಾಡುವ ಭಾಷೆಯಲ್ಲಿ ಶಿಕ್ಷಣ ಕೊಡಿ."

ನಮ್ಮಲ್ಲಿ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಅದ್ದೂರಿಯಾಗಿ, ಕಣ್ಣು ಕುಕ್ಕುತ್ತ ವಿಜೃಂಭಿಸುತ್ತಿವೆ. ಅವುಗಳ ಮುಂದೆ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳು ಮಂಕಾಗಿ ತಲೆತಗ್ಗಿಸಿ ನಿಂತಿವೆ. ಕಲಿಯುವ ವಿದ್ಯಾರ್ಥಿಗಳು ಕೀಳರಿಮೆಯಿಂದ ಬಳಲುತ್ತಾರೆ. ಅಷ್ಟೆ ಅಲ್ಲ, ಒಂದು ಬಗೆಯ ನವ ಅಸ್ಪೃಶ್ಯತೆಯನ್ನು ಆಂಗ್ಲ ಮಾಧ್ಯಮ ಹುಟ್ಟುಹಾಕಿದೆ. ಈ ತಾರತಮ್ಯವನ್ನು ಹೋಗಲಾಡಿಸುವ 'ಸಮಾನ ಶಿಕ್ಷಣ' ಅಥವಾ ಶಿಕ್ಷಣದಲ್ಲಿ ಸಮಾನತೆ ಬೇಕಾಗಿದೆ. ಅದು ಸಿದ್ಧಿಸಿದಾಗ ಪ್ರಜಾಪ್ರಭುತ್ವಕ್ಕೆ ಅರ್ಥ ಸಮನಿಸುತ್ತದೆ. ಇಂಗ್ಲಿಷ್ ಮಾಧ್ಯಮ ಶಾಲೆಗಳೆ ತಲೆಯೆತ್ತಕೂಡದು; ಇರುವ ಇಂಗ್ಲಿಷ್ ಶಾಲೆಗಳು ಕನ್ನಡ ಶಾಲೆಗಳಾಗಿ ಬದಲಾಗಬೇಕು. ಆದರೆ ಇದು ಆದರ್ಶ

ಸ್ಥಿತಿ; ವಾಸ್ತವ ಬೇರೆ. ಕುವೆಂಪು ಹೇಳುವ 'ಪ್ರಚ್ಛನ್ನ ಭ್ರಷ್ಟಾಚಾರ'ಕ್ಕೂ ಆದರ್ಶಕ್ಕೂ ಎತ್ತಣ ಸಂಬಂಧ?

ರಾಜ್ಯದ ಉಚ್ಚನ್ಯಾಯಾಲಯ ೨೦೦೮ರಲ್ಲಿ ಶಿಕ್ಷಣ ಮಾಧ್ಯಮದ ಹಕ್ಕು ಪೋಷಕರ ಆಯ್ಕೆಗೆ ಬಿಟ್ಟದ್ದು, ಅನುದಾನರಹಿತ ಶಾಲೆಗಳಲ್ಲಿ ಮಾಧ್ಯಮದ ನಿರ್ಬಂಧ ವಿಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ತೀರ್ಪಿತ್ತಿತು. ಈಗ ರಾಜ್ಯ ಸರ್ಕಾರದ ಮೇಲ್ಮನವಿ ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಅದು ಬೇಗ ಇತ್ಯರ್ಥವಾಗುವಂತೆ ಸರಕಾರ ಕ್ರಮ ಕೈಗೊಳ್ಳಬೇಕು. ಕನ್ನಡ ಮಾಧ್ಯಮದಲ್ಲಿ ಶಾಲೆ ನಡೆಸುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟು ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳ ಮೇಲೆ ಕ್ರಮ ಕೈಗೊಳ್ಳಬೇಕು. ಕಾನ್ವೆಂಟ್ ಶಿಕ್ಷಣದಿಂದಾಗಿ 'ಮಮ್ಮಿ ಡ್ಯಾಡಿ' ಸಂಸ್ಕೃತಿಯೊಂದು ರೂಪುಗೊಂಡಿದೆ. 'ಮಮ್ಮಿ' ಎಂದರೆ ರಕ್ಷಿತ ಶವ ಎಂದರ್ಥ. ಕನ್ನಡದ ಅವಸ್ಥೆಯೂ ಬಹುತೇಕ ಹಾಗೆಯೇ ಇದೆಯಲ್ಲವೆ? ಶವಾವಸ್ಥೆ ಶಿವಾವಸ್ಥೆಯಾಗಬೇಕು, 'ಕರ್ನಾಟಕ ಹೃದಯಶಿವ'ನ ಕೃಪೆಯಿಂದ! ಸರ್ಕಾರವೆ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಅಥವಾ ತೆರೆಯಿಸಲು ಹೊರಟಿರುವ ಅವಿವೇಕಕ್ಕೆ ಅಥವಾ ಅತಿರೇಕಕ್ಕೆ ಏನು ಹೇಳುವುದು? ತನ್ನ ಘೋಷಿತ ನೀತಿಗೆ ವ್ಯತಿರಿಕ್ತವಾಗಿ ಅದು ನಡೆದುಕೊಳ್ಳುತ್ತಿರುವುದು ಖಂಡನೀಯ. ಇಂಗ್ಲಿಷ್ ಮಾಧ್ಯಮದ ಮೋಹ ಬಹುತೇಕ ಮಹಿಳೆಯರದು. ನಮ್ಮ ತಾಯಂದಿರು ಕನ್ನಡಕ್ಕಾಗಿ ತುಸು ಕರುಳು ಕರಗಿಸಿಕೊಳ್ಳಬೇಕೆಂದು ಆಚಾರ್ಯ 'ಶ್ರೀ'ಯವರು ನೂರು ವರ್ಷಗಳ ಹಿಂದೆಯೆ ವಿನಂತಿಸಿಕೊಂಡರು. ತಾಯಿಯ ಕರುಳು ಎಲ್ಲಿಯೂ ಎಂದೂ ಮಹತ್ತ್ವದ್ದು! ಇಂಗ್ಲಿಷನ್ನು ಒಂದನೆಯ ತರಗತಿಯಿಂದಲೆ ಈಗ ಕಲಿಸಲಾಗುತ್ತಿದೆ. ಅದು ಅನಪೇಕ್ಷಣೀಯವಾದ ಕ್ರಮ. ಅದರಿಂದ ಕನ್ನಡದ ಬಗೆಗೆ ತಾತ್ಸಾರ ಆರಂಭದಲ್ಲೆ ಹುಟ್ಟುವುದು ಸಾಧ್ಯ. ಹಿಂದಿನ ವ್ಯವಸ್ಥೆಯೇ ಸಾಧುವಾಗಿತ್ತು.

ಕನ್ನಡ ಅಳಿಯುತ್ತಿರುವುದು ನಗರ ಪ್ರದೇಶಗಳಲ್ಲಿ ಮಾತ್ರ, ಗ್ರಾಮಾಂತರ ಪ್ರದೇಶಗಳಲ್ಲಿ ಅದು ಸುಸ್ಥಿರವಾಗಿದೆ ಎಂದು ಇದುವರೆಗೆ ನಾವು ತಿಳಿದಿದ್ದೆವು. ಆದರೆ ಈಗ ಅಲ್ಲಿಯೂ ಕನ್ನಡದ ಬೇರುಗಳು ಸಡಿಲವಾಗುತ್ತಿವೆ ಎಂಬುದು ಕಳವಳಕಾರಿ. ಕಾನ್ವೆಂಟ್ ಮೋಹ ಹಳ್ಳಿಗಾಡಿನಲ್ಲೂ ಮೂಡಿ ಬೆಳೆಯುತ್ತಿದೆ. ಜನರ ಬಾಯಲ್ಲಿ ಕನ್ನಡ ಶಬ್ದಗಳು ಮರೆಯಾಗಿ ಇಂಗ್ಲಿಷ್ ಶಬ್ದಗಳು ಅನಗತ್ಯವಾಗಿ ಮೆರೆಯುತ್ತಿವೆ. ನಗರಗಳಲ್ಲಂತೂ ಕೇಳುವುದೇ ಬೇಡ.

ಸದ್ಯದಲ್ಲಿ ಕನ್ನಡಕ್ಕೆ ಬಂದಿರುವ ದೊಡ್ಡ ಕುತ್ತು ಮತ್ತು ವಿಪತ್ತು ಎಂದರೆ, ಸರ್ಕಾರ ಸುಮಾರು ಮೂರು ಸಾವಿರ ಕನ್ನಡ ಶಾಲೆಗಳನ್ನು, ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆ ಎಂಬ ಕಾರಣದಿಂದ ಮುಚ್ಚಲು ಹೊರಟಿರುವುದು. (ಎಷ್ಟೋ ಶಾಲೆಗಳನ್ನು ಈಗಾಗಲೇ ಮುಚ್ಚಲಾಗಿದೆ.) ಮುಚ್ಚುವುದಿಲ್ಲ, ಬೇರೆ ಶಾಲೆಗಳಲ್ಲಿ ವಿಲೀನಗೊಳಿಸುತ್ತೇವೆ ಎಂಬ ಮಾತು "ಅಳಿಯ ಅಲ್ಲ, ಮಗಳ ಗಂಡ" ಎಂಬ ಗಾದೆಯಂತೆ! ಒಬ್ಬನೇ ಒಬ್ಬ ವಿದ್ಯಾರ್ಥಿಯಿದ್ದರೂ ಅಂಥ ಶಾಲೆಯನ್ನು ಮುಚ್ಚಕೂಡದು

ಎಂದು ತಾತ್ತ್ವಿಕವಾಗಿ ಹೇಳಬೇಕಾಗಿದೆ. (ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಏತಕ್ಕೆ ಕಡಿಮೆ ಎಂಬುದೂ ಚಿಂತನೀಯ.) ಶಾಲೆ ಮುಚ್ಚುವುದು ಎಂದರೆ ಕನ್ನಡದ ಬದುಕನ್ನು ಮುಚ್ಚಿ ಮುಗಿಸುವ ಕುತಂತ್ರವೇ ಸರಿ! ಹಳ್ಳಿಗಾಡಿನ ಮಕ್ಕಳ, ಹಿಂದುಳಿದವರ ಮಕ್ಕಳ, ಹೆಣ್ಣುಮಕ್ಕಳ ಶಿಕ್ಷಣ ಅದರಿಂದ ಮೊಟಕಾಗುತ್ತದೆ. ಅದು ಪ್ರಜಾಪ್ರಭುತ್ವ ವಿರೋಧಿ ನಿಲುವು; ಶಿಕ್ಷಣದ ಹಕ್ಕು, ಕಡ್ಡಾಯ ಶಿಕ್ಷಣ ಎಂಬ ಮಾತುಗಳಿಗೆ ಆಗ ಅರ್ಥವೇ ಉಳಿಯುವುದಿಲ್ಲ. ಆಂಗ್ಲ ಮಾಧ್ಯಮಗಳನ್ನು ಉತ್ತೇಜಿಸುವ, ಆಂಗ್ಲ ಮಾಧ್ಯಮ ಶಾಲೆಗಳಿಗೆ ಕುಮ್ಮಕ್ಕು ಕೊಡುವ, ಆ ನಾಯಿಕೊಡೆಗಳ ಸಂತಾನವನ್ನು ಹೆಚ್ಚಿಸುವ ಹುನ್ನಾರ ಹಾಗೂ ಭ್ರಷ್ಟಾಚಾರ ಪ್ರಸಕ್ತಿ ಇಲ್ಲಿದೆಯೆ? ವಾಸ್ತವವಾಗಿ ಇದು ಮಾಧ್ಯಮದ ವ್ಯಾಪಕ ಪ್ರಶ್ನೆಯ ಒಂದು ಅಂಗವಷ್ಟೆ. ಕನ್ನಡ ಶಾಲೆಗಳನ್ನು ಮುಚ್ಚುವುದೆಂದರೆ, ಕನ್ನಡ ಮಾಧ್ಯಮಕ್ಕೆ, ಕನ್ನಡಕ್ಕೆ ಆಘಾತವೆಸಗಿದಂತೆ. ಈ ವಿದ್ಯಮಾನ ಅಥವಾ ಅವಿದ್ಯಮಾನದ ಬಗೆಗೆ ವ್ಯಾಪಕ ಪ್ರತಿಭಟನೆ, ಚಳವಳಿ, ಚರ್ಚೆ ನಡೆಯಬೇಕು. ಕಡೆಗೂ, ಮುಚ್ಚುವುದೇ ಆದರೆ ಆಂಗ್ಲಶಾಲೆಗಳನ್ನು ಮುಚ್ಚಬೇಕು, ಕನ್ನಡ ಶಾಲೆಗಳನ್ನಲ್ಲ!

ಇಲ್ಲಿಯೇ ಹೇಳಬೇಕಾದ ಮುಖ್ಯವಾದ ಮಾತೆಂದರೆ, ಸರ್ಕಾರಿ ಶಾಲೆಗಳಿಗೆ ಎಲ್ಲ ಮೂಲ ಸೌಲಭ್ಯಗಳನ್ನೂ ಒದಗಿಸಬೇಕು, ಅಲ್ಲಿ ಸಿಗುವ ಶಿಕ್ಷಣ ಗುಣಾತ್ಮಕವಾಗಿರಬೇಕು, ಖಾಸಗಿ ಶಾಲೆಗಳೊಡನೆ ಅವು ಸ್ಪರ್ಧಿಸುವಂತಿರಬೇಕು ಎನ್ನುವುದು.

ಮಕ್ಕಳ ಶಿಕ್ಷಣದ ಹಕ್ಕು ಕಾಯಿದೆ ೨೦೦೯ ಮಹತ್ವದ ಒಂದು ಮಸೂದೆ. ಅದನ್ನು ದೇಶದ ಬಹುಪಾಲು ರಾಜ್ಯಗಳು ಜಾರಿಗೊಳಿಸಿವೆ; ಕರ್ನಾಟಕ ಸರ್ಕಾರ ಕೈಕಟ್ಟಿ ಕುಳಿತಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವರ ಈ ಹೇಳಿಕೆ ಗಮನಾರ್ಹ: “೨೦೦೯ರ ಶಿಕ್ಷಣ ಹಕ್ಕು ಕಾಯಿದೆ ದೇಶಾದ್ಯಂತ ಜಾರಿಗೊಳ್ಳದಿದ್ದರೆ, ಅದೊಂದು ಐತಿಹಾಸಿಕ ವೈಫಲ್ಯವೇ ಸರಿ!”

ಕನ್ನಡದ ಸ್ಥಾನಮಾನಗಳನ್ನು ಉತ್ತಮೀಕರಿಸುವಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕು, ಜೊತೆಗೆ ಕ್ರಿಯಾಶಕ್ತಿಯೂ ಬೇಕು. ಯಾವ ಸರ್ಕಾರವೇ ಬರಲಂತೆ, “ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ!” ಎಂಬ ಗಾದೆಯಂತಾಗಿದೆ, ಕನ್ನಡದ ಸ್ಥಿತಿ. ಇದು ಕನ್ನಡಿಗರ ಕರ್ಮ. ಆದರೆ ನಾವು ನೆನಪಿಡಬೇಕು, “ಎರಡೂ ಕೈ ಸೇರಿದರೆ ಚಪ್ಪಾಳೆ” ಎಂಬುದನ್ನು. ಜನತೆ ಎಲ್ಲಕ್ಕೂ ಸರ್ಕಾರದತ್ತ ಬೆರಳುಮಾಡಿ, ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲಾಗದು. ಒಟ್ಟಿನಲ್ಲಿ ಕನ್ನಡದ ಬದ್ಧತೆ ಎಲ್ಲ ಹಂತಗಳಲ್ಲಿ ಎಲ್ಲರಿಗೂ ಅಗತ್ಯ. ಬದ್ಧತೆಯಿಂದ ಪ್ರಬುದ್ಧತೆ!

ಅನ್ಯಭಾಷೆಗಳನ್ನು, ಅದರಲ್ಲೂ ಇಂಗ್ಲಿಷನ್ನು ನಾವು ಹಗೆಯಬೇಕಾದ ಪ್ರಮೇಯವಿಲ್ಲ. ‘ಸರ್ವಭಾಷಾ ಸರಸ್ವತಿ’ಯ ವಿಶಿಷ್ಟ ಸ್ತುತ್ಯ ಕಲ್ಪನೆ ನಮ್ಮದು. ಎಲ್ಲ ಭಾಷೆಗಳೂ ವಾಗ್ದೇವಿಯ ಅವಯವಗಳು. ಕನ್ನಡಕ್ಕೆ ಮತ್ತೊಂದು ಹೆಸರು ಎನ್ನಬಹುದಾದ ಕುವೆಂಪು ಹೇಳುತ್ತಿದ್ದರು, “ನಾನು ಇಂಗ್ಲಿಷಿನ ಮೂಲಕ ಕನ್ನಡಕ್ಕೆ ಬಂದವನು” ಎಂದು; ಆಚಾರ್ಯ ‘ಶ್ರೀ’ಯವರಂತೂ ಇಂಗ್ಲಿಷಿನಿಂದಲೇ ಕನ್ನಡಕ್ಕೆ

ಬಂದವರು. ಆದರೆ ಇಂಗ್ಲಿಷ್ ಕನ್ನಡಕ್ಕೆ ಪೋಷಕವಾಗಿ, ಪೂರಕವಾಗಿ ದುಡಿಯಬೇಕು; ಮಾರಕವಾಗಬಾರದು. ಅದರಿಂದ ಕನ್ನಡಕ್ಕೆ 'ದೋಹದ'ವಾಗಬೇಕು. ಹದ, ಹದುಳ ಎಲ್ಲಿಯೂ ಅಪೇಕ್ಷಣೀಯ. ಇಂಗ್ಲಿಷ್ ಅಂತರರಾಷ್ಟ್ರೀಯ ಭಾಷೆ ಎನ್ನುವುದು ಮತ್ತೊಂದು ಬೃಹದ್‌ಭ್ರಮೆ. ಎಷ್ಟೋ ದೇಶಗಳಲ್ಲಿ ಇಂಗ್ಲಿಷ್ ಇಲ್ಲ. ಆ ದೇಶಗಳ ಜನ ತಮ್ಮ ತಮ್ಮ ಭಾಷೆಯಲ್ಲೆ ಉತ್ಕರ್ಷ, ಉದ್ಧಾರಗಳನ್ನು ಸಾಧಿಸಿದ್ದಾರೆ ಎಂಬುದನ್ನು ನೆನೆಯಬೇಕು. ನಮಗೇಕೆ ಇಂಗ್ಲಿಷ್ ಮೆಚ್ಚು ಮತ್ತು ಹುಚ್ಚು? ಹುಸಿ ಹೆಮ್ಮೆಯ, ಒಣ ಪ್ರತಿಷ್ಠೆಯ ಭಾವನೆ? ಇದೊಂದು ಭಯಂಕರ ಸಾಂಕ್ರಾಮಿಕ ವ್ಯಾದಿ. ಇಂಗ್ಲಿಷ್ ಅನ್ನದ ಭಾಷೆ ಎಂದು ಕೆಲವರ ಅನಿಸಿಕೆ. ಯಾವ ಅನ್ಯಭಾಷೆಯೂ ಅನ್ನದ ಭಾಷೆಯಾಗಲಾರದು; ಆಗಬಾರದು. ಇಷ್ಟಕ್ಕೂ ಅನ್ನಕ್ಕಿಂತ ಸತ್ವಪೂರ್ಣ ಮತ್ತು ಸತ್ತ್ವದಾಯಕವಾದದ್ದು ರಾಗಿ ಮತ್ತು ಜೋಳ!

ಇಂಗ್ಲಿಷಿನಲ್ಲಿ ಕಲಿತರೆ ಶ್ರೀಮಂತರಾಗಿಬಿಡಬಹುದೆಂಬ ಭ್ರಾಂತಿ ಹಲವರದು. ಆದರೆ ಎಲ್ಲರೂ ಹಾಗಾಗುವುದು ಸಾಧ್ಯವಿಲ್ಲ. ಇಂಗ್ಲೆಂಡ್, ಅಮೆರಿಕಗಳಲ್ಲೂ ಬಡತನವಿದೆ; ಅಮೆರಿಕದಲ್ಲೂ ಭಿಕ್ಷುಕರಿದ್ದಾರೆ, ಬಹಳ ಮಂದಿಗೆ ಸ್ವಂತ ಮನೆಯಿಲ್ಲ. ಅಲ್ಲಿ ಎಲ್ಲವೂ ಸರಿಯಿಲ್ಲ ಎಂಬುದಕ್ಕೆ ಸಾಕ್ಷಿ ವಾಲ್‌ಸ್ಟ್ರೀಟ್ ಮುತ್ತಿಗೆ.

ಪ್ರೌಢಶಿಕ್ಷಣದ ಹಂತದವರೆಗೆ ಕನ್ನಡವೆ ಮಾಧ್ಯಮವಾಗಬೇಕೆಂದು ಹೇಳುತ್ತಿದ್ದೇವೆ. ಅದು ಉನ್ನತ ಶಿಕ್ಷಣದ ಹಂತದಲ್ಲೂ ಮಾಧ್ಯಮವಾಗಬೇಕು ಎಂಬುದು ಪ್ರಮುಖ ವಿಚಾರ. ವಿಜ್ಞಾನವನ್ನೂ ಕನ್ನಡದಲ್ಲಿ ಬೋಧಿಸಬಹುದು. ಪಾರಿಭಾಷಿಕ ಶಬ್ದಗಳ ಸಮಸ್ಯೆ ಸಮಸ್ಯೆಯೇ ಅಲ್ಲ. ಅನಿವಾರ್ಯವಾದಾಗ ಮೂಲಶಬ್ದಗಳನ್ನು ಯಥಾವತ್ತಾಗಿ ಬಳಸಬಹುದು. ಇಷ್ಟಕ್ಕೂ, ವಿಜ್ಞಾನದಲ್ಲಿ ಅಂಕಿಅಂಶಗಳು ಮುಖ್ಯವೇ ಹೊರತು ಭಾಷೆಯಲ್ಲ ಎನ್ನುತ್ತಾರೆ ಲೋಹಿಯಾ. ಹಿಂದೆ ಹೈದರಾಬಾದಿನ ನಿಜಾಮರ ಆಡಳಿತದಲ್ಲಿ ವೈದ್ಯಕೀಯ ಮುಂತಾದುವನ್ನು ಉರ್ದು ಮಾಧ್ಯಮದಲ್ಲಿ ಕಲಿಸಲಾಗುತ್ತಿತ್ತು ಎಂಬುದನ್ನು ನೆನೆಯಬೇಕು. ಈಗಲೂ ತಮಿಳ್ನಾಡಿನಲ್ಲಿ ಎಂಜಿನಿಯರಿಂಗ್ ವಿಷಯವನ್ನು ತಮಿಳಿನಲ್ಲಿ ಬೋಧಿಸಲಾಗುತ್ತಿದೆ ಯಂತೆ. ವೈದ್ಯಕೀಯ ಪಾರಿಭಾಷಿಕ ಪದಗಳು ಮೂಲತಃ ಇಂಗ್ಲಿಷ್ ಅಲ್ಲ, ಗ್ರೀಕ್ ಮತ್ತು ಲ್ಯಾಟಿನ್ ಎಂಬುದನ್ನು ಗಮನಿಸಬೇಕು. ನಮ್ಮ ವಚನಕಾರರು ಇಂದ್ರಿಯಾತೀತ ಅನುಭವಗಳನ್ನು ಅಥವಾ ಅನುಭಾವವನ್ನು ಅಚ್ಚಗನ್ನಡದಲ್ಲಿ ಅಭಿವ್ಯಕ್ತಿಸಿದರು; ಅಂಗೈ ನೆಲ್ಲಿ ಮಾಡಿಕೊಟ್ಟರು. ಇನ್ನು, ಇಂದ್ರಿಯಗಮ್ಯ ವಿಷಯಗಳನ್ನು ಕನ್ನಡದಲ್ಲಿ ತಿಳಿಸುವುದು ಅಸಾಧ್ಯ ಅಥವಾ ಕಷ್ಟವಾಗುತ್ತದೆಯೆ?

ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ತಕ್ಕ ಪಠ್ಯಗ್ರಂಥಗಳನ್ನು ಕನ್ನಡದಲ್ಲಿ ಸಿದ್ಧಗೊಳಿಸಬೇಕು. ಕನ್ನಡ ಅವುಗಳಲ್ಲೊಂದು ವಿಷಯವಾಗಬೇಕು. ಆದರೆ ಒಂದಂಶವನ್ನು ನೆನಪಿಡಬೇಕು, ಮೂಲ ಶಬ್ದಗಳನ್ನು ಕನ್ನಡಕ್ಕೆ ಅನುವಾದಿಸುವ ಭರದಲ್ಲಿ 'ಪೆಡಂಭೂತ'ಗಳನ್ನು ಸೃಷ್ಟಿಸತಕ್ಕದ್ದಲ್ಲ. ಆಡಳಿತ ಭಾಷೆಯ ಬಗೆಗೂ ಈ ಮಾತು ಸತ್ಯ. ಅನಿವಾರ್ಯವಾದ ಮತ್ತು ಕೆಲವೊಮ್ಮೆ ಸರಳವಾದ ಪಾರಿಭಾಷಿಕ

ಪದಗಳನ್ನು ಹಾಗೆಯೆ ಇಟ್ಟುಕೊಳ್ಳಬಹುದು. ಇಂಗ್ಲಿಷ್ ಹಲವಾರು ಭಾಷೆಗಳಿಂದ ಶಬ್ದಗಳನ್ನು ಹೀರಿಕೊಂಡು ಬೆಳೆದಿದೆ. ಜ್ಞಾನ, ವಿಜ್ಞಾನ, ಪ್ರಜ್ಞಾನಗಳ ಭಾಷೆಯಾಗಬೇಕು, ಕನ್ನಡ. 'ಕಲಾ' ಸಾಹಿತ್ಯವೇನೊ ಸಾಕಷ್ಟಿದೆ; ಆದರೆ ಶಾಸ್ತ್ರಸಾಹಿತ್ಯ, ವಿಜ್ಞಾನವಾಙ್ಮಯ ಕಡಿಮೆ. ಈ ಸಂಬಂಧವಾಗಿ "ನ ಬೈಷಾ ಭಾಷಾ ಶಾಸ್ತ್ರಾನುಪಯೋಗಿನೀ" (ಈ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಲ್ಲ) ಎಂಬ ಭಟ್ಟಾಕಳಂಕನ ಉಕ್ತಿ ಸ್ಮರಣೀಯ. ವಿಜ್ಞಾನಸಾಹಿತ್ಯವನ್ನು ಬೆಳೆಸಬೇಕು. ಈ ಬಗೆಗೆ ತೃಪ್ತಿಕರವಾದ ಪ್ರಯತ್ನಗಳು ನಡೆಯುತ್ತಿವೆ; ಸಾಧನೆಯೂ ಸಣ್ಣದಲ್ಲ.

ಕಂಪ್ಯೂಟರ್ ಮತ್ತು ತಂತ್ರಜ್ಞಾನಗಳಲ್ಲಿ (ತಂತ್ರಾಂಶ ಇತ್ಯಾದಿ) ಕನ್ನಡ ಬಳಕೆಗೊಳ್ಳಬೇಕು. ಕನ್ನಡ ಹಿಂದನ್ನು ಮರೆಯದೆ ಇಂದಿಗೆ ಹೊಂದಿಕೊಳ್ಳಬೇಕು; ಹೊಸ ಕಾಲಕ್ಕೆ ಸ್ಪಂದಿಸಬೇಕು. ಈಗ ತಾಂತ್ರಿಕ ಶಿಕ್ಷಣಕ್ಕೇ ಪ್ರಾಧಾನ್ಯ ಕೊಡಲಾಗುತ್ತಿದೆ. ಸಾಮಾನ್ಯ ಶಿಕ್ಷಣಕ್ಕೂ ಪುರಸ್ಕಾರ ಸಲ್ಲಬೇಕು.

ಆಡಳಿತದಲ್ಲಿ ಕನ್ನಡ ಇನ್ನೂ ಸಂಪೂರ್ಣವಾಗಿ ನೆಲೆಗೊಂಡಿಲ್ಲ. ನಮ್ಮ ಬಹುಮಂದಿ ಅಧಿಕಾರಿಗಳಿಗೆ ಈ ಬಗ್ಗೆ ನಿರಾಸಕ್ತಿ. ಹಾಗೆ ನೋಡಿದರೆ, ಬ್ರಿಟಿಷರ ಕಾಲದಲ್ಲೆ ಕನ್ನಡ ತಕ್ಕಮಟ್ಟಿಗೆ ಆಡಳಿತ ಭಾಷೆಯಾಗಿತ್ತು; ಮಹದೇವ ಬಣಕಾರರ 'ಆಂಗ್ಲರ ಆಡಳಿತದಲ್ಲಿ ಕನ್ನಡ' ಎಂಬ ಪುಸ್ತಕ, ಈ ದಿಶೆಯಲ್ಲಿ ಬೋಧಪ್ರದವಾಗಿದೆ. ಈ ಹಿನ್ನಡೆ ಆಶ್ಚರ್ಯಕರವಾದದ್ದು. ನ್ಯಾಯಾಲಯದ ಭಾಷೆ ಕನ್ನಡವಾಗಬೇಕು ಎಂಬುದು ಒತ್ತಿ ಹೇಳಬೇಕಾದ ಅಂಶ.

ಕೇಂದ್ರ ಸರ್ಕಾರ ಹಿಂದಿಯನ್ನು ಕನ್ನಡಿಗರ ಮೇಲೆ ಹೇರುವ ಹುನ್ನಾರವನ್ನು ನೇರವಾಗಿಯೊ ಪರೋಕ್ಷವಾಗಿಯೊ ಸ್ಥೂಲವಾಗಿಯೊ ಸೂಕ್ಷ್ಮವಾಗಿಯೊ ಮಾಡುತ್ತಿದೆ. ಅದನ್ನು ಪ್ರತಿಭಟಿಸಿ ತಪ್ಪಿಸಬೇಕು. ಹಿಂದಿ ರಾಷ್ಟ್ರಭಾಷೆ ಎಂಬುದು ತಪ್ಪು; ಅದೊಂದು ಸಂಪರ್ಕಭಾಷೆಯಾಗಿ ಕೆಲಸ ಮಾಡಬಹುದು. ವಾಸ್ತವವಾಗಿ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳೇ. ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಎಲ್ಲ ಕಚೇರಿಗಳಲ್ಲಿ ಕನ್ನಡ ಬಳಕೆಗೊಳ್ಳಬೇಕು. ಇಂಗ್ಲಿಷಿಗಿಂತ ಹಿಂದಿ ಅಪಾಯಕಾರಿ ಎಂಬುದನ್ನು ಕುವೆಂಪು ಒಂದು ಹೋಲಿಕೆಯ ಮೂಲಕ ಒಮ್ಮೆ ಪ್ರತಿಪಾದಿಸಿದರು: "ಇಂಗ್ಲಿಷ್ ಮರದ ದೊಣ್ಣೆಯಾದರೆ ಹಿಂದಿ ಕಬ್ಬಿಣದ ದೊಣ್ಣೆ!"

ಇಂಗ್ಲಿಷ್ ಬಹುಮಟ್ಟಿಗೆ ಈ ಹೊತ್ತು ಉದ್ಯೋಗದ ಭಾಷೆಯೂ ಆಗಿರುವುದರಿಂದ ಅದನ್ನು ಕುರಿತ ಮೋಹವನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೇ ಉದ್ಯೋಗ, ಅಥವಾ ಉದ್ಯೋಗದಲ್ಲಿ ಆದ್ಯತೆ ಎಂಬ ಬಿಗಿನೀತಿಯನ್ನು ಸರ್ಕಾರ ರೂಪಿಸಿಕೊಂಡರೆ, ಸಮಸ್ಯೆ ಬಹುತೇಕ ಬಗೆಹರಿಯುತ್ತದೆ; ಪರಿಸ್ಥಿತಿ ಖಂಡಿತ ಸುಧಾರಿಸುತ್ತದೆ, ಮೂಗು ಬಿಗಿಹಿಡಿದರೆ ಬಾಯಿ ತಾನಾಗಿಯೆ ತೆರೆಯುವಂತೆ! ಅಂದಹಾಗೆ, ಸರೋಜಿನಿ ಮಹಿಷಿ ವರದಿ ಕೂಡಲೆ ಜಾರಿಗೆ ಬರಬೇಕು.

"ಎಲ್ಲಾದರು ಇರು, ಎಂತಾದರು ಇರು; ಎಂದೆಂದಿಗು ನೀ ಕನ್ನಡವಾಗಿರು!" ಎಂದು ಕುವೆಂಪು ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆಯನ್ನು ಕೊಟ್ಟರು. ಅದು ಒಂದರ್ಥದಲ್ಲಿ ಸರಿ. ಆದರೆ ಭೌಗೋಳಿಕ ಕರ್ನಾಟಕವೂ ಮುಖ್ಯ ಎಂಬುದನ್ನು ನಾವು ಮನಗಾಣಬೇಕು. ಈಗ ಕರ್ನಾಟಕದ ಹೊರಗಿರುವ ಎಷ್ಟೋ ಪ್ರದೇಶಗಳು ಕರ್ನಾಟಕದ ತೆಕ್ಕೆಗೆ ಬರಬೇಕು. ಬೆಳಗಾವಿಯಂತೂ ಎಂದೆಂದಿಗೂ, ನಿಸ್ಸಂದಿಗ್ಧವಾಗಿ ಕರ್ನಾಟಕದ ಅವಿಭಾಜ್ಯವಾದ ಮತ್ತು ಅನಿವಾರ್ಯವಾದ ಅಂಗ. ಅದನ್ನು ಕಬಳಿಸ ಬೇಕು ಎಂಬ ಎಂ.ಇ.ಎಸ್.ನ ದುರುದ್ದೇಶವನ್ನು ವಿಫಲಗೊಳಿಸಬೇಕು; ಮರಾಠಿಗರ ಪುಂಡಾಟಿಕೆಯನ್ನು ಅಡಗಿಸಬೇಕು; ಭಂಡತನಕ್ಕೆ ಕಡಿವಾಣ ಹಾಕಬೇಕು. ಎಂ.ಇ.ಎಸ್.ನವರು ಬೆಳಗಾವಿಯ ಮೇಯರ್, ಉಪಮೇಯರ್ ಆಗುವುದೆಂದರೆ ಏನರ್ಥ? ಸರ್ಕಾರ ಅಲ್ಲಿನ ಕನ್ನಡಿಗರ ಸಮಸ್ಯೆಗಳನ್ನು ಅರಿತು, ಪರಿಹರಿಸುವುದೂ ಅವಶ್ಯ. ಗಡಿಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ವಿಶೇಷ ಗಮನ ಹರಿಸಬೇಕು; ಗಡಿನಾಡು ದೃಢವಾಗಬೇಕು. ಹಾಗೆ ನೋಡಿದರೆ ಒಳನಾಡಿನಲ್ಲಿ ತಾನೆ ಏನು ಅಭಿವೃದ್ಧಿ ಕಾರ್ಯಗಳಾಗಿವೆ? ಹಲವೆಡೆ ರಸ್ತೆಗಳೇ ಇಲ್ಲ. ಇನ್ನು ಹಲವು ರಸ್ತೆಗಳಲ್ಲಿ ಹೊಂಡಗಳು ಆಕಳಿಸುತ್ತಿವೆ. ಅವು ನಮ್ಮ ಜೀವನಪಥದ ಹಳ್ಳ, ಹೊಂಡಗಳನ್ನೂ ಸಂಕೇತಿಸಬಹುದು!

ಕನ್ನಡ ಸಾಹಿತ್ಯ ಈಚೆಗೆ ದಾಪುಗಾಲು ಹಾಕುತ್ತ ಮುಂದುವರಿಯುತ್ತಿದೆ. ದಲಿತ ಸಾಹಿತ್ಯ ಬಲಿತ ಸಾಹಿತ್ಯವಾಗುತ್ತಿದೆ. 'ಅಡುಗೆ ಮನೆ ಸಾಹಿತ್ಯ' ಎನಿಸಿದ್ದ ಮಹಿಳಾ ಸಾಹಿತ್ಯ ಈಗ ಕಡೆಯಪಕ್ಷ ನಡುಮನೆಗೆ ಬಂದಿದೆ. ಮಹಿಳೆ ಹೊಸಿಲು ದಾಟುವುದೀಗ ನಿಂದ್ಯವಾಗದೆ, ಸೀಮೋಲ್ಲಂಘನವಾಗಿದೆ. ಆದರೂ ಹೊಸ ಲೇಖಕರಿಗೆ ಪರಂಪರೆಯ ಪ್ರಜ್ಞೆ ಕಡಿಮೆ, ಭಾಷೆಯ ಮೇಲೆ ಹಿಡಿತ ಸಾಲದು. ಅನುಭವದ ಮೂಲದ್ರವ್ಯದ ಹಾಗೂ ಅದನ್ನು ಕಲೆಯಾಗಿಸುವ ಕೌಶಲದ ಕೊರತೆಯಿದೆ ಎನ್ನಬೇಕು. ಸಾಹಿತ್ಯ ಉತ್ತಮವಾದರೆ ಸಾಕೆ? ಸಾಹಿತಿಗಳ ಬದುಕೂ ದೊಡ್ಡದಾಗಬೇಕು.

ಕೆಲವು ದಿನಗಳ ಹಿಂದೆ ಖ್ಯಾತ ಲೇಖಕರೊಬ್ಬರು ಹೇಳಿದ್ದಾರೆ: "ಸಾಹಿತ್ಯವೆಂಬ ಮೌಲ್ಯವನ್ನು ಬೇರೆ ಮೌಲ್ಯಗಳಿಗೆ ಅಡಿಯಾಳಾಗಿ ದುಡಿಸಹೊರಟರೆ ಸಾಹಿತ್ಯವು ಸಾಹಿತ್ಯವಾಗಿ ಉಳಿಯುವುದಿಲ್ಲ. ಅಲ್ಲದೆ ಅದು ಪ್ರಚಾರಸಾಹಿತ್ಯವಾಗಿ ತೀರ ಅಲ್ಪಾಯುಷಿಯಾಗುತ್ತದೆ." ಇದು ಪ್ರಶ್ನಿಸಬೇಕಾದ ಮಾತು. ಶುದ್ಧ ಸಾಹಿತ್ಯಮೌಲ್ಯ ಎಂಬುದುಂಟೆ? ಇತರ ಮೌಲ್ಯಗಳನ್ನೂ ಒಳಗೊಂಡ ಸಂಕೀರ್ಣ ಮೌಲ್ಯವಲ್ಲವೆ, ಸಾಹಿತ್ಯ? "ಕಲೆ ಕ್ರಿಯೆಯೂ ಹೌದು" (art is act as well) ಎಂಬ ಸಾರ್ತ್ರೆಯ ನಿಲುವು ಸಮತೂಕದ್ದು. ಈ ದಿಶೆಯಲ್ಲಿ ವಚನಸಾಹಿತ್ಯದಿಂದ ಕುವೆಂಪು ಅಂಥವರ ಸಾಹಿತ್ಯದಿಂದ ಕಲಿಯಬೇಕಾದ ಪಾಠಗಳಿವೆ.

ಮಹಾಕಾವ್ಯಗಳ ಕಾಲ ಮುಗಿದುಹೋಯಿತು ಎಂಬ ವಾದ ಪಶ್ಚಿಮದಲ್ಲಿರುವಾಗ, ಅಲ್ಲಿ ಒಂದೂ ಆಧುನಿಕ ಮಹಾಕಾವ್ಯ ಹುಟ್ಟದಿರುವಾಗ, ಕನ್ನಡದಲ್ಲಿ 'ಶ್ರೀರಾಮಾಯಣ ದರ್ಶನ'ದ ತರುವಾಯ ಸುಮಾರು ಐವತ್ತು

ಮಹಾಕಾವ್ಯಗಳು ಹುಟ್ಟಿರುವುದೊಂದು ವಿಸ್ಮಯಕರ ವಿದ್ಯಮಾನ. ಒಂದು ಕಡೆ 'ಮುಕ್ತಕ', ಇನ್ನೊಂದು ಕಡೆ ಮಹಾಕಾವ್ಯ – ಇದು ಸ್ವಾರಸ್ಯಕರ ದ್ವಂದ್ವ. ಈಚೆಗೆ ಮೂರು ಸಾಹಿತ್ಯ ಪ್ರಕಾರಗಳು ಹುಟ್ಟಿ ಬೆಳೆಯುತ್ತಿವೆ: ಚುಟುಕು ಅಥವಾ ಹನಿಗವನ, ಮುಕ್ತಕ ಮತ್ತು (ಆಧುನಿಕ) ವಚನ. ಇವುಗಳಲ್ಲಿ ಹನಿಗವನ ಕಾವ್ಯಪ್ರಜ್ಞೆಯನ್ನು ಸಾರ್ವತ್ರೀಕರಿಸುವಲ್ಲಿ ಮುಖ್ಯ ಪಾತ್ರ ವಹಿಸಿದೆ. ಅದೂ ಕಾವ್ಯವೇ ಎಂಬುದನ್ನು ನಾವು ನೆನಪಿಡಬೇಕು. ಸಾಲುಗಳ ಸಂಖ್ಯೆ ಕವಿತೆಯ ಅಳತೆಗೋಲಲ್ಲ. ಕವಿತೆಯೊಂದು, ನಾಮ ಹಲವು!

ಕನ್ನಡದಲ್ಲೀಗ ಪ್ರತಿವರ್ಷ ಸಾವಿರಾರು, ಎಂದರೆ ಹತ್ತಿರ ಹತ್ತಿರ ಆರು ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಹೊರಗಿನ ಅಂದಚಂದಗಳಲ್ಲಿ ಅವು ಯಾವುದೇ ಭಾಷೆಯ ಪುಸ್ತಕಗಳನ್ನು ಸರಿಗಟ್ಟುತ್ತವೆ ಎಂಬುದು ಸಂತಸದ ಸಂಗತಿ. ವಿಚಾರ ವಿಮರ್ಶೆಗಳಿಗೆ, ಅರ್ಥಾತ್ ಸೃಜನೇತರ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳು ಈಗ ಹೆಚ್ಚಾಗಿ ಓದಿಸಿಕೊಳ್ಳುತ್ತವೆ ಎಂಬುದು ಗಮನಾರ್ಹ. ಆದರೂ ವಚನ ಸಂಸ್ಕೃತಿ, ಪುಸ್ತಕ ಸಂಸ್ಕೃತಿ ಕುಗ್ಗುತ್ತಿದೆ ಎಂದು ಹೇಳಬೇಕು. ಅದನ್ನು ನಾವು ಉಳಿಸಿಕೊಳ್ಳಬೇಕು. ಪ್ರಾಚೀನ ಸಾಹಿತ್ಯವನ್ನಂತೂ ಈಗ ಕೇಳುವವರು ಯಾರು? ಹಳೆಯ ಕಾವ್ಯಗಳನ್ನು ಗದ್ಯಾನುವಾದದಲ್ಲಾದರೂ ಜನ ಓದಬೇಕು.

ಸಾಹಿತ್ಯ ಸಮ್ಮೇಳನಗಳಲ್ಲಿ ಸ್ತ್ರೀಯರಿಗೆ ಮತ್ತು ದಲಿತರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸುವುದು ಅಗತ್ಯ. "ನೊಂದ ನೋವ ನೋಯದವರೆತ್ತ ಬಲ್ಲರು?" ಎಂದು ಕೇಳಿದಳು, ಅಕ್ಕ. "ಕಾವಿನಿಂದ ಕಾವ್ಯ!" ಎಂದರು ಎ.ಆರ್.ಕೃ. ಮಹಿಳೆಯರ ಮತ್ತು ದಲಿತರ ನೋವು, ಕಾವುಗಳು ಮುಕ್ತವಾಗಿ ಅಭಿವ್ಯಕ್ತವಾಗಬೇಕು. ಜನಜೀವನದಲ್ಲಿ ಇಂದಿಗೂ ಮನೆಮಾಡಿರುವ ಮಡೆಸ್ನಾನದಂಥ ಮೌಢ್ಯವನ್ನು, ಇತರ ಜಾಡ್ಯಗಳನ್ನು ಸಾಹಿತ್ಯ ನಿವಾರಿಸಬೇಕಾಗಿದೆ. ("ನಿಶ್ಶೇಷ ಜಾಡ್ಯಾಪಹಾ" ಎಂಬ ವಿಶೇಷಣ ಸಾರ್ಥಕವಾಗಬೇಕಲ್ಲವೆ?) ವೈಜ್ಞಾನಿಕ ದೃಷ್ಟಿಯನ್ನು ಅದು ಬೆಳೆಸಬೇಕಾಗಿದೆ. ಅದು ನಮ್ಮ ಸಂವಿಧಾನದ ಒಂದು ಆಶಯ ಕೂಡ. ಹಾಗೆ ನೋಡಿದರೆ, ಶ್ರೇಷ್ಠವಾದ ನಮ್ಮ ಸಂವಿಧಾನ ಎಲ್ಲ ವಿಷಯಗಳಲ್ಲೂ ತಾರಕವಾಗಬೇಕು. ಸ್ತ್ರೀಯರ ಮತ್ತು ದಲಿತರ ಮೇಲಿನ ದೌರ್ಜನ್ಯಕ್ಕೂ ಕುಠಾರವಾಗಬೇಕು, ಸಾಹಿತ್ಯ.

ಭಾಷೆ, ಸಾಹಿತ್ಯಗಳ ಬೆಳವಣಿಗೆಗೆ ನಮ್ಮ ಪತ್ರಿಕೆಗಳು ನೀಡುತ್ತಿರುವ ಕೊಡುಗೆ ಗಣ್ಯವಾದುದು. ಆದರೆ ಸುದ್ದಿಗಳಿಗೆ ಸಂಬಂಧಿಸಿದಂತೆ ಅವು ಇನ್ನಷ್ಟು ವಸ್ತುನಿಷ್ಠವಾಗಬೇಕಾಗಿದೆ. ದೂರದರ್ಶನಗಳಲ್ಲಿ ಮತ್ತು ಜಾಹೀರಾತುಗಳಲ್ಲಿ ಬಳಕೆಗೊಳ್ಳುತ್ತಿರುವ ಕೆಟ್ಟ ಕನ್ನಡ ಮತ್ತು ಅನಗತ್ಯ ಇಂಗ್ಲಿಷ್ ಅಸಹನೀಯ. ಅದನ್ನು ಸಹ್ಯಗೊಳಿಸಬೇಕು. ಕೆಲವು ವಾಹಿನಿಗಳು ಮೌಢ್ಯ ಪ್ರಸಾರ ಮಾಧ್ಯಮ ಗಳಾಗಿರುವುದು ಶೋಚನೀಯ. ಕನ್ನಡ ಅಳಿಯದೆ ಮುಂದೆ ಉಳಿಯಬಹುದು, ಆದರೆ ಭ್ರಷ್ಟ ಕನ್ನಡವಾಗಿ! ಕನ್ನಡದ ಕೊಲೆ ಇಂಗ್ಲಿಷಿನಿಂದ ಮಾತ್ರವಲ್ಲ, ಕನ್ನಡಿಗರಿಂದಲೇ! ವಿದ್ಯುನ್ಮಾನ ಮಾಧ್ಯಮಗಳು ಯುವಜನತೆಯ ಮತ್ತು ಮಕ್ಕಳ ಅಭಿರುಚಿಯನ್ನು ಕೆಡಿಸುತ್ತಿವೆ.

ಅವಕ್ಕೊಂದು 'ಸೆನ್ಸಾರ್' ಅತ್ಯಗತ್ಯ. ಆದರೆ ಕೆಲವೊಮ್ಮೆ ಉಪಯುಕ್ತವಾದ, ನಾವೇ ಮನೆಗೆ ತಂದು ಸೇರಿಸಿಕೊಂಡಿರುವ ದೂರದರ್ಶನದ ಮಾರಿಯನ್ನು ದೂರೀಕರಿಸುವುದೆಂತು?

ಪರಂಪರಾಗತ ವಿದ್ವತ್ತಿಗೆ ಅಧಿಕ ಅವಕಾಶವಿದ್ದ ಪಂಡಿತ ತರಗತಿಗಳೂ ಹಾಗೆಯೇ ವಯಸ್ಕರ ಶಿಕ್ಷಣ ಸಮಿತಿಯೂ ಈಗ ಸ್ಥಗಿತವಾಗಿವೆ. ಅವುಗಳನ್ನು ಪುನರುಜ್ಜೀವಿಸಬೇಕು. ಕರ್ನಾಟಕದೊಳಗೆ ಪತ್ರವ್ಯವಹಾರ ಇತ್ಯಾದಿ ವ್ಯವಹಾರ ಕನ್ನಡದಲ್ಲೇ ಜರುಗಬೇಕು; ಮಾತುಕತೆಯೂ ಅಷ್ಟೆ. ಕರ್ನಾಟಕದಲ್ಲಿ ಎಲ್ಲ ನಾಮಫಲಕಗಳು ಪ್ರಮುಖವಾಗಿ ಕನ್ನಡದಲ್ಲಿರಬೇಕು. ಕನ್ನಡ ಅಂಕಿಗಳು ಎಲ್ಲೆಡೆ ಬಳಕೆಗೊಳ್ಳಬೇಕು. ಪತ್ರಿಕೆಗಳೂ ಇತ್ತ ಗಮನ ಹರಿಸಬೇಕು. 'ನಲಿ ಕಲಿ' ಎಂಬ ಪಠ್ಯಪುಸ್ತಕ ಅವೈಜ್ಞಾನಿಕವೆಂದು ಹಲವರ ಅಭಿಪ್ರಾಯ. ಅದನ್ನು ರದ್ದುಗೊಳಿಸ ಬಾರದೇಕೆ? ಪ್ರಚಾರದ ಕೊರತೆಯಿಂದ ಕನ್ನಡಕ್ಕೆ ಆಗಿರುವಷ್ಟು ಅನ್ಯಾಯ ಮತ್ತಾವ ಭಾಷೆಗೂ ಆಗಿಲ್ಲ ಎಂದು ಒಂದೆಡೆ ಹೇಳಿದ್ದಾರೆ, ಕುವೆಂಪು. ಕನ್ನಡದ ಹಿರಿಮೆ ಗರಿಮೆಗಳನ್ನು ನಾವು ಹೊರಜಗತ್ತಿಗೆ ಪರಿಚಯಿಸಬೇಕು; ಬೇರೆ ರಾಜ್ಯಗಳಲ್ಲಿ, ವಿದೇಶಗಳಲ್ಲಿ ಕನ್ನಡ ಪೀಠಗಳನ್ನು ಸರ್ಕಾರ ಸ್ಥಾಪಿಸಬೇಕು. ಈಗ ಅಲ್ಲಲ್ಲಿ ಇರುವ ಪೀಠಗಳನ್ನು ಬಲಪಡಿಸಬೇಕು.

ಭಾಷಾಂತರ 'ಅಲಕ್ಷಿತ ಕಲೆ' (neglected art) ಎನಿಸಿಕೊಂಡಿದ್ದರೂ ಅದರ ಪಾತ್ರ ಈ ಹೊತ್ತು ಭಾಷೆ, ಸಾಹಿತ್ಯಗಳ ಅಭಿವೃದ್ಧಿಯಲ್ಲಿ, ಜ್ಞಾನದ ಬೆಳವಣಿಗೆಯಲ್ಲಿ ಮಹತ್ವದ್ದು. ಅನ್ಯಭಾಷೆಗಳಿಂದ, ಅದರಲ್ಲೂ ಇಂಗ್ಲಿಷಿನಿಂದ ಪುಸ್ತಕಗಳು ಕನ್ನಡಕ್ಕೆ ಭಾಷಾಂತರಗೊಳ್ಳುತ್ತಿವೆ; ಆದರೆ ಕನ್ನಡದಿಂದ ಬೇರೆ ಭಾಷೆಗಳಿಗೆ ತರ್ಜುಮೆಯಾಗುತ್ತಿಲ್ಲ. ಈ ಏಕಮುಖ ಸಂಚಾರ ದ್ವಿಮುಖ, ಬಹುಮುಖ ಸಂಚಾರವಾಗಬೇಕು. ಭಾಷಾಂತರಕಾರರ ಒಂದು ಪಡೆಯೆ ಸಿದ್ಧವಾಗಬೇಕಿದೆ. ಭಾಷಾಂತರ ಕಾರ್ಯ ಒಂದು ಬಗೆಯ ದಿಗ್ವಿಜಯ. ಈಚೆಗೆ ಸ್ಥಾಪನೆಗೊಂಡಿರುವ ಕುವೆಂಪು ಭಾಷಾಭಾರತಿ ಪ್ರಾಧಿಕಾರ ಈ ದಿಕ್ಕಿನಲ್ಲಿ ಸ್ತುತ್ಯವಾದ ಕಾರ್ಯ ಮಾಡುತ್ತಿದೆ. ಆದರೂ ಆಗಬೇಕಾದ ಕೆಲಸ ಅಗಾಧವಾಗಿದೆ.

ಕನ್ನಡ ಚಳುವಳಿಗಳ, ಹೋರಾಟಗಳ ಬಗೆಗೆ ಇಲ್ಲಿ ಒಂದು ಮಾತು ಹೇಳಲೇಬೇಕು. ಕನ್ನಡವನ್ನು ಉಳಿಸುವಲ್ಲಿ ಈ ಚಳುವಳಿಗಳು ಗಣ್ಯ ಪಾತ್ರ ವಹಿಸಿವೆ. ಆದರೆ ಕನ್ನಡ ಚಳುವಳಿಗಾರರು ರಾಜಕೀಯ ಪಕ್ಷಗಳಂತೆ ಬೇರೆ ಬೇರೆ ಗುಂಪುಗಳಾಗಿರುವುದು ಅಪೇಕ್ಷಣೀಯವಲ್ಲ; ಅದರಿಂದ ಚಳುವಳಿಗಳು ದುರ್ಬಲವಾಗುತ್ತವೆ. ಚಳುವಳಿಗಾರರೆಲ್ಲ ಒಂದು ಸಂಘಟನೆಯಾಗಿ ಕೆಲಸ ಮಾಡಿದರೆ ಹೆಚ್ಚು ಫಲಪ್ರದವಾಗುವುದರಲ್ಲಿ ಸಂಶಯವಿಲ್ಲ.

ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕಾರಣಿಗಳ ಪಾತ್ರವೇನು ಎಂಬುದೊಂದು ಪ್ರಶ್ನೆ. ಅವರೂ ಕನ್ನಡಿಗರೇ; ಸಾಹಿತ್ಯ, ಸಂಸ್ಕೃತಿಗಳಲ್ಲಿ ಆಸಕ್ತರಾದವರು ಅವರಲ್ಲಿ ಇರಬಾರದೆಂದಿಲ್ಲ. ಅಲ್ಲದೆ, ಸಾಹಿತ್ಯ ಎಲ್ಲರಿಗಾಗಿ. ಆದರೂ ಕನ್ನಡ ಸಾಹಿತ್ಯ

ಪರಿಷತ್ತು ಸ್ವಂತ ಸಂಪನ್ಮೂಲಗಳನ್ನು ರೂಢಿಸಿಕೊಂಡು ಸಂಪೂರ್ಣ ಸ್ವಾವಲಂಬಿಯಾದಾಗ, ಸರ್ಕಾರದ ಹಂಗನ್ನು ಹರಿದುಕೊಂಡಾಗ, ರಾಜಕಾರಣಿಗಳ ಮೆರೆತವನ್ನು ತಪ್ಪಿಸಬಹುದು. ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳು ಮಾತ್ರ ವೇದಿಕೆಯನ್ನು ಅಲಂಕರಿಸುತ್ತಾರೆ, ರಾಜಕಾರಣಿಗಳು ಕೆಳಗೆ ಕುಳಿತುಕೊಳ್ಳುತ್ತಾರೆ ಎಂಬುದು ಕುತೂಹಲಕಾರಿ ಸಂಗತಿ.

ನಾಡಗೀತೆಯ ಬಗೆಗಿರುವ ಚರ್ಚೆಯನ್ನೂ ಇಲ್ಲಿ ಪರಿಗಣಿಸಬಹುದು. ನಾಡಗೀತೆಯನ್ನು ಸಂಕ್ಷೇಪಿಸತಕ್ಕದ್ದಲ್ಲ. ಆದಷ್ಟು ಬೇಗ ಅದನ್ನು ಹಾಡಿ ಮುಗಿಸಬೇಕು. ಎದ್ದು ನಿಲ್ಲಲಾರದವರು ಅಥವಾ ಹೆಚ್ಚು ಹೊತ್ತು ನಿಲ್ಲಲಾರದವರು ಕುಳಿತೇ ಅದಕ್ಕೆ ಗೌರವ ಸಲ್ಲಿಸಬಹುದು. ನಾಡಾಗಲಿ ನಾಡಗೀತೆಯಾಗಲಿ ಛಿದ್ರವಾಗಕೂಡದು!

ಈಗ ಶಿಕ್ಷಣದ ವ್ಯಾಪಾರೀಕರಣವನ್ನು ಕಾಣುತ್ತಿದ್ದೇವೆ; ಅದೊಂದು ಉದ್ಯಮವಾಗಿ ಪರಿಣಮಿಸಿದೆ. ವಾಣಿಯ ವಾಣಿಜ್ಯೀಕರಣವನ್ನು ತಡೆಗಟ್ಟಬೇಕಿದೆ. ಒಟ್ಟಿನಲ್ಲಿ ನಮ್ಮ ಇಡೀ ಶಿಕ್ಷಣಪದ್ಧತಿಯೆ ದೋಷಪೂರ್ಣವಾಗಿದ್ದು, ಸುಧಾರಣೆಯನ್ನು ಬಯಸುತ್ತಿದೆ. ಶಿಕ್ಷಣವೆಂದರೆ ಕೇವಲ ಮಾಹಿತಿಯಲ್ಲ, ಜ್ಞಾನ; ಕೇವಲ ಜ್ಞಾನವೂ ಅಲ್ಲ, ವಿವೇಕ. (wisdom) "ವಿವೇಕವಿಲ್ಲದಿದ್ದರೆ, ಜ್ಞಾನ ಹೆಚ್ಚಿದಷ್ಟೂ ದುಃಖವೂ ಹೆಚ್ಚುತ್ತದೆ!" ಎಂಬುದು ಬರ್ಟ್ರಂಡ್ ರಸೆಲ್ ಅವರ ಉಕ್ತಿ. "ವಿವೇಕಿಗಳ್ ಆ ನಾಡವರ್ಗಳ್" ಎಂದು ನಮ್ಮ ಕವಿರಾಜಮಾರ್ಗಕಾರ ಇದನ್ನು ಹಿಂದೆಯೆ ಸೂಚಿಸಿದ.

ಬದುಕು ಈಗ ಭೋಗಮುಖಿಯಾಗಿದೆ. "ಹಣವನೊಂದನೆ ಗಳಿಸು, ಫಲವಿಲ್ಲ ಕಲೆಗೆ!" ಎಂಬ ಪ್ರಾಚೀನ ವ್ಯಂಗ್ಯೋಕ್ತಿ ಈಗ ಅಕ್ಷರಶಃ ದಿಟವಾಗಿದೆ. ಅದರಿಂದ ಜೀವನ ಸ್ಥಾವರವಾಗಿದೆ; ಅದನ್ನು ಜಂಗಮಗೊಳಿಸಬೇಕು. ಬಸವಣ್ಣನವರ ಉಕ್ತಿ ಬಹುಸ್ತರಗಳಲ್ಲಿ ತಥ್ಯ; ವಿಶ್ವದ ವಿಚಾರಭಂಡಾರಕ್ಕೆ ಅದೊಂದು ಪ್ರಶಸ್ತವಾದ ಕೊಡುಗೆ.

ನಿಜವಾದ ರಾಜಕೀಯಕ್ಕಿಂತ 'ಸಾಹಿತ್ಯ ರಾಜಕೀಯ', ಗುಂಪುಗಾರಿಕೆ ಹೆಚ್ಚು ಅಪಾಯಕಾರಿ. ಅಂತೂ ಯಾರಿಗೆ ಯಾರೂ ಮೇಲ್ಪಂಕ್ತಿಯಾಗದಂಥ ವಿಕಟ ಸನ್ನಿವೇಶದಲ್ಲಿ ನಾವಿದ್ದೇವೆ. ಹಿಂದಕ್ಕೆ ಗುರುವಾಗಲಿ, ಮುಂದಕ್ಕೆ ಗುರಿಯಾಗಲಿ ಇಲ್ಲ! ಇಹದ ಅತಿಭೋಗ ಪ್ರವೃತ್ತಿಯಿಂದಾಗಿ ಈ ಹೊತ್ತು ಧನಪರತೆ ಮೆರೆಯುತ್ತಿದೆಯೆ ಹೊರತು ಜನಪರತೆಯಲ್ಲ. ಮೌಲ್ಯಗಳೆಲ್ಲಿ?

ಸಮ್ಮೇಳನಾಧ್ಯಕ್ಷರು ಕೇವಲ ಉತ್ಸವಮೂರ್ತಿಯಾಗಬೇಕೆ, ಅವರನ್ನು ಮೆರವಣಿಗೆ ಮಾಡಿ ಮನೆಗೆ ಕಳುಹಿಸಬೇಕೆ ಎಂಬುದು ವಿಚಾರಯೋಗ್ಯ. ಅವರಿಗೆ ಕ್ರಿಯಾತ್ಮಕವಾದ ಯಾವುದಾದರೂ ಪಾತ್ರವನ್ನು ಕೊಡುವುದು ಒಳ್ಳೆಯದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕೆಲವೊಂದು ಕರ್ತವ್ಯಗಳನ್ನು, ಅಧಿಕಾರಗಳನ್ನು ಕೂಡ ಸಮ್ಮೇಳನಾಧ್ಯಕ್ಷರಿಗೆ ವಹಿಸಬಾರದೇಕೆ?

ಒಟ್ಟಿನಲ್ಲಿ ಕನ್ನಡದ ಬೇರು ಬುನಾದಿಗಳನ್ನು ಸರ್ವತ್ರ ಸಬಲವಾಗಿಸಬೇಕು. "ಮನೆಯೆ ಮೊದಲ ಪಾಠಶಾಲೆ" ಎಂಬ ಮಾತು ಕನ್ನಡದ ಮಟ್ಟಿಗೂ ಸತ್ಯ.

ಮಕ್ಕಳಿಗೆ ಬಾಲ್ಯದಲ್ಲೆ ಕನ್ನಡದ ದೀಕ್ಷೆ ಕೊಟ್ಟು, ರಕ್ಷೆ ಕಟ್ಟಿ ಅವರಲ್ಲಿ ಪ್ರೀತಿ ಆಸಕ್ತಿಗಳನ್ನು ಮೊಳೆಯಿಸಬೇಕು; ಮುಂದೆ ಉದ್ದಕ್ಕೂ ಬೆಳೆಯಿಸಬೇಕು. ನಮ್ಮ ಭವ್ಯ ಪರಂಪರೆಯನ್ನು ಮುಂದಿನ ಪೀಳಿಗೆಗ್ಗೆ ದಾಟಿಸಬೇಕು; ಭವಿಷ್ಯಗಾಮಿಯಾಗಿಸಬೇಕು. ಕನ್ನಡ ಮಾಧ್ಯಮದ ಬಗ್ಗೆ ವೇದಿಕೆಗಳ ಮೇಲೆ ಉಜ್ವಲವಾಗಿ ಮಾತನಾಡುವ ಅನೇಕರು ಸ್ವಂತ ಮಕ್ಕಳನ್ನು ಕಾನ್ವೆಂಟುಗಳಿಗೆ ಕಳುಹಿಸುತ್ತಾರೆ ಎಂಬ ಆಕ್ಷೇಪಣೆಯೊಂದಿದೆ. ಅದರಲ್ಲಿ ಅರ್ಥವಿಲ್ಲದಿಲ್ಲ. ಆದರೆ ನಾವು ತಾತ್ತ್ವಿಕವಾಗಿ ಚಿಂತಿಸಬೇಕು. ವ್ಯಕ್ತಿಗಳನ್ನು ಮರೆತು ಶಕ್ತಿಯನ್ನು ಪರಿಭಾವಿಸಬೇಕು.

ಸಂತೋಷಕರವಾದ ಈಚಿನ ಮೂರು ವಿದ್ಯಮಾನಗಳನ್ನು ಇಲ್ಲಿ ಉಲ್ಲೇಖಿಸಬೇಕು. ಮೊದಲನೆಯದಾಗಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನಗಳು ಪ್ರಾಪ್ತವಾದರೂ, ಯಾವುದೋ ವಿಘ್ನದಿಂದ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿರಲಿಲ್ಲ; ಈಗ ಮಾಡಿದೆ. ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಗೆ ತಕ್ಕ ಯೋಜನೆಗಳನ್ನು ರೂಪಿಸಿ, ಆ ದೊಡ್ಡ ಮೊತ್ತದ ಹಣ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಬೇಕಾಗಿದೆ. ಈ ವಿಷಯದಲ್ಲಿ ತಮಿಳುನಾಡು ಸರ್ಕಾರ ಏನೇನು ಮಾಡುತ್ತದೆಯೆಂಬುದನ್ನು ಗಮನಿಸುವುದು ಒಳ್ಳೆಯದು.

ಎರಡನೆಯದಾಗಿ, ದ್ವಿತೀಯ ವಿಶ್ವಕನ್ನಡ ಸಮ್ಮೇಳನ ಬೆಳಗಾವಿಯಲ್ಲಿ ಯಶಸ್ವಿಯಾಗಿ ಜರುಗಿತು. ವಿಶ್ವ ಕನ್ನಡಕ್ಕೆ ಬರಬೇಕು; ಕನ್ನಡ ವಿಶ್ವಕ್ಕೆ ಹೋಗಬೇಕು. ವಿಶ್ವಕನ್ನಡ ವಿನಿಮಯ ಇಂದಿನ ತುರ್ತು ಆವಶ್ಯಕತೆ. "ವಿಶ್ವಭಾರತಿ ಶರಣು ಕಿರುತೀರ್ಥವಲ್ತು!"

ಮೂರನೆಯದಾಗಿ: ಅಪ್ಪಟ ದೇಸಿ ಸಾಹಿತಿ ಎನ್ನಬಹುದಾದ ಚಂದ್ರಶೇಖರ ಕಂಬಾರರಿಗೆ ಎಂಟನೆಯ ಜ್ಞಾನಪೀಠ ಪ್ರಶಸ್ತಿ ದೊರಕಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಚಾರ. ಹಿಂದಿಯನ್ನು ಬಿಟ್ಟರೆ, ಮತ್ತಾವ ಭಾರತೀಯ ಭಾಷೆಯೂ ಎಂಟು 'ಜ್ಞಾನಪೀಠ'ಗಳನ್ನು ಪಡೆದಿಲ್ಲವೆಂದರೆ, ಇದರ ಮಹತ್ವ ವಿದಿತವಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದ ಘನತೆಗೆ ಇದು ಸುಸಾಕ್ಷಿ. ಅಂತೆಯೆ, ಎಸ್.ಎಲ್. ಭೈರಪ್ಪನವರು 'ಸರಸ್ವತಿ ಸಮ್ಮಾನ್'ಗೆ ಪಾತ್ರರಾಗಿರುವುದು ಕನ್ನಡಕ್ಕೆ ಮತ್ತೊಂದು ಕೋಡು ಮೂಡಿಸಿದೆ. ಈ ಇಬ್ಬರು ಸಾಹಿತಿಗಳೂ ಅಭಿನಂದನೀಯರು.

ಕೇಂದ್ರ ಸರ್ಕಾರ ಹಣ ಕೊಟ್ಟಿದೆ ಎನ್ನುವಾಗ, ರಾಜ್ಯ ಸರ್ಕಾರವೂ ಕೆಲವು ಕೆಲಸಗಳಿಗೆ ಧಾರಾಳವಾಗಿ ಹಣ ಕೊಡುತ್ತದೆ ಎಂಬುದನ್ನು ನೆನೆಯಬೇಕು.

ಸಂಸ್ಕೃತದಲ್ಲಿ ಒಂದು ಸೂಕ್ತಿಯಿದೆ: "ಸ ದೇವಂ ವಿಕ್ರೀಯ ತದ್ಯಾತ್ರೋತ್ಸವಂ ಅಕಾರ್ಷೀತ್" (ಅವನು ದೇವರನ್ನೆ–ಅರ್ಥಾತ್ ವಿಗ್ರಹವನ್ನೆ ಮಾರಿ–ಅದರ ಯಾತ್ರೋತ್ಸವವನ್ನು ನಡೆಸಿಬಿಟ್ಟನು.) ನಮ್ಮದು ಎಷ್ಟೋ ಸಲ ದೇವರಿಲ್ಲದ ವೈಭವೋಪೇತ ಉತ್ಸವ. ಹಾಗಾಗಬಾರದು. ಕನ್ನಡ ನಮ್ಮ ದೈವ; ಎಲ್ಲಿಯೂ ಕೇಂದ್ರವಾಗಬೇಕು; ಸ್ಥಾಯಿಯಾಗಬೇಕು.

ಕಡೆಯದಾಗಿ, ಒಂದು ಶತಮಾನದ ಹಿಂದೆ (೧೯೧೧) ಆಚಾರ್ಯ 'ಶ್ರೀ'ಯವರು ಮಂತ್ರವತ್ತಾಗಿ ಹೇಳಿದ ಮಾತನ್ನು ಸ್ಮರಿಸಬೇಕು: "ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ". ಈ ಉಕ್ತಿಯೂ 'ಶ್ರೀ'ಯವರದೇ: "ಸಂಸ್ಕೃತವನ್ನು ಜೀರ್ಣಿಸಿಕೊಂಡು, ಇಂಗ್ಲಿಷನ್ನು ಜೀರ್ಣಿಸಿಕೊಂಡು ಉಳಿದಂತೆ ಉಳಿದು ಕನ್ನಡವನ್ನು ಉಳಿಸಿ, ಬೆಳೆಸಿ! ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಿಕ್ಕಿದ್ದು ಹಿಂದಿಯಲ್ಲೇನಾದರೂ ಸಿಕ್ಕಿದರೆ ಅದನ್ನೂ ಕೊಳ್ಳಿ".

ಎ.ಆರ್. ಕೃಷ್ಣಶಾಸ್ತ್ರಿಯವರು ವ್ಯಥೆಯಿಂದಾಡಿದ ನುಡಿಗಳನ್ನೂ ನೆನೆಯಬಹುದು: "ಏನಾದರೂ ಒಂದು ದುರದೃಷ್ಟದಿಂದ... ನಮ್ಮ ದೇಶದಲ್ಲಿ ಬೌದ್ಧಧರ್ಮ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿಹೋಗುವುದಾದರೆ, ಅದು ಹೊರದೇಶಗಳಲ್ಲಿ ಬದುಕಿರುತ್ತದೆ .. ಆದರೆ ಕನ್ನಡ? ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯ ದೇಶದ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ, ಈ ಕಡೆ ಬಂಗಾಳಕೊಲ್ಲಿಯಿದೆ, ಆ ಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ!" ಈ 'ಉಪದೇಶ'ವನ್ನು ಅಕ್ಷರಶಃ ತೆಗೆದುಕೊಂಡು ಪಾಲಿಸುವ ದಡ್ಡರಾಗಬಾರದು, ನಾವು! ಕಯ್ಯಾರ ಕಿಞ್ಞಣ್ಣ ರೈಯವರು ಬಹಳ ಹಿಂದೆಯೆ "ಬೆಂಕಿ ಬಿದ್ದಿದೆ ಮನೆಗೆ!" ಎಂದು ಕೂಗಿಕೊಂಡರು. ಅದು ಇಂದಿಗೂ ಅಪ್ರಸ್ತುತವಲ್ಲ!


ಇದುವರೆಗೆ ನಾನು ಕೆಲವು ಸಮಸ್ಯೆಗಳನ್ನು ಸೂಚಿಸಿದ್ದೇನಷ್ಟೆ; ಪರಿಹಾರೋಪಾಯಗಳನ್ನು ಹೇಳಿಲ್ಲ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸರ್ವಜ್ಞನೂ ಅಲ್ಲ, ಧನ್ವಂತರಿಯೂ ಅಲ್ಲ. ಭಾಷೆ, ಸಾಹಿತ್ಯಗಳಿಗೆ ನೇರವಾಗಿ ಸಂಬಂಧಿಸಿದ ಕೆಲವಂಶಗಳನ್ನೂ ಪ್ರಸ್ತಾಪಿಸಿದ್ದೇನೆ, ಬದುಕಿನ ದೃಷ್ಟಿಯಿಂದ. ಚರ್ಚೆ ನಡೆಯಲಿ.

ಕನ್ನಡಿಗರು ಏಳಿಗೆ ಹೊಂದಬೇಕು ಮಾತ್ರವಲ್ಲ, ದ.ರಾ. ಬೇಂದ್ರೆಯವರ ಪ್ರವಾದಿ ವಾಣಿ ದಿಟವಾಗಲೆಂದೂ ಹಾರೈಸಬೇಕು: "ಜಗದೇಳಿಗೆಯಾಗುವುದಿದೆ, ಕರ್ನಾಟಕದಿಂದೆ!"

ಈ ಕನ್ನಡ ಜಾಗೃತಿ ಜಾತ್ರೆಗೆ ಜಯವಿರಲಿ.

ಎಲ್ಲರಿಗೂ ನಮಸ್ಕಾರ.

ಜಯ ಹೇ ಕರ್ನಾಟಕ ಮಾತೆ!



ಕೋ. ಚೆನ್ನಬಸಪ್ಪ

೭೯ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೯, ೧೦, ೧೧ ಫೆಬ್ರವರಿ ೨೦೧೩ ಸ್ಥಳ : ಬಿಜಾಪುರ

ಪರಿಚಯ

ಡಾ|| ಕೋ. ಚನ್ನಬಸಪ್ಪ

ಶಿಕ್ಷಣ : ನ್ಯಾಯಾಧೀಶರಾಗಿ, ಸಾಹಿತಿಗಳಾಗಿ, ಚಳುವಳಿಕಾರರಾಗಿ ನಾಡು ನುಡಿಗೆ ಸೇವೆ ಸಲ್ಲಿಸಿರುವ ಕೋ. ಚೆನ್ನಬಸಪ್ಪ ಅವರು ಬಳ್ಳಾರಿ ಜಿಲ್ಲೆಯವರು. ಬಸಮ್ಮ-ವೀರಣ್ಣ ದಂಪತಿಗಳ ಸುಪುತ್ರರಾಗಿ ೨೭-೨-೧೯೨೨ರಂದು ಜನಿಸಿದರು. ತವರೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಕಾಲೇಜು ಶಿಕ್ಷಣವನ್ನು ಅನಂತಪುರದಲ್ಲಿ ಪಡೆಯುತ್ತಿದ್ದಾಗ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಶಾಲೆಗೆ ತಿಲಾಂಜಲಿಯಿತ್ತರು. ಅನಂತರ ವಿದ್ಯಾಭ್ಯಾಸ ಮುಂದುವರೆಸಿ ಬಿಎ ಲಾ ಪದವಿಯನ್ನು ಎಂ. ಎ. ಪದವಿಯನ್ನು ಗಳಿಸಿದರು.

ಉದ್ಯೋಗ : ೧೯೪೬ರಲ್ಲಿ ಬಳ್ಳಾರಿ ಜಿಲ್ಲೆಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಕೀಲರಾಗಿ ವೃತ್ತಿಜೀವನ ಪ್ರಾರಂಭಿಸಿದ ಇವರು ೧೯೬೫ರಲ್ಲಿ ಡಿಸ್ಟ್ರಿಕ್ಟ್ ಸೆಷನ್ ಜಡ್ಜ್ ಆಗಿ ಅಮೂಲ್ಯ ಸೇವೆ ಸಲ್ಲಿಸಿದರು.

ಸೇವೆ : ಹಲವಾರು ಸಂಘ ಸಂಸ್ಥೆಗಳಲ್ಲಿ ಸಮಾಜಮುಖಿ ಸೇವೆ ಸಲ್ಲಿಸಿದ್ದಾರೆ. ಶ್ರೀ ರಾಮಕೃಷ್ಣ ವಿವೇಕಾನಂದ ಕೇಂದ್ರದ ಸ್ಥಾಪಕ ಕಾರ್ಯದರ್ಶಿಯಾಗಿದ್ದಾರೆ. ಕರ್ನಾಟಕದ ಅರವಿಂದಾಶ್ರಮದ ಶಾಖಾ ಪ್ರಾರಂಭಕ್ಕೆ ಕಾರಣಕರ್ತರಾಗಿದ್ದಾರೆ. ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲಿ ಉಳಿಸಲು ಕರ್ನಾಟಕ ಏಕೀಕರಣ ಸಮಿತಿಯ ಸದಸ್ಯರಾಗಿ ದುಡಿದಿದ್ದಾರೆ. ಹಲವಾರು ಕಾರ್ಮಿಕ ಸಂಘಗಳ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ.

ಮನ್ನಣೆ : ಇವರ ಸೇವೆಯನ್ನು ಮೆಚ್ಚಿ ಆತ್ಮೀಯರೆಲ್ಲರು ಸೇರಿ ೧೯೮೮ರಲ್ಲಿ ಕೋಚೆ ಯಾರು ಏನು ಎಂತು? ಎಂಬ ಅಭಿನಂದನಾಗ್ರಂಥ ವನ್ನು ಅರ್ಪಿಸಿದ್ದಾರೆ. ೭೯ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ೨೦೧೫ರಲ್ಲಿ ಆಯ್ಕೆಯಾಗಿದ್ದಾರೆ. ಸ.ಸ. ಮಾಳವಾಡ ಪ್ರಶಸ್ತಿ, ಸಂ. ಶಿ. ಭೂಸನೂರಮಠ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಇತ್ಯಾದಿ ಇವರಿಗೆ ದೊರೆತಿದೆ.

ಸಾಹಿತ್ಯ ಸೇವೆ : ನ್ಯಾಯಾಲಯದ ಸತ್ಯಕಥೆಗಳು (ಅಂಕಣ ಬರಹ) ಹಿಂದಿರುಗಿ ಬರಲಿಲ್ಲ. ರಕ್ತತರ್ಪಣ, ಬೇಡಿ ಕಳಚಿತು ಮೊದಲಾದ ೯ ಕಾದಂಬರಿಗಳನ್ನು ಅರವಿಂದ, ಬಸವಣ್ಣ ಮೊದಲಾದ ೮ ಜೀವನ ಚರಿತ್ರೆಗಳನ್ನು ಪ್ರಾಣಪಕ್ಷಿ, ಜೀವತೀರ್ಥ ಮೊದಲಾದ ೫ ಕವನ ಸಂಕಲನಗಳನ್ನು ಶ್ರೀರಾಮಾಯಣ ದರ್ಶನ ಕಾವ್ಯ ಸಮೀಕ್ಷೆ, ಕುವೆಂಪು ವೈಚಾರಿಕತೆ ಮೊದಲಾದ ವಿಮರ್ಶಾ ಕೃತಿಗಳನ್ನು ನನ್ನ ಮನಸ್ಸು, ನನ್ನ ನಂಬುಗೆ ಎಂಬ ಆತ್ಮಕಥೆಯನ್ನು ರಚಿಸಿದ್ದಾರೆ.

ಕೋ. ಚೆನ್ನಬಸಪ್ಪ

೭೯ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

೨೦೧೩

ಸನ್ಮಾನ್ಯರಾದ ಪರಮಪೂಜ್ಯ ಜ್ಞಾನದಾಸೋಹಿ ಶ್ರೀ ಸಿದ್ಧೇಶ್ವರ ಸ್ವಾಮಿಗಳೇ... ರಾಜ್ಯ ಸರ್ಕಾರದ ಮಾನ್ಯ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರೆ... ಕರ್ನಾಟಕ ರಾಜ್ಯ ಸರ್ಕಾರದ ಜಿಲ್ಲಾ ಉಸ್ತುವಾರಿಗಳು ಹಾಗೂ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಸ್.ಕೆ. ಬೆಳ್ಳುಬ್ಬಿ ಅವರೆ... ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ ಅವರೆ... ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ ಅವರೆ... ನಿಕಟಪೂರ್ವ ಗಂಗಾವತಿ ೭೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಸಿ.ಪಿ.ಕೆ. ಅವರೆ... ವಿರೋಧ ಪಕ್ಷದ ನಾಯಕ ಮಾನ್ಯ ಶ್ರೀ ಸಿದ್ಧರಾಮಯ್ಯ ಅವರೆ... ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಶ್ರೀ ಎಸ್.ಆರ್. ಪಾಟೀಲರೆ... ಲೋಕಸಭಾ ಸದಸ್ಯ ಮಾನ್ಯಶ್ರೀ ಜಿಗಜಿಣಗಿ ಅವರೆ... ಡಾ. ಬರಗೂರು ರಾಮಚಂದ್ರಪ್ಪನವರೆ... ಸನ್ಮಾನ್ಯ ಶಾಸಕ ಮಹನೀಯರೆ... ವೇದಿಕೆ ಮೇಲೆ ಆಸೀನರಾದ ಎಲ್ಲ ಮಹನೀಯರೆ... ವೇದಿಕೆ ಮುಂದೆ ಕುಳಿತಿರುವ ಕರ್ನಾಟಕದ ಮೂಲೆ ಮೂಲೆಯಿಂದ ಬಂದಿರುವ ತಾಯಂದಿರೆ, ಅಕ್ಕತಂಗಿಯರೆ, ಬಂಧುಗಳೆ ಮತ್ತು ವಿಜಾಪುರ ಶಹರದ ನಾಗರಿಕ ಬಂಧುಗಳೆ.. ನಿಮಗೆ ನಮಸ್ಕಾರಗಳು.

ತಾಯಿ ಸ್ಮರಣೆ – ಬಸವಸ್ತುತಿ

ಕಾವ್ಯ ರಚನೆಯ ಪ್ರಾರಂಭದಲ್ಲಿ ಕವಿ ತನ್ನ ಇಷ್ಟದೈವ ಪ್ರಾರ್ಥನೆ ಮಾಡುವಂತೆ, ನನಗೆ ಜನ್ಮ ಕೊಟ್ಟ ತಾಯಿಗೆ ನಮಸ್ಕರಿಸಿ ಮುಂದಿನ ಮಾತನಾಡುತ್ತೇನೆ.

ನಾನು ಗರ್ಭದಲ್ಲಿ ಭ್ರೂಣಾವಸ್ಥೆಯಲ್ಲಿರುವಾಗಲೆ ಬಸವನಾಮ ಮಂತ್ರವನ್ನು ಪ್ರಧಾನ ಮಾಡಿದ ನನ್ನ ಹಡೆದ ತಾಯಿಗೆ ಶರಣು ಶರಣಾರ್ಥಿ. ಮಂತ್ರಮಯಿ ಬಸವಣ್ಣ ಹುಟ್ಟಿದ್ದು ಈ ಪುಣ್ಯಭೂಮಿ ವಿಜಾಪುರ ಜಿಲ್ಲೆಯ ಇಂಗಳಿಗಿಯಲ್ಲಿ, ಬೆಳೆದದ್ದು ಬಸವನಬಾಗೇವಾಡಿ, ಸಾಧನಾ ಕ್ಷೇತ್ರ/ರಂಗ ಸಂಗಮನಾಥ ಕ್ಷೇತ್ರ, ಐಕ್ಯವಾದದ್ದು ಇದೇ ಜಿಲ್ಲೆಯ ಭಾಗವಾಗಿದ್ದ ಸಂಗಮ ಕ್ಷೇತ್ರ; ಅಂಥ ಪಾವನ ಕ್ಷೇತ್ರದ ಪುಣ್ಯ ಜೀವಿಗಳು ನೀವು. ಇಲ್ಲಿ ನೆರೆದಿರುವ ಬಸವನ ಬೀಡಿನ ವಾರಸುದಾರರಿಗೆಲ್ಲರಿಗೂ ಇದೋ ನನ್ನ ಸಹಸ್ರ ಶರಣು.

ಪರಿಷತ್ತು, ಅಧ್ಯಕ್ಷತೆ

ಈ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ಎಂದರೆ ಕೇವಲ ಪ್ರತಿಮೆ; ಉತ್ಸವ ವಿಗ್ರಹ. ತಾಯಿ ಸರಸ್ವತಿಯನ್ನು ಪ್ರತಿನಿಧಿಸುವ ಒಂದು ವಿಗ್ರಹ. ಈ ನಮ್ರತೆಯಿಂದ ಹುಸಿಯಲ್ಲದ ವಿನಯದಿಂದ ಈ ಸ್ಥಾನವನ್ನು ಪ್ರದಾನ ಮಾಡಿದ ಇಲ್ಲಿ ನೆರೆದ ಮಹಾ ಜನತೆಗೆ, ಸಾರಸ್ವತ ಲೋಕದ ಪ್ರತಿನಿಧಿಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ, ಅದರ ಸ್ಥಳೀಯ ಶಾಖಾ ಸಂಸ್ಥೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಈ ಸಮ್ಮೇಳನ ಸ್ವಾಗತ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಈ ಸ್ಥಾನಕ್ಕೆ ಈ ವ್ಯಕ್ತಿ ಯೋಗ್ಯ ಎಂದು ಪರಿಗಣಿಸಿದ ಸಹೃದಯರಿಗೆ ಶರಣಾರ್ಥಿ.

ಗುರುಸ್ತುತಿ

ಈ ಸ್ಥಾನ 'ಸಾರಸ್ವತ ಯೋಗ' ಸಾಧಕರಿಗೆ ಸಲ್ಲುವ ಒಂದು ಸಾಂಕೇತಿಕ ಮರ್ಯಾದೆ. ಆ ಸಾರಸ್ವತ ಯೋಗ ಸಾಧನೆಗೆ ನನಗೆ ದೀಕ್ಷೆ ಕೊಟ್ಟ ದೀಕ್ಷಾ ಗುರುಗಳ 'ಗುರುಸ್ತುತಿ' ಮಾಡಲೇಬೇಕಾದ್ದು ನನ್ನ ಕರ್ತವ್ಯ. ಆ ದೀಕ್ಷಾ ಗುರುಗಳು ಇದೇ ಜಿಲ್ಲೆಯಲ್ಲಿದ್ದು ಕನ್ನಡಿಗರ ಸಾರಸ್ವತ ಶಕ್ತಿ ಕುಂಡಲಿಯನ್ನು ಜಾಗ್ರತಗೊಳಿಸಿದ ನನ್ನ ದೀಕ್ಷಾ ಗುರು, ಬಸವಭಕ್ತಾಗ್ರಣಿ ಶ್ರೀ ಹರ್ಡೇಕರ್ ಮಂಜಪ್ಪನವರು. ನನ್ನ ಬಾಳ ದೇಗುಲದ ಭದ್ರ ಬುನಾದಿ ಬಸವ ತಂದೆ. ಆ ಬುನಾದಿಯ ಮೇಲೆ ಎದ್ದು ನಿಂತ ದೇಗುಲದ ಶಿಖರ ಮಹರ್ಷಿ ಶ್ರೀಅರವಿಂದರು ಮತ್ತು ಶ್ರೀಮಾತಾಜಿ. ಆ ಜಗದ್ವಿಭೂತಿಗಳ ಕರ್ನಾಟಕದ ಪ್ರಥಮ ಭಕ್ತಾಗ್ರೇಸರು ಇದೇ ಜಿಲ್ಲೆಯ ಹಲಸಂಗಿ ಚೆನ್ನಮಲ್ಲಪ್ಪನವರು (ಮಧುರ ಚೆನ್ನ). ಶ್ರೀ ಅರವಿಂದರ ಅವಶೇಷಗಳ ಸಮಾಧಿಯೂ ಹಲಸಂಗಿಯಲ್ಲಿದೆ. ಧರ್ಮಕ್ಷೇತ್ರದ ಪಾಂಚಜನ್ಯವನ್ನು ಮೊಳಗಿಸಿದ ಬಸವಣ್ಣ, ವಚನಯುಗದ ಹರಿಕಾರ. ಸಾಹಿತ್ಯಕ್ಷೇತ್ರದಲ್ಲೂ ವಿಪ್ಲವವನ್ನು ಮೊಳಗಿಸಿದ ನಿನಾದ. ಆ ವಚನಗಳ ಅಮೂಲ್ಯ ಭಂಡಾರವನ್ನು ಬಯಲಿಗೆ ತಂದ ವಚನ ಪಿತಾಮಹ ಫ.ಗು. ಹಳಕಟ್ಟಿಯವರು ವಿಜಾಪುರ ಪಟ್ಟಣದವರೇ! ಅವರಂತೆ ನಾನೂ ನ್ಯಾಯವಾದಿ. ಅವರು ಮೆಟ್ಟಿದ ನೆಲ(ಜಿಲ್ಲಾ ನ್ಯಾಯಾಲಯ) ನನ್ನ ಮಟ್ಟಿಗೆ ಪುಣ್ಯಕ್ಷೇತ್ರ, ಇನ್ನು ಅದಕ್ಕಿಂತ ಮಹತ್ವದ ನನ್ನ ಜೀವನದ ಚಿರಸ್ಮರಣೀಯ ಘಟನೆ ಎಂದರೆ ಯೋಗಸಿದ್ಧಿಯಾದದ್ದೂ ಈ ಪುಣ್ಯಶಹರ ವಿಜಾಪುರದಲ್ಲಿ !! ನನ್ನ ಸಾರಸ್ವತ ಯೋಗ ಸಾಧನೆಯ ಸಿದ್ಧಿ ಶ್ರೀಅರವಿಂದ ಮಹರ್ಷಿಗಳ ಜಗದ್ಭವ್ಯ ಮೇರುಕೃತಿ Life Divine ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ಮುಗಿಸಿದ್ದು ಇಲ್ಲಿಯ ಜಿಲ್ಲಾ ನ್ಯಾಯಾಧೀಶರ ಅಧಿಕೃತ ನಿವಾಸದ ಒಂದು ಪ್ರಶಾಂತ ನಿರ್ಮಲ ಪವಿತ್ರ ಕೊಠಡಿಯಲ್ಲಿ, ಆ ಜಾಗ, ಶ್ರೀಅರವಿಂದರ ಧ್ಯಾನ ಮಾಡುತ್ತಾ ನಾನು ಸಿದ್ಧಿ ಪಡೆದ ಸ್ಥಾನ ಈ ಮಹಾನಗರಿಯಲ್ಲೆ. ನನ್ನ ಸಾರಸ್ವತ ಯೋಗ ಸಿದ್ಧಿಗೆ ತಾಯಿ ಸರಸ್ವತಿ ಕರುಣಿಸಿದ ಫಲ ಈ ಸಮ್ಮೇಳನಾಧ್ಯಕ್ಷತೆ ಎಂಬುದಾದರೆ, ಈ ನನ್ನ ಯೋಗಕ್ಕೆ ಮಾತೃ ಸ್ಥಾನವೂ, ಸಾಧನ ರಂಗವೂ, ಸಿದ್ಧಿಕ್ಷೇತ್ರವೂ ಆದ ವಿಜಾಪುರ ಜಿಲ್ಲೆಯಲ್ಲೆ ಈ ಶಹರದಲ್ಲೆ ಈ ಗೌರವ, ಮರ್ಯಾದೆ, ನಡೆಯುತ್ತಿರುವುದು ಯೋಗಾಯೋಗಾವಲ್ಲದೆ ಮತ್ತೇನು ?

ಸಾರಸ್ವತ ಯೋಗ ಪ್ರವೇಶ

ನಾನು ಈ ಸಾರಸ್ವತ ಯೋಗಕ್ಕೆ ಕಾಲಿರಿಸಿದ್ದು ಕೇವಲ ಆಕಸ್ಮಿಕವೆಂಬಂತೆ ನನಗನಿಸುತ್ತದೆ. ಯಾಕೆಂದರೆ ನಾನು ಕನ್ನಡ ಇಂಗ್ಲಿಷ್ ಸಾಹಿತ್ಯವನ್ನು ಪ್ರೌಢಶಾಲೆಯಲ್ಲಾಗಲಿ, ಕಲಾ ಮಹಾವಿದ್ಯಾಶಾಲೆಯಲ್ಲೇ ಆಗಲಿ ಐಚ್ಛಿಕ ವಿಷಯವಾಗಿ ಅಭ್ಯಾಸ ಮಾಡಿದವನಲ್ಲ. ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ನ್ಯಾಯಶಾಸ್ತ್ರಗಳನ್ನು ಕಲಿತವನು. ಕಾವ್ಯ ಮೀಮಾಂಸೆಯನ್ನಾಗಲಿ, ಛಂದಸ್ಸು, ಅಲಂಕಾರಶಾಸ್ತ್ರವನ್ನಾಗಲಿ, ವ್ಯಾಕರಣವನ್ನಾಗಲಿ ಗುರುಮುಖೇನ ಕಲಿತವನಲ್ಲ. ಆದರೂ ನಾನು 'ಶ್ರೀರಾಮಾಯಣ ದರ್ಶನಂ ಮಹಾಕಾವ್ಯ'ದ ಸಮೀಕ್ಷೆಯನ್ನು ಬರೆದೆ ! ಮಹಾಕವಿ ಶ್ರೀರಾಮಾಯಣ ದರ್ಶನಂ ಕಾವ್ಯಕರ್ತೃ ಕುವೆಂಪು ಸಮೀಕ್ಷೆಯ ಹಸ್ತಪ್ರತಿಯನ್ನು ಅವಲೋಕಿಸಿ ಅದನ್ನು ನನಗೆ ಹಿಂದಿರುಗಿಸುವಾಗ "ಒಳ್ಳೆಯ ಕೆಲಸ ಮಾಡಿದ್ದೀರಿ, ಯಾವ ಶಕ್ತಿ ನನ್ನಿಂದ ಕಾವ್ಯ ರಚನೆ ಮಾಡಿಸಿತೋ ಅದೇ ಶಕ್ತಿ ಇನ್ನೊಂದು ಪ್ರಮಾಣದಲ್ಲಿ ನಿಮ್ಮಿಂದ ಈ ಕೆಲಸ ಮಾಡಿಸಿದೆ". ಎಂದು ಆಶೀರ್ವದಿಸಿದರು. ಈ ಮಾತು ಅಕ್ಷರಶಃ ನೂರಕ್ಕೆ ನೂರು ಸತ್ಯ ! 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' ಎಂಬ ಮಹಾಭಾರತ ಕರ್ತೃ ನಾರಾಯಣಪ್ಪನ ಮಾತು ಸತ್ಯಸ್ಯ ಸತ್ಯ ! ಆ ಮಹಾಕವೀಶ್ವರರೀರ್ವರಿಗೆ ಪ್ರಣಾಮಗಳು.

ಶರಣ ಸಂದೇಶ

ನಾನು ಸಾಹಿತ್ಯ ಕ್ಷೇತ್ರಕ್ಕೆ ಕಾಲಿರಿಸಿದ್ದು, ಸಾರಸ್ವತ ಯೋಗ ಸಾಧನೆ ಮಾಡಿದ್ದು ಆಕಸ್ಮಿಕ ಎಂದೆ. ಮೇಲ್ನೋಟಕ್ಕೆ ಹಾಗೆ ಕಾಣುತ್ತದೆ. ಆದರೆ ಅದು ಪೂರ್ಣ ಸತ್ಯವಾಗಿರಲಾರದು. ವ್ಯಷ್ಟಿ ಜೀವನದಲ್ಲಾಗಲಿ ಸಮಷ್ಟಿ ಜೀವನದಲ್ಲಾಗಲಿ ಯಾವುದೂ ಅಕಸ್ಮಾತ್ ಘಟಿಸಲಾರದು. ನಾನು ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶಿಸಿದ್ದಕ್ಕೆ ಕಾರಣ ತಿಳಿಯದು. ನಾನು ಪ್ರೌಢ ಶಾಲೆಯಲ್ಲಿದ್ದಾಗ ಒಂದು ದಿನ ಹರ್ಡೇಕರ್ ಮಂಜಪ್ಪನವರು ಆಲಮಟ್ಟಿಯ ತಮ್ಮ ಆಶ್ರಮದಿಂದ ಪ್ರಕಟಿಸುತ್ತಿದ್ದ 'ಶರಣ ಸಂದೇಶ' ವಾರ ಪತ್ರಿಕೆಯ ಒಂದು ಸಂಚಿಕೆ ಕಣ್ಣಿಗೆ ಬಿತ್ತು. ಯಾವ ಘನೋದ್ದೇಶವಿಲ್ಲದೆ ಆ ಪತ್ರಿಕೆಯಲ್ಲಿ ಬಂದಿದ್ದ ವೀರಸಾವರಕರರ ಜೀವನ ವೃತ್ತಾಂತವನ್ನು ಓದಿದೆ. ಅದನ್ನು ಓದಿದ ಮೇಲೆ ಆ ರಾತ್ರಿ 'ವೀರ ಸಾವರಕರ' ಎಂಬ ಒಂದು ಕವಿತೆಯನ್ನು ಸರಳ ರಗಳೆ ಛಂದಸ್ಸಿನಲ್ಲಿ ಬರೆದೆ. ಹರಿಹರ ಕವಿಯ ಬಗ್ಗೆ ನಾಡ ಹಬ್ಬದಲ್ಲಿ ಭಾಷಣ ಮಾಡಿದವರ ಭಾಷಣ ಕೇಳಿ ಆ ಮಹಾಕವಿ ಸರಳರಗಳೆ ಪಿತಾಮಹ ಎಂಬುದನ್ನು ಕೇಳಿದ್ದೆನೇ ಹೊರತು ಅದರ ಲಕ್ಷಣಗಳನ್ನು ಓದಿ ತಿಳಿದಿರಲಿಲ್ಲ. ಅದನ್ನು ಕಿವಿಯಾರೆ ಕೇಳಿದ್ದೆನಾಗಿ ಅದರ ಲಯ ಹೇಗೊ ನನ್ನಲ್ಲಿ ತನಗೆ ತಾನೆ ಮೂಡಿದ್ದಿರಬಹುದು. ಕವಿತೆಯನ್ನು ಬರೆದು ಸಂಪಾದಕರಿಗೆ ಕಳಿಸಿದೆ. ಒಂದೆರಡು ವಾರಗಳ ಬಳಿಕ ಕವಿತೆ ಪ್ರಕಟವಾಯಿತು. ನನಗಾದ ಆಶ್ಚರ್ಯ, ಸಂತೋಷ, ಸಂಕೋಚ ಹೇಳಲಾರೆ. ನನಗಾಗ ಹದಿನಾರು ವರ್ಷ ವಯಸ್ಸು ! ಧೈರ್ಯ ಬಂತು. ನಿರ್ಭಯವಾಗಿ ಕವಿತಾ ರಚನೆ ಮಾಡತೊಡಗಿದೆ.

ಹುಲುಸಾಗಿ ಅಲ್ಲ, ಯಾವಾಗಲೊ ಒಮ್ಮೊಮ್ಮೆ. ನಾನು ಕಾಲೇಜಿಗೆ ಸೇರಿದ ಮೇಲೆ ಇಂಟರ್ ಮೀಡಿಯೇಟ್ ತರಗತಿಗೆ ಮದ್ರಾಸ್ ವಿಶ್ವವಿದ್ಯಾಲಯ ಗೊತ್ತುಪಡಿಸಿದ್ದ ಕನ್ನಡ ಪದ್ಯ ಪಠ್ಯಪುಸ್ತಕಗಳನ್ನು ಓದಲೇ ಬೇಕಾಗಿತ್ತು. ಆ ಪಠ್ಯ ಗ್ರಂಥದ ವೈಶಿಷ್ಟ್ಯವೆಂದರೆ ಬಿ.ಎ. ತರಗತಿ ಮುಗಿಸುವ ವೇಳೆಗೆ ಪಂಪ, ರನ್ನ, ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ಷಡಕ್ಷರಿ, ಲಕ್ಷ್ಮೀಶ, ಜಗನ್ನಾಥ ಪಂಡಿತ, ಮುದ್ದಣ, ಮುಂತಾದವರ ಕಾವ್ಯಗಳ ಒಂದೊಂದು ಸಂಧಿಯ ಸ್ಥೂಲ ಪರಿಚಯ ವಿದ್ಯಾರ್ಥಿಗಳಿಗೆ ಆಗುತ್ತಿತ್ತು. ಜೊತೆಗೆ ಆಧುನಿಕ ಕನ್ನಡ ಕವಿತಾ ಸಂಗ್ರಹಗಳು, ಕಥೆ, ಕಾದಂಬರಿ, ಪುಸ್ತಕಗಳು, Detailed, non-detailed ಪಠ್ಯಪುಸ್ತಕಗಳಿದ್ದವು. ನನಗೆ ನೆನಪಿರುವ ಮಟ್ಟಿಗೆ ಗೋವಿಂದ ಪೈಗಳ "ಗಿಳಿವಿಂಡು" ಕವನ ಸಂಗ್ರಹ, ಹೊಸಬೆಟ್ಟು ರಾಮರಾಯರ ಉತ್ಕಲ ವಿಜಯ, ಕ್ಷೀರಸಾಗರ (ಬೆಳಗೆರೆ ಸೀತಾರಾಮಶಾಸ್ತ್ರಿ)ರ ನೆಪೋಲಿಯನ್ ಬೋನಪಾರ್ಟೆ ಕಾದಂಬರಿ ಮುಂತಾದ ಗದ್ಯ ಸಾಹಿತ್ಯದ ಪರಿಚಯ ಬಿ.ಎ., ಬಿ.ಎಸ್ಸಿ., ಪದವಿ ಪಡೆದ ವಿದ್ಯಾರ್ಥಿಗಳಿಗೆ ಆಗುತ್ತಿತ್ತು. ಪಠ್ಯಪುಸ್ತಕಗಳಿಂದ ಆಯಾ ಕವಿಗಳ ಕಾವ್ಯ ಮಾಧುರ್ಯವನ್ನು ರುಚಿ ಸವಿದ ನಾನು ಅವರ ಬಗ್ಗೆ ಬರೆದ ಪ್ರಶಸ್ತಿ ಗ್ರಂಥಗಳನ್ನು ಓದಿದೆ. ಅವರ ಇಂತಹ ಕಾವ್ಯಗಳನ್ನು ಗುರುಗಳ ಸಹಾಯವಿಲ್ಲದೆ ಕಷ್ಟಪಟ್ಟು ಓದಿದೆ. ಇಂಥ ಪಠ್ಯ ಪುಸ್ತಕಗಳನ್ನು ಈಗ ನೋಡಿಲ್ಲ. ಕನ್ನಡವನ್ನು ಪ್ರಾಥಮಿಕ ಶಾಲೆಗಳಲ್ಲಿಯೆ ಕಲಿಸದ ಶಿಕ್ಷಣ ನೀತಿಯಲ್ಲಿ ಕಾವ್ಯಾಭ್ಯಾಸಕ್ಕೆ ದಾರಿಯೆಲ್ಲಿದೆ? ಅದನ್ನು ಮರೆತುಬಿಡಿ !!

ಹೀಗೆ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ದೀಕ್ಷೆ ಪಡೆದ ಮೇಲೆ ಅನಂತಪುರದಲ್ಲಿದ್ದಾಗ ಕವಿತಾ ರಚನೆ ಮಾಡುತ್ತಿದ್ದೆ. ಅವುಗಳನ್ನು 'ಕರ್ಮವೀರ' ವಾರ ಪತ್ರಿಕೆಗೆ ಕಳಿಸುತ್ತಿದ್ದೆ. ಆಶ್ಚರ್ಯದ ಸಂಗತಿ ಎಂದರೆ ನಾನು ಬರೆದ ಕವಿತೆಗಳು ಪ್ರಕಟವಾಗುತ್ತಿದ್ದವು. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಆಗಾಗ ಹತ್ತೊ, ಹನ್ನೆರಡೋ ರೂಪಾಯಿ ಸಂಭಾವನೆಯನ್ನು ಮನಿ ಆರ್ಡರ್ ಮೂಲಕ ಕಳಿಸುತ್ತಿದ್ದರು !! ನನ್ನ ಕಾವ್ಯ ರಚನಾ ಶಕ್ತಿಯ ಮರಿ ಹಕ್ಕಿಯ ರೆಕ್ಕೆಗಳು ಬೆಳೆಯಲು ಕಾರಣವಾಯಿತು. ಅವರಿಗೆ ಕೃತಜ್ಞತೆಗಳು.

ಕನ್ನಡ ಪಠ್ಯಪುಸ್ತಕಗಳು

ಕಳೆದ ಶತಮಾನದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ಪಠ್ಯ ಪುಸ್ತಕಗಳ ಬಗ್ಗೆ ಈ ಶತಮಾನದಲ್ಲಿ ಕರ್ನಾಟಕ ರಾಜ್ಯದ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟು ಪ್ರಸ್ತುತ ಎಂಬ ಸಂದೇಹ ಉಂಟಾಗಬಹುದು. ಆ ಕಾಲದಲ್ಲಿ ತೆಲುಗರು ತಮಿಳರು ಬಹುಸಂಖ್ಯಾತರಿದ್ದ ಆ ರಾಜ್ಯದಲ್ಲಿ ಅತ್ಯಂತ ಅಲ್ಪ ಸಂಖ್ಯಾತರಾಗಿದ್ದ ಕನ್ನಡ ವಿದ್ಯಾರ್ಥಿಗಳಿಗಾಗಿ ಎಂಥ ಉತ್ತಮ ಪಠ್ಯಪುಸ್ತಕಗಳನ್ನು ರಚಿಸುತ್ತಿದ್ದರೆಂಬುದನ್ನು ಇಂದಿನ ಕನ್ನಡ ಪಂಡಿತರು, ಸಾಹಿತಿಗಳು ತಿಳಿಯಬೇಕು. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ ವಿಜ್ಞಾನ ಪದವೀಧರರಿಗೂ ಕನ್ನಡ ಸಾಹಿತ್ಯದ ಸೊಬಗು, ಔನ್ನತ್ಯ ಅದರಿಂದ ಎಂಥ ಹೃದಯ ಸಂಸ್ಕಾರ ಎಂಬುದು ವೇದ್ಯವಾಗುತ್ತದೆ. ಪಂಪ

ಮಹಾಕವಿ 'ಮನುಜಕುಲ ತಾನೊಂದೆ ವಲಂ' ಎಂದು ಹೇಳಿದ ಆ ನಿತ್ಯ ಸತ್ಯ ಇಂದೂ ಪ್ರಸ್ತುತವೋ, ಅಗತ್ಯವೋ ಅಲ್ಲವೊ? ಈ ಯುಗದ ಮಹಾಕವಿ ಕುವೆಂಪು ಹೇಳಿದ ವಿಶ್ವಮಾನವ ಸಂದೇಶ ಪ್ರಸ್ತುತವೊ ಅಲ್ಲವೋ ? ನಮ್ಮ ನಾಡಿನಲ್ಲಿ ಜಾತಿ-ಜಾತಿಗಳಲ್ಲಿ ದೇಶದ ರಾಜ್ಯ ರಾಜ್ಯಗಳಲ್ಲಿ ಪ್ರಪಂಚದ ವಿವಿಧ ದೇಶಗಳಲ್ಲಿ ದ್ವೇಷದ ಕಿಚ್ಚುಹೊತ್ತಿರುವ ಈ ಹೊತ್ತಿನಲ್ಲಿ ಮನುಜ ಕುಲ ತಾನೊಂದೆ ವಲಂ ಎಂಬ ವಾಣಿ ಮತ್ತೊಮ್ಮೆ ಎಲ್ಲರ ಕಿವಿಯ ಮೇಲೆ ಬೀಳಬೇಕು; ಹೃದಯ ಪಕ್ವವಾಗಿ ಜಗತ್ತೆಲ್ಲ ಪ್ರೀತಿಯಿಂದ ಶಾಂತಿಯಿಂದ ಬದುಕಬೇಕೆಂಬ ಸಂದೇಶ ಪ್ರಸ್ತುತವಲ್ಲವೇ ? ಇಲ್ಲಿ ನೆರೆದಿರುವ ಸಾಹಿತಿಗಳು ಸಮಾಜದ ಗುರುಗಳಾಗಿ ಶ್ರೀಸಾಮಾನ್ಯರು ಸತ್ಪಥದಲ್ಲಿ ನಡೆಯಲು ಸಹಾಯಕವಾಗುವುದಿಲ್ಲವೇ? ಜನ ವಿಜ್ಞಾನಿಗಳಾಗಿ ಐಹಿಕ ಅಭ್ಯುದಯ ಸಾಧಿಸುವ ಅಗತ್ಯ ಇರುವಂತೆ, ಆಧ್ಯಾತ್ಮಿಕ ತಳಹದಿಯ ಮೇಲೆ ಮತವಲ್ಲದ ಧರ್ಮದ ಭದ್ರ ಬುನಾದಿಯ ಮೇಲೆ ನವ ಮಾನವ ನಿರ್ಮಾಣಕ್ಕೆ ಉತ್ತಮ ಸಾಹಿತ್ಯ ಈಗ ಹೆಚ್ಚು ಅಗತ್ಯವಿದೆ. ವಿಜ್ಞಾನವನ್ನೇ ಆರಾಧಿಸುವ ಇಂದಿನ ಶಿಕ್ಷಣ ಪದ್ಧತಿಯ ಪರಿಣಾಮ ಏನಾಗಿದೆ?

ಅತಿಕಾಯ ನಾಗರಿಕತೆ

ಶ್ರೀಅರವಿಂದರು ಹೇಳುವಂತೆ "ಮನುಷ್ಯನ ಮನ ಮತ್ತು ಬುದ್ಧಿಯ ಸಾಮರ್ಥ್ಯ ಸೀಮಿತ. ಅವನ ಧರ್ಮ ಬೋಧೆ ಮತ್ತು ಆಧ್ಯಾತ್ಮ ಚೇತನದ ಶಕ್ತಿಯು ಇನ್ನೂ ಸೀಮಿತ. ಆದಾಗ್ಯೂ ಅವನ ಸೀಮಿತ ಶಕ್ತಿ ಸಾಮರ್ಥ್ಯಕ್ಕೆ ನೀಗದ ಅತಿಕಾಯ ನಾಗರಿಕತೆಯೊಂದನ್ನು ನಿರ್ಮಿಸಿಕೊಂಡಿದ್ದಾನೆ. ಅದನ್ನು ಉಪಯೋಗಿಸಿಕೊಳ್ಳುವುದೂ ಅವನಿಗೆ ಕೈಮೀರಿದೆ. ಅವನ ಪ್ರಮತ್ತ ಅಹಂ ಮತ್ತು ಅದರ ಹಸಿವೆಗಳನ್ನು ತಣಿಸಲಿರುವ ಅಪಾಯಕಾರಿಯಾದ ಸೇವಕನಂತೆ ಈ ವೈಜ್ಞಾನಿಕ ಯಂತ್ರನಾಗರಿಕತೆಯ ಬೇತಾಳ ಬೆಳೆದು ನಿಂತಿದೆ. ಪ್ರಾಕೃತ ಜೀವನದ ಐಶ್ವರ್ಯ ಇಂದು ತುಂಬಿ ತುಳುಕುತ್ತಿದೆ".

'ವಿಜ್ಞಾನವು ವಿಶ್ವಶಕ್ತಿಯ ಅನೇಕ ಸಾಧ್ಯತೆಗಳನ್ನು ಮಾನವನ ಮುಂದಿಟ್ಟಿದೆ. ಅವು ಇಡೀ ವಿಶ್ವಮಾನವತೆಗೆ ಸೇರಿವೆ. ಹಾಗೆ ವಿಶ್ವಮಾನವನ ಜೀವನಸತ್ತೆಯನ್ನು ವಿಜ್ಞಾನ ಸ್ಥೂಲದೃಷ್ಟಿಯಿಂದ ಅಖಂಡವನ್ನಾಗಿ ಮಾಡಿದೆ. ಇಡೀ ಮಾನವತೆಯನ್ನೆ ಒಂದುಗೂಡಿಸಿದೆ ಈ ವಿಜ್ಞಾನ ಸಿದ್ಧಿ'.

'ಜಗತ್ತು ಇಂದು ದಕ್ಷಯಜ್ಞದ ವಿಪ್ಲವವನ್ನು ನೋಡುತ್ತಿದೆ. ಎತ್ತೆತ್ತಲೂ ಕೇವಲ ಮನಃ ಕಲ್ಪಿತ ಆದರ್ಶದ ಸಂಘರ್ಷಣೆ ವ್ಯಷ್ಟಿ ಮತ್ತು ಸಮಷ್ಟಿಗಳ ನಡುವೆ ಬರ್ಬರವಾದ ಭೀಕರ ಮತ್ತು ತೀಕ್ಷ್ಣ ಬಡಿದಾಟ, ಪ್ರಾಣಸಂವೇಗದ ಉದ್ದೀಪ್ತಕಾಮನೆಗಳ ಘೋರ ಪ್ರಮತ್ತತೆ, ವೈಯಕ್ತಿಕ ಅಥವಾ ಜನಾಂಗದ ಸ್ವಾರ್ಥ ಹೆಬ್ಬಯಕೆಗಳ ತುಮುಲ ಕೋಲಾಹಲ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳ ಕೊಳೆತು ಬೂಜುಗಟ್ಟಿದ ವಾಕರಿಕೆ ಹುಟ್ಟಿಸುವ ಅನೇಕ ವಿಚಿತ್ರ ಅದ್ಭುತ ಮೂಢ ಸಿದ್ಧಾಂತಗಳ ಚೀರಾಟ, ಕಿವಿ ಬಿರಿಯುವ ಶುಷ್ಕ ಘೋಷಣೆಗಳ ತಿರುಬೊಬ್ಬೆ ನಡೆದಿದೆ. ಈ

ಬಗೆಯ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಗಳು ಮತ್ತು ಸಿದ್ಧಾಂತಗಳೆ ಯಾವುದೊ ಮಹಾ ಆದರ್ಶಸಿದ್ಧಿಯ ಏಕಮಾತ್ರ ಸಾಧನೆಯೆಂಬ ನಂಬುಗೆಯಿಂದ ಅವುಗಳನ್ನು ಮನುಷ್ಯ ಇತರರ ಮೇಲೆ ತನ್ನ ಅಗಾಧವಾದ ಮತ್ತು ಪ್ರಬಲವಾದ ಸಾಧನಗಳಿಂದ ಬಲಾತ್ಕಾರವಾಗಿ ಹೇರಲು, ಅವುಗಳಿಗಾಗಿ ಸಾಯಲು ಮತ್ತು ಇತರರನ್ನು ಸಾಯಿಸಲು, ಮತ್ತೆ ದೌರ್ಜನ್ಯವನ್ನು ಸಹಿಸಲು ಮತ್ತು ಇತರರ ಮೇಲೆ ದೌರ್ಜನ್ಯಮಾಡಲು ಇಂದಿನ ಮನುಷ್ಯ ಹೇಸುವುದಿಲ್ಲ. ಮಾನವನ ಮನಸ್ಸು ಮತ್ತು ಪ್ರಾಣದ ವಿಕಾಸವು ಸಹಜವಾಗಿ ಮತ್ತು ಅಗತ್ಯವಾಗಿ ವಿಶ್ವವ್ಯಾಪ್ತಿಯ ಕಡೆಗೆ ಕರೆದೊಯ್ಯಲೇಬೇಕು'.(ದಿವ್ಯ **ಜೀವನ ಪುಟ–೧೩೧ಲ ಅನುವಾದ ಕೋಚೆ)**

ಆ ಗುರಿಗೆ ಕರೆದೊಯ್ಯಲು ಬರಹಗಾರರಿಂದ ಅರ್ಥಾತ್ ಎಲ್ಲ ರೀತಿಯ ಬರಹಗಾರರಿಂದ ಕವಿಗಳ, ಕಾದಂಬರಿಕಾರರ, ಕತೆಗಾರರ, ಕೊನೆಗೆ ಪತ್ರಕರ್ತರಿಂದ ಹೇಗೆ ಸಾಧ್ಯ ? ಅದೀಗ ನಮ್ಮ ಮುಂದಿರುವ ಸಮಸ್ಯೆಗಳ ಮಹಾ ಸಮಸ್ಯೆ.

ಸಾಹಿತಿ ಏಕೆ ಬರೆಯುತ್ತಾನೆ?

ಹರಿಹರನ ಮಾತು

ಸಾಹಿತಿ ಏನು ಬರೆಯಬೇಕು ಹೇಗೆ ಬರೆಯಬೇಕು ಎಂಬ ಉಪಪ್ರಶ್ನೆಗಳಿಗೆ ಕೊಡುವ ಉತ್ತರವನ್ನು ಅವಲಂಬಿಸಿದೆ. ಕವಿ ಏಕೆ ಬರೆಯುತ್ತಾನೆ ಎಂಬುದು ಮೊದಲ ಪ್ರಶ್ನೆ.

ಹಿಂದಿನ ಕಾಲದ ಲಾಕ್ಷಣಿಕರು ಕಾವ್ಯ ರಚನೆಯ ಉದ್ದೇಶವನ್ನು ಹೀಗೆ ಹೇಳಿದ್ದಾರೆ.

ಕಾವ್ಯಂ ಯಶಸ್ಯೇರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ।
ಸದ್ಯಃ ಪರನಿವೃತಯೇ ಕಾಂತಾ ಸಂಮಿತತಯೋಪದೇಶಯುಜೇ॥

ಹನ್ನೊಂದನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯಾಕಾಶದಲ್ಲಿ ಮೂಡಿಬಂದ ಮಹಾಕ್ರಾಂತಿಕಾರಿ ಮಹಾಕವಿ ಉದ್ದೇಶಪೂರ್ವಕವಾಗಿಯೇ ನಾನು ಮಹಾಕವಿ ಎಂದು ಕರೆಯುತ್ತಿರುವ ಹಂಪೆಯ ಹರಿಹರದೇವ ಹೀಗೆ ಹೀಗಳೆದಿದ್ದಾನೆ:–

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ
ತನ ತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು
ಅನವರತಂ ಪೊಗಳ್ದು......................."

ಕೆಟ್ಟು ಹೋಗದ ಹರಿಹರ ಮಹಾಕವಿಯಂಥವರಿಗೆ ಆಳುವವರಿಂದ–ಈಗಿನ ಪರಿಸ್ಥಿತಿಯಲ್ಲಿ, ಸ್ಥಾಪಿತ ವ್ಯವಸ್ಥೆಯಲ್ಲಿ– 'ಗೌರವ' ಅರ್ಥಾತ್ ಸರ್ಕಾರದಿಂದ ಬಿರುದು ಬಾವಲಿಗಳನ್ನು, ಚಿನ್ನದ ಕಡಗ ಪಡೆಯಲು ಸಕಲ ಬ್ರಹ್ಮಾಂಡದ ಸೃಷ್ಟಿ ಕರ್ತನಾದ ಬ್ರಹ್ಮನರಾಣಿ ಮಹಾಮಾತೆಯ ಚತುರ್ಮುಖಗಳಲ್ಲಿ ಒಂದಾದ ಸರಸ್ವತಿ ಪೀಠವಾದ ಭಗವಂತನ 'ಬೈಟಕ್ ಖಾನೆ' ಕವಿಯ ಮಸ್ತಕವನ್ನು "ಈ ನೃಪನೆಂಬ

ಹೆಸರೊಡನೆ ಮುಡಿಯೊಂದ ನಾಂತೊಡನೆ ಕಳ್ಳರೊಡೆಯ ಕೃಪೆಯ ಮೂರ್ತಿಗೆ ಮಣಿಸುತ್ತಿದ್ದ" ಸಾಂಪ್ರದಾಯಿ ಸಾಹಿತಿಗಳನ್ನು ಅನಾಮತ್ತಾಗಿ ಗುಡಿಸಿ ಸಾರಿಸಿ ಸಾಹಿತ್ಯ ಕ್ಷೇತ್ರವನ್ನು ಆಮೂಲಾಗ್ರ ಪರಿವರ್ತಿಸಿ ರೂಪಾಂತರ ಮಾಡಿ ಒಂದು ಮಹಾಕ್ರಾಂತಿಯನ್ನೆ ಉಂಟು ಮಾಡಿದ ಹರಿಹರಕವಿ. ಅವನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಈ ಬದಲಾವಣೆ ಕೇವಲ ಸುಧಾರಣೆ (Reform) ಅಲ್ಲ. ಅದೊಂದು ವಿಪ್ಲವ-ಸಮಗ್ರ ಸಂಪೂರ್ಣ ಕ್ರಾಂತಿ. ಅವನಿಗಿಂತ ಹಿಂದೆ ಇದ್ದ ಕವಿಗಳ ವಿರುದ್ಧ ತೋಳು ತೊಡೆ ಚಪ್ಪರಿಸಿ ಮೀಸೆ ಹುರಿಮಾಡಿ ಲೇಖನಿಯ ಬರಸಿಡಿಲಿನ ಆಯುಧವನ್ನು ಝಳುಪಿಸಿ ಸಡ್ಡು ಹೊಡೆದು ನಿಂತ ಶೂರಾಗ್ರಣಿ ಹಂಪೆಯ ಹರಿಹರ ಕವಿ. ರಾಜಾಶ್ರಯದ ಹಂಗಿನ ಸೆರೆಮನೆಯಲ್ಲಿ ಸಿಕ್ಕ ಈ ಕವಿಗಳ ನಾಲಗೆಯನ್ನು ಬೇವಿನ ಕಡ್ಡಿಯಿಂದ ಚುಟಿಕೆ ಹಾಕಿ (ಸುಟ್ಟು), ಶುದ್ಧಿಯಾದ ನಾಲಗೆಯಿಂದ "ಪೊಗಳ್, ಅರ್ಚಿಸು ಎಮ್ಮ ಪೆಂಪಿನ ಸೊಂಪಿನ ಹಂಪೆಯಾಳ್ದನಂ" ಎಂದು ಕವಿಗಳಿಗೆ ಕರೆಕೊಟ್ಟ ಪಾಂಚಜನ್ಯ ಮೊಳಗಿಸಿದ ನಿನಾದ ಧಾರ್ಮಿಕ ಮಹಾಕ್ರಾಂತಿಯಲ್ಲೂ ಪ್ರತಿಧ್ವನಿಸಿತು. ಬಸವಣ್ಣನ ಈ ಮಹಾಕ್ರಾಂತಿಯನ್ನು ಮಹಾಕವಿ ಕುವೆಂಪು ಹೀಗೆ ತಮ್ಮ ಕವಿವಾಣಿಯಲ್ಲಿ ಗುಡುಗಿದ್ದಾರೆ:

ಬಸವ ಬೆಳಕು

> **ಕಾರ್ತಿಕದ ಕತ್ತಲಲ್ಲಿ ಆಕಾಶ ದೀಪವಾಗಿ ನೀ ಬಂದೆ,**
> **ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ,**
> **ಎಂಟು ಶತಮಾನಗಳ ಹಿಂದೆ,**
> **ಅಗ್ನಿಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ,**
> **ದೇವ ದಯೆಯೊಂದು ಹೇ ಧೀರಾವತಾರ,**
> **ಶ್ರೀ ಬಸವೇಶ್ವರಾ!**
> **ಜಾತಿ ಪದ್ಧತಿಯ ಹೋಮ ಕೂಪಕ್ಕೆ**
> **ಬಿದ್ದು, ವೈದಿಕರ ಯಜ್ಞತಾಪಕ್ಕೆ**
> **ಬಲಿವೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ,**
> **ಕಾಯಕದ ದಿವ್ಯತತ್ವದ ಸುಕ್ಷೇಮ ಧರ್ಮನಾಶಕಕ್ಕೆ**
> **ನಡೆಸಿದ ಮಹಾತ್ಮನೆ, ನಿನಗೆ ನಮೋ ನಮಃ**
> **ಇಂದಿಗೂ ನಾವು ನಿನ್ನೆತ್ತರಕ್ಕೆ ಏರಲಾರದೆ ಅಯ್ಯೊ**
> **ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯ!**

ಹರಿಹರ ಮಹಾಕವಿ ಬಿತ್ತಿದ ಈ ಮಹಾ ಉಜ್ವಲ ಕ್ರಾಂತಿಬೀಜ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಆಳವಾಗಿ ಬೇರೂರಿತು; ಬೆಳೆಯಿತು; ಜನಮನವನ್ನು ಪ್ರಜ್ವಲಗೊಳಿಸಿತು.

ರಾಘವಾಂಕನ ಮಹಿಮೆ

ಈ ಕ್ರಾಂತಿಯನ್ನು ಇನ್ನೂ ಉಜ್ವಲಗೊಳಿಸಿ ಊರ್ಜಿತಗೊಳಿಸಿದ ಕವಿ,

ಹರಿಹರನ ಸೋದರಳಿಯ, ಸಾರಸ್ವತಯೋಗದ ಶಿಷ್ಯ ರಾಘವಾಂಕ. ತನ್ನ ಗುರು ಹರಿಹರ ದೇವ, ಕಾವ್ಯ ಶಕ್ತಿಯನ್ನು ತನ್ನ ಆರಾಧ್ಯ ದೈವ 'ಹಂಪೆಯ ಪೆಂಪಿನ ಹಂಪೆಯಾಳ್ದ' ವಿರೂಪಾಕ್ಷನ ಸ್ತುತಿಗಾಗಿ ಮೀಸಾಲಾಗಿಸಬೇಕು ಎಂದು ಮಂತ್ರೋಪದೇಶ ಮಾಡಿದರೆ, ಅವನ ಶಿಷ್ಯ ಇನ್ನೂ ಒಂದು ಹೆಜ್ಜೆ-ಒಂದೇಕೆ ನೂರು ಹೆಜ್ಜೆ-ಮುಂದೆ ಹೋಗಿ ಗುರುವಿನ ಮಂತ್ರವನ್ನು ಪರಿಷ್ಕರಿಸಿ, ದೈವಸ್ತೋತ್ರಕ್ಕಿಂತಲೂ ಮಿಗಿಲಾದ "ಜನಬದುಕಬೇಕೆಂಬ" ಉನ್ನತೋನ್ನತ ಉದ್ದೇಶ, ಜೀವದಲ್ಲಿಯೇ ಶಿವನನ್ನು ಕಾಣುವ, ಅರ್ಚಿಸುವ, ಪೊಗಳುವ ಜೀವರ ಉದ್ಧಾರಕ್ಕೆ ಮುಡಿಪಾಗಿ ಇಟ್ಟ ಮಹಾದಾರ್ಶನಿಕ ಕವಿ. ಶಿವನಲ್ಲಿ ಎಲ್ಲದನ್ನೂ (ಸರ್ವವನ್ನೂ)ಕಾಣುವುದಲ್ಲದೆ, ಸರ್ವರಲ್ಲೂ ಶಿವನನ್ನೆ ಕಾಣುವ ಗೀತಾಚಾರ್ಯನ:-

ಸರ್ವ ಭೂತಸ್ಥ ಮಾತ್ಮಾನಂ ಸರ್ವಭೂತಾನಿಚಾತ್ಮನಿ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ॥ ಅಧ್ಯಾಯ-೬, ಶ್ಲೋಕ॥೨೯ ॥

ಎಲ್ಲೆಲ್ಲಿಯೂ ಸಮದರ್ಶಿಯಾಗಿರುವ ಯೋಗಯುಕ್ತಾತ್ಮನು ಆತ್ಮನನ್ನು ಸರ್ವಭೂತಗಳಲ್ಲಿಯೂ, ಸರ್ವಭೂತಗಳನ್ನು ಆತ್ಮನಲ್ಲಿಯೂ ಕಾಣುತ್ತಾನೆ.

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂಚ ಮಯಿ ಪಶ್ಯತಿ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ॥ ಅಧ್ಯಾಯ-೬, ಶ್ಲೋಕ ॥೩೦॥

ಯಾವನು ನನ್ನನ್ನು ಎಲ್ಲೆಲ್ಲಿಯೂ ನೋಡುವನೋ ಮತ್ತು ಎಲ್ಲವನ್ನು ನನ್ನಲ್ಲಿಯೇ ನೋಡುವನೋ ಅವನಿಗೆ ನಾನು ಕಾಣದೆ ಹೋಗುವುದಿಲ್ಲ ಮತ್ತು ಅವನು ನನ್ನನ್ನು ಕಾಣದೆ ಹೋಗುವುದಿಲ್ಲ ಹಾಗೂ ಅದೇ ಗೀತಾಚಾರ್ಯ ಘೋಷಿಸಿದ:

ವಿದ್ಯಾ ವಿನಯ ಸಂಪನ್ನೆ ಬ್ರಾಹ್ಮಣೇ ಗವಿಹಸ್ತಿನಿ।
ಶುನಿ ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ॥ ಅಧ್ಯಾಯ-೬ನೆ ಶ್ಲೋಕ ೧೦

ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಂಯು ಮಾಂಸ ತಿನ್ನುವವನು ಇವರೆಲ್ಲರಲ್ಲೂ ಜ್ಞಾನಿಗಳು ಸಮದರ್ಶಿಗಳಾಗಿರುವವರು.

ರಾಘವಾಂಕನ ಈ ಕಾವ್ಯೋದ್ದೇಶ-ಜೀವನ್ಮುಖೀ ಸಾಹಿತ್ಯ "ಜನಬದುಕ ಬೇಕೆಂದು ಅನಪೇಕ್ಷೆಯಿಂ ಕಾವ್ಯ ಮುಖದಿಂಪೇಳ್ವ" ಉದ್ದೇಶ ನಮ್ಮ ಪ್ರಾಚೀನ ಉಪನಿಷತ್ ಋಷಿವರೇಣ್ಯರ ಜೀವನ ದೃಷ್ಟಿಗೆ ಅನುಗುಣವಾಗಿರುವುದಲ್ಲದೆ, ಬಸವಣ್ಣನ ಧರ್ಮದೃಷ್ಟಿಗೂ, ಆರ್ವಾಚೆನ ಮಹರ್ಷಿ ಶ್ರೀ ಅರವಿಂದರ ಯೋಗ ಸಮನ್ವಯ ದೃಷ್ಟಿಗೂ ಅನುಗುಣವಾಗಿದೆ. ರಾಘವಾಂಕನ ಕಾವ್ಯೋದ್ದೇಶ-ಜನಬದುಕಬೇಕೆಂದು ಕಾವ್ಯ ರಚಿಸಬೇಕೆಂಬ ಉದ್ದೇಶ ಆಶ್ಚರ್ಯಕರವಾಗಿ ಕಾಣುತ್ತದೆ. ಅವನೆಂಥ ದೂರದರ್ಶಿ, ಅವನದು ಎಂಥ ಪ್ರಗತಿಶೀಲ ದೃಷ್ಟಿ! ಎಂಥ ದ್ರಷ್ಟಾರ! ಸಾಹಿತ್ಯ ರಚನೆಯ ಉದ್ದೇಶ ಜನರನ್ನು ಬದುಕಿಸಬೇಕೆಂಬುದು. ಇದಕ್ಕಿಂತಲೂ

ಸರಳವಾಗಿ ಸುಲಭವಾಗಿ ಕಾವ್ಯೋದ್ದೇಶವನ್ನು ಯಾವ ಲಾಕ್ಷಣಿಕನೂ ಹೇಳಿಲ್ಲ. ರಾಘವಾಂಕನ ಈ ದೃಷ್ಟಿ-ತನ್ನ ಗುರು ಹರಿಹರನ ಆರಾಧ್ಯ ದೈವ ವಿರೂಪಾಕ್ಷನ ನಡೆದಾಡುವ ಸಜೀವ ಜನ. ಈ ಜನರೇ ಆ ದೇವಾಲಯದಲ್ಲಿ ಪೂಜೆಗೊಂಬ ವಿರೂಪಾಕ್ಷಸ್ವಾಮಿ! ರಾಘವಾಂಕನ ಈ ದರ್ಶನ ದೃಷ್ಟಿ ಗೀತಾಚಾರ್ಯನ 'ವಿಭೂತಿ ಯೋಗ'ಕ್ಕೆ ಅನುಗುಣವಾಗಿದೆ! ನಾನೇ ಈ ಸಕಲ ಸೃಷ್ಟಿಯಲ್ಲಿಯೂ ಇದ್ದೇನೆ. ಅದಕ್ಕೆ ಕೆಲವು ನಿದರ್ಶನಗಳನ್ನು ಕೊಡುತ್ತಾ ಪರ್ವತಗಳಲ್ಲಿ ಗಿರಿ ರೂಪದಲ್ಲಿ ನಾನಿದ್ದೇನೆ. ರಾಕ್ಷಸರಲ್ಲಿ ಪ್ರಹ್ಲಾದನಾಗಿದ್ದೇನೆ. ಶಿಕ್ಷಿಸುವವರಲ್ಲಿ ಯಮನಾಗಿದ್ದೇನೆ...... 'ಅಲ್ಲಿ ಇಲ್ಲಿ, ಅದರಲ್ಲಿ, ಇದರಲ್ಲಿ, ಎಂದೆನಬೇಡ ಎಲ್ಲೆಲ್ಲಿಯೂ ನಾನಿದ್ದೇನೆ ಅದಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದ ಗೀತಾಚಾರ್ಯನ ವಾಣಿಯನ್ನು ರಾಘವಾಂಕ ಹರಿಶ್ಚಂದ್ರ ಕಾವ್ಯದ ಪ್ರಾರ್ಥನ ಪದ್ಯದಲ್ಲಿಯೇ "ಶ್ರೀಪತಿಗೆ ಸೊಬಗ ಉಡುಪತಿಗೆ ಶಾಂತಿಯ....... ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷ ಎಮಗಿಷ್ಟ ಸಿದ್ಧಿಯಂ ಮಾಳ್ಕೆ ಸಂತೋಷದಿಂ" ಎಂದು ಹಾಡಿದ್ದಾನೆ.

ಬಸವಣ್ಣನು ಹೇಳಿದಂತೆ 'ಎನ್ನ ದೇಹವೇ ದೇವಾಲಯ; ಕಾಲೇ ಕಂಭ, ಶಿರವೇ ಹೊನ್ನ ಕಲಶ'.... ಆ ದೇವಾಲಯದಲ್ಲಿರುವ ದೇವರೇ ನಡೆದಾಡುವ ಈ ದೇಹದಲ್ಲಿ ಅವ್ಯಕ್ತ ದೇವರು ಪ್ರತ್ಯಕ್ಷ ದೇಹಧಾರಿ ಉಸಿರಾಡುವ ಸಜೀವ ಜನಸಮೂಹ. ಜಂಗಮ ರೂಪೀ ವಾಸುದೇವ. ಅವನನ್ನು ಪೂಜಿಸು. ಅವನನ್ನು ಜಾಗ್ರತಗೊಳಿಸು. ಆಗ ನಿನ್ನ ಜನ್ಮ ಸಾರ್ಥಕ. ತನ್ನ ತಾನರಿಯುವ ಮಾರ್ಗಸೂಚಿ ಕಾವ್ಯ. 'ಯಾರು ತಾನೆಂದು ವಿಚಾರಿಸು' ವಿಚಾರವಂತರನ್ನಾಗಿ ಮಾಡುವುದು ರಾಘವಾಂಕನ ಕಾವ್ಯೋದ್ದೇಶ. ವಿಚಾರವಂತರಾಗಲು ಅವರು 'ಬದುಕಬೇಕು' ಹೇಗೆ ಬದುಕುಬೇಕು? ಅನ್ನ ಉಂಡು ವಾಯು ಉಸಿರಾಡಿ, ಪ್ರಾಣದೇವರ ಪ್ರತಿನಿಧಿಗಳಾಗಬೇಕು. ಮುಖ್ಯ ಪ್ರಾಣದೇವರ ದರ್ಶನ ಮಾಡಿಕೊಂಡು ಸಮದರ್ಶಿಯಾಗಬೇಕು. ಈ ಮಾನವಜನ್ಮ ಧಾರಣಮಾಡಿದ ಮನುಷ್ಯರೆ ದೋಷಯುಕ್ತ ದೇವರು. ಆ ದೋಷ ಮುಕ್ತ ಮನುಷ್ಯನೆ ದೇವರು. ಜಾತಿ ಮತಾಂಧತೆ, ತಾನು ಉಚ್ಚವರ್ಣದವನು, ಕ್ಷತ್ರಿಯನು, ಶೂದ್ರರಿಗಿಂತಲೂ ತುಚ್ಛರಾದ ಹೊಲತಿಯರು ಪಂಚಮವರ್ಣದ ಕೀಳಾದವರೆಂಬ ದೋಷಯುಕ್ತನಾದ ಹರಿಶ್ಚಂದ್ರನ ವರ್ಣಮದಾಂಧತೆ ಜಾತಿ ಮತಾಂಧತೆಯ ಅಹಂಕಾರ ನಾಶಮಾಡಿ, ವಿಶ್ವೇಶ್ವರ ಸಾಕ್ಷಾತ್ಕಾರ ಮಾಡಿಕೊಂಡ ಹರಿಶ್ಚಂದ್ರ ಮಹಾರಾಜನ ಕಥೆ ರಾಘವಾಂಕನ ಕಾವ್ಯ. ಹೊಲೆಯನ ರೂಪದಲ್ಲಿದ್ದ ವೀರಬಾಹುವಿನ ಸೇವಕನಾಗಿ ಭಗವತ್ ಸೇವೆ ಮಾಡಿ ಅವನ ಮೂಲಕ ದೈವ ಸಾಕ್ಷಾತ್ಕರ ಮಾಡಿಕೊಂಡ ಸಾಧಕವರೇಣ್ಯ ಹರಿಶ್ಚಂದ್ರ. ನಾವೆಲ್ಲರೂ ಜಾತಿಮದಾಂಧತೆಯ ದೋಷಯುಕ್ತ ಹರಿಶ್ಚಂದ್ರರೇ! ಅಸ್ಪೃಶ್ಯತೆಯ ದೋಷಯುಕ್ತ ಹೊಲೆಯರೇ. ವಿಶ್ವಾಮಿತ್ರನ ಮಾನಸ ಪುತ್ರಿಯರು ದೇವರು. ದ್ವೇಷವಿಲ್ಲದ ಮಾನವರಾಗುವ ಮಾರ್ಗದರ್ಶಕ ಕೈಪಿಡಿ ಹರಿಶ್ಚಂದ್ರ ಕಾವ್ಯ!. ಅದು ದಾರ್ಶನಿಕ ಗ್ರಂಥ! ಬರೆಯುವುದಾದರೆ ಈ ಉದ್ದೇಶಕ್ಕಾಗಿ ಬರೆಯಿರಿ. ಈ ಉದ್ದೇಶ ಇಂದಿಗೂ ಸತ್ಯ.

ಹಾಗಾದರೆ ಏನನ್ನು ಬರೆಯಬೇಕು?

ಜನ ಬದುಕಬೇಕಾದರೆ ದೇಹಕ್ಕೆ ಅನ್ನ ಚೈತನ್ಯ ಪ್ರಧಾನ ಮಾಡಬೇಕು. ಇದು ಬದುಕಿರಲು ಬೇಕಾದ ಪ್ರಾಥಮಿಕ ಅವಶ್ಯಕತೆ. ಮೂಲಭೂತ Creature comforts. ಇದನ್ನು ಪೂರೈಸುವ ಪೂರಕ ಅವಶ್ಯಕತೆ ತಿಳುವಳಿಕೆ. ಅದಕ್ಕೆ ಅಕ್ಷರ ವಿದ್ಯೆ ಕಲಿಸಿ, ಅನ್ನ ಗಳಿಸುವ ಮಾರ್ಗವನ್ನು ತೋರಿಸಬೇಕು ಸಮಾಜದ ಗುರು ಬರಹಗಾರ. ಜನರಿಗೆ ಅನ್ನಗಳಿಸಲು ಅನುಕೂಲವಾಗುವಂಥ ಗದ್ಯ-ಪದ್ಯ ಸಾಹಿತ್ಯ ರಚಿಸುವುದು ಬರಹಗಾರನ ಪ್ರಥಮ ಕರ್ತವ್ಯ. ಅದನ್ನು ಕಳೆದ ಶತಮಾನದ ಮಹಾಕವಿ ಕುವೆಂಪು 'ಕ್ರಾಂತಿಕಾಳಿ' ಎಂಬ ತಮ್ಮ ಕವಿತೆಯೊಂದರಲ್ಲಿ ಹೀಗೆ ಹೇಳಿದ್ದಾರೆ:-

"ಕ್ರಾಂತಿಕಾಳಿ ಕಠಾರಿಯಂ ನನ್ನೆದೆಗೆ ಕುರಿತು
ಝಳುಪಿಸುತೆ, ಬದ್ಧಭ್ರುಕುಟಿ ಕೋಪದಲಿ ನಿಂತು,
ದಂಷ್ಟ್ರಘರ್ಷಣರವಂ ಪೊಣ್ಮೆ ಗಜರಿದಳಿಂತು :
ಓ ದ್ರೋಹಿ ಕವಿಯೆ, ನಿನಗಿತ್ತಾಣತಿಯ ಮರೆತು
ಕ್ಲೀಬತನದಲಿ ಹೆಣ್ಣು ಸೋಬಾನೆಗಳ ಹಾಡಿ
ಪಾಳ್ಗಯ್ದೆ ಕಜ್ಜಮಂ ! ಶುಕ, ಪಿಕ, ವಸಂತ, ಲತೆ,
ಮುಂಗುರುಳು, ತಂಗಾಳಿ, ದೊರೆಗಿರೆಗಳಜ್ಜಿಕಥೆ,
ಬೆಳ್ದಿಂಗಳೆಂಬುವಂ ನೂಕಾಚೆ, ಹೆಂಬೇಡಿ !
ಬಡತನಂ, ಗೊಬ್ಬರಂ, ಕತ್ತಿ, ಗುದ್ದಲಿ, ಹಾರೆ,
ಬೆವರು, ನೆತ್ತರ್ಗಳಂ ಗಾನಗೈವುದು ನಿನ್ನ
ಕರ್ತವ್ಯವಿಂದು. ಹಾ ! ಹೊಟ್ಟೆಗಿಲ್ಲದೆ ಅನ್ನ
ಬಡಜನರು ಸಾಯುತಿರೆ, ರಸಗಂಧವನು ತೋರೆ
ತಣಿವಹುದೆ ? ಕ್ರಾಂತಿಕಾಳಿಯು ನಾನು, ಕೈಬೀಸಿ
ಕರೆಯೆ, ಬಾ, ಪೂಜೆಗೈ ಹೃದಯ ರಕ್ತವ ಸೂಸಿ !   (ಕೃತ್ತಿಕೆ - ಪುಟ ೬೩)

ಇದೇ ಕಾವ್ಯೋದ್ದೇಶವನ್ನು ನಮ್ಮ ಸಾಹಿತ್ಯ ಕ್ಷೇತ್ರದ ಮತ್ತೊಬ್ಬ ವರಕವಿ, ಜನಪರ ದಾರ್ಶನಿಕ ಕವಿ, ದ.ರಾ.ಬೇಂದ್ರೆ ಅವರು 'ತುತ್ತಿನ ಚೀಲ' ಎಂಬ ತಮ್ಮ ಕವನದಲ್ಲಿ ಹೀಗೆ ಬರೆದ್ದಿದ್ದಾರೆ.

ತುತ್ತಿನ ಚೀಲ

೧

ಅನ್ನಬ್ರಹ್ಮದ
ದೇಗುಲದಲ್ಲಿ
ಬೆಳಗೂ ಬೈಗೂ
ಛಿಳಿ ಛಿಟ ಬೆಂಕಿ
ಡೊಂಬರ ಪೂಜೆಯು,
ಕಾಗೆಯ ಮಂತ್ರ,
ಗಾಳಿಯ ಎಡೆಯು,

ಬೊಬ್ಬೆಯ ಗಂಟೆ–
ಅನ್ನಬ್ರಹ್ಮದ
ದೇಗುಲದಲ್ಲಿ !

೨

ನಾದಬ್ರಹ್ಮದ
ಕಗ್ಗವಿಯಲ್ಲಿ
ಮೌನದ ವೀಣೆಗೆ
ಕರುಳಿನ ತಂತಿ
ಮಿಡಿದೂ ಮಿಡಿದೂ
ಮರಿದವು ಬೆರಳು
ಮಿಡುಕೀ ಮಿಡುಕೀ
ನೊಂದಿತು ಎದೆಯು
ನಾದಬ್ರಹ್ಮದ
ಕಗ್ಗವಿಯಲ್ಲಿ

೩

ಶಬ್ದಬ್ರಹ್ಮದ
ಗುಮ್ಮಟದಲ್ಲಿ
ಹಗಲೂ ಇರುಳೂ
ವೇದದ ವಾದ,
ಪಾಪಪುಣ್ಯಗಳ
ಜಾಳಿಗೆಯಲ್ಲಿ
ನೇತಿದೆ ಜೋತಿದೆ
ಜೀವದ ಜೇಡ–
ಶಬ್ದಬ್ರಹ್ಮದ
ಗುಮ್ಮಟದಲ್ಲಿ !

೪

ದೈವುಳ್ಳವರಿಗೆ
ದಯವೇ ಇಲ್ಲ !
ತಿತ್ತರಿ ತುಂಬಿದೆ
ಕೂಳಿನ ಕೋಟೆ !
ಬಿಡುಗಣ್ಣವರಿಗೆ
ಕಾಣುವುದಿಲ್ಲ
ಅಮೃತದ ತೇಗಿನ
ಮದವಂತಹದು !
ಹಸಿದವ ಬಲ್ಲ
ಹಸಿವೆಯ ಶೂಲಿ !

೫

ಶಿವಾ ಶಿವಾ ಹೇ
ಶಿವಾ ಮಾದೇವಾ !
ಅತ್ತಿತು ಕೂಗಿತು
ಚೀರಿತು ಜೀವ
ಬಾಯಂಗಳದಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ;
ಹಾಡುವ ಸಭೆಯಲಿ
ನರಳುವದುಂಟೆ ?

೬

ಕಿಕ್ಕಿರಿ ತುಂಬಿದೆ
ಭೂಮಿಯ ಕಣಜ
ಕಕ್ಕಸ ಬಡುತಿದೆ
ಬೊಕ್ಕಸದೊಡಲು
ಬಾಳಿಗಿಂತಲೂ ಕೂಳೇಮೇಲೋ?
ಬರಿದೋ ಬರಿದು
ತೆರವೋ ತೆರವು
ಬಡವರ ಬಗ್ಗರ
ತುತ್ತಿನ ಚೀಲಾ

೭

ದೇವರದೊಂದು
ಗೋರಿಯಕಟ್ಟಿ
ಧರ್ಮದಧೂಪಕೆ
ಬೆಂಕಿಯನಿಕ್ಕಿ
ಗಣಗಣಬಾರಿಸಿ
ಪ್ರಾಣದ ಗಂಟೆಯ
ಸಾವಿನನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು

– 'ಗರಿ' : ದ.ರಾ.ಬೇಂದ್ರೆ

ಪ್ರಗತಿಶೀಲ ಸಾಹಿತ್ಯ

ಅವರು ಈ ಕವಿತೆಗಳನ್ನು ಬರೆದ ಕಾಲಾವಧಿಯಲ್ಲಿ (೧೯೩೦ರದಶಕ) ಭಾರತೀಯ ಪ್ರಗತಿಶೀಲ ಸಾಹಿತ್ಯ ಸಂಘ ೧೯೩೬ ರಲ್ಲಿ ಲಕ್ನೋಶಹರದಲ್ಲಿ ಸ್ಥಾಪನೆ ಆಯಿತು. ಆ ಸಂಸ್ಥಾಪನಾ ಸಭೆಯನ್ನು ಇ.ಎಂ.ಎಸ್.ನಂಬೂದ್ರಿ ಪಾಡ್ ಉದ್ಘಾಟಿಸಿದರು!ಆಗ United Provinces ಎಂದು ಕರೆಯಲಾಗುತ್ತಿದ್ದ ಈಗಿನ ಉತ್ತರ ಪ್ರದೇಶ ಎಂದು ಕರೆಯುವ ರಾಜ್ಯದ ಕಮ್ಯೂನಿಸ್ಟ್ ನಾಯಕ ಅಧ್ಯಕ್ಷತೆ ವಹಿಸಿದ್ದರು. ತರುವಾಯ ಯಾವ ರಾಜಕೀಯ ಪಕ್ಷಕ್ಕೂ ಸೇರದ ಮುಲ್ಕ್‌ರಾಜ್ ಆನಂದ್ ಒಬ್ಬ ಕಾರ್ಯದರ್ಶಿಯಾದರು. ಹಿಂದಿ, ಉರ್ದು ಕವಿ, ಕತೆಗಾರ, ಕಾದಂಬರಿಕಾರರಾದ ಸಾಹಿತಿ ಭಾರತೀಯ ಪ್ರಗತಿಶೀಲ ಸಾಹಿತ್ಯ ಸಂಘದ ಪ್ರಥಮ ಆಧ್ಯಕ್ಷರಾದರು. ಕರ್ನಾಟಕದಲ್ಲೂ ಅದರ ಶಾಖೆಯನ್ನು ೧೯೪೦ರ ದಶಕದಲ್ಲಿ ಅನಕೃ ಅವರ ನಾಯಕತ್ವದಲ್ಲಿ ಸ್ಥಾಪಿಸಲಾಯಿತು. ಪಕ್ಕಾ ದೇಶಭಕ್ತರಾಗಿದ್ದ, ಗಾಂಧಿ ಭಕ್ತರಾಗಿದ್ದ, ಅನಕೃ ಅವರ ಅನುಯಾಯಿಗಳು (ತರಾಸು, ಕಟ್ಟೀಮನಿ, ಚದುರಂಗ, ಕುಮಾರವೆಂಕಣ್ಣ, ನಾಡಿಗ ಕೃಷ್ಣಮೂರ್ತಿ, ಪಾಟೀಲ ಪುಟ್ಟಪ್ಪ, ಕೆ.ಕೆ.ಶೆಟ್ಟಿ, ಕಮ್ಯೂನಿಸ್ಟ್ ಪಾರ್ಟಿ ಕಾರ್ಡ್ ಹೋಲ್ಡರ್ ನಿರಂಜನ(ಕುಳಕುಂದ ಶಿವರಾಯ), ಗಾಂಧಿ ಭಕ್ತನಾದರೂ ಆಂಧ್ರದ ಕಮ್ಯೂನಿಸ್ಟ್ ಪಕ್ಷದ ವಿದ್ಯಾರ್ಥಿ ಸಂಘದ ಮುಂದಾಳುಗಳ ಪ್ರಭಾವಕ್ಕೆ ಒಳಗಾಗಿದ್ದ ಆದರೆ ಕಮ್ಯೂನಿಸ್ಟರನ್ನು ಪ್ರಬಲವಾಗಿ ಟೀಕಿಸುತ್ತಿದ್ದ ನಾನು ಪ್ರಗತಿಶೀಲ ಗುಂಪಿಗೆ ಸೇರಿದೆವು. ಈ ಸಂಘಕ್ಕೆ ಅಧಿಕೃತವಾಗಿ ಸೇರದ ಆಗಲೇ ಹಿರಿಯ ಪ್ರಖ್ಯಾತ ಸಾಹಿತಿಗಳಾಗಿದ್ದ ಕುವೆಂಪು, ಬೇಂದ್ರೆ, ಶ್ರೀರಂಗ, (ಆರ್.ವಿ. ಜಾಗೀರದಾರ) ಕಾರಂತರು, ಮುಂತಾದವರು ನಮಗಿಂತ ವಯಸ್ಸಿನಲ್ಲಿ ಬಹಳ ದೊಡ್ಡವರು, ಶ್ರೇಷ್ಠರೂ, ಪ್ರಸಿದ್ಧರಾಗಿದ್ದ ಸಾಹಿತಿಗಳೂ ನಮಗೆ ಆದರ್ಶವೂ, ಮಾರ್ಗದರ್ಶಿಗಳೂ ಆಗಿದ್ದರು. ಆಗ ಕರ್ನಾಟಕ ಪ್ರಗತಿಶೀಲ ಸಂಘ ಯಾವ ರಾಜಕೀಯ ಪಕ್ಷಕ್ಕೆ ಸೇರಿರಲಿಲ್ಲ. ಅದರ ಸದಸ್ಯರು, ಬೆಂಬಲಿಗರು, ಸಹಾನುಭೂತಿಗಳೂ, ಸಹಾಯಕರು ಆಗಿದ್ದ ಶ್ರೀಮಂತರೂ, ಮಧ್ಯಮವರ್ಗದವರು, ಕಡುಬಡವರೂ, ಸಮಾಜವಾದಿಗಳೂ, ಅದರಲ್ಲಿದ್ದರು. ಆಗ ಕನ್ನಡ ಸಾಹಿತ್ಯದಲ್ಲಿ ಬಡವರ, ದಲಿತರ, ಶೋಷಿತರ, ವಿಧವೆಯರ, ದುರ್ಬಲ ಮಹಿಳೆಯರ, ಅಸ್ಪೃಶ್ಯರ ದೌರ್ಜನ್ಯಕ್ಕೆ ಒಳಗಾದವರ ಚಿತ್ರಣ ಆರ್ತನಾದ, ಕ್ಷೋಭೆ, ದೀನಾವಸ್ಥೆಯಲ್ಲಿರುವವರ ಪರವಾಗಿ ಸಾಹಸದ ವೀರಗಾಥೆ ಸಾಹಿತ್ಯದಲ್ಲಿ ಮೂಡಿ ಬಂತು. ಕುವೆಂಪು ಅವರ ಕ್ರಾಂತಿ ಕಾಳಿಯ ಡಮರುಗಧ್ವನಿ ಬೇಂದ್ರೆಯವರ ತುತ್ತಿನ ಚೀಲದ ಅಗ್ನಿಜ್ವಾಲೆಯ ಕೆನ್ನಾಲಿಗೆಯ ಪ್ರಖರ ಶಾಖ ಕನ್ನಡ ಸಾಹಿತ್ಯದಲ್ಲಿ ಧಗಧಗಿಸಿತು. ೧೯೪೦-೬೦ರದಶಕದಲ್ಲಿ ಪ್ರಗತಿಶೀಲ ಸಾಹಿತ್ಯ ಹುಲುಸಾಗಿ ಬೆಳೆಯಿತು. ಆಗ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ರಾಜಕೀಯ ಕ್ಷೇತ್ರದ ಆರ್ಥಿಕ ಕ್ಷೇತ್ರದ ಅಂತ್ಯೋದಯ ಸಿದ್ಧಾಂತ ಸಹಜವಾಗಿಯೆ ತಲೆಯೆತ್ತಿತ್ತು. ಅದುವರೆಗೆ ಸಮಾಜದಲ್ಲಿ Last, Least, Lost – ಅಂದರೆ ಅತ್ಯಂತ

ಕೆಳಗಿದ್ದ, ಕೊನೆಯವರ, ಕನಿಷ್ಠ ಮತ್ತು ಕಣ್ಣಿಗೆ ಬೀಳದೆ ಕಳೆದು ಹೋಗಿದ್ದ ನಿಕೃಷ್ಠರ ಕಡೆ, ಪ್ರಗತಿಶೀಲರು ಕಣ್ಣುತಿರುಗಿಸಿದರು. ಅದುವರೆಗೆ ಸಾಹಿತ್ಯ ಕ್ಷೇತ್ರದಲ್ಲಿ ವಿದ್ಯಾವಂತ, ಪಂಡಿತ ವರ್ಗ ಭೇದಿಸಲಾಗದ ಕೋಟೆಯ ಒಳಗೆ ಇದ್ದರು. ಅಶಿಕ್ಷಿತರು ಆ ಕೋಟೆಯ ಹೊರಗಿದ್ದರು ಆ ಪರಿಸ್ಥಿತಿಯಲ್ಲಿ ಕುವೆಂಪು ಆದಿಯಾಗಿ ಕಲಿಕೆಯ ಶ್ರೀಮಂತರ ಕೋಟೆಯನ್ನು ಭೇದಿಸಿ ಕಾವ್ಯ, ಮಹಾಕಾವ್ಯ, ಕವನ, ಕಾದಂಬರಿ, ಕತೆ.... ಇತ್ಯಾದಿ ಸಾಹಿತ್ಯ ಸೃಷ್ಟಿಸಿದರು. ಆಗ ಸಾಹಿತ್ಯ ಸೃಷ್ಟಿಯ ಗುತ್ತಿಗೆ ಹಿಡಿದಿದ್ದವರು,

> **"...............................ನಿರ್ಮಲ ಸರಸ್ವತಿಯ**
> **ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ**
> **ಗುಂಡಿಯನ್ನಗೆಯೆ ಗುದ್ದಲಿಯ ಮಾಡಿಹನಲ್ಲ !**
> **.. ಹಾ ! ಇಂದು**
> **ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ**
> **.................................. ಸಗಣಿ ಗಂಪಾಘ್ರಾಣಿಸುವಂತಾಯ್ತೆ"**
>
> **– ಕುವೆಂಪು (ಗೊಬ್ಬರ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ)**

ಪ್ರಗತಿಶೀಲರ ನಿಂದೆ–ಧೀರ ಉತ್ತರ

ಆಗ ಸಂಪ್ರದಾಯ ಪಂಥದ ಆಗಿನ ಮಡಿವಂತ ಸಾಹಿತಿಗಳು, ಪ್ರಗತಿಶೀಲರನ್ನು ಸಾಹಿತಿಗಳೆಂದು ಭಾವಿಸಲು, ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಪಾಶ್ಚಾತ್ಯ ಸಾಹಿತ್ಯ–ಅದರಲ್ಲೂ ಆಂಗ್ಲ ಸಾಹಿತ್ಯದ ಸೂತ್ರಗಳ ಮಾಪಕದಿಂದ ಅಳೆಯುವ ತೂಗುವ ಕನ್ನಡ ಸಾಹಿತಿಗಳು ಪ್ರಗತಿಶೀಲರ ಬರವಣಿಗೆ ಸಾಹಿತ್ಯವೆ ಅಲ್ಲ! ರಾಜಕೀಯ ಸಿದ್ಧಾಂತಗಳ ಪ್ರಚಾರದ ಕರಪತ್ರ, ತುತ್ತೂರಿ, ಅದರಲ್ಲೂ ಕಮ್ಯೂನಿಸ್ಟ್ ಪಾರ್ಟಿಯ ಪ್ರಚಾರದ ಬರಹ ಇತ್ಯಾದಿ ಅಪಪ್ರಚಾರ ಮಾಡಿದರು ಆರೋಪ ಹೊರಿಸಿದರು. ಅವರ ಈ ಆರೋಪ, ನಿರಾಧಾರ, ಹುಸಿ, ಅಂಜುಬುರುಕರ ರೋದನ ಎಂದು ಪ್ರಗತಿಶೀಲ ಸಾಹಿತಿಗಳು ಧೀರ ಉತ್ತರ ಕೊಟ್ಟರು. ಸಾಹಿತ್ಯಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ ಎಂಬ ಗೊಡ್ಡುವಾದಕ್ಕೆ ಸಡ್ಡು ಹೊಡೆದು ನಿಂತರು. ಕಲೆ ಕಲೆಗಾಗಿ ಎಂದ ಸಂಪ್ರದಾಯವಾದಿಗಳ ನಿಲುಮೆಯನ್ನೂ ದಾರಿಗಾಗಿ ದಾರಿ, ಯಾವುದಾದರೂ ಊರು ಗುರಿ ಅಲ್ಲ ಎಂಬಷ್ಟು ಬಾಲಿಶ ಅವಿವೇಕ; ಮೂರ್ಖತನ ಎಂದು ಗರ್ಜಿಸಿದರು. ಬರಹಗಾರ ಯಾವ ಪಕ್ಷಕ್ಕೂ ಸೇರಬಾರದು, ಪಕ್ಷಪಾತ ಇರಬಾರದು ಎಂಬುದು ಯಡಬಿಡಂಗಿತನ. ನಮ್ಮ ಸಿದ್ಧಾಂತ ಮಾನವ ಕಲ್ಯಾಣ; ನಮ್ಮ ಪಕ್ಷ ಲೋಕಕಲ್ಯಾಣ ಪಕ್ಷ. ನಾವು ಪಕ್ಷಪಾತಿಗಳೇ–ಸತ್ಯ, ನ್ಯಾಯ, ಸರಿಸಮಾನತೆಯ ಪಕ್ಷಪಾತಿಗಳೇ. ಹಾಗೆ ಹೇಳುವುದಕ್ಕೆ ನಮಗೆ ಅಂಜಿಕೆಯಿಲ್ಲ; ಸಂಕೋಚವಿಲ್ಲ; ನಾಚಿಕೆಯೂ ಇಲ್ಲ. ನಾವು ದುರ್ಬಲರ, ದಲಿತರ, ಹಿಂದುಳಿದ, ಶೋಷಿತರ, ದಮನಿತರ ಪರವಾಗಿ ಮಾತನಾಡುವವರೆ. ಇದು ತಪ್ಪು ಎಂದು ಹೇಳುವ ಧೈರ್ಯ ಯಾರಿಗಿದೆ?

ಪ್ರಗತಿಶೀಲ ಸಾಹಿತಿಗಳ ಈ ನಿಲುವೇ ನ್ಯಾಯ, ಸತ್ಯ, ಉತ್ತಮ ಲೋಕ ಕಲ್ಯಾಣಮಾರ್ಗ ಎಂಬುದನ್ನು ಪ್ರಜ್ಞಾವಂತರು ಒಪ್ಪಿದ್ದಾರೆ. ಅದಕ್ಕೆ ಅಂಗೀಕಾರ ಮುದ್ರೆಯನ್ನು ಒತ್ತಿ ಮುಂದೆ ಬಂದ ನವ್ಯ, ಬಂಡಾಯ, ದಲಿತ ಸಾಹಿತಿಗಳು ಒಪ್ಪಿ ಮುಂದುವರಿಸಿದ್ದಾರೆ. ಯಾವ ಹೆಸರಿನಿಂದಲಾದರೂ ಕರೆಯಿರಿ ಲೋಕ ಕಲ್ಯಾಣಾರ್ಥಿಗಳೆಲ್ಲ ತರ್ಕಬದ್ಧ ಲೋಕಾಯತ ಸಿದ್ಧಾಂತದಂತೆ (Dialectical materilisms) ಸದಾ ಗತಿಶೀಲ – ಪ್ರಗತಿಶೀಲ. ಭೂಮಿ, ಸೂರ್ಯನ ಸುತ್ತ ಚಲಿಸುತ್ತಲೇ ಗತಿಶೀಲವಾಗಿರುವಂತೆ ಮಾನವನ ಲೋಕಕಲ್ಯಾಣ ಎಂಬ ಭೂಮಿ ಚಲಿಸುತ್ತಲೇ ಇರುತ್ತದೆ. ಅದಕ್ಕೆ ಅಂತ್ಯವಿಲ್ಲ; ಸ್ಥಾಯಿತ್ವ ಇಲ್ಲ. ನಿರಂತರೆ ಚಲಿಸುತ್ತಲೇ ಇರುತ್ತದೆ. ಇದೇ ಬರಹಗಾರನ ಜೀವನ ಸಾರ್ಥಕ್ಯ. ಅವನ ಅವತಾರೋದ್ದೇಶದ ಪೂರ್ಣ ಪ್ರಯೋಜನ. ಈ ವೇದಿಕೆಯಿಂದ ನನ್ನ ಸಾಹಿತಿ ಮಿತ್ರರಿಗೆ ನಾನು ಕೊಡುವ ಸಂದೇಶ, ಕಳಕಳಿಯ ಬಿನ್ನಹ ಇದೇನೆ.

ಬರಹದ ಗುರಿ ದುಃಖ ನಿವಾರಣೆ

ಈ ಮಾತುಗಳನ್ನು ಕೇಳಿದ ನಿಮಗೆ ಒಂದು ಸಂದೇಹ ಉಂಟಾಗಬಹುದು; ಸಾಹಿತ್ಯದ–ಒಟ್ಟು ಓದಬೇಕಾದ, ಓದಬಹುದಾದ, ಬರಹದ ಉದ್ದೇಶ ಕೇವಲ ಹೊಟ್ಟೆಗೆ ಅನ್ನ ಕೊಟ್ಟು ಮೈಗೆ ಬಟ್ಟೆ ಹೊದಿಸುವುದು ಮಾತ್ರವೇ? ಈ ದೇಹದಲ್ಲಿರುವ – ಈ ದೇಹವನ್ನು ಆಡಿಸುವ, ಇದಕ್ಕೊಂದು ಅರ್ಥಕೊಡುವ ಒಳಗಿರುವ ಕಣ್ಣಿಗೆ ಕಾಣದ ಮನಸ್ಸಿಗೆ ಅನ್ನ ಕೊಡುವ, ಮುದಗೊಳಿಸುವ ಯಾವ ಗುರಿಯೂ ಇಲ್ಲವೆ? ಹೊಟ್ಟೆ ತುಂಬಿದ ಮೇಲೂ ಈ ಮನುಷ್ಯ ಸುಖವಾಗಿರುತ್ತಾನೊ? ದುಃಖ ನಿವಾರಣೆ ಆದೀತೊ? ಒಟ್ಟು ಜೀವದ ಸಂಕಟ (Problem of life) ಏನು? ಅದನ್ನು ಬುದ್ಧ ದೇವ ಸರಳವಾದ ನಾಲ್ಕು ಮಾತುಗಳಲ್ಲಿ ಹೇಳಿದ್ದಾನೆ. (೧). ದುಃಖ (೨). ದುಃಖ ಮೂಲ (೩). ದುಃಖ ನಿವಾರಣೆ (೪). ದುಃಖ ನಿವಾರಣೋಪಾಯ! ಇದು ಜೀವದ ಸಮಸ್ಯೆಯ ಸಮಸ್ಯೆ. ಸಕಲ ಜೀವಾವಳಿಯ ಸಮಸ್ಯೆ ಅಂದರೆ ದುಃಖ. ಯಾವ ಕಾರಣದಿಂದಲೇ ಆಗಲಿ, ಜೀವಕ್ಕೆ ಅಂಟಿದ ಜಾಡ್ಯ– ದುಃಖ ನಿವಾರಣೆ. ಇನ್ನೊಂದು ಮಾತಿನಲ್ಲಿ ಸುಖ ಪ್ರಾಪ್ತಿ ಸಂತೋಷ ಹೇಗೆ ಬಂದಿತು? ಮನಸ್ಸಿಗೆ ಸುಖವನ್ನು, ಸಂತೋಷವನ್ನು ಮುದವನ್ನುಂಟು ಮಾಡುವುದು ಸಾಹಿತ್ಯದ ಕೆಲಸವಲ್ಲವೊ? ಹಾಗೇನಾದರೂ ನಾನು ಭಾವಿಸಿದ್ದರೆ, ನೀವು ತಿಳಿದುಕೊಂಡಿದ್ದರೆ ಈ ಸಾಹಿತ್ಯ ಸಮ್ಮೇಳನ, ಈ ಸಂಭ್ರಮ, ಈ ಉತ್ಸಾಹ, ಇಲ್ಲಿ ಕಳೆಯುವ ಸಮಯ, ವೆಚ್ಚ ಮಾಡುವ ಅಪಾರ ಹಣ ವ್ಯರ್ಥ, ಎಲ್ಲಾ ಕೃಷ್ಣಾರ್ಪಣ ಎಂದಂತಾಯ್ತು! ಹಾಗೇನಾದರೂ ವ್ಯರ್ಥವಾಗುವುದಾದರೆ ಇಂಥ ದುಬಾರಿ ಹವ್ಯಾಸದ ಸಮ್ಮೇಳನದ ಅವಶ್ಯಕತೆ ಯಾಕೆ? ಹೌದು ಕೇಳಬೇಕಾದ್ದೇ. ಇದು ನ್ಯಾಯವಾದ (legitimate) ಪ್ರಶ್ನೆಯೆ? ಇದಕ್ಕೆ ಉತ್ತರವೇನು?

ಈ ಸಮ್ಮೇಳನದ ನಿಮಿತ್ತ ದೂರದರ್ಶನದಲ್ಲಿ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ನಾನೂ ಇದ್ದೆ. ಚಂಪಾ, ಡಾ. ವಸುಂಧರಾ ಭೂಪತಿ ಇದ್ದರು. ಕಾರ್ಯಕ್ರಮ ನಡೆಸಿ ಕೊಟ್ಟ ನಿರೂಪಕರು ಚಂಪಾ ಅವರನ್ನು ಕೇಳಿದ ಮೊದಲನೆ ಪ್ರಶ್ನೆ: ಜಾತ್ರೆಯೋಪಾದಿ ಈ ಮೂರು ದಿನದ ಅದ್ದೂರಿ ಆಡಂಬರದ ದುಬಾರಿ 'ಸಾಹಿತ್ಯ ಜಾತ್ರೆ' ಅಗತ್ಯವೆ? ಎಂಬುದು; ಅದಕ್ಕೆ ಚಂಪಾ ಉತ್ತರ ಕೊಡುತ್ತಾ: ಪರಿಷತ್ತಿನ ಅಧ್ಯಕ್ಷರು ಆಗಲೇ ಹೇಳಿರುವ ಉತ್ತರ: "ಇದು ಸರಳವಾಗಿ ಆಡಂಬರವಿಲ್ಲದ, ಅರ್ಥಪೂರ್ಣ ಸಮಾಲೋಚನಾ (Business Like) ಕೂಟ" ಎಂಬುದಾಗಿ ಹೇಳಿ ಕೊನೆಗೆ ಒಂದು ಮಾತು ಹೇಳಿದರು. 'ನಮ್ಮ ಜನ ವರ್ಷವಿಡೀ ದುಡಿದು ದಣಿವಾಗಿ ಹಣ್ಣಾಗಿ ಬೇಸರಗೊಂಡಾಗ ಮೂರು ದಿನ ಇಂಥ ಸಾಹಿತ್ಯ ಸಂತೋಷ ಸವಾರಂಭದಲ್ಲಿ **ಕುಣಿದು ಕುಪ್ಪಳಿಸಿ** ಸಂತೋಷಪಡುವುದರಲ್ಲಿ ಅಷ್ಟೇನು ತಪ್ಪಿಲ್ಲ....." ಎಂದು ಇಂಥ ಸಮ್ಮೇಳನದ ಔಚಿತ್ಯ ಸಮರ್ಥಿಸಿದರು. ಅವರು ಹೇಳಿದ **'ಕುಣಿದು'** ಎಂಬ ಮಾತು ನನಗೆ; **'ಕುಡಿದು'** ಎಂದು ಕೇಳಿದಂತಾಯ್ತು! ಚಂಪಾ ಅವರು ಅಂಥ ಹಾಸ್ಯದ ಮಾತು ಆಡಿದ್ದರೂ ಆಡಿರಬಹುದು ಎಂದು ನಾನು ಮನದಲ್ಲೇ ನಕ್ಕೆ! ನನ್ನನ್ನು ಆ ಪ್ರಶ್ನೆ ಕೇಳುತ್ತಾರೆ; ಅದಕ್ಕೆ ತಕ್ಕ ಉತ್ತರ ಕೊಡಲು ನಾನು ಮಾನಸಿಕವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ. ಅವರು ಹೇಳಿದ್ದೇನು ಎಂದು ನನ್ನ ಎಡಬದಿಗೆ ಕೂತಿದ್ದವರನ್ನು ಕೇಳಿದೆ. ನನ್ನನ್ನು ಆ ಪ್ರಶ್ನೆ ಕೇಳಿದ್ದರೆ ನಾನು ತಪ್ಪು ಕೇಳಿಸಿಕೊಂಡಿದ್ದ "ಕುಡಿದು ಕುಪ್ಪಳಿಸುವ" ಮಾತನ್ನು ಸಮರ್ಥಿಸುತ್ತಿದ್ದೆ! ಹೇಗೆಂದರೆ; ಚಂಪಾ ಹೇಳಿದ್ದು ಅಷ್ಟೇನೂ ತಪ್ಪಲ್ಲ' ಎಂದು ನಾನೂ ದನಿಗೂಡಿಸಿದ್ದರೆ ಪ್ರೇಕ್ಷಕರಿಗೆ ಆಶ್ಚರ್ಯ ಮಾತ್ರವಲ್ಲ ಅಪಾಯಕಾರಿಯಾಗಿ ಭಾಸವಾಗುತ್ತಿತ್ತು. ಅಲ್ಲದೆ ಹಾಸ್ಯ ಪ್ರಜ್ಞೆ ಇದ್ದವರು ನಗುತ್ತಿದ್ದರು! 'ರಾಮರಸ'ಪ್ರಿಯರಿಗೆ ಖುಷಿಯಾಗುತ್ತಿತ್ತು.

ಚೈತನ್ಯ ಪ್ರಭುಗಳು

ರಾಮ ರಸಾಮೃತ ಪಾನ ಮಾಡಿಸುವುದು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಮೀಸಲಲ್ಲ. ಧರ್ಮಕ್ಷೇತ್ರದಲ್ಲೂ ಸದಾ ನಡೆಯುತ್ತಲೇ ಇದೆ. ಬಂಗಾಳದಲ್ಲಿ ಭಕ್ತಿಪಂಥವನ್ನು ಜನಪ್ರಿಯಗೊಳಿಸಲು ಚೈತನ್ಯಪ್ರಭುಗಳು ಬೀದಿಗುಂಟ ಕೀರ್ತನೆ ಮಾಡುತ್ತ ಹೋಗುತ್ತಿದ್ದರು. ಜನರನ್ನು ಆಕರ್ಷಿಸಲು : 'ಬಂಧುಗಳೇ ಇಲ್ಲಿಗೆ ಬನ್ನಿ, ಇಲ್ಲಿ ನಿಮಗೆ ಮದ್ಯ ಮಾನಿನಿಯರ ಸಂಗ ಸಿಕ್ಕುತ್ತದೆ' ಎಂದು ಕೂಗಿ ಕರೆಯುತ್ತಿದ್ದರು. 'ಮದ್ಯ' 'ಮಾನಿನಿ'ಯರು ಸಿಗುತ್ತಾರೆಂದು ಜನ ನುಗ್ಗಿ ಬರುತ್ತಿದ್ದರು. ಭಕ್ತಿ ನಿರ್ಭರವಾಗಿ ಕುಣಿದಾಡುತ್ತಿದ್ದರು. ಜನರಿಗೂ ಭಕ್ತಿಯೆಂಬ ಸೋಂಕುರೋಗ ತಗುಲಿ ಹುಚ್ಚೆದ್ದು ಕುಣಿಯುತ್ತಿದ್ದರು. ಕುಣಿದು ಕುಣಿದು ದಣಿದು ಮೈ ಮರೆತು ನೆಲಕ್ಕೆ ಬೀಳುತ್ತಿದ್ದರು. ಎಚ್ಚರಗೊಂಡ ಮೇಲೆ 'ಮದ್ಯ ಮಾನಿನಿಯರು ಎಲ್ಲಿ ಪ್ರಭು ?' ಎಂದು ಕೇಳಿದಾಗ ಚೈತನ್ಯ ಪ್ರಭುಗಳು 'ಭಕ್ತಿಯೆ–ಅಂದರೆ ದೈವ ಪ್ರೇಮವೇ ಮದ್ಯ(ನಾರದ ಭಕ್ತಿಸೂತ್ರದಲ್ಲಿ

ಭಕ್ತಿ ಎಂದರೆ ಪ್ರೇಮ ಎಂದೇ ಅರ್ಥೈಸಲಾಗಿದೆ) ಭಕ್ತಿ ಮಿತಿಮೀರಿ ಮೈಮರೆತು ಎಚ್ಚರ ತಪ್ಪಿ ನೆಲಕ್ಕೆ ಉರುಳಿದಾಗ ಭೂಮಾನಿನಿಯ ಸಂಗ ಮಾಡಿದಿರಿ' !! ಉಪಾಯ ಹೇಗಿದೆ ನೋಡಿ !! ಇವರೆಂಥ ಮೋಸಗಾರರು!!

ದಾಸಪಂಥದ ಭಾಗವತರು

ಇಂಥ ಉಪಾಯವನ್ನು ಕರ್ನಾಟಕದಲ್ಲಿ ದಾಸಪಂಥದ ಭಾಗವತರೂ ಮಾಡಿದರು. ಆ ಮಹಾಮಹಿಮರು ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ತಾಳ ತಂಬೂರಿ ಹಿಡಿದು, ಹೆಗಲಿಗೆ ಜೋಳಿಗೆ ಹಾಕಿಕೊಂಡು ಬೀದಿಯಲ್ಲಿ ಭಕ್ತಿನಿರ್ಭರತೆಯಿಂದ ಕುಣಿದು ಹಾಡುತ್ತಾ :–

"ಕಲ್ಲು ಸಕ್ಕರೆ ಕೊಳ್ಳಿರೊ, ನೀವೆಲ್ಲ ಕಲ್ಲುಸಕ್ಕರೆ ಕೊಳ್ಳಿರೊ !!
ರಾಮನಾಮವೆಂಬ ಕಲ್ಲುಸಕ್ಕರೆ ಕೊಳ್ಳಿರೊ".

ಎಂದು ಹಾಡುತ್ತ ಹೋದರು. ದಾಸಪಂಥದ ಆ ಭಕ್ತವರೇಣ್ಯರು ಕೊಟ್ಟದ್ದು 'ಕಲ್ಲು'ಸಕ್ಕರೆಯಲ್ಲ, 'ಭಕ್ತಿ'ಯೆಂಬ ಕಳ್ಳು ಸಕ್ಕರೆ! ಭಾರತರತ್ನ ಭೀಮಸೇನ ಜೋಷಿಯವರು; 'ಭಾಗ್ಯದ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ನೀನು ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು.......' ಎಂದು ಹಾಡಿದಾಗ, 'ತುಂಗಾತೀರದ ಯೋಗಿಯ' ಮಹಿಮೆಯನ್ನು ಹಾಡಿದಾಗ, ಕೇಳಿದಾಗ ಕಾಲಿಗೆ ಗೆಜ್ಜೆಕಟ್ಟಿ ಕುಣಿಯಬೇಕೆಂದು ಅನಿಸುವುದಿಲ್ಲವೇ? ಅವರ ಹಾಡನ್ನು ಕೇಳುತ್ತ ಕೇಳುತ್ತ ಮೈ ಮರೆತು ಹೋಗುತ್ತೇವೆ. ದಾಸರೂ, ಹರಿಹರ ಕವಿ ಮಾಡಿದ ಕ್ರಾಂತಿಯನ್ನೇ ಮೃದುವಾಗಿ ಮಾಡಿದರು. ಗೀರ್ವಾಣ ಭಾಷೆಯಲ್ಲೆ ಪ್ರಾರ್ಥನೆ ಮಾಡಿದರೆ ಮಾತ್ರ ದೇವರು ಒಲಿಯುತ್ತಾನೆ ಎಂದು ಭಾವಿಸಿದ್ದ, ಹೇಳುತ್ತಿದ್ದ ವಾದಕ್ಕೆ ಸವಾಲು ಎಸೆಯುವಂತೆ ಕನ್ನಡದಲ್ಲಿ ಕೀರ್ತನೆ ಮಾಡಿದರು. ವೇದವನ್ನು ಶೂದ್ರರು ಓದಬಾರದು ಎಂಬ ನಂಬಿಗೆಯಿದ್ದ ಆ ಕಾಲದಲ್ಲಿ ದಯಾಮಯರಾದ ದಾಸರು, ವೇದ ಸತ್ಯವನ್ನು ಬೀದಿಯಲ್ಲಿ ಕನ್ನಡದಲ್ಲಿ ಹಾಡಿ ಕಿವಿಯಿದ್ದವರಿಗೆ ಕೂಗಿ ಹೇಳಿದರು! ಶೂದ್ರರು ಕಿವಿತುಂಬಾ ಕೇಳಿದರು !! ದಾಸಪಂಥದ ಈ ಮಹಾನುಭಾವರು ಮಾಡಿದ ಈ ಮಾನವ ಉದ್ಧಾರ ಯಾವ ಕ್ರಾಂತಿಗಿಂತ ಕಡಿಮೆ? ಇಂಥ ಮಹಾನುಭಾವರ ಧರ್ಮಾವಲಂಬಿಗಳು, ಅನುಯಾಯಿಗಳೆಂದು ಹೇಳಿಕೊಳ್ಳುವವರು 'ಮಡಿ ಮಡಿ ಎಂದು ಮಾರು ದೂರ ಹಾರಿ ಹೋಗಿ ಜನರಿಂದು ದೂರ ಸರಿದರಲ್ಲ' ಹೀಗೇಕೆ ಎಂದು ಒಬ್ಬ ಪ್ರಗತಿಪರ ಉದಾರವಾದಿ ಆಚಾರ್ಯರನ್ನೇ ಕೇಳಿದೆ. ಅದಕ್ಕವರು ನಗುತ್ತಾ; 'ಅದು Thousand dollars ರಹಸ್ಯ!' ಎಂದು ಹೇಳಿ ದೊಡ್ಡದಾಗಿ ನಕ್ಕುಬಿಟ್ಟರು ! ಅದೇನೇ ಇರಲಿ. ಪುರಂದರದಾಸರಾದಿಯಾಗಿ ದಾಸವರೇಣ್ಯರ ಸಮಾಜಸೇವೆ ಶ್ಲಾಘನೀಯ. ಅವರಿಗೆ ಸಾಹಿತ್ಯ ಸೇವೆಗಾಗಿ ನಮಸ್ಕರಿಸುತ್ತೇನೆ.

ನಾನು ಏನು ಹೇಳುತ್ತಿದ್ದೆ ಎಂದರೆ, ಮಾನ್ಯ ಮಿತ್ರ ಚಂಪಾ ಹೇಳಿದಂತೆ ನಮ್ಮ ಜನ ಇಡೀ ವರ್ಷ ದುಡಿ ದುಡಿದು ಹಣ್ಣಾದ ಬಡಜನ ಮೂರುದಿನ

ಬನಶಂಕರಿ ಜಾತ್ರೆಗೆ ಹೋಗಿ ಕುಣಿಯೋಣಬಾರಾ ಎಂದು ಹಾಡುತ್ತ ಸಂತೋಷಪಡುವುದರಲ್ಲಿ ತಪ್ಪೇನು? ಜಾತ್ರೆಗೆ ಹೊಸದಾಗಿ ಮದುವೆಯಾದ ಗಂಡ–ಹೆಂಡತಿ, ಮದುವೆಯಾಗಲಿರುವ ಯುವಕ–ಯುವತಿಯರು ಕೂಡಿ ಜಾತ್ರೆಗೆ ಹೋಗಿ, ಅಪ್ಪ ಅಮ್ಮಂದಿರ ಹೆದರಿಕೆ ಇಲ್ಲದೆ ಜಾತ್ರೆಯಲ್ಲಿ ಮಜಾ ಮಾಡಿದರೆ ತಪ್ಪೇನು? ಕುಡಿದು ಕುಪ್ಪಳಿಸುವ ವಿಚಾರದಲ್ಲಿ ನನ್ನದೊಂದು ಸ್ವಲ್ಪ ಸವರಣೆ. ಕುಡಿಯಲೇಬೇಕೆಂದರೆ–ಕುಡಿಯದಿದ್ದರೆ ಒಳ್ಳೆಯದು– ಮತ್ತೇರುವಂತೆ ಜಾತ್ರೆಯ ಸೊಬಗು ನೋಡುವ ಪ್ರಜ್ಞೆ ತಪ್ಪದಂತೆ ರುಚಿ ನೋಡಿ. ನೀವು ಈ ಸಮ್ಮೇಳನದ ಜಾತ್ರೆಗೆ ಬಂದಾಗ ಇಲ್ಲಿಯೂ ನಿಮಗೆ ಕುಡಿಸುತ್ತೇವೆ!! ನಾವು ಸಾಹಿತಿಗಳು ನಿಮಗೆ 'ಕಾವ್ಯ ರಸಾಮೃತ ಪಾನವನ್ನು' ಕುಡಿಸುತ್ತೇವೆ!! ಅದರಿಂದ ಎಂಥ ಆನಂದವಾಗುತ್ತದೆ ಗೊತ್ತೆ? ಸ್ವರ್ಗಾನಂದಕ್ಕಿಂತ ಒಂದೇ ಮೆಟ್ಟಲು ಕೆಳಗೆ! ಸ್ವರ್ಗಾನಂದಕ್ಕೆ ಸಮಾನವಾದ ಆನಂದ (ಖುಷಿ) ವನ್ನು ಬಂದ ಸಹೃದಯರಿಗೆ ಪುಕ್ಕಟೆ ಕೊಡುತ್ತೇವೆ! ಸೆರೆ ಕುಡಿದರೆ ದೊರೆಯಬಹುದಾದ ಅಲ್ಪ ಆನಂದಕ್ಕಾಗಿ ಹಣತೆತ್ತು ಮನಸ್ಸು ಮತ್ತು ಮೈ ಆರೋಗ್ಯ ಕೆಡಿಸಿಕೊಳ್ಳಬೇಡಿ. ವರ್ಷಕೊಮ್ಮೆ ಇಂಥ ಸಮ್ಮೇಳನಕ್ಕೆ ೩ ದಿನ ಬನ್ನಿ. ಕಂಠಪೂರ್ತಿ ಕಾವ್ಯ ರಸಾಸ್ವಾದನೆ ಮಾಡಿ! ಅದು ತಪ್ಪಲ್ಲ. ಅದರ ಬದಲು ಜೀವದ ಕಠಿಣ ಸಮಸ್ಯೆ–ದುಃಖ–ನಿವಾರಣೋಪಾಯವನ್ನು ಕಂಡು ಮುಕ್ತರಾಗಿ, ಅದು ಜೀವದ ಗಮ್ಯ. ಈ ಮಾತನ್ನು ಮಹಾಕವಿ ಕುವೆಂಪು ತಮ್ಮ ಮಹಾಕಾವ್ಯ ಶ್ರೀರಾಮಾಯಣದರ್ಶನಂ ಮುಕ್ತಾಯ ಮಾಡುವಾಗ ಹೀಗೆ ಹೇಳಿದ್ದಾರೆ;–

"ಕವಿ ವಿಭೂತಿಗೆ ನಮೋ! ಕೃತಿ ವಿಭೂತಿಗೆ ನಮೊ!
ದರ್ಶನ ಧ್ವನಿ ರಸಾಮೃತಪಾನದಾನಂದಿಂ
ಲೋಕ ಶೋಕವನಳಿಸಿ ಭುವನತ್ರಯಂಗಳಂ ತಣಿಪ(ಶ್ರೀ ರಾ.ದ ಪುಟ ೮೭೬ ಸಾಲು ೨೧೮–೨೧)

ಇಲ್ಲಿ ಲಕ್ಷಯಿಟ್ಟು ಗಮನಿಸಬೇಕಾದ ಮಾತುಗಳೆಂದರೆ **ದರ್ಶನ ಧ್ವನಿ ರಸಾಮೃತ ಪಾನದಾನಂದ....... ಲೋಕ ಶೋಕವನಳಿಸಿ.....** ಈ ಮಹಾ ಕಾವ್ಯಭ್ಯಾಸದ ಪರಮೋದ್ದೇಶ, ಚರಮ ಗಮ್ಯ ಲೋಕಶೋಕವನ್ನು ಅಳಿಸುವುದು. ಗೀತಾಚಾರ್ಯ ೧೮ ಅಧ್ಯಾಯಗಳಲ್ಲಿ ಬೋಧಿಸುವುದರ ಮುಖ್ಯೋದ್ದೇಶ ಅಥವಾ ಏಕಮಾತ್ರ ಉದ್ದೇಶ ಅರ್ಜುನನ ದುಃಖ (ವಿಷಾದ) ನಿವಾರಣೆ. ಗೀತೆಯ ಕೊನೆಯ ಆಖೈರ್ ವಾಕ್ಯ.

"ಯತ್ರ ಯೋಗೇಶ್ವರಃ ಕೃಷ್ಣೋತತ್ರ ಪಾರ್ಥೋ ಧನುರ್ಧರಃ
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವೊ ನೀತಿರ್ಮಮಾ (ಗೀತೆ ಅಧ್ಯಾಯ ೧೮ ಶ್ಲೋಕ ೭೮)

ನಿಜಗುಣ ಶಿವಯೋಗಿಗಳು 'ಕೈವಲ್ಯ ಪದ್ಧತಿ' ಪ್ರಾರ್ಥನಾ ಪದಗಳಲ್ಲಿ 'ಉದಯರಾಗ'ದ...

ಉದಯಾಸ್ತಮಾನದೊಳು ನೂರೆಂಟು ನಾಮವನು
ಪದುಳದಿಂದೋದಿಕೇಳಿದವರ್ಗೆ ಶಂಭುಲಿಂ

ಗದ ಕರುಣದಿಂದಿನಿತುಕೊರತೆಯಿಲ್ಲದೆ ಸಕಲ ಸಂಪದದೊಳೊಂದುಗೂಡಿ...
ಸದಮಲಜ್ಞಾನಸದ್ಭಕ್ತಿಗಳು ಮೇಲೆ ಮೇ
ಲೊದವಿ ಕೈಸಾರುತಿಹವಿಹದಲ್ಲಿ ಪರದೊಳೊಂ
ದಿಂದ ಗಣಪದವನೈದಿ ನಿಜಸುಖದೊಳಿಹ ಮುಕ್ತಿ ದೊರೆವುದಿದು ಸತ್ಯವೆಂದು.

ಸಂತ ಕವಿಯ ಈ ಅಭಯ ವಾಕ್ಯದಲ್ಲಿ ಗಮನಿಸಬೇಕಾದ ಬಹು ಮುಖ್ಯ ಮಾತು ಇಹ ಜೀವನದಲ್ಲಿ 'ಸಕಲ ಸಂಪದ ದೊರೆತು, ಪರದೊಳು ಗಣಪದವನೈದಿ ಮುಕ್ತಿ ಪ್ರಾಪ್ತಿ. ಯಾವುದರಿಂದ ಮುಕ್ತಿ ? ಜೀವಕ್ಕೆ ಬಡಿದ ಜಾಡ್ಯ ದುಃಖದಿಂದ ಮುಕ್ತಿ' ನಿವಾರಣೆ. ನಮ್ಮ ಪ್ರಾಚೀನ ಕಾವ್ಯಗಳ ಕೊನೆಯ ಮಂಗಳವಾಕ್ಯ ಇದೇನೆ. ಆ ಕವಿಗಳ ಮುಖ್ಯ ಧ್ಯೇಯ ಜನರ ದುಃಖ ನಿವಾರಣೆ. ಇಹ ಲೋಕದ ಒಳಿತು. ಇಹ ಲೋಕದ ಕಷ್ಟ ಕಾರ್ಪಣ್ಯ, ತತ್ ಫಲವಾಗಿ ತಲ್ಲಣಿಸುವವರ ಲೋಕ ಶೋಕವನಳಿಸುವ ಘನೋದ್ದೇಶ. ಈ ಉದ್ದೇಶ ಈಡೇರಿಸಲು ಕಾವ್ಯ ರಚನೆ. ಆ ಕವಿ ಶೋಕವನ್ನು ಅನುಭವಿಸದಿದ್ದರೆ ಅವನು ಇತರರ ನೋವನ್ನು ಏನು ಬಲ್ಲ? ಹೇಗೆ ನಿವಾರಿಸಬಲ್ಲ ? ಆದಿಕವಿ ವಿರಹಿ ಕ್ರೌಂಚ ಪಕ್ಷಿಯ ದುಃಖವನ್ನು ಕಂಡ. ಅದನ್ನು ನಿವಾರಿಸುವುದಕ್ಕಾಗಿಯೇ ಶ್ಲೋಕರೂಪದಲ್ಲಿ ಕಾವ್ಯ ರಚಿಸಿದ. ಆದ್ದರಿಂದಲೆ ನೋವುಣ್ಣದವನು ಕವಿಯಾಗಲಾರ. ಆದ್ದರಿಂದಲೆ ಮಹಾಯೋಗಿ ಮಹರ್ಷಿ ಶ್ರೀ ಅರವಿಂದರು ತಮ್ಮ ಮಹಾಕಾವ್ಯ ಸಾವಿತ್ರಿಯಲ್ಲಿ ಅಶ್ವಪತಿಯ ಭವಜೀವನದಿಂದ ಮುಕ್ತಿ ಕೊಡಲೆಂದೇ ಭುವಿಯಲ್ಲಿ ಶ್ರೀಮಾತೆ ಅವತರಿಸಿದಳೆಂದು ಹೇಳುವಾಗ 'ಯಾರು ಜೀವರ ಉದ್ಧಾರಮಾಡಲು ಇಚ್ಛಿಸುವರೊ ಅವರು ಜೀವರೊಡನೆ ಜನಿಸಿ, ಜೀವಿಸಿ ದುಃಖವನ್ನು ಅನುಭವಿಸಲೇಬೇಕು' ಎನ್ನುತ್ತಾರೆ. ಕವಿಯಾದವನು– ಕವಿ ಎಂದರೆ ಸಕಲ ಸೃಷ್ಟಿ ಕರ್ತ ಬ್ರಹ್ಮನು– ಸೃಷ್ಟಿಯಲ್ಲಿ ಸಹಭಾಗಿಯಾಗಿ, ಒಂದಾಗಿ ಅದರ ಸಂಕಟವನ್ನು ಪರಿಹರಿಸಬೇಕು. ಕೊನೆಯದಾಗಿ ಒಂದು ಕಳಕಳಿಯ ವಿನಂತಿ: ದಯವಿಟ್ಟು ಬಾರ್‌ಗೆ ಹೋಗಿ ಕುಡಿಯಬೇಡಿ. ಇಂಥ ಜಾತ್ರೆಗೆ ಬರ್‍ರಿ, ಕಾವ್ಯ ರಸಾಪಾನ ಮಾಡಿ 'ಪಾನ'ಮುಕ್ತರಾಗಿ.

ಬರಹಗಾರರಲ್ಲಿ ವಿನಂತಿ

ಈಗ ಸಾಹಿತ್ಯ ನಿರ್ಮಾಪಕರಾದ ಬರಹಗಾರರಲ್ಲಿ ವಿನಂತಿ ಮಾಡುತ್ತೇನೆ; ನೀವು ಸಾಹಿತ್ಯ ಸದನವೆಂಬ ಕಾರ್ಖಾನೆಯಲ್ಲಿ ಸುಖ, ಶಾಂತಿ, ಪ್ರೀತಿ ಸಕಲ ಜೀವಾತ್ಮರಿಗೆ ಲೇಸನೆಸಗುವ ಸಂಜೀವಿನಿ ಔಷಧ ಕೊಡುವ ಸದ್ವೈದ್ಯರಾಗಿ; ಧನ್ವಂತರಿಗಳಾಗಿ! ಲೋಕಕಲ್ಯಾಣ ಕರ್ತೃಗಳಾಗಿ, ಅದನ್ನು ಮರೆತು ಕೈಬಿಟ್ಟು ದ್ವೇಷ, ಪರಮತ ದೂಷಣೆಯ ಯುದ್ಧಾಸ್ತ್ರಗಳ ಸುಳ್ಳಿನ ಆಯುಧಗಳನ್ನೂ ತಯಾರಿಸುವ ಆಳುವವರ ಊಳಿಗದ ಆಳುಗಳಾಗಬೇಡಿ. ಅಧಿಕಾರದಲ್ಲಿರುವವರ ಪ್ರೀತ್ಯರ್ಥವಾಗಿ ಅವರ ಆಜ್ಞಾನುವರ್ತಿಗಳಾಗಬೇಡಿ. ಆ ಹೀನ ಪ್ರವೃತ್ತಿ ಭಾರತೀಯ ಬರಹಗಾರರಲ್ಲಿ ಇರುವುದನ್ನು ಕಳೆದ ಶತಮಾನದಲ್ಲಿದ್ದ ಪ್ರಕಾಂಡ ಇತಿಹಾಸಕಾರ ಜದುನಾಥ ಸರ್ಕಾರ ಹೀಗೆ ವರ್ಣಿಸಿದ್ದಾರೆ:–

"In India the art of literary beggary was carried to nauseating lengths...... by the Court flatterers.....of Hindu Kings and even of some of the Mughal Emperors. The very training, mode of life and literary models of these....... poets made them unfit to be sober recorders of facts....."

-Shivaji and his Times (p: 411, 3rd Ed: 1929-pub: S.C.Sarkar & Sons)

ಜದುನಾಥ ಸರ್ಕಾರರ ಈ ಮಾತುಗಳು, ಹರಿಹರನ ಮಾತುಗಳಂತೆಯೆ ಇವೆ.

ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯ

ಹಿಂದಿನ ಭಾರತೀಯ ಸಾಹಿತಿಗಳ ಈ ಪ್ರವೃತ್ತಿ ಇಂದಿನ ಬರಹಗಾರರಲ್ಲೂ ಇದೆ. ದಯವಿಟ್ಟು ದ್ವೇಷದ– ಮತೀಯ ದ್ವೇಷವಾಗಿಸಬಹುದು, ಭಾಷಾದ್ವೇಷ ವಾಗಿರಬಹುದು, ಸ್ತ್ರೀ ದ್ವೇಷವಾಗಿರಬಹುದು– ಯಾವುದೆ ಆಯುಧಗಳನ್ನು ನಿರ್ಮಾಣ ಮಾಡಬೇಡಿ. ಬರೆಯುವ ಶಕ್ತಿಯಿದೆ, ಭಾಷಾ ಸಾಮರ್ಥ್ಯವಿದೆ. ಸ್ವಲ್ಪ ಮಟ್ಟಿಗೆ ಖ್ಯಾತಿಯೂ ಇದೆ, ಅದಕ್ಕಿಂತಲೂ ಕಡಮೆ ನಿಮ್ಮ ಓದುಗರೂ ಇದ್ದಾರೆ, ಕೈಯಲ್ಲಿ ಲೇಖನಿಯ ಖಡ್ಗವಿದೆ, ಕಲ್ಲಿದೆ, ಅದನ್ನು ಇಚ್ಛೆ ಬಂದಂತೆ ಯಾರ ತಲೆಗಾದರೂ ಬೀಸಬೇಡಿ. ಬರೆಯುವ ಸ್ವಾತಂತ್ರ್ಯ ಇದೆ. ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಯಾರನ್ನಾದರೂ ವಧೆ (ತೇಜೋವಧೆ) ಮಾಡಬೇಡಿ. ಬರೆಯುವ, ಮಾತನಾಡುವ ಮೂಲಭೂತ ಹಕ್ಕಿದೆ. ಆ ಹಕ್ಕು ಎಲ್ಲಿಯವರೆಗೆ? ಆ ಮಿತಿಯನ್ನು ಒಬ್ಬ ಅಮೆರಿಕೆಯ ನ್ಯಾಯಮೂರ್ತಿ ಹೀಗೆ ಹೇಳುತ್ತಾರೆ:–

'ನಾವು ಯಾವ ದಿಕ್ಕಿಗಾದರೂ ಹೋಗುವ ಹಕ್ಕಿದೆ, ಆದರೆ ಎದುರಿಗೆ ಬರುವವನ ಮೂಗಿಗೆ ಢಿಕ್ಕಿ ಹೊಡೆದು ಗಾಯ ಮಾಡುವವರೆಗೆ ಹೋಗುವ ಹಕ್ಕಿಲ್ಲ'. ಹಾಗೆ ಮೂಗಿಗೆ ಗುದ್ದಿ ಢಿಕ್ಕಿ ಹೊಡೆದು ರಕ್ತ ಸುರಿಸುವ ಹಕ್ಕಿಲ್ಲ. ಬರಹಗಾರ ಲೇಖನಿಯನ್ನು ಕಾಗದಕ್ಕೆ ಇಡುವಾಗ, ತಾನು ಬರೆಯಲಿರುವುದು ಇತರರ ಮೂಗನ್ನು ಗುದ್ದುವುದೆ? ರಕ್ತ ಸುರಿಸುವುದೆ? ನಾವು ಬರೆಯುವುದರಿಂದ ದುಷ್ಟರ ನಿಗ್ರಹ ಆಗುವುದಾದರೆ, ಶಿಷ್ಟರ ರಕ್ಷಣೆ ಆಗುವುದಾದರೆ ಅರ್ಜುನನಂತೆ ಬ್ರಹ್ಮಾಸ್ತ್ರವನ್ನೊ ರಾಮಬಾಣವನ್ನೊ ಇನ್ನೇನೋ ಅಸ್ತ್ರವನ್ನಾದರೂ ಬಿಡು. ಬರಹಗಾರ ತಾನು ಬರೆಯವ ಬರಹ ಲೋಕ ಕಲ್ಯಾಣಕಾರಕವೊ, ಮಾರಕವೊ, ಎಂಬುದನ್ನು ಗಾಢವಾಗಿ, ಗಂಭೀರವಾಗಿ ಯೋಚಿಸಬೇಕು. ಬರಹಗಾರನ ಹೆಗಲಿನ ಮೇಲೆ, ಕೈಯಲಿರುವ ಲೇಖನಿಗೆ ಒಂದು ಸಾಮಾಜಿಕ ಹೊಣೆ, ಜವಾಬ್ದಾರಿ ಇದೆ. ಅವನು ಸಮಾಜಕ್ಕೆ ಹೊಣೆಗಾರ. ಅದನ್ನು ವಿವೇಕಯುಕ್ತವಾಗಿ ಅವನು ನೆರವೇರಿಸಬೇಕು. ಇದು ನನ್ನ ಸವಿನಯ ಪ್ರಾರ್ಥನೆ. ಈ ಆದರ್ಶದ ಮಾತನಾಡಿದ ಮೇಲೆ ಇನ್ನು ನಮ್ಮ ನಾಡು ನುಡಿ, ಪ್ರಚಲಿತ ಸಮಸ್ಯೆಗಳನ್ನು ಕುರಿತು ನಾಲ್ಕು ಮಾತುಗಳನ್ನಾಡುತ್ತೇನೆ. ಇದು ನನ್ನ ಅನಿವಾರ್ಯ ಕರ್ತವ್ಯ.

ಕರ್ನಾಟಕ ಅರಾಷ್ಟ್ರೀಯವಲ್ಲ

ಇಂದು ನಾವಿಲ್ಲಿ ಸೇರಿರುವುದು: **ಅಖಿಲ** ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಇದು ಆರೇಳು ಕೋಟಿ ಜನರ ಪ್ರಾತಿನಿಧಿಕ ಸಮಾವೇಶ. ಕನ್ನಡ ಸಮ್ಮೇಳನದಲ್ಲಿ 'ಅಖಿಲ' ಎಂಬ ಗುಣವಾಚಕ ಭಾರತಕ್ಕೂ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಇದನ್ನು ಬಿಡಿಸಿ, ಹಿಗ್ಗಿಸಿ ಹೇಳುವುದಾದರೆ ಇದು 'ಅಖಿಲ ಭಾರತ ಮತ್ತು ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ' ಎಂದಾಗುತ್ತದೆ. ಈ ಸಮ್ಮೇಳನಾಧ್ಯಕ್ಷ ಅಖಿಲ ಭಾರತವನ್ನು ಕರ್ನಾಟಕವನ್ನು ಕನ್ನಡವನ್ನು – ಸಾಹಿತ್ಯ, ಸಂಸ್ಕೃತಿ, ಧರ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಭಾರತಾಂತರ್ಗತ ಅಖಿಲ ಕರ್ನಾಟಕದ ಹಿತ, ರಕ್ಷಣೆ, ಅಭಿವೃದ್ಧಿ, ಕ್ಷೇಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕು. ಅಂದರೆ ಅಖಂಡ ಭಾರತದ ಹಿತಕ್ಕೆ ಧಕ್ಕೆ ಆಗದಂತೆ ಅಖಿಲ ಕರ್ನಾಟಕದ ಹಿತರಕ್ಷಣೆ ಮಾಡಬೇಕು. ಇಂದಿನ ಈ ಮಹಾಧಿವೇಶನದ ಪ್ರಾರಂಭದಲ್ಲಿ ಕುವೆಂಪು ವಿರಚಿತ ನಾಡಗೀತೆಯನ್ನು ನಾವು ಎದ್ದು ನಿಂತು ಉಚ್ಚ ಕಂಠದಿಂದ ಕರ್ನಾಟಕ ಮಾತೆಯ ಮಹಿಮೆಯನ್ನು ಹಾಡಿದೆವು. ಆ ಗೀತೆಯ ಮೊದಲನೆಯ ಸಾಲು 'ಜಯ ಭಾರತ ಜನನಿಯ ತನುಜಾತೆ' ಎಂಬ ಜಯ ಘೋಷ. ತರುವಾಯ ಎರಡನೆಯ ಸಾಲು 'ಜಯ ಹೇ ಕರ್ನಾಟಕ ಮಾತೆ' ಎಂಬುದು. ಈ ನಾಡಗೀತೆಯ ಅರ್ಥ, ಮಹತ್ವ ಇಂಗಿತ ಏನು? ಅದನ್ನು ರಚಿಸಿದ ಕವಿ ಹೀಗೆ ವರ್ಣಿಸಿದ್ದಾರೆ:

"ಈ ನಮ್ಮ ಕರ್ಣಾಟಕತ್ವ ಎಂದೆಂದಿಗೂ ಭಾರತೀಯತ್ವಕ್ಕೆ **ಅವಿರುದ್ಧವಾಗಿ** ನಿಲ್ಲುತ್ತದೆ. ಕರ್ಣಾಟಕ ಮಾತೆಗೆ ಜಯಘೋಷ ಮಾಡುವಾಗಲೆಲ್ಲ ಭಾರತಮಾತೆಯ ಪುತ್ರಿಯೆಂದು ಮೊದಲೆ ಘೋಷಿಸುತ್ತೇವೆ".

"ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!"–

ನಾವು ಮಕ್ಕಳಾಗಿದ್ದಾಗ ಕೆಲವರು ಕಿತಾಪತಿಯ ದೊಡ್ಡವರು ತಮಾಷೆ ನೋಡುವುದಕ್ಕಾಗಿ ನಮಗೊಂದು ಪ್ರಶ್ನೆ ಹಾಕುತ್ತಿದ್ದರು. "ನೀನು ಅವ್ವನ ಮಗನೋ? ಅಪ್ಪಯ್ಯನ ಮಗನೋ?" ಎಂದು ನಾವು ಕಕ್ಕಾಬಿಕ್ಕಿಯಾಗುತ್ತಿದ್ದೆವು. ಪ್ರಶ್ನೆ ಕೇಳುವವರಿಗೆ ಬೇಕಾಗಿದ್ದದ್ದೂ ಅದೇಯೆ. ನಾವು ನಮ್ಮ ಪುಟ್ಟ ಮಿದುಳಿನಿಂದಲೇ ಸ್ವಲ್ಪ ಯೋಚನೆಮಾಡಿ–ಹುಟ್ಟಿನಿಂದಲೂ ಹಾಲು ಕೊಟ್ಟು ಹತ್ತಿರ ಮಲಗಿಸಿ ಕೊಳ್ಳುವವಳು ಅವ್ವ ತಾನೇ?–'ನಾನು ಅವ್ವನ ಮಗ!' ಎಂದರೆ ಕೇಕೆ ಹಾಕಿ ಕೈ ಚಪ್ಪಾಳೆ ಹೊಡೆದು ನಗುತ್ತಿದ್ದರು. ಅರೆ! ಅರೆ! ಏನೋ ತಪ್ಪು ಹೇಳಿಬಿಟ್ಟೆನಲ್ಲಾ ಎಂದು, ಅದನ್ನು ಬೇಗನೆತಿದ್ದಿಕೊಳ್ಳಲೆಂದು 'ಅಲ್ಲ, ಅಲ್ಲ, ನಾನು ಅಪ್ಪನ ಮಗ' ಎಂದರೆ ಇನ್ನೂ ಗಟ್ಟಿಯಾಗಿ ಕೇಕೆ ಹಾಕಿ ಕೈ ಚಪ್ಪಾಳೆ ತಟ್ಟಿ, ನಕ್ಕು, ನಮ್ಮನ್ನು ಕಂಗಾಲು ಮಾಡುತ್ತಿದ್ದರು. ಹಾಗೆಯೆ ಈ 'ತಂದುಹಾಕುವ' ಕಿತಾಪತಿಯ ಜನ ನಮ್ಮ ಕರ್ನಾಟಕತ್ವ ಮಹಾರಾಷ್ಟ್ರತ್ವ ಆಂಧ್ರತ್ವಗಳಿಗೂ ನಮ್ಮ ಭಾರತೀಯತ್ವಕ್ಕೂ ವಿರೋಧಭಾವದ ಆರೋಪಣೆ

ಮಾಡುತ್ತಾರೆ, ತಮ್ಮ ಸ್ವಾರ್ಥಸಾಧನೆಗಾಗಿ. ಅಂತಹ ಕುಹಕರ ಕುಣಿಗೆ ಬೀಳದಂತೆ ನಮ್ಮ ರಾಷ್ಟ್ರನಿಷ್ಠೆಯನ್ನು ರಕ್ಷಿಸಿಕೊಂಡು ನಾವು ವಿವೇಕಶಾಲಿಗಳಾಗಿ ಮುಂದುವರಿಯಬೇಕು"

ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುತ್ತಿರುವಾಗಲೆ 'ಕರ್ನಾಟಕತ್ವ **ಅರಾಷ್ಟ್ರೀಯವಲ್ಲ'** ಎಂಬ ಹೊತ್ತಿಗೆಯನ್ನು ಏಕೀಕರಣ ಜಗದ್ಗುರುಗಳೆಂದೇ ಪ್ರಖ್ಯಾತರಾಗಿದ್ದ ಅನಂತಪುರ ಜಿಲ್ಲಾ ಉರವಕೊಂಡದ ಶ್ರೀ ಶ್ರೀ ಕರಿಬಸವರಾಜೇಂದ್ರ ಸ್ವಾಮಿಗಳು ಬರೆದರು. ಅವರು ಹುಬ್ಬಳ್ಳಿಗೆ ಬಂದರೆ ರೈಲ್ವೇ ನಿಲ್ದಾಣದ ಪ್ಲಾಟ್ ಫಾರಂ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ, ಗಾಂಧಿ ಟೋಪಿ ಧರಿಸಿದ್ದ ಸಹಸ್ರಾರು ದೇಶಭಕ್ತರು ಅವರನ್ನು ಸ್ವಾಗತಿಸಲು ನಡುಗುವ ಚಳಿಯಲ್ಲಿ ಸುಡುವ ಬಿಸಿಲಿನಲ್ಲಿ ಹಂಪಿಯ ಜಾತ್ರೆಯ ಭಕ್ತ ಸಮೂಹದಂತೆ ಸೇರುತ್ತಿದ್ದರು. ನಿಲ್ದಾಣದ ಛಾವಣಿ ಹಾರುವಂತೆ 'ಭಾರತ ಮಾತಾಕಿ ಜೈ' 'ಜಯ ಕರ್ನಾಟಕ' ಎಂದು ಹುಚ್ಚು ಹಿಡಿದವರಂತೆ ಅಬ್ಬರಿಸುತ್ತಿದ್ದರು! 'ಭಾರತ ಜನನಿಯ ತನುಜಾತೆ' ಎಂಬ ಜಯಘೋಷದ ಇಂಗಿತ, ಜೀವ ಜೀವಾಳ ಇದು. ಏಕೀಕರಣಕ್ಕಾಗಿ ಪ್ರಾಣತೆತ್ತ ಬಳ್ಳಾರಿಯ ಏಕಮಾತ್ರ ಹುತಾತ್ಮ ರಮಜಾನ್ ಸಾಹೇಬನ ಕೊನೆಯ ಉಸುರಿನ ಜಯಘೋಷ ಇದು. ಕೊನೆಯ ಘಳಿಗೆಯಲ್ಲಿ ಆ ಕನ್ನಡಿಗನ ಪ್ರಾರ್ಥನೆ! ಕರ್ನಾಟಕ ಚಳುವಳಿಯ ಜಗದ್ಗುರು ಶ್ರೀ ಕರಿಬಸವಸ್ವಾಮಿಗಳ ಏಕನಿಷ್ಠೆಯ ಶಿಷ್ಯ ರಮಜಾನ್ ಸಾಬ್, ಮುಸ್ಲಿಂ ಸುಪುತ್ರ, ಅಂಥ ನಮ್ಮ ಸೋದರ ನನ್ನನ್ನು ಅಣ್ಣಾ ಎಂದು ಕರೆಯುತ್ತಿದ್ದ. ಮುಸ್ಲಿಂ ಜನಾಂಗದವರ ಪ್ರಾರ್ಥನಾ ಮಂದಿರಗಳನ್ನು ಧ್ವಂಸ ಮಾಡಿದಾಗ, ರಮಜಾನ್ ನೆನಪಾಗುತ್ತಾನೆ, ಅಳುತ್ತೇನೆ. ಇಂಥ ಸಮಾರಂಭಗಳಲ್ಲಿ "ಹಿಂದೂ ಮುಸ್ಲಿಂ ಕ್ರೈಸ್ತ 'ಸರ್ವಜನಾಂಗದ ಶಾಂತಿಯ ತೋಟ' ಎಂದು ಕಡ್ಡಾಯವಾಗಿ ಸಭಿಕರೆಲ್ಲಾ ಹಾಡಲೇಬೇಕೆಂದು ನಮ್ಮ ಸರ್ಕಾರವೇ ಶಾಸನ ಮಾಡಿದೆ ! ಆ ಶಾಸನಾನುಸಾರ ನಾವು ಬದುಕುತ್ತಿದ್ದೇವೆಯೇ? ಹಾಗೆ ಸೆಕ್ಯೂಲರ್ ರಾಜ್ಯ ಶಾಸನವನ್ನು ಉಲ್ಲಂಘಿಸಿದರೆ ರಾಷ್ಟ್ರದ್ರೋಹಿಗಳಾಗುವುದಿಲ್ಲವೆ? ಅಂಥವರನ್ನು ರಾಜ್ಯ ದ್ರೋಹಿಗಳೆಂದು ಪೀನಲ್ ಕೋಡ್ ಪ್ರಕಾರ ಶಿಕ್ಷಿಸಿ 'ಕಾಳಾಪಾನೀ' ಶಿಕ್ಷೆಗೆ ಗುರಿಪಡಿಸಬೇಕಲ್ಲವೆ?

ಇಂಥ ರಾಜ್ಯನಿಷ್ಠನಾದ ನಾನು ನಮ್ಮ ಸೆಕ್ಯೂಲರ್ ರಾಷ್ಟ್ರಕ್ಕೂ ನಿಷ್ಠನೆ. ಭಾರತ ಜನನಿಯ ಬಿಡುಗಡೆಗಾಗಿ ಕಿಂಚಿತ್ ಸೇವೆ ಮಾಡಿದೆ. ತುರಂಗವಾಸವನ್ನು ನಾನು ಅನುಭವಿಸಿದೆ – ನಗು ನಗುತ: ನನ್ನ ಹಡೆದ ತಾಯಿ ತಂದೆಯ ಹೊಟ್ಟೆ ಉರಿಸಿದೆ! ಆ ದಿನಗಳನ್ನು ನೆನೆದಾಗ ಗೋದ್ರೋತ್ತರ ದಾಳಿಯಲ್ಲಿ ತಾಯಿ, ತಂದೆ, ಅಣ್ಣ, ತಮ್ಮ, ತಂಗಿ, ಅತ್ತಿಗೆ, ಅಜ್ಜಿ, ಅಜ್ಜ ಎಲ್ಲರನ್ನೂ ಕಳೆದುಕೊಂಡ ಓರ್ವ ಯುವತಿ ನೆನಪಾಗುತ್ತಾಳೆ. ತನ್ನ ಬಂಧುಗಳೆಲ್ಲ ಸುಟ್ಟು ಹೋಗಿದ್ದ, ಆ ಸುಟ್ಟ ಕಾಡಿಗೆ ಮೆತ್ತಿದ್ದ ಅವಳ ಮನೆಯ ವರಾಂಡಾದ ಅಡ್ಡ ಗೋಡೆಯ ಮೇಲೆ ನಮ್ಮ ಬೇಲೂರಿನ

ಸುಂದರ ಶಿಲಾಬಾಲಕಿಯಂತೆ ಕೂತಿದ್ದಳು. ಅಲ್ಲಿಗೆ ಟಿ.ವಿ. ಸುದ್ದಿ ಮಾಧ್ಯಮದವರು ಬರುತ್ತಾರೆ ಆಕೆ ಅಲ್ಲಿ ಏಕಾಂಗಿಯಾಗಿ ಕುಳಿತು ಬಂದವರನ್ನು ಹೊಳೆಯುವ ತನ್ನ ಕಣ್ಣುಗಳಿಂದ ನೋಡುತ್ತಾಳೆ. ಟಿ.ವಿ.ವಾಹಿನಿ ಯವನು 'ಇಲ್ಲಿ ಏನಿದೆ ಎಂದು ಬಂದು ಕುಳಿತಿದ್ದೀ' ಎಂದು ಕೇಳಿ, ಆಕೆಯ ಮುಖದ ಮುಂದೆ ಧ್ವನಿವಾಹಕ ಯಂತ್ರವನ್ನು ಹಿಡಿಯುತ್ತಾನೆ. ಆಕೆ ತನ್ನ ಸುಂದರ ಬೊಗಸೆ ಕಣ್ಣುಗಳನ್ನು ಇನ್ನೂ ಅಗಲಿಸಿ ರೆಪ್ಪೆ ಬಡಿಯದೇ 'ಏನಿದೆ? ಇಲ್ಲಿ ನನ್ನ ದೇಶವಿದೆ! ಇಲ್ಲಿ ಹುಟ್ಟಿದ್ದೇನೆ, ಇಲ್ಲಿ ಸಾಯುತ್ತೇನೆ' ಎಂದು ಉತ್ತರಿಸುತ್ತಾಳೆ ಇದನ್ನು ಟಿ.ವಿ.ಯಲ್ಲಿ ಕೇಳಿದಾಗ ನನ್ನ ಕಣ್ಣಲ್ಲಿ ನೀರುಕ್ಕಿತು ! ಶಹಬಾಸ್ ಮಗಳೇ! ದೇಶದ ಪರಮ ಭಕ್ತೆ ಎಂದುಕೊಂಡೆ. ಇಂಥವರು ಇದ್ದಾರೆಂದೇ ಭಾರತ ಮಾತೆ ಇನ್ನೂ ಬದುಕಿದ್ದಾಳೆ. ಮುಂದೆಯೂ ಬದುಕುತ್ತಾಳೆ. ಇಂಥ ದೇಶದಲ್ಲಿ ಹುಟ್ಟಿದ್ದು ಬದುಕಿದ್ದು ಸಾರ್ಥಕ ಎಂದುಕೊಂಡೆ. ಆಕೆಯ ದೇಶಭಕ್ತಿಯ ಮುಂದೆ ನಾನು ಸೆರೆವಾಸ ಅನುಭವಿಸಿದ್ದು ಯಾತರ ದೇಶಭಕ್ತಿ? ನಗಣ್ಯ. ಒಂದು ವೇಳೆ ಆಕೆಯನ್ನು ಪಾಕಿಸ್ತಾನದ ಗಡಿಗೆ ಕರೆದೊಯ್ದು ಭಾರತದಿಂದ ದಬ್ಬಿದ್ದರೆ ಆಕೆ ಹಿಮ್ಮುಖವಾಗಿ ಭಾರತದೊಳಗೆ ಕುಪ್ಪಳಿಸುತ್ತಿದ್ದಳು.

ಆದ್ದರಿಂದ ಇಂಥ ಸೆಕ್ಯೂಲರ್‌ಭಾರತ ಮಾತೆಗೆ ನಾನು ನಿಷ್ಠ. ಕೇಸರಿ, ಬಿಳಿ, ಹಸಿರು, ಅಶೋಕ ಧರ್ಮಚಕ್ರಾಂಕಿತ ಧ್ವಜವೇ ನಮ್ಮ ಭೂತಾಯಿಯ ಪ್ರತೀಕ. ಆ ಧ್ವಜ, ಪೂರ್ಣ ಕೇಸರಿ, ಅಥವಾ ಪೂರ್ಣ ಹಸಿರು ಬಣ್ಣವಾಗಲು ಬಿಡೆನು ! ಮತ್ತು ಬುದ್ಧನ ಅಪರಾವತಾರ ಅಂಬೇಡ್ಕರ್, ರಾಷ್ಟ್ರಪಿತ ಗಾಂಧಿ ಹೇಳುತ್ತಾರೆ :–

If Hindu Raj does become a fact it will, no doubt,

be the greatest calamity for this country..........

Hindu Raj must be prevented at any cost

- Dr. B.R. Ambedkar (Writings and Speeches Vol.8. p:358)

" I do not expect the India of my dream to develop one religion,

i.e., to be wholly Hindu, or wholly Christian, or wholly Mussalman,

but I want to be wholly tolerant, with it's religions working side by side with one another'.

- Gandhiji ("Young India 22 Dec 1927) (Quoted in "Changing Gods") by Rudolf C. Heredia page : 181

ಅದಕ್ಕಿಂತ ಮೊದಲು ಅಶೋಕ ಚಕ್ರವರ್ತಿ ಕೆತ್ತಿಸಿದ ಧರ್ಮಚಕ್ರಾಂಕಿತ ಶಿಲಾ ಶಾಸನದಲ್ಲಿ

"His Sacred Majesty does reverence to men of all sects.

A man must not do reverence only to his own sect while disparaging the sects of others.

wholly from attachment of his own or with intent to enhance the splendour of his own sect.

In reality, such conduct inflicts the severest injuries on his own sect".

(Minor Rock Edict XII)

ಮತ್ತು ದಲಿತೋದ್ಧಾರಕ ಬಸವಣ್ಣ ಈ ನಾಡಿನಲ್ಲಿ 'ಈ ಜಿಲ್ಲೆಯ ಆಜುಬಾಜಿನಲ್ಲಿ ಸರ್ವರನ್ನೂ,ಜಾತಿ, ಮತ, ಕುಲ, ಲಿಂಗ, ವರ್ಣಭೇದವಿಲ್ಲದ ಸಮಾನತೆ(equality) ಯ ಅಮರ ತತ್ವವನ್ನು ಆಚರಣೆಯಲ್ಲಿ ತಂದರು; ಹಾಗೆ ಬಾಳಿದರು!!

'ಜನಗಣಮನ ಅಧಿನಾಯಕ' ಮತ್ತು 'ವಂದೇಮಾತರಂ' ಎಂಬುದು ನನ್ನ–ನಮ್ಮೆಲ್ಲರ ರಾಷ್ಟ್ರಗೀತೆ ಉಸಿರು, ಪ್ರಾಣ, ಪ್ರಾಣದೇವರು. ನಾವು We the people of India ಅಂಗೀಕರಿಸಿದ ಸಂವಿಧಾನ ನಮ್ಮ ಬಾಳಿನ ಅನ್ನಭೂಮಿ, ಕರ್ಮಭೂಮಿ. ನಾವು ಬದುಕಿದ್ದರೆ ಮಾತ್ರ ಧರ್ಮ. ನಾವು ಬದುಕಿದರೆ ಭರತಭೂಮಿ ಬದುಕುತ್ತದೆ. ಇದು ಬಹುಮುಖೀ ಸಂಸ್ಕೃತಿಯ ತೊಟ್ಟಿಲು. ಬಹುಭಾಷೆ, ಬಹುಮತಗಳ, ಬಹುಜನಾಂಗಗಳ ತಾಯಿ ನಮ್ಮ ಭೂತಾಯಿ. ಆಕೆ ಹಿಂದೆ ಇದ್ದಂತೆ ಈಗಲೂ ಇರುವಂತೆ ಬಹುಜನಾಂಗದ ತೊಟ್ಟಿಲಾಗಿ ಬದುಕಬೇಕು; ಕನ್ನಡಿಗರೂ ಕರ್ನಾಟಕವೂ ಬದುಕಬೇಕು. ಈ ನಂಬಿಗೆ, ಕನಸು ನನ್ನ–ನಿಮ್ಮ –ಜೀವನ್ಮುಕ್ತಿ!!

ನೆರೆರಾಜ್ಯಗಳೊಡನೆ ಸಂಬಂಧ

ಹಾಗಾದರೆ ನಮ್ಮ ನೆರೆರಾಜ್ಯಗಳೊಡನೆ ನಮ್ಮ ಸಂಬಂಧ, ನಮ್ಮ ರಾಜ್ಯದಲ್ಲಿಯೇ ಇರುವ ಅನ್ಯ ಭಾಷಿಕರೊಡನೆ ಹೇಗೆ ಬದುಕಬೇಕು ? ಶಾಂತಿ ದೂತ ಭಗವಾನ್ ಏಸು ಸ್ವಾಮಿ ಹೇಳಿದಂತೆ Love thy neighbor ನಿಮ್ಮ ನೆರೆಯವರನ್ನು ಪ್ರೀತಿಸು. ಈ ಮೂರು ಶಬ್ದಗಳಲ್ಲಿ ಆ ಕಾರುಣ್ಯಮೂರ್ತಿ ನಮ್ಮ ಕೈಗೆ ಶಾಂತಿ ಮೊಂಬತ್ತಿಯ ಬೆಳಕು ಕೊಟ್ಟಿದ್ದಾನೆ. 'ಸಕಲರಿಗೆ ಲೇಸನೇ ಬಯಸುವ, ಸರ್ವೇಜನಾಃ ಸುಖಿನೋಭವಂತು', 'ಸಹನಾವವತು ಸಹನೌಭುನಕ್ತು' ಮಂತ್ರವನ್ನು ಕೊಟ್ಟಿದಾರೆ. ಆ ಮಂತ್ರಜಪ, ಧ್ಯಾನದಿಂದಲೇ ನಾವು ಬದುಕಬೇಕು. ಈ ಭಾರತವನ್ನು ಬದುಕಿಸಬೇಕು. ಸರ್ವರಲ್ಲೂ ಆ ವಾಸುದೇವನನ್ನೇ ಕಾಣಬೇಕು. ಭಗವಾನ್ ಕೃಷ್ಣನಲ್ಲಿ ವಿಶ್ವರೂಪ ಪರಮಾತ್ಮನನ್ನು ಕಾಣುವಂತೆ, ಆ ಪರಮಾತ್ಮನನ್ನು ಎಲ್ಲರಲ್ಲೂ, ಎಲ್ಲೆಲ್ಲಿಯೂ ಸಾಕ್ಷತ್ ಕಾಣಬೇಕು. ಅಂದರೆ, 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವೆ ಅಕ್ಕು ಸರ್ವಜ್ಞ!'

ಶ್ರೀ ಅರವಿಂದರು ಹೇಳುವಂತೆ "See One in all, All in One" We have won heaven; we have yet to conquer earth " ನಾವು ಸ್ವರ್ಗ ಗೆದ್ದಿದ್ದೇವೆ, ಮರ್ತ್ಯವನ್ನು ಇನ್ನೂ ಗೆಲ್ಲಬೇಕಾಗಿದೆ! ಇದನ್ನು ನೆನಪು ಮಾಡಲು ನೀವು ಕೊಟ್ಟ ಸ್ಥಾನದಿಂದ ನಾನಿಲ್ಲಿ ನಿಂತಿದ್ದೇನೆ. ಮರೆಯಬೇಡಿ ಎಂದು ಕೈ ಮುಗಿದು ಬೇಡುತ್ತೇನೆ.

ಕರ್ನಾಟಕ-ಮಹಾರಾಷ್ಟ್ರ ಸಂಬಂಧ

ಈ ಮಾತನ್ನು ನೀವು ಒಪ್ಪುತ್ತೀರಿ ಎಂದು ನಂಬಿದ್ದೇನೆ. ಆದರೆ.... ನಮ್ಮ ನೆರೆರಾಜ್ಯಗಳು, ಅದರಲ್ಲೂ ಮಹಾರಾಷ್ಟ್ರ ನಮ್ಮನ್ನು ಸದಾ ಕಾಡುತ್ತಲೇ ಇದೆಯಲ್ಲ? ಅವರ ಆಕ್ರಮಣಶೀಲ ಪ್ರವೃತ್ತಿಗೆ ನಾವು ಶರಣಾಗಬೇಕೆ? ಬೆಳಗಾವಿ ನಮ್ಮದು; ನಿಪ್ಪಾಣಿ ನಮ್ಮದು ಎಂದು ಗಳಿಗ್ಗಳಿಗೆ ಬೊಬ್ಬೆ ಹಾಕುತ್ತಿದ್ದಾರಲ್ಲ? ಅದಕ್ಕೇನು ಮಾಡಬೇಕು? ಆ ಬೊಬ್ಬೆ ಕೇಳುತ್ತಾ ಸುಮ್ಮನಿರಿ ಎಂಬುದು ನನ್ನ ಉತ್ತರ. ಆ ಪ್ರದೇಶಗಳು ಸಂವಿಧಾನಾತ್ಮಕವಾಗಿ ಕರ್ನಾಟಕದಲ್ಲಿ ಭದ್ರವಾಗಿ, ಸಹ್ಯಾದ್ರಿಯಂತೆ ಅಲ್ಲಾಡದೆ ನಿಂತಿವೆ. ಅವು ಮಹಾರಾಷ್ಟ್ರಕ್ಕೆ ಸೇರಬೇಕೆಂದು ದೊಂಬಿ ಎಬ್ಬಿಸಿ ಬೊಬ್ಬೆ ಹಾಕುತ್ತಿದ್ದಾರಲ್ಲ, ಅದಕ್ಕೇನು ಮಾಡಬೇಕು? ಶಾಸನ ಶಾಂತಿ ಸುವ್ಯವಸ್ಥೆಯನ್ನು (Law and order) ಕಾಪಾಡುವುದು ರಾಜ್ಯ ಸರ್ಕಾರದ ಹೊಣೆ. ನಾವು ಪ್ರಜೆಗಳು ದೊಣ್ಣೆ ಬೀಸಬೇಕಾಗಿಲ್ಲ. ದೊಣ್ಣೆ ಬೀಸುವುದಕ್ಕಾಗಿ ಪೊಲೀಸರನ್ನು ನೇಮಿಸಿದ್ದಾರೆ. ಅವರ ಕೆಲಸ ಅವರು ಮಾಡುವುದಕ್ಕೆ ಬಿಟ್ಟು ಬಿಡಿ. ಅವರು ಆ ಕೆಲಸ ಮಾಡದಿದ್ದರೆ? ಎಂದು ಕೇಳುತ್ತೀರಿ. ಸರಿ, ನ್ಯಾಯವಾದ ಪ್ರಶ್ನೆ.ಅದಕ್ಕೆ ನಾನು ಕೊಡುವ ಉತ್ತರ : ಅಂಥ ಸರ್ಕಾರವನ್ನು ತೆಗೆದುಹಾಕುವ ಬ್ರಹ್ಮಾಸ್ತ್ರ-ಮತದಾನ- ನಿಮ್ಮ ಕೈಯಲ್ಲಿದೆ. ಅದನ್ನು ಪ್ರಯೋಗಿಸಿರಿ. ಸದ್ದು ಗದ್ದಲ ಏನೂ ಬೇಡ! ಇದು ಗಾಂಧೀಮಾರ್ಗ. ಪ್ರೀತಿಯಿಂದ ಮರಾಠಿಗರನ್ನು ಗೆಲ್ಲಿ, ಪ್ರೀತಿಯೇ ಇದಕ್ಕೆ ಸಿದ್ಧೌಷಧ, ದ್ವೇಷವಲ್ಲ. ಈಗ ಇಲ್ಲಿ ಮರಾಠಿಗರು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದ ಅತಿಥಿಗಳಿಗೆ ತಮ್ಮ ಮನೆಗಳಲ್ಲಿ ತಾವು, ತಿನಿಸುಕೊಟ್ಟು ನಮ್ಮ ಮನಸ್ಸು ಗೆದ್ದಿದ್ದಾರೆ. ನಾಳೆ ಠಾಕ್ರೆ ಶಿವಸೇನೆ ಇಲ್ಲಿಗೆ ಬಂದು ಗದ್ದಲ ಎಬ್ಬಿಸಿದರೆ ಮರಾಠಿಗರೇ ಮಂಗಳಾರತಿ ಎತ್ತಿ ವಾಪಸು ಕಳಿಸುತ್ತಾರೆ. ಅನ್ಯೋನ್ಯ ಪ್ರೀತಿ ಸೌಹಾರ್ದಸೌಧವನ್ನು ಕಟ್ಟೋಣ. ಇನ್ನೊಂದು ಪ್ರತ್ಯೇಕ ವಿಧಾನಸೌಧ ಅನಗತ್ಯ. ಪ್ರಾದೇಶಿಕ ಪಕ್ಷ ಕಟ್ಟುವ ಅವಶ್ಯಕತೆ ಇಲ್ಲ. ಹಾಗೆ ತಮಿಳುನಾಡಿನಲ್ಲಿ ಡಿ.ಎಂ.ಕೆ., ಎ.ಐ.ಡಿ.ಎಂ.ಕೆ. ಮುಂತಾದುವುಗಳಿಲ್ಲವೆ? ಮಹಾರಾಷ್ಟ್ರದಲ್ಲಿ ಶಿವಸೇನೆ, ಮಹಾರಾಷ್ಟ್ರ ನವನಿರ್ಮಾಣ ಇಲ್ಲವೆ? ಎಂದು ಕೇಳುತ್ತೀರಿ. ಕೇಳಬೇಕಾದ್ದೇ. ತಮಿಳುನಾಡಿನ ಆ ಜನ ಜಾಣರು. ಹಿಂದೆ- ಅಣ್ಣಾ ದೊರ್ರೈ ಕಾಲಕ್ಕಿಂತ ಮುಂಚೆ- ಈ ದೇಶದಿಂದ ಪ್ರತ್ಯೇಕವಾಗಿ ದ್ರಾವಿಡ ಸ್ಥಾನ ಬೇಕೆಂದು ಹೋರಾಡಿದರು. ನಮ್ಮ ಸಂವಿಧಾನ, ರಾಷ್ಟ್ರಧ್ವಜ ಸುಟ್ಟು ಹಾಕಿದರು. ಆ ಕೆಲಸವನ್ನು ಯಾಕೆ ಕೈ ಬಿಟ್ಟರು ? ಭಾರತ ಬಿಟ್ಟರೆ ಅವರಿಗೆ ಜಗತ್ತಿನಲ್ಲಿ ನೆಲೆ ಸಿಗದು. ಇಲ್ಲಿ ಇದ್ದೇ ತಮ್ಮ ಹಿತ ಸಾಧಿಸಿಕೊಳ್ಳಬಹುದೆಂಬ ಸತ್ಯವನ್ನು ಕಂಡರು. ಹೇಗೆ? ಮಹಾಭಾರತದಲ್ಲಿಯೇ ಇದಕ್ಕೆ ಪಂಪ ದಾರಿ ತೋರಿದ್ದಾನೆ. ಕುರುಪಾಂಡವರಲ್ಲಿ ಯುದ್ಧವಾದರೆ ನಾವು ಐವರು ನೀವು ನೂರೊಂದು ಜನ. ಹೊರಗಿನವರೊಡನೆ ಯುದ್ಧವಾದರೆ ನಾವು ನೂರಾ ಆರು ಜನ. (ಪಾಂಡವರು ಐವರು, ಕೌರವರು ನೂರಾ ಒಂದು.) ಈ ಜಾಣ್ಮೆ ತಮಿಳರದು. ಕನ್ನಡಿಗರು ಈ ನೀತಿಯನ್ನು

ಅಂಗೀಕರಿಸಬೇಕು. "ಹೊಟ್ಟೆಯ ಕಿಚ್ಚಿಗೆ ಬಡಿದಾಡುವವರನು ಬಡಿದೆಬ್ಬಿಸು" ನನ್ನ ಅಭಿಪ್ರಾಯದಲ್ಲಿ ಇದೇ ಸೂಕ್ತ. ನೀವು ಆಲೋಚಿಸಬೇಕೆಂದು ನನ್ನ ಮನವಿ.

ಪ್ರಚಲಿತ ಸಮಸ್ಯೆಗಳಿಗೆ ಪರಿಹಾರವೇನು?

ನನ್ನನ್ನು ಈ ಸಮ್ಮೇಳನದ ಅಧ್ಯಕ್ಷನೆಂದು ಪರಿಷತ್ತು ನಿಯೋಜಿಸಿದ ದಿನದಿಂದಲೇ ನನ್ನನ್ನು ಭೇಟಿ ಮಾಡಿದ ಆಪ್ತರು, ಮಿತ್ರರು, ಪತ್ರಕರ್ತರು, ಅಖಂಡ ಕರ್ನಾಟಕನಿಷ್ಠರು ಕೇಳಿದ ಮೊದಲನೆ ಪ್ರಶ್ನೆ: ಕರ್ನಾಟಕ ಇಬ್ಭಾಗವಾಗಬೇಕೆಂಬ ಕೂಗಿನ ಸದ್ದಡಗಿಸಲು ಇಬ್ಭಾಗವಾಗದಂತೆ ನೀವೇನು ಮಾಡುವಿರಿ? ಎಂದು, ಕಕ್ಕುಲತೆಯಿಂದ ಕೇಳಿದರು ಅದಕ್ಕೆ

ನನ್ನ ಉತ್ತರ: ನಮ್ಮ ಸಂವಿಧಾನದಲ್ಲಿ ಆರ್ಟಿಕಲ್ 371J ಸೇರಿಸಿದ ಮೇಲೆ ಆ ಕೂಗು ಬಹುಮಟ್ಟಿಗೆ ಸ್ತಬ್ಧವಾಗಿದೆ. ಆ ತಿದ್ದುಪಡಿ ಆದದ್ದರಿಂದಲೇ ಎರಡು ಕರ್ನಾಟಕದ ಬೇಡಿಕೆಯ ಹಿಂದಿರುವ ಕಾರಣ ನಿವಾರಣೆ ಆದಂತೆಯೇ ಅಲ್ಲ. ನಂಜುಂಡಪ್ಪ ವರದಿಯನ್ನು, ರಚಿಸಲಿರುವ ಹೊಸ ಅಭಿವೃದ್ಧಿ ಆಯೋಗ ಪ್ರಾಧಿಕಾರ ಕಾರ್ಯಗತ ಮಾಡಬೇಕು. ಆ ಉನ್ನತ ಆದರ್ಶನವನ್ನು ಪ್ರಾಮಾಣಿಕವಾಗಿ ಜಾರಿಗೆ ತಂದಲ್ಲಿ ಅಸಮಾನತೆ ನಿವಾರಣೆ ಆಗುತ್ತದೆ. ಈ ಹೊಸ 371J ಆರ್ಟಿಕಲ್ ಅಸಮಾನತೆಯನ್ನು ನೀಗಲು ಬಹು ಅನುಕೂಲವಾಗಿದೆ. ಅದರ ವಿಶಾಲ ಅರ್ಥದಲ್ಲಿ ಹೈ.ಕ. ಪ್ರತ್ಯೇಕವಾಗದೆಯೆ, ಸ್ವಾಯತ್ತ ಸಂಸ್ಥಾನ ಸ್ಥಾನ ಪಡೆದಿದೆ. ಆ ಪ್ರದೇಶ, ಅಭಿವೃದ್ಧಿ ವಿಚಾರದಲ್ಲಿ ಸರ್ಕಾರಿ ನೌಕರಿ ನೇಮಕದಲ್ಲಿ ಉನ್ನತ ವೈದ್ಯಕೀಯ, ತಾಂತ್ರಿಕ ಕಾಲೇಜುಗಳ ಪ್ರವೇಶದಲ್ಲಿ ಆ ಪ್ರದೇಶದ ವಿದ್ಯಾರ್ಥಿಗಳಿಗೇ ಆದ್ಯತೆ....... ಈ ಅಂಶವನ್ನೂ ಪ್ರಾಮಾಣಿಕವಾಗಿ ಕಾರ್ಯಗತ ಮಾಡಬೇಕು. ನಮ್ಮ ಬಾಂಧವರು ಇಬ್ಭಾಗದ ಕೂಗನ್ನು ನೆನಪು ಮಾಡಬಾರದು. ಅವರನ್ನು ಕೆಣಕಬಾರದು.

ಇನ್ನು ಎರಡನೆಯ ಬಹು ಅಪಾಯಕಾರಿ ಸಮಸ್ಯೆ ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರದ ನಿರ್ಧಾರದಿಂದ ಕನ್ನಡ ಉಳಿದೀತೇ ಎಂಬ ಪ್ರಶ್ನೆ. ಈ ಸಮಸ್ಯೆಗೆ ನನ್ನ ಉತ್ತರ: ನಮ್ಮ ಸರ್ಕಾರ, ಮುಖ್ಯಮಂತ್ರಿ, ಶಿಕ್ಷಣಮಂತ್ರಿಗಳು ಕನ್ನಡದ ಶತ್ರುಗಳಲ್ಲ. ಆದ್ದರಿಂದ ಮುಖ್ಯಮಂತ್ರಿಗಳನ್ನಾಗಲಿ, ಶಿಕ್ಷಣಮಂತ್ರಿಗಳನ್ನಾಗಲಿ ನಿಂದಿಸಬಾರದು. ಅವರೂ ಜನ್ಮತಃ ಕನ್ನಡಿಗರೆ. ಕನ್ನಡ ಶತ್ರುಗಳಲ್ಲ.

ಪ್ರಶ್ನೆ: ಹಾಗಾದರೆ, ಕನ್ನಡ ಶಾಲೆಗಳನ್ನು ಯಾಕೆ ಮುಚ್ಚುತ್ತಾರೆ?

ಉತ್ತರ: ಯಾಕೆ ಮುಚ್ಚುತ್ತಾರೆ ಎಂದು ನಾವೆ ಯೋಚಿಸಬೇಕು.

ಕನ್ನಡ ಶಾಲೆಗೆ ವಿದ್ಯಾರ್ಥಿಗಳೇ ಬರುವುದಿಲ್ಲ. ವಿದ್ಯಾರ್ಥಿಗಳೆ ಇಲ್ಲದ ಶಾಲೆಗಳ ಬಾಗಿಲು ತೆರೆದು ಅಧ್ಯಾಪಕರು ನೊಣಝೂಡಿಸಬೇಕೆ? ಇಂಗ್ಲಿಷ್ ಕಲಿತರೆ ಮಾತ್ರ ನೌಕರಿ ಸಿಕ್ಕುತ್ತದೆ ಎಂಬ ಭ್ರಮೆ ಹೆತ್ತವರಲ್ಲಿ ಭದ್ರವಾಗಿ ಬೇರೂರಿದೆ. ಆ ಬೇರಿನ ಮೂಲವನ್ನೇ ಕತ್ತರಿಸಬೇಕು, ಇಂಗ್ಲಿಷ್ ಕಲಿತವರಿಗೆಲ್ಲ ನೌಕರಿ ಸಿಗುವುದಿಲ್ಲ

ಎಂಬುದನ್ನು ಅಂಕಿಸಂಖ್ಯೆಯಿಂದ ತೋರಿಸಿಕೊಡುವ ಕೆಲಸ ಮಾಡಬೇಕು. ಎಷ್ಟು ಜನ ವಿದೇಶಗಳಿಗೆ ಹೋಗಿದ್ದಾರೆ? ಅವರಲ್ಲಿ ಎಷ್ಟು ಜನ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲಿಷ್ ಕಲಿತವರಿದ್ದಾರೆ? ಎಷ್ಟು ಜನ ಕನ್ನಡವನ್ನು ಕಲಿತು ರ್‍ಯಾಂಕ್ ವಿಜೇತರಾಗಿ ಇಂಗ್ಲಿಷ್ ಕಲಿತವರಿಗಿಂತ ಉನ್ನತ ಹುದ್ದೆಯಲ್ಲಿದ್ದಾರೆ. ಇದು ಸತ್ಯ ಎಂಬುದನ್ನು ಹೆತ್ತವರಿಗೆ ಮನವರಿಕೆ ಮಾಡಬೇಕು. ಕನ್ನಡ ಕಲಿತರೂ ಪ್ರತಿಭೆಯಿದ್ದರೆ ಪೈಪೋಟಿ ಮಾಡಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನೌಕರಿ ಪಡೆಯಬಹುದು ಎಂಬ ಸತ್ಯವನ್ನು ಮನದಟ್ಟು ಮಾಡಬೇಕು. ಇಂಗ್ಲಿಷನ್ನು ಕಲಿಸಲೇ ಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲೆ ಕಲಿಯಬೇಕು ಕಲಿಸಬೇಕು... ಮುಂದಿನ ತರಗತಿಗಳಲ್ಲಿ ಇಂಗ್ಲಿಷ್ ಕಲಿಯಲಿ. ಇಂಗ್ಲಿಷೇ ಯಾಕೆ? ಯಾಕೆಂದರೆ ಇನ್ನೂರು ವರ್ಷಗಳಿಂದಲೂ ಈ ಭಾಷೆ ನಮ್ಮ ಜನರ ಕಿವಿಯ ಮೇಲೆ ಬೀಳುತ್ತಿದೆ. ಅದು ತಕ್ಕಮಟ್ಟಿಗೆ ತಿಳಿಯುತ್ತದೆ. ಆ ಸೌಲಭ್ಯ ಅನುಕೂಲತೆಯನ್ನು ಕೈ ಬಿಟ್ಟು ಹೊಸತಾಗಿ ವಿಜ್ಞಾನ ವಿಷಯಗಳನ್ನು ಕಲಿಸುವುದು ಕಲಿಯುವುದು ಮೊದಮೊದಲು ಕಷ್ಟ. ಕನ್ನಡ ಭಾಷೆಯಲ್ಲಿ ಆ ಶಕ್ತಿ ಇಲ್ಲ ಎಂದು ಅಸಹಾಯಕತೆ ಸಂದೇಹ ವ್ಯಕ್ತಪಡಿಸುತ್ತಾರೆ. ಇಂಥ ಸಂದೇಹ ನಿರಾಧಾರ ಎಂಬುದನ್ನು ಈ ವಿಚಾರದಲ್ಲಿ ಅಗಾಧ ಪಾಂಡಿತ್ಯ ಪಡೆದ ವಿದ್ವಾಂಸರಾದ ಡಾ. ಜೆ.ಆರ್. ಲಕ್ಷ್ಮಣರಾವ್ ಮೈಸೂರು ವಿಶ್ವವಿದ್ಯಾಲಯದಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿ ನಿವೃತ್ತರಾದವರು ಅನುಭವಪೂರ್ವಕವಾಗಿ ಎಷ್ಟೋ ಲೇಖನಗಳನ್ನು ಬರೆದಿದ್ದಾರೆ. ದಿನಾಂಕ: ೨೫-೩-೨೦೦೭ನೆಯ ಪ್ರಜಾವಾಣಿ ಪತ್ರಿಕೆಯಲ್ಲಿ ಕನ್ನಡ ಏಳಿಗೆ ಹೇಗೆ? ಎಂಬ ಲೇಖನ ಬರೆದಿದ್ದಾರೆ. ಅದನ್ನು ಈ ಭಾಷಣದ ಅನುಬಂಧದಲ್ಲಿ ಕೊಡಲಾಗಿದೆ. ಆ ಲೇಖನದ ಸಾರಾಂಶ ಕನ್ನಡದಲ್ಲೇ ವಿಜ್ಞಾನ ವಿಷಯಗಳನ್ನು ಸಮರ್ಥವಾಗಿ ಕಲಿಸಬಹುದು; ವಿದ್ಯಾರ್ಥಿಗಳು ಸುಲಭವಾಗಿ ಕಲಿಯಬಹುದು. ಮಾತೃಭಾಷೆಯಲ್ಲೇ ಚೆನ್ನಾಗಿ ಅರ್ಥಗ್ರಹಿಸಬಹುದು ಎಂದು ಪ್ರತಿಪಾದಿಸಿದ್ದಾರೆ. ಅದು ಸರಿ ಎಂದು ನಾನು ನಂಬುತ್ತೇನೆ. ಅದು ನನ್ನ ಸ್ವಾನುಭವಕೂಡ. ಅದು ಹೇಗಾಯ್ತು ಎಂಬುದನ್ನು 'ನಾನು ಓದಿದ ಶಾಲೆ' ಎಂಬ ಚಿಕ್ಕಪುಸ್ತಕದಲ್ಲಿ ಬರೆದಿದ್ದೇನೆ.

ಕರ್ನಾಟಕದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ

ಕರ್ನಾಟಕ ಏಕೀಕರಣ ಚಳವಳಿ ಪ್ರಾರಂಭವಾದದ್ದು ಕನ್ನಡ ಮಾತನಾಡುವ, ಆಗ ವಿವಿಧ ಆದಿಪತ್ಯಗಳಲ್ಲಿ, ದೇಶೀ ಸಂಸ್ಥಾನಗಳಲ್ಲಿ, ಮೈಸೂರು, ಹೈದರಾಬಾದ್, ಕೊಡಗು ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಪ್ರದೇಶಗಳಲ್ಲಿದ್ದ ಜನರೆಲ್ಲ ಒಂದೇ ರಾಜಕೀಯ ರಾಜ್ಯಾಡಳಿತೆಯ ಅಡಿಯಲ್ಲಿ ತರಬೇಕೆಂಬ ಬಹುಮುಖ್ಯ ಉದ್ದೇಶ, ಗುರಿಯಾಗಿತ್ತು. ಯಾಕೆಂದರೆ, ಮೊದಲು ಮಾತೃಭಾಷೆಯಲ್ಲಿ ಶಿಕ್ಷಣ ದೊರೆಯಬೇಕು. ಒಂದಾದ ಕರ್ನಾಟಕ ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ನಮ್ಮ

ಬಾಳು ಹಸನಾಗಬೇಕು. ಹೊಟ್ಟೆ ಬಟ್ಟೆಯ ಚಿಂತೆ ಬಗೆಹರಿಸಿಕೊಳ್ಳಲು, ಏಕೀಕೃತ ಕರ್ನಾಟಕದ ಸ್ಥಳೀಯರಿಗೆ– ನೆಲದ ಮಕ್ಕಳಿಗೆ– ಕೈತುಂಬ ಕೆಲಸ ಸಿಗಬೇಕು. ಹುಟ್ಟುವ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಬಾಯಿ ಇದ್ದೆ ಇರುತ್ತದೆ. ಅದರೊಡನೆ ಎರಡು ಕೈಗಳೂ ಬರುತ್ತದೆ. ಎರಡು ಕೈ ದುಡಿದರೆ ಒಂದು ಬಾಯಿ ಉಪವಾಸ ಇರಲಾರದು. ಅಂದರೆ ಆ ಎರಡು ಕೈಗಳಿಗೆ ದುಡಿಯುವ ಅವಕಾಶವನ್ನು– ಉದ್ಯೋಗವನ್ನು ಕೊಡಲೇಬೇಕು. ಅವಕಾಶ ಸರಕಾರಿ ನೌಕರಿಯಲ್ಲಿ, ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಕೆಲಸ ಸಿಗಬೇಕು. ದುಡಿದುಣ್ಣಬೇಕು. ಈ ಮೂಲಭೂತ ಆರ್ಥಿಕ ನೀತಿಗನುಸಾರವಾಗಿ ಪ್ರಜೆಗಳಿಗೆ ಆಯಾ ಪ್ರದೇಶಗಳಲ್ಲಿ ಕೆಲಸ ಕೊಡಬೇಕು.. ಎಂಬ ಆರ್ಥಿಕ ನೀತಿ ಅಂಗೀಕೃತವಾಗಿದೆ. ಇದು ನಿರ್ವಿವಾದ. ಇದನ್ನು ರಾಜ್ಯ ಸರಕಾರಗಳೆಲ್ಲವೂ ಭಾರತ ಸರ್ಕಾರವೂ ಒಪ್ಪಿದೆ. ಆದರೂ ಬಹು ರಾಜ್ಯಗಳಿರುವ ಈ ದೇಶದಲ್ಲಿ ಯಾವ ರಾಜ್ಯ ಯಾವ ಭಾಷಿಕರಾದರು ದೇಶದ ಯಾವ ರಾಜ್ಯದಲ್ಲಿಯೂ ನೆಲೆಸಲು, ನೌಕರಿ ಪಡೆಯಲು, ಯಾವ ವೃತ್ತಿಯನ್ನಾದರೂ ಮಾಡುವ ಹಕ್ಕಿದೆ. ಆದ್ದರಿಂದಲೇ ಕನ್ನಡಿಗರು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶದಲ್ಲಿ ಕೆಲಸಮಾಡಲು, ಕಾರ್ಖಾನೆಗಳಲ್ಲಿ ಕೆಲಸಮಾಡುವ ಹಕ್ಕಿದೆ. ಆದರೂ ಕೇಂದ್ರಸರ್ಕಾರದ ನಿಯಮದ ಪ್ರಕಾರ– ದಿವಂಗತ ಪ್ರಧಾನಿ ಇಂದಿರಾಜಿ ಭೂಪಾಲ್‌ನಲ್ಲಿ ಬಿ.ಇ.ಎಲ್. ಕಾರ್ಖಾನೆಯನ್ನು ಪ್ರಾರಂಭೋತ್ಸವ ಮಾಡಿದಾಗ, ಈ ಕಾರ್ಖಾನೆಯಿಂದ ನಾಲ್ಕನೆ ದರ್ಜೆಯ ನೌಕರರಲ್ಲಿ ಶೇಕಡಾ ೮೦ ರಷ್ಟು ಜನರು ಸ್ಥಳವಂದಿಗರನ್ನು ನೇಮಿಸಿಕೊಳ್ಳಲಾಗುವುದು ಎಂದು ಹೇಳಿದರು. ಅದರಂತೆ ಒಂದು ಸರಕಾರೀ ಆಜ್ಞೆಯನ್ನು ಜಾರಿಯಲ್ಲಿ ತಂದರು. ಆದರೂ ಆ ನಿಯಮ ಶೇಕಡಾ ೮೦ ರಷ್ಟು ಆಚರಣೆಯಲ್ಲಿ ಬಂದಿಲ್ಲ, ಆದ್ದರಿಂದ ಮಹಾರಾಷ್ಟ್ರದ ಶಿವಸೇನೆ ಬಿಹಾರಿಗಳನ್ನು, ಕನ್ನಡಿಗರನ್ನು ಮಹಾರಾಷ್ಟ್ರದಿಂದ, ಆಸ್ಸಾಮಿಗಳು, ಬಂಗಾಳಿ ಕಾರ್ಮಿಕರನ್ನೂ............ ತಮ್ಮ ರಾಜ್ಯಗಳಿಂದ ಹೊರದೂಡುತ್ತಿದ್ದಾರೆ. ಇದರಿಂದ ಈ ದೇಶದ ಐಕ್ಯತೆಗೆ, ಶಾಂತಿಸುವ್ಯವಸ್ಥೆಗೆ ಅಪಾಯ ಒದಗಿದ್ದು, ಇಂಥ ದೊಂಬಿ, ದುಷ್ಪರಿಣಾಮ ಆಗಬಾರದು ಎಂದು ನಂಬಿದ ಸರ್ಕಾರಗಳು ಸ್ಥಳವಂದಿಗರಿಗೇ ನೌಕರಿ ದೊರೆಯಬೇಕೆಂದು ಆಗ್ರಹಿಸುತ್ತಿದ್ದಾರೆ. ಕರ್ನಾಟಕದಲ್ಲಿ ಈ ಸಮಸ್ಯೆ ಉಲ್ಬಣವಾಗಿದೆ. ಅದರ ಪರಿಹಾರರ್ಥವಾಗಿ ಕಾಲು ಶತಮಾನದ ಹಿಂದೆ ಹತ್ತಿರ ಹತ್ತಿರ ೨೦ ವರ್ಷಗಳ ಹಿಂದೆ ಸರೋಜಿನಿ ಮಹಿಷಿ ಆಯೋಗ ನೇಮಿಸಲಾಯಿತು. ಅದು ಒಂದು ವರದಿ ಕೊಟ್ಟಿತು. ಅದರಲ್ಲಿ ಏನಿದೆ ಎಂಬುದೇ ಮರೆತು ಹೋಗಿದೆ.

ಒಟ್ಟು ಅದರ ಮಥಿತಾರ್ಥ ಕರ್ನಾಟಕದಲ್ಲಿ ಕನ್ನಡಿಗರಿಗೆ– ಅಂದರೆ ಇಲ್ಲಿ ಹುಟ್ಟಿ, ಬೆಳೆದು, ಬಾಳಿದವರಿಗೆ ಸರ್ಕಾರಿ ನೌಕರಿಯಲ್ಲಿ, ಕಾರ್ಖಾನೆಗಳಲ್ಲಿ ಆದ್ಯತೆ ಕೊಡಬೇಕೆಂಬುದು, ಆ ವರದಿಯ ಶಿಫಾರಸ್ಸುಗಳನ್ನು ನಮ್ಮ ಸರ್ಕಾರವು ಒಪ್ಪಿದೆ. ಆದರೂ, ಆ ಸಿಫಾರಸ್ಸುಗಳು ತೃಪ್ತಿಕರವಾಗಿ, ಪೂರ್ಣವಾಗಿ ಕಾರ್ಯಗತವಾಗಿಲ್ಲ.

ಏಕೆ ಎಂಬುದಕ್ಕೆ ನೂರು ಕಾರಣಗಳನ್ನು, ಕುಂಟುನೆಪಗಳನ್ನು ಹೇಳುತ್ತಾರೆ. ಅದರಲ್ಲಿ ಒಂದು ಕಾರಣ– ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡಬೇಕಾದರೆ, ನೌಕರರಿಗೆ ಗಣಕಯಂತ್ರಜ್ಞಾನ ಬೇಕೇಬೇಕು. ಅದಕ್ಕೆ ಇಂಗ್ಲಿಷ್ ಭಾಷಾಜ್ಞಾನ, ಅನಿವಾರ್ಯ. ಕನ್ನಡದಲ್ಲಿ ಶಿಕ್ಷಣ ಪಡೆದವರಿಗೆ ಇಂಗ್ಲಿಷ್ ಪರಿಣತಿ ಅತ್ಯಗತ್ಯ. ಆದ್ದರಿಂದ ಇಂಗ್ಲಿಷ್ ತಂತ್ರಜ್ಞಾನವಿಲ್ಲದವರಿಗೆ ನೌಕರಿಗೆ ಅವಕಾಶವಿಲ್ಲ. ಇದು ಸ್ವಲ್ಪಮಟ್ಟಿಗೆ ಸತ್ಯವಾದ ಮಾತು. ಹಾಗಾಗಿ ನಮ್ಮ ರಾಜ್ಯದ ಪ್ರಜೆಗಳ ಬೇಡಿಕೆ ನಮಗೆ ಇಂಗ್ಲಿಷ್ ಕಲಿಸಿ ಎಂಬುದು. ಇದು ಎಲ್ಲಿಗೆ ಬಂತು? ಇಂಗ್ಲಿಷ್ ಕಲಿಸಲೇಬೇಕು. ಇಂಗ್ಲಿಷನ್ನು ಕಲಿಸಿದರೆ ಕನ್ನಡ ಶಾಲೆಗಳನ್ನು ಮುಚ್ಚಬೇಕಾಗುತ್ತದೆ, ವಿಧಿಯಿಲ್ಲ. ಈ ಇಕ್ಕಟ್ಟಿನ ಸಂದರ್ಭದಲ್ಲಿ ಏನು ಮಾಡಬೇಕು? ಕನ್ನಡ ಶಾಲೆಗಳನ್ನು ಮುಚ್ಚಲೂ ಬಾರದು ಮತ್ತು ಇಂಗ್ಲಿಷನ್ನು ಬದುಕುವುದಕ್ಕಾಗಿ ಕಲಿಸಬೇಕು. ಅಂದರೆ ಇದು ಎಲ್ಲಿಗೆ ಬಂತು? ಇದರಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು. ಹೇಗೆ? ಕನ್ನಡವನ್ನು ಉಳಿಸಿ, ಇಂಗ್ಲಿಷ್ ಕಲಿಸಿ. ಇದೊಂದು ರಾಜೀಸೂತ್ರ: ಪ್ರಾಥಮಿಕ ಹಂತದಲ್ಲಿ ಒಂದರಿಂದ ನಾಲ್ಕನೆ ತರಗತಿವರೆಗೆ ಮಾತೃ ಭಾಷೆಯಲ್ಲೇ ಶಿಕ್ಷಣ. ಐದನೆ ತರಗತಿಯಿಂದ ಇಂಗ್ಲಿಷ್ ಭಾಷಾಜ್ಞಾನ, ಇವರೆಡರ ಜೊತೆಗೆ ಇತ್ತೀಚೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಮುಖ್ಯಮಂತ್ರಿ ಚಂದ್ರು ಸೂಚಿಸಿರುವಂತೆ ಗಣಕತಂತ್ರಜ್ಞಾನವನ್ನು ಕಲಿಸಿ, ಜೊತೆಗೆ ಈಗಿರುವ ಕನ್ನಡ ಗಣಕಯಂತ್ರವನ್ನು ಸುಧಾರಿಸಬೇಕು. ಈ ವಿಚಾರವಾಗಿ ದಿ. ಪೂರ್ಣಚಂದ್ರ ತೇಜಸ್ವಿ ಅವರು ಬದುಕಿರುವವರೆಗೆ ಪ್ರತಿಪಾದಿಸಿದರು. ಇನ್ನು ನ್ಯಾಯಾಲಯದ ಮೂಲಕ ಪರಿಹಾರ ಪಡೆಯಬಹುದೆ ಎಂದು ನನಗೆ ಸುಧೀರ್ಘ ಪತ್ರಬರೆದಿದ್ದರು. ಈ ವಿಚಾರದಲ್ಲಿ ನನಗೆ ಹೆಚ್ಚು ಪರಿಶ್ರಮವಿಲ್ಲದಿದ್ದರಿಂದ ನನ್ನ ಅಸಾಮರ್ಥ್ಯವನ್ನು ಅವರಿಗೆ ತಿಳಿಸಿದ್ದೆ. ಈ ವಿಚಾರವಾಗಿ ಶ್ರೀ ಮುಖ್ಯಮಂತ್ರಿ ಚಂದ್ರು ಅವರು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬಂದಿದೆ. ಅವರ ಈ ಪ್ರಯತ್ನಕ್ಕೆ ನಮ್ಮ ಸರಕಾರ ಸ್ಪಂದಿಸಬೇಕು.

ಇದರ ಜೊತೆಗೆ ಕನ್ನಡ, ಕರ್ನಾಟಕ ಎಂದು ಅಬ್ಬರಿಸುವ ಜನ ಪ್ರಜೆಗಳ ಬಳಿಹೋಗಿ ಮಕ್ಕಳನ್ನು, ಕನ್ನಡ ಶಾಲೆಗಳಿಗೆ ಕಳಿಸುವಂತೆ ಅವರ ಮನಸ್ಸನ್ನು ಪರಿವರ್ತಿಸಬೇಕು. ಶಿಕ್ಷಣದ ಗುರಿ ಕೇವಲ ನೌಕರಿಯೇ ಅಲ್ಲ. ಜ್ಞಾನಸಂಪಾದನೆಯೇ ಮುಖ್ಯ ಎಂಬುದನ್ನು ಮನದಟ್ಟು ಮಾಡಬೇಕು. ಇತ್ತ ಸರ್ಕಾರ ಕನ್ನಡ ಶಾಲೆಗಳು ಯಾವ ಇಂಗ್ಲಿಷ್ ಶಾಲೆಗಳಿಗಿಂತ ಕಿಂಚಿತ್ತು ಕಡಿಮೆ ಇಲ್ಲ ಎಂಬ ಭಾವನೆ ಹೆತ್ತವರಲ್ಲೂ ಮಕ್ಕಳಲ್ಲೂ ಉಂಟಾಗುವಂತೆ ಹೈ–ಟೆಕ್ ಶಾಲೆಗಳನ್ನು ಒದಗಿಸಬೇಕು. ಹೀಗೆ ಮಾಡಿದರೆ ಕನ್ನಡವೂ ಉಳಿಯುತ್ತದೆ, ಇಂಗ್ಲಿಷ್ ಕಲಿತು ಹೊಟ್ಟೆಯೂ ತುಂಬುತ್ತದೆ.

ಡಬ್ಬಿಂಗ್ ಚಿತ್ರೋದ್ಯಮ ಡ್ರೌನಿಂಗ್ ಉದ್ಯಮ

ಈಗ ನಾನು ಬಹುರಾಷ್ಟ್ರ ಮಾಲೀಕ ಕಂಪನಿಗಳಲ್ಲಿ ಕನ್ನಡಿಗರಿಗೆ ನೌಕರರಿಗೆ ಅವಕಾಶ ಇರಲೇಬೇಕೆಂದು ಒತ್ತಾಯ ಮಾಡುತ್ತಿರುವಾಗ, ಕನ್ನಡ ಚಿತ್ರೋದ್ಯಮದಲ್ಲಿ

ಉದ್ಯೋಗದಲ್ಲಿರುವವರ ಉದ್ಯೋಗಿಗಳ ಬಾಯಿಗೆ ಮಣ್ಣು ಹಾಕುವ ಡಬ್ಬಿಂಗ್ ಮಾಡುವ ಪ್ರಯತ್ನ ಭರದಿಂದ ಸಾಗಿದೆ ಎಂಬುದಾಗಿ ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ತಂತ್ರಜ್ಞಾನ (ಕಟಕಾಂತಕ) ಒಕ್ಕೂಟದ ಅಧ್ಯಕ್ಷ ಶ್ರೀ ಅಶೋಕ ಮತ್ತು ಸಾಹಿತಿ ಶ್ರೀ ಬರಗೂರು ರಾಮಚಂದ್ರಪ್ಪ ಈ ಸಮ್ಮೇಳನದ ಅವಗಾಹನೆಗಾಗಿ ಒಂದು ಪುಸ್ತಿಕೆಯನ್ನೇ ಪ್ರಕಟಿಸಿದ್ದಾರೆ. ಆ ಪುಟ್ಟ ಪುಸ್ತಿಕೆ ಸಮ್ಮೇಳನದ ಆವರಣದಲ್ಲಿ ಲಭ್ಯವಿದೆ. ಅದನ್ನು ಇಲ್ಲಿ ನೆರೆದಿರುವ ಕನ್ನಡ ಬಾಂಧವರು ಪಡೆದು ಕನ್ನಡ ಚಿತ್ರೋದ್ಯಮದ ಸಮಸ್ಯೆ, ಸಂಕಟವನ್ನು ತಿಳಿದುಕೊಳ್ಳಲು ನಿಮ್ಮಲ್ಲಿ ವಿನಂತಿಸುತ್ತೇನೆ.

ಅವರ ಸಮಸ್ಯೆಯ ಸಾರಾಂಶ ಈ ರೀತಿಯಾಗಿದೆ:-

"ಕನ್ನಡ ಚಿತ್ರರಂಗದಲ್ಲಿ ಇದೀಗ ಪರಭಾಷೆಯ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವ ಮಾತುಗಳು ಕೇಳಿಬರುತ್ತಿವೆ. ೬೦ರ ದಶಕದಲ್ಲಿ ಕನ್ನಡ ಚಿತ್ರರಂಗ ಡಬ್ಬಿಂಗ್ ಚಿತ್ರಗಳನ್ನು ತಡೆದಿರುವುದರ ಪರಿಣಾಮವಾಗಿ ಇಂದು ಇಲ್ಲಿ ಸಾಕಷ್ಟು ಚಿತ್ರಗಳು ತಯಾರಾದವು. ಅದರ ಪರಿಣಾಮವಾಗಿ ಇಂದು ಚಿತ್ರರಂಗ ಉದ್ಯಮವಾಗಿ ಬೆಳೆದಿದೆ. ಸಹಸ್ರಾರು ಮಂದಿ ಸೃಜನಶೀಲರು, ಕಾರ್ಮಿಕರು ಈ ಉದ್ಯಮದಲ್ಲಿ ಕೆಲಸಮಾಡುತ್ತಿದ್ದಾರೆ. ಜಾಗತೀಕರಣದ, ತಂತ್ರಜ್ಞಾನದ ಹೆಸರಿನಲ್ಲಿ, ವ್ಯಾಪಾರಿಗಳಲ್ಲಿ ಕೆಲವರು ಇಂತಹ ಯೋಚನೆ ಮಾಡುತ್ತಿದ್ದಾರೆ. ಭಾರತದ ಇತರ ಚಿತ್ರರಂಗಗಳು ಡಬ್ಬಿಂಗ್ ನಿಷೇಧ ಕುರಿತಂತೆ ಚಿಂತಿಸಲು ಆರಂಭಿಸಿದರೆ, ಕನ್ನಡ ಚಿತ್ರರಂಗದಲ್ಲಿ ಅದಕ್ಕೆ ವಿರುದ್ಧವಾದ ನಡೆ ಕಂಡುಬಂದಿರುವುದು ಸೋಜಿಗವೇ ಸರಿ" **("ಡಬ್ಬಿಂಗ್ ವಿರೋಧ ಮತ್ತು ರಾಜಕೀಯ ಕ್ರಿಯಾ ಶಕ್ತಿಯಾಗಿ ಕನ್ನಡ ಕನ್ನಡಿಗ" ಪುಸ್ತಿಕೆಯಿಂದ)**

ಕಟಕಾಂತಕ ಒಕ್ಕೂಟದ ಈ ಸಮಸ್ಯೆ, ಸಂಕಟವನ್ನು ಗಮನಿಸಿದರೆ ಕನ್ನಡ ಚಿತ್ರೋದ್ಯಮಕ್ಕೆ ಕಂಟಕ ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಕನ್ನಡದಲ್ಲಿ ನಿರ್ಮಿಸಲಾಗದ ಪ್ರಾಣಿಲೋಕ, ಪಕ್ಷಿಲೋಕ, ಜಲಚರ ಪ್ರಾಣಿಲೋಕ, ವಿಜ್ಞಾನ ವಿಸ್ಮಯ, ಚಾರಿತ್ರಿಕ ಚಿತ್ರಗಳನ್ನು ಡಬ್ ಮಾಡುವುದರಿಂದ ನಮ್ಮ ಜನರಿಗೆ ಜ್ಞಾನಾಭಿವೃದ್ಧಿ, ಮನೋಲ್ಲಾಸ ಆಗುವುದಿಲ್ಲವೆ? ಸಾಧಾರಣವಾಗಿ ಚಲನಚಿತ್ರಗಳನ್ನು ನೋಡದ ನಾನು ಆಗಾಗ ಪ್ರಾಣಿಲೋಕ, ಪಕ್ಷಿಲೋಕ, ಜಲಚರ ಪ್ರಾಣಿಗಳ ಚಿತ್ರ, ಖಗೋಲ ವಿಸ್ಮಯ, ಇತಿಹಾಸಕ್ಕೆ ಸಂಬಂಧಿಸಿದ ಚಿತ್ರಗಳನ್ನು ನೋಡಿದಾಗ ಅಂಥ ಚಿತ್ರಗಳನ್ನು ಕನ್ನಡದಲ್ಲಿ ಯಾಕೆ ತಯಾರಿಸಬಾರದು? ಎಂದುಕೊಳ್ಳುತ್ತೇನೆ. ಅದು ಸದ್ಯ ಶೀಘ್ರವಾಗಿ ಸುಲಭವಾಗಿ ಕನ್ನಡದಲ್ಲಿ ತಯಾರಿಸುವುದು ಸಾಧ್ಯವಿಲ್ಲವೆಂದೇ ಕಾಣುತ್ತದೆ. ಅಂಥ ಅಪರೂಪದ ಚಿತ್ರ ನಮ್ಮಿಂದ ನಿರ್ಮಿಸಲಾಗದ ಚಿತ್ರಗಳನ್ನು ಡಬ್ಬಿಂಗ್ ಮಾಡುವುಕ್ಕೆ ವಿರೋಧವೇಕೆ? ಬಹುಶಃ ಕಟಕಾಂತರ ಈ ಮಾತನ್ನು ಒಪ್ಪುತ್ತಾರೆಂದು ಕಾಣುತ್ತದೆ. ಆದರೆ ಅವರ ವಿರೋಧ ಇರುವುದು ನಾವೇ ನಿರ್ಮಿಸಬಹುದಾದಂಥ ಅನ್ಯಭಾಷಾ ಚಿತ್ರಗಳನ್ನು ತೆಲುಗು, ತಮಿಳು, ಮಲೆಯಾಳಂ, ಹಿಂದೀ ಚಿತ್ರಗಳನ್ನೇಕೆ ಡಬ್ ಮಾಡಬೇಕು? ಇದೂ ನ್ಯಾಯವಾದ ನಿಲುಮೆಯೆ.

ಅಲ್ಲದೆ ಕನ್ನಡ ಚಿತ್ರಗಳು ಬಹು ಮಟ್ಟಿಗೆ ಒಂದೇ ವಸ್ತುವಿನ-ಉದಾಹರಣೆಗೆ, ಚಾಕು, ಚೈನು, ಚೂರಿ, ಮಚ್ಚು, ಲಾಂಗ್‌ಗಳ ಆರ್ಭಟದ ಪುನರಾವೃತ್ತಿಗಳು, ಭೂಗತ ಪಾತಕಿಗಳ ಹಿಂಸಾಮಯ, ಸಮಾಜ ಸುಧಾರಣೆಯ ಗಂಧ ಗೋಷ್ಠಿಗಳಲ್ಲದ ಚರ್ವಿತ ಚರ್ವಣದ ಮಸಾಲೆಗಳ, ಲೈಂಗಿಕ ನಗ್ನ ಪ್ರದರ್ಶನದ ಚಿತ್ರಗಳನ್ನು ಯಾಕೆ ನಿರ್ಮಿಸಬೇಕು? ಎಂದು ವಾದಿಸುತ್ತಾರೆ. ಈ ವಾದದಲ್ಲಿ ಹುರುಳಿಲ್ಲ ಎಂದು ಹೇಳಲಾಗದು ಆಗ ಪ್ರೇಕ್ಷಕ, ವೀಕ್ಷಕ ವರ್ಗವೇ ಅವರಿಗೆ ಪಾಠಕಲಿಸುತ್ತವೆ. ಹೀಗಾಗಿ ಕನ್ನಡ ಚಿತ್ರೋದ್ಯಮ ತನಗೆ ತಾನೇ ಸಾಯುತ್ತದೆ. ಕನ್ನಡ ಚಿತ್ರ ನಿರ್ಮಾಪಕರು ಡಬ್ಬಿಂಗ್ ಇಲ್ಲದೆಯೆ ಸಾಯುತ್ತಾರೆ. ಅದರ ಬದಲು ಅನ್ಯ ಭಾಷಾ ಚಿತ್ರ ಡಬ್ಬಿಂಗ್ ಆದರೆ ಕನ್ನಡ ಚಿತ್ರ ನಿರ್ಮಾಪಕರು, ಕಥಾ ರಚನಾಕಾರರು ಹೊಸ ಹೊಸ ವಿಷಯಗಳನ್ನು ಕುರಿತು ಹೊಸ ಹೊಸ ನಟ ನಟಿಯರಿಗೆ ಅವಕಾಶಕೊಟ್ಟು ಚಿತ್ರಕಲಾ ಲೋಕ ಎತ್ತರಕ್ಕೆ ಬೆಳೆಯುತ್ತದೆ. ಚಿತ್ರೋದ್ಯಮ ಈಗ ಕೆಲವೇ ಕೆಲವು ನಟರ, ನಿರ್ಮಾಪಕರ ಗುತ್ತಿಗೆಯಾಗಿದೆ. ಚಿತ್ರೋದ್ಯಮದಲ್ಲೂ ಬಹುರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯ ಸ್ಥಾಪನೆಯಾಗಿ ಸಣ್ಣ ನಿರ್ಮಾಪಕರು, ಉದಯೋನ್ಮುಖ ಕಲಾವಿದರು, ಮೂಲೆಗುಂಪಾಗುತ್ತಾರೆ. ಚಿತ್ರೋದ್ಯಮದಲ್ಲೂ ಬಂಡವಾಳಶಾಹಿತ್ವ ಸಾಹಿತ್ಯ ನಿರ್ಮಾಣವಾಗುತ್ತದೆ. ಆಗಲೂ ಕನ್ನಡ ಚಿತ್ರ ನಿರ್ಮಾಪಕರಿಗೆ ಹಾನಿಯಾಗುತ್ತದೆ.

ಈ ವಿವಾದವು ಈಗ ಕಾಂಪಿಟೇಷನ್ ಕಮೀಷನರ ಮುಂದೆ ವಿಚಾರಣೆಯ ವಿಷಯವಾಗಿರುವುದಾಗಿ ತಿಳಿಯುತ್ತದೆ. ಅದು ಇತ್ಯರ್ಥವಾಗುವುದು ಯಾವ ಯುಗವೋ ದೇವರಿಗೂ ಗೊತ್ತಿಲ್ಲ. ಅದ್ದರಿಂದ ಅದು ಇತ್ಯರ್ಥವಾಗುವ ತನಕ ಯಥಾ ಸ್ಥಿತಿ ಇರಬೇಕು. ಸದ್ಯಕ್ಕೆ ನಾನು ಸೂಚಿಸುವ ಮಧ್ಯಮಾರ್ಗ- ಡಬ್ಬಿಂಗ್‌ನಿಂದ ಕೂಡಲೇ ಆಗುವ ದುಷ್ಪರಿಣಾಮ ಅಂದರೆ ತಕ್ಷಣವೇ ಲಕ್ಷಾಂತರ ಕಲೆಗಾರರ ಜೀವನೋಪಾಯಕ್ಕೆ ಮಾರಕವಾಗುತ್ತದೆ. ಡಬ್ಬಿಂಗ್ ತಡೆ ಹಿಡಿದರೆ ಡಬ್ಬಿಂಗ್ ನಿರ್ಮಾಪಕರಿಗೆ ಕೂಡಲೆ ಏನೂ ನಷ್ಟವಿಲ್ಲ. ಈಗಾಗಲೇ ಎಷ್ಟೋ ನೂರಾರು ಕೋಟಿ ಹಣವನ್ನು ಚಿತ್ರ ಉದ್ಯಮದಲ್ಲಿ ತೊಡಗಿಸಿದವರು ಬೀದಿ ಪಾಲಾಗುತ್ತಾರೆ. ಇನ್ನೂ ಹುಟ್ಟದಿರುವ ಡಬ್ಬಿಂಗ್ ಉದ್ಯೋಗಾಂಕ್ಷಿಗಳಿಗೆ ಜೀವ ತುಂಬುವ ದುಬಾರಿ ಹವ್ಯಾಸವನ್ನು ತಡೆಯಬೇಕು. ಆ ಕಾರ್ಯ ಯಂತ್ರ ತಂತ್ರವನ್ನು ಕನ್ನಡ ಜನತೆ ಶೀಘ್ರವಾಗಿ ಗಂಭೀರವಾಗಿ ಪ್ರತ್ಯೇಕವಾಗಿ ಯೋಚಿಸಬೇಕು. ಅಗತ್ಯವಾದರೆ ಕಟಕಾಂತಕ ಸಂಘ Direct action ಸಿದ್ಧವಾಗಬೇಕು.

ಇತರ ಸಮಸ್ಯೆಗಳ ಪ್ರಸ್ತಾಪ

ದುರ್ದೈವವಶಾತ್ ಏಕೀಕೃತ ಕರ್ನಾಟಕದ ಸಮಸ್ಯೆಗಳು ಅನೇಕ ಎನ್ನುವುದಕ್ಕಿಂತ ಅನಂತ ಎನ್ನುವುದೇ ಸರಿ ಎಂದು ಕಾಣುತ್ತದೆ. ಅದರಲ್ಲೂ ಅಂತರರಾಜ್ಯ ನದೀ ನೀರಿನ ಹಂಚಿಕೆಯ ಸಮಸ್ಯೆ, ಬೃಹತ್ ಬಹುರಾಷ್ಟೀಯ ಕಂಪನಿಗಳ ಕೋಟ್ಯಾಂತರ

ಕೋಟಿ ಬಂಡವಾಳ ಹೂಡಿದ ಕಾರ್ಖಾನೆಗಳ ಅಪಾಯ ಕೃಷಿ ಭೂಮಿಗಳ ಭೂ ಬ್ಯಾಂಕ್‌ಗಳ ಭೀಕರ ಅಪಾಯ ಕರ್ನಾಟಕದಲ್ಲಿ ಮರಣ ಮೃದಂಗ ತಾಂಡವ ವಾಡುತ್ತಿದೆ. ಆ ಮಾರಕ ಅಪಾಯದಿಂದ ನಾವು ಪಾರಾಗದಿದ್ದರೆ ಕರ್ನಾಟಕವೂ ಉಳಿಯದು. ಕನ್ನಡವೂ ಉಳಿಯದು, ಉದ್ಧಾರವಂತೂ ದೂರ. ಈ ವಿಚಾರವಾಗಿ ನಾಲ್ಕು ಮಾತನಾಡಿ ಮಾತು ಮುಗಿಸುತ್ತಿದ್ದೇನೆ.

ಭೂಮಿ ಹಂಚಿಕೆ

ಬೃಹತ್ ಕಾರ್ಖಾನೆಗಳಿಗಾಗಿ ಸಹಸ್ರಾರು ಎಕರೆ ಕೃಷಿಯೋಗ್ಯ ಭೂಮಿಯನ್ನು ಒತ್ತಾಯದಿಂದ ವಶಪಡಿಸಿಕೊಂಡು ಅದನ್ನು ಪರದೇಶದ ಬಹುರಾಷ್ಟ್ರೀಯ ವಾಣಿಜ್ಯ ಕಂಪನಿಗಳಿಗೆ ಸರ್ಕಾರ ಧಾರೆ ಎರೆಯುತ್ತಿವೆ. ನಮ್ಮ ರಾಜ್ಯ ಸರ್ಕಾರದ ಕೃತ್ಯ ಅತ್ಯಂತ ವಿಷಾದನೀಯ; ಖಂಡನೀಯ. ಸ್ವದೇಶದ, ಮತ್ತು ವಿದೇಶಗಳ ಕಂಪನಿಗಳಿಗೆ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಅಗ್ಗವಾಗಿ ಕೊಡುವುದು ನಮ್ಮ ದೇಶದ ತತ್ರಾಪಿ, ನಮ್ಮ ರಾಜ್ಯದ ಅರ್ಥನೀತಿ ಆತ್ಮಹತ್ಯಾಕಾರಕ ಘೋರ ಘಾತಕ. ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಲು ಭೂಮಿಯನ್ನು ವಶಪಡಿಸಿಕೊಂಡು ಭೂ ಬ್ಯಾಂಕುಗಳನ್ನು ಸ್ಥಾಪಿಸುವುದಂತೂ ಭೂತಾಯಿಯ ಮೇಲೆ ಮಾಡುವ ಹಗಲು ಅತ್ಯಾಚಾರ. ಈಗ ನಮ್ಮ ದೇಶದಲ್ಲಿ ನಡೆಯುತ್ತಿರುವ ಸ್ತ್ರೀ ಮಾನಭಂಗದಷ್ಟೇ ಹೀನಕೃತ್ಯ. ಆ ಘೋರ ದುಷ್ಕೃತ್ಯ ಮಾಡುವ ಅತ್ಯಾಚಾರಿಗಳನ್ನು ಮರಣದಂಡನೆಗೆ ಗುರಿಪಡಿಸಬೇಕೆಂದು ಜನ ಬೊಬ್ಬೆ ಎಬ್ಬಿಸುತ್ತಿದ್ದಾರೆ. ನ್ಯಾಯಮೂರ್ತಿ ವರ್ಮಾ ಆಯೋಗ ಅಂಥ ಅತ್ಯಾಚಾರಿಗಳಿಗೆ ಇಪ್ಪತ್ತು ವರ್ಷ ಶಿಕ್ಷೆ ವಿಧಿಸಬೇಕೆಂದು ಶಿಫಾರಸ್ಸು ಮಾಡಿದೆ. ನನ್ನ ದೃಷ್ಟಿಯಲ್ಲಿ ಮರಣದಂಡನೆಯೇ ಭೂಮಾತೆಯ ಮೇಲೆ ಅತ್ಯಾಚಾರ ಮಾಡಿದವರಿಗೆ ಸರಿಯಾದ ಶಿಕ್ಷೆ. ಒಬ್ಬ ಯುವತಿಯ ಮೇಲೆ ಅತ್ಯಾಚಾರ ಮಾಡಿದರೆ, ಆ ಕೃತ್ಯ ಒಮ್ಮೆ ಒಬ್ಬನು ಮಾಡಿದ ಅಪರಾಧವಾದೀತು. ಅವರನ್ನು ಶಿಕ್ಷಿಸಿದರೆ ಆ ದುಷ್ಕೃತ್ಯ ಮುಗಿಯುತ್ತದೆ. ಆದರೆ ಹೆನ್ರಿ ಜಾರ್ಜ್ ಎಂಬ ಅಮೆರಿಕಾದ ಒಬ್ಬ ಆರ್ಥಿಕ ನೀತಿ ತಜ್ಞ ದೊಡ್ಡ ಸಾಹಿತಿ ಹೇಳುವಂತೆ–ಒಬ್ಬ ಕಳ್ಳ ಒಂದು ಕುದುರೆ ಕದ್ದರೆ ಆ ಕಳ್ಳತನದ ದುಷ್ಪರಿಣಾಮ ಕಳೆದು ಕೊಂಡವನಿಗೆ ಒಂದು ಬಾರಿ ಒಂದು ಕಾಲಕ್ಕೆ ಕೊನೆಯಾಗುತ್ತದೆ. ಆದರೆ ಭೂಗಳ್ಳತನ ಸೂರ್ಯಚಂದ್ರರು ಇರುವ ತನಕ ದಿನ ದಿನವೂ ಕಾಲ ಇರುವ ತನಕ ನಡೆಯುವ ಕಳವು. ಪಾಸ್ಕೋ ಕಂಪನಿಗೆ ಗದಗ ಜಿಲ್ಲೆಯಲ್ಲಿ ಒಂದು ಉದ್ಯಮ ಸ್ಥಾಪನೆ ಮಾಡಲು ಸಾವಿರಾರು ಎಕರೆಯನ್ನು ಕೊಡುವುದು ಹೇಯ ಅಪರಾಧ! ಅದಕ್ಕೆ ಸಾಹಿತಿಗಳೇನು ಮಾಡುವುದಿದೆ? ಎಂದು ಕೈ ಚೆಲ್ಲಿ ಕಣ್ಣುಮುಚ್ಚಿ ಕುಳಿತರೆ ಆ ಭೂಗಳ್ಳತನಕ್ಕೆ ಕುಮ್ಮಕ್ಕು ಕೊಡುವವರು ಸಹ ಆರೋಪಿಗಳಾಗುತ್ತಾರೆ. ಗದಗಿನ ಸ್ವಾಮಿಗಳಂಥ ಸರ್ವಸಂಗ ಪರಿತ್ಯಕ್ತರೆ ಕಾವಿ ಕಾಷಾಯ ಕೌಪಿಣೆಯನ್ನು ಕಳಚಿ ಹೋರಾಟಕ್ಕೆ ಧುಮಿಕಿರುವಾಗ ಸಮಾಜದ ಗುರುಗಳೂ, ಹಿತರಕ್ಷಕರೂ ಆದ ಸಾಹಿತಿಗಳು ಈ ಭೂ ಸಮಸ್ಯೆ ನಮ್ಮದಲ್ಲ ಎಂದು ಕರ್ತವ್ಯಚ್ಯುತರಾದರೆ ಅದು

ಮಹಾಪರಾಧ. ಮಾಡಬಾರದ ಕೃತ್ಯಮಾಡಿದವನು ಅಪರಾಧಿಯಾದರೆ ಮಾಡಬೇಕಾದ ಕರ್ತವ್ಯವನ್ನು ಮಾಡದಿದ್ದರೆ ಅವನೂ ಅಪರಾಧಿಯೇ. ದುಶ್ಯಾಸನ ದ್ರೌಪದಿಯ ವಸ್ತ್ರಾಪಹರಣ ಮಾಡಿದಾಗ ಅದು ತಪ್ಪು ಎಂದು ಹೇಳದ ಅದನ್ನು ತಡೆಯದ ದ್ರೋಣಾಚಾರ್ಯನ ಮೌನ ಅಪರಾಧವೆ. ಶಿಕ್ಷಾರ್ಹವೇ. ಹಾಗೆಯೇ ನಾವು ಸಾಹಿತಿಗಳು ಮಾತನಾಡಲೇ ಬೇಕಾದಾಗ ಮಾತನಾಡದಿದ್ದರೆ ಕರ್ತವ್ಯಲೋಪವೆ. ತನ್ನ ಲೇಖನಿಯೆಂಬ ಖಡ್ಗವನ್ನು ಹಿಡಿದು ಭೂಮಾತೆಯ ಮಾನಸಂರಕ್ಷಣೆಗೆ ಮುನ್ನುಗ್ಗಲೆಬೇಕು. ಸಾಹಿತ್ಯ ಸಮ್ಮೇಳನವೆಂಬ ಈ ರಥದಲ್ಲಿ ಕುಳಿತು ನಾನು ಕರೆ ಕೊಡುವ ದಂಡನಾಯಕನ ಆಜ್ಞೆ ಇದು! ಸಾಹಿತಿಗಳೇ ಈ ಧರ್ಮಯುದ್ಧದಲ್ಲಿ ಜೀವದ ಹಂಗು ತೊರೆದು ತಲೆಹಾರಿ ಹೋದರೆ ಹೋಗಲಿ ಎಂದು ಸಿಂಹನಾದ ಮಾಡುತ್ತ ಮುನ್ನುಗ್ಗಿ 'ಸತ್ತರೆ ಸ್ವರ್ಗ, ಗೆದ್ದು ಬದುಕಿದರೆ ಭೂರಾಜ್ಯದ ಒಡೆತನ.' ನಾವೀಗ ಕಲ್ಕಿಯಾಗ ಬೇಕೆಂದು ಬೇಡಿಕೊಂಬೆ. 'ಜಯ ಜಯ ಮಹಾದೇವ' ಎಂದು ರಣಘೋಷಮಾಡಿ ಕೃತಕೃತ್ಯರಾಗಿ.

ಹೀಗೆ ಭೂತಾಯಿಯ ರಕ್ಷಣೆ ಮಾಡಿದ ಮೇಲೆ ಅದಕ್ಕೆ ನೀರುಣಿಸಿ ಅದನ್ನು ಸಂರಕ್ಷಣೆ ಮಾಡೋಣ. ಅದು ನಮ್ಮ ಕರ್ತವ್ಯ 'ಹಾರೆ, ಗುದ್ದಲಿ ಸಲಕೆ' ಗಳನ್ನು ಹಿಡಿದು ನೀರು ನಿಲ್ಲಿಸಿ ಭೂಮಿಯನ್ನು ನಂದನವನ ಮಾಡೋಣ. ಇದನ್ನು ಭೂ ಸ್ವರ್ಗ ಮಾಡೋಣ. ನಮ್ಮ ಸ್ವಾತಂತ್ರ್ಯ ಸಮರದ ಉದ್ದೇಶವನ್ನು ಈಡೇರಿಸೋಣ. ಅದಕ್ಕಾಗಿ, ಕೃಷ್ಣ, ಕಾವೇರಿ, ತುಂಗಭದ್ರಾ ನೀರನ್ನು ಉಪಯೋಗಿಸಿ ಕೊಳ್ಳೋಣ. ಅಂದರೆ ನೆರೆರಾಜ್ಯಗಳೊಡನೆ ಯುದ್ಧ ಹೂಡೋಣ ಎಂದಲ್ಲ. ನೆರೆರಾಜ್ಯಗಳೊಡನೆ ಪ್ರೀತಿ ಸೌಹಾರ್ದದಿಂದ ಈ ಸಮಸ್ಯೆಯನ್ನು ಪರಿಷ್ಕರಿಸಿ ಕೊಳ್ಳೋಣ. ಇದೇ ಸರ್ವೋತ್ತಮ ಮಾರ್ಗ. ಈ ಸಂಧಾನ ಮಾರ್ಗಕ್ಕೆ ನಾವು ಸಾಹಿತಿಗಳು ಜನರ ಮತ್ತು ಜನ ನಾಯಕರ ಮನಸ್ಸನ್ನು ಸಿದ್ಧಮಾಡಬೇಕು. ೧೯೯೯ರ ಫೆಬ್ರವರಿಯಲ್ಲಿ ಇಂಥ ಪ್ರಯತ್ನವನ್ನು ದಿ. ಹೆಚ್.ಎನ್. ನಂಜೇಗೌಡರ ರಾಜಕೀಯ ನಾಯಕರ ನೇತೃತ್ವದಲ್ಲಿ ನಮ್ಮ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಮುಂದಾಳ್ತನದಲ್ಲಿ ಮಾಡಿದೆವು. ಆಗ ತಮಿಳುನಾಡಿನ ಸಾಹಿತಿಗಳು ರೈತ ಮುಖಂಡರೂ ಬಂದಿದ್ದರು ಆಗ ತಮಿಳಿನ ಪೆರಿಯ ಪುರಾಣ ಕನ್ನಡ ಕವಿಗಳ ಮೇಲೆ, ಕನ್ನಡದ ಕವಿ-ಕಾವ್ಯಗಳು ತಮಿಳರ ಮೇಲೆ ಎಂಥ ಸತ್ಪರಿಣಾಮ ಮಾಡಿದವು ಎಂಬುದನ್ನು ಮನವರಿಕೆ ಮಾಡಿಕೊಟ್ಟಾಗ ತಮಿಳರು ಹರ್ಷೋದ್ಗಾರ ಮಾಡಿ ನಮ್ಮನ್ನು ಅಪ್ಪಿಕೊಂಡರು. ನಮ್ಮ ಈ ಸಂಧಾನ ಪ್ರಯತ್ನವನ್ನು ಪ್ರಶಂಸಿಸಿ ಹಿಂದೂ ಪತ್ರಿಕೆಯ Forntline ವಾರಪತ್ರಿಕೆಯು ವಿಶೇಷ ಸಂಚಿಕೆಯನ್ನೇ ಪ್ರಕಟಿಸಿತು. ತಮಿಳು ರೈತಮುಖಂಡರೂ, ಸಾಹಿತಿಗಳೂ ನಮ್ಮನ್ನು ತಮಿಳುನಾಡಿಗೆ ಆಹ್ವಾನಿಸಿದರು. ನಾವೂ ಸಿದ್ಧರಿದ್ದೆವು. ಆದರೆ ರಾಜಕೀಯ ಕಿತಾಪತಿಗಳು ಅದಕ್ಕೆ ಕಲ್ಲು ಹಾಕಿದರು. ಆ ಪ್ರಯತ್ನ ಅಲ್ಲಿಗೇ ನಿಂತು ಹೋಯಿತು. ಅಂಥ ಪ್ರಯತ್ನವನ್ನು ಕೃಷ್ಣಾ ನೀರು

ಹಂಚಿಕೆ ವಿಚಾರದಲ್ಲೂ ನಡೆಸಬೇಕು. ಈ ಪ್ರಯತ್ನವನ್ನು ನಾವು ಸಾಹಿತಿಗಳು ಸಹಕರಿಸಬೇಕೆಂದು ಈ ವೇದಿಕೆಯಿಂದ ಮನವಿ ಮಾಡುತ್ತೇನೆ.

ಇನ್ನು ಗಡಿನಾಡಿನ, ಹೊರನಾಡಿನ ಕನ್ನಡ, ಕನ್ನಡಿಗರ ಹಿತರಕ್ಷಣೆಯ ವಿಚಾರವಾಗಿ ನಾಲ್ಕು ಮಾತು. ಕರ್ನಾಟಕದ ಗತವೈಭವವನ್ನು ಹೊಗಳಿ ಹೊರಗುಳಿದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಇದನ್ನು ಒಪ್ಪಿಕೊಂಡು ಗಡಿನಾಡು, ಹೊರನಾಡಿನ ಕನ್ನಡಿಗರ ಕನ್ನಡದ ಹಿತರಕ್ಷಣೆ ಮಾಡಬೇಕು. ಈಗಲೂ ನೆರೆರಾಜ್ಯಗಳಲ್ಲಿರುವ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವ ಉಪಾಯ ಮಾಡಬೇಕು. ಅಲ್ಲಿ ಕನ್ನಡ ಪಠ್ಯಪುಸ್ತಕ ಒದಗಿಸಲು ಆಯಾ ರಾಜ್ಯ ಸರ್ಕಾರಗಳನ್ನು ಒಪ್ಪಿಸಲೆಬೇಕು. ಆ ಕೆಲಸವನ್ನು ಇಲ್ಲಿ ರಾಮಕೃಷ್ಣ ಸರ್ಕಾರ ಆಂಧ್ರದಲ್ಲಿ ಅಂಜಯ್ಯ ಸರ್ಕಾರ ಇದ್ದಾಗ ಆಂಧ್ರ ರಾಜ್ಯದ ಕನ್ನಡ ಶಾಲೆಗಳಿಗೆ ಕನ್ನಡ ಪಠ್ಯ ಪುಸ್ತಕಗಳನ್ನು ಒದಗಿಸಲಾಯಿತು. ಹೇಗಾಯಿತು ಎಂಬುದನ್ನು ನಾನು ಬರೆದ ಬಳ್ಳಾರಿ ಲೋಹಿಯಾ ಪ್ರಕಾಶನ ಪ್ರಕಟಿಸಿದ "ಕರ್ನಾಟಕ ಏಕೀಕರಣ ಬಳ್ಳಾರಿ ಜಿಲ್ಲೆಯ ಹಿನ್ನೆಲೆಯಲ್ಲಿ" ಎಂಬ ಕಿರುಹೊತ್ತಿಗೆಯಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದೇನೆ. ಆಸಕ್ತರು ಓದಿ ತಿಳಿಯಬಹುದು. ಫಿಲಿಫೈನ್ ದೇಶದ ತಮಿಳು ಶಾಲೆಗಳಿಗೆ ತಮಿಳುನಾಡು ಸರ್ಕಾರ ತಮಿಳು ಪಠ್ಯಗಳನ್ನು ಚೆನ್ನೈನಲ್ಲಿ ಮುದ್ರಿಸಿ ಪುಕ್ಕಟೆ ಸರಬರಾಜು ಮಾಡುತ್ತಾರೆಂದರೆ ನಮಗೇಕೆ ಸಾಧ್ಯವಿಲ್ಲ? ಸರ್ಕಾರದಲ್ಲಿ ಕನ್ನಡಕ್ಕಾಗಿ ದುಡಿಯುವ ಮಿಡಿಯುವ ಮಂತ್ರಿಗಳು, ಶಾಸಕರು, ಶ್ರೀಚಿರಂಜೀವಿ ಸಿಂಗ್, ಗೋರೆ ಮುಂತಾದ ನಿಷ್ಠಾವಂತ ಅಧಿಕಾರಿಗಳಿದ್ದರೆ ಇದು ಕಷ್ಟದ ಕೆಲಸವಲ್ಲ. ಹೊರನಾಡ ಕನ್ನಡದ ಹಿತರಕ್ಷಣೆಗಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ, ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರದರ್ಶನ ಹೆಚ್ಚು ಪ್ರಯೋಜನಕಾರಿಯಲ್ಲ. ಪ್ರತಿಭಟನೆ, ಪ್ರದರ್ಶನ ವ್ಯರ್ಥ. ಬೇಡ ಎನ್ನುವುದಿಲ್ಲ. ಆದರೆ ಉಗುರಿನಿಂದ ಆಗುವ ಕೆಲಸಕ್ಕೆ ಕೊಡಲಿ ಎತ್ತಬಾರದು ಎಂಬುದು ನನ್ನ ಇಂಗಿತ.

ವಿದೇಶಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಬೆಳೆಸಲು ನಾವು ಅಲ್ಲಿಗೆ ಹೋಗಬೇಕಾಗಿಲ್ಲ. ಅಲ್ಲಿರುವ ಕರ್ನಾಟಕದಿಂದ ಹೋದ ತೆಲುಗರು, ತೌಳವರು, ಕೊಡವರು, ಕೆಲವು ತಮಿಳರು ಕರ್ನಾಟಕ ರಾಜ್ಯೋತ್ಸವವನ್ನು ಪ್ರತಿವರ್ಷ ವಿಜೃಂಭಣೆಯಿಂದ ಆಚರಿಸುತ್ತಾರೆ. ಅಲ್ಲಿಯೇ ಹುಟ್ಟಿ ಬೆಳೆದ ಕನ್ನಡಿಗರ ಮಕ್ಕಳು 'ಡ್ಯಾಡಿ ಮಮ್ಮಿ' ಎನ್ನುವುದಿಲ್ಲ. ಅವರಿಗೆ ನೀವು ಕನ್ನಡಾಭಿಮಾನವನ್ನು ಹೇಳಿಕೊಡಬೇಕಾಗಿಲ್ಲ. ಯಕ್ಷಗಾನ ನಾಟಕವನ್ನು ಕರ್ನಾಟಕ ಸಂಗೀತವನ್ನು ಕಲಿಸಬೇಕಾಗಿಲ್ಲ. ಯುಗಾದಿ ಹಬ್ಬ, ನವರಾತ್ರಿ, ಗಣೇಶ ಚತುರ್ಥಿಗಳನ್ನು ತಪ್ಪದೆ ಆಚರಿಸುತ್ತಾರೆ. ಅವರಿಗೆ ನಾವು ಕನ್ನಡ ಸಂಸ್ಕೃತಿಯ ಪಾಠ ಕಲಿಸಬೇಕಾಗಿಲ್ಲ. ಆದ್ದರಿಂದ ರಾಜ್ಯ ಬೊಕ್ಕಸದ ಖರ್ಚಿನಿಂದ ಅಮೆರಿಕಾದಲ್ಲಿ ಸಂಸ್ಕೃತ ವಾಹಕವನ್ನು ಕಳಿಸಬೇಕೆ. ಅದೇ ದುಡ್ಡಿನಿಂದ ಇಲ್ಲಿಯ ಕನ್ನಡ ಶಾಲೆಗಳನ್ನು ಕಟ್ಟಿ ಬೆಳೆಸೋಣ.

ಇನ್ನು ಕೊನೆಯ ಹಂತಕ್ಕೆ ಬರುತ್ತೇನೆ. ಈಗಾಗಲೇ ದೀರ್ಘವಾಗಿರುವ ಭಾಷಣವನ್ನು ಇನ್ನೂ ದೀರ್ಘಮಾಡಿ, ಈಗಾಗಲೇ ಸಾಕಷ್ಟು ಬೇಸತ್ತಿರುವ ನಿಮ್ಮನ್ನು ಇನ್ನೂ ಬೇಸರಗೊಳಿಸುವ ಇಚ್ಚೆ ನನಗಿಲ್ಲ. ಆದಷ್ಟು ಬೇಗ ಮುಗಿಸುತ್ತೇನೆ. ಈ ದೇಶ ಈಗಾಗಲೇ ಸಹಿಸಲಾರದಷ್ಟು ಹದಗೆಟ್ಟು, ನೈತಿಕ ದೃಷ್ಟಿಯಿಂದ ಅಧಃ ಪಾತಾಳಕ್ಕೆ ಕುಸಿದಿದೆ. ಎಷ್ಟೇ ಆರ್ಥಿಕಾಭಿವೃದ್ಧಿ ಆಗಿದ್ದರೂ ಅದು ನೈತಿಕ ಅಧಃಪತನದ ಕೊರತೆಯನ್ನು ತುಂಬಲಾರದು. ಈ ಅವನತಿಗೆ ಎರಡು ಘೋರ ಅಪಾಯಗಳಿವೆ. ಒಂದು ಜಾತಿಯತೆ ಇನ್ನೊಂದು ಭ್ರಷ್ಟಾಚಾರ. ಇವುಗಳ ಅಪಾಯದಿಂದ ಪಾರಾಗದೆ ಈ ದೇಶ ಉಳಿಯಲಾರದು. ಈ ಎರಡೂ ಅಪಾಯಗಳು ಘೋರ ವಿಷ ಸರ್ಪಗಳಿದ್ದಂತೆ. ಒಂದು ನಾಗರಹಾವು ಇನ್ನೊಂದು ಉರಿಮಂಡಲ. ನಾಗರಹಾವು ಭ್ರಷ್ಟಾಚಾರ, ಜಾತೀಯತೆ ಉರಿಮಂಡಲ. ಇವುಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ? ಜಾತೀಯತೆ ಉರಿಮಂಡಲದ ವಿಷ ಹೆಚ್ಚು ಅಪಾಯಕಾರಿ. ಹಾಗೆಂದು ವಿಷ ವೈದ್ಯ ತಜ್ಞರು ಹೇಳುತ್ತಾರೆ. ಈ ಜಾತೀಯತೆಯ ವಿಷ ಸರ್ಪಕ್ಕೆ ಮೊದಲು ಬಲಿಯಾದವರು ಬೌದ್ಧರು. ಅದರ ಭೀಕರ ಪರಿಣಾಮವನ್ನು ಮೊಯಿನ್ ಅನ್ಸಾರಿ ಎಂಬ ವಿದ್ವಾಂಸರು ಬರೆದ Why Buddism disappeared from India ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ..... :-

"ಕಾರ್ತಿಕದ ಕತ್ತಲಲಿ ಆಕಾಶ ದೀಪ"

"ಹೀಗೆ ಚಾತುರ್ವರ್ಣ ಪದ್ಧತಿಯ ಸಂಸ್ಥಾಪಕರೂ, ಸಮಾಜದಲ್ಲಿ ಮೇಲು-ಕೀಳುಗಳ ಪ್ರತಿಪಾದಕರೂ ಆದ ಸನಾತನಿಗಳು ಬೌದ್ಧರನ್ನು ದಯೆ, ದಾಕ್ಷಿಣ್ಯ, ಕರುಣೆ, ಮಾನವೀಯತೆ.... ಕಿಂಚಿತ್ತೂ ಇಲ್ಲದೆ ಕಗ್ಗೊಲೆ ಮಾಡಿ ಈ ದೇಶದಿಂದಲೆ ಅವರನ್ನು ಓಡಿಸಿದರು. ಓಡಿಸಲಾಗದೆ ಇಲ್ಲಿ ಉಳಿದಿದ್ದ ಸಹಸ್ರಾರು ಬೌದ್ಧ ಭಿಕ್ಷುಗಳನ್ನು, ಸನ್ಯಾಸಿಗಳನ್ನು ಗುಹೆಗಳಲ್ಲಿದ್ದು ಧ್ಯಾನ, ತಪಸ್ಸು, ಧರ್ಮ ಸಾಧನೆ ಮಾಡುತ್ತಿದ್ದವರನ್ನು ಸಜೀವ ದಹನ ಮಾಡಿದರು.

ಅಜಂತಾ ಬೌದ್ಧ ವಿಹಾರಗಳಲ್ಲಿ ಧ್ಯಾನಮಗ್ನರಾಗಿದ್ದ ಬೌದ್ಧ ಸನ್ಯಾಸಿಗಳನ್ನು ಸಜೀವ ದಹನ ಮಾಡಿ, ಗುಹೆಯ ಬಾಗಿಲಿಗೆ ಬಂಡೆ ಜಡಿದು, ಕಳ್ಳೆಯನ್ನು ಮುಚ್ಚಿ ಅವುಗಳು ಯಾರಿಗೂ ಕಾಣದಂತೆ ಮಾಡಿದರು. ಕ್ರಿ.ಶ. ಐದು-ಆರನೇ ಶತಮಾನದಲ್ಲಿ ಕಣ್ಮರೆ ಮಾಡಿದ್ದ ಈ ಬೌದ್ಧ ವಿಹಾರಗಳು ಕ್ರಿ.ಶ.೧೯ನೇ ಶತಮಾನದಲ್ಲಿ ಅಕಸ್ಮಾತ್ ಪತ್ತೆಯಾದವು! ಅವುಗಳ ಬಾಗಿಲು ತೆಗೆದು ಒಳಹೊಕ್ಕು ನೋಡಿದಾಗ ಆ ಗುಹೆಗಳ ಮಾಳಿಗೆ, ಗೋಡೆಗಳು ಹತ್ತಿ ಉರಿದ ಬೆಂಕಿಯ ಕಾಡಿಗೆಯ ಕಪ್ಪು ಇನ್ನೂ ದಟ್ಟವಾಗಿ ಮೆತ್ತಿದ್ದು ಕಾಣುತ್ತಿತ್ತು. ಸನ್ಯಾಸಿಗಳನ್ನು ಕೊಂದು ನಿರ್ನಾಮ ಮಾಡಿದಂತೆ ನಿರ್ನಾಮ ಮಾಡಲಾಗದ ಬೌದ್ಧ ಚೈತ್ಯಾಲಯಗಳನ್ನು ವೈಷ್ಣವ ಮತ್ತು ಶೈವ ದೇವಾಲಯಗಳನ್ನಾಗಿ ಪರಿವರ್ತಿಸಿದರು ಈ ಸನಾತನಿಗಳು. ಅದಕ್ಕೊಂದು ಪ್ರತ್ಯಕ್ಷ ನಿದರ್ಶನ ಇಂದಿನ ಒರಿಸ್ಸಾ ರಾಜ್ಯದಲ್ಲಿರುವ ಪೂರಿ ಜಗನ್ನಾಥ ದೇವಾಲಯ. ಇಂಥ ಉದಾಹರಣೆಗಳು

ಭಾರತದಲ್ಲಿ ನೂರಾರು ಇವೆ. ಇಷ್ಟೆಲ್ಲ ಅನಾಹುತ ಮಾಡಿದರೂ, ಮಾರಣ ಹೋಮ ಮಾಡಿದರೂ, ಎಷ್ಟೋ ಚೈತ್ಯಾಲಯಗಳನ್ನು ಧ್ವಂಸಮಾಡಿದರೂ, ದೇವಾಲಯಗಳನ್ನಾಗಿ ಪರಿವರ್ತಿಸಿದರೂ..... ಬೌದ್ಧ ಧರ್ಮವನ್ನು ಭಾರತ ದೇಶದಿಂದ ಸಂಪೂರ್ಣ ನಾಶ ಮಾಡಲು ಸಾಧ್ಯವಾಗಲಿಲ್ಲ! ಅದು ಈಗಲೂ ಈ ದೇಶದಲ್ಲಿ ಜೀವಂತವಾಗಿದೆ. ಅದರ ಅನುಯಾಯಿಗಳು ಈಗಲೂ ವೃದ್ಧಿಯಾಗುತ್ತಿದ್ದಾರೆ! ಹಿಂದೂಗಳೆಂಬ ಶೂದ್ರರು, ಅದರಲ್ಲೂ ಅಸ್ಪೃಶ್ಯರು ಇಂದಿಗೂ ಮತಾಂತರ ಹೊಂದಿ ಬೌದ್ಧರಾಗುತ್ತಿದ್ದಾರೆ"

(ಅವುಗಳ ಪೂರ್ಣ ವಿವರ ಬೇಕೆಂದರೆ ಮೊಯಿನ್ ಅನ್ಸಾರಿ ಅವರ ಪುಸ್ತಕವನ್ನು ಓದಬಹುದು.)

ನಮ್ಮ ದೇಶದ ಜಾತಿ ದ್ವೇಷದ ಅಗ್ನಿಕುಂಡದಲ್ಲಿ ಬೆಂದು ಹೋಗಿ ಇಡೀ ದೇಶ ಗೋದ್ರೋತ್ತರ ಕಾಳ್ಗಿಚ್ಚಿಗೆ ಬಲಿಯಾಗುವುದಕ್ಕಿಂತ ಬೌದ್ಧರಾಗಿ ಬದುಕುಳಿಯುವುದು ಉತ್ತಮ. ಸನಾತನಿಗಳ ಅಗ್ನಿಕುಂಡಕ್ಕೆ ಹಾನಿಯಾಗುವುದಕ್ಕಿಂತ ಮತಾಂತರದಿಂದ ಈ ದೇಶ ಉಳಿದು ಮಹಾಕವಿ ಕುವೆಂಪು ಹಾರೈಸಿದಂತೆ ಈ ದೇಶ–ಕನಿಷ್ಠ ಈ ಕರ್ನಾಟಕವು ಸರ್ವಜನಾಂಗದ ಶಾಂತಿಯತೋಟವಾಗುವಂತೆ ಮಾಡಬೇಕಾಗಿ ನಿಮ್ಮಲ್ಲಿ ಕೈಮುಗಿದು ಬೇಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಭ್ರಷ್ಟಾಚಾರದ ಅರ್ಬುದ (CANCER) ರೋಗ ನಮ್ಮ ದೇಶಕ್ಕೆ ಅಂಟಿದ ಮಹಾವ್ಯಾಧಿ. ಹಿರಿಬೇನೆ. ಅದು ಕಾಳಿಂಗ ಸರ್ಪದ ವಿಷದಂತೆ. ನಾಗರಹಾವಿನ ವಿಷ ಬೇಗನೆ ಏರುತ್ತದೆ. ತಕ್ಕ ಔಷಧ ಕೊಟ್ಟರೆ, ಉರಿಮಂಡಲ ವಿಷಕ್ಕಿಂತ ಬೇಗನೆ ಇಳಿಸಬಹುದು. ಒಂದು ವೇಳೆ ವಿಷ ಇಳಿಯದೆ ಹೋಗಿ ಸತ್ತರೂ ಅವನೊಬ್ಬ ಸಾಯುತ್ತಾನೆ. ಅದೇನು ಅಷ್ಟು ನಷ್ಟವೇನಲ್ಲ. ಆದರೆ ಜಾತಿಯತೆ, ಪರಮತ ದ್ವೇಷವೆಂಬ ವಿಷ ಮನಸ್ಸಿಗೆ ತಗಲುವ ವಿಷ. ಆ ವಿಷ ಹಾವು ಕಚ್ಚಿದವನ ದೇಹದ ಸಾವಿನಿಂದ ಕೊನೆಯಾದೀತು. ಸಾಯದೆ ಉಳಿದವರು ಬದುಕಿರುತ್ತಾರೆ. ಆದ್ದರಿಂದ ಇಡೀ ಜನಾಂಗದ ಮನಸ್ಸಿನಲ್ಲಿ ವಿಷಬೀಜ ಬಿತ್ತಿದ ಜಾತೀಯತೆಯಿಂದ ವಿಷವಿತರಕ ವರ್ತಕ (Merchants of Commulasim) ರನ್ನು ಜನ ದೂರವಿಡಬೇಕು. ದ್ವೇಷದ ಕಿಚ್ಚನ್ನು ಹಚ್ಚಬೇಡಿ. ಈ ಕರ್ನಾಟಕ, ಈ ಶಹರ ವಿಜಾಪುರ ಸುಲ್ತಾನರ ಆಳ್ವಿಕೆ ಇದ್ದಾಗ ಸರ್ವಜನಾಂಗದ ಶಾಂತಿಯ ತೋಟವಾಗಿತ್ತು. ಇಲ್ಲಿ ಹಿಂದೂ ಇಸ್ಲಾಂ ಧರ್ಮಗಳ ಐಕ್ಯಮತದ ಸೂಫೀ ದರ್ಗಾ (ಸಮಾಧಿ) ಈಗಲೂ ಜೀವಂತ ಇದೆ. ಆ ದರ್ಗಾ ಅನೇಕ ಸಹಸ್ರ ಸಹಸ್ರ ಜೀವರ ಸಂಕಟ ದುಃಖಕ್ಕೆ ಪರಿಹಾರ ನೀಡುತ್ತಿದೆ. ಆ ಶರಣರನ್ನು ಕರ್ನಾಟಕದ ಸಾಧಾರಣ ಹಿಂದೂ ಜನ ಪೂಜಿಸುತ್ತಿದ್ದಾರೆ. ಅಂಥ ಶಾಂತಿಧಾಮದ ಅಮೃತ ಕಲಶದಲ್ಲಿ ದ್ವೇಷದ ವಿಷದ ಹುಳಿ ಹಿಂಡಬೇಡಿ. "ನರಜನ್ಮ ಬಂದಾಗ ನಾಲಗೆಯು ಇದ್ದಾಗ ರಾಮಾ ಎನಬಾರದೆ?" ಎಂದ ದಾಸವರೇಣ್ಯರ ಈ ನಾಡಿನಲ್ಲಿ ಸಾಹಿತಿಗಳ ಸುಳ್ಳನ್ನು ಬಿತ್ತರಿಸಲಾರೆ ಈ ಸರಸ್ವತಿಯ ಪವಿತ್ರ ಪೀಠದಿಂದ. ಅವರಾಡಿದ ಅಪ್ಪಟ ತಾಜಾ

ಸುಳ್ಳಿನ ಒಂದು ಸ್ಯಾಂಪಲ್ ಕೊಡುತ್ತೇನೆ. ಶ್ರೀರಂಗಪಟ್ಟಣದಲ್ಲಿ ಸ್ಥಾಪನೆಯಾಗಲಿರುವರ ಕೇಂದ್ರಿಯ ವಿಶ್ವವಿದ್ಯಾಲಯಕ್ಕೆ ಟಿಪ್ಪೂ ವಿಶ್ವವಿದ್ಯಾನಿಲಯ ಎಂದು ಹೆಸರಿಡಬೇಕೆಂದು ನಿರ್ಧರಿಸಿರುವುದನ್ನು ವಿರೋಧಿಸುವಾಗ ಟಿಪ್ಪು ಹಿಂದೂಗಳ ದ್ವೇಷಿಯೆಂದು ಅವನು ೭೧,೦೦೦ ಹಿಂದೂಗಳನ್ನು ಬಲಾತ್ಕಾರವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿದನೆಂಬ ಸುಳ್ಳನ್ನು ಹೇಳುತ್ತಿದ್ದಾರೆ. ಇದನ್ನು ಕೇಳಿದೊಡನೆ ಅವನ ಆಳ್ವಿಕೆಯ ಕಾಲದಲ್ಲಿ ಕೊಡಗು ಪ್ರಾಂತ್ಯದಲ್ಲಿ ಅಷ್ಟು ಜನಸಂಖ್ಯೆ ಇತ್ತೆ ಎಂಬ ಸಂಶಯ ಬಂದು ಸರ್ಕಾರವೆ ಪ್ರಕಟಿಸಿರುವ 'ಕೂರ್ಗ್ ಗೆಝಟಿಯರ್' ತೆಗೆದುನೋಡಿದೆ. ೧೮೭೧ ರಲ್ಲಿ ಇಡೀ ಕೂರ್ಗ್ ರಾಜ್ಯದಲ್ಲಿ ಕೇವಲ ೧,೬೮,೩೧೨ ಜನರಿದ್ದರು. ೧೯೬೧ ರ ಜನಗಣತಿ ಪ್ರಕಾರ ಒಟ್ಟು ೩,೨೨,೮೨೯ ಪ್ರಜಾಸಂಖ್ಯೆ ಇತ್ತು(ಪುಟ-೯೨). ಹಾಗಾದರೆ ೧೭೮೨-೧೭೯೯ರ ಅವಧಿಯಲ್ಲಿ ಅಲ್ಲಿ ಎಷ್ಟು ಜನರಿದ್ದಿರಬಹುದು ಎಂದು ಲೆಕ್ಕ ಹಾಕಿದರೆ ಒಂದು ಲಕ್ಷ (ನೂರು ಸಾವಿರ)ಕ್ಕಿಂತ ಹೆಚ್ಚಾಗಿರಲಾರದು. ಆ ನೂರು ಸಾವಿರ ಜನರಲ್ಲಿ ೭೧ ಸಾವಿರ ಜನರನ್ನು ಇಸ್ಲಾಂಮತಕ್ಕೆ ಮತಾಂತರ ಮಾಡಿದ್ದರೆ ಈ ಇನ್ನೂರ ಹತ್ತು ವರ್ಷಗಳಲ್ಲಿ ಎಷ್ಟು ಜನ ಮುಸ್ಲಿಮರಿರಬೇಕು? ಕನಿಷ್ಟ ೨,೦೦,೦೦೦ ಇರಬೇಕು!! ಆದರೆ ಈಗ ಕೊಡಗು ಜಿಲ್ಲೆಯ ಒಟ್ಟು ಮುಸ್ಲಿಮರು ೧೪,೭೩೦ ಮಾತ್ರ ಇದ್ದಾರೆ. (ಕೂರ್ಗ್ ಗೆಝಟಿಯರ್ ಪುಟ ೯೮ ನೋಡಿ) ಸರಸ್ವತಿಯ ಸುಪುತ್ರರೂ ಸಂಶೋಧಕರೂ ಆದಂಥವರೆಂದು ಹೇಳಿಕೊಳ್ಳುವವರು ಇಂಥ ಹಸಿ ಸುಳ್ಳನ್ನು ಹೇಳಬಹುದೆ?

ಟಿಪ್ಪು ಹಿಂದು ಮತದ್ವೇಷಿ ಎಂಬುದೂ ಅಪ್ಪಟ ಸುಳ್ಳಿನ ಮುದ್ದೆ. ಯಾಕೆಂದರೆ ಮರಾಠಿಗರಿಂದ ಭಗ್ನವಾದ ಶೃಂಗೇರಿ ಶ್ರೀ ಶಾರದಮ್ಮನ ದೇವಾಲಯವನ್ನು ಪುನಃ ನಿರ್ಮಾಣ ಮಾಡಿದವರು ಹೈದರ್ ಮತ್ತು ಟಿಪ್ಪು. ಶ್ರೀ ಶೃಂಗೇರಿ ಜಗದ್ಗುರುಗಳಿಗೆ ಕನ್ನಡದಲ್ಲಿ ಪತ್ರಗಳನ್ನು ಬರೆದು ಅಮ್ಮನ ಮೆರವಣಿಗೆಗೆ ಪಲ್ಲಕ್ಕಿ ಕಾಣಿಕೆ ಕೊಟ್ಟವನು ಟಿಪ್ಪು. ಅಂಥವನು ಹಿಂದೂ ಮತ ದ್ವೇಷಿಯೇ? (ನೋಡಿ, ಮಹಮ್ಮದ್ ಮೊಯಿದ್ದೀನ್ ಅವರು ಬರೆದು, ಓರಿಯಂಟ್ ಲಾಂಗ್ಮನ್, ೨೦೦೦ ದಲ್ಲಿ ಪ್ರಕಟಿಸಿದ ಪುಸ್ತಕದ Plates ೨೧ ರಿಂದ ೨೭ ರವರೆಗೆ Appendix-5 ಪುಟ ೧೩೬-೩೭) ಈ ದಾಖಲೆಗಳು ಸುಳ್ಳೊ ಅಥವಾ ಈಗಿನ ಸಂಶೋಧಕರು ಹೇಳುವುದು ಸುಳ್ಳೊ? ಜನ ತೀರ್ಮಾನಿಸಬೇಕು. ಕೋಮು ದ್ವೇಷದ ಕಿಚ್ಚು ಹಚ್ಚಬೇಡಿ. ಸಾಹಿತಿಗಳು ಕೋಮು ಸೌಹಾರ್ದದ ಶಾಂತಿ ಸಂದೇಶವನ್ನು ಸಾರಬೇಕಾಗಿ ಸಾಹಿತಿಗಳನ್ನು ಬೇಡಿಕೊಳ್ಳುತ್ತೇನೆ.

ನೀವು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳನ್ನಾಗಲಿ, ಸರ್ಕಾರದ ಮುಖ್ಯಮಂತ್ರಿ ಗಳನ್ನಾಗಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನಾಗಲಿ, ನನ್ನನ್ನಾಗಲಿ 'ಕನ್ನಡಕ್ಕಾಗಿ ನೀವೇನು ಮಾಡಿದ್ದೀರಿ? ಏನು ಮಾಡುತ್ತೀರಿ? ಎಂದು ಕೇಳಬೇಡಿ' ಬದಲು

'ಕನ್ನಡಕ್ಕಾಗಿ ನಾವೇನು ಮಾಡಬೇಕು' ಎಂದು ಕೇಳಿ ಎಂದು ನಾನು ಬಿನ್ನೈಸುತ್ತೇನೆ. ಇದೇ ನನ್ನ ಕೊನೆಯ ಪ್ರಾರ್ಥನೆ. ಸಮಾಧಾನದಿಂದ ಕೇಳಿದ ನಿಮಗೆ ಹೃತ್ಪೂರ್ವಕ ವಂದನೆಗಳು. ಈ ಸ್ಥಾನವನ್ನು ಕೊಟ್ಟು ನನ್ನನ್ನು ಪ್ರೀತಿಸಿದ, ಗೌರವಿಸಿದ ಎಲ್ಲರಿಗೂ ಮತ್ತೊಮ್ಮೆ ನಮಸ್ಕಾರಗಳು.

ಜೈ ಭಾರತ್! ಜಯ ಕರ್ನಾಟಕ

ಅನುಬಂಧ

ಕನ್ನಡದಿಂದ ಏಳಿಗೆ ಹೇಗೆ ?

ವಿಜ್ಞಾನ ಗಣಿತ ಮುಂತಾದ ವ್ಯಾಸಂಗ ವಿಷಯಗಳ ಮೂಲಭೂತ ಪರಿಕಲ್ಪನೆಗಳನ್ನು ನಮ್ಮ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಗ್ರಹಿಸುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಲು ಈಚೆಗೆ ಒಂದು ಸಮೀಕ್ಷೆಯನ್ನು ನಡೆಸಲಾಯಿತು. ವಿಪ್ರೊ ಕಂಪನಿಯವರು ಎಜುಕೇಷನಲ್ ಇನಿಷಿಯೇಟಿವ್ಸ್ ಎಂಬ ಶೈಕ್ಷಣಿಕ ಸಂಶೋಧನಾ ಸಂಸ್ಥೆಯ ನೆರವು ಪಡೆದು, ಸಮೀಕ್ಷೆಯನ್ನು ನಡೆಸಿದರು. ಅದರಿಂದ ದೊರೆತ ಫಲಿತಾಂಶ ನಮ್ಮ ಕಣ್ಣು ತೆರೆಸುವಂಥದ್ದು. ಅದೇ ಬಗೆಯ ಸಮೀಕ್ಷೆ ನಡೆಸಿದ ಇತರ ೪೩ ದೇಶಗಳ ವಿದ್ಯಾರ್ಥಿಗಳಿಗಿಂತ ನಮ್ಮ ವಿದ್ಯಾರ್ಥಿಗಳು ಕೆಳಮಟ್ಟದಲ್ಲಿದ್ದಾರೆ! ಸಮೀಕ್ಷೆಗೆ ಒಳಪಡಿಸಿದ ೩೨,೦೦೦ ವಿದ್ಯಾರ್ಥಿಗಳು ಹಳ್ಳಿಗಾಡಿನ ಸರ್ಕಾರಿ ಶಾಲೆಗಳ ಬಡ ವಿದ್ಯಾರ್ಥಿಗಳಲ್ಲ; ದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ, ಕೋಲ್ಕತ್ತ ನಗರಗಳ ಶ್ರೀಮಂತರ ಮಕ್ಕಳು ಕಲಿಯುತ್ತಿರುವ ಪ್ರತಿಷ್ಠಿತ ಖಾಸಗಿ. ಶಾಲೆಗಳ ವಿದ್ಯಾರ್ಥಿಗಳು.

ನಮ್ಮ ದೇಶದ ವಿದ್ಯಾರ್ಥಿಗಳ ಈ ದುಸ್ಥಿತಿಗೆ ಏನು ಕಾರಣ ? ಓದಿದ್ದನ್ನು ಅಥವಾ ತರಗತಿಯಲ್ಲಿ ಉಪಾಧ್ಯಾಯರು ಹೇಳಿದ್ದನ್ನು ನೆನಪಿಟ್ಟುಕೊಂಡು, ಬೇಕೆಂದಾಗ ಅದನ್ನು ಪುನರುಚ್ಚರಿಸುವುದೇ 'ಕಲಿಕೆ' ಎಂಬ ಭಾವನೆಯಿಂದ ಎಲ್ಲವನ್ನೂ ಯಾಂತ್ರಿಕವಾಗಿ ಕಂಠಪಾಠ ಮಾಡುವುದು ನಮ್ಮ ವಿದ್ಯಾರ್ಥಿಗಳ ಪರಿಪಾಟವಾಗಿರುವುದೇ ಅದಕ್ಕೆ ಕಾರಣವೆಂಬುದು ಶಿಕ್ಷಣತಜ್ಞರ ಅಭಿಪ್ರಾಯ. ಈ ಪರಿಪಾಟವನ್ನು ನಮ್ಮ ದೇಶದ ವಿದ್ಯಾರ್ಥಿಗಳು ಮಾತ್ರ ಬೆಳಸಿಕೊಳ್ಳಲು ಏನು ಕಾರಣ? ಪೂರ್ವಗ್ರಹಕ್ಕೆ ಎಡೆಗೊಡದೆ ಈ ಬಗ್ಗೆ ಯೋಚಿಸಿದರೆ, ಮಾತೃಭಾಷೆಯಾಗಲೀ, ಸ್ಥಳೀಯ ಭಾಷೆಯಾಗಲೀ ಅಲ್ಲದಿರುವ ಇಂಗ್ಲಿಷ್ ಭಾಷೆಯನ್ನು ಶಿಕ್ಷಣಮಾಧ್ಯಮವಾಗಿ ಬಳಸುತ್ತಿರುವುದೇ ಅದಕ್ಕೆ ಕಾರಣವೆಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಏಕೆಂದರೆ ಹೈದರಾಬಾದ್ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಖ್ಯಾತ ಭಾಷಾವಿಜ್ಞಾನಿ ಪ್ರೊ. ಬಿ.ಎಚ್. ಕೃಷ್ಣಮೂರ್ತಿ ಹೇಳಿರುವಂತೆ 'ಪ್ರಪಂಚದ ಯಾವ ಮುಂದುವರಿದ ದೇಶವೂ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಲ್ಲದಿರುವ ಬೇರೊಂದು ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಬಳಸುತ್ತಿಲ್ಲ. ಅವರು ಮುಂದುವರಿದು 'ನಮ್ಮ ಭಾಷೆಯಲ್ಲಿ ನಮ್ಮ ಚಿಂತನೆ ಮಾಡದಿದ್ದರೆ ನಮ್ಮ ಬೌದ್ಧಿಕ ಸಾಮರ್ಥ್ಯದ ಸಂಪೂರ್ಣ ಉಪಯೋಗ ಸಾಧ್ಯವಿಲ್ಲ' ಎಂದಿದ್ದಾರೆ. ಅನಪೇಕ್ಷಣೀಯ ಶಿಕ್ಷಣ ಮಾಧ್ಯಮದಿಂದಾಗಿ ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆ ಅದಕ್ಷವಾಗಿದೆಯಾದರೂ ಅದರಿಂದ ಬೌದ್ಧಿಕ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯನ್ನು ಮೆರೆದಿರುವವರು ಎಲ್ಲೋ ಕೆಲವು ಮಂದಿ, ಅಸಾಮಾನ್ಯ

ಪ್ರತಿಭಾವಂತರು ಮಾತ್ರ. ನಮ್ಮ ಯುವಕರಿಗೆ ದಕ್ಷ ಶಿಕ್ಷಣ ವ್ಯವಸ್ಥೆ ಒದಗಿಸಿದ್ದೇ ಆದರೆ, ಅವರ ಸುಪ್ತಶಕ್ತಿ ಸ್ಫೋಟಗೊಂಡು ಅಂಥ ಸಾಧಕರ ಸಂಖ್ಯೆ ಗಮನಾರ್ಹವಾಗಿ ವರ್ಧಿಸುವುದರಲ್ಲಿ ಸಂದೇಹವಿಲ್ಲ.

ಮಾತೃಭಾಷಾ ಮಾಧ್ಯಮ


ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ಮನಸ್ಸಿನಲ್ಲಿರುವುದನ್ನು ತಿಳಿದು ಹೇಳುವುದಕ್ಕೆ- ಗ್ರಹಿಕೆ ಮತ್ತು ಅಭಿವ್ಯಕ್ತಿಗೆ ಮಾತೃಭಾಷೆ ಅತ್ಯುತ್ತಮ ಮಾಧ್ಯಮವೆಂಬುದು ಶಿಕ್ಷಣತಜ್ಞರೆಲ್ಲರ ಅಭಿಪ್ರಾಯ. ನಮ್ಮ ದೇಶದಲ್ಲಿ ಶಿಕ್ಷಣ ಸುಧಾರಣೆಗಾಗಿ ಆಗಾಗ ನೇಮಕಗೊಂಡಿರುವ ಆಯೋಗಗಳೆಲ್ಲವೂ ಈ ಮಾತನ್ನು ಒತ್ತಿ ಹೇಳಿವೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸ್ವಾತಂತ್ರ್ಯಾನಂತರ ಆಡಳಿತದ ಜವಾಬ್ದಾರಿ ವಹಿಸಿಕೊಂಡ ಅಂದಿನ ನಮ್ಮ ನೇತಾರರಿಗೆ ಈ ಮೂಲಭೂತ ತತ್ವದ ಅರಿವಿತ್ತು. ಆದುದರಿಂದ ಪ್ರೌಢಶಾಲೆಗಳವರೆಗೆ ಮಾತ್ರ ಲಭ್ಯವಿದ್ದ ಮಾತೃಭಾಷಾ ಮಾಧ್ಯಮವನ್ನು ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ವಿಸ್ತರಿಸುವ ಪ್ರಯತ್ನಗಳು ಮೊದಲ ಎರಡು ಮೂರು ದಶಕಗಳಲ್ಲಿ ನಡೆದವು. ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕ ಶಾಸ್ತ್ರಗಳ ಆ ಮಟ್ಟದ ಪ್ರೌಢ ಪಠ್ಯ ಪುಸ್ತಕಗಳನ್ನು ಹೊರತರಲು ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ನಿನವರು ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಧನ-ಸಹಾಯ ನೀಡುತ್ತಿದ್ದರು. ಅದರ ಫಲವಾಗಿ ಹಲಕೆಲವು ಪಠ್ಯಪುಸ್ತಕಗಳೂ ಪ್ರಕಟಗೊಂಡವು.

ಅಲ್ಲಿಂದ ಈಚಿನ ಎರಡು ಮೂರು ದಶಕಗಳಲ್ಲಿ ಪರಿಸ್ಥಿತಿ ಗುರುತಿಸ ಲಾಗದಷ್ಟು ಬದಲಾಗಿ ಹೋಗಿದೆ. ತ್ಯಾಗಕ್ಕೆ ಸಿದ್ಧರಾಗಿ ಸೇವಾ ಮನೋಭಾವದಿಂದ ರಾಜಕೀಯ ಪ್ರವೇಶಿಸಿದ ನಮ್ಮ ನೇತಾರರು ಕಣ್ಮರೆಯಾದರು. ಬಹುತೇಕ ಸ್ವಾರ್ಥಕ್ಕಾಗಿ ಅಧಿಕಾರ ಲಾಲಸೆಯಿಂದ ರಾಜಕೀಯಕ್ಕೆ ಇಳಿದವರೇ ನಮ್ಮ ಇಂದಿನ ನೇತಾರರು. ಅಂದಿನವರು ರಾಜಕೀಯವಾಗಿ ನಮ್ಮನ್ನು ದಾಸ್ಯದಿಂದ ಬಿಡುಗಡೆ ಮಾಡಿದರು. ಇಂದಿನವರು, ಅದರಲ್ಲೂ ಮುಖ್ಯವಾಗಿ ನಗರವಾಸಿಗಳಾದ ಮಧ್ಯಮ ವರ್ಗದವರು ಮಾನಸಿಕ ದಾಸ್ಯವನ್ನು ತೆರೆದ ತೋಳುಗಳಿಂದ ಸ್ವಾಗತಿಸಿ ಇಂಗ್ಲಿಷ್ ಭಾಷೆಯ ಮಾನಸಿಕ ಗುಲಾಮರಾಗಿದ್ದಾರೆ. ನಮ್ಮ ಮೇಲೆ ಇಂಗ್ಲಿಷ್ ಭಾಷೆಯ ಪರಿಚಯವನ್ನು ಮಕ್ಕಳು ತಕ್ಕಮಟ್ಟಿಗೆ ಪಡೆಯಲೆಂದು ಪ್ರಾಥಮಿಕ ಹಂತದಲ್ಲಿ ಅದಕ್ಕೆ ಅವಕಾಶ ಕಲ್ಪಿಸಿ, ಆನಂತರ ಅದನ್ನು ಜಾರಿಗೆ ತಂದರು. ಇಂದಿನ ನಮ್ಮ ಆಂಗ್ಲ ಪ್ರೇಮಿಗಳಾದರೋ ತಮ್ಮ ಸ್ವಾಮಿನಿಷ್ಠೆ ಮೆರೆಸುವ ತವಕದಲ್ಲಿ ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್ ಮಾಧ್ಯಮವನ್ನು ತುರುಕಿದರು. ಆದರಿಂದ ತೃಪ್ತರಾಗದೆ ಶಿಶುವಿಹಾರ ಕಂದಗಳ ಮೇಲೂ ಅದನ್ನು ಹೇರಿದ್ದಾರೆ.

ವಿಪ್ರೊ ಕಂಪನಿ ಮತ್ತು ಎಜುಕೇಷನಲ್ ಇನಿಷಿಯೇಟಿವ್ಸ್‌ನವರು ನಡೆಸಿದ ಸಮೀಕ್ಷೆಯ ಫಲಿತಾಂಶ ನಮ್ಮ ರಾಜಕೀಯ ಧುರೀಣರ ಕಣ್ಣು ತೆರೆಸುವ ಸಂಭವ

ಕಡಿಮೆ. ಮಾತೃಭಾಷೆಯ ಮೇಲಿನ ಪ್ರೇಮದಿಂದ ಕನ್ನಡದ ಏಳಿಗೆಗಾಗಿ ದುಡಿಯುತ್ತಿರುವ ನಮ್ಮ ಮುಂದಾಳುಗಳಿಗೆ ಕಣ್ಣನ್ನು ಅದು ತೆರೆಸಿ ನಾವು ಮುಂದಿಡುತ್ತಿರುವ ಬೇಡಿಕೆಗಳಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕೆಂಬುದನ್ನು ಅದು ಅವರಿಗೆ ಮನವರಿಕೆ ಮಾಡಿಕೊಡುವುದೆಂಬುದು ಒಂದು ಅಭಿಲಾಷೆ.

– ಜೆ.ಆರ್. ಲಕ್ಷ್ಮಣರಾವ್ (ಪ್ರಜಾವಾಣಿ ಕೃಪೆ, ದಿ: ೨೫-೩-೨೦೦೭)



ನಾ. ಡಿಸೋಜ

೮೦ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ : ೭, ೮, ೯ ಜನವರಿ ೨೦೧೪ ಸ್ಥಳ : ಮಡಿಕೇರಿ

ಪರಿಚಯ

ನಾ. ಡಿಸೋಜ

ಶಿಕ್ಷಣ : 'ಪರಿಸರದ ನಾಶವೆಂದರೆ ಮಾನವ ಜನಾಂಗದ ವಿನಾಶ "ಪರಿಸರವನ್ನು ರಕ್ಷಿಸುವುದರಿಂದ ಮಾನವನ ಬಾಳು ಸಂತುಷ್ಟವಾಗಲು ಶಕ್ಯ" ಎಂಬ ಧ್ಯೇಯದ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿರುವ. ನಾ. ಡಿಸೋಜ ಅವರು ಎಫ್. ಪಿ. ಡಿಸೋಜ ರೂಪಿನಾ ದಂಪತಿಗಳ ಪುತ್ರರಾಗಿ ೬-೬-೧೯೩೭ರಲ್ಲಿ ಜನಿಸಿದರು ಬಾಲ್ಯದಿಂದಲೂ ಸಾಹಿತ್ಯಿಕ ವಾತಾವರಣದಲ್ಲಿ ಬೆಳೆದ ಅವರು ಸಾಗರದಲ್ಲಿ ಶಾಲಾ ಶಿಕ್ಷಣವನ್ನು ಶಿವಮೊಗ್ಗದಲ್ಲಿ ಕಾಲೇಜು ಶಿಕ್ಷಣವನ್ನು ಪಡೆದರು.

ಉದ್ಯೋಗ : ಲೋಕೋಪಯೋಗಿ ಇಲಾಖೆಯಲ್ಲಿ ವೃತ್ತಿಜೀವನ ಪ್ರಾರಂಭಿಸಿ ಶರಾವತಿ ಯೋಜನೆ, ಕಾರ್ಗಲ್, ಮಾಸ್ತಿಕಟ್ಟೆ, ತೀರ್ಥಹಳ್ಳಿ, ಸಾಗರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಸೇವೆ : ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ (೧೯೯೩-೯೫) ಕೊಂಕಣಿ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ (೧೯೯೫) ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಮನ್ನಣೆ : ೨೦೦೭ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದ ಅವರು ೧೯೯೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ೨೦೦೩ರಲ್ಲಿ ನಿರಂಜನ ಸಾಹಿತ್ಯ ಪ್ರಶಸ್ತಿ ೨೦೦೬ರಲ್ಲಿ ಆಳ್ವಾಸ್ ನುಡಿಸಿರಿ ಅಧ್ಯಕ್ಷ ಗೌರವ ೨೦೧೧ರಲ್ಲಿ ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ದೊರೆತಿದೆ. ಮಡಿಕೇರಿಯಲ್ಲಿ ನಡೆದ ೮೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ೨೦೧೪ರಲ್ಲಿ ದೊರೆತಿದೆ.

ಸಾಹಿತ್ಯ ಸೇವೆ : ಕಥೆ-ಕಾದಂಬರಿಕಾರರಾದ ನಾ.ಡಿಸೋಜ ಬರೆದ ಕೃತಿಗಳಲ್ಲಿ ಕೆಲವು ಪಠ್ಯಗಳಾಗಿವೆ. ಹಲವು ಕೃತಿಗಳು ಚಲನಚಿತ್ರಗಳಾಗಿವೆ

ಮುಳುಗಡೆ, ಬಣ್ಣ, ಪಾದರಿಯಾದ ಹುಡುಗ, ಸಿರಿಗಂಧ, ದ್ವೀಪ, ಏಸುಕ್ರಿಸ್ತ, ನೇತ್ರಾಣಿ ಗುಡ್ಡಕ್ಕೆ ಯಾತ್ರೆ, ಕುಂಜಾಲು ಕಣಿವೆಯ ಕೆಂಪು ಹೂ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ನಾ. ಡಿಸೋಜ

೮೦ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
೨೦೧೪

ಎಲ್ಲ ಅಭಿಮಾನೀ ಕನ್ನಡಿಗರೇ,

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ
ಎಲ್ಲಿ ನೆಲವನು ತಣಿಸಿ, ಜನಮನ ಹೊಲದ ಕಳೆ ಕಳೆ ಕಳೆವೊಳೋ
ಅಲ್ಲಿ ಆಕಡೆ ನೋಡಲಾ ಅಲ್ಲಿ ಕೊಡವರ ನಾಡಲಾ ಅಲ್ಲಿ ಕೊಡವರ ಬೀಡಲಾ.

ಸವಿದು ಮೆದ್ದರೋ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು
ಕವಣೆತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು
ಸವರಿ ಆನೆಯ ಸೊಂಡಿಲಲಿ ರಣಕೊಂಬನಾರ್ ಭೋರ್ಗರೆವರೋ
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ
ಅವರು ಸೋಲ್‌ಸಾವರಿಯರು ಅವರು ಕಡುಗಲಿಗಲಿವರು ಅವರು ಕೊಡಗಿನ ಹಿರಿಯರು

ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೋಲ್
ಹೆಮ್ಮೆ ಹಗೆಗಳ ಹೊಡೆದು ಹಿರಿಯರು ಹಸಿದು ಹಾರುವ ಬಗ್ಗದೋಲ್
ಬೊಮ್ಮ ಗಿರಿಯಿಂ ಪುಷ್ಪಗಿರಿ ಪರ್ಯಂತ ಬೆಳೆದೀ ದೇಶವು
ಧರ್ಮ ದಾನದ ಕಟ್ಟು ಕಟ್ಟಳೆ ರೀತಿ ನೀತಿಯ ಕೋಶವು
ನಮ್ಮ ಕೊಡಗಿದು ಜಮ್ಮದು ಜಮ್ಮ ಕೊಡಗಿದು ನಮ್ಮದು ನಮ್ಮೊಡಲ್ ಬಿಡಲಮ್ಮದು.

ಇದು ಅಗಸ್ತ್ಯನ ತಪದ ಮಣೆ ಕಾವೇರಿ ತಾಯ ತವರ್ಮನಿ
ಕನಸಸಿರಿಗುಯ್ಯಾಲೆ ತೂಗಿನಿಲ್ಲಿ ಚಂದಿರವರ್ಮನೆ
ಇದಕೋ ಚಂಗಾಳ್ವರಸರಾಡಂಬರವು ಕುಣಿದ ಶ್ರೀರಂಗವು
ಇದೋ ಇದೋ ಇಲ್ಲುರುಳ್ದ ಹಾಲೇರಿಯರ ಬಲಗಿರಿ ಶೃಂಗವು
ವಿಧಿಯ ಮಾಟದ ಕೊಡಗಿದು ಮೊದಲೆ ನಮ್ಮದು, ಕಡೆಗಿದು ಕದಲದೆಮ್ಮನು
ಬೆಡಗಿದು
ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ
ಸುಮ್ಮನಿತ್ತರೋ ದಟ್ಟಿ ಕುಪ್ಪಸ ? ಹಾಡು ಹುತ್ತರಿಗೇಳಿರಿ
ಚಿಮ್ಮಿ ಪಾತುರೆ ಕೋಲ ಹೊಯ್ಲಿಗೆ ಕುಣಿವ ಪದ ಹೊರ ಹೊಮ್ಮಲಿ
ಅಮ್ಮೆ ಹರಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ
ನೆಮ್ಮದಿಯನಿದು ತಾಳಲಿ ಅಮ್ಮೆಯಾ ಬಲ ತೋಳಲಿ ನಮ್ಮ ಕೊಡಗಿದು ಬಾಳಲಿ

ಪಂಜೆ ಮಂಗೇಶ ರಾವ್ (೧೮೭೪=೧೯೩೭)

ಪಂಜೆ ಮಂಗೇಶ ರಾಯರ ಈ ಕವಿತೆ ಚಿಕ್ಕಂದಿನಲ್ಲಿಯೇ ನನ್ನನ್ನ ಆಕರ್ಷಿಸಿತ್ತು. ಪಂಜೆಯವರು ಕೊಡಗಿನ ಈ ಶ್ರೀಮಂತಿಕೆಯನ್ನ, ಪರಿಸರದ ವೈಭವವನ್ನ, ಕೊಡಗರ ಧೀರತನವನ್ನ ಸೆರೆ ಹಿಡಿದದ್ದು ಕೇವಲ ಭಾಷೆಯ ಮೂಲಕ. ಇಂತಹಾ ಒಂದು ಘನತೆ ನಮ್ಮ ಭಾಷೆಗೆ ಇದೆ ಅನ್ನುವುದೇ ಒಂದು ವಿಶೇಷತೆ.

ಓರ್ವ ಮಹಾನ್ ಕಲಾವಿದ ಕೈಲಿದ್ದ ಕಲಾ ಕುಂಚವನ್ನ ವಿವಿಧ ಬಣ್ಣಗಳಲ್ಲಿ ಅದ್ದಿ ವಿಸ್ತಾರವಾದ ಕ್ಯಾನವಾಸಿನ ಮೇಲೆ ಒಂದು ಭವ್ಯವಾದ ಚಿತ್ರವನ್ನ ರಚಿಸಿದ ಹಾಗೆ ಪಂಜೆಯವರು ಈ ಪದ್ಯದಲ್ಲಿ ಕೊಡಗನ್ನ ಬಣ್ಣಿಸಿದ್ದಾರೆ. ಇದು ನನ್ನ ಆಕರ್ಷಣೆಗೆ ಕಾರಣ. ಆದರೆ ಈ ಸುಂದರ ಭವ್ಯ ಪ್ರದೇಶವನ್ನ ನೋಡ ಬೇಕು ಅನ್ನುವ ನನ್ನ ಕನಸು ನನಸಾದದ್ದು ತುಸು ತಡವಾಗಿ. ನನ್ನ ಮಗಳ ಮದುವೆಯ ನಂತರ ನನ್ನ ಮಗಳು ಅಳಿಯನ ಜೊತೆಯಲ್ಲಿ ನಾನು ಕೊಡಗಿಗೆ ಬಂದೆ. ಇಲ್ಲೆಲ್ಲ ಸುತ್ತಾಡಿದೆ. ಸಾಲಲಿಲ್ಲ. ಮತ್ತೊಮ್ಮೆ ನನ್ನ ಹೆಂಡತಿ ಜೊತೆಗೆ ಕೊಡಗಿಗೆ ಬಂದೆ. ತಲಕಾವೇರಿ, ಭಾಗಮಂಡಲದಿಂದ ರಾಜಾ ಸೀಟಿನವರೆಗೆ ಕೊಡಗನ್ನ ಕಂಡೆ.

ನಾನು ಮಲೆನಾಡಿನವ. ನಮ್ಮಲ್ಲಿ ಗುಡ್ಡಗಳು ವಿಸ್ತಾರ, ಕಣಿವೆಗಳು ಆಳ. ಆದರೆ ಕೊಡಗಿನ ಬೆಟ್ಟಗಳು ಹತ್ತಿರ ಹತ್ತಿರ ಒಂದನ್ನೊಂದು ಒತ್ತಿ ನಿಂತು ಕೊಂಡವು. ನಮ್ಮ ಮಲೆನಾಡಿನ ಪರಿಸರಕ್ಕಿಂತ ಭಿನ್ನವಾದ ಪರಿಸರವನ್ನ ನಾನಿಲ್ಲಿ ಕಂಡೆ. ಇದಕ್ಕೆ ಕಾರಣ ಪಶ್ಚಿಮ ಘಟ್ಟದ ಮುಖ್ಯ ಶ್ರೇಣಿ ಪ್ರಾರಂಭವಾಗುವುದೇ ಕೊಡಗಿನಿಂದ. ಕೊಡಗನ್ನ ಕರ್ನಾಟಕದ ಸ್ವಿಜರಲ್ಯಾಂಡ ಎಂದು ಕರೆಯುತ್ತಾರೆ. ನಾನು ನನ್ನ ನಾಡನ್ನ ಹೊಗಳಲಿಕ್ಕೆ ಬೇರೊಂದು ದೇಶವನ್ನ ಎರವಲು ಪಡೆಯಲು ಹೋಗುವುದಿಲ್ಲ. ಕೊಡಗು ಕೊಡಗೆ. ಸಮುದ್ರಕ್ಕೆ ಸುಮುದ್ರವೇ ಉಪಮೆಯಂತೆ. ಹಾಗೆಯೇ ಕೊಡಗಿಗೆ ಕೊಡಗೇ ಉಪಮೆ. ಇಲ್ಲಿಯ ಜನಜೀವನ, ಬದುಕಿನ ಕ್ರಮ, ಶ್ರೀಮಂತಿಕೆ, ಭಾಷೆ, ವೀರಯೋಧರನ್ನ ಸದಾ ದೇಶಕ್ಕೆ ಮೀಸಲಿಡುವ ಪರಂಪರೆ, ಕ್ರೀಡಾ ಪಟುಗಳ ಜನ್ಮ ಭೂಮಿ ಇದು. ಇದೆಲ್ಲವೂ ನಾವು ಕನ್ನಡಿಗರು ಹೆಮ್ಮೆ ಪಡುವಂತಹದು. ಇದೀಗ ಮೂರನೇ ಬಾರಿ ನಾನು ಕೊಡಗಿಗೆ ಬಂದಿದ್ದೇನೆ. ಬಂದಿದ್ದೇನೆ ಅನ್ನುವುದಕ್ಕಿಂತ ಕನ್ನಡ ಜನ ನನ್ನನ್ನ ಇಲ್ಲಿಗೆ ಬರಮಾಡಿ ಕೊಂಡಿದ್ದಾರೆ, ಪ್ರೀತಿಯಿಂದ, ಮಮತೆಯಿಂದ, ವಿಶ್ವಾಸದಿಂದ, ಆದರದಿಂದ, ಆತ್ಮೀಯತೆಯಿಂದ. ಕಳೆದ ೫೦ ವರ್ಷಗಳ ನನ್ನ ಕನ್ನಡ ಸೇವೆಯನ್ನ ಗುರುತಿಸಿ ನನಗೆ ೮೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನ ದಯಪಾಲಿಸಿ ನನ್ನನ್ನ ಇಲ್ಲಿಬರಮಾಡಿಕೊಂಡಿದ್ದಾರೆ.

ಕೊಡಗು ಐತಿಹಾಸಿಕವಾಗಿ, ಜಾನಪದೀಯವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ನೈಸರ್ಗಿಕವಾಗಿ ಶ್ರೀಮಂತವಾದ ಪ್ರದೇಶ. ದೇಶದ ರಕ್ಷಣೆಯ ವಿಷಯಕ್ಕೆ ಬಂದಾಗ ಸದಾ ಮುಂಚೂಣಿಯಲ್ಲಿ ಇರುವ ಪ್ರದೇಶ ಇದು. ನಮ್ಮ ಸೇನಾ ಹಿನ್ನೆಲೆಯಲ್ಲಿ ಪ್ರಭಾವಶಾಲಿಯಾಗಿ ನಿಂತ ಓರ್ವ ಯೋಧ ಜನರಲ್ ಕಾರಿಯಪ್ಪ ಕುರಿತು ಮಕ್ಕಳಿಗಾಗಿ ನಾನು ಒಂದು ಪುಸ್ತಕವನ್ನ ಬರೆದಿದ್ದೇನೆ ಕೂಡ. ಕನ್ನಡ,

ಮಲೆಯಾಳಿ, ತಮಿಳಿನಿಂದ ಪ್ರಭಾವಿತವಾದ ಕೊಡಗು ಭಾಷೆ ಮೂಲದಲ್ಲಿ ಅವಲಂಬಿಸಿ ಕೊಂಡಿರುವುದು ಕನ್ನಡ ಶಬ್ದಗಳನ್ನೇ ಎಂದು ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. ಕೊಡಗಿನ ಪ್ರಖ್ಯಾತ ಕವಿಗಳೆಂದರೆ ಅಪ್ಪನೆರವಂಡಪ್ಪುಚ್ಚ ಕವಿ, ನಡಕೇರಿಯಿಂಡ ಚಿಣ್ಣಪ್ಪ ಕವಿ. ಕನ್ನಡ ಸಾಹಿತ್ಯಕ್ಕೆ ಅಪರೂಪದ ಸಣ್ಣ ಕತೆ ನೀಡಿದ ಕೊಡಗಿನ ಗೌರಮ್ಮನವರನ್ನ ಎಂದೂ ಮರೆಯಲಾಗದು. ಅಂತೆಯೇ ಕೊಡಗಿನ ಪ್ರಖ್ಯಾತ ಲೇಖಕರಾದ ಐ. ಮಾ. ಮುತ್ತಣ್ಣ, ಬಿ. ಗಣಪತಿ, ಎಸ್. ಚಿನ್ನಪ್ಪ ಮೊದಲಾದವರನ್ನು ಸಹ. ಕ್ರಿಸ್ತಶಕ ಎರಡನೇ ಶತಮಾನದಿಂದ ಪ್ರಾರಂಭವಾಗುವ ಕೊಡಗಿನ ಇತಿಹಾಸ ರೋಮಾಂಚನವನ್ನ ಉಂಟು ಮಾಡುವಂತಹದು. ಕರ್ನಾಟಕದ ಪ್ರಥಮ ದೊರೆಯೆಂದೇ ಪ್ರಖ್ಯಾತನಾದ ಕದಂಬ ಮಯೂರ ವರ್ಮನ ವಂಶದವನಾದ ಚಂದ್ರ ವರ್ಮ ಕೊಡಗಿನ ಮೂಲ ಪುರುಷ. ಗಂಗ, ಕದಂಬ, ಚೋಳ, ಕೊಂಗಾಳ್ವರು, ಚೆಂಗಾಳ್ವರು, ಹೊಯ್ಸಳ, ವಿಜಯನಗರದ ಅರಸರು, ಇಲ್ಲಿ ರಾಜ್ಯವನ್ನ ಆಳಿದ್ದಾರೆ. ದೂರದ ನಮ್ಮ ಇಕ್ಕೇರಿಯ ಅರಸರು ಕೊಡಗರ ಹೆಣ್ಣನ್ನ ಮಲೆನಾಡಿಗೆ ಕೊಂಡೊಯ್ದದ್ದು ನಮಗೆ ಮಲೆನಾಡಿಗರಿಗೆ ಹೆಮ್ಮೆಯ ವಿಷಯ. ಇದೆಲ್ಲದರ ಕುರುಹಾಗಿ ಹಿಂದಿನ ಅವಶೇಷಗಳು, ದೇವಾಲಯಗಳು ಇಲ್ಲಿವೆ. ಈ ದೊರೆಗಳ ಕಾಲದ ಶಾಸನಗಳು ದೊರೆತಿವೆ. ಇಂತಹಾ ಒಂದು ಮಣ್ಣಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅರ್ಥಪೂರ್ಣ ಎಂದು ನಾನು ಬಗೆಯುತ್ತೇನೆ.

ನನ್ನ ಬಗ್ಗೆ ಎರಡು ಮಾತು

ನನ್ನ ಮನೆ ಮಾತು ಕೊಂಕಣಿ. ಗೋವೆಯಲ್ಲಿ ಧಾರ್ಮಿಕ ವಿಚಾರಣೆ ಅನ್ನುವಂತಹ ತುಸು ಕ್ರೂರವಾದ ಒಂದು ಪ್ರಕ್ರಿಯೆ ನಡೆದಾಗ ಅದನ್ನ ಎದುರಿಸಲಾರದೆ ಕೊಂಕಣಿ ಜನ ಕರ್ನಾಟಕಕ್ಕೆ ಓಡಿ ಬಂದಾಗ ಇಲ್ಲಿಯ ಇಕ್ಕೇರಿ ದೊರೆಗಳು ನಮಗೆ ಆಶ್ರಯ ನೀಡಿದರು. ಅಲ್ಲಿಂದ ವಿವಿಧ ವೃತ್ತಿ ಧರ್ಮಗಳನ್ನ ನಂಬಿದ ಕೊಂಕಣಿ ಜನ ಇಲ್ಲಿ ಇಲ್ಲಿಯವರೇ ಆಗಿ ಬದುಕಿದ್ದಾರೆ. ಅವರ ಭಾಷೆ, ಸಂಸ್ಕೃತಿ, ಜೀವನ ವಿಧಾನ ತುಸು ಬೇರೆ. ಆದರೂ ಕನ್ನಡ ನಾಡಿನವರೇ ಆಗಿ ಇಂದು ಉಳಿದಿದ್ದಾರೆ. ಉದ್ಯಮಿಗಳು, ಬ್ಯಾಂಕರುಗಳು, ಲೇಖಕರು, ಕಲಾವಿದರು ಕೊಂಕಣಿಯನ್ನ ಮಾತನಾಡುತ್ತಲೇ ಕನ್ನಡದ ಸೇವೆ ಮಾಡಿದ್ದಾರೆ. ಕನ್ನಡದ ಪ್ರಖ್ಯಾತ ಚುಟುಕು ಕವಿ ದಿನಕರ ದೇಸಾಯಿ ಹೇಳಿದ್ದಾರೆ–

ಕನ್ನಡದ ಜೊತೆಗೆ ಕೊಂಕಣಿ ಮಾತನಾಡಿ
ಒಂದುಗೂಡಿದವು ಎರಡು ಜೀವನಾಡಿ
ಎರಡು ಪಕಳೆಯ ಹೂವು ಹಣ್ಣಾಗಿ ಕಾಯಿ
ಕಾಯಿ ಹಣ್ಣಾದೊಡನೆ ಜೀವನ ಮಿಠಾಯಿ.

ಹೀಗೆ ಕೊಂಕಣಿಯ ಜೊತೆಗೆ ಕನ್ನಡ ಮಾತನಾಡಿ ತಮ್ಮ ಜೀವನವನ್ನ ಮಿಠಾಯಿ ಮಾಡಿ ಕೊಂಡವರು ಬಹಳ ಜನ ಇದ್ದಾರೆ. ಗೋವಿಂದ ಪೈಗಳು, ಗೌರೀಶ ಕಾಯ್ಕಿಣಿ, ಗೋಪಾಲ ಕೃಷ್ಣ ಪೈ, ಸಂತೋಷ ಕುಮಾರ ಗುಲ್ವಾಡಿ,

ಯಶವಂತ ಚಿತ್ತಾಲ, ಜಯಂತ ಕಾಯ್ಕಿಣಿ, ಇನ್ನೂ ಹಲವರು ಕೊಂಕಣಿ ಮನೋಭಾವದ ಕನ್ನಡಿಗರು. ಕನ್ನಡದ ಸೇವೆ ಮಾಡಿದವರು. ಕೊಂಕಣಿ ಬಹಳ ಪುರಾತನವಾದ ಭಾಷೆ, ಬಹಳ ಅಪರೂಪದ ಜಾನಪದ ಹಿನ್ನೆಲೆಯನ್ನ ಉಳ್ಳಂತಹದು, ಇದರ ಪ್ರಯೋಜನವನ್ನ ಈ ಕೊಂಕಣಿ ಜನ ಕನ್ನಡಕ್ಕೆ ಧಾರೆ ಎರೆದು ಕನ್ನಡವನ್ನ ಶ್ರೀಮಂತ ಗೊಳಿಸಿದ್ದಾರೆ. ನಾನು ಕೂಡ ನನ್ನ ಅಮ್ಮ ನನಗೆ ಹೇಳುತ್ತಿದ್ದ ಕೊಂಕಣಿಯ ಅದ್ಭುತ ಕತೆಗಳನ್ನ ಕೇಳಿ ಬೆಳೆದವನು. ಕೊಂಕಣಿ ಹಾಡು, ಗಾದೆ, ಒಗಟು ನನಗೆ ಪ್ರಿಯವಾಗಿತ್ತು. ಜೊತೆ ಜೊತೆಗೆ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ನನ್ನ ತಂದೆ ನನಗೆ ಕನ್ನಡದ ಕಡೆಗೆ ಕರೆದು ಕೊಂಡು ಹೋದರು. ಮಕ್ಕಳಿಗೆ ಕಲಿಸಲೆಂದೇ ಅವರು ಬರೆದು ಇರಿಸಿ ಕೊಂಡ ಪುಸ್ತಕದ ಒಂದು ಕವಿತೆ ನನ್ನನ್ನ ಹೊಸದೊಂದು ಪ್ರಪಂಚಕ್ಕೆ ಕರೆದೊಯ್ದಿತು.

ತೆಂಗಿನ ಮರಗಳು ಕುಳ್ಳಾಗಿದ್ದು
ಕಾಯ್ಗಳು ಕೈಗೆ ಸಿಗುವಂತಿದ್ದು
ಕೊಬ್ಬರಿ ಎಲ್ಲ ಮೇಲ್ಗಡೆ ಇರಲು
ಎಳನೀರಿನ ಮುಚ್ಚಳ ತೆಗೆದಿರಲು
ಎಷ್ಟೋ ಚೆನ್ನಾಗಿರುತ್ತಿತ್ತು ಇನ್ನೂ ಚೆನ್ನಾಗಿರುತ್ತಿತ್ತು

ಅನ್ನುವ ಈ ಕವಿತೆ ಕನ್ನಡದ ಎಳನೀರಿನ ಪರಿಚಯ ನನಗೆ ಮಾಡಿ ಕೊಟ್ಟಿತು. ನಾನು ಚಿಣ್ಣ ವಯಸ್ಸಿನಲ್ಲಿ ಕನ್ನಡದ ಮೋಹಕ್ಕೆ ಒಳಗಾದೆ. ಅಂದು ನಾನು ಬೆಳೆಸಿ ಕೊಂಡ ಈ ಮೋಹ ಇಂದು ನನ್ನನ್ನ ಇಲ್ಲಿಗೆ ಕರೆತಂದು ನಿಲ್ಲಿಸಿದೆ. ಆದರೆ ಇದು ನಾನು ಒಂಟಿಯಾಗಿ ಮಾಡಿದ ಪಯಣವಲ್ಲ. ನನ್ನ ಬರವಣಿಗೆಗೆ ನನ್ನ ಮಿತ್ರರು, ಪತ್ರಿಕಾ ಸ್ನೇಹಿತರು ಸಾಥ್ ನೀಡಿದ್ದಾರೆ. ನನ್ನನ್ನ ಹುರಿದುಂಬಿಸಿದ್ದಾರೆ, ನಾನು ಬರೆದುದನ್ನ ಮೆಚ್ಚಿ ಕೊಂಡಿದ್ದಾರೆ. ನನ್ನ ನೋವಿಗೆ ಮಿಡಿದಿದ್ದಾರೆ. ಅವರೆಲ್ಲರನ್ನ ಸ್ಮರಿಸುವುದು ನನ್ನ ಕರ್ತವ್ಯ. ಇಂತಹ ಒಂದು ಸ್ಥಾನವನ್ನ ನನಗೆ ದೊರಕಿಸಿ ಕೊಡಲು ಕಾರಣರಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಮತ್ತು ಎಲ್ಲ ಪದಾಧಿಕಾರಿಗಳಿಗೆ, ಜಿಲ್ಲಾ ಅಧ್ಯಕ್ಷರುಗಳಿಗೆ, ಈ ಕಾರ್ಯಕ್ಕೆ ಕೈಜೋಡಿಸಿದ ಎಲ್ಲರಿಗೆ, ನನಗೆ ಈ ಸ್ಥಾನ ಲಭ್ಯವಾಗಿದೆ ಅನ್ನುವುದನ್ನ ಕೇಳಿ ಸಂಭ್ರಮಿಸಿದ ಸಮಸ್ತ ಕನ್ನಡ ಕುಲ ಬಾಂಧವರಿಗೆ ನಾನು ನನ್ನ ಕೃತಜ್ಞತೆಯನ್ನ ಹೇಳುತ್ತಿದ್ದೇನೆ. ನೀವು ತೋರಿದ ಈ ಪ್ರೀತಿ ಕನ್ನಡ ಭಾಷೆಯ ಬಗ್ಗೆ ನೀವು ವ್ಯಕ್ತ ಪಡಿಸಿದ ಪ್ರೀತಿ ಎಂದು ತಿಳಿಯುತ್ತೇನೆ.

ಸಾಹಿತ್ಯ ಮತ್ತು ಕಲೆ

ನಮ್ಮ ಜನ ಯಾವತ್ತೂ ಸಾಹಿತ್ಯಕ್ಕೆ ಹೆಚ್ಚಿನ ಸ್ಥಾನಮಾನವನ್ನ ಕೊಡುತ್ತ ಬಂದಿದ್ದಾರೆ. ಸಾಹಿತ್ಯ ಸಮ್ಮೇಳನ ಅಂದರೆ ಇಡೀ ನಾಡಿನ ಉದ್ದಕ್ಕೂ ಒಂದು ಸಂಚಲನ ಕಾಣಿಸುತ್ತದೆ. ಸಾಹಿತ್ಯ ಸಮ್ಮೇಳನಗಳನ್ನ ಸಂತೆ ಜಾತ್ರೆ ಎಂದು ಕೆಲವರು ಕರೆದರೂ ಅದಕ್ಕೆ ಬರುವ ಜನ ಕಡಿಮೆ ಆಗಿಲ್ಲ. ಸಮ್ಮೇಳನದ ಗೋಷ್ಠಿಗಳಲ್ಲಿ ಜನ ಭಾಗವಹಿಸುತ್ತಾರೆ, ಕವಿ ಗೋಷ್ಠಿಯನ್ನ ಕೇಳುತ್ತಾರೆ. ಪುಸ್ತಕ ಪ್ರದರ್ಶನದ ಪ್ರಯೋಜನ ಪಡೆದು ಕೊಳ್ಳುತ್ತಾರೆ.ಸಮ್ಮೇಳನ ದಿನದಿಂದ ದಿನಕ್ಕೆ ತನ್ನ ಜನಪ್ರಿಯತೆಯನ್ನ ಹೆಚ್ಚು

ಮಾಡಿ ಕೊಳ್ಳುತ್ತದೆ. ಈ ಸಮ್ಮೇಳನವನ್ನ ಬೇರೊಂದು ರೀತಿಯಲ್ಲಿ ನಡೆಸಬೇಕು ಅನ್ನುವ ಮಾತು ಇದೆಯಾದರೂ ಅದಕ್ಕೊಂದು ಪರ್ಯಾಯ ರೂಪ ಕೊಡಲು ಯಾರಿಂದಲೂ ಆಗಿಲ್ಲ. ಇದಕ್ಕೆ ಕಾರಣ, ಮೊದಲನೆಯದು ಸಾಹಿತ್ಯ ಬದುಕನ್ನ ಪ್ರತಿ ಬಿಂಬಿಸುತ್ತದೆ ಅನ್ನುವುದು; ಎರಡನೆಯದು ಅದೊಂದು ಭಾಷೆಯನ್ನ ಅವಲಂಬಿಸಿ ಕೊಂಡಿದೆ ಅನ್ನುವುದು. ಈ ಬದುಕು ನಮಗೆ ಬಹಳ ಪ್ರಿಯವಾದದ್ದು. ನಮ್ಮ ಸುಖ, ನೋವು, ಕಷ್ಟ, ತಾಪತ್ರಯಗಳು ಅದೆಷ್ಟೇ ಇರಲಿ ಬದುಕಿಗೆ ವಿಮುಖವಾಗಿ ಹೋಗಲಿಕ್ಕೆ ನಾವು ಬಯಸುವುದಿಲ್ಲ. ನಮ್ಮಲ್ಲಿ ಬದುಕನ್ನ ಧಿಕ್ಕರಿಸಿ ಸನ್ಯಾಸಿಗಳಾಗುವವರು ಕೆಲವರೇ. ಆದರೆ ಉಳಿದವರೆಲ್ಲ ಪರಿಸ್ಥಿತಿ ಏನೇ ಬರಲಿ ಬದುಕ ಬೇಕು ಅನ್ನುವವರು. ಆತ್ಮಹತ್ಯೆಗೆ ನಮ್ಮಲ್ಲಿ ಗೌರವ ಇಲ್ಲ. ಇರಬೇಕು ಇದ್ದು ಜಯಿಸ ಬೇಕು ಅನ್ನುವುದು ನಮ್ಮ ಧ್ಯೇಯ. “ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿ ಕೊಳ್ಳಬೇಡಿ ಹುಚ್ಚಪ್ಪಗಳಿರಾ” ಎಂದು ನಮ್ಮ ದಾಸರು ಹೇಳಿದ್ದಾರೆ. ಇಂತಹ ಬದುಕಿನ ಬಗ್ಗೆ ನಮಗೆ ನೇರವಾಗಿ ತಿಳಿಸಿ ಕೊಡುವುದು ಸಾಹಿತ್ಯ.

ನಮ್ಮಲ್ಲಿ ಸದಾ ಮತ್ತೊಬ್ಬರು ಬದುಕನ್ನ ಹೇಗೆ ಎದುರಿಸಿದರು ಅನ್ನುವುದರ ಬಗ್ಗೆ ಕುತೂಹಲ ಇರುತ್ತದೆ. ಈ ಕುತೂಹಲವನ್ನ ತಣಿಸೋದು ಸಾಹಿತ್ಯ. ಈ ಕೆಲಸವನ್ನ ಬೇರೆ ಕಲಾ ಮಾಧ್ಯಮಗಳು ಮಾಡಿದರೂ ಕೂಡ ಒಂದು ಕ್ರಮದಲ್ಲಿ ಒಂದು ಮಾದರಿಯಲ್ಲಿ ಸರಳವಾಗಿ ಈ ಕೆಲಸ ಮಾಡುವುದು ಸಾಹಿತ್ಯ. ಇದಕ್ಕಾಗಿ ಸಾಹಿತ್ಯದ ಬಗ್ಗೆ ನಮಗೆ ಗೌರವ. ಇದು ಸಾಹಿತ್ಯವನ್ನ ನಾವು ಗೌರವಿಸಲಿಕ್ಕೆ ಒಂದು ಕಾರಣ ಅಂತ ನಾನು ತಿಳಿದಿದ್ದೇನೆ. ಅದು ಕತೆ ಕಾದಂಬರಿ ಕಾವ್ಯ ನಾಟಕ ಬೇರೆ ಯಾವುದೇ ಸಾಹಿತ್ಯ ಪ್ರಕಾರವೇ ಇರಲಿ ಅದು ಬದುಕನ್ನ ಕುರಿತೇ ಇರುತ್ತದೆ. ನಾವು ಬದುಕುವ ಧಾವಂತದಲ್ಲಿ ಬದುಕುತ್ತ ಹೋಗಿ ಬಿಡುತ್ತೇವೆ. ನಾವೇನು ತಪ್ಪು ಮಾಡಿದ್ದೇವೆ ಅನ್ನುವುದು ನಮಗೆ ತಿಳಿಯದೇ ಹೋಗಿ ಬಿಡುತ್ತದೆ. ಅಧಿಕಾರವನ್ನ ಹಣವನ್ನ ಹೆಣ್ಣನ್ನ ಭೋಗಿಸುವಾಗ ನಮ್ಮ ವರ್ತನೆ ಏನಾಗಿತ್ತು ಅನ್ನುವುದು ನಮಗೆ ತಿಳಿಯುವುದಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಬದುಕಿನ ಪುನರಾವಲೋಕನ ಮಾಡಲು ಸಾಹಿತ್ಯ ನಮಗೆ ನೆರವು ನೀಡುತ್ತದೆ. ಮತ್ತೊಬ್ಬರ ಕತೆಯನ್ನ, ಬದುಕನ್ನ ನಮ್ಮ ಮುಂದೆ ತೆರೆದು ಇಡುವುದರ ಮೂಲಕ ಸಾಹಿತ್ಯ ನಮ್ಮ ಬದುಕನ್ನ ನಾವೇ ಪರಿಶೀಲಿಸಿ ಕೊಳ್ಳುವ ಅವಕಾಶವನ್ನ ಕಲ್ಪಿಸಿ ಕೊಡುತ್ತದೆ. ಸಾಹಿತ್ಯವನ್ನ ನಾವು ಮೆಚ್ಚಿ ಕೊಳ್ಳಲು ಕೂಡ ಇದೇ ಕಾರಣ. ಬದುಕಿನ ಪುನರಾವಲೋಕನಕ್ಕೆ ಅವಕಾಶ ಮಾಡಿ ಕೊಡುವುದೇ ಸಾಹಿತ್ಯದ ವಿಶೇಷತೆ. ಇದನ್ನ ನಾವೆಲ್ಲ ಗೌರವಿಸುವುದು ಇದೇ ಕಾರಣಕ್ಕೆ.

ಇನ್ನು ಎರಡನೆಯದಾಗಿ ಸಾಹಿತ್ಯ ತನ್ನ ಕೆಲಸಕ್ಕೆ ಭಾಷೆಯನ್ನ ಅವಲಂಬಿಸಿ ಕೊಂಡಿರುತ್ತದೆ. ಕಲಾವಿದ ಬಣ್ಣವನ್ನ, ಸಂಗೀತಗಾರ ರಾಗ ಆಲಾಪನೆಯನ್ನ, ನಟ ಅಭಿನಯವನ್ನ, ನರ್ತಕ ಮುದ್ರೆಗಳನ್ನ ಬಳಸಿದರೆ ಸಾಹಿತಿ ಕೇವಲ ಭಾಷೆಯನ್ನ. ಹೌದು ಕೇವಲ ಭಾಷೆಯನ್ನ ಬಳಸಿ ಕೊಳ್ಳುತ್ತಾನೆ. ಈ ಭಾಷೆ ಕೆಲ ಶಬ್ದಗಳ ಜಂಜಡ

ಅಲ್ಲ. ಗೊಂದಲ ಅಲ್ಲ. ಭಾಷೆಗೆ ಒಂದು ಜಾನಪದ ಶ್ರೀಮಂತಿಕೆ, ಭವ್ಯ ಇತಿಹಾಸ, ಒಂದು ಪರಂಪರೆ ಒಂದು ಜೀವನ ವಿಧಾನ ಇರುತ್ತೆ. ಇಂತಹ ಭಾಷೆಯನ್ನ ಲೇಖಕ ತನ್ನ ಸಂವಹನಕ್ಕೆ ಬಳಸಿ ಕೊಳ್ಳುತ್ತಾನೆ. ಭಾಷೆಯ ಮೂಲಕವೇ ಲೇಖಕ ಎಲ್ಲವನ್ನ ತಂದು ಓದುಗನಿಗೆ ತಲುಪಿಸುತ್ತಾನೆ. ಒಂದು ಪುಸ್ತಕವನ್ನ ಓದುತ್ತ ಓದುಗ ಬೆರಗಾಗುತ್ತಾನೆ, ಕಂಬನಿ ಮಿಡಿಯುತ್ತಾನೆ, ಸಂತೋಷ ಪಡುತ್ತಾನೆ. ಇದು ಪುಸ್ತಕ ಮಾಡುವ ಪರಿಣಾಮ ಎಂದು ನಾನು ತಿಳಿಯುತ್ತೇನೆ. ಅಲೆಕ್ಸಾಂಡರನ ಆಸ್ಥಾನಕ್ಕೆ ಬಂದ ಓರ್ವ ಕಲಾವಿದ ಕಲಾತ್ಮಕವಾಗಿ ಕೆತ್ತಿದ ಒಂದು ಕರಂಡಕವನ್ನ ದೊರೆಗೆ ಕಾಣಿಕೆಯಾಗಿ ನೀಡಿದ. ಅದರಲ್ಲಿ ಏನನ್ನ ಇಡುವುದು ಅನ್ನುವ ಪ್ರಶ್ನೆ ಬಂದಿತು. ಜನ ಒಂದೊಂದು ಸಲಹೆ ನೀಡಿದರು. ದೊರೆಯ ಪಟ್ಟದ ಕತ್ತಿ, ಉಂಗುರ, ಕಿರೀಟ ಇಡಿ ಎಂದರು ಜನ. ಆದರೆ ಕೊನೆಗೆ ಅಲೆಕ್ಸಾಂಡರ್ ನುಡಿದ "ಈ ಕಲಾತ್ಮಕವಾದ ಕರಂಡಕದಲ್ಲಿ ಏನನ್ನಾದರೂ ಇಡಬೇಕು ಅಂದರೆ ಅದು ಗ್ರೀಕ್ ಭಾಷೆಯ ಶ್ರೇಷ್ಠ ಕೃತಿಗಳಾದ ಒಡೆಸ್ಸಿ ಹಾಗೂ ಎಲಿಯಡ್ಡನ್ನ ಇಡಬೇಕು" ಎಂದ ಆತ. ಜನ ಆಗ ಅದನ್ನ ಒಪ್ಪಿಕೊಂಡರು. ಅಂದರೆ ಪುಸ್ತಕ ಅನ್ನುವ ವಸ್ತು ಶ್ರೇಷ್ಠವಾದದ್ದು. ಇಂತಹ ಪುಸ್ತಕದ ಮೂಲಕ ಭಾಷೆ ಮಾಡುವ ಮ್ಯಾಜಿಕ್ ಬಹಳ ದೊಡ್ಡದು ಎಂದು ನಾನು ನಂಬುತ್ತೇನೆ.

ಲೇಖಕ ಇಂತಹ ಭಾಷೆ ಉಳಿಯ ಬೇಕು ಎಂದು ಬಯಸುವುದು ಇದಕ್ಕಾಗಿ. ಆತ ಹೋರಾಟ ಮಾಡುವುದು, ಭಾಷೆಯ ಶಕ್ತಿ ಅವನಿಗೆ ಗೊತ್ತಿದೆ ಅನ್ನುವ ಕಾರಣಕ್ಕೆ. ಸರಸ್ವತಿಯನ್ನ "ಅಕ್ಷರ ಮಾಲಾ ಪುಸ್ತಕ ಧಾರಿಣಿ" ಎಂದು ಒಪ್ಪಿಕೊಂಡವರು ನಾವು. ಶೃಂಗೇರಿಯ ಶಾರದೆಯ ಕೈಯಲ್ಲಿ ಪುಸ್ತಕವಿದೆ. ಒಂದು ಕಾಲದಲ್ಲಿ ಜ್ಞಾನ ಅನ್ನುವುದು ಪುಸ್ತಕದ ಮೂಲಕವೇ ನಮಗೆ ಲಭ್ಯವಾಗುತ್ತಿತ್ತು. ಪುಸ್ತಕ ಭಂಡಾರಗಳ ಅಭಿವೃದ್ಧಿಯ ಮೂಲಕವೇ ಹೊಸ ಸಾಧನೆಗಳನ್ನ ಮಾಡಿದ ದೇಶಗಳೂ ಇವೆ. ಆದರೆ ಇಂದು ಪುಸ್ತಕದ ಜಾಗದಲ್ಲಿ ಕಂಪ್ಯೂಟರ್, ಲ್ಯಾಪಟಾಪ್, ಮೊಬೈಲ, ಟ್ಯಾಬ್ ಇಂಟರ್ ನೆಟ್ ಬಂದಿದೆ. ಒಂದು ಕಾಲದಲ್ಲಿ ಪುಸ್ತಕಗಳನ್ನ ಓದಿ ಅಲ್ಲಿಯ ಆಗುಹೋಗುಗಳ ಕುರಿತು ಮಾತನಾಡುತ್ತಿದ್ದ ನಮ್ಮ ಓದುಗ ವರ್ಗ ಇಂದು ಈ ವಿದ್ಯುನ್ಮಾನ ಮಾಧ್ಯಮಗಳ ಕೈಯಲ್ಲಿ ಸಿಕ್ಕಿ ಬಿದ್ದಿದೆ. ಈ ಯಂತ್ರದ ಹಿಂದೆ ಈ ಆಧುನಿಕ ಯಂತ್ರವನ್ನ ಎಲ್ಲೆಲ್ಲೂ ಜನಪ್ರಿಯಗೊಳಿಸಿ ಅದರ ಮೂಲಕ ಇಡೀ ವಿಶ್ವವನ್ನ ಆಳಬೇಕು ಅನ್ನುವ ಅಭಿಲಾಷೆ ಇರುವ ಒಂದು ಕುತಂತ್ರ ಮನಸ್ಸು ಇದೆಯೇನೋ ಎಂದು ಕೂಡ ನನಗೆ ಅನಿಸುತ್ತಿದೆ. ಈ ಯಂತ್ರಗಳು ಮಾನವೀಯ ಗುಣಗಳನ್ನ ಕೊಲ್ಲುತ್ತ, ಮಾನವೀಯತೆಯಿಂದ ನಮ್ಮನ್ನ ದೂರ ಸೆಳೆದೊಯ್ಯುತ್ತ ಯಂತ್ರದ ಗುಲಾಮರನ್ನಾಗಿ ನಮ್ಮನ್ನ ಪರಿವರ್ತಿಸಿ ಇಡೀ ವಿಶ್ವ ಒಂದೇ ಮಾದರಿಯ, ಒಂದೇ ರೀತಿಯಲ್ಲಿ ಯೋಚಿಸುವ, ಒಂದೇ ಆಹಾರವನ್ನ ಸೇವಿಸುವ ವಿಚಿತ್ರ ಜೀವಿಗಳನ್ನ ಸೃಷ್ಟಿ ಮಾಡುವ ಹುನ್ನಾರ ನಡೆದಿರಬಹುದೆ ಅನ್ನುವ ಅನುಮಾನ ನನ್ನನ್ನ ಕಾಡುತ್ತಿದೆ.

ಜ್ಞಾನ ಮತ್ತು ವಿವೇಕ

ಪುಸ್ತಕಗಳ ವಿಶೇಷತೆ ಅಂದರೆ ಒಂದು ಪುಸ್ತಕ ಓರ್ವ ಓದುಗನನ್ನ ಆಯ್ಕೆ ಮಾಡಿ ಕೊಂಡು ಅವನ ವಿಶ್ವಾಸವನ್ನ ಗಳಿಸಿ ಏಕಾಂತದಲ್ಲಿ ಅವನಿಗೆ ಕೆಲ ವಿಷಯಗಳನ್ನ ತಿಳಿಸಿ ಕೊಡುತ್ತ ಅವನನ್ನ ಎಲ್ಲ ವಿಷಯಗಳಲ್ಲೂ ಕನ್ವಿನ್ಸ್ ಮಾಡುತ್ತ ಹೋಗುತ್ತದೆ. ಇದರಿಂದಾಗಿ ಓದುಗನ ವ್ಯಕ್ತಿತ್ವದಲ್ಲಿ ಬದಲಾವಣೆ ಆಗುತ್ತದೆ, ಆವನ ಅನುಭವ, ಕಲ್ಪನೆ, ಜೀವನ ದೃಷ್ಟಿ ಪಕ್ವವಾಗುತ್ತ ಹೋಗುತ್ತದೆ. ಈ ಕೆಲಸವನ್ನ ಇಂದಿನ ವಿದ್ಯುನ್ಮಾನ ಯಂತ್ರಗಳು ಮಾಡುವುದಿಲ್ಲ. ಹೊಸದು, ಆಧುನಿಕ ಆವಿಷ್ಕಾರ, ಒಂದು ಅದ್ಭುತ ಎಂಬಂತಹ ಭ್ರಮೆಯನ್ನ ಸೃಷ್ಟಿ ಮಾಡುತ್ತ ಬಂದ ಒಂದು ಯಂತ್ರ, ಮೊದಲು ಮನುಷ್ಯನ ವಿವೇಕವನ್ನ ನಾಶ ಮಾಡಿದರೆ ನಂತರ ಅದು ಹೃದಯ ಮನಸ್ಸುಗಳ ಮೇಲೆ ದಾಳಿ ಮಾಡುತ್ತದೆ. ಈ ಕಾರಣಕ್ಕಾಗಿಯೇ ಗಾಂಧೀಜಿ ಯಂತ್ರವನ್ನ ರಕ್ಕಸ ಎಂದು ಕರೆದದ್ದು. ಈ ಯಂತ್ರ ತನಗೆ ಬೇಕಾದ ಕಮಾಡಟಿಯನ್ನ ಉತ್ಪಾದಿಸುವಲ್ಲಿ, ಬಿಕರಿಮಾಡುವಲ್ಲಿ ಸದಾ ನಿರತ. ಸದಾ ಸಾಮಾಜಿಕ ಬದ್ಧತೆಯೊಡನೆ ಯೋಚನೆ ಮಾಡುವ ಬರೆಯುವ ಲೇಖಕ ಇಂದು ಈ ಯಂತ್ರದ ಎದಿರು ಸೋಲುತ್ತಿದ್ದಾನೆ. ಹಾಗೆಂದು ನಾವು ಯಂತ್ರಗಳನ್ನ ನಿರಾಕರಿಸಬೇಕು ಎಂದು ನಾನು ಹೇಳುತ್ತಿಲ್ಲ, ಯಂತ್ರ ಮನುಷ್ಯನ ಕೈಲಿರ ಬೇಕು, ಮಾನವ ಯಂತ್ರದ ಗುಲಾಮನಾಗ ಬಾರದು. ಮಾಹಿತಿ ತಂತ್ರ ಜ್ಞಾನದ ಇಂದಿನ ದಿನಗಳಲ್ಲಿ ನಾವೆಲ್ಲ ಜ್ಞಾನವಂತರಾಗುತ್ತಿದ್ದೇವೆ. ಆದರೆ ನಾವು ಯಾರೂ ಕೂಡ ವಿವೇಕ ಶಾಲಿಗಳಾಗಿ ಪರಿವರ್ತನೆ ಹೊಂದುತ್ತಿಲ್ಲ. ಒಂದು ನದಿ ಎಲ್ಲಿ ಹುಟ್ಟುತ್ತೆ, ಅದರಲ್ಲಿ ಎಷ್ಟು ನೀರು ಹರಿಯುತ್ತೆ, ಅದು ಎಲ್ಲಿ ಕಡಲನ್ನ ಸೇರುತ್ತದೆ ಅನ್ನುವುದು ನಮಗೆ ಗೊತ್ತಿದೆ. ಆದರೆ ಅದೇ ನದಿ ಒಂದು ಸಂಸ್ಕೃತಿಯನ್ನ ಹುಟ್ಟು ಹಾಕುವುದು, ಲಕ್ಷಲಕ್ಷ ಜನರ ದಾಹವನ್ನ ನೀಗಿಸುವುದು, ವಿವಿಧ ರೀತಿಯಲ್ಲಿ ಜನರನ್ನ ಸಲಹುವುದು ನಮಗೆ ಗೊತ್ತಿಲ್ಲ. ನದಿಯೊಂದರ ಕುರಿತ ಅಂಕಿ ಅಂಶ ಅರಿತ ನಾವು ಅದರ ಮಾನವೀಯ ಸಂಬಂಧಗಳ ಕುರಿತು ಕುರುಡರಾಗುತ್ತೇವೆ. ಹೀಗಾಗಿ ನದಿಯೊಂದರಿಂದ ಕಲಿಯ ಬೇಕಾದ ಪಾಠವನ್ನ ನಾವು ಕಲಿಯುವುದೇ ಇಲ್ಲ. ನಮಗೆ ಇಂದು ಜ್ಞಾನದ ಜೊತೆಗೆ ವಿವೇಕ ಬೇಕಾಗಿದೆ. ಆದರೆ ಅದರ ಕೊರತೆ ಇದೆ.

ಇನ್ನು ಈ ಯಂತ್ರದ ದಾಳಿಗೆ ಒಳಗಾಗಿ ನಮ್ಮ ಭಾಷೆ ಕೂಡ ನಶಿಸಿ ಹೋಗುತ್ತಿದೆಯೆ? ನಾವು ಈ ವಿಚಾರ ಮಾಡಬೇಕು. ಎಫ್.ಎಂ. ರೇಡಿಯೋ ಬಂದ ಮೇಲೆ ನಮ್ಮ ಭಾಷೆಗೆ ಬಂದೊದಗಿದ ದುರವಸ್ಥೆಯ ಕುರಿತು ಈಗಾಗಲೇ ಸಾಕಷ್ಟು ನಾವು ಕೇಳಿದ್ದೇವೆ. ಮಗಾ, ಮಚ್ಚಾ ಅನ್ನುವ ಶಬ್ದಗಳನ್ನ ಉಪಯೋಗಿಸ ಬಾರದು ಎಂದು ಒಂದು ವಿದ್ಯಾ ಸಂಸ್ಥೆ ತನ್ನ ವಿದ್ಯಾರ್ಥಿಗಳಿಗೆ ಆದೇಶ ಹೊರಡಿಸಿದೆ. ಮೊಬೈಲ್ ಬಂದ ನಂತರ ಕನ್ನಡದ ಅಂಕಿಗಳು ನಮಗೆ ಮರೆತೇ ಹೋಗಿವೆ. ಯಂತ್ರದ ಅವಸರಕ್ಕೆ ಹೊಂದಿ ಕೊಳ್ಳುವ ಭರದಲ್ಲಿ ಭಾಷೆಯನ್ನ ಮೊಟಕು ಗೊಳಿಸುವ, ಹ್ರಸ್ವ ಗೊಳಿಸುವ ಯತ್ನ ನಡೆದಿದೆ. ಅನ್ನದ ಪ್ರಶ್ನೆಯೇ ಮುಖ್ಯವಾಗಿ ಕನ್ನಡ ಹಿಂದೆ ಸರಿದು ಇಂಗ್ಲೀಷ್ ವಿಜೃಂಭಿಸುತ್ತಿದೆ.

ಕವಿರಾಜ ಮಾರ್ಗದ ಕವಿ ತನ್ನ ಕಾಲದಲ್ಲಿ ಇದ್ದ ಕನ್ನಡವನ್ನ ಕುರಿತು ಬರೆಯುತ್ತ "ಕನ್ನಡಂಗಳ್" ಅನ್ನುವ ಶಬ್ದವನ್ನ ಬಳಸುತ್ತಾನೆ. ಈ ಮಾತು ಇಂದಿಗೂ ನಿಜ. ಗಂಡು ಮೆಟ್ಟಿನ ಭಾಷೆಯಾದ ಬೇಂದ್ರೆಯವರ ಧಾರವಾಡದ ಕನ್ನಡ, ಅನಕೃ ಅವರ ಮಧುರವಾದ ಮೈಸೂರು ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯ ಕಾರಂತರ ಕನ್ನಡ, ಗೋಕಾಕದ ಕೃಷ್ಣ ಮೂರ್ತಿ ಪುರಾಣಿಕರ ಕನ್ನಡ, ಗ್ರಾಮಾಯಣ ಕಾದಂಬರಿಯ ಬಹದ್ದೂರರ ಕನ್ನಡ, ಕುವೆಂಪು ಅವರ ಮಲೆನಾಡಿನ ಕನ್ನಡ, ಕುಂವಿ ಅವರ ಬಳ್ಳಾರಿಯ ಕನ್ನಡ, ದೇವನೂರರ ಚಾಮರಾಜ ನಗರದ ಕನ್ನಡ, ಇತ್ಯಾದಿಗಳು ಕನ್ನಡದಲ್ಲಿ ಇರುವುದನ್ನ ನಾವು ಗಮನಿಸ ಬೇಕಿದೆ. ಇಂತಹ ವೈವಿಧ್ಯತೆ ನಾಳೆ ಉಳಿದೀತೆ ಅನ್ನುವ ಪ್ರಶ್ನೆ ಕೂಡ ಇದೆ. ಇಂತಹ ವೈವಿಧ್ಯಮಯ ಕನ್ನಡವನ್ನ ಇರಿಸಿ ಕೊಂಡು ನಾವು ಏನೂ ಮಾಡಬಹುದು. ಆದರೆ ನಮ್ಮ ಜನ ಕನ್ನಡದಲ್ಲಿ ಶಬ್ದಗಳಿಲ್ಲ, ವಿಜ್ಞಾನ, ವೈದ್ಯಕೀಯ ಇತ್ಯಾದಿ ವಿಷಯಗಳನ್ನ ಕನ್ನಡದಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ ಅನ್ನುವ ನೆಪಗಳನ್ನ ಹೇಳುತ್ತಿರುವುದು ನಾಚಿಕೆಗೇಡು. ನಮ್ಮ ನಾಡಿನ ಕೃಷಿಕರು, ಕುಶಲ ಕರ್ಮಿಗಳು, ವಿವಿಧ ಕೆಲಸ ಕಾರ್ಯಗಳನ್ನ ಮಾಡುವವರು ತಾವು ದಿನ ನಿತ್ಯ ಬಳಸುವ ವಸ್ತುಗಳಿಗೆ ಸುಂದರ ಹೆಸರುಗಳನ್ನ ಇರಿಸಿದ್ದಾರೆ, ತಮ್ಮ ಸುತ್ತ ಇರುವ ಗಿಡ ಮರ ಬಳ್ಳಿ ಹಕ್ಕಿ ಮೀನುಗಳಿಗೆ ಹೆಸರನ್ನ ಇರಿಸಿದ್ದಾರೆ. ಆದರೆ ಒಂದು ಮೋರಿ ಕಟ್ಟಲು ನಮ್ಮ ಇಂಜಿನಿಯರುಗಳಿಗೆ ವರ್ಡ್ಸ್ ಇಲ್ಲ ಅಂದರೆ ಅದು ಭಾಷೆಯ ಅಸಾಮರ್ಥ್ಯ ಅಲ್ಲ. ಇದು ಅವರ ಅಸಾಮರ್ಥ್ಯ. ಕನ್ನಡದ ವಿಷಯ ಬಂದಾಗಲೆಲ್ಲ ನಾವು ಸರಕಾರವನ್ನ ಅಪರಾಧೀ ಸ್ಥಾನದಲ್ಲಿ ನಿಲ್ಲಿಸುತ್ತೇವೆ. ಸರಕಾರ ಕನ್ನಡಕ್ಕಾಗಿ ಏನೂ ಮಾಡುತ್ತಿಲ್ಲ ಅನ್ನುವುದು ನಮ್ಮ ಜನರ ಪುಕಾರು. ಸರಕಾರ ಆಕಡೆ ಇರಲಿ, ನಾವು ಏನು ಮಾಡಿದ್ದೇವೆ? ನಮ್ಮ ಮಕ್ಕಳು ನಾಯಿಯನ್ನ ಡಾಗಿ ಅಂದಾಗ, ಬೆಕ್ಕನ್ನ ಕ್ಯಾಟಿ ಅಂದಾಗ, ಚಂದ್ರನನ್ನ ಮೂನ್ ಅಂಕಲ್ ಎಂದಾಗ ತೆಂಗಿನ ಮರ ಹತ್ತಿ ಕೂರುವ ನಮ್ಮ ನಮ್ಮ ಪೋಷಕರು ಕನ್ನಡದ ಇಂದಿನ ಸ್ಥಿತಿಗೆ ಮೂಲ ಕಾರಣ. ಆಂಗ್ಲ ಮಾಧ್ಯಮ ಶಾಲೆಗಳು ನಮ್ಮ ಜನರಿಗೆ ರೋಮಾಂಚನವನ್ನ ಉಂಟುಮಾಡುತ್ತವೆ. ಈ ಶಾಲೆಗಳ ಶಿಕ್ಷಣದ ಬಗ್ಗೆ ನನ್ನ ತಕರಾರಿದೆ. ಹತ್ತು ಕೆಜಿ ಹೆಗಲ ಚೀಲ, ಕೈಯಲ್ಲಿ ನೀರಿನ ಬಾಟಲಿ, ಊಟದ ಡಬ್ಬಿ, ಕೊಡೆ, ಇತ್ಯಾದಿ ಹೊತ್ತು ಶಾಲೆಗೆ ಹೋಗುವ ಮಕ್ಕಳಿಗೂ ಗಡಿಯಲ್ಲಿ ಗಡಿಕಾಯುವ ನಮ್ಮ ಸೈನಿಕರಿಗೂ ನನಗೆ ವ್ಯತ್ಯಾಸ ಕಾಣುವುದಿಲ್ಲ. ಅಲ್ಲಿಯ ಹೋಂ ವರ್ಕ್ ಅನ್ನುವ ಶಿಕ್ಷೆ, ಶಿಸ್ತಿನ ಹೆಸರಿನ ಬಿಗಿ ಶಿಕ್ಷಣ ಇದು ಮಕ್ಕಳನ್ನ ಏನು ಮಾಡ ಬಹುದು ನಾವು ವಿಚಾರ ಮಾಡಬೇಕು. ಮಕ್ಕಳು ಒಂದು ವೇಳೆ ಗದ್ದಲ ಮಾಡಿದರೆ ಅವರ ಮೊದಲ ಕಲ್ಲು ಬೀಳುವುದು ಅವರೇ ಕಲಿತ ಶಾಲೆಯ ಮೇಲೆ ಎಂಬ ಮಾತಿದೆ. ನಮ್ಮ ಶಾಲೆಗಳಲ್ಲಿ ಕನ್ನಡದ ವಾತಾವರಣ ಇಲ್ಲ ಅಂದರೆ ಅದಕ್ಕೆ ಕಾರಣ ನಮ್ಮ ಅಪ್ಪ ಅಮ್ಮ. ಎರಡನೆಯ ಕಾರಣ ನಮ್ಮ ಸರಕಾರ. ಎಲ್ಲ ರಾಜ್ಯಗಳ ಸರಕಾರಗಳೂ ತಮ್ಮ ರಾಜ್ಯದ ಭಾಷೆಯ ಹಿತವನ್ನ ಕಾಪಾಡುತ್ತ ಬಂದಿವೆ. ಆದರೆ ಕರ್ನಾಟಕದ ಸರಕಾರ ಕನ್ನಡ ಸರಕಾರವಾಗಿದೆಯೇ? ಕೆಲ ವರ್ಷಗಳ ಹಿಂದೆ

ತಮಿಳು ನಾಡಿನ ಮುಖ್ಯಮಂತ್ರಿ ಬೆಂಗಳೂರಿನ ವಿಧಾನ ಸೌಧಕ್ಕೆ ಬಂದ. ಆತ ಅಲ್ಲಿ ಕುಳಿತು ತಮಿಳಿನಲ್ಲಿ ಮಾತನಾಡಿದ. ನಮ್ಮ ಮುಖ್ಯಮಂತ್ರಿ ಆತನಿಗೆ ಇಂಗ್ಲೀಷಿನಲ್ಲಿ ಉತ್ತರಿಸಿದರು. ಇದು ಕನ್ನಡ ಸರಕಾರದ ಲಕ್ಷಣ ಖಂಡಿತ ಅಲ್ಲ. "ನರಕಕ್ಕೆ ಇಳಿಸಿ ನಾಲಿಗೆ ಸೀಳ್ಸಿ ಬಾಯಿ ಹೊಲಸಾಕಿದ್ರು ಮೂಗ್ನಲ್ಲಿ ಕನ್ನಡವನ್ನ ಆಡುತ್ತೇನೆ" ಅನ್ನುವ ನಮ್ಮ ಕವಿಗಳ ಶಪಥಕ್ಕೆ ನಮ್ಮ ಮಂತ್ರಿಗಳು ಎಂತಹ ಅವಮಾನ ಮಾಡುತ್ತಾರಲ್ಲ ಎಂದು ಮೈ ಉರಿಯುತ್ತದೆ. ಇನ್ನು ಕನ್ನಡದ ಏಳಿಗೆಗೆ ಕಾವಲು ಸಮಿತಿ, ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿಗಳು. ಕನ್ನಡವನ್ನ ದಿನ ನಿತ್ಯದ ವ್ಯವಹಾರದಲ್ಲಿ ಬಳಸಿ ಅನ್ನುವ ಸರಕಾರಿ ಆದೇಶಗಳು, ಬೋರ್ಡುಗಳನ್ನ ಕನ್ನಡದಲ್ಲಿ ಹಾಕಿ ಅನ್ನುವ ಸಾಲು ಸಾಲು ಸರಕಾರೀ ಆಜ್ಞೆಗಳು ಯಾರಿಗೂ ಮರ್ಯಾದೆ ತರುವ ವಿಷಯವಲ್ಲ. ಎಷ್ಟೋ ಸಂದರ್ಭಗಳಲ್ಲಿ ಸರಕಾರ ಜನರ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ. ತಮಿಳು ನಾಡಿನಲ್ಲಿ ತಾಂತ್ರಿಕ ಹಾಗು ವೈದ್ಯಕೀಯ ಶಿಕ್ಷಣವನ್ನ ತಮಿಳಿನಲ್ಲಿ ನೀಡುವಾಗ ನಾವು ಪ್ರಾಥಮಿಕ ಮೊದಲ ತರಗತಿಯಲ್ಲಿ ಇಂಗ್ಲೀಷ್ ಶಿಕ್ಷಣ ನೀಡಲಿಕ್ಕೆ ಮುಂದಾಗಿದ್ದೇವೆ.

ಕನ್ನಡವನ್ನ ಅನುಷ್ಠಾನಕ್ಕೆ ತರುವಲ್ಲಿ ನಮ್ಮ ಮಂತ್ರಿಗಳು ಮುಂದಿದ್ದಾರೆ. ಆದರೆ ಇವರಿಗೆ ಅಡ್ಡಿಯಾಗಿ ನಿಂತಿರುವವರು ವಿಧಾನ ಸೌಧ ಮತ್ತಿತರ ಕಡೆಗಳಲ್ಲಿ ಕುಳಿತಿರುವ ಆಂಗ್ಲ ಮೋಹೀ ಅಧಿಕಾರಿಗಳು ಅನ್ನುವ ಮಾತಿದೆ. ಇವರು ಕನ್ನಡದ ಪರವಾಗಿ ನಿಂತರೆ ಕನ್ನಡ ಖಂಡಿತ ಉದ್ಧಾರವಾಗುತ್ತದೆ. ಒಂದು ಉದಾಹರಣೆ ಬೆಂಗಳೂರಿನಲ್ಲಿ ಪ್ರತಿ ವರ್ಷ ಒಂದು ಪುಸ್ತಕ ಪ್ರದರ್ಶನ ೧೦ ದಿನಗಳ ಕಾಲ ಅರಮನೆ ಮೈದಾನದಲ್ಲಿ ನಡೆಯುತ್ತಿತ್ತು. ಸಹಸ್ರ ಜನ ಬಂದು ಪುಸ್ತಕಗಳನ್ನ ಅಲ್ಲಿ ಕೊಳ್ಳುತ್ತಿದ್ದರು. ಈ ಬಾರಿ ಈ ಪ್ರದರ್ಶನಕ್ಕೆ ಕೇವಲ ೩ ದಿನ ನೀಡಲಾಯಿತು. "ಇಲ್ಲಿ ಪುಸ್ತಕ ಮಾರಾಟ ಲಾಭ ದಾಯಕ ಉದ್ಯಮ ಪುಸ್ತಕ ವ್ಯಾಪಾರಿಗಳು ಹಣ ಮಾಡುತ್ತಾರೆ" ಅನ್ನುವ ಕಾರಣಕ್ಕೆ ಹೀಗೆ ಮಾಡಲಾಯಿತು ಅನ್ನುವ ಮಾತು ಕೇಳಿ ಬಂತು. ಪುಸ್ತಕ ವ್ಯಾಪಾರದಿಂದ ಹಣ ಮಾಡಬಹುದು ಅನ್ನುವುದು ಮೊದಲ ಬಾರಿ ನಾನು ಕೇಳಿದ ಮಾತು. ಪುಸ್ತಕ ಮಾರಾಟ ಒಂದು ಸಾಂಸ್ಕೃತಿಕ ಪ್ರಕ್ರಿಯೆ. ಸಾವಿರಾರು ಜನ ಬಂದು ತಮಗೆ ಬೇಕಾದ ಒಂದು ಪುಸ್ತಕವನ್ನ ಆಯ್ಕೆ ಮಾಡಿ ಕೊಂಡು ಹೋಗುತ್ತಾರೆ ಅಂದರೆ ಈ ನೆಲದಲ್ಲಿ ಒಂದು ಉತ್ತಮ ಕೆಲಸವಾಗುತ್ತಿದೆ ಎಂದು ತಿಳಿಯಬೇಕು. ಇದರ ಬದಲು ಲಾಭದ ಮಾತನ್ನ ಆಡುವುದು ಅಕ್ಷಮ್ಯ ಅಪರಾಧ. ಪುಸ್ತಕೋದ್ಯಮವೇ ಕಷ್ಟದಲ್ಲಿ ಇರುವಾಗ ಇಂತಹಾ ವರ್ತನೆ ಖಂಡನಾರ್ಹ. ಜೊತೆಗೆ ಮೂರು ವರ್ಷಗಳಿಂದ ಗ್ರಂಥಾಲಯ ಇಲಾಖೆ ಬಿಡುಗಡೆ ಮಾಡಬೇಕಾದ ಹಣವನ್ನ ಬಿಡುಗಡೆ ಮಾಡಿಲ್ಲವಂತೆ. ಇದು ಕೂಡ ಸರಕಾರ ಗಮನಿಸ ಬೇಕಾದ ವಿಷಯ. ಸರಕಾರದಲ್ಲಿ ಇರುವ ನಮ್ಮ ಬಿಳಿಕಾಲರಿನ ಕೆಲವೇ ಕೆಲ ಜನ ಕನ್ನಡದ ವಿಷಯ ಬಂದಾಗ ತೊಂಚವಂಚ ಮಾಡುತ್ತಿದ್ದಾರೆ. ಕನ್ನಡಕ್ಕೆ ಆಗಬಹುದಾದ ಲಾಭವನ್ನ, ಸಿಗಬೇಕಾದ ಸೌಲಭ್ಯವನ್ನ ಕಾನೂನನ್ನ ತಿರುಚುವುದರ ಮೂಲಕ ಸೌಲಭ್ಯ ವಂಚಿತರನ್ನಾಗಿ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕನ್ನಡಾಭಿಮಾನಿ ಅಧಿಕಾರಿಗಳು ಇದ್ದಾರೆ, ಆದರೆ ಇವರ ಸಂಖ್ಯೆ

ಕಡಿಮೆ. ಕೆಲವರು ಉದ್ದೇಶ ಪೂರ್ವಕವಾಗಿ ಕನ್ನಡದ ಬೆಳವಣಿಗೆಗೆ ಆತಂಕವನ್ನ ತಂದೊಡ್ಡುತ್ತಿದ್ದಾರೆ ಎಂದು ಹೇಳಲಾಗಿದೆ. ನಮ್ಮ ಕನ್ನಡಾಭಿಮಾನ ಮಂತ್ರಿಗಳು ಇಂತಹವರ ಕಿವಿ ಹಿಂಡಿ ಕನ್ನಡದ ಹಿತವನ್ನ ಕಾಪಾಡ ಬೇಕಾಗಿದೆ.

ಕನ್ನಡ ಭಾಷೆಗೆ, ಕರ್ನಾಟಕಕ್ಕೆ ಎಲ್ಲೇ ಅವಮಾನವಾಗಲಿ, ನಷ್ಟವಾಗಲಿ, ಅದರ ವಿರುದ್ಧ ಮೊದಲು ಸರಕಾರ ನಂತರ ಜನ ಸಿಡಿದು ನಿಲ್ಲಬೇಕು. ಮೊನ್ನೆ ಬೆಳಗಾಂನಲ್ಲಿ ಒಂದು ಮಾತು ಕೇಳಿ ಬಂತು.ನಾಲ್ಕು ಜನ ಇದ್ದರೆ ಕರ್ನಾಟಕದ ಹೆಣ ಹೊರುತ್ತೇವೆ, ಐದು ಜನ ಇದ್ದರೆ ಕರ್ನಾಟಕದ ತಿಥಿ ಮಾಡುತ್ತೇವೆ ಅನ್ನುವ ಮಾತದು. ಇದರ ವಿರುದ್ಧ ನಮ್ಮ ರಕ್ಷಣಾ ವೇದಿಕೆಯ ಮಿತ್ರರು ಪ್ರತಿಭಟನೆ ನಡೆಸಿದರು. ಆದರೆ ಈ ಬಗ್ಗೆ, ಸರಕಾರ, ನಮ್ಮ ಜನ ಪ್ರತಿನಿಧಿಗಳು, ಕೊನೆಗೆ ಜನ ಕೂಡ ಪ್ರತಿಭಟಿಸಲಿಲ್ಲ. ಇಂತಹದ್ದೇ ಮಾತು ಮಹಾರಾಷ್ಟ್ರದಲ್ಲಿ ಕೇಳಿ ಬಂದಿದ್ದರೆ ಏನಾಗುತ್ತಿತ್ತು ನಾವು ಯೋಚಿಸ ಬೇಕು. ಕನ್ನಡಕ್ಕೆ ಕರ್ನಾಟಕಕ್ಕೆ ಇಂತಹಾ ದುಸ್ಥಿತಿ ಬರಬೇಕಿತ್ತೆ ನಾನು ಕೇಳುತ್ತಿದ್ದೇನೆ. ನಾನು ಸಮ್ಮೇಳನದ ಅಧ್ಯಕ್ಷನಾಗಿ ಒಪ್ಪಿತನಾಗಿದ್ದೇನೆ ಅಂದ ಕೂಡಲೇ ಕನ್ನಡದ ಜನ ನನ್ನಿಂದ ಕೆಲ ನಿರೀಕ್ಷೆಗಳನ್ನ ಇರಿಸಿ ಕೊಂಡು ನನಗೆ ಪತ್ರ ಬರೆದಿದ್ದಾರೆ, ದೂರವಾಣಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ವಿಷಯಗಳು ಇಡೀ ನಾಡಿನಲ್ಲಿ ಚರ್ಚೆಗೆ ಒಳಗಾಗಿರುವುದರಿಂದ ಅವುಗಳನ್ನ ನಾನಿಲ್ಲಿ ಚುಟುಕಾಗಿ ನಿಮ್ಮ ಮುಂದೆ ಇಡ ಬಯಸುತ್ತೇನೆ. ಜೊತೆಗೆ ಕವಿ ಲೇಖಕ ಎಳೆ ಬಿಸಿಲು, ತಂಪು ಬೆಳದಿಂಗಳು, ಜುಳುಜುಳು ಹರಿಯುವ ನದಿಯ ನೀರು ಇವುಗಳ ಕುರಿತೇ ಬರೆಯ ಬೇಕು ಅನ್ನುವ ತತ್ವಕ್ಕೆ ವಿರೋಧಿಯಾದವನು ನಾನು. ಈ ಕಾರಣಕ್ಕೆ ಈ ಕೆಲ ವಿಷಯಗಳನ್ನ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಹಾಗೆ ನೋಡಲು ಹೋದರೆ ಹೇಳಲಿಕ್ಕೆ ಬಹಳ ವಿಷಯಗಳಿವೆ. ಆದರೆ ಕೆಲವನ್ನ ಮಾತ್ರ ನಿಮ್ಮ ಜೊತೆಯಲ್ಲಿ ಹಂಚಿಕೊಳ್ಳುವ ಇರಾದೆ ನನ್ನದು.

ಪುಡಾರಿ

* ನಮ್ಮಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಾಗ, ನಮಗೆ ಸ್ವಾತಂತ್ರ್ಯ ದೊರೆತ ನಂತರದ ಕೆಲವರ್ಷಗಳವರೆಗೆ ಏನು ನಮ್ಮ ರಾಜಕಾರಿಣಿಗಳು ಇದ್ದರು ಅವರಿಗೂ ಇಂದಿನ ರಾಜಕಾರಿಣಿಗಳಿಗೂ ಇರುವ ವ್ಯತ್ಯಾಸ ಏನು ಅನ್ನುವುದು ನಮಗೆ ಇಂದು ಎದ್ದು ಕಾಣುತ್ತಿದೆ. ತ್ಯಾಗ, ನಿಸ್ವಾರ್ಥ ಮನೋಭಾವ, ದೇಶದ ಬಗ್ಗೆ ನಿಜವಾದ ಕಳಕಳಿ, ದೇಶದ ಪ್ರಗತಿಯ ಕುರಿತಂತೆ ಆಸಕ್ತಿ ಇದೆಲ್ಲ ಅಂದಿನ ವಿಶೇಷತೆ ಆಗಿದ್ದರೆ ಇಂದು ಅದಕ್ಕೆ ತದ್ವಿರುದ್ಧವಾದ ಚಿತ್ರಣವನ್ನ ನಾವು ನೋಡುತ್ತಿದ್ದೇವೆ. ನಾನು ಕೆಲ ವರ್ಷಗಳ ಹಿಂದೆ ಸೊಲ್ಲಾಪುರಕ್ಕೆ ಹೋಗಿದ್ದೆ. ಅಲ್ಲೊಂದು ಪತ್ರಿಕಾ ಕಛೇರಿ. "ಪುಡಾರಿ" ಅನ್ನುವ ಒಂದು ದಿನಪತ್ರಿಕೆ ಅಲ್ಲಿಂದ ಪ್ರಕಟವಾಗುತ್ತಿತ್ತು. ಸಂಪಾದಕರಲ್ಲಿ ಮಾತನಾಡುತ್ತ ನಾನು "ಪುಡಾರಿ ಅನ್ನುವ ಶಬ್ದಕ್ಕೆ ನಮ್ಮಲ್ಲಿ ಒಳ್ಳೆಯ ಅರ್ಥವಿಲ್ಲ, ನಮ್ಮಲ್ಲಿ ಚಿಲ್ಲರೆ ರಾಜಕಾರಣ ಮಾಡುವವರನ್ನ, ದೇಶ ಸೇವೆಯ ಸೋಗು ಹಾಕುವವರನ್ನ, ರಾಜಕೀಯ ಧೂರ್ತರನ್ನ ನಾವು ಪುಡಾರಿ ಎಂದು ಕರೆಯುತ್ತೇವೆ. ನೀವು ಇಂತಹಾ ಹೆಸರನ್ನ

ಇಟ್ಟಿದ್ದೀರಲ್ಲ?" ಎಂದು ಕೇಳಿದೆ. ಅವರು "ಇಲ್ಲಿ ಆ ಅರ್ಥದಲ್ಲಿ ಈ ಶಬ್ದ ಬಳಕೆಯಲ್ಲಿ ಇಲ್ಲ, ಇಲ್ಲಿ ಪುಡಾರಿ ಅಂದರೆ ನಿಜವಾದ ದೇಶ ಭಕ್ತ, ಎಲ್ಲರೂ ಹೀಗಿರಬೇಕು ಅನ್ನುವ ಕಾರಣಕ್ಕೆ ನಾವು ನಮ್ಮ ಪತ್ರಿಕೆಗೆ ಆ ಹೆಸರನ್ನ ಇರಿಸಿದ್ದೇವೆ" ಎಂದರು. ಜೊತೆಗೆ "ಇಂದಿನ ಪರಿಸ್ಥಿತಿ ನೋಡಿದರೆ ನಾಳೆ ನಾವೂ ಕೂಡ ನೀವು ಹೇಳುವ ಅರ್ಥದಲ್ಲಿ ಈ ಶಬ್ದವನ್ನ ನೋಡಬೇಕಾಗುತ್ತದೇನೋ" ಅನ್ನುವ ಅಭಿಪ್ರಾಯ ವ್ಯಕ್ಯಪಡಿಸಿದರು. ಆಗ ನನಗೆ ಕನ್ನಡದ ಜನ ಬಹಳ ಮುಂಚೆಯೇ ನಮ್ಮ ರಾಜಕಾರಣದ ದುರವಸ್ತೆಯನ್ನ ಗುರುತಿಸಿ ಬಿಟ್ಟರಲ್ಲ ಅನಿಸಿ ಸಂತೋಷವಾಯಿತು. ಅಂದು ನನಗೆ ನಮ್ಮ ಭಾಷೆಯ ಬಗ್ಗೆ ಹೆಮ್ಮೆ ಅನಿಸಿತು. ಒಂದು ಸತ್ಯವನ್ನ, ಒಂದು ವಾಸ್ತವ ಪರಿಸ್ಥಿತಿಯನ್ನ ನಮ್ಮ ಕನ್ನಡದ ಜನ ಎಂತಹಾ ಶಬ್ದದ ಮೂಲಕ ಹೊರಗೆಡವಿದ್ದಾರಲ್ಲ ಅನಿಸಿತು. ಇಂದು ಈ ಶಬ್ದದ ವ್ಯಾಪ್ತಿ ಆಳ ಅಗಲ ಹೆಚ್ಚಾಗಿದೆ. ದೇಶದಲ್ಲಿ ಈ ಪುಡಾರಿಗಳ ಆಟಾಟೋಪ ಹೆಚ್ಚಾಗಿ ದೇಶದ ಅವಸಾನವನ್ನ ನಾವು ಕಾಣ ಬೇಕಾಗಿದೆ. ನಮ್ಮಲ್ಲಿ ಯಾರನ್ನ ನಾವು ರಾಜಕಾರಿಣಿ, ಜನನಾಯಕ, ಸಮಾಜ ಸೇವಕ, ಜನಪ್ರತಿನಿಧಿ ಮೊದಲಾದ ಹೆಸರಿನಿಂದ ಕರೆಯುತ್ತೇವೆಯೋ ಅವರೆಲ್ಲ ಕನ್ನಡದ "ಪುಡಾರಿ" ಗಳಾಗಿರುವುದನ್ನ ನಾವು ನೋಡುತ್ತಿದ್ದೇವೆ. ಈ ಮಾತಿಗೆ ಹೊರತಾಗಿ ಇರುವವರು ಯಾರಾದರೂ ಇದ್ದರೆ ಅವರನ್ನ ನಾನು ಮನಃಪೂರ್ವಕ ನಮಸ್ಕರಿಸುತ್ತೇನೆ. ಅಯ್ಯಾ ನಿಮ್ಮ ಸಂತತಿ ಸಾವಿರವಾಗಲಿ. ಈ ಸಂತತಿಯಿಂದ ಈ ದೇಶದ ರೈತರಿಗೆ, ಬಡವರಿಗೆ ಒಳಿತಾಗಲಿ ಎಂದು ಹಾರೈಸುತ್ತೇನೆ.

* ಹೌದು ನಾನು ರೈತರ ಹೆಸರನ್ನ ತೆಗೆದೆ. ಕುವೆಂಪು ಅವರ ನೇಗಿಲ ಯೋಗಿ ಕವಿತೆಯ ಮೂಲಕ ರೈತನ ಎಲ್ಲ ಸ್ಥಾನಮಾನ ಬವಣೆಗಳನ್ನ ಬಣ್ಣಿಸುತ್ತಾರೆ. ರೈತ ದೇಶದ ಬೆನ್ನೆಲಬು, ಅವನನ್ನ ನಾವೆಲ್ಲ ಚೆನ್ನಾಗಿ ನೋಡಿಕೊಳ್ಳ ಬೇಕು ಅನ್ನುವ ಆಶಯ ಅಲ್ಲಿದೆ. ಆದರೆ ಇವತ್ತು ಈ ರೈತನನ್ನ ನಾವು ಯಾವ ಪರಿಸ್ಥಿತಿಗೆ ತಂದು ನಿಲ್ಲಿಸಿದ್ದೇವೆ ಯೋಚಿಸೋಣ. ಅವನ ದುಡಿಮೆಗೆ ಬೆಲೆ ಇಲ್ಲ. ಅವನ ನೆಲ ಅವನ ಕೈಯಲ್ಲಿ ಉಳಿದಿಲ್ಲ. ಅವನಿಗೆ ಗೌರವವಿಲ್ಲ. ರೈತನಿಗೆ ಹಣದ ಆಸೆ ತೋರಿಸಿ ಅವನ ಜಮೀನಿಗೆ ಲಕ್ಷಾಂತರ ರೂಪಾಯಿ ಬೆಲೆ ಕಟ್ಟಿ ಅದನ್ನ ಆಧುನಿಕ ವ್ಯವಹಾರಗಳಿಗಾಗಿ ಕೊಂಡು ಅವನನ್ನ ಅದೇ ನೆಲದಲ್ಲಿ ತಲೆ ಎತ್ತುತ್ತಿರುವ ಕಾರ್ಖಾನೆಯ ಕಾವಲುಗಾರನನ್ನಾಗಿ ಮಾಡುವ ಹುನ್ನಾರ ನಡೆದಿದೆ. ನೆಲ ಅನ್ನುವುದು ಒಂದು ಗಟ್ಟಿ ಸಂಪತ್ತು. ನೆಲ ಇದೆ ಅನ್ನುವುದೇ ರೈತನಿಗೆ ಒಂದು ಭರವಸೆ, ಬೆಂಗಾವಲು, ವರ, ಮುಂದಿನ ಬದುಕಿಗೆ ಆಧಾರ, ಇದನ್ನೇ ಅವನಿಂದ ನಾವು ಕಿತ್ತು ಕೊಳ್ಳುತ್ತಿದ್ದೇವೆ. ವ್ಯವಸಾಯವೇ ಬದುಕು ಅನ್ನುವ ನಂಬಿಕೆ ಇದ್ದ ಈ ನಾಡಿನಲ್ಲಿ ವ್ಯವಸಾಯವನ್ನ ದಿವಾಳಿ ಕೋರತನ ಅನ್ನುವಂತೆ ಪ್ರತಿಬಿಂಬಸಲಾಗುತ್ತಿದೆ. ಅಣೆಕಟ್ಟುಗಳು, ಕಾರ್ಖಾನೆಗಳು, ರಸ್ತೆಗಳು, ಹೊಸ ಬಡಾವಣೆಗಳು, ಒಂದು ಕಡೆ ಅಭಿವೃದ್ಧಿಯ ಕತೆ ಹೇಳಿದರೆ, ಇವೇ ಇನ್ನೊಂದು ಕಡೆ ರೈತರ ದುರವಸ್ಥೆಯ ವ್ಯಥೆಯನ್ನ ಹೇಳುತ್ತಿವೆ. ಕುವೆಂಪು ಹೇಳಿದ ನೇಗಿಲ ಯೋಗಿ ನಿತ್ಯ ಆತ್ಮಹತ್ಯೆಯ ಪ್ರತೀಕನಾಗುತ್ತಿದ್ದಾನೆ.

ನಮ್ಮ ಸರಕಾರಗಳು ರೈತರಿಗೆ ಸಂಬಂಧ ಪಟ್ಟ ಸಮಸ್ಯೆಗಳನ್ನ ಕೂಡಲೇ ಪರಿಹರಿಸದೆ, ಅವುಗಳನ್ನ ಜೀವಂತವಾಗಿ ಇರಿಸಿ ಕೊಂಡು ಹೇಗೆ ರೈತರ ಬದುಕು ಚಂಚಲವಾಗಿ ಇಡುತ್ತಾರೆ ಅನ್ನುವುದಕ್ಕೆ ಒಂದು ಉದಾಹರಣೆಯನ್ನ ನೀಡ ಬಯಸುತ್ತೇನೆ.

೧೯೫೨ರಲ್ಲಿ ಕೆಂಗಲ್ ಹನುಮಂತಯ್ಯನವರು ಶಾಲೆಗಳ ಅಭಿವೃಧ್ಧಿಗಾಗಿ ಭೂಮಾಲಿಕರಿಂದ ಜಮೀನು ದಾನ ಪಡೆದು ಅದನ್ನ ಕೆಲ ರೈತರಿಗೆ ನೀಡಿ ಶಾಲೆಗೆ ಇಷ್ಟು ಗೇಣಿಯನ್ನ ನೀಡಿ ಎಂಬ ನಿಯಮವನ್ನ ರೂಪಿಸಿದರು. ಇದಾಗಿ ಈಗ ೬೦ ವರ್ಷಗಳು ಉರುಳಿವೆ. ೧೯೭೨ರಲ್ಲಿ ಭೂಸುಧಾರಣಾ ಕಾನೂನು ಬಂದಿತು. ಗೇಣಿ ಪದ್ದತಿ ಅಮಾನುಷವಾದದ್ದು ಎಂದರು. ಉಳುವವನೇ ಹೊಲದೊಡೆಯನಾದ. ಆದರೆ ಈ ಭೂವಿದ್ಯಾದಾನದ ರೈತ ಇಂದಿಗೂ ಗೇಣಿದಾರ. ೧೦,೦೦೦ ಎಕರೆ ಸರಕಾರೀ ಜಮೀನಿನಲ್ಲಿ ಇಂದು ೩೦,೦೦೦ ರೈತ ಕುಟುಂಬಗಳು ಗೇಣಿದಾರರಾಗಿ ಬದುಕುತ್ತಿವೆ. ಪುರಾತನವಾದ ಅನಿಷ್ಟ ಗೇಣಿ ಪದ್ಧತಿಯನ್ನ ನಿರ್ಮೂಲನೆ ಮಾಡಿದ ದೇಶ ಈ ಪದ್ಧತಿಯನ್ನ ಇನ್ನೂ ಕಾಪಾಡಿ ಕೊಂಡು ಬಂದಿದೆ ಅನ್ನುವುದು ಎಂತಹಾ ವಿಪರ್ಯಾಸ ಅಲ್ಲವೆ?

ಈ ನಾಡಿನ ರೈತ ಅವನು ಕಬ್ಬು ಬೆಳೆಗಾರ ಇರಬಹುದು, ಭತ್ತ, ಅಡಿಕೆ, ರಾಗಿ, ಜೋಳ, ಏನೇ ಬೆಳೆಯುವವ ಇರಬಹುದು ಅವರೆಲ್ಲ ಸಂತೃಪ್ತಿಯಿಂದಂತೂ ಇಲ್ಲ. ಅವರ ನಿಟ್ಟುಸಿರು, ಸರಕಾರದ ಕಣ್ಣಿಗೆ ಬೀಳದೆ? ಸಭೆ ಸಮಾರಂಭಗಳಲ್ಲಿ ರೈತ ಗೀತೆ ಹಾಡಿದರೆ ಸಾಕೆ?

* ನನಗೆ ಬಹಳ ಪ್ರಿಯವಾದದ್ದು ಈ ಪರಿಸರ. ಈ ಪ್ರೀತಿಗೆ ಕಾರಣ ಪರಿಸರದ ಮೇಲೆ ನನಗೆ ಇರುವ ಗೌರವ. ನೆಲಧ ಮೇಲೆ ಕೋಟ್ಯಾನು ಕೋಟಿ ಜೀವ ಜಂತುಗಳು ಇವೆ. ಅವುಗಳಲ್ಲಿ ಮಾನವ ಜೀವಿ ಕೂಡ ಒಬ್ಬ. ಪರಿಸರದಲ್ಲಿ ಅವನು ಶ್ರೇಷ್ಠ ಖಂಡಿತಾ ಅಲ್ಲ. ಇದ್ದುದರಲ್ಲಿ ಆತ ಬುದ್ಧಿವಂತ. ಬುದ್ಧಿವಂತ ಅಂದ ಕೂಡಲೇ ಇಡೀ ಪರಿಸರವನ್ನ ಆಳುವ, ಬದಲಾಯಿಸುವ, ಬೇಕಾ ಬಿಟ್ಟಿಯಾಗಿ ಬಳಸಿ ಕೊಳ್ಳುವ ಅಧಿಕಾರವನ್ನ ಈ ಮನುಷ್ಯನಿಗೆ ಯಾರೂ ಕೊಟ್ಟಿಲ್ಲ. ಆದರೆ ತನ್ನ ಕುತಂತ್ರದಿಂದ ಅವನು ಇದನ್ನ ಸಾಧಿಸಿದ್ದಾನೆ. ಹೀಗೆ ಇಲ್ಲದ ಸಾಧನೆಗಳನ್ನ ಮಾಡಿ ತನಗೆ ತಾನೇ ಅಪಾಯ ತಂದು ಕೊಳ್ಳುತ್ತಿದ್ದಾನೆ. ಮೊನ್ನೆ ಮೊನ್ನೆ ಉತ್ತರಾಖಂಡದಲ್ಲಿ ಏನಾಯಿತು ನಮಗೆ ಗೊತ್ತಿದೆ. ಎಲ್ಲಿಯವರೆಗೆ ನಾವು ಪರಿಸರದ ನಿಯಮಗಳನ್ನ ಅರ್ಥ ಮಾಡಿಕೊಂಡು ನಮ್ಮ ಬದುಕನ್ನ ನಡೆಸುತ್ತೇವೆ, ಅಲ್ಲಿವರೆಗೆ ನಾವು ಸುರಕ್ಷಿತ. ನಾವು ಪರಿಸರದ ನಿಯಮಗಳನ್ನ ಮೀರಿದ ದಿನ ಅದು ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತದೆ. ಸೇಡು ತೀರಿಸಿ ಕೊಳ್ಳುವ ಅದರ ಪ್ರಕ್ರಿಯೆಯನ್ನ ಅದು ಈಗಾಗಲೇ ಪ್ರಾರಂಭಿಸಿದೆ. ಅಲ್ಲದೆ ಇದೀಗ ಮತ್ತೊಂದು ಮಾತು ಕೇಳಿಬರುತ್ತಿದೆ. ನೇತ್ರಾವತಿ ನದಿ ನೀರನ್ನ ಕೋಲಾರಕ್ಕೆ ತಿರುಗಿಸುವುದು, ಶರಾವತಿಯ ನೀರನ್ನ ಮತ್ತೆಲ್ಲಿಗೋ ಕೊಂಡೊಯ್ಯುವುದು. ಸಮುದ್ರ ಸೇರುವ ನೀರು ವ್ಯರ್ಥ ಎಂದು ಹೇಳುವುದು. ಈ ನೀರನ್ನ ಇಲ್ಲಿಂದ

ಮತ್ತೆಲ್ಲಿಗೋ ಸಾಗಿಸುವ ಕೆಲಸ ನಕ್ಷೆಯ ಮೇಲೆ ಸುಲಭ. ಒಂದು ಗೆರೆ ಎಳೆದರಾಯಿತು. ಆದರೆ ಇದು ಕಾರ್ಯರೂಪಕ್ಕೆ ಇಳಿದಾಗ ಪರಿಣಾಮ ಏನಾದೀತು?

ನಾವು ಎಷ್ಟು ಅಣೆಕಟ್ಟುಗಳನ್ನ, ನಾಲೆಗಳನ್ನ ನಿರ್ಮಿಸ ಬೇಕು. ಕಾಡು ಮೇಡು ಎಂದು ನಷ್ಟವಾಗುವ ಪರಿಸರ ಎಷ್ಟು? ತೊಂದರೆಗೆ ಒಳಗಾಗುವ ಜನರ ಬವಣೆ ಯೋಚಿಸ ಬೇಡವೇ? ಹೊಸದಾಗಿ ತಲೆದೋರುವ ಸಮಸ್ಯೆಗಳ ಅರಿವು ನಮಗಿದೆಯೇ. ಶರಾವತಿಯಲ್ಲಿ ಒಂದು ನಾಲೆ ಕಟ್ಟಿಸಿದರು. ಅದರಲ್ಲಿ ಬಿಟ್ಟ ನೀರು ಅಕ್ಕಪಕ್ಕದ ಗದ್ದೆಗಳಲ್ಲಿ ಪುಟಿಯಿತು. ಕೊನೆಗೆ ಮತ್ತೊಂದು ಸುರಂಗ ತೆಗೆದರು. ಹೀಗೆ ಆಗಬಾರದಲ್ಲವೆ. ಆಸ್ಟ್ರೇಲಿಯಾದಲ್ಲಿ ನದಿ ತಿರುವಿಗೆಂದು ಕಟ್ಟಿದ ಅಣೆಕಟ್ಟುಗಳನ್ನ ಒಡೆದು ಹಾಕಿ ಮತ್ತೆ ಹಿಂದಿನಿಂದ ನದಿಗಳನ್ನ ಹರಿಯ ಬಿಡುತ್ತಿದ್ದಾರಂತೆ. ಅಲ್ಲಿ ಈ ಯೋಜನೆ ಹಲವು ಸಮಸ್ಯೆಗಳಿಗ ಕಾರಣವಾಗಿದೆಯಂತೆ. ಇಂತಹಾ ಯೋಜನೆಗಳು ಈ ದೇಶಕ್ಕೆ ಬೇಕೆ?

ನಮ್ಮ ದೇಶವನ್ನ ಹೊಸದಾಗಿ ನಿರ್ಮಿಸುವ ಸಂದರ್ಭದಲ್ಲಿ ಜವಾಹರಲಾಲ್ ನೆಹರು ಅವರು ಅಣೆಕಟ್ಟುಗಳನ್ನ ದೇಶದ ದೇವಾಲಯಗಳು ಅಂತ ಕರೆದರು. ಇಂದು ಈ ದೇವಾಲಯಗಳು ಜನರ ಪಾಲಿಗೆ ನರಕಗಳಾಗಿ ಪರಿಣಮಿಸಿವೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಏನು ಜನ ನಿರಾಶ್ರಿತರಾದರು ಅದರ ಮೂರು ಪಟ್ಟು ಜನ ಅಣೆಕಟ್ಟುಗಳಿಂದ ತೊಂದರೆಗೆ ಒಳಗಾಗಿದ್ದಾರೆ. ಅಣೆಕಟ್ಟುಗಳು ವಿವಿಧ ಸಮಸ್ಯೆಗಳಿಗೆ ಕಾರಣವಾಗಿವೆ. ಈ ವಿಷಯವನ್ನ ವೈಜ್ಞಾನಿಕವಾಗಿ ನೋಡಿ ಸಮಸ್ಯೆಗಳನ್ನ ಬಗೆಹರಿಸುವ ಯತ್ನ ಆಗಬೇಕಾಗಿದೆ. ಇದೀಗ ಪರಿಸರದ ಬಗ್ಗೆ ವ್ಯಾಪಕವಾದ ಚರ್ಚೆ ಪ್ರಾರಂಭವಾಗಿದೆ. ಈವರೆಗೆ ಕೇವಲ ಪರಿಸರವಾದಿಗಳು ಮಾತ್ರ ಯಾವ ವಿಷಯವನ್ನ ಕುರಿತು ಮಾತನಾಡುತ್ತಿದ್ದರೋ ಆ ವಿಷಯ ಈಗ ಸಾರ್ವತ್ರಿಕ ವಿಷಯವಾಗಿದೆ. ವಿಶ್ವಸಂಸ್ಥೆ ಪಶ್ಚಿಮ ಘಟ್ಟವನ್ನ ವಿಶೇಷ ಪ್ರದೇಶವೆಂದು ಸಾರಲು ಹೊರಟಾಗ ನಮ್ಮಲ್ಲಿ ಕೆಲ ರಾಜಕಾರಣಿಗಳು ತಮ್ಮ ವಿರೋಧವನ್ನ ವ್ಯಕ್ತ ಪಡಿಸಿದರು. ಡಾ. ಕಸ್ತೂರಿ ರಂಗನ್ ವರದಿ ಬಂದ ನಂತರ ಈ ವಿರೋಧ ಹೆಚ್ಚಾಗಿದೆ. ಕಸ್ತೂರಿ ರಂಗನ್ ವರದಿ ಬರಲು ಮುಖ್ಯ ಕಾರಣ ಪರಿಸರವನ್ನ ಬೇಕಾಬಿಟ್ಟಿಯಾಗಿ ನಾವು ನಾಶ ಮಾಡ ಹೊರಟಿದ್ದು. ಪರಿಸರ ಇರುವುದೇ ನಮಗಾಗಿ ಅನ್ನುವ ಭ್ರಮೆಯಲ್ಲಿ ನಾವು ಅದನ್ನ ದೋಚಲು ಹೊರಟೆವು. ಈ ಕೃತ್ಯದಿಂದ ಪರಿಸರ ಉಳಿಯುವುದೇ ಇಲ್ಲ ಅನ್ನುವಾಗ ಕಸ್ತೂರಿ ರಂಗನ್ ವರದಿ ಬಂದಿದೆ. ಈ ಹಿಂದೆ ಒಂದು ಕಡೆ ಪರಿಸರ ನಾಶವಾಯಿತು, ಇನ್ನೊಂದು ಕಡೆ ಬಂಗಾರದ ಊಟದ ತಟ್ಟೆಗಳು, ಹವಾ ನಿಯಂತ್ರಿತ ವಾಹನಗಳು, ಹೆಲಿಕ್ಯಾಪ್ಟರುಗಳು ಬಂದವು. ಗಣೀ ಲಾಬಿ ಧೇಶವನ್ನ ಆಳತೊಡಗಿತು. ಪರಿಸರವನ್ನ ಮುಟ್ಟಲೇ ಬೇಡ ಅನ್ನುವುದು ಅವೈಜ್ಞಾನಿಕ. ಏಕೆಂದರೆ ನಮಗೆ ಇರುವುದೊಂದೇ ಭೂಮಿ. ನಾವು ಇದನ್ನ ಬಿಟ್ಟು ಇರಲಾರೆವು, ಇದನ್ನ ತೊರೆದೂ ಬದುಕಲಾರೆವು. ಬಂಗಾರದ ಮೊಟ್ಟೆಯನ್ನ ಇಡುತ್ತಿದ್ದ ಕೋಳಿಯ ಹೊಟ್ಟೆ ಸೀಳಿದ ರೈತನ ಕತೆ ನಮಗೆ ಗೊತ್ತಿದೆ. ನಮ್ಮ ಅಭಿವೃದ್ಧಿಗಾಗಿ ಪಶ್ಚಿಮ ಘಟ್ಟವನ್ನ ದೋಚುವ ಕೆಲಸ ಆಗ ಬೇಕೇ? ಈಗ ಒಂದು ಮಧ್ಯದ ದಾರಿಯನ್ನ ನಾವು ಕಂಡು ಕೊಳ್ಳಬೇಕು. ಪ್ರಕೃತಿಯನ್ನ ಉಳಿಸಿ

ನಾವು ಉಳಿಯುವುದು. ಪ್ರಕೃತಿಯನ್ನ ಬಳಸಿ ಕೊಳ್ಳುವ ವಿಷಯ ಬಂದಾಗ ತುಸು ತಾಳ್ಮೆ, ಮುಂದಿನ ಜನಾಂಗದ ಮೇಲೆ ನಮ್ಮ ಹೊಣೆ, ಪ್ರಕೃತಿಯ ಬಗ್ಗೆ ಗೌರವ, ನಮ್ಮ ಸುಖದ ಮೇಲೆ ಹಿಡಿತ ಇರಿಸಿ ಕೊಂಡು ಯೋಚಿಸಿದರೆ ಇದು ಸಾಧ್ಯ ಎಂದು ನನಗೆ ಅನಿಸುತ್ತದೆ. ಇಂತಹಾ ಒಂದು ಸುವರ್ಣ ಮಾಧ್ಯಮದ ದಾರಿ ಹಿಡಿಯದಿದ್ದರೆ ನಾವೂ ಇಲ್ಲ ಈ ಪರಿಸರವೂ ಇಲ್ಲ.

* ದೇಶದಲ್ಲಿ ಕಾಣಿಸಿಕೊಂಡಿರುವ ಮತ್ತೊಂದು ಮನೋಭಾವವನ್ನ ನಾನಿಲ್ಲಿ ಪ್ರಸ್ತಾಪಿಸ ಬೇಕು. ಹಿಂದೆ ನಮ್ಮ ದೇಶದಲ್ಲಿ ಹುಟ್ಟುವ ಮಕ್ಕಳೆಲ್ಲ ಕೈ ಮುಷ್ಟಿಯನ್ನ ಕಟ್ಟಿ ಕೊಂಡೇ ಹುಟ್ಟುತ್ತಿದ್ದವು. ಇಂದು ಎಲ್ಲ ಮಕ್ಕಳೂ ಕೈ ಚಾಚಿ ಕೊಂಡೇ ಹುಟ್ಟುತ್ತಿವೆ. ತಾ ತಾ ತಾ ನಮ್ಮ ಜನರ ಮನೋಭಾವ ಆಗುತ್ತಿದೆ. ಈ ತಾ ತಾ ಅನ್ನುವ ಮನೋಭಾವಕ್ಕೆ "ಭಾಗ್ಯ" ಅನ್ನುವ ಹೆಸರನ್ನ ನಾವು ಇರಿಸಿದ್ದೇವೆ. ಸೈಕಲ್ ಭಾಗ್ಯ, ಅನ್ನ ಭಾಗ್ಯ, ಶಾದಿಭಾಗ್ಯ, ಪುಸ್ತಕ ಭಾಗ್ಯ, ಇಲ್ಲಿ ನಮ್ಮ ಆತ್ಮಾಭಿಮಾನದ ಕೊರತೆ ಇದೆ ಅಂತ ನಮಗೆ ಏಕೆ ಅನಿಸೋದಿಲ್ಲ. ಒಬ್ಬ ವಿದೇಶಿ ಆಫ್ರಿಕಾಗೆ ಹೋದನಂತೆ. ಜನ ಎಲ್ಲ ಕೈ ಕಟ್ಟಿ ಕೊಂಡು ಕುಳಿತಿದ್ದರು. ಏನು ಕುಳಿತಿದ್ದೀರಿ?" ಎಂದು ಆತ ಕೇಳಿದ. "ಗೆಣಸು ತೆಗೆಯ ಬೇಕಿತ್ತು" ಎಂದರು ಅವರು. "ತೆಗೆಯಿರಿ", "ಇಲ್ಲ ಭೂಕಂಪ ಆದರೆ ಗೆಣಸು ಮೇಲೆ ಬಂದು ಬೀಳುತ್ತದೆ, ನಾವು ಭೂಕಂಪದ ದಾರಿ ಕಾಯುತ್ತಿದ್ದೇವೆ" ಎಂದರು ಅವರು. ಅವರ ನಿರೀಕ್ಷೆಯಂತೆ ಭೂಕಂಪ ಆಯಿತು. ಗೆಣಸು ಮೇಲೆ ಬಂದು ಬಿದ್ದಿತು. ಆದರೂ ಅವರು ಕುಳಿತಿದ್ದರು. "ಮತ್ತೆ ಸುಮ್ಮನೆ ಕುಳಿತಿರಲ್ಲ" "ಅಲ್ಲ ಕಾಡು ಕಿಚ್ಚು ಬರಲಿ ಅಂತ ಕಾಯುತ್ತಿದ್ದೇವೆ, ಗೆಣಸು ಸುಡಬೇಕಲ್ಲ..."ಕಾಡು ಕಿಚ್ಚೂ ಬಂದಿತು. ಗೆಣಸು ಬೆಂಕಿಗೆ ಬೆಂದಿತು. ಆಗ ಅವರು ಅದನ್ನ ತಿಂದರು. ನಮ್ಮ ಕತೆ ಇದಕ್ಕಿಂತ ಬೇರೆ ಅಲ್ಲ.

ನಮ್ಮ ಸರಕಾರಗಳು ನಮ್ಮ ಜನರನ್ನ ನಿಷ್ಪ್ರಯೋಜಕರು, ಸೋಮಾರಿಗಳು, ಆತ್ಮಾಭಿಮಾನ ಇಲ್ಲದವರನ್ನಾಗಿ ಮಾಡುತ್ತಿದೆಯೆ ನಾವು ಯೋಚಿಸ ಬೇಕು. ಕೆಲ ವರ್ಷಗಳ ಹಿಂದೆ ಮುಂಬಯಿಯಲ್ಲಿ ಓರ್ವ ಫುಟ್ ಪಾತ ಹುಡುಗನಿಗೆ ಒಂದು ಹಣದ ಚೀಲ ದೊರೆಯುತ್ತದೆ. ಅದನ್ನ ಆತ ಹತ್ತಿರದ ಪೋಲೀಸ ಠಾಣೆಗೆ ತೆಗೆದು ಕೊಂಡು ಹೋಗಿ ಕೊಡುತ್ತಾನೆ. ಅಲ್ಲಿಯ ಅಧಿಕಾರಿ ಅದನ್ನ ತೆರೆದು ನೋಡಿದಾಗ ಅದರಲ್ಲಿ ಗರಿಗರಿಯಾದ ನೂರರ ಹತ್ತು ನೋಟುಗಳು ಇರುತ್ತವೆ. ಅಧಿಕಾರಿ ಅಚ್ಚರಿಯಿಂದ ಕೇಳುತ್ತಾನೆ "ಈ ಹಣ ನಿನಗೆ ಸಿಕ್ಕಿದ್ದನ್ನ ಯಾರೂ ನೋಡಿಲ್ಲ, ಇದನ್ನ ನೀನೇ ಇರಿಸಿಕೊಳ್ಳ ಬಹುದಿತ್ತಲ್ಲ" ಆಗ ಆ ಫುಟ್ ಪಾತ್ ಹುಡುಗ ಹೇಳುತ್ತಾನೆ "ಹರಾಮಕಾ ಪೈಸಾ ಮತ್ ಚಾಹಿಯೇ ಸಾಬ್".ಇವತ್ತು ಎಲ್ಲಿಯಾದರೂ ಯಾರಾದರೂ ಇಂತಹಾ ಮಾತನ್ನ ಆಡಿಯಾರೇ? ಇಂತಹಾ ಮಾತನ್ನ ಯಾರೂ ಆಡದ ಹಾಗೆ ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ ವ್ಯವಸ್ಥೆ ಒಂದು ವಾತಾವರಣವನ್ನ ನಿರ್ಮಾಣ ಮಾಡಿದೆ. ಇದನ್ನ ಸಮರ್ಥಿಸಿ ಕೊಳ್ಳುವ ಬುದ್ಧಿವಂತಿಕೆಯೂ ನಮ್ಮಲ್ಲಿದೆ

ಇದರ ಬಗ್ಗೆ ನಮಗೆ ಯಾಕೆ ನಾಚಿಕೆ ಆಗುವುದಿಲ್ಲ? ನಮ್ಮ ಗಣಿ ಮಾಫಿಯಾಗಳು, ಅರಣ್ಯ ಮಾಫಿಯಾಗಳು ಎಷ್ಟು ಬಲಶಾಲಿಯಾಗಿವೆ ಅಂದರೆ "ಹರಾಮಿ" ಹಣವನ್ನ ನಾನು ಮುಟ್ಟುವುದಿಲ್ಲ, ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಅನ್ನುವ ಯುವ ಅಧಿಕಾರಿಗಳನ್ನು ಹಸಿಹಸಿಯಾಗಿ ಕೊಲ್ಲುವಷ್ಟು ಸಮರ್ಥವಾಗಿವೆ. ಇಂತಹಾ ಕೊಲೆಗಳು ದಿನ ನಿತ್ಯ ನಡೆಯುತ್ತಿದ್ದರೂ ನಮ್ಮ ಜನ ಏನೂ ಆಗಿಲ್ಲ ಅನ್ನುವಂತೆ ಇದನ್ನ ನೋಡುತ್ತ ಕೂರುತ್ತಾರೆ. ಅಂದರೆ ನಮ್ಮ ನೈತಿಕ ಅಧೋಗತಿಗೆ ಏನು ಹೇಳಬೇಕು?

* ಗಾಂಧೀಜಿಯವರು ಒಂದು ಮಾತನ್ನ ಹೇಳುತ್ತಿದ್ದರು. "ನಮ್ಮ ದೇಶದ ಓರ್ವ ಹೆಣ್ಣು ಮಗಳು ನಿಶ್ಚಿಂತೆಯಿಂದ ಮಧ್ಯರಾತ್ರಿಯಲ್ಲಿ ಊರಿನ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವಂತಾದ ದಿನ ಬಂದಾಗ ಈ ದೇಶಕ್ಕೆ ಸ್ವಾತಂತ್ರ್ಯ ಬಂತು ಅಂತ ನಾನು ನಂಬುತ್ತೇನೆ". ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಅನ್ನುವ ಭ್ರಮೆಯಲ್ಲಿ ನಾವು ಇದ್ದೇವೆ. ಆದರೆ ನಮ್ಮ ಹೆಣ್ಣು ಮಕ್ಕಳು ಇಂದು ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ನಾವು ನೋಡಬೇಕು. ಅತ್ಯಾಚಾರ ದಿನ ನಿತ್ಯದ ಸುದ್ದಿ ಆಗುತ್ತಿದೆ. ನಮ್ಮ ಹೆಣ್ಣು ಮಕ್ಕಳು ರಾತ್ರಿ ಹೊತ್ತು ಬೇಡ ಹಗಲು ಹೊತ್ತಿನಲ್ಲಿ ಕೂಡ ಇವತ್ತು ಅಸುರಕ್ಷಿತರು. ಇದು ಆಧುನಿಕತೆಯ ಅತಿರೇಕವೇ? ನಮ್ಮ ಸಂಸ್ಕೃತಿ ಧರ್ಮಗಳ ಪತನವೇ? ಗಂಡಿನ ಸ್ವೇಛ್ಚಾಚಾರವೇ? ಹೆಣ್ಣಿನ ಬೆಳವಣಿಗೆಯನ್ನ ಸಹಿಸದ ಜನ ಮಾಡುತ್ತಿರುವ ಗದ್ದಲವೇ? ಟಿವಿ ಸಿನೀಮಾಗಳ ಪ್ರಭಾವವೇ? ಕಿರಿಯರನ್ನ ಸರಿದಾರಿಯಲ್ಲಿ ಕರೆದೊಯ್ಯದ ಹಿರಿಯರ ಬೇಜವಾಬ್ದಾರಿತನವೇ? ನನಗೆ ಗೊತ್ತಾಗುತ್ತಿಲ್ಲ. ಮೊದಲಿನಿಂದಲೂ ನಮ್ಮ ಹೆಣ್ಣು ವಿವಿಧ ಬಗೆಯ ಕಿರುಕುಳಕ್ಕೆ ಒಳಗಾದವಳು. ಆಧುನಿಕತೆ ಅವಳನ್ನ ಅವಳ ಶತಮಾನಗಳ ಸಂಕೋಲೆಯಿಂದ ಹೊರ ತಂದಿದೆ ಅಂತ ನಾನು ನಂಬಿದ್ದೆ ಆದರೆ ಆಕೆ ಇನ್ನೊಂದು ಬಗೆಯ ಶಾಪಕ್ಕೆ ಒಳಗಾಗಿರೋದು ನಿಜಕ್ಕೂ ವಿಷಾದದ ಸಂಗತಿ. ದಿನ ನಿತ್ಯ ನಡೆಯುತ್ತಿರುವ ಸಾಲು ಅತ್ಯಾಚಾರಗಳು ಕೂಡ ನಮ್ಮ ಸರಕಾರದ ಕಣ್ಣನ್ನ ತೆರೆಸುವುದಿಲ್ಲ. ನಮ್ಮ ಸ್ವಾಮಿ ಜಗದ್ಗುರುಗಳು ಇದರಿಂದ ವಿಚಲಿತರಾಗುವುದಿಲ್ಲ. 'ಅಯ್ಯಾ ಅಣ್ಣಾ ಅಂತ ಕರೆ ಎದಿರು ನಿಂತವ ಅತ್ಯಾಚಾರಕ್ಕೆ ಮುಂದಾಗುವುದಿಲ್ಲ' ಅನ್ನುವ ಉಪದೇಶ ಬಿಟ್ಟರೆ ಕಾರ್ಯಗತವಾಗ ಬಹುದಾದ ಯಾವುದೇ ಕ್ರಮ, ಮಾತು ಸರಕಾರದಿಂದ ಬಂದಿಲ್ಲ. ತನ್ನ ಮೇಲೆ ಒಂದು ಹುಲಿ ಆಕ್ರಮಣ ಮಾಡಿದಾಗ ಜಿಂಕೆ ಹೀಗೆಯೇ ಹೇಳುತ್ತದೇನೋ, ಆದರೆ ಹುಲಿ ದುಷ್ಟ ವ್ಯಾಘ್ರವೇ ಅಲ್ಲವೆ?" ಹೆಣ್ಣನ್ನ ನೋಡುವ ಸಮಗ್ರ ದೃಷ್ಟಿ ನಮ್ಮಲ್ಲಿ ಬದಲಾಗದಿದ್ದರೆ ಹೆಣ್ಣಿನ ಬದುಕಿಗೆ ಭರವಸೆ ಇಲ್ಲ. ಅವಳನ್ನ ಒಪ್ಪಿಕೊಳ್ಳುವ, ಸ್ವೀಕರಿಸುವ, ಸಹಿಸಿ ಕೊಳ್ಳುವ, ಯಥಾ ಅವಳನ್ನ ಗೌರವಿಸುವ ಮನೋಭಾವ ಎಲ್ಲರಲ್ಲಿಬಾರದೆ ಹೆಣ್ಣಿಗೆ ಇವತ್ತಿನ ಆತಂಕ, ಭೀತಿ, ಕಳವಳ, ದೂರವಾಗುವುದಿಲ್ಲ. ಹೆಣ್ಣಿಗೆ ನೀಡಬೇಕಾದ ಸ್ಥಾನ ನೀಡದಿದ್ದರೆ ನಮ್ಮ ಸಮಾಜಕ್ಕೆ ಪಾರ್ಶ್ವವಾಯು ಹೊಡೆಯುತ್ತದೆ.

* ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳ ಬಗ್ಗೆ ಸದಾ ಒಂದು ತಕರಾರಿದೆ. ಈ ಬಾರಿ ಯಾವುದೇ ನಿರ್ಣಯ ಕೈಕೊಳ್ಳ ಬೇಡಿ, ಅದು ನೆರವೇರುವುದಿಲ್ಲ ಅನ್ನುವ ಸಲಹೆ ನನಗೆ ಬಂದಿದೆ. ಸಮ್ಮೇಳನಗಳಲ್ಲಿ ನಿರ್ಣಯಗಳನ್ನ ಕೈಕೊಳ್ಳೋದು ಒಂದು ಪದ್ಧತಿ. ಎಷ್ಟೋ ನಿರ್ಣಯಗಳು ಅನುಷ್ಠಾನಗೊಂಡಿವೆ. ಪರಿಷತ್ತು ಕೈಕೊಂಡ ನಿರ್ಣಯಗಳನ್ನ ಯಾವ ಕ್ರಮದಲ್ಲಿ ಸರಕಾರಕ್ಕೆ ಸಲ್ಲಿಸುತ್ತೆ ನನಗೆ ಗೊತ್ತಿಲ್ಲ, ಸರಕಾರದಲ್ಲಿ ವಿವಿಧ ವಿಭಾಗಗಳು ಇರುತ್ತವೆ. ಆ ಆ ವಿಭಾಗಕ್ಕೆ ಪ್ರತ್ಯೇಕವಾಗಿ ನಿರ್ಣಯಗಳು ತಲುಪ ಬೇಕು. ಆ ಇಲಾಖೆ ಅದನ್ನ ಪರಿಶೀಲಿಸಿ ಕ್ರಮ ಕೈಕೊಳ್ಳ ಬೇಕು. ಆ ನಿರ್ಣಯ ಸರಕಾರದ ಪಾಲಿಸಿಗಳಿಗೆ ಅನುಗುಣವಾಗಿರ ಬೇಕು. ಆ ನಿರ್ಣಯಗಳ ಹಿಂದೆ ಬೆನ್ನು ಹತ್ತಿ ಹೋಗುವ ಜನ ಇರಬೇಕು. ಸರಕಾರ ಸಮ್ಮೇಳನಗಳ ನಿರ್ಣಯಗಳನ್ನ ಅನುಷ್ಠಾನಕ್ಕೆ ತರುವ ಬಗ್ಗೆ ಒಂದು ಹೊಣೆಯನ್ನ ಹೊರಬೇಕು. ಸಮ್ಮೇಳನಕ್ಕೆ ಕೋಟಿ ಹಣ ನೀಡುವ ಸರಕಾರ ಅಷ್ಟಕ್ಕೆ ಸುಮ್ಮನಿರ ಬಾರದು. ತನ್ನ ಓರ್ವ ಅಧಿಕಾರಿಯನ್ನ ನಿಯೋಜಿಸಿ ಸರಕಾರಕ್ಕೆ ಇಡೀ ಸಮ್ಮೇಳನದಲ್ಲಿ ಏನೇನು ಸಲಹೆ, ಸೂಚನೆ ಬರುತ್ತೆ ಅನ್ನುವುದನ್ನ ದಾಖಲೆ ಮಾಡ ಬೇಕು. ಈ ಎಲ್ಲ ವಿಚಾರಗಳು ಜಾರಿ ಆಗುವ ಹಾಗೆ ಆ ಅಧಿಕಾರಿ ಮಾಡ ಬೇಕು. ಅಲ್ಲದೆ ಕನ್ನಡ ಸಾಹಿತ್ಯ ಸಮ್ಮೇಲನ ಏನೋ ಒಂದು ಜಾತ್ರೆ ಅನ್ನುವ ಅಭಿಪ್ರಾಯ ಸರಕಾರದ್ದಾಗಬಾರದು. ದೇಶ, ಭಾಷೆಯನ್ನ ಜನಜೀವನವನ್ನ ಗಮನದಲ್ಲಿ ಇರಿಸಿ ಕೊಂಡು ನಡೆಸುವ ಈ ಸಮ್ಮೇಳನಕ್ಕೆ ಸರಕಾರ ಗೌರವ, ಪ್ರಾತಿನಿಧ್ಯವನ್ನ ನೀಡ ಬೇಕು. ಇಲ್ಲಿ ಕೇಳಿಬರುವ ವಿಚಾರಗಳಿಗೆ ಸರಕಾರದ ಮುದ್ರೆ ಬೀಳಬೇಕು.

* ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಏರ ಬೇಕಾದ ಮಟ್ಟವನ್ನ ಏರಿಲ್ಲ. ಒಂದು ಕಾಲದಲ್ಲಿ ನಾಡಿನ ಎಲ್ಲ ಹಿರಿಯ ಲೇಖಕರೂ ಮಕ್ಕಳಿಗಾಗಿ ಬರೆಯುವುದನ್ನ ಒಂದು ಪವಿತ್ರ ಕೆಲಸ ಅಂತ ತಿಳಿದರು. ಕುವೆಂಪು, ರಾಜರತ್ನಂ, ಕಾರಂತ ಕಸ್ತೂರಿ, ಹೊಯ್ಸಳ ಇವರೆಲ್ಲ ಮಕ್ಕಳಿಗಾಗಿ ಬರೆದರು. ಆದರೆ ಯಾಕೋ ಇವತ್ತಿನ ಅಕ್ಯಾಡೆಮಿಶೀಯನ್ಗಳು ಮಕ್ಕಳಿಗಾಗಿ ಬರೆಯುವುದು ಅವಮಾನ ಅಂತ ತಿಳಿದಿದ್ದಾರೆ. ಆದರೂ ಕೆಲ ಲೇಖಕರು ಬರೆಯುತ್ತಿರುವುದು ಸಂತೋಷ. ಆದರೆ ಈ ಕ್ಷೇತ್ರ ಇನ್ನೂ ವಿಸ್ತಾರವಾಗ ಬೇಕು. ಹೊಸ ಪ್ರಯೋಗ ಆಗ ಬೇಕು. ಪೋಷಕರು ಮಕ್ಕಳಿಗೆ ಮೊಬೈಲ ಟ್ಯಾಬ್ ಕೊಡಿಸುವುದರ ಬದಲು ಪುಸ್ತಕ ಕೊಡಿಸಬೇಕು. ಜೊತೆಗೆ ಆ ಪುಸ್ತಕದ ಬಗ್ಗೆ ಒಂದು ಸಣ್ಣ ವಿವರವನ್ನ ಮಗುವಿಗೆ ನೀಡಿ ಪುಸ್ತಕ ಕೊಟ್ಟರೆ ತುಂಬಾ ಉಪಯೋಗ. ಹಿಂದೆ ಮನೆಗೆ ಬರುತ್ತಿದ್ದ ಚಂದಾಮಾಮವನ್ನ ಮೊದಲು ನಮ್ಮ ಅಜ್ಜ ಓದಿ ನಂತರ ಆತ ಮಕ್ಕಳಿಗೆ ಅದನ್ನ ಕೊಡುತ್ತಿದ್ದ. ಈ ಕ್ರಮವನ್ನ ನಾವು ಅನುಸರಿಸಬೇಕು. ಶಾಲೆಗಳಲ್ಲಿ ಮಕ್ಕಳಿಗೆ ಪುಸ್ತಕಗಳನ್ನ ನೀಡುವ ಪದ್ದತಿ ನಿಂತು ಹೋಗಿದೆ. ಸರಕಾರ ಶಾಲಾ ಲೈಬ್ರರಿಗಳನ್ನ ಸಜ್ಜು ಗೊಳಿಸಿದರೂ ಪುಸ್ತಕ ಕಳೆದು ಹೋಗುತ್ತೆ, ಹರಿಯುತ್ತದೆ ಅನ್ನುವ ಕಾರಣಕ್ಕೆ ಪುಸ್ತಕಗಳನ್ನ ಬೀರುವಿನಲ್ಲಿ ಇರಿಸಿ ಬೀಗ ಹಾಕಲಾಗುತ್ತದೆ ಅನ್ನುವ ಮಾತು ಕೇಳಿ ಬಂದಿದೆ. ಇದು ತಪ್ಪು. ಪುಸ್ತಕ ಹರೀಬೇಕು, ಕಳೆದು ಹೋಗ ಬೇಕು.

ನಮ್ಮ ಮಕ್ಕಳು ಪುಸ್ತಕಗಳೊಡನೆ ತಮ್ಮ ಸಂಬಂಧವನ್ನ ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗ ಬೇಕು. ನಮಗೆ ಸ್ವಾತಂತ್ರ್ಯ ದೊರೆತು ೬೦ ವರ್ಷ ಕಳೆದು ಹೋದರೂ ಶಿಕ್ಷಣದ ಬಗ್ಗೆ ಸ್ಪಷ್ಟವಾದ ಒಂದು ನಿರ್ಧಾರಕ್ಕೆ ನಾವು ಬಂದಿಲ್ಲ. ಪ್ರತಿ ವಿದ್ಯಾ ಮಂತ್ರಿ ಬಂದ ಕೂಡಲೇ ನಮ್ಮ ಶಿಕ್ಷಣ ನೀತಿ ಬದಲಾಗುತ್ತದೆ. ವಿವಿಧ ಪ್ರಯೋಗಗಳಿಗೆ ನಮ್ಮ ಮಕ್ಕಳು ತುತ್ತಾಗುತ್ತಿದ್ದಾರೆ. ಈ ಸ್ಥಿತಿ ತಪ್ಪ ಬೇಕು. ಮಕ್ಕಳಿಗೆ ಇಂಗ್ಲೀಷನ್ನ ಕಲಿಸುವ ವಿಷಯದಲ್ಲಿ ಸಾಹಿತಿಗಳ ತಕರಾರಿಲ್ಲ. ಆದರೆ ಇಂಗ್ಲೀಷಿನಲ್ಲಿಯೇ ಎಲ್ಲ ಇದೆ, ಅದೇ ಸರ್ವ ಶ್ರೇಷ್ಠ, ಅದು ಬಾರದೆ ಇದ್ದರೆ ನಮ್ಮ ಬದುಕೇ ವ್ಯರ್ಥ ಅನ್ನುವ ನಂಬಿಕೆಯನ್ನ ನಮ್ಮ ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕೆಲಸವನ್ನ ನಾವು ಮಾಡಬಾರದು. ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತೆ. ನಮ್ಮ ಮಕ್ಕಳು "ಅಜ್ಜನ ಕೋಲಿದು ನನ್ನಯ ಕುದುರೆ" ಹೇಳಲಿ. "ಬಾರೋ ಬಾರೋ ಮಳೆರಾಯ ಹೇಳಲಿ" ಈ ಪದ್ಯಗಳನ್ನ ಹೇಳುವಾಗ ಅವು ರೋಮಾಂಚನಗೊಳ್ಳುತ್ತವೆ. ಆದರೆ ಅವರಿಗೆ ಮುದ ನೀಡದ "ಬ್ಯಾಬ್ಯಾ ಬ್ಲಾಕ್ ಶೀಪ್" "ಗೋ ಅವೇ ಗೋ ಅವೇ ರೈನ" ಅನ್ನುವಂತಹಾ ಜೀವ ವಿರೋಧಿ ಹಾಡುಗಳನ್ನ ಮಕ್ಕಳಿಗೆ ಕಲಿಸ ಬೇಡಿ.

* ನಾವು ನಮ್ಮ ಬಗ್ಗೆಯೇ ತುಂಬಾ ಮಾತನಾಡುತ್ತೇವೆ, ನಮ್ಮ ಅಭಿವೃದ್ಧಿ, ನಮ್ಮ ಪ್ರಗತಿಯ ಚಿಂತೆ ನಮಗೆ. ಆದರೆ ನಮ್ಮ ಜೊತೆಯಲ್ಲಿ ಹೊರನಾಡ ಕನ್ನಡಿಗರು, ಗಡಿನಾಡ ಕನ್ನಡಿಗರು ಇದ್ದಾರೆ. ಇವರು ಕನ್ನಡಿಗರಾಗಿ ಇರಲಿಕ್ಕೆ ಒಂದು ಹೋರಾಟವನ್ನೇ ನಡೆಸಿದ್ದಾರೆ. ಬೇರೆ ರಾಜ್ಯಗಳಲ್ಲಿ ಕನ್ನಡಿಗರ ಸ್ಥಿತಿಗತಿಗಳು ತೃಪ್ತಿಕರವಾಗಿ ಇಲ್ಲ. ಇವರ ಮಕ್ಕಳಿಗೆ ಅಲ್ಲಿ ಕನ್ನಡ ಶಾಲೆಗಳಿಲ್ಲ, ವಿದ್ಯಾರ್ಥಿಗಳಿಗೆ ಅಲ್ಲಿಯ ಸರಕಾರ, ಜನರ ಬೆಂಬಲವಿಲ್ಲ. ಕೇರಳದಲ್ಲಿ ಕನ್ನಡ ಕಾರ್ಯಕ್ರಮಗಳ ನೋಟೀಸನ್ನ ಬೋರ್ಡುಗಳ ಮೇಲೆ ಹಾಕಿದರೆ ಅದನ್ನ ಹರಿದು ಹಾಕುವಂತಹಾ ಪರಿಸ್ಥಿತಿ ಇದೆ. ಇಲ್ಲಿ ಬೇರೆ ಭಾಷಿಕರ ಮೇಲೆ ಏನಾದರೂ ಹಲ್ಲೆಯಾದರೆ ಅಲ್ಲಿಯ ಕನ್ನಡ ಜನ ಆತಂಕದಿಂದ ಬದುಕುವ ಸ್ಥಿತಿ ಇದೆ. ಅಲ್ಲಿಯ ಸರಕಾರಗಳು ಗಡಿನಾಡ ಕನ್ನಡಿಗರ, ಹೊರನಾಡ ಕನ್ನಡಿಗರ ಹಿತವನ್ನ ಕಾಪಾಡುವುದಿಲ್ಲ. ಕರ್ನಾಟಕದ ಸರಕಾರ ಕೂಡ ಎಷ್ಟೋ ವಿಷಯಗಳಲ್ಲಿ ತಮ್ಮನ್ನ ದೂರ ಇರಿಸಿದೆ ಅನ್ನುವ ವ್ಯಥೆ ಇವರದ್ದು. ಗಡಿನಾಡು ಹಾಗು ಹೊರನಾಡ ಕನ್ಮಡಿಗರಿಗೆ ಆಗುತ್ತಿರುವ ಅನ್ಯಾಯಗಳ ಒಂದು ಯಾದಿಯೇ ಇದೆ. ಅಲ್ಲಿಯ ಪ್ರತಿಭಾವಂತರನ್ನ ಗುರುತಿಸದೇ ಇರುವುದು, ವಿದ್ಯಾರ್ಥಿಗಳ ಪ್ರವಾಸ, ಅಶಕ್ತರಿಗೆ ಮಾಶಾಸನ ಅಲ್ಲಿ ಕನ್ನಡ ಜಾನಪದ ಉತ್ಸವ, ಕವಿ ಗೋಷ್ಠಿ, ಉಪನ್ಯಾಸಗಳ ಏರ್ಪಡೆ, ಈ ಕನ್ನಡಿಗರು ಬರೆದ ಪುಸ್ತಕಗಳ ಪ್ರಕಟಣೆ, ಶಾಸ್ತ್ರೀಯ ಕನ್ನಡ ಸ್ಥಾನಮಾನದಿಂದ ದೊರೆಯುವ ಸೌಲಭ್ಯಗಳನ್ನ ಇವರಿಗೆ ನೀಡುವುದು ಇಂತಹಾ ಹಲವು ಕೆಲಸಗಳು ಆಗಬೇಕಿದೆ. ಅಲ್ಲಿಯ ಸರಕಾರಗಳು ಇವರು ಕನ್ನಡಿಗರು ಅನ್ನುವ ಕಾರಣಕ್ಕೆ ಇವರನ್ನ ದೂರ ಮಾಡಿದರೆ ಇವರು ಗಡಿನಾಡಿನವರು, ಇಲ್ಲ ಹೊರನಾಡಿನವರು ಅನ್ನುವ ಕಾರಣಕ್ಕೆ ನಮ್ಮ ಆಡಳಿತದಿಂದ ಹೊರಗೆ ಉಳಿಯುತ್ತಾರೆ.

* ಕರ್ನಾಟಕ ಪ್ರಾಂತ್ಯ ರಚನೆಯಾಗುವ ಮುನ್ನ ನಮ್ಮ ನಾಡು ಬೇರೆ ಬೇರೆ ಪ್ರಾಂತ್ಯಗಳ ಜೊತೆಯಲ್ಲಿ ಹರಿದು ಹೋಗಿತ್ತು. ಆಗ ನಾಡಿನ ಕೆಲ ಪ್ರದೇಶಗಳನ್ನ ಗುರುತಿಸುವಾಗ ಹೈದರಾಬಾದ ಕರ್ನಾಟಕ, ಮದರಾಸು ಕರ್ನಾಟಕ, ಮುಂಬಯಿ ಕರ್ನಾಟಕ ಎಂದೆಲ್ಲ ನಾವು ಕರೆಯುತ್ತಿದ್ದೆವು. ಹೀಗೆ ಕರೆಯುವ ಈ ಪರಿಪಾಠ ಇಂದಿಗೂ ಮುಂದುವರೆದಿರುವುದು ಅಷ್ಟೊಂದು ಸೂಕ್ತವಲ್ಲ. ಪದೇ ಪದೇ ಈ ಬಗೆಯ ಮಾತುಗಳು ಮನಸ್ಸಿಗೆ ರೇಜಿಗೆಯನ್ನ ಉಂಟು ಮಾಡುತ್ತವೆ. ನಾವೆಲ್ಲ ಒಂದು ಅನ್ನುವಾಗ ಈ ಭಿನ್ನತೆಗೆ ಅವಕಾಶ ಕೊಡಬಾರದು. ಅಂತೆಯೇ ಇದೀಗ ಕನ್ನಡ ನಾಡನ್ನ ಒಡೆಯುವ ಮಾತು ಕೇಳಿ ಬರುತ್ತಿದೆ. ಒಂದು ದೀರ್ಘ ಹೋರಾಟದ ಮೂಲಕ ಪಡೆದ ನಾಡು ಇದು. ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರ ರಾಯರು. ಮುದವೀಡು ಕೃಷ್ಣರಾಯರು, ಯಾವುದೇ ಅಧಿಕಾರದ ಆಸೆ ಇಲ್ಲದೆ, ಮಕ್ಕಳು ಮೊಮ್ಮಕ್ಕಳಿಗೆ ಆಸ್ತಿ ಮಾಡದೆ, ಯಾವುದೇ ಅನ್ಯಾಯವನ್ನ ಮಾಡದೆ ಕಟ್ಟಿದ ನಾಡು. ಇದನ್ನ ನಾವು ಹಾಗೆಯೇ ಇರಿಸಿ ಕೊಳ್ಳ ಬೇಕು. ಆದರೆ ನಾಳೆ ತಮಗೆ ಮಂತ್ರಿಗಿರಿ ದೊರೆಯ ಬೇಕೆಂದೋ, ಇಲ್ಲ ತಮ್ಮ ಬೇಳೆ ಬೇಯಿಸಿ ಕೊಳ್ಳ ಬೇಕೆಂದೋ ಕೆಲವರು ಬೇರೆ ಬೇರೆ ರಾಜ್ಯಗಳ ಮಾತನ್ನ ಆಡುತ್ತಿದ್ದಾರೆ. ೧೯೫೬ರಲ್ಲಿ ಈ ನಾಡು ನವ ಮೈಸೂರು ಅನ್ನುವ ಹೆಸರಿನಲ್ಲಿ ತಲೆ ಎತ್ತಿತು, ಜನರ ಅಭಿಪ್ರಾಯ ರೂಪಿಸಿ ದೇವರಾಜು ಅರಸು ಅವರು ಇದಕ್ಕೆ ಕರ್ನಾಟಕ ಅನ್ನುವ ಹೆಸರನ್ನ ಇರಿಸಿದರು. ಇದು ಹಾಗೇ ಇರಲಿ. ಮತ್ತೆ ಒಡಕು ಬೇಡ. ಮತ್ತೆ ಈ ನಾಡು ಒಡೆದರೆ ನಾವು ದುರ್ಬಲರಾಗುತ್ತೇವೆ. ನಮ್ಮ ದನಿ ಉಡುಗಿ ಹೋಗುತ್ತದೆ. ಅವರಿಗೆ ರಾಜ್ಯ ಕೊಟ್ಟರೆ ನಮಗೂ ಕೊಡಿ ಎಂದು ವೆಂಕ ನಾಣಿ ಸೀನರೆಲ್ಲ ಎದ್ದು ನಿಲ್ಲುತ್ತಾರೆ. ಗಡಿ ಸಮಸ್ಯೆ, ಜಲ ಸಮಸ್ಯೆಗಳು ಹೆಚ್ಚುತ್ತವೆ, ದೇಶದ ಸಂಪತ್ತು ವಿಂಗಡಣೆ ಆಗುತ್ತದೆ, ಇಡೀ ರಾಷ್ಟ್ರ ಒಂದಾಗಿ ಬಾಳದೇ ಹೋದ ಕನ್ನಡಿಗರ ದುಸ್ಥಿತಿಗೆ ಮರಗುತ್ತದೆ. ಇವತ್ತು ತೆಲಂಗಾಣಕ್ಕೆ ಬಂದಿರುವ ಪರಿಸ್ಥಿತಿ ನಮಗೆ ಒಂದು ಪಾಠವಾಗ ಬೇಕು. ಇಲ್ಲಿ ಸರಕಾರದ ಒಂದು ಹೊಣೆ ಇದೆ. ಈ ಬಗೆಯ ಪ್ರತ್ಯೇಕತೆಯ ಕೂಗು ಏಕೆ ಹುಟ್ಟುತ್ತದೆ ಎಂಬ ಬಗ್ಗೆ ಸರಕಾರ ಪರಿಶೀಲಿಸ ಬೇಕಿದೆ. ನಾಡಿನ ಯಾವುದೇ ಪ್ರದೇಶದ ಜನ ನಮ್ಮನ್ನ ಯಾರೂ ಕೇಳುತ್ತಿಲ್ಲ, ಸಿಗಬೇಕಾದ ಸೌಲಭ್ಯಗಳು ನಮಗೆ ಸಿಗುತ್ತಿಲ್ಲ ಎಂದು ಕೊರಗುವಂತಹಾ ಪರಿಸ್ಥಿತಿ ಏರ್ಪಡದ ಹಾಗೆ ನೋಡಿ ಕೊಳ್ಳ ಬೇಕಿದೆ.

* ಇಂದಿನ ಸರಕಾರ ಬಂದ ಕೂಡಲೇ ನಮ್ಮ ಮುಖ್ಯ ಮಂತ್ರಿಗಳು ಬೆಂಗಳೂರಿನ ಸಾಹಿತಿಗಳನ್ನ ಹೋಗಿ ಭೇಟಿಯಾದದ್ದು ಒಂದು ಒಳ್ಳೆಯ ಸೂಚನೆ. ಇದಕ್ಕಾಗಿ ನಾನು ಮುಖ್ಯ ಮಂತ್ರಿಗಳನ್ನ ಅಭಿನಂದಿಸುತ್ತೇನೆ. ಆದರೆ ಆ ನಂತರದ ದಿನಗಳಲ್ಲಿ ಓರ್ವ ಲೇಖಕನ ಮೇಲೆ ಪೋಲೀಸ್ ಕ್ರಮ ಕೈಕೊಂಡಿದ್ದು ಕಸಿವಿಸಿಯ ವಿಷಯ. ಇದು ಲೇಖಕರನ್ನ ನಡೆಸಿ ಕೊಳ್ಳುವ ರೀತಿಯಲ್ಲ. ಈ ದೇಶ ಶತಮಾನಗಳಿಂದ ಭಿನ್ನಾಭಿಪ್ರಾಯಗಳನ್ನ, ಅಭಿಪ್ರಾಯ ಬೇಧಗಳನ್ನ ಜೀರ್ಣಿಸಿ ಕೊಂಡು ಬಂದಿದೆ. ನಾವು ಮತ್ತೊಬ್ಬರ ಅಭಿಪ್ರಾಯವನ್ನ ಒಪ್ಪುವುದು ಬಿಡುವುದು ಬೇರೆ ಆದರೆ

ಕೊನೆಯ ಪಕ್ಷ ಇನ್ನೊಬ್ಬರ ಅಭಿಪ್ರಾಯವನ್ನ ಕೇಳುವ ತಾಳ್ಮೆಯಾದರೂ ನಮಗೆ ಬೇಕಲ್ಲ. ಇದೂ ಇಲ್ಲ ಅಂದರೆ ಬೀದಿಯಲ್ಲಿ ನಡೆಯುವ ಗೂಳಿ ಕಾಳಗಕ್ಕೂ ನಮ್ಮ ವರ್ತನೆಗೂ ವ್ಯತ್ಯಾಸ ಇಲ್ಲ ಎಂದಾಗುತ್ತದೆ.

* ಇತ್ತೀಚೆಗೆ ನಮ್ಮ ಸರಕಾರ ಮೂಢ ನಂಬಿಕೆಯ ವಿರುದ್ಧ ಒಂದು ಯುದ್ಧವನ್ನೇ ಸಾರಿತು. ಸಾಕಷ್ಟು ಕಡೆ ಇದರ ಬಗ್ಗೆ ಚರ್ಚೆ ಆಯಿತು, ಆಗುತ್ತಿದೆ. ಇದು ಆಗಬೇಕಾದ ಒಂದು ಕೆಲಸ. ಹಿಂದೆ ಚಂದ್ರಗುತ್ತಿಯಲ್ಲಿ ಬೆತ್ತಲೆ ಸೇವೆ ನಡೆಯುತ್ತಿತ್ತು, ಸರಕಾರ ಕಾನೂನಿನ ಮೂಲಕ ಅದನ್ನ ತಡೆದಿದೆ. ಮಹಾರಾಷ್ಟ್ರದಲ್ಲಿ ಇಂತಹಾ ಒಂದು ಕಾನೂನು ಬಂದಿದೆ ಎಂದು ಕೇಳಿದೆ ಆದರೆ ಅದರ ವಿವರ ನನಗೆ ದೊರೆತಿಲ್ಲ. ಇಲ್ಲಿ ಕೂಡ ಜೀವ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ, ಮನುಷ್ಯನನ್ನ ಕೆಳಹಂತಕ್ಕೆ ತರುವ, ಅವನನ್ನ ಇನ್ನೊಬ್ಬನ ಪಾದದ ಕೆಳಗೆ ಬೀಳಿಸುವ ಹಲವು ನಂಬಿಕೆ ಆಚರಣೆ ಸಂಪ್ರದಾಯಗಳು ಇವೆ. ಇದು ಈ ಧರ್ಮ ಆ ಧರ್ಮ ಅಂತ ಅಲ್ಲ. ಎಲ್ಲ ಧರ್ಮಗಳಲ್ಲೂ ಈ ಸಂಪ್ರದಾಯಗಳು ಇವೆ. ಇವು ನಿಲ್ಲಬೇಕು. ಆದರೆ ಇದು ಧಿಡೀರನೆ ಆಗುವ ಕೆಲಸವಲ್ಲ. ಜನರಲ್ಲಿ ಆತ್ಮ ವಿಶ್ವಾಸ, ವೈಜ್ಞಾನಿಕ ಮನೋಭಾವ, ಸ್ಪಷ್ಟವಾಗಿ ಚಿಂತಿಸುವ ಶಕ್ತಿ, ಬದುಕನ್ನ ಒಂಟಿಯಾಗಿ ನಿಂತು ಎದುರಿಸುವ ಧೀಮಂತಿಕೆ ಬಂದರೆ ಜನ ತಾವಾಗಿ ಈ ಮೌಢ್ಯದಿಂದ ದೂರವಾಗುತ್ತಾರೆ. ಮುಖ್ಯವಾಗಿ ನಮ್ಮ ನಾಯಕರು, ಧರ್ಮಾಧಿಕಾರಿಗಳು, ಸಮಾಜದ ಮುಂದುವರೆದ ವರ್ಗ, ವಿದ್ಯಾವಂತರು ರಿಪೇರಿಯಾದರೆ ಸಮಾಜದ ರಿಪೇರಿ ಆದ ಹಾಗೆ. ಇಲ್ಲೊಂದು ಅಂಶವನ್ನ ನಾವೆಲ್ಲ ಗಮನಿಸಬೇಕು. ಜನ ತಾವು ಒಪ್ಪಿ ಕೊಂಡಿರುವ ಆಚರಣೆಗಳನ್ನ ಸುಲಭವಾಗಿ ಬಿಟ್ಟು ಕೊಡುವುದಿಲ್ಲ. ಬೇರೆಯವರು ಅದನ್ನ ಟೀಕೆ ಮಾಡಿದಷ್ಟೂ ಅದಕ್ಕೆ ಬಲವಾಗಿ ಅಂಟಿಕೊಳ್ಳುತ್ತಾರೆ. ಈ ಸೂಕ್ಷ್ಮವಾದ ಕೆಲಸವನ್ನ ಎಚ್ಚರಿಕೆಯಿಂದ ಮಾಡಬೇಕು. ಶ್ರೀ ನಾರಾಯಣ ಗುರುಗಳು ಬಹಳ ಅಪರೂಪದ ಸಮಾಜ ಸುಧಾರಕರು. ಅವರು ಮೊದಲು ದೇವಾಲಯಗಳನ್ನ ಕಟ್ಟಲಿಕ್ಕೆ ಹೊರಟರು ನಂತರ ದೇವಾಲಯ ಬಿಟ್ಟು ಶಾಲೆಗಳನ್ನ ನಿರ್ಮಿಸಿದರು. ಇದು ಪ್ರಯೋಜನಕಾರಿ ಅಂತ ಅವರಿಗೆ ಅನಿಸಿತು. ಜನರಿಗೆ ನೀಡುವ ನಿಜವಾದ ಶಿಕ್ಷಣ ಅವರ ಬದುಕನ್ನ ಬದಲಾಯಿಸುತ್ತದೆ. ಈ ನಿಟ್ಟಿನಲ್ಲಿ ಸರಕಾರ ಯೋಚಿಸಬೇಕು.

* ಶಿಕ್ಷಣ ಅಂದಾಗ ನನಗೆ ನೆನಪಾಗುವುದು ನಮ್ಮ ವಿಶ್ವವಿದ್ಯಾಲಯಗಳು. ಒಂದು ಕಾಲದಲ್ಲಿ ಇಡೀ ಕನ್ನಡ ನಾಡಿನಲ್ಲಿ ಎರಡೇ ಎರಡು ವಿಶ್ವವಿದ್ಯಾಲಯಗಳು ಇದ್ದವು. ಮೈಸೂರು ಹಾಗು ಕರ್ನಾಟಕ ವಿ.ವಿ. ಗಳು ಚೆನ್ನಾಗಿಯೇ ಕೆಲಸ ಮಾಡುತ್ತಿದ್ದವು. ಅಲ್ಲಿ ಪ್ರಕಾಂಡ ಪಂಡಿತರು, ವಿದ್ವಾಂಸರು, ನಾಡು ನುಡಿಯ ನಿಜವಾದ ಅಭಿಮಾನಿಗಳು ಇದ್ದರು. ಪ್ರಚಾರೋಪನ್ಯಾಸಗಳ ಮೂಲಕ ಹಳ್ಳಿಗಳನ್ನ ಈ ವಿ.ವಿ.ಗಳು ಮುಟ್ಟುತ್ತಿದ್ದವು. ಪುಸ್ತಕ ಪತ್ರಿಕೆಗಳ ಮೂಲಕ ಜನಜಾಗೃತಿಯನ್ನ ಉಂಟು ಮಾಡುತ್ತಲಿದ್ದವು. ಹೊರನಾಡಿನಲ್ಲಿ ಈ ವಿವಿ. ಗಳ ಬಗ್ಗೆ ತುಂಬಾ

ಗೌರವವಿತ್ತು. ಇಂದು ಹಲವಾರು ವಿವಿ.ಗಳಿವೆ, ಹೊಸದಾಗಿ ಕೆಲವು ಹುಟ್ಟಿ ಕೊಳ್ಳುತ್ತಿವೆ. ಒಳಜಗಳ, ಕಾಲು ಹಿಡಿದು ಎಳೆಯುವುದು, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪೈಪೋಟಿ, ಗುಂಪುಗಾರಿಕೆ, ಕೋಮು ಕಲಹ, ಅಶಿಸ್ತು, ಈ ಬಗೆಯ ಹಲವು ಶಾಪಗಳು ನಮ್ಮ ಇಂದಿನ ವಿವಿ.ಗಳನ್ನ ಕಾಡುತ್ತಿದೆ. ಹೊರಗಿನ ರಾಜ್ಯಗಳು ನಮ್ಮ ವಿವಿ.ಗಳ ಪ್ರಶಸ್ತಿ ಪತ್ರಗಳನ್ನ ಮುಟ್ಟಲು ಕೂಡ ಹಿಂಜರಿಯುತ್ತಿವೆ. ಈ ಪರಿಸ್ಥಿತಿ ಸರಿ ಆಗುವುದು ಯಾವಾಗ, ಸರಿಮಾಡುವವರು ಯಾರು? ಈ ಪ್ರಶ್ನೆಗಳು ನಮ್ಮ ಮುಂದಿವೆ. ಹೇಳಬೇಕಾದ ವಿಷಯಗಳು ಬಹಳ ಇವೆ. ಇಲ್ಲಿ ಅವುಗಳನ್ನ ಸೂಕ್ಷ್ಮವಾಗಿ ಹೇಳಬಹುದು– ಹೊಸ ಸರಕಾರ ಬಂದು ಕೆಲ ತಿಂಗಳುಗಳು ಕಳೆದರೂ ಇನ್ನೂ ಅಕ್ಯಾಡೆಮಿಗಳು ಅಸ್ತಿತ್ವಕ್ಕೆ ಬಂದಿಲ್ಲ. ನಾಡಿನ ಸಾಂಸ್ಕೃತಿಕ ಬದುಕಿಗೆ ಒಂದು ಬಗೆಯ ಗರ ಬಡಿದಿದೆ. ಬೇರೆ ಭಾಷೆಯ ಚಲನಚಿತ್ರಗಳು ವಿಜೃಂಭಣೆಯಿಂದ ಕನ್ನಡನಾಡಿನಲ್ಲಿ ಪ್ರದರ್ಶಿತವಾಗುತ್ತಿವೆ. ಕನ್ನಡ ಬಾರದೇನೆ ಇಲ್ಲಿ ಬುದುಕುವಂತಹ ವಾತಾವರಣವನ್ನ ನಾವು ಸೃಷ್ಟಿಮಾಡಿ ಇರಿಸಿದ್ದೇವೆ. ಕನ್ನಡಿಗರಿಗೆ ಉದ್ಯೋಗ ಸಿಗಬೇಕು ಅನ್ನುವ ಉದ್ದೇಶದಿಂದ, ಇತರೇ ಕೆಲ ಸಮಸ್ಯೆಗಳನ್ನ ಬಗೆಹರಿಸಲು ಸಿದ್ಧಪಡಿಸಿದ ವರದಿಗಳು ಗೆದ್ದಲು ತಿನ್ನುತ್ತ ವಿಧಾನ ಸೌಧದಲ್ಲಿ ಬಿದ್ದಿವೆ. ಖಾಸಗೀ ಶಿಕ್ಷಣ ಸಂಸ್ಥೆಗಳ ಲಾಬಿ ಬಲವಾಗುತ್ತಿದೆ. ಕೋಮು ಶಕ್ತಿಗಳು ತಮ್ಮೆಲ್ಲ ಆಂತರಿಕ ಶಕ್ತಿಯನ್ನ ಬಳಸಿಕೊಂಡು ಜನರ ನಡುವೆ ವಿಷ ಬೀಜವನ್ನ ಬಿತ್ತುವ ಕೆಲಸವನ್ನ ಮುಂದುವರೆಸಿವೆ. "ನೈತಿಕ ಪೊಲೀಸ್" ಅನ್ನುವ ಪರ್ಯಾಯ ವ್ಯವಸ್ಥೆ ಇನ್ನೂ ಜೀವಂತವಾಗಿದೆ. ನಮ್ಮ ಸಹಜೀವಿಗಳನ್ನ ಅನುಮಾನದಿಂದ ನೋಡುವ ಪ್ರವೃತ್ತಿಗೆ ತಡೆ ಬಂದಿಲ್ಲ. ಕಿರುತೆರೆ ಅನ್ನುವ ಆಧುನಿಕ ಅಪಾಯ ಮೌಢ್ಯ, ಭಯ, ಅಪರಾಧ, ಇತ್ಯಾದಿಗಳನ್ನ ವೈಭವೀಕರಿಸಿ ಜನರ ಬೇಡಿಕೆಯನ್ನ ಪೂರೈಸುತ್ತ ತನ್ನ ನಿಜವಾದ ಶಕ್ತಿಯ ದುರುಪಯೋಗವನ್ನ ಮಾಡಿಕೊಳ್ಳುತ್ತದೆ. ಇವುಗಳನ್ನ ಸರಕಾರ, ಜನ, ಗಮನಿಸಬೇಕು. ಇಂತಹ ಸಮಸ್ಯೆಗಳನ್ನ ಇರಿಸಿ ಕೊಂಡು ನಾವು ಬದುಕುವುದರಲ್ಲಿ ಸುಖ ಇಲ್ಲ. ನೆಮ್ಮದಿಯೂ ಇಲ್ಲ. ಅದು ಪುರುಷಾರ್ಥವೂ ಅಲ್ಲ. ನಾನು ಇಡೀ ಕರ್ನಾಟಕವನ್ನ ಸುತ್ತಿ ಬಂದವನು. ಇಲ್ಲಿಯ ವೈವಿಧ್ಯಮಯವಾದ ಭಾಷೆ, ಜನಬದುಕು, ರೀತಿ, ನೀತಿ, ಉಡುಗೆ, ಆಹಾರ, ನೀರಿನ ಗುಣ, ಮಣ್ಣಿನ ಬಣ್ಣ, ಪರಿಸರದ ವಿವಿಧತೆ ನನ್ನನ್ನ ಮರಳು ಮಾಡಿದೆ. ಒಂದು ಕಡೆ ಕುರಿಗಳನ್ನ ಕರೆದುಕೊಂಡು ಓರ್ವ ಕುರುಬ ಹೆಗಲ ಮೇಲೆ ದೋಟಿ ಹೊತ್ತು ನಡೆದರೆ ಕುರಿಗಳು ಅವನನ್ನ ಅನುಕರಿಸುತ್ತವೆ, ಇನ್ನೊಂದು ಕಡೆ ಕುರಿಗಳನ್ನ ಕುರುಬ ಹೊಡೆದು ಕೊಂಡು ಹೋಗ ಬೇಕಾಗುತ್ತದೆ. ಒಂದು ಕಡೆ ನೀರು ಬೆಟ್ಟದ ತುದಿಯಲ್ಲಿ ಪುಟಿದು ಬಚ್ಚಲು ಮನೆಯ ಹಂಡೆಗೆ ಬಂದು ಬಿದ್ದರೆ, ಇನ್ನೊಂದು ಕಡೆ ಒಂದು ಕೊಡಪಾನ ನೀರಿಗಾಗಿ ನಮ್ಮ ಹೆಂಗಳೆಯರು ಇಂದು ಒಂದು ಕಿಮೀ. ನಾಳೆ ಮೂರು ಕಿಮೀ ಹೋಗ ಬೇಕಾಗುತ್ತದೆ. ಒಂದು ಕಡೆ ಸಮೃದ್ಧವಾದ ಹಸಿರು ಇನ್ನೊಂದು ಕಡೆ ಹಸಿರೇ ಇಲ್ಲದ ಬೆಂಗಾಡು. ಇದು ಕರ್ನಾಟಕ. ಶತಮಾನಗಳಿಂದ ನಮ್ಮ ಜನ ಇಲ್ಲಿ ಬದುಕಿದ್ದಾರೆ. ನಾನು ನೆಮ್ಮದಿಯಿಂದ ಇರುವವರನ್ನ ಕಂಡು ಸಂತಸ ಪಟ್ಟಿದ್ದೇನೆ, ಕಷ್ಟದಲ್ಲಿ ಇರುವವರ ಕುರಿತು ನೊಂದಿದ್ದೇನೆ. ದಿನನಿತ್ಯ ನೋವನ್ನ

ಅನುಭವಿಸುವವರ ನೋವು ದೂರವಾಗಲಿ ಎಂದು ಹಾರೈಸುತ್ತೇನೆ. "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು" ಎಂಬ ಸಾಹಿತ್ಯದ ಉದ್ದೇಶ ನಮ್ಮ ನಾಡಿನ ಎಲ್ಲರ ವಿಷಯದಲ್ಲೂ ನಿಜವಾಗಬೇಕು. ನಮ್ಮ ಸರಕಾರ, ನಾಡಿನ ಕ್ರಿಯಾಶೀಲರು, ವೈಜ್ಞಾನಿಕ ವಿಧಿ ವಿಧಾನಗಳ ಮೂಲಕ ಆ ಆಶಯವನ್ನು ಸಾಧಿಸುವಂತಾಗಲಿ ಎಂದು ಹಾರೈಸುತ್ತೇನೆ. ಈ ನಾಡನ್ನ ಕವಿಗಳು, ದೃಷ್ಟಾರರು, ರಾಜಕೀಯ ವ್ಯಕ್ತಿಗಳು, ನಾಡಿನ ಕೃಷಿ ಕಾರ್ಮಿಕರು, ವ್ಯಾಪಾರಿಗಳು, ಕ್ರೀಡಾ ಪಟುಗಳು, ಮತ್ತೆಲ್ಲರೂ ಬಯಸಿ ಬಯಸಿ ಹಂಬಲಿಸಿ ನಿರ್ಮಿಸಿದರು ಅನ್ನುವ ಅಂಶ ಸದಾ ನಮ್ಮ ನೆನಪಿನಲ್ಲಿ ಇರಬೇಕು. ಈ ನಾಡನ್ನ ಒಡೆಯುವ, ಇಲ್ಲಿ ಅಶಾಂತಿಯನ್ನ ಹುಟ್ಟಿಸುವ ಕೆಲಸ ಆಗದಿರಲಿ ಅನ್ನುವುದೇ ನಮ್ಮೆಲ್ಲರ ಹಾರೈಕೆ. ನನ್ನ ಮಾತು ತುಸು ದೀರ್ಘವಾಗಿದ್ದರೂ ಕೇಳಿದ್ದೀರಿ. ಹಂಸಕ್ಷೀರ ನ್ಯಾಯ ಅನ್ನುವ ಮಾತನ್ನ ನಿಮ್ಮ ನೆನಪಿಗೆ ತರುತ್ತೇನೆ. ಬೇಂದ್ರೆಯವರ ಈ ಮಾತುಗಳ ಮೂಲಕ ನನ್ನ ಮಾತಿಗೆ ಮಂಗಳ ಹಾಡುತ್ತೇನೆ. "ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ, ಲೇಸೆ ಕಾಣಿಸಲಿ ಕಣ್ಗೆ, ಜಗದೊಳಗೆ ಲೇಸೆ ಹಬ್ಬುತಿರಲಿ, ಲೇಸೆ ಕೈಗಳಿಂದಾಗುತಿರಲಿ, ತಾ ಬರಲಿ ಲೇಸೆ ನಡೆದು, ಲೇಸನುಂಡು, ಲೇಸುಸಿರಿ, ಇಲ್ಲಿರಲಿ ಲೇಸೆ ಮೈಯ ಪಡೆದು." –ಅಂಬಿಕಾತನಯ ದತ್ತ.

ನಮಸ್ಕಾರ.

ನಾ. ಡಿಸೋಜ

◆



ಡಾ. ಸಿದ್ಧಲಿಂಗಯ್ಯ

೮೧ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿನಾಂಕ ೩೧ ಜನವರಿ, ೧,೨,೩ ಫೆಬ್ರವರಿ ೨೦೧೫ ಸ್ಥಳ : ಶ್ರವಣಬೆಳಗೊಳ

ಪರಿಚಯ

ಡಾ. ಸಿದ್ಧಲಿಂಗಯ್ಯ

ಶಿಕ್ಷಣ : ದಲಿತಕವಿ, ಕನ್ನಡ ಪ್ರಾಧ್ಯಾಪಕ ಡಾ. ಸಿದ್ಧಲಿಂಗಯ್ಯ ನವರು ಹೋರಾಟಗಾರರೂ ಆಗಿದ್ದಾರೆ. ಇವರು ಮಾಗಡಿಯಲ್ಲಿ ವೆಂಕಮ್ಮ - ದೇವಯ್ಯ ದಂಪತಿಗಳಿಗೆ ೩-೨-೧೯೫೪ರಲ್ಲಿ ಜನಿಸಿದರು. ಬಡತನದಲ್ಲಿಯೇ ಗ್ರಾಮೀಣಭಾಗದ ಶಾಲೆಗಳಲ್ಲಿ ತಮ್ಮ ಪ್ರಾರಂಭಿಕ ಶಾಲಾವಿದ್ಯಾಭ್ಯಾಸವನ್ನು ಪೂರೈಸಿದರು.

ಉದ್ಯೋಗ : ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ ಎಂ. ಎ. ಪದವಿಗಳಿಸಿ. ಬೆಂಗಳೂರು ವಿಶ್ವವಿದ್ಯಾನಿಲಯ ದಲ್ಲಿಯೇ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ನಿವೃತ್ತರಾದರು. ಡಾ. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸೇವೆ : ಕನ್ನಡ ಅಭಿವೃದ್ಧಿಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿದ ನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ೧೯೭೩ರಲ್ಲಿ ನಡೆದ ಅಖಿಲ ಕರ್ನಾಟಕ ವಿಚಾರವಂತ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಇವರು ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕಿದರು. ಎರಡು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿ ಸಕ್ರಿಯವಾಗಿ ಪಾತ್ರವಹಿಸಿದ್ದಾರೆ.

ಮನ್ನಣೆ : ಇವರ ಸೇವೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಅನೇಕ. ಅವುಗಳಲ್ಲಿ ಕೆಲವು ಹೀಗಿವೆ : ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (೧೯೮೬) ಚಲನಚಿತ್ರ ಗೀತರಚನೆ ಪ್ರಶಸ್ತಿ (೧೯೮೪), ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (೧೯೯೬), ಜಾನಪದ ತಜ್ಞಪ್ರಶಸ್ತಿ (೨೦೦೧), ಸಂದೇಶ ಪ್ರಶಸ್ತಿ (೨೦೦೧) ಡಾ. ಅಂಬೇಡ್ಕರ್ ಪ್ರಶಸ್ತಿ (೨೦೦೨), ಸತ್ಯಕಾಮ ಪ್ರತಿಷ್ಠಾನ ಪ್ರಶಸ್ತಿ (೨೦೦೨) ನಾಡೋಜ ಪ್ರಶಸ್ತಿ (೨೦೦೭), ಆಳ್ವಾಸ್ ನುಡಿಸಿರಿ ಪ್ರಶಸ್ತಿ (೨೦೧೨), ಪ್ರಸಿಡೆನ್ಸಿ ಇನ್ಸಿಟ್ಯೂಷನ್ ಪ್ರಶಸ್ತಿ (೨೦೧೨) ಇತ್ಯಾದಿ ಪ್ರಶಸ್ತಿಗಳು ಬಂದಿವೆ.

ಸಾಹಿತ್ಯ ಸೇವೆ : ಕವಿ ವಿಮರ್ಶಕರಾದ ಸಿದ್ಧಲಿಂಗಯ್ಯನವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ :

ಗ್ರಾಮದೇವತೆಗಳು (ಸಂಶೋಧನೆ ಪ್ರಬಂಧ), ಊರು ಕೇರಿ (ಆತ್ಮಕಥೆ),

ಜನಸಂಸ್ಕೃತಿ, ಹಕ್ಕಿ ನೋಟ, ಪಂಚಮಿ ಮತ್ತು ನೆಲಸಮ, ಏಕಲವ್ಯ (ನಾಟಕ), ಇತ್ಯಾದಿ.

ಡಾ. ಸಿದ್ಧಲಿಂಗಯ್ಯ

೮೧ ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

೨೦೧೫

ಪರಮ ಜಿನೇಂದ್ರ ವಾಣಿಯೆ ಸರಸ್ವತಿ ಬೇಱದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತುದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾಸರಸ್ವತಿಯೆ ಮಾಟ್ಕೆಮಗೀಗಿಲ್ಲಿಯೆ ವಾಗ್ವಿಳಾಸಮಂ

ಕನ್ನಡದ ಆದಿಕವಿ ಪಂಪ ತನ್ನ 'ಆದಿಪುರಾಣ' ಕಾವ್ಯದಲ್ಲಿ "ಪರಮ ಜಿನೇಂದ್ರ ವಾಣಿಯೆ ಸರಸ್ವತಿ ಬೇರದು ಪೆಣ್ಣರೂಪಮಂ ಧರಿಯಿಸಿ ನಿಂದುದಲ್ತು..." ಎಂದು ವಾಗ್ದೇವಿಯನ್ನು ಸ್ತುತಿಸಿ ಕಾವ್ಯಾರಂಭ ಮಾಡುತ್ತಾನೆ. ಇಂತಹ ಕಾವ್ಯವನ್ನು ಭಾವಿಸಿ ಓದುವ, ಕೇಳುವ, ಪೂಜಿಸುವ ಭವ್ಯಕೋಟಿಗೆ ನಿರಂತರ ಸೌಖ್ಯವನ್ನು ನೀಡು ಎಂದು ವಾಗ್ದೇವಿಯನ್ನು ಪ್ರಾರ್ಥಿಸುತ್ತಾನೆ. ನಾನು ಈ ವಾಗ್ದೇವಿಯನ್ನು ಮತ್ತು ಕನ್ನಡದ ಅಧಿದೇವತೆ ಶ್ರೀ ಭುವನೇಶ್ವರಿ ತಾಯಿಗೆ ನಮನಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಆರಂಭಿಸುತ್ತಿದ್ದೇನೆ;

೮೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ನನ್ನನ್ನು ಆಯ್ಕೆ ಮಾಡಿರುವುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ ಅವರಿಗೆ, ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಮತ್ತು ಸಮಸ್ತ ಕನ್ನಡಿಗರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿದೆ. ಪರಿಷತ್ತು ನೂರು ವರ್ಷಗಳ ಕಾಲ ನಿರಂತರವಾಗಿ ಕನ್ನಡದ ಸೇವೆ ಸಲ್ಲಿಸುತ್ತಾ ಬಂದಿದೆ. ಪರಿಷತ್ತಿನ ಸ್ಥಾಪನೆಗೆ ಕಾರಣರಾದ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನರಾಗಿದ್ದ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ನೂರು ವರ್ಷಗಳ ಕಾಲ ಕನ್ನಡದ ಕೈಂಕರ್ಯವನ್ನು ಮಾಡಿದ ಎಲ್ಲ ಹಿರಿಯ ಚೇತನಗಳಿಗೆ ಈ ಮೂಲಕ ಅನಂತ ನಮನಗಳನ್ನು ಸಲ್ಲಿಸುತ್ತೇನೆ. ೮೧ನೇ ಸಾಹಿತ್ಯ ಸಮ್ಮೇಳನಕ್ಕೆ ಹಾಸನ ಜಿಲ್ಲೆಯನ್ನು ಅದರಲ್ಲೂ ಜೈನಕಾಶಿ ಎಂದೇ ಹೆಸರಾದ ಪವಿತ್ರ ಶ್ರವಣಬೆಳಗೊಳವನ್ನು ಆಯ್ಕೆ ಮಾಡಿರುವುದು ಸಮಂಜಸವಾಗಿದೆ. ತ್ಯಾಗ ಮತ್ತು ಅಹಿಂಸೆಯ ಪ್ರತಿರೂಪವಾದ ಬಾಹುಬಲಿಸ್ವಾಮಿಯ ಸನ್ನಿಧಿಯಲ್ಲಿ ಈ ಬಾರಿಯ ಸಮ್ಮೇಳನ ನಡೆಯುತ್ತಿರುವುದು ವಿಶೇಷ ಸಂಗತಿಯಾಗಿದೆ. ಕನ್ನಡಕ್ಕೆ ಸಂಕಷ್ಟ ಒದಗಿರುವ ಈ ಕಾಲದಲ್ಲಿ ಬಾಹುಬಲಿಸ್ವಾಮಿಯ ಸ್ಫೂರ್ತಿಯಿಂದ ಕನ್ನಡದ ರಕ್ಷಣೆಗಾಗಿ

ಕನ್ನಡ ಜನತೆ ಅಹಿಂಸಾತ್ಮಕವಾದ ಬೃಹತ್ ಆಂದೋಲನಕ್ಕೆ ಎಲ್ಲ ಬಗೆಯ ತ್ಯಾಗಕ್ಕೆ ಸಿದ್ಧರಾಗಲೆಂದು ಆಶಿಸುತ್ತೇನೆ.

ಹಾಸನ ಜಿಲ್ಲೆ ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯಗಳಿಂದ ಕೂಡಿದೆ. ಕನ್ನಡದ ಮೊದಲ ಶಾಸನ ಸಿಕ್ಕಿದ್ದು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿಯಲ್ಲಿ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮಾನ್ಯತೆಯನ್ನು ನೀಡುವ ಸಂದರ್ಭದಲ್ಲಿ ಈ ಶಾಸನವೇ ಪ್ರಥಮ ಆಕರವಾಯಿತೆಂದು ಹೇಳಲು ಸಂತೋಷವಾಗುತ್ತದೆ. ಮಹಾಕವಿಗಳಾದ ಜನ್ನ ಮತ್ತು ರಾಘವಾಂಕ ಈ ಜಿಲ್ಲೆಯವರು. ರಾಷ್ಟ್ರಕ್ಕೆ ಮೊಟ್ಟಮೊದಲ ಕನ್ನಡ ಪ್ರಧಾನಿಯನ್ನು ಕೊಟ್ಟ ಜಿಲ್ಲೆ ಹಾಸನ ಎಂದು ಹೇಳಲು ಹೆಮ್ಮೆಯಾಗುತ್ತದೆ. ಕನ್ನಡ ಕಾದಂಬರಿ ಸಾರ್ವಭೌಮ ಅ.ನ.ಕೃಷ್ಣರಾಯರ ತವರು ಹಾಸನ ಜಿಲ್ಲೆಯ ಅರಕಲಗೂಡು. ಕನ್ನಡದ ಹೆಮ್ಮೆಯ ಲೇಖಕ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕನ್ನಡದ ಪ್ರಸಿದ್ಧ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರು, ಖ್ಯಾತ ವಿಮರ್ಶಕರಾದ ಕಿ.ರಂ. ನಾಗರಾಜ, ಜಾನಪದ ಸಂಗ್ರಹಕಾರರಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಎಸ್.ಕೆ. ಕರೀಂಖಾನ್, ಇಂಗ್ಲೀಷಿನ ಪ್ರಸಿದ್ಧ ಕಾದಂಬರಿಕಾರರಾದ ರಾಜಾರಾವ್ ಹಾಸನ ಜಿಲ್ಲೆಯವರು. ಕನ್ನಡದ ಹಿರಿಯ ದಲಿತ ಲೇಖಕ ಶ್ರೀ ಡಿ.ಗೋವಿಂದದಾಸ್ ಅವರು ಶ್ರವಣಬೆಳಗೊಳದ ಸಮೀಪದ ದಮ್ಮನಿಂಗಳದವರು. ರೈತ ಮತ್ತು ದಲಿತ ಚಳುವಳಿಗೆ ಹಾಸನ ಜಿಲ್ಲೆ ನೀಡಿದ ಕೊಡುಗೆ ಅನನ್ಯವಾದದ್ದು. ದಲಿತ ಹೋರಾಟಗಾರ ಚಂದ್ರಪ್ರಸಾದ್ ತ್ಯಾಗಿ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಕನ್ನಡ ನಾಡಿಗೆ ಹೊಯ್ಸಳರ ಕೊಡುಗೆ ಅಮೋಘ. ಕನ್ನಡ ರಾಜಮನೆತನವಾದ ಹೊಯ್ಸಳರ ವಿಷ್ಣುವರ್ಧನ, ನಾಟ್ಯರಾಣಿ ಶಾಂತಲೆ ಮತ್ತು ಶ್ರವಣಬೆಳಗೊಳದ ಬಾಹುಬಲಿಸ್ವಾಮಿಯನ್ನು ನಿರ್ಮಿಸಿದ ಚಾವುಂಡರಾಯನ ಶ್ರದ್ಧೆ ಈ ಎಲ್ಲಾ ಸಂಗತಿಗಳನ್ನು ಕನ್ನಡಿಗರು ಮರೆಯುವಂತಿಲ್ಲ. ಕನ್ನಡ ಸಾಹಿತ್ಯದ ಮೂಲಪುರುಷರು ಜೈನ ಕವಿಗಳೆಂಬುದನ್ನು ಅಭಿಮಾನದಿಂದ ಸ್ಮರಿಸುತ್ತೇನೆ. ಹಳೇಬೀಡು, ಬೇಲೂರಿನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಅದ್ಭುತ ಕಲಾನೈಪುಣ್ಯತೆಗೆ ವಿಶ್ವವಿಖ್ಯಾತ ವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಹೀಗೆ ಹಾಸನ ಕಲೆಗೆ, ಸಾಹಿತ್ಯಕ್ಕೆ, ವಾಸ್ತುಶಿಲ್ಪಕ್ಕೆ ಶ್ರೀಮಂತವಾದ ಜಿಲ್ಲೆಯಾಗಿದೆ.

ಮನುಷ್ಯ ಜಾತಿ ತಾನೊಂದೆ ವಲಂ

ಕನ್ನಡದ ಆದಿ ಕವಿ ಪಂಪ ಹೇಳಿರುವ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ವಾಕ್ಯವನ್ನು ಈ ಸಮ್ಮೇಳನದ ಧ್ಯೇಯವಾಕ್ಯವನ್ನಾಗಿ ತೆಗೆದುಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಕರ್ನಾಟಕವನ್ನು ಕುರಿತು ಕವಿರಾಜಮಾರ್ಗಕಾರ 'ಸರ್ವಧರ್ಮಧೇನುನಿವಕ್ಕೆ ಆಡೊಂಬಲಂ' ಎಂದು ಹೇಳಿದ್ದಾನೆ. ಮತ್ತೊಂದು ಕಡೆ ಆತ 'ಕಸವರಂ ಎಂಬುದು ನೆರೆಸೈರಿಸಲ್ ಆರ್ಪೊಡೆ ಪರವಿಚಾರಮಂ

ಪರಧರ್ಮಮಂ' ಎಂದು ಹೇಳಿದ್ದಾನೆ. ಕರ್ನಾಟಕವು ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗೆ ಹೆಸರಾಗಿದೆ. ಕನ್ನಡ ಭಾಷೆ ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದೆ. ಸಹನೆ, ಕನ್ನಡ ಸಂಸ್ಕೃತಿಯ ಮೂಲಗುಣ. ಎಲ್ಲಾ ಜಾತಿ, ಧರ್ಮಗಳು, ಭಾಷೆ, ಉಪಭಾಷೆಗಳು, ಸಂಸ್ಕೃತಿ, ಉಪಸಂಸ್ಕೃತಿಗಳು ಶತಶತಮಾನಗಳ ಕಾಲ ಸಹಬಾಳ್ವೆ ಮಾಡಿದ್ದು ಈ ನಾಡಿನ ವಿಶೇಷ. ಹಂಪೆಯ ಶಾಸನವೊಂದರಲ್ಲಿ ಕವಿಯೊಬ್ಬನು ಕನ್ನಡಿಗರು ಸಾರ್ವಜನಿಕ ಬದುಕಿನಲ್ಲಿ ರೂಢಿಸಿಕೊಂಡಿದ್ದ ಪರೋಪಕಾರ ಬುದ್ಧಿಯನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾನೆ. ತಾಯೊಬ್ಬಳು ತನ್ನ ಪುಟ್ಟ ಕಂದನಿಗೆ ಹಾಲುಣಿಸುವ ಸಂದರ್ಭದಲ್ಲಿ ಅದರ ಕಿವಿಯಲ್ಲಿ ಮುಂದೆ ಅವನು ದೊಡ್ಡವನಾದ ಮೇಲೆ ಮಾಡಬೇಕಾದ ಕರ್ತವ್ಯಗಳನ್ನು ಹೀಗೆ ಹೇಳುತ್ತಾಳೆ; 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ನಿರ್ಮಿಸು, ಅಜ್ಜರೆಯೊಳ್ ಸಿಲ್ಕಿದ ಅನಾಥರಂ ಬಿಡಿಸು, ಮಿತ್ರರ್ಗೆ ಇಂಬುಕಯ್, ನಂಬಿದರ್ಗೆ ಎರವಟ್ಟಾಗಿರು, ಶಿಷ್ಟರಂಪೊರೆ'ಎಂಬ ಈ ಮಾತುಗಳು ಕನ್ನಡ ಸಂಸ್ಕೃತಿಯ ಪ್ರತೀಕವಾಗಿವೆ.

ಕನ್ನಡ ಭಾಷೆಯನ್ನು ದೇವಭಾಷೆಯನ್ನಾಗಿ ಮಾಡಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ. ಸಾಮಾನ್ಯರೂ ಸಾಮಾಜಿಕ ಚಳುವಳಿಯಲ್ಲಿ ಪಾಲ್ಗೊಂಡು ವಚನಸೃಷ್ಟಿಗೆ ತೊಡಗಿದ್ದು ಒಂದು ಮುಖ್ಯ ಸಂಗತಿಯಾಗಿದೆ. ದೈವವನ್ನು ಜನರ ಬಳಿಗೆ ಒಯ್ದ ಗೌರವ ಹರಿದಾಸರಿಗೆ ಸಲ್ಲುತ್ತದೆ. ಜನಬದುಕಲೆಂದು ನಮ್ಮ ಕವಿಗಳು ಕಾವ್ಯ ರಚನೆ ಮಾಡಿದರು. ಕನ್ನಡಾಭಿಮಾನದಲ್ಲಿ ನಮ್ಮ ಕವಿಗಳು ಹಿಂದೆ ಬಿದ್ದಿಲ್ಲ. 'ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ, ಸುಲಲಿತವಾಗಿರ್ಪ ಕನ್ನಡ'ಎಂದು ಮಹಲಿಂಗರಂಗನೆಂಬ ಕವಿ ಹೇಳಿದ್ದಾನೆ. ಹಾಗೆಯೇ ನಿಜಲಿಂಗ ಚಿಕ್ಕಯ್ಯನೆಂಬ ಶರಣ 'ನೋಡಿರೇ ಕನ್ನಡವ, ನುಡಿಸಿರೇ ಕನ್ನಡವ, ತಲೆಯೊಲೆಯುತ ಬಂದು ಕುಣಿವ ಕನ್ನಡವ' ಎಂದು ಹೇಳಿ ಕನ್ನಡದ ಪ್ರೀತಿಯನ್ನು ಮೆರೆದಿದ್ದಾನೆ.

ಕನ್ನಡಿಗರ ಹಿರಿಮೆ

ಕ್ರಿ.ಶ. ೬೩೦ರಲ್ಲಿ ಕನ್ನಡದ ದೊರೆ ಇಮ್ಮಡಿ ಪುಲಿಕೇಶಿ ಉತ್ತರದ ಹರ್ಷವರ್ಧನನನ್ನು ಸೋಲಿಸಿ ನರ್ಮದಾ ನದಿಯ ಆಚೆ ದಂಡೆಗೆ ಓಡಿಸಿದ್ದನ್ನು ಚೀನೀ ಯಾತ್ರಿಕ ಹ್ಯೂಯನತ್‌ತ್ಸಾಂಗ್ ದಾಖಲಿಸಿದ್ದಾನೆ. ಚಾಲುಕ್ಯರ ದೊರೆ ಆರನೆ ವಿಕ್ರಮಾದಿತ್ಯ ನೇಪಾಳದ ಕಠ್ಮಂಡು ಪ್ರದೇಶವನ್ನು ಗೆದ್ದು ಅದರ ಆಡಳಿತವನ್ನು ಕರ್ನಾಟ ವಂಶದ ನನ್ನಿದೇವನಿಗೆ ವಹಿಸಿಕೊಟ್ಟು ಕನ್ನಡಿಗರು ಕಠ್ಮಂಡು ಸುತ್ತಮುತ್ತಲ ಪ್ರದೇಶವನ್ನು ೨೫೦ ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದು ಚರಿತ್ರೆಯಲ್ಲಿ ದಾಖಲೆಯಾಗಿದೆ. ಕರ್ನಾಟಕದ ಗಂಗರು ಕಳಿಂಗವನ್ನು ಆಳಿದರು. ಕರ್ನಾಟಸೇನರು ಬಂಗಾಳವನ್ನು ಆಳಿದರಲ್ಲದೆ ಕನ್ನಡಿಗರಾದ ರಾಷ್ಟ್ರಕೂಟರು ಅಜಂತ, ಎಲ್ಲೋರ, ಎಲಿಫೆಂಟಾದ ಗುಹಾಂತರ ದೇವಾಲಯಗಳನ್ನೂ ನಿರ್ಮಿಸಿದರು. ಗುಜರಾತಿನ

ಚಾಲುಕ್ಯರು ಮೂಲತಃ ಕನ್ನಡಿಗರು. ತಾಮ್ರಪಟಗಳಿಗೆ ಅವರು ಕನ್ನಡದಲ್ಲಿ ರುಜು ಹಾಕುತ್ತಿದ್ದುದು ದಾಖಲೆಯಾಗಿದೆ. ಈಗಿನ ಮುಂಬೈ ಒಂದು ಕಾಲದಲ್ಲಿ ಅಚ್ಚ ಕನ್ನಡ ಪ್ರದೇಶವಾಗಿತ್ತು. ೧೬೬೦ರಲ್ಲಿ ಮುಂಬೈ ದ್ವೀಪಗಳನ್ನು ಪೋರ್ಚುಗೀಸ್ ದೊರೆಯು ಇಂಗ್ಲೆಂಡಿನ ರಾಜಕುಮಾರನಿಗೆ ಬಳುವಳಿಯಾಗಿ ನೀಡಿದಾಗ, ಇಂಗ್ಲೆಂಡಿನ ಮಹಾರಾಣಿಯು ಇಂಗ್ಲೀಷ್ ಭಾಷೆಯ ಕಾನೂನುಗಳನ್ನು ಪೋರ್ಚುಗೀಸ್ ಮತ್ತು ಕನ್ನಡ ಭಾಷೆಗೆ ಅನುವಾದ ಮಾಡಬೇಕೆಂದು ನಿರೂಪ ಹೊರಡಿಸಿದಳು. ೧೮೧೮ರಲ್ಲಿ ಗವರ್ನರ್ ಎಲ್‌ಫಿನ್‌ಸ್ಟನ್ ಮುಂಬೈಗೆ ಬಂದಾಗ ಅವನಿಗೆ ಸಾರ್ವಜನಿಕರು ಅರ್ಪಿಸಿದ ಬಿನ್ನವತ್ತಳೆ ಕನ್ನಡದಲ್ಲಿತ್ತು ಎಂಬುದನ್ನು ಡಾ.ಎಂ.ಚಿದಾನಂದಮೂರ್ತಿಗಳು ಬಾಂಬೆ ಗೆಜೆಟಿಯರ್‌ಗಳ ಆಧಾರದಿಂದ ತಮ್ಮ ಕೃತಿಯಲ್ಲಿ ನಮೂದಿಸಿದ್ದಾರೆ.

ಜನವಾಣಿ ಬೇರು, ಕವಿವಾಣಿ ಹೂವು

ಆಧುನಿಕ ಕನ್ನಡ ಸಾಹಿತ್ಯ ತನ್ನ ವೈವಿಧ್ಯತೆ ಮತ್ತು ವಿಶಿಷ್ಟತೆಯಿಂದ ಶ್ರೀಮಂತವಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕನ್ನಡ ಸಾಹಿತ್ಯ ಒಂಬತ್ತರ ನಿರೀಕ್ಷೆಯಲ್ಲಿದೆ ಎಂದರೆ ತಪ್ಪಾಗಲಾರದು. ಕರ್ನಾಟಕವನ್ನು ಮಹಾಕವಿ ಕುವೆಂಪು, 'ಸರ್ವಜನಾಂಗದ ಶಾಂತಿಯ ತೋಟ' ಎಂದಿದ್ದಾರೆ. ವರಕವಿ ಬೇಂದ್ರೆ, 'ಒಂದೇ ಒಂದೇ ಕರ್ನಾಟಕ ಒಂದೇ, ಜಗದೇಳಿಗೆಯಾಗುವುದು ಕರ್ನಾಟಕದಿಂದೆ' ಎಂದು ಹೇಳಿದ್ದಾರೆ. ಇತ್ತೀಚೆಗೆ ಬರೆಯುತ್ತಿರುವ ಕನ್ನಡ ಬರಹಗಾರರು ಹೊಸ ಭರವಸೆಯನ್ನು ಮೂಡಿಸಿದ್ದಾರೆ. ಇಲ್ಲಿಯವರೆಗು ಕನ್ನಡಕ್ಕೆ ಅಪರಿಚಿತವಾಗಿದ್ದ ಲೋಕವನ್ನು ಈ ಲೇಖಕರು ಅನಾವರಣಗೊಳಿಸಿದ್ದಾರೆ. ಹಲಸಂಗಿ ಸಹೋದರರು ಸಂಪಾದಿಸಿದ 'ಗರತಿಯ ಹಾಡಿ'ಗೆ ಮುನ್ನುಡಿ ಬರೆಯುತ್ತಾ ಕನ್ನಡದ ಕಣ್ವ ಬಿ.ಎಂ.ಶ್ರೀಕಂಠಯ್ಯನವರು 'ಜನವಾಣಿ ಬೇರು, ಕವಿವಾಣಿ ಹೂವು' ಎಂದು ಹೇಳಿದ್ದಾರೆ. ಕನ್ನಡದ ಜಾನಪದ ಸಂಪತ್ತು ಅಗಾಧವಾದದ್ದು. ಅನಕ್ಷರಸ್ಥ ಮಹಿಳೆಯರು ಹಾಡಿರುವ ತ್ರಿಪದಿಯೊಂದು ನಮ್ಮ ಗ್ರಾಮೀಣರ ಬಡತನಕ್ಕೆ ಹಿಡಿದ ಕನ್ನಡಿಯಂತಿದೆ;

ಬಡವರು ಸತ್ತರೆ ಸುಡಲೀಕೆ ಸೌದಿಲ್ಲೊ
ಒಡಲ ಬೆಂಕೀಲಿ ಹೆಣಬೆಂದೊ ದೇವರೆ
ಬಡವರಿಗೆ ಸಾವ ಕೊಡಬ್ಯಾಡ

ಎನ್ನುವುದರ ಮೂಲಕ ನಮ್ಮ ತಾಯಂದಿರು, ಸಹೋದರಿಯರು ಜೀವನದಲ್ಲಿ ಅನುಭವಿಸಿದ ಬವಣೆ, ಸಂಕಷ್ಟಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕುಮಾರವ್ಯಾಸ ಕವಿಯು ರಾಜಪ್ರಭುತ್ವದ ಕಾಲದಲ್ಲಿ ರಾಜನನ್ನು ಪ್ರತ್ಯಕ್ಷ ದೇವರು ಎಂದು ನಂಬಿದ್ದ ಜನಕ್ಕೆ ರಾಜನೇ ರಾಕ್ಷಸನಾದಾಗ, ಮಂತ್ರಿ ಮೊರೆವ ಹುಲಿಯಾದಾಗ, ಅವನ ಪರಿವಾರ ಕಿತ್ತು ತಿನ್ನುವ ಹದ್ದುಗಳಾದಾಗ ಜನ ಗುಳೇ ಹೋಗುವುದನ್ನು ಚಿತ್ರಿಸುತ್ತಾ, ಅಂತಹ ಬಡವರ ಬಿನ್ನಪವ ಕೇಳುವವರು ಯಾರು ಎಂದು ವಿಷಾದ ವ್ಯಕ್ತಪಡಿಸುತ್ತಾನೆ.

ಕುಮಾರವ್ಯಾಸನ ಆ ಪದ್ಯವನ್ನು ಇಲ್ಲಿ ಉದಾಹರಿಸಬಹುದಾಗಿದೆ;

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿವುರಿವುತಿದೆ ದೇಶ ನಾವಿ
ನ್ನಿರಲು ಬಾರದೆನ್ನುತ ಜನ ಬೇ
ಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ

ಕನ್ನಡ ಭಾಷೆ ಹಲವು ಆತಂಕಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಾವೆಲ್ಲ ಇಲ್ಲಿ ಸೇರಿದ್ದೇವೆ. ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನು ಕುರಿತಂತೆ ಇತ್ತೀಚೆಗೆ ಬಂದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಕನ್ನಡ ಭಾಷೆಯ ಬೆಳವಣಿಗೆಗೆ ಮಾರಕವಾಗಿದೆ. ಈ ಕುರಿತು ನಾವೆಲ್ಲ ಗಂಭೀರವಾಗಿ ಚಿಂತಿಸುವ ಅಗತ್ಯವಿದೆ.

ಕನ್ನಡದಲ್ಲಿ ಶಿಕ್ಷಣ ಮಾಧ್ಯಮ

"ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು, ಶಿಕ್ಷಣದ ಎಲ್ಲ ಘಟ್ಟಗಳಲ್ಲೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಅದು ರಾಜ್ಯದ ಆಡಳಿತ ಭಾಷೆಯೂ ಆಗಬೇಕು. ಈ ಸಂಕಲ್ಪಗಳು ಕೈಗೂಡಿದರೆ ಉಳಿದ ಎಲ್ಲಾ ಕೇಡುಗಳು ಕಣ್ಮರೆಯಾಗುತ್ತವೆ"ಎಂದು ಮಹಾಕವಿ ಕುವೆಂಪು ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಪೀಠದಿಂದ ಹೇಳಿದ ಮಾತುಗಳು ಇಲ್ಲಿ ಉಲ್ಲೇಖನೀಯ.

ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗ ಆಯಾ ರಾಜ್ಯಗಳ ಭಾಷೆಗಳು ಆಡಳಿತ ಭಾಷೆಯಾಗುತ್ತವೆ, ಶಿಕ್ಷಣ ಮಾಧ್ಯಮವಾಗುತ್ತವೆ, ಜನರ ನಡುವಿನ ಸಂಪರ್ಕ ಭಾಷೆಯಾಗುತ್ತವೆ – ಎಂದು ನಿರೀಕ್ಷಿಸಲಾಗಿತ್ತು. ಆದರೆ ಕರ್ನಾಟಕದ ಮಟ್ಟಿಗೆ ಅದು ನಿರೀಕ್ಷೆಯಾಗಿಯೇ ಉಳಿದಿದೆ. ರಾಜ್ಯ ಸರ್ಕಾರ ಮೊದಲಿಗೆ ರಚಿಸಿದ್ದ ಎ.ಜಿ. ರಾಮಚಂದ್ರರಾವ್, ಮಲ್ಲಾರಾಧ್ಯರ ಸಮಿತಿಯಿಂದ ಹಿಡಿದು ಇಲ್ಲಿಯವರೆಗಿನ ಎಲ್ಲಾ ವರದಿಗಳು ಕನ್ನಡ ಮಾಧ್ಯಮದ ಪರವಾಗಿಯೇ ಇವೆ. ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳೂ ಕನ್ನಡ ಪರವಾಗಿಯೇ ಇವೆ. ಆದರೆ ಅನುಷ್ಠಾನ ಮಾತ್ರ ಸಾಧ್ಯವಾಗಿಲ್ಲ.

ರಾಜ್ಯ ಸರ್ಕಾರ ೨೯–೪–೧೯೯೪ರಂದು ಆದೇಶ ಹೊರಡಿಸಿ ರಾಜ್ಯದಲ್ಲಿರುವ ಎಲ್ಲ ಶಾಲೆಗಳಲ್ಲಿ ೧ರಿಂದ ೪ನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮವನ್ನು ಕಡ್ಡಾಯಗೊಳಿಸಿತು. ಇದನ್ನು ಇಂಗ್ಲೀಷ್ ಶಾಲೆಗಳ ಒಕ್ಕೂಟ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾ ಬಂದಿತು. ಇದನ್ನು ರಾಜ್ಯದ ಉಚ್ಚನ್ಯಾಯಾಲಯವು ಪರಿಶೀಲಿಸಿ ೮–೭–೨೦೦೮ರಂದು ಭಾಷಾಮಾಧ್ಯಮದ ತೀರ್ಪನ್ನು ಇಂಗ್ಲೀಷ್ ಶಾಲೆಗಳ ಒಕ್ಕೂಟದ ಪರವಾಗಿ ನೀಡಿತು. ಈ ತೀರ್ಪನ್ನು

ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಸಂವಿಧಾನ ಪೀಠವು ೬-೫-೨೦೧೪ ರಂದು ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಪನ್ನೇ ಎತ್ತಿ ಹಿಡಿಯಿತು. ನಂತರ ಕರ್ನಾಟಕ ಸರ್ಕಾರವು ಅಕ್ಟೋಬರ್ ೨೦೧೪ರಲ್ಲಿ ಮತ್ತೊಮ್ಮೆ ಪರಿಶೀಲನೆಗಾಗಿ ಮೇಲ್ಮನವಿ ಸಲ್ಲಿಸಿದಾಗ ಇದರ ಪುನರ್ ಪರಿಶೀಲನೆ ಅಗತ್ಯವಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ಕೈಬಿಟ್ಟಿತು. ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲಿನ ತೀರ್ಪನ್ನು ಪುನರ್ ಪರಿಶೀಲಿಸುವಂತೆ ಮನವಿ ಮಾಡಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪು; ಕನ್ನಡದ ಭವಿಷ್ಯ

ಈಗ ಶಿಕ್ಷಣ ಮಾಧ್ಯಮದ ಗೊಂದಲ ಕೇವಲ ನಮ್ಮ ರಾಜ್ಯಕ್ಕೆ ಸೀಮಿತವಾಗಿಲ್ಲ. ದೇಶ ಭಾಷೆ ಉಳಿಸುವಲ್ಲಿ ಕರ್ನಾಟಕ ಸರ್ಕಾರದ ನಿಲುವು ದೇಶದಾದ್ಯಂತ ಮೆಚ್ಚುಗೆಗೆ ಪಾತ್ರವಾಗಿದೆ. ಈಗ ಕನ್ನಡಿಗರ ಹೊಣೆಗಾರಿಕೆ ಹೆಚ್ಚಿದೆ. ಕನ್ನಡಿಗರು ಒಂದು ದೀರ್ಘಕಾಲೀನ ಆಂದೋಲನಕ್ಕೆ ಸಿದ್ಧವಾಗಿ ತಾರ್ಕಿಕ ಅಂತ್ಯ ಕಾಣುವ ತನಕ ವಿಶ್ರಮಿಸಬಾರದು. ಇದಕ್ಕೆ ಇಡೀ ರಾಷ್ಟ್ರದ ಜನರ ಬೆಂಬಲ ಸಿಗುತ್ತದೆ. ಹಾಗಾಗಿ ನಾವು ಈ ರೀತಿ ಕಾರ್ಯಕ್ರಮ ರೂಪಿಸಬೇಕಾಗಿದೆ.

೧. ಈ ತೀರ್ಪು ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಆತಂಕ ಒಡ್ಡಿರುವುದರಿಂದ, ಸಂವಿಧಾನದ ಷೆಡ್ಯೂಲ್-೮ ರಲ್ಲಿರುವ ಎಲ್ಲಾ ಭಾಷೆಗಳನ್ನು ಶಿಕ್ಷಣ ಮಾಧ್ಯಮದಲ್ಲಿ ಕಡ್ಡಾಯಗೊಳಿಸಿ ಸಂವಿಧಾನಕ್ಕೆ ತಿದ್ದುಪಡಿ ತಂದು ದೇಶೀಯ ಭಾಷೆಗಳಲ್ಲಿ ಕಡ್ಡಾಯವಾಗಿ ಶಿಕ್ಷಣ ನೀಡುವುದಕ್ಕೆ ಪೂರಕವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಈ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ದೇಶೀಯ ಭಾಷೆಗಳನ್ನು ಉಳಿಸಲು ನೆರವಾಗುವಂತೆ ಕೋರಬೇಕು. ಸಂವಿಧಾನದ ೨೧ಎ, ೨೯, ೩೦, ೪೩ ಕಲಂಗಳಿಗೆ ತಿದ್ದುಪಡಿ ಮಾಡಿ ಪ್ರಾದೇಶಿಕ/ರಾಜ್ಯ ಭಾಷೆ ಕಲಿಯುವುದು ಅಗತ್ಯ ಎಂಬುದನ್ನು ಸೇರಿಸಬೇಕು.

೨. ಸಂವಿಧಾನ ತಿದ್ದುಪಡಿ ಮುಂತಾದ ಕ್ರಿಯೆಗಳು ಸಾಕಷ್ಟು ಸಮಯ ಹಿಡಿಯುವುದರಿಂದ ೨೦೧೦ರ ಶಿಕ್ಷಣ ಹಕ್ಕು ಕಾಯಿದೆಯಲ್ಲಿರುವ ಅಂಶವನ್ನು ಆಧರಿಸಿ ರಾಜ್ಯ ಸರ್ಕಾರ ಕೂಡಲೇ ಭಾಷಾ ನೀತಿಯೊಂದನ್ನು ರೂಪಿಸಬೇಕು. ಕಾಯ್ದೆಯ ಪ್ರಕರಣ ೨೯(೨)(ಎಫ್) ಅನ್ವಯ ಸಾಧ್ಯವಾದಷ್ಟು ಮಾತೃಭಾಷೆ ಎಂಬುದನ್ನು ಕಡ್ಡಾಯವಾಗಿ ಮಾತೃಭಾಷೆ ಅಥವಾ ರಾಜ್ಯ ಭಾಷೆ ಎಂದು ಬದಲಿಸಬೇಕು.

೩. ೧೯೬೬ರ ಡಿ.ಎಸ್. ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಈ ಕಾರ್ಯ ಸಾಧ್ಯವಾದರೆ ಸಮಾನ ಶಾಲಾಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಬಡವರ ಮಕ್ಕಳ ಶಾಲೆ ಮತ್ತು ಶ್ರೀಮಂತರ ಮಕ್ಕಳ ಶಾಲೆ ಎಂಬ ಶೈಕ್ಷಣಿಕ ವರ್ಗಬೇಧವನ್ನು ತೊಡೆದು ಹಾಕಲು ಸಹಾಯವಾಗುತ್ತದೆ. ಈ ಬದಲಾವಣೆಯಿಂದ ಮಾಲಿಯ

ಮಗ ಮತ್ತು ಮಂತ್ರಿಯ ಮಗ, ಕೂಲಿಯ ಮಗ ಮತ್ತು ಕೋಟ್ಯಾಧೀಶನ ಮಗ, ಭೂಮಾಲಿಕನ ಮಗ ಮತ್ತು ಜೀತಗಾರನ ಮಗ, ಪ್ರಧಾನಿಯ ಮಗ ಮತ್ತು ಪೌರಕಾರ್ಮಿಕನ ಮಗ ಇವರೆಲ್ಲರೂ ಒಂದೇ ಬೆಂಚಿನಲ್ಲಿ, ಒಂದೇ ತರಗತಿಯಲ್ಲಿ ಕುಳಿತು ಕಲಿಯುವ ವಾತಾವರಣ ನಿರ್ಮಾಣ ವಾಗುತ್ತದೆ. ಇದು ವರ್ಣರಹಿತ ಮತ್ತು ವರ್ಗರಹಿತ ನವಕರ್ನಾಟಕದ ನಿರ್ಮಾಣಕ್ಕೆ ನಾಂದಿಯಾಗುತ್ತದೆ.

ಕನ್ನಡ ಶಾಲೆಗಳ ಅಧೋಗತಿ

ಸರ್ಕಾರದ ಅಧಿಕೃತ ವರದಿಯ ಪ್ರಕಾರ ೨೦೧೨-೧೩ ನೇ ಸಾಲಿನಲ್ಲಿದ್ದ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಕ್ರಮವಾಗಿ ೨೨,೧೦೫ ಮತ್ತು ೨೨,೫೬೭. ೨೦೧೩-೧೪ನೇ ಸಾಲಿನಲ್ಲಿ ಈ ಸಂಖ್ಯೆ ಕ್ರಮವಾಗಿ ೨೧,೯೯೬ ಮತ್ತು ೨೨,೫೧೭ಕ್ಕೆ ಇಳಿದಿದೆ. ಇದನ್ನು ನೋಡಿದಾಗ ಒಂದು ವರ್ಷದಲ್ಲಿ ಒಟ್ಟು ೧೫೯ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಮುಚ್ಚಿವೆ. ಇದೇ ಸಂದರ್ಭದಲ್ಲಿ ೨೦೧೨-೧೩ನೇ ಸಾಲಿನಲ್ಲಿದ್ದ ಖಾಸಗಿ ಅನುದಾನರಹಿತ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಕ್ರಮವಾಗಿ ೩,೪೮೬ ಮತ್ತು ೮,೨೫೯. ೨೦೧೩-೧೪ನೇ ಸಾಲಿನಲ್ಲಿ ಈ ಸಂಖ್ಯೆ ಕ್ರಮವಾಗಿ ೩,೭೦೨ ಮತ್ತು ೮,೫೫೭ಕ್ಕೆ ಏರಿದೆ. ಅಂದರೆ ಒಂದೇ ವರ್ಷದಲ್ಲಿ ಖಾಸಗಿ ಅನುದಾನರಹಿತ ಶಾಲೆಗಳ ಸಂಖ್ಯೆ ೧೧,೭೪೫ರಿಂದ ೧೨,೨೫೯ಕ್ಕೆ ಏರಿದೆ. ಒಂದು ವರ್ಷದಲ್ಲಿ ಮುಚ್ಚಿದ ೧೫೯ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಜಾಗದಲ್ಲಿ ೫೧೪ ಖಾಸಗಿ ಶಾಲೆಗಳು ತಲೆಯೆತ್ತಿ ನಿಂತಿವೆ. ಅಂದರೆ ಖಾಸಗಿ ಅನುದಾನರಹಿತ ಶಾಲೆಗಳು ವಾರ್ಷಿಕ ಮುಚ್ಚಿದ ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ಮೂರುಪಟ್ಟು ಆರಂಭವಾಗಿವೆ.

ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ ೨೦೧೨-೧೩ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿದ್ದ ಒಂದರಿಂದ ಹತ್ತನೇ ತರಗತಿಯವರೆಗಿನ ಮಕ್ಕಳ ದಾಖಲಾತಿ ೫೧ ಲಕ್ಷದಿಂದ ೨೦೧೩-೧೪ನೇ ಸಾಲಿನಲ್ಲಿ ೪೯.೫ ಲಕ್ಷಕ್ಕೆ ಇಳಿದಿದೆ. ಇದೇ ವೇಳೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿದ್ದ ಒಂದರಿಂದ ಹತ್ತನೇ ತರಗತಿಯವರೆಗಿನ ಮಕ್ಕಳ ದಾಖಲಾತಿ ೩೨.೪೦ ಲಕ್ಷದಿಂದ ೩೩.೬೬ ಲಕ್ಷಕ್ಕೆ ಏರಿದೆ. ಅಂದರೆ, ಸರ್ಕಾರಿ ಶಾಲೆಗಳಲ್ಲಿ ೧.೫ ಲಕ್ಷ ಮಕ್ಕಳು ಕಡಿಮೆಯಾಗಿದ್ದು ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ೧.೨೬ ಲಕ್ಷ ಮಕ್ಕಳು ಜಾಸ್ತಿಯಾಗಿದ್ದಾರೆ.

ಕರ್ನಾಟಕದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಸಂದರ್ಭದಲ್ಲೇ ದೂರದ ದುಬೈನಲ್ಲಿ ವಾಸಿಸುತ್ತಿರುವ ಕನ್ನಡಿಗರು ತಮ್ಮ ಮಕ್ಕಳಿಗಾಗಿ ಕನ್ನಡ ಮಾಧ್ಯಮ ಶಾಲೆಯೊಂದನ್ನು ತೆರೆದಿದ್ದಾರೆ. ಇದಕ್ಕಾಗಿ ದುಬೈ ಕನ್ನಡಿಗರನ್ನು ಅಭಿನಂದಿಸುತ್ತೇನೆ.

ಸರ್ಕಾರಿ ಕನ್ನಡಶಾಲೆಗಳ ಸ್ಥಿತಿಗತಿ ಇದಾದರೆ, ಇನ್ನು ಶಿಕ್ಷಕರ ಸ್ಥಿತಿಗತಿ

ಮತ್ತಷ್ಟು ಶೋಚನೀಯವಾಗಿದೆ. ಮಂಜೂರಾದ ೨೪,೮೮೧ ಶಿಕ್ಷಕರ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ನಿವೃತ್ತಿಯ ಪ್ರಮಾಣಕ್ಕೆ ಅನುಗುಣವಾಗಿ ಹೊಸಬರನ್ನು ನೇಮಕ ಮಾಡುತ್ತಿಲ್ಲ. ಪರಿಣಾಮ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ಹೆಚ್ಚಾಗಿ, ಪೋಷಕರು ಮಕ್ಕಳನ್ನು ಅಂತಹ ಶಾಲೆಗಳಿಂದ ಖಾಸಗಿ ಶಾಲೆಗಳಿಗೆ ಸ್ಥಳಾಂತರಿಸುತ್ತಿರುವುದು ಸಹಜ ಬೆಳವಣಿಗೆಯಾಗಿದೆ. ಖಾಲಿ ಹುದ್ದೆಗಳನ್ನು ಭರ್ತಿಮಾಡುವುದರ ಜೊತೆಗೆ ಶಿಕ್ಷಕರಿಗೆ ಉನ್ನತೀಕರಿಸಿದ ವೇತನ ಶ್ರೇಣಿ, ಉತ್ತಮ ತರಬೇತಿ, ನಿಯಮಿತ ಪುನರ್ ಮನನ ಶಿಬಿರ ಹಾಗು ಅವಶ್ಯಕ ಸವಲತ್ತುಗಳನ್ನು ಕಲ್ಪಿಸಬೇಕು. ಶಾಲೆಗೆ ಅವಶ್ಯಕವಾದ ಉತ್ತಮ ಕಟ್ಟಡ, ಆಟದ ಮೈದಾನ, ಶೌಚಾಲಯ, ಗ್ರಂಥಾಲಯ, ವಿದ್ಯುತ್ತು, ಕುಡಿಯುವ ನೀರು, ಪಾಠೋಪಕರಣ, ಆಟೋಪಕರಣ ಮತ್ತು ಪೀಠೋಪಕರಣ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

ಗ್ರಾಮ ಪಂಚಾಯತಿ ಸಾರ್ವಜನಿಕ ಶಾಲೆಗಳ ಪ್ರಾರಂಭ

ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಈಗಿರುವ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳನ್ನು 'ಗ್ರಾಮ ಪಂಚಾಯತಿ ಸಾರ್ವಜನಿಕ ಶಾಲೆ'ಗಳೆಂದು ಪರಿವರ್ತಿಸಬೇಕು. ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಂತಹ ಒಂದಾದರೂ ಶಾಲೆಯನ್ನು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಸಮಸ್ತ ಕನ್ನಡಿಗರ ಪರವಾಗಿ ಒತ್ತಾಯಿಸುತ್ತೇನೆ. ಇಂತಹ ಶಾಲೆಗಳಲ್ಲಿ ಪ್ರಾಥಮಿಕ ಹಂತದಿಂದಲೇ ಇಂಗ್ಲೀಷ್ ಅನ್ನು ಒಂದು ಭಾಷೆಯನ್ನಾಗಿ ಪರಿಣಾಮಕಾರಿಯಾಗಿ ಕಲಿಸಬೇಕು. ಇದು ನಮ್ಮ ಎಲ್ಲ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ನೆರವಾಗುತ್ತದೆ. ಮಾತೃಭಾಷೆಯಪ್ರೌಢಿಮೆ ಮತ್ತು ಸಂಪರ್ಕಭಾಷೆಯ ಅರಿವು ಯಾವುದೇ ಮಗುವಿನ ಮೂಲಭೂತ ಅಗತ್ಯ ಎನ್ನುವುದು ನನ್ನ ದೃಢವಾದ ನಂಬಿಕೆ.

ಶಾಸ್ತ್ರೀಯ ಭಾಷೆಯಾಗಿ ಕನ್ನಡ

ಕೇಂದ್ರ ಸರ್ಕಾರವು ಕನ್ನಡಿಗರ ನಿರಂತರ ಹಕ್ಕೊತ್ತಾಯಕ್ಕೆ ಮಣಿದು ೨೦೦೮ರಲ್ಲಿ ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು. ಆದರೆ ಅದಕ್ಕೆ ಸಿಗಬೇಕಾದ ಸವಲತ್ತುಗಳು ಇಂದಿಗೂ ಸಿಕ್ಕಿಲ್ಲ. ಕಾರಣಗಳು ಏನೇ ಇರಲಿ ಕನ್ನಡಕ್ಕೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ಪಡೆಯಲು ಕರ್ನಾಟಕ ಸರ್ಕಾರವು ತಮಿಳಿನಲ್ಲಿ ಆಗಿರುವ ಕೆಲಸಗಳನ್ನು ಗಮನಿಸಿ ಅದನ್ನು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು. ಮೈಸೂರಿನ ಭಾಷಾ ಸಂಸ್ಥಾನದ ಒಂದು ಯೋಜನೆ ಆಗಿರುವ ಶಾಸ್ತ್ರೀಯ ಕನ್ನಡಕೇಂದ್ರವನ್ನು ತಮಿಳಿನಂತೆ ಪ್ರತ್ಯೇಕಿಸಿ ಒಂದು ಸ್ವತಂತ್ರ ಕೇಂದ್ರವಾಗಿ ಕನ್ನಡ ಶಾಸ್ತ್ರೀಯ ಉನ್ನತಅಧ್ಯಯನಕೇಂದ್ರವು ರಾಜಧಾನಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಬೇಕು. ಅದಕ್ಕೆ ಅಗತ್ಯವಾದ ಸ್ಥಳವನ್ನು ರಾಜ್ಯಸರ್ಕಾರವು ಒದಗಿಸುವುದಾಗಿ ಹೇಳಿದೆ. ಇದು ಸ್ವಾಗತಾರ್ಹವಾದದ್ದು. ಅಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿ ಕನ್ನಡವು ವಿಶ್ವಮಟ್ಟದಲ್ಲಿ ಬೆಳಗುವ ರೀತಿಯಲ್ಲಿ ಯೋಜನೆಗಳು

ರೂಪಿತಗೊಳ್ಳಬೇಕು. ಭಾರತದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ವಿದೇಶಗಳ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನಪೀಠಗಳನ್ನು ಸ್ಥಾಪಿಸಬೇಕು.

ಆಡಳಿತದಲ್ಲಿ ಕನ್ನಡ

ಕನ್ನಡದ ಬಳಕೆ ನ್ಯಾಯಾಂಗ, ಶಾಸಕಾಂಗ, ಆಡಳಿತಾಂಗ, ಶಿಕ್ಷಣ ಕ್ಷೇತ್ರ ಮತ್ತು ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಾಗಬೇಕು. ಅಧಿಕಾರಿಗಳು ಕನ್ನಡದ ಬಗ್ಗೆ ತೋರುವ ಅಸಡ್ಡೆಯನ್ನು ಖಂಡಿಸುತ್ತೇನೆ. ಕನ್ನಡದಲ್ಲಿ ಟಿಪ್ಪಣಿ ಬರೆಯದ ಕಡತಗಳನ್ನು ಮಂತ್ರಿಗಳು ತಿರಸ್ಕರಿಸಬೇಕು. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಕನ್ನಡದಲ್ಲಿ ಇಲ್ಲದ ಕಡತಗಳನ್ನು ಹಿಂದಿರುಗಿಸಿದ್ದಾರೆ. ಇದು ಅಭಿನಂದನೀಯ. ಉಳಿದವರೆಲ್ಲರಿಗೂ ಇದು ಮಾದರಿ ಆಗಬೇಕು.

ಆಡಳಿತಾಂಗದಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಇಂಗ್ಲೀಷ್ ಭಾಷೆಯ ಬಳಕೆಯ ಚಾಳಿಯನ್ನು ಇನ್ನೂ ಬಿಟ್ಟಿಲ್ಲ. ಈ ಅಧಿಕಾರಿಗಳು ಇಂಗ್ಲೀಷಿನಲ್ಲೇ ಯೋಚಿಸುತ್ತಾರೆ, ಇಂಗ್ಲೀಷಿನಲ್ಲೇ ಬರೆಯುತ್ತಾರೆ, ಕನ್ನಡದಲ್ಲಿ ತೊದಲುತ್ತಾರೆ. ಇಂತಹ ಅಧಿಕಾರಿಗಳನ್ನು ಸರ್ಕಾರ ಮೊದಲು ಬದಲಾಯಿಸಬೇಕು. ಕನ್ನಡ ಬಳಸದ ಅಧಿಕಾರಿಗಳನ್ನು ಕೇಂದ್ರಸೇವೆಗೆ ಕಳುಹಿಸಬೇಕು. ಕೆಲವು ಅಧಿಕಾರಿಗಳು ಕಡತ ಕನ್ನಡದಲ್ಲಿದ್ದರೂ ಅದನ್ನು ಬೇರೆಯವರಿಂದ ಓದಿಸಿ ಆ ಕಡತದಲ್ಲಿ ಆಗಬಹುದು ಅಥವಾ ಆಗುವುದಿಲ್ಲ ಎಂದು ಬರೆದರೆ ಅದೇ ಕನ್ನಡಿಗರ ಭಾಗ್ಯವಾಗಿದೆ. ಕನ್ನಡ ಪರವಾದ ಮುನ್ನೂರಕ್ಕೂ ಹೆಚ್ಚು ಆದೇಶಗಳನ್ನು ನಿತ್ಯವೂ ಉಲ್ಲಂಘಿಸುತ್ತಿರುವ ಇಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು.

ಕನ್ನಡದಲ್ಲಿ ನಾಮಫಲಕ

ಕರ್ನಾಟಕದಾದ್ಯಂತ ಅಂಗಡಿ ಮುಂಗಟ್ಟುಗಳ ಮತ್ತು ಮಾಲ್‌ಗಳ ನಾಮಫಲಕಗಳು ಪ್ರಧಾನವಾಗಿ ಕನ್ನಡದಲ್ಲಿ ಇರಬೇಕು. ರೈಲ್ವೆ ಮತ್ತು ವಿಮಾನ ನಿಲ್ದಾಣಗಳಲ್ಲಿ, ಪಾಸ್‌ಪೋರ್ಟ್ ಕಛೇರಿಗಳಲ್ಲಿ ಕನ್ನಡ ನಾಮಫಲಕಗಳು ಕಡ್ಡಾಯವಾಗಿ ಇರಬೇಕು. ಹೀಗೆ ಕನ್ನಡದಲ್ಲಿ ನಾಮಫಲಕವನ್ನು ಹಾಕದವರಿಗೆ ರೂ. ೨೫೦/- ದಂಡವಿಧಿಸಲಾಗುತ್ತಿತ್ತು. ಈ ದಂಡದ ಮೊತ್ತವನ್ನು ಅಂಗಡಿ ಮಾಲೀಕರು ಪಾವತಿಸಿ ಕೈತೊಳೆದುಕೊಳ್ಳುತ್ತಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸಿನಂತೆ ೨೦೦೬ರಲ್ಲಿ ಸರ್ಕಾರ ಈ ದಂಡವನ್ನು ಹತ್ತು ಸಾವಿರ ರೂಪಾಯಿಗೆ ಏರಿಸಿತು. ಇದಕ್ಕೆ ಖಾಸಗಿ ಕಂಪನಿಯೊಂದು ತಡೆಯಾಜ್ಞೆ ತಂದು ಸುಮಾರು ಆರು ವರ್ಷಗಳ ಮೇಲಾದರೂ ತಡೆಯಾಜ್ಞೆ ತೆರವಾಗಿಲ್ಲ. ಈ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕೆಂದು ಕೋರುತ್ತೇನೆ.

ಕನ್ನಡ ತಂತ್ರಾಂಶ

ಕನ್ನಡ ತಂತ್ರಾಂಶದ ಪ್ರಗತಿ ಇನ್ನೂ ಆಗಬೇಕಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಭಾಷೆಯಾಗಿ ಕನ್ನಡ ಬಳಕೆಯಾಗದ ಹೊರತು ಕನ್ನಡಕ್ಕೆ ಉಳಿಗಾಲವಿಲ್ಲ. ಕರ್ನಾಟಕ

ಸರ್ಕಾರವು ಕನ್ನಡ ತಂತ್ರಾಂಶವನ್ನು ಸಿದ್ಧಪಡಿಸುತ್ತಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಇದರ ಪ್ರಗತಿಯಾಗಿಲ್ಲ. ಕನ್ನಡದಲ್ಲಿ ಒಂದು ತಂತ್ರಾಂಶದಿಂದ ಮತ್ತೊಂದು ತಂತ್ರಾಂಶಕ್ಕೆ ಪರಿವರ್ತನೆ (ಕನ್ವರ್ಟಬಲಿಟಿ) ಸಾಧ್ಯವಾಗುವ ರೀತಿಯಲ್ಲಿ ತಂತ್ರಾಂಶವನ್ನು ರೂಪಿಸಬೇಕು. ಅಕ್ಷರ ಜಾಣ, ನುಡಿ ಜಾಣ, ವ್ಯಾಕರಣ ಪರೀಕ್ಷೆ, ಪದಪರೀಕ್ಷೆ ಸಾಧ್ಯವಾಗಬೇಕು.

ಪುಸ್ತಕ ನೀತಿ

ಕನ್ನಡ ಪುಸ್ತಕೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಗ್ರಂಥಾಲಯ ಇಲಾಖೆ ಪ್ರತಿ ವರ್ಷ ತಪ್ಪದೆ ಪುಸ್ತಕಗಳನ್ನು ಖರೀದಿಸಬೇಕು. ಪುಸ್ತಕಗಳು ಸಂಸ್ಕೃತಿಯ ಉತ್ಪನ್ನಗಳು ಮತ್ತು ಸಾರ್ವಜನಿಕರ ಆಸ್ತಿ ಎಂಬುದನ್ನು ಸರ್ಕಾರ ತಿಳಿಯಬೇಕು. ಕನ್ನಡಪುಸ್ತಕ ಪ್ರಾಧಿಕಾರವು ಕನ್ನಡಪುಸ್ತಕಗಳ ಪ್ರಕಟಣೆ, ಪ್ರಸಾರ, ಖರೀದಿ, ಸಹಾಯ ಧನ ಮುಂತಾದ ಹಲವಾರು ವಿಷಯಗಳ ಬಗ್ಗೆ ತಜ್ಞರ ಸಮಿತಿಯಿಂದ 'ಪುಸ್ತಕ ನೀತಿ' ಎಂಬ ಕಾಯ್ದೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಅದನ್ನು ಸರ್ಕಾರ ತಕ್ಷಣ ಜಾರಿಗೆ ತರಬೇಕೆಂದು ಒತ್ತಾಯಿಸುತ್ತೇನೆ. ಇದರಿಂದ ಸಾಹಿತಿಗಳಿಗೆ, ಪ್ರಕಾಶಕರಿಗೆ, ಪುಸ್ತಕೋದ್ಯಮಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಸರ್ಕಾರವು ಪುಸ್ತಕ ನೀತಿಯನ್ನು ಅಂಗೀಕರಿಸಿ ಕನ್ನಡದ ಅತ್ಯುತ್ತಮ ಪ್ರಕಾಶಕರಿಗೆ ಸಬ್ಸಿಡಿ ದರದಲ್ಲಿ ಮುದ್ರಣ ಕಾಗದವನ್ನು ಒದಗಿಸಬೇಕೆಂದು ಕೋರುತ್ತೇನೆ.

ಗಡಿ ಸಮಸ್ಯೆ

ಕರ್ನಾಟಕ ಏಕೀಕರಣವಾದರೂ ಗಡಿ ಸಮಸ್ಯೆ ಮಾತ್ರ ಹಾಗೆಯೇ ಉಳಿದಿರುವುದು ವಿಷಾದಕರ. ತಮಿಳುನಾಡು, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಉಳಿದಿರುವ ಅನೇಕ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಲು ಇನ್ನೂ ಆಗಿಲ್ಲ. ಕಾಸರಗೋಡಿನ ಚಂದ್ರಗಿರಿ ನದಿಯ ಉತ್ತರ ಭಾಗ ಕರ್ನಾಟಕಕ್ಕೆ ಸೇರಬೇಕೆಂದು ಮಹಾಜನ್ ಆಯೋಗ ಶಿಫಾರಸ್ಸು ಮಾಡಿದೆ. ಇದು ಕಾರ್ಯಗತ ವಾಗಬೇಕು. ರಾಷ್ಟ್ರಕವಿ ಎಂ.ಗೋವಿಂದ ಪೈ ಅವರ ಮತ್ತು ಹಿರಿಯ ಕನ್ನಡದ ಕವಿ ಕೈಯ್ಯಾರ ಕಿಞ್ಞಣ್ಣ ರೈ ಅವರ ಹಂಬಲ ಈಡೇರಲೆಂದು ಆಶಿಸುತ್ತೇನೆ. ಕೇರಳದ ಕಾಸರಗೋಡು, ಮಹಾರಾಷ್ಟ್ರದ ಸೊಲ್ಲಾಪುರ, ಸಾಂಗ್ಲಿ ಮತ್ತು ಆಂಧ್ರದ ಕರ್ನೂಲ್, ಮೆಹಬೂಬ್‌ನಗರ ಜಿಲ್ಲೆಗಳ ಕನ್ನಡ ಪ್ರದೇಶಗಳು ಹಾಗೂ ತಮಿಳುನಾಡಿನ ತಾಳವಾಡಿ ಕರ್ನಾಟಕಕ್ಕೆ ಸೇರಬೇಕಾಗಿದೆ. ಈ ಸ್ಥಳಗಳಲ್ಲಿ ಐಚ್ಛಿಕ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮಲಯಾಳಂ, ಮರಾಠಿ, ತೆಲುಗು, ತಮಿಳು ಭಾಷೆಗಳಲ್ಲಿ ಬೋಧನೆ ಮಾಡಲಾಗುತ್ತಿದೆ. ಈ ವಿದ್ಯಾರ್ಥಿಗಳಿಗೆ ಐಚ್ಛಿಕ ಪಠ್ಯಗಳನ್ನು ಕನ್ನಡದಲ್ಲಿ ತಯಾರಿಸಿ, ಮುದ್ರಿಸಿ ಕರ್ನಾಟಕ ಸರ್ಕಾರ ಉಚಿತವಾಗಿ ವಿತರಣೆ ಮಾಡಬೇಕೆಂದು ವಿನಂತಿಸುತ್ತೇನೆ. ಗಡಿ ಭಾಗದಲ್ಲಿ ಕನ್ನಡದ ರಕ್ಷಣೆಗೆ ಶ್ರಮಿಸುತ್ತಿರುವ ಕನ್ನಡ ಪತ್ರಿಕೆಗಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಜಾಹಿರಾತು ನೀಡುವುದರ ಮೂಲಕ ಉತ್ತೇಜನ ನೀಡಬೇಕು.

ಗೋವಾ ಕನ್ನಡಿಗರ ಸಮಸ್ಯೆ

ಗೋವಾದ ಬೈನಾ ಕಡಲ ತೀರದಲ್ಲಿ ಹಲವು ವರ್ಷಗಳಿಂದ ೩೫೦ಕ್ಕೂ ಹೆಚ್ಚು ಕನ್ನಡಿಗರ ಕುಟುಂಬಗಳು ವಾಸವಾಗಿದ್ದವು. ಸುರಕ್ಷತೆ ವಿಷಯವನ್ನು ಮುಂದಿಟ್ಟುಕೊಂಡು ಗೋವಾ ಸರ್ಕಾರ ಈ ಕನ್ನಡಿಗರ ಮನೆಗಳನ್ನು ತೆರವುಗೊಳಿಸುತ್ತಿರುವುದು ವಿಷಾದಕರ. ಈಗಾಗಲೇ ಕನ್ನಡಿಗರ ೭೫ ಮನೆಗಳನ್ನು ನೆಲಸಮ ಮಾಡಿರುವುದನ್ನು ಖಂಡಿಸುತ್ತೇನೆ. ಹೀಗೆ ಮನೆ ಕಳೆದುಕೊಂಡ ಕನ್ನಡದ ಕುಟುಂಬಗಳಿಗೆ ಇನ್ನೂ ಪುನರ್ವಸತಿ ಕಲ್ಪಿಸಿಲ್ಲ. ಅಲ್ಲಿಯ ಕನ್ನಡಿಗರು ಬೀದಿಪಾಲಾಗಿದ್ದಾರೆ. ಗೋವಾ ಕನ್ನಡಿಗರು ತಬ್ಬಲಿಗಳಲ್ಲ, ಕರ್ನಾಟಕದ ಸಮಸ್ತ ಜನತೆ ಗೋವಾ ಕನ್ನಡಿಗರ ಜೊತೆಗಿದ್ದೇವೆ ಎಂದು ಹೇಳಲು ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಚಿವರೊಬ್ಬರನ್ನು ಪಣಜಿಗೆ ಕಳಿಸಿ ಅಲ್ಲಿಯ ಸರ್ಕಾರದ ಜೊತೆ ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೋರುತ್ತೇನೆ.

ವಿಶ್ವವಿದ್ಯಾಲಯಗಳಲ್ಲಿ ಕನ್ನಡ

ಕರ್ನಾಟಕದ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ಕನ್ನಡ ಸರಿಯಾಗಿ ಬಳಕೆಯಾಗುತ್ತಿಲ್ಲ. ಇನ್ನು ಶಿಕ್ಷಣದಲ್ಲಂತು ಕನ್ನಡ ದಿನೇ ದಿನೇ ಅವಜ್ಞೆಗೆ ಒಳಗಾಗುತ್ತಿದೆ. ಕೆಲವು ಪದವಿ ತರಗತಿಗಳಲ್ಲಿ ಎರಡು ವರ್ಷವಿದ್ದ ಕನ್ನಡ ವಿಷಯವನ್ನು ಒಂದು ವರ್ಷಕ್ಕೆ ಇಳಿಸಿರುವುದು ಖಂಡನೀಯ. ಮುಂದಿನ ದಿನಗಳಲ್ಲಿ ಇದು ಮಾಯವಾದರೂ ಆಶ್ಚರ್ಯಪಡಬೇಕಿಲ್ಲ. ಹಳಗನ್ನಡ ಸಾಹಿತ್ಯದ ಓದು ಮತ್ತು ಅಧ್ಯಯನವಂತು ಮರೆತು ಹೋದಂತೆ ಕಾಣುತ್ತಿದೆ. ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಹಳಗನ್ನಡ ಕಾವ್ಯಗಳ ಗದ್ಯಾನುವಾದದ ನೆರವನ್ನು ಪಡೆದು ಗಮಕಿಗಳ ಮೂಲಕ ಹಾಡಿಸುವ, ವ್ಯಾಖ್ಯಾನಿಸುವ ಪದ್ಧತಿಯನ್ನು ಕೂಡಲೇ ವಿಶ್ವವಿದ್ಯಾಲಯಗಳು ಆರಂಭಿಸಬೇಕು. ಈ ಕ್ರಮದಿಂದ ಹಳಗನ್ನಡ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ದಾಟಿಸಿದಂತಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನೋತ್ಸವ ಆಚರಣೆಯ ಈ ಸಂದರ್ಭದಲ್ಲಿ ೧೦೦ ಮೌಲಿಕ ಪುಸ್ತಕಗಳನ್ನು ಮತ್ತು ೧೭ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯ. ವಿಶ್ವದ ಎಲ್ಲಾ ಬಗೆಯ ಜ್ಞಾನ ಕನ್ನಡದಲ್ಲಿ ಬರಲು ವಿವಿಧ ಪ್ರಾಧಿಕಾರಗಳು ಮತ್ತು ವಿಶ್ವವಿದ್ಯಾಲಯಗಳು ಶ್ರಮಿಸಬೇಕು. ಜಗತ್ತಿನ ಮತ್ತು ಭಾರತೀಯ ಎಲ್ಲ ಭಾಷೆಗಳ ಅತ್ಯುತ್ತಮ ಕೃತಿಗಳು, ವೈಜ್ಞಾನಿಕ ಸಂಶೋಧನೆಗಳು ಹಾಗೂ ಸಮಾಜ ವಿಜ್ಞಾನದ ಚಿಂತನೆಗಳು ಕನ್ನಡಕ್ಕೆ ಭಾಷಾಂತರವಾಗಬೇಕು.

ಕನ್ನಡಿಗರಿಗೆ ಉದ್ಯೋಗ

ಕನ್ನಡಿಗರನ್ನು ದಶಕಗಳಿಂದ ಕಾಡುತ್ತಿರುವ ಅತಿಮುಖ್ಯವಾದ ಸಮಸ್ಯೆ ಎಂದರೆ ನಿರುದ್ಯೋಗ. ಕರ್ನಾಟಕದಲ್ಲಿರುವ ಖಾಸಗೀ ಉದ್ಯಮಗಳು, ಕೇಂದ್ರ ಸರ್ಕಾರದ ಉದ್ಯಮಗಳು ಮತ್ತು ಬ್ಯಾಂಕುಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕೆಂದು

ನಿರಂತರವಾಗಿ ಕನ್ನಡಿಗರು ಹೋರಾಟ ನಡೆಸುತ್ತಾ ಬಂದಿದ್ದಾರೆ. ಕನ್ನಡ ಹೋರಾಟಗಳಿಗೆ ಹೊಸ ಆಯಾಮ ನೀಡಿದ ಗೋಕಾಕ್ ಚಳುವಳಿ ನಂತರ ಅಸ್ತಿತ್ವಕ್ಕೆ ಬಂದ ಶ್ರೀ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಸೂಕ್ತ ಅವಕಾಶಗಳನ್ನು ದೊರಕಿಸಿಕೊಡುವ ಮಾರ್ಗೋಪಾಯಗಳನ್ನು ಸೂಚಿಸಲು ಡಾ. ಸರೋಜಿನಿ ಮಹಿಷಿ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಆ ಸಮಿತಿಯು ಕನ್ನಡಿಗರ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ೫೮ ಅಂಶಗಳುಳ್ಳ ಅತ್ಯುತ್ತಮ ವರದಿಯನ್ನು ನೀಡಿತು. ದುರಂತವೆಂದರೆ ಆ ವರದಿಯನ್ನು ಎರಡು ದಶಕಗಳ ಮೇಲಾದರೂ ಅನುಷ್ಠಾನಕ್ಕೆ ತಂದಿಲ್ಲ. ಆ ವರದಿ ನೀಡಿದಾಗ ಇದ್ದ ಪರಿಸ್ಥಿತಿ ಈಗಿಲ್ಲ. ಜಾಗತೀಕರಣ ಮತ್ತು ಖಾಸಗೀಕರಣಗಳ ಈ ಕಾಲಮಾನದಲ್ಲಿ ಮಹಿಷಿ ವರದಿಗೆ ಕೆಲವು ಮಾರ್ಪಾಡುಗಳು ಆಗಬೇಕಾಗಿದೆ. ವರದಿಯ ಆಶಯ ಇಂದಿಗೂ ಪ್ರಸ್ತುತ. ಈ ವರದಿಯನ್ನು ಕೇಂದ್ರ ಸರ್ಕಾರವು ಒಪ್ಪಿ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಎನ್ನುವುದು ರಾಷ್ಟ್ರೀಯ ನೀತಿ ಆಗಬೇಕು. ಹಾಗೆಯೇ ಕೇಂದ್ರ ಸರ್ಕಾರದ ಬ್ಯಾಂಕ್, ಕಛೇರಿ, ಉದ್ಯಮಗಳಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆ (ಕನ್ನಡ)ಯ ಪ್ರಶ್ನೆಪತ್ರಿಕೆಯನ್ನು ಕಡ್ಡಾಯಗೊಳಿಸುವ ಮೂಲಕ ಕನ್ನಡಿಗರಿಗೆ ಉದ್ಯೋಗದಲ್ಲಿ ನ್ಯಾಯ ಒದಗಿಸಿಕೊಡುವ ಕೆಲಸ ಆಗಬೇಕು. ಇಂದು ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತಿರುವ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗಬೇಕಾದರೆ ರಾಜ್ಯದಲ್ಲಿರುವ ವೃತ್ತಿಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಕ್ಯಾಂಪಸ್ ಆಯ್ಕೆ ನಡೆಸಿ ನೇಮಕ ಮಾಡಿಕೊಳ್ಳುವಂತೆ ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಬೇಕು; ಮತ್ತು ಕನ್ನಡ ವ್ಯಾವಹಾರಿಕ ಜ್ಞಾನಕ್ಕೆ ಸಂಬಂಧಿಸಿದ ಒಂದು ಕನ್ನಡ ಪ್ರಶ್ನೆಪತ್ರಿಕೆಯನ್ನು ಕಡ್ಡಾಯವಾಗಿ ಸೇರಿಸಬೇಕು.

ಕೇಂದ್ರ ಸರ್ಕಾರದ ಕಛೇರಿಗಳು ಮತ್ತು ಉದ್ಯಮಗಳಲ್ಲಿ ಕನ್ನಡಿಗರ ನೇಮಕಾತಿ

ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗ (ಎಸ್.ಎಸ್.ಸಿ)ವು ಕೇಂದ್ರ ಸರ್ಕಾರದ ಕಚೇರಿಗಳಿಗೆ ಸಿಬ್ಬಂದಿಗಳನ್ನು ಆಯ್ಕೆ ಮಾಡುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಕರ್ನಾಟಕ ಸರ್ಕಾರದ ಪ್ರತಿನಿಧಿಯೊಬ್ಬರು ಕಡ್ಡಾಯವಾಗಿ ಇರಬೇಕು. ಕೇಂದ್ರ ಕಛೇರಿಯ ಖಾಲಿ ಹುದ್ದೆಗಳಿಗೆ ಅಂತರ್ಜಾಲದಲ್ಲಿ ಪ್ರಕಟಣೆ ಕೊಡುವುದಷ್ಟೇ ಅಲ್ಲದೆ ಸ್ಥಳೀಯ ಕನ್ನಡ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡಬೇಕು. ಈ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಪಟ್ಟಿಯನ್ನು ತರಿಸಿಕೊಳ್ಳಬೇಕು. ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಉದ್ಯೋಗದ ಆಕಾಂಕ್ಷಿಗಳಿಗೆ ಪರೀಕ್ಷೆಯಲ್ಲಿ ಸ್ಥಳೀಯ ಭಾಷೆಯಲ್ಲಿ ತರಬೇತಿ ನೀಡುವ ೫೨ ರೈಲ್ವೆ ಪರೀಕ್ಷಾ ತರಬೇತಿ ಕೇಂದ್ರಗಳು ಬಿಹಾರದಲ್ಲಿವೆ. ಈ ತರಬೇತಿ ಕೇಂದ್ರಗಳಿಗೆ ಬಿಹಾರ ಸರ್ಕಾರವು ಉತ್ತೇಜನ ನೀಡುತ್ತಿದೆ. ಆದರೆ

ಕರ್ನಾಟಕದಲ್ಲಿ ಇಂತಹ ಒಂದು ಪರೀಕ್ಷಾ ತರಬೇತಿ ಕೇಂದ್ರವೂ ಇಲ್ಲದಿರುವುದು ದುರಂತ. ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಬಯಸುವ ಅಭ್ಯರ್ಥಿಗಳಿಗೆ ಪರೀಕ್ಷಾ ತರಬೇತಿ ಕೇಂದ್ರಗಳನ್ನು ಕೂಡಲೇ ಪ್ರಾರಂಭಿಸಬೇಕು. ಗ್ರಾಮೀಣ ಅಭ್ಯರ್ಥಿಗಳಿಗೆ ಈ ಕ್ರಮದಿಂದ ಬಹಳ ಅನುಕೂಲವಾಗುತ್ತದೆ.

ನ್ಯಾಯಾಂಗದಲ್ಲಿ ಕನ್ನಡ

ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳಲ್ಲಿ ಕನ್ನಡದಲ್ಲಿ ತೀರ್ಪು ನೀಡಬೇಕೆಂಬ ಉಚ್ಚ ನ್ಯಾಯಾಲಯದ ೦೧-೧೧-೨೦೦೩ರ ಸುತ್ತೋಲೆಯನ್ನು ಅಧೀನ ನ್ಯಾಯಾಲಯಗಳು ಕಡ್ಡಾಯವಾಗಿ ಪಾಲಿಸಬೇಕು. ೨೧-೦೩.೨೦೦೮ ರಂದು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಕನ್ನಡದಲ್ಲಿ ತೀರ್ಪು ನೀಡಿದ ಶ್ರೀ ಅರಳಿ ನಾಗರಾಜು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನ್ಯಾಯಾಧೀಶರು ಕನ್ನಡದಲ್ಲಿ ಬರೆದಿರುವ ಕಾನೂನಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗೆ ಉಚ್ಚ ನ್ಯಾಯಾಲಯ ವಿಳಂಬ ಮಾಡದೆ ಶೀಘ್ರವಾಗಿ ಅನುಮತಿ ನೀಡಬೇಕು. ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಅನುಷ್ಠಾನದ ಪರಿಶೀಲನೆಗಾಗಿ ಉಚ್ಚ ನ್ಯಾಯಾಲಯವು ಸಮಿತಿಯೊಂದನ್ನು ರಚಿಸಬೇಕು. ಆ ಸಮಿತಿಯು ಕಾಲಕಾಲಕ್ಕೆ ಸೇರಿ ಕನ್ನಡ ಬಳಕೆಯನ್ನು ಪರಿಶೀಲಿಸಿ ಶ್ರೇಷ್ಠ ನ್ಯಾಯಾಧೀಶರಿಗೆ ವರದಿ ಸಲ್ಲಿಸಬೇಕು.

ಹಿಂದಿ ಭಾಷಾ ಹೇರಿಕೆ

ಹಿಂದಿ ಭಾಷೆಯನ್ನು ಹೆಚ್ಚು ಬಳಸುವಂತೆ ಕೇಂದ್ರ ಸರ್ಕಾರದಿಂದ ಕೇಂದ್ರ ಸ್ವಾಮ್ಯದ ಬ್ಯಾಂಕು, ಕಛೇರಿಗಳಿಗೆ, ಕಾರ್ಖಾನೆಗಳಿಗೆ, ಕೇಂದ್ರೀಯ ಶಾಲೆಗಳಿಗೆ ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಆದೇಶಗಳು ಬರುತ್ತಿವೆ. ಎಲ್ಲಾ ಕಡೆ ಹಿಂದಿ ಅನುಷ್ಠಾನಕ್ಕೆ ಪ್ರತ್ಯೇಕ ಘಟಕಗಳನ್ನು ಸ್ಥಾಪಿಸಲಾಗಿದೆ. ಇದು ಅಪಾಯಕಾರಿ. ನಾವು ಹಿಂದಿಯ ವಿರೋಧಿಗಳಲ್ಲ. ಆದರೆ ಹಿಂದಿ ಕನ್ನಡವನ್ನು ನುಂಗಬಾರದು. ಪ್ರಾಂತೀಯ ಶ್ರೀಮಂತ ಭಾಷೆಗಳನ್ನು ಹಿಂದಿ ತುಳಿಯಬಾರದು. ಕರ್ನಾಟಕದಲ್ಲಿರುವ ಎಲ್ಲಾ ಕೇಂದ್ರ ಸ್ವಾಮ್ಯದ ಕಛೇರಿ, ಬ್ಯಾಂಕು ಉದ್ಯಮಗಳಲ್ಲಿ ಕನ್ನಡಕ್ಕೆ ಆದ್ಯತೆ ಹಾಗೂ ಅಗ್ರಸ್ಥಾನ ಇರಬೇಕು; ಮತ್ತು ಕನ್ನಡವನ್ನು ವ್ಯಾಪಕವಾಗಿ ಬಳಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕನ್ನಡ ಘಟಕಗಳನ್ನು ಸ್ಥಾಪಿಸಬೇಕು. ಭಾರತ ಸಂವಿಧಾನದ ೮ನೇ ಅನುಚ್ಛೇದದಲ್ಲಿ ಸೇರಿರುವ ಎಲ್ಲಾ ಭಾಷೆಗಳನ್ನೂ ರಾಷ್ಟ್ರಭಾಷೆಗಳೆಂದು ಕೇಂದ್ರಸರ್ಕಾರ ಘೋಷಿಸಬೇಕು ಮತ್ತು ಕೇಂದ್ರಸರ್ಕಾರ ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆಯಾ ಪ್ರಾಂತೀಯ ಭಾಷೆಗಳಲ್ಲೂ ಬರೆಯುವ ಅವಕಾಶಗಳಿರಬೇಕು. ಬರೆದದ್ದನ್ನು ಪ್ರಾಂತೀಯ ಭಾಷಾ ವಿದ್ವಾಂಸರೇ ಮೌಲ್ಯಮಾಪನ ಮಾಡುವ ಪದ್ಧತಿಯೂ ಇರಬೇಕು. ಕೇಂದ್ರೀಯ ಶಾಲೆಗಳಲ್ಲಿ ೧೦೦ ಅಂಕಗಳ ಕನ್ನಡ ಪತ್ರಿಕೆ ಕಡ್ಡಾಯವಾಗಬೇಕು.

ಕರ್ನಾಟಕ : ಇಬ್ಭಾಗದ ಮಾತು

ಕರ್ನಾಟಕದ ವಿಭಜನೆಯ ಬಗ್ಗೆ ಕೆಲವರು ಮಾತನಾಡುತ್ತಿರುವುದು ವಿಷಾದನೀಯ. ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡಿಗರು ಹಲವು ದಶಕಗಳ ಹೋರಾಟದಿಂದ ಒಂದಾಗಿರುವುದು ಚಾರಿತ್ರಿಕ ಸತ್ಯ. ಆಳುವವರು ಎಲ್ಲಾ ಪ್ರದೇಶಗಳನ್ನು ಸಮಾನವಾಗಿ ಅಭಿವೃದ್ಧಿಪಡಿಸದೆ ಇರುವುದು ಈ ಒಡಕಿನ ಅಪಸ್ವರಕ್ಕೆ ಕಾರಣ. ಆದರೆ ಇದಕ್ಕೆ ಪ್ರತ್ಯೇಕತೆಯ ಕೂಗು ಪರಿಹಾರವಲ್ಲ. ಅರ್ಥಶಾಸ್ತ್ರಜ್ಞ ಡಾ. ಡಿ.ಎಂ. ನಂಜುಂಡಪ್ಪ ಅವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರ ಒಂದು ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ನೀಡಿದ ಶಿಫಾರಸ್ಸುಗಳನ್ನು ಸರ್ಕಾರ ಪ್ರಾಮಾಣಿಕವಾಗಿ ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತರಬೇಕಾಗಿದೆ. ಭೌಗೋಳಿಕವಾಗಿ ಒಂದಾಗಿರುವ ಕನ್ನಡಿಗರು ಭಾವನಾತ್ಮಕವಾಗಿಯೂ ಒಂದಾಗಬೇಕು. ರಾಜ್ಯ ಇಬ್ಭಾಗವಾದರೆ ನಾವು ಇನ್ನಷ್ಟು ದುರ್ಬಲರಾಗುತ್ತೇವೆ. ಇದು ಕನ್ನಡದ ಅಭಿವೃದ್ಧಿಗೆ ಇನ್ನಷ್ಟು ಸಂಚಕಾರ ತರುತ್ತದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಹೈದ್ರಾಬಾದ್ ಕರ್ನಾಟಕದ ಆರು ಜಿಲ್ಲೆಗಳಿಗೆ ಅನ್ವಯವಾಗುವಂತೆ ಸಂವಿಧಾನದ ಕಲಂ ೩೭೧ಜೆ ಮಾನ್ಯತೆಯನ್ನೂ ನೀಡಿದೆ. ಇದರಿಂದ ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಅನುಕೂಲವಾಗುವುದೆಂಬ ವಿಶ್ವಾಸ ನನಗಿದೆ.

ಕನ್ನಡ ವರ್ಷ–೨೦೧೫

ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿ ಶತಮಾನ ತುಂಬುತ್ತಿರುವ ಈ ಹೊತ್ತಿನಲ್ಲಿ ಕರ್ನಾಟಕ ಸರ್ಕಾರ ೨೦೧೫ನೇ ವರ್ಷವನ್ನು 'ಕನ್ನಡ ವರ್ಷ–೨೦೧೫' ಎಂದು ಘೋಷಿಸಬೇಕು. ಈ ವರ್ಷದುದ್ದಕ್ಕೂ ವಾರದಲ್ಲಿ ಒಂದು ದಿನವನ್ನು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ಕಛೇರಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಕನ್ನಡ ವರ್ಷದ ಆಚರಣೆಗಾಗಿ ಮೀಸಲಿಡಬೇಕು. ಆ ದಿನವನ್ನು 'ಕನ್ನಡ ದಿನ' ಎಂದು ಕರೆಯಬೇಕು. ಆ ದಿನದಂದು ಕನ್ನಡ ಭಾಷೆ, ಸಾಹಿತ್ಯ, ಕಲೆ, ಶಿಕ್ಷಣ ಮುಂತಾದ ಕ್ಷೇತ್ರಗಳ ಸಂಬಂಧವಾಗಿ ಚರ್ಚೆ, ಉಪನ್ಯಾಸ, ವಿಚಾರ ಸಂಕಿರಣ ಮುಂತಾದ ಸಾಂಸ್ಕೃತಿಕ ಹಾಗು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಬೇಕು.

'ಕನ್ನಡ ಮಾತಾಡಿ' ಆಂದೋಲನ

ಸರ್ಕಾರಿ ಹಾಗು ಅರೆಸರ್ಕಾರಿ ಕಛೇರಿಗಳು, ವಿಶ್ವವಿದ್ಯಾಲಯಗಳು, ಕಾರ್ಖಾನೆಗಳು, ಬ್ಯಾಂಕುಗಳು, ಬಹುರಾಷ್ಟ್ರೀಯ ಕಂಪನಿಗಳು ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಮಾತನಾಡಲು ಉತ್ತೇಜಿಸುವ ಸಲುವಾಗಿ 'ಕನ್ನಡ ಮಾತಾಡಿ' ಎಂಬ ಚಳುವಳಿಯನ್ನು ಕೂಡಲೇ ಪ್ರಾರಂಭಿಸಬೇಕು. ಈ ಚಳುವಳಿಯಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಯುವಕರು ಹಾಗೂ ಕನ್ನಡ ಪರ ಸಂಘಟನೆಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಈಗಾಗಲೇ ಬೆಂಗಳೂರಿನಲ್ಲಿ 'ಕನ್ನಡ ಮಾತಾಡಿ'

ಎಂಬ ಚಳುವಳಿಯನ್ನು ಆರಂಭಿಸಿರುವ 'ಕಂಕಣ' ಮುಂತಾದ ಸಂಸ್ಥೆಗಳನ್ನು ಅಭಿನಂದಿಸುತ್ತೇನೆ. ಕೆಲವು ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡದಲ್ಲಿ ಮಾತನಾಡುವ ವಿದ್ಯಾರ್ಥಿಗಳಿಗೆ ದಂಡ ಹಾಕಲಾಗುತ್ತಿದೆ. ಇಂತಹ ಶಾಲೆಗಳನ್ನು ಗುರುತಿಸಿ ಅವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕು.

ಕನ್ನಡ ಕ್ರೈಸ್ತರ ಸಮಸ್ಯೆ

ಕಳೆದ ಐದು ದಶಕಗಳಂದ ಕನ್ನಡ ಕ್ರೈಸ್ತರು ಕರ್ನಾಟಕದ ಚರ್ಚುಗಳಲ್ಲಿ ಆಡಳಿತ ಮತ್ತು ಆರಾಧನೆಯಲ್ಲಿ ಕನ್ನಡ ಬಳಸಬೇಕೆಂದು ಹೋರಾಡುತ್ತ ಬಂದಿದ್ದಾರೆ. ಚರ್ಚುಗಳಲ್ಲಿ ಕನ್ನಡ ಅಧಿಕೃತ ಭಾಷೆಯಾಗಬೇಕು. ಕರ್ನಾಟಕದಲ್ಲಿ ಗುರುಗಳ ತರಬೇತಿಗಾಗಿ ಒಂದು ಪ್ರಾದೇಶಿಕ ಗುರುಮಠ ಆಗಬೇಕು. ಕನ್ನಡ ಕ್ರೈಸ್ತ ಹೋರಾಟಗಾರರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸುತ್ತೇನೆ.

ಇದೇ ಸಂದರ್ಭದಲ್ಲಿ ಕನ್ನಡದ ನೆಲ, ಜಲ ಮತ್ತು ಭಾಷೆಗಾಗಿ ಹೋರಾಟ ನಡೆಸುತ್ತಿರುವ ಕನ್ನಡಪರ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಹೂಡಿರುವ ಎಲ್ಲ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ವಲಸೆ ಸಮಸ್ಯೆ

ಸಂವಿಧಾನದಲ್ಲಿ ಭಾರತದಪ್ರಜೆ ದೇಶದ ಯಾವುದೇ ಪ್ರದೇಶಕ್ಕೆ ಹೋಗಿ ನೆಲೆಸಲು ಅವಕಾಶವಿರುವುದರಿಂದ ವಲಸೆಗಾರರನ್ನು ತಡೆಯುವಂತಿಲ್ಲ. ಆದರೆ ವಲಸೆ ಬಂದ ಜನ ಇಲ್ಲಿನ ಭಾಷೆ ಮತ್ತು ಸಂಸ್ಕೃತಿಯನ್ನು ಗೌರವಿಸಬೇಕು. ಆದರೆ ವಲಸೆ ಬಂದವರು ಹಲವಾರು ವರ್ಷಗಳಿಂದ ಇಲ್ಲಿ ನೆಲೆಸಿದ್ದರೂ ಇಲ್ಲಿನ ಭಾಷೆ ಮತ್ತು ಸಂಸ್ಕೃತಿಯನ್ನು ಅರಿಯದಿರುವುದು ದುರದೃಷ್ಟಕರ. ಇಂದು ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗಿದ್ದಾರೆ. ಕರ್ನಾಟಕದಲ್ಲಿ ಸಾರ್ವಭೌಮ ಭಾಷೆಯಾಗಿ ಮೆರೆಯಬೇಕಾಗಿದ್ದ ಕನ್ನಡ ಇಂದು ತಾಯ್ನಾಡಿನಲ್ಲಿಯೇ ತಬ್ಬಲಿಯಾಗಿದೆ. ಪರಭಾಷಿಕರಿಗೆ ಕನ್ನಡ ಕಲಿಕಾ ಕೇಂದ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯಬೇಕು. ನಾಡಿನ ಎಲ್ಲೆಡೆ ಕನ್ನಡ ರಾರಾಜಿಸಬೇಕು. ಕಣ್ಣಿಗೆ ಕಾಣಲಿ ಕನ್ನಡ, ಕಿವಿಗೆ ಕೇಳಲಿ ಕನ್ನಡ ಎಂಬ ಘೋಷಣೆ ನಿಜವಾಗಬೇಕು. ಸಂವಿಧಾನ ಕರ್ತೃ ಡಾ. ಬಿ.ಆರ್. ಅಂಬೇಡ್ಕರ್ ಅವರು ವಲಸೆಯ ಬಗ್ಗೆ ಹೇಳಿರುವ ಮಾತು ಗಮನಾರ್ಹವಾಗಿದೆ; 'ಭಾರತದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಉದ್ಯೋಗ, ಶಿಕ್ಷಣ, ವ್ಯಾಪಾರ ಇತ್ಯಾದಿ ಕಾರಣಗಳಿಂದ ಹೋಗುವುದಕ್ಕೆ ಮತ್ತು ನೆಲಸುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಹೀಗೆ ಬಂದವರು ಆ ಸ್ಥಳದ ಸಾಮಾಜಿಕ, ಸಾಂಸ್ಕೃತಿಕ ಸಮತೋಲನವನ್ನು ಕಾಯ್ದುಕೊಳ್ಳಲು ನೆರವಾಗಬೇಕು' ಎಂದು ಅವರು ಹೇಳಿದ್ದಾರೆ.

ಬೆಂಗಳೂರು ಸೇರಿದಂತೆ ಕರ್ನಾಟಕದ ಕೆಲವು ನಗರಗಳಲ್ಲಿ ಕನ್ನಡಿಗರು ಹೃದಯ ಭಾಗದಿಂದ ಅಂಚಿಗೆ ಸರಿಯುತ್ತಿದ್ದಾರೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಕನ್ನಡಿಗರ ಫಲವತ್ತಾದ ಜಮೀನುಗಳನ್ನು ಕೇರಳ ಮತ್ತು ಆಂಧ್ರದಿಂದ ಬಂದವರು ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿದ್ದಾರೆ. ಭೂಮಾಲೀಕರಾಗಿದ್ದ ಕನ್ನಡಿಗರು ತಮ್ಮ ನೆಲದಲ್ಲೇ ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ದಿನೇ ದಿನೇ ಈ ವಲಸೆಯು ಸೃಷ್ಟಿಸುತ್ತಿರುವ ಆತಂಕಗಳಿಗೆ ಪರಿಹಾರ ಕಂಡುಕೊಳ್ಳಲು ಕರ್ನಾಟಕ ಸರ್ಕಾರ ಒಂದು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚನೆ ಮಾಡುವುದು ಸೂಕ್ತ.

ಮೌಢ್ಯ ವಿರೋಧ

ಬೆತ್ತಲೆಸೇವೆ ಮಾಡುವುದು, ಜೀವಂತ ವ್ಯಕ್ತಿಯ ಬೆನ್ನಿಗೆ ಕಬ್ಬಿಣದ ಕೊಂಡಿಯನ್ನು ಸಿಕ್ಕಿಸಿ ಅವನ ದೇಹವನ್ನು ಸುಮಾರು ಹದಿನೈದು ಅಡಿ ಮೇಲಕ್ಕೇರಿಸಿ ಸಿಡಿ ಎಂದು ನೇತಾಡಿಸುವ ಮೌಢ್ಯ ಸಂಪೂರ್ಣವಾಗಿ ಇಲ್ಲವಾಗಬೇಕಾಗಿದೆ. ಕೆಲವು ಗ್ರಾಮಗಳಲ್ಲಿ, ಸ್ತ್ರೀಯರನ್ನು ಅವರ ಮಾಸಿಕ ದೈಹಿಕ ಬದಲಾವಣೆಯ ಕಾರಣಕ್ಕಾಗಿ ಮತ್ತು ಗರ್ಭಿಣಿಯರು, ಬಾಣಂತಿಯರನ್ನು ಸೂತಕವೆಂಬ ನೆಪವೊಡ್ಡಿ ಊರಹೊರಗೆ ಇರಿಸುವ ಪದ್ಧತಿ ಇನ್ನೂ ರೂಢಿಯಲ್ಲಿದೆ. ಇದನ್ನು ತಪ್ಪಿಸಲು ಈ ಬುಡಕಟ್ಟು ಮಹಿಳೆಯರು ಸಮೀಪದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಸೌಲಭ್ಯವನ್ನು ಪಡೆಯುವಂತೆ ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಇದಲ್ಲದೆ ಒಂದು ಜಾತಿಯ ಜನರು ತಿಂದುಬಿಟ್ಟ ಎಂಜಲಿನ ಮೇಲೆ ಇನ್ನೊಂದು ಜಾತಿಯವರು ಹೊರಳಾಡುವುದು ಧರ್ಮವೂ ಅಲ್ಲ, ಆರೋಗ್ಯಕರವೂ ಅಲ್ಲ. ಈ ಬಗೆಯ ಅಂಧಶ್ರದ್ಧೆ, ಮೂಢನಂಬಿಕೆಗಳು ಎಲ್ಲಾ ಜಾತಿ, ಧರ್ಮಗಳಲ್ಲೂ ಇವೆ. ಮಾನವನಿಗೆ ನೈತಿಕಶಕ್ತಿ ಮತ್ತು ಮನೋಬಲ ಕೊಡುವ, ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನು ನಾನು ವಿರೋಧಿಸುವುದಿಲ್ಲ. ಮನುಷ್ಯನ ಘನತೆಯನ್ನು ಕುಗ್ಗಿಸುವ ಮೌಢ್ಯಾಚರಣೆಗಳನ್ನು ವಿರೋಧಿಸುತ್ತೇನೆ. ನನ್ನ ಆಕ್ಷೇಪಣೆ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಎಲ್ಲಾ ಜಾತಿ, ಧರ್ಮಗಳಲ್ಲಿರುವ ಮೌಢ್ಯತೆ ಅಳಿದು ಅಲ್ಲಿ ಮಾನವೀಯತೆ ನೆಲೆಗೊಳ್ಳಲೆಂದು ಆಶಿಸುತ್ತೇನೆ. ಇಂಥ ಕಂದಾಚಾರಗಳಿಗೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರ ಮೌಢ್ಯವಿರೋಧಿ ಕಾಯ್ದೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತೇನೆ.

ಅಸ್ಪೃಶ್ಯತೆ ಸಮಸ್ಯೆ

ದಲಿತರ ಮೇಲೆ ದೌರ್ಜನ್ಯ, ಅಸ್ಪೃಶ್ಯತೆಯ ಆಚರಣೆ, ಸುದ್ದಿಮಾಧ್ಯಮಗಳಲ್ಲಿ, ದೃಶ್ಯಮಾಧ್ಯಮಗಳಲ್ಲಿ ನಿತ್ಯವೂ ವರದಿಯಾಗುತ್ತಿರುವುದು ಆತಂಕಕಾರಿಯಾಗಿದೆ. ಮಾನವ, ಮಂಗಳಗ್ರಹವನ್ನು ತಲುಪುವ ಈ ಸಂದರ್ಭದಲ್ಲೂ ಸಾವಿರಾರು ಕುಗ್ರಾಮಗಳಲ್ಲಿ ಅಸ್ಪೃಶ್ಯತೆಯು ಆಚರಣೆಯಲ್ಲಿದ್ದು, ದಲಿತವರ್ಗದವರಿಗೆ ಸಾರ್ವಜನಿಕ

ಸ್ಥಳಗಳಲ್ಲಿ ಪ್ರವೇಶ ಇಲ್ಲದಂತಾಗಿದೆ. ಈ ವರ್ಗದವರನ್ನು ದೇವಾಲಯ, ಉಪಹಾರಗೃಹ, ಸಾರ್ವಜನಿಕ ಬಾವಿಗಳಿಂದ ದೂರ ಇಡಲಾಗಿದೆ. ಇವರಿಗೆ ಕ್ಷೌರವನ್ನು ನಿರಾಕರಿಸಿದ ಘಟನೆಗಳೂ ವರದಿಯಾಗುತ್ತಿವೆ. ಅಸ್ಪೃಶ್ಯತೆ ಅಳಿಯ ಬೇಕೆನ್ನುವ ಗಾಂಧಿ, ಅಂಬೇಡ್ಕರ್ ಅವರುಗಳ ಕನಸು ನನಸಾಗಬೇಕಾಗಿದೆ. ಊರಿನ ಶಾನುಭೋಗ, ಪಟೇಲ, ಗೌಡ, ತೋಟಿ, ನೀರುಗಂಟಿ, ತಳವಾರರ ಮಕ್ಕಳು ಮೇಲು ಕೀಳೆನ್ನದೆ ಒಂದೇ ಪಂಕ್ತಿಯಲ್ಲಿ ಕುಳಿತು ದಲಿತ ತಾಯಿಯೊಬ್ಬಳು ತಯಾರಿಸಿದ ಬಿಸಿಯೂಟವನ್ನು ಸಂತೋಷದಿಂದ ಊಟ ಮಾಡುವ ಸನ್ನಿವೇಶ ಕರ್ನಾಟಕದ ಎಲ್ಲಾ ಶಾಲೆಗಳಲ್ಲಿ ಉಂಟಾಗಲಿ ಎಂದು ಆಶಿಸುತ್ತೇನೆ. ಆ ಸುದಿನ ಬಹುದೂರ ಇಲ್ಲವೆಂಬ ಆತ್ಮವಿಶ್ವಾಸ ನನಗಿದೆ. ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕಲು ದಲಿತವರ್ಗದವರು ಜಾಗೃತವಾಗುವುದರ ಜೊತೆಗೆ ಅಸ್ಪೃಶ್ಯತಾ ನಿವಾರಣಾ ಚಳುವಳಿಗೆ ಮೇಲ್ವರ್ಗದ ಯುವಕರೂ ಕೈ ಜೋಡಿಸಬೇಕೆಂದು ವಿನಂತಿಸುತ್ತೇನೆ. ಕನ್ನಡವೇ ನಮ್ಮ ಜಾತಿ, ಕನ್ನಡವೇ ನಮ್ಮ ಧರ್ಮ, ಕನ್ನಡವೇ ನಮ್ಮ ದೇವರು ಎಂಬ ಉದಾತ್ತ ಭಾವನೆ ಜನಮನದಲ್ಲಿ ಮೂಡಲೆಂದು ಹಾರೈಸುತ್ತೇನೆ.

ಮಹಿಳೆಯರ ಮೇಲೆ ದೌರ್ಜನ್ಯ

ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವುದು ದುರದೃಷ್ಟಕರ. ಘನತೆ ಗೌರವದಿಂದ ಸಮಾಜದಲ್ಲಿ ತಲೆ ಎತ್ತಿ ಬಾಳಬೇಕಾದ ನಮ್ಮ ಸಹೋದರಿಯರು ನಿತ್ಯವೂ ಅತ್ಯಾಚಾರಕ್ಕೆ ಒಳಗಾಗಿ, ಹತ್ಯೆಯಾಗುತ್ತಿರುವುದು ನಾಗರೀಕ ಸಮಾಜ ತಲೆತಗ್ಗಿಸುವ ಸಂಗತಿಯಾಗಿದೆ. ಸ್ತ್ರೀಭ್ರೂಣಹತ್ಯೆ ಅನಾಗರೀಕ ಕೃತ್ಯ. ಇದರಿಂದ ಹೆಣ್ಣುಗಂಡಿನ ಜನಸಂಖ್ಯೆಯ ಅನುಪಾತದಲ್ಲಿ ಏರುಪೇರಾಗಿ ಸ್ತ್ರೀಕುಲ ಕಡಿಮೆಯಾಗುತ್ತಿರುವುದು ಅಪಮಾನಕರ ಸಂಗತಿಯಾಗಿದೆ. ನೋವನ್ನು ಅನುಭವಿಸುತ್ತಿರುವ ಹೆಣ್ಣುಮಕ್ಕಳ ಗೋಳನ್ನು ಕೇಳುವವರೆ ಇಲ್ಲವಾಗಿದೆ. ಈ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಅನಕ್ಷರಸ್ಥ ತಾಯಂದಿರು ಹಾಡಿದ ಒಂದು ತ್ರಿಪದಿ ನೆನಪಾಗುತ್ತಿದೆ;

ಹೆಣ್ಣಿನ ಗೋಳಟ್ಟ ಬನ್ನೀಯ ಮರಬೆಂದೊ
ಅಲ್ಲಿ ಸನ್ಯಾಸಿ ಮಠಬೆಂದೊ ಹಾರುವರ
ಪಂಚಾಂಗ ಹತ್ತಿ ಉರಿದಾವೊ

ಈ ತ್ರಿಪದಿ ಈಗಲೂ ಪ್ರಸ್ತುತವೆಂದು ನನ್ನ ಭಾವನೆ. ಈ ಅತ್ಯಾಚಾರಿಗಳು ಎಷ್ಟೇ ಶ್ರೀಮಂತರಾಗಿರಲಿ, ಪ್ರಭಾವಶಾಲಿಗಳಾಗಿರಲಿ ನ್ಯಾಯಾಂಗ ಅವರಿಗೆ ಉಗ್ರಶಿಕ್ಷೆ ವಿಧಿಸಬೇಕೆಂದು ಕೋರುತ್ತೇನೆ.

ಕರ್ನಾಟಕ ಮತ್ತು ರೈಲ್ವೆ

ರೈಲು ಮತ್ತು ರಸ್ತೆಗಳು ನಾಡಿನ ಜೀವನಾಡಿಯಿದ್ದಂತೆ. ಸಾರಿಗೆ ಕ್ಷೇತ್ರದಲ್ಲಿ ಪ್ರಗತಿ ಇದೆ ಎಂದಾದರೆ ನಾಡು ಪ್ರಗತಿಪಥದಲ್ಲಿದೆ ಎಂದರ್ಥ. ಅದರಲ್ಲೂ ರೈಲುಗಳು ಬೃಹತ್ ಪ್ರಮಾಣದಲ್ಲಿ ಸರಕು, ಸಾಮಗ್ರಿಗಳನ್ನು ಕಮ್ಮಿ ಖರ್ಚಿನಲ್ಲಿ ಒಟ್ಟಿಗೆ ಸಾಗಿಸುವ ಸಾಧನಗಳಾಗಿವೆ. ಹಾಗೇ ಹೆಚ್ಚು ಜನರನ್ನು ಕಡಿಮೆ ಪ್ರಯಾಣ ದರದಲ್ಲಿ ಕೊಂಡೊಯ್ಯುತ್ತದೆ. ಒಂದು ರಾಜ್ಯದ ಪ್ರಗತಿಯು ಅದರ ರೈಲು ಮಾರ್ಗದ ಬಳಕೆಯಲ್ಲಿ ಅಡಗಿದೆ. ರೈಲ್ವೆಯಲ್ಲಿ ಕರ್ನಾಟಕವು ಅತೀ ಹಿಂದುಳಿದ ರಾಜ್ಯಗಳಲ್ಲಿ ೨ನೇ ಸ್ಥಾನದಲ್ಲಿದೆ. ರಾಷ್ಟ್ರದಲ್ಲಿ ೬೮೦೦೮ ಕಿ.ಮೀ.ರೈಲು ಇದ್ದು ಕರ್ನಾಟಕದಲ್ಲಿ ೩೦೭೨ ಕಿ.ಮೀ. ರೈಲು ಮಾರ್ಗವಿದೆ.ಅಂದರೆ ಶೇ. ೫.೩% ಭೌಗೋಳಿಕ ಪ್ರದೇಶ ಹೊಂದಿರುವ ಕರ್ನಾಟಕವು ಶೇ. ೩.೯೫ ರಷ್ಟು ರೈಲು ಮಾರ್ಗವನ್ನು ಮಾತ್ರ ಹೊಂದಿದೆ. ಕೆಲವು ಜಿಲ್ಲಾ ಕೇಂದ್ರಗಳಿಗೆ, ೮೦ ತಾಲ್ಲೂಕು ಕೇಂದ್ರಗಳಿಗೆ ರೈಲ್ವೆ ಸಂಪರ್ಕವಿಲ್ಲ. ಕೊಡಗು ಜಿಲ್ಲೆಯಲ್ಲಿ ೧.ಕಿ.ಮೀ. ರೈಲು ಮಾರ್ಗವೂ ಇಲ್ಲ.

ದೇಶದಲ್ಲಿ ಪ್ರತಿ ಸಾವಿರ ಚ.ಕಿ.ಮೀ.ಗೆ ೧೯.೨೭ ಕಿ.ಮೀ. ರೈಲು ಹಳಿಗಳಿದ್ದರೆ, ಕರ್ನಾಟಕದಲ್ಲಿ ೧೫.೯೬ ಮಾತ್ರ, ಪಕ್ಕದ ತಮಿಳುನಾಡಿನಲ್ಲಿ ೩೨.೩೦, ಕೇರಳದಲ್ಲಿ ೨೭, ಆಂಧ್ರಪ್ರದೇಶದಲ್ಲಿ ೧೯.೯೭ ರೈಲ್ವೆ ಹಳಿಗಳಿವೆ. ಪಕ್ಕದ ಎಲ್ಲಾ ರಾಜ್ಯಗಳು ರಾಷ್ಟ್ರದ ಸರಾಸರಿಗಿಂತ ಮೇಲಿವೆ. ರೈಲ್ವೆ ವಿದ್ಯುತ್ತೀಕರಣ ವಿಚಾರದಲ್ಲೂ ಅಷ್ಟೆ. ರಾಷ್ಟ್ರದ ಸರಾಸರಿ ಶೇ. ೨೯.೯೪ ಮಾರ್ಗ ವಿದ್ಯುತ್ತೀಕರಣಗೊಂಡಿದ್ದರೆ, ಕರ್ನಾಟಕದಲ್ಲಿ ಕೇವಲ ಶೇ. ೪.೫೯ ಆಗಿದ್ದು ರಾಷ್ಟ್ರದಲ್ಲೇ ಕೊನೆ ಸ್ಥಾನದಲ್ಲಿದೆ. ೧೯೧೪ರಲ್ಲಿ ಸರ್ವೇಕ್ಷಣ ಆದ ಚಿಕ್ಕಮಗಳೂರು, ಹಾಸನ ಮಾರ್ಗ ಇನ್ನೂ ಕಾಗದದ ಮೇಲೆ ಉಳಿದಿದೆ. ರಾಜ್ಯ ಸರ್ಕಾರ ರೈಲ್ವೆ ವಿಚಾರದಲ್ಲಿ ಏನಾಗಬೇಕು ಎಂಬ ಬಗ್ಗೆ ಒಂದು ನೀಲನಕಾಶೆಯನ್ನು ಸಿದ್ಧಪಡಿಸಲು ತಜ್ಞರ ಸಮಿತಿ ರಚಿಸಬೇಕು. ರಾಜಧಾನಿಯಿಂದ ವಿಶ್ವವಿಖ್ಯಾತ ಶ್ರವಣಬೆಳಗೊಳಕ್ಕೆ ರೈಲು ಮಾರ್ಗ ಇಲ್ಲ ಎಂಬುದು ಅಪಮಾನದ ಸಂಗತಿ. ಎರಡು ದಶಕದಿಂದ ಈ ಮಾರ್ಗದ ಕಾಮಗಾರಿ ನಡೆಯುತ್ತಲೇ ಇದೆ. ಈ ಇತಿಮಿತಿಗಳ ನಡುವೆಯೂ ಶ್ರೀ ಜಾಫರ್ ಷರೀಫ್ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ರೈಲ್ವೆ ಸಚಿವರಾಗಿದ್ದಾಗ ಆಗಿರುವ ಕೆಲಸ ಶ್ಲಾಘನೀಯ.

ಅಂಚೆ ಚೀಟಿ

ಭಾಷೆ, ಸಂಸ್ಕೃತಿ, ರಾಷ್ಟ್ರ, ಜನಾಂಗಗಳನ್ನು ಸಮರ್ಥವಾಗಿ ಪರಿಚಯಿಸುವಲ್ಲಿ ಅಂಚೆ ಚೀಟಿಗಳು ಅತೀ ಮಹತ್ವದ ಪಾತ್ರವನ್ನು ವಹಿಸುತ್ತವೆ. ದುರಂತವೆಂದರೆ ಎಲ್ಲಾ ಕ್ಷೇತ್ರಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವಂತೆ ಕರ್ನಾಟಕ ಅಂಚೆ ಚೀಟಿ ಪ್ರಕಟಣೆಯಲ್ಲಿಯೂ ಕಡೆಗಣಿಸಲ್ಪಟ್ಟಿದೆ. ಭಾರತವು ಸ್ವಾತಂತ್ರ್ಯ ಬಂದ ನಂತರ ೨೩೦೦ಕ್ಕೂ ಹೆಚ್ಚು ಅಂಚೆ ಚೀಟಿಗಳನ್ನು ಹೊರತಂದಿದೆ. ಅದರಲ್ಲಿ ಕರ್ನಾಟಕದ

ಅಂಚೆ ಚೀಟಿಗಳು ೪೦ಕ್ಕಿಂತ ಕಡಿಮೆ. ಅಂದರೆ ವರ್ಷಕ್ಕೆ ಒಂದು ಅಂಚೆ ಚೀಟಿಯೂ ಹೊರಬಂದಿಲ್ಲ. ಪಕ್ಕದ ತಮಿಳುನಾಡಿಗೆ ಸಂಬಂಧಿಸಿದಂತೆ ೧೫೦ಕ್ಕೂ ಹೆಚ್ಚು ಅಂಚೆ ಚೀಟಿಗಳು ಹೊರ ಬಂದಿವೆ. ದಯಾನಿಧಿ ಮಾರನ್ ಅವರು ಕೇಂದ್ರದಲ್ಲಿ ಸಂಪರ್ಕ ಖಾತೆ ಸಚಿವರಾಗಿದ್ದಾಗ ಒಂದೇ ವರ್ಷದಲ್ಲಿ ೨೨ ಅಂಚೆ ಚೀಟಿಗಳು ಹೊರಬಂದವು. ಈ ಅಂಚೆ ಚೀಟಿಯ ಪ್ರಕಟಣೆಯಲ್ಲಿ ಹೇಗೆ ತಾರತಮ್ಯ ನಡೆಯುತ್ತಿದೆ ಎಂಬುದಕ್ಕೆ ಇದು ಒಂದು ನಿದರ್ಶನ. ಜ್ಞಾನಪೀಠ ಪುರಸ್ಕೃತರ ಅಂಚೆ ಚೀಟಿಗಳು ಪ್ರಕಟಣೆಯಾದಾಗ ಕನ್ನಡದ ಆರು ಸಾಹಿತಿಗಳನ್ನು ಒಂದೇ ಅಂಚೆ ಚೀಟಿಯಲ್ಲಿ ಸೇರಿಸಲಾಗಿತ್ತು. ಆದರೆ ಮಲಯಾಳಂನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಸಾಹಿತಿಗಳ ಅಂಚೆ ಚೀಟಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪ್ರಕಟಿಸಲಾಗಿತ್ತು. ವಿವಿಧ ಸ್ಮಾರಕಗಳು ಮತ್ತು ಶತಮಾನೋತ್ಸವ ಸಂದರ್ಭದ ಅಂಚೆ ಚೀಟಿಗಳನ್ನು ಹೊರತರುವಾಗ ಕರ್ನಾಟಕವನ್ನು ಕಡೆಗಣಿಸಲಾಗಿದೆ. ರಾಜ್ಯ ಸರ್ಕಾರವು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಕೋರುತ್ತೇನೆ.

ಆರೋಗ್ಯ

ಶಿಕ್ಷಣದಂತೆ ಆರೋಗ್ಯವೂ ಬಡವರ ಕೈಗೆ ಎಟುಕದ ವಸ್ತುವಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಉದ್ಭವಗೊಂಡಿರುವ ಹೈಟೆಕ್ ಆಸ್ಪತ್ರೆಗಳು ವಿಧಿಸುವ ಮೊತ್ತವನ್ನು ಭರಿಸುವ ಶಕ್ತಿ ಜನಸಾಮಾನ್ಯರಿಗೆ ಇಲ್ಲವಾಗಿದೆ. ಮಧ್ಯಮವರ್ಗದವರು, ಕೆಳಮಧ್ಯಮವರ್ಗದವರು ಮತ್ತು ಬಡವರು ಈ ಆಸ್ಪತ್ರೆಗಳಿಗೆ ಹೋಗಲು ಹೆದರುತ್ತಾರೆ. ಈ ಆಸ್ಪತ್ರೆಗಳ ಮೇಲೆ ಸರ್ಕಾರದ ಯಾವುದೇ ನಿಯಂತ್ರಣ ಇಲ್ಲ. ಯಮನು ಪ್ರಾಣವನ್ನು ಮಾತ್ರ ಹರಣ ಮಾಡಿದರೆ, ಈ ಆಸ್ಪತ್ರೆಗಳು ಪ್ರಾಣ ಮತ್ತು ಹಣ ಎರಡನ್ನೂ ಹರಣ ಮಾಡುತ್ತವೆ. ಹಿಂದೆ ಬಡಜನರು ಮದುವೆ, ಹಬ್ಬಗಳಿಗಾಗಿ ಸಾಲ ಮಾಡಿ ಜೀವನ ಪೂರ್ತಿ ಸಾಲ ತೀರಿಸಲು ಹೆಣಗಾಡುತ್ತಿದ್ದರು. ಇಂದು ಜನಸಾಮಾನ್ಯರು ಆಸ್ಪತ್ರೆಗಳ ವೆಚ್ಚವನ್ನು ಭರಿಸಲು ಸಾಲಮಾಡುವ ಪರಿಸ್ಥಿತಿ ಉಂಟಾಗಿದೆ. ಇಂತಹ ಈ ಹೈಟೆಕ್ ಆಸ್ಪತ್ರೆಗಳ ಮೇಲೆ ಸರ್ಕಾರ ನಿಗಾ ವಹಿಸಬೇಕೆಂದು ವಿನಂತಿಸುತ್ತೇನೆ.

ರೈತರ ಗೋಳು

ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯ ಮಾಡುವ ರೈತನ ಬಾಳು ಗೋಳಾಗಿದೆ. ಅವನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ದಕ್ಕುತ್ತಿಲ್ಲ. ರೈತರು ತಾವು ಕಷ್ಟಪಟ್ಟು ಬೆಳೆದ ತರಕಾರಿಯನ್ನು ಲೋಡುಗಟ್ಟಲೆ ಬೀದಿಗೆ ತಂದು ಚೆಲ್ಲಿ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೃಷಿಗಾಗಿ ವಿವಿಧ ಬ್ಯಾಂಕುಗಳಲ್ಲಿ ತನ್ನ ಜಮೀನನ್ನು ಅಡವಿಟ್ಟ ರೈತ ಸಾಲವನ್ನು ತೀರಿಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿರುವುದು ಅತ್ಯಂತ ಗಂಭೀರ ಸಂಗತಿಯಾಗಿದೆ. ರೈತನು ದೇಶದ ಬೆನ್ನೆಲುಬು ಎಂದು ಪ್ರಾಜ್ಞರು ಹೇಳಿದ್ದರೂ, ರೈತನ ಬೆನ್ನೆಲುಬು ಮುರಿದು ಹೋಗಿರುವುದನ್ನು ಕಂಡು ವಿಷಾದವಾಗುತ್ತದೆ.

ಇಂದು ರೈತರ ಮಕ್ಕಳು ರೈತರಾಗಲು ಇಷ್ಟಪಡುತ್ತಿಲ್ಲ. ಇಂದು ಹಳ್ಳಿಗಳಲ್ಲಿ ಕೃಷಿಕಾರ್ಮಿಕರೂ ಸಿಗುತ್ತಿಲ್ಲ. ಕೃಷಿಯೋಗ್ಯ ಭೂಮಿಯಲ್ಲೂ ಕೃಷಿ ಚಟುವಟಿಕೆ ನಡೆಯುತ್ತಿಲ್ಲ. ಹೊಲಗದ್ದೆಗಳಲ್ಲಿ ದುಡಿಯುವುದಕ್ಕಿಂತ, ನಗರಗಳಿಗೆ ವಲಸೆ ಹೋಗುವುದೆ ಲೇಸೆಂದು ಗ್ರಾಮೀಣ ಯುವಕರು ಪಟ್ಟಣ ಸೇರುತ್ತಿದ್ದಾರೆ. ಒಂದೊಂದು ಹಳ್ಳಿಯೂ ಕ್ರಮೇಣ ಒಂದೊಂದು ವೃದ್ಧಾಶ್ರಮವಾಗುತ್ತಿದೆ. ಇದೇ ಸ್ಥಿತಿ ಮುಂದುವರೆದಲ್ಲಿ ಆಹಾರದ ಕ್ಷಾಮ ಉಂಟಾಗಿ, ತುತ್ತು ಅನ್ನಕ್ಕಾಗಿ ಜನ ಪರದಾಡುವ ಕಾಲ ಬಂದರೆ ಆಶ್ಚರ್ಯವಿಲ್ಲ. ರಾಜ್ಯದಲ್ಲಿ ಕಬ್ಬು ಬೆಳೆಗಾರರು ತಾವು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿ ಅದರಿಂದ ಬರಬೇಕಾದ ಹಣಕ್ಕೆ ಭಿಕ್ಷುಕರ ರೀತಿಯಲ್ಲಿ ನಿತ್ಯ ಕೈಯೊಡ್ಡಿ ಧರಣಿ, ಚಳುವಳಿಯ ಮೂಲಕ ಬೇಡುತ್ತಿರುವ ಸ್ಥಿತಿ ಕಂಡರೆ ಹೃದಯ ಕರಗುತ್ತದೆ. ಕಹಿಯಾಗಿರುವ ಕಬ್ಬು ಬೆಳೆಗಾರರ ಬದುಕು ಸಿಹಿಯಾಗಲೆಂದು ಆಶಿಸುತ್ತೇನೆ.

ರೈತರಿಗೆ ಕೊಡಲಾಗುವ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಉತ್ಪಾದಿಸುತ್ತಿವೆ. ಇವುಗಳನ್ನು ಆ ಕಂಪನಿಗಳು ಉತ್ಪಾದನಾ ವೆಚ್ಚಕ್ಕಿಂತ ನೂರು ಪಟ್ಟು ಹೆಚ್ಚು ಬೆಲೆಗೆ ಮಾರುತ್ತಿವೆ. ಈ ಬಾಬ್ತುಗಳಿಗೆ ಸರ್ಕಾರ ನೀಡುವ ಸಬ್ಸಿಡಿ ಹಣ ಪರೋಕ್ಷವಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಹೋಗುತ್ತಿದೆ. ಕೃಷಿಯನ್ನು ಕೈಗಾರಿಕೆ ಎಂದು ಭಾವಿಸಿ, ರೈತನು ಬೆಳೆದ ಬೆಳೆಗೆ ಸರ್ಕಾರ ವೈಜ್ಞಾನಿಕ ಬೆಲೆಯನ್ನು ನಿಗದಿ ಪಡಿಸುವ ತನಕ ಅನ್ನದಾತನ ಕಷ್ಟಕ್ಕೆ ಕೊನೆಯೇ ಇಲ್ಲ. ಕೃಷಿಯನ್ನು ಪ್ರೋತ್ಸಾಹಿಸಲು ರೈತನಿಗೆ ಬೇಕಾದ ನೀರು, ಗೊಬ್ಬರ ಮತ್ತು ವಿದ್ಯುತ್ತನ್ನು ಸರ್ಕಾರ ಒದಗಿಸಲು ಕೂಡಲೇ ಕ್ರಮ ಜರುಗಿಸಬೇಕು. ಸರ್ಕಾರ ಆಧುನಿಕ ತಂತ್ರಜ್ಞಾನವುಳ್ಳ ಶೈತ್ಯಾಗಾರಗಳನ್ನು ನಿರ್ಮಿಸಬೇಕು. ರೈತನ ಉತ್ಪನ್ನಗಳು ಹಾಳಾಗದಂತೆ ಅವುಗಳಿಗೆ ರಕ್ಷಣೆ ಸಿಗಬೇಕು. ಈ ವಿಷಯದಲ್ಲಿ ಸರ್ಕಾರಕ್ಕೆ ಹಾಲು ಉತ್ಪಾದಕರ ಮಹಾಮಂಡಲ ಮಾದರಿಯಾಗಬೇಕು.

ನೀರಾವರಿ

ಕರ್ನಾಟಕ ಏಕೀಕರಣವಾಗಿ ಆರು ದಶಕಗಳು ಸಮೀಪಿಸುತ್ತಿದ್ದರೂ ಇಂದಿಗೂ ನೀರಾವರಿ ಕ್ಷೇತ್ರದಲ್ಲಿನ ನಮ್ಮ ಸಾಧನೆ ತೀರಾ ನಗಣ್ಯವಾದದ್ದು. ಭಾರತದಲ್ಲಿ ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕದಲ್ಲಿಯೇ ಅತೀ ಹೆಚ್ಚು ಬಂಜರು ಪ್ರದೇಶ ಇದೆ ಎನ್ನುವುದು ವಾಸ್ತವದ ಸಂಗತಿ. ರಾಷ್ಟ್ರದ ಸರಾಸರಿ ನೀರಾವರಿ ಶೇ.೪೮ ರಷ್ಟಿದ್ದರೆ ಕರ್ನಾಟಕದಲ್ಲಿ ಶೇ.೨೩ ಎನ್ನುವುದನ್ನು ನಾವು ಗಮನಿಸಿದಾಗ ನಮ್ಮ ಸಾಧನೆ ಸಾಲದು ಎನಿಸುತ್ತದೆ. ನಮ್ಮ ಈ ಹಿನ್ನೆಡೆಗೆ ಅಂತರರಾಜ್ಯ ಜಲವಿವಾದಗಳು ಸ್ವಲ್ಪ ಮಟ್ಟಿಗೆ ಕಾರಣವಾದರೂ ಆಳುವವರು ಯೋಜನೆಯನ್ನು ಅನುಷ್ಠಾನ ಗೊಳಿಸುವಲ್ಲಿ ತೋರಿಸಿದ ವಿಳಂಬ ನೀತಿ ಮುಖ್ಯ ಕಾರಣವೆಂದರೆ ತಪ್ಪಾಗಲಾರದು.

ರಾಜ್ಯದಲ್ಲಿ ಕೃಷಿಗೆ ಯೋಗ್ಯವಾದ ೧೦೭ ಲಕ್ಷ ಹೆಕ್ಟೇರ್ ಜಮೀನಿದೆ. ಅದರಲ್ಲಿ ೫೫ ಲಕ್ಷ ಹೆಕ್ಟೇರ್‌ಗಳಿಗೆ ಮಾತ್ರ ನೀರಾವರಿ ಒದಗಿಸುವ ಜಲಸಂಪತ್ತಿದೆ. ದುರಂತವೆಂದರೆ ನಾವು ಕೇವಲ ೨೪.೯೧ ಲಕ್ಷ ಹೆಕ್ಟೇರುಗಳಿಗೆ ಮಾತ್ರ ನೀರಾವರಿ ಸೌಲಭ್ಯ ಕಲ್ಪಿಸಿದ್ದೇವೆ. ದೇಶದ ಒಟ್ಟು ಬರ ಪೀಡಿತ ಪ್ರದೇಶದಲ್ಲಿ ಕರ್ನಾಟಕದ ಪಾಲು ಶೇ.೨೩. ನಾವು ಕಟ್ಟಿದ ಜಲಾಶಯಗಳಲ್ಲಿ ನಿಂತಿರುವ ನೀರನ್ನು ಸರಿಯಾಗಿ ಬಳಸದೆ ಇರುವುದರಿಂದ ಈ ನೀರು ಅನ್ಯರ ಪಾಲಾಗುತ್ತಿದೆ.

ಕರ್ನಾಟಕದಲ್ಲಿ ಹರಿಯುವ ಪಶ್ಚಿಮವಾಹಿನಿಯ ನದಿಗಳ ನೀರನ್ನು ಬರಪೀಡಿತ ಪ್ರದೇಶಗಳಿಗೆ, ವ್ಯವಸಾಯಕ್ಕೆ, ಕುಡಿಯುವುದಕ್ಕೆ ಬಳಸಲು ನದಿಗಳ ಜೋಡಣೆ ಕೆಲಸವನ್ನು ತ್ವರಿತವಾಗಿ ಮಾಡಬೇಕಾಗಿದೆ. ನೆಲದ ಮೇಲಿರುವ ಜೀವಸಂಕುಲಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿ ಪರಿಸರವನ್ನೂ ಕಾಯ್ದುಕೊಳ್ಳುವ ಕೆಲಸ ಆಗಬೇಕಾಗಿದೆ. ನೆಹರು ಅವರು ಅಣೆಕಟ್ಟುಗಳನ್ನು 'ಆಧುನಿಕ ದೇವಾಲಯ' ಗಳೆಂದು ಕರೆದರು. ಆದರೆ ಈಗ ಕಟ್ಟಿರುವ ಅಣೆಕಟ್ಟುಗಳಲ್ಲಿ ನಿಂತಿರುವ ನೀರನ್ನು ರೈತರ ಭೂಮಿಗೆ ಹರಿಸುವ ಉಪಕಾಲುವೆಗಳ ಕೆಲಸ ತ್ವರಿತಗತಿಯಲ್ಲಿ ಆಗಿ ರೈತರಿಗೆ ಅದು ಆತ್ಮಸ್ಥೈರ್ಯವನ್ನು, ಆರ್ಥಿಕ ಬಲವನ್ನು ತಂದುಕೊಡಬೇಕಾಗಿದೆ. ಆ ದಿಕ್ಕಿನಲ್ಲಿ ಕೂಡಲೇ ಕೆಲಸ ಮಾಡಬೇಕಾಗುತ್ತದೆ.

ಕೆರೆಕಟ್ಟೆಗಳ ಸಂರಕ್ಷಣೆ

ಕರ್ನಾಟಕದ ಹಲವಾರು ಪ್ರದೇಶ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಕೆರೆಕಟ್ಟೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಅನಿವಾರ್ಯವಾಗಿದೆ. ಮಳೆಗಾಲದಲ್ಲಿ ಬಿದ್ದ ಮಳೆಯ ನೀರನ್ನು ಕೃಷಿಗೆ, ಕುಡಿಯುವುದಕ್ಕೆ, ಜಾನುವಾರುಗಳಿಗೆ ದಕ್ಕಲು ಕೆರೆಕಟ್ಟೆಗಳು ಅತ್ಯವಶ್ಯಕವಾಗಿವೆ. ಆದರೆ ಕರ್ನಾಟಕದಲ್ಲಿ ಕೆರೆಕಟ್ಟೆಗಳು ಒತ್ತುವರಿಯಿಂದಾಗಿ ಮತ್ತು ಹೂಳು ತುಂಬಿಕೊಂಡು ಅವನತಿಯ ಹಾದಿ ಹಿಡಿದಿವೆ. ಹೂಳೆತ್ತುವ ಮತ್ತು ಒತ್ತುವರಿ ತೆರವುಗೊಳಿಸುವ ಕಾರ್ಯ ಸರ್ಕಾರದಿಂದ ಶೀಘ್ರವಾಗಿ ಆಗಬೇಕಾಗಿದೆ. ಇದು ಅಂತರ್ಜಲ ವೃದ್ಧಿಗೆ ಮುಖ್ಯ ಕಾರಣವೂ ಆಗುತ್ತದೆ. ನದಿಗಳಿಂದ, ಅಣೆಕಟ್ಟುಗಳಿಂದ ಕೆರೆಕಟ್ಟೆಗಳಿಗೆ, ಕಾಲುವೆಗಳಿಗೆ ನೀರು ಹರಿಸಿ ತುಂಬಿಸುವುದರಿಂದ ಅಂತರ್ಜಲ ವೃದ್ಧಿಯಾಗುತ್ತದೆ. ಇದನ್ನು ಕಾರ್ಯಗತಗೊಳಿಸಬೇಕು. ಇಲ್ಲದಿದ್ದರೆ ರೈತಕಾರ್ಮಿಕರು ಗುಳೇ ಹೋಗುವುದನ್ನು ನಿಲ್ಲಿಸಲಾಗುವುದಿಲ್ಲ. ಆದ್ದರಿಂದ ಗೋಕಟ್ಟೆಗಳು, ಗೋಮಾಳಗಳು ಮತ್ತು ಕೆರೆಕಟ್ಟೆಗಳ ರಕ್ಷಣೆಯ ಮೂಲಕ ನೀರಾವರಿ ಸೌಲಭ್ಯವನ್ನು ವಿಸ್ತರಿಸಿಕೊಳ್ಳಬೇಕಾಗಿದೆ. ಇದರ ಜೊತೆಗೆ ಪಶುಸಂಗೋಪನೆ, ಹೈನುಗಾರಿಕೆ, ರೇಷ್ಮೆಗಾರಿಕೆ ಮತ್ತು ತೋಟಗಾರಿಕೆಯನ್ನು ಪ್ರೋತ್ಸಾಹಿಸಬೇಕು. ಇದರಿಂದ ರೈತರ ಬದುಕಿಗೆ ಪರ್ಯಾಯ ಆರ್ಥಿಕ ಸಂಪನ್ಮೂಲಗಳನ್ನು ಕಲ್ಪಿಸಿದಂತಾಗುತ್ತದೆ. ಈ ಬಗ್ಗೆ ಕೃಷಿ ವಿಶ್ವವಿದ್ಯಾಲಯಗಳು ಕ್ರಿಯಾಶೀಲವಾಗಿ ಕೃಷಿಕರು ಎದುರಿಸುತ್ತಿರುವ ಹಲವಾರು ಬಿಕ್ಕಟ್ಟುಗಳಿಗೆ ಪರಿಹಾರ ಕಂಡು ಹಿಡಿಯಬೇಕು.

ಶಾಲಾ ಜಮೀನು ಗೇಣಿದಾರರು

ಕರ್ನಾಟಕ ರಾಜ್ಯದಲ್ಲಿ ಕಳೆದ ಶತಮಾನದ ೧೯೫೪-೫೫ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಪ್ರಾರಂಭಿಸಿದ ಭೂ-ವಿದ್ಯಾದಾನದ ಚಳುವಳಿಯಲ್ಲಿ ರಾಜ್ಯದ ವಿವಿಧ ಸರ್ಕಾರಿ ಶಾಲೆಗಳಿಗೆ ದಾನವಾಗಿ ಬಂದಿದ್ದ ಸುಮಾರು ಹತ್ತುಸಾವಿರ ಎಕರೆ ಶಾಲಾಜಮೀನುಗಳನ್ನು ಸುಮಾರು ಮೂರೂವರೆ ಸಾವಿರ ಕುಟುಂಬಗಳು ಗೇಣಿಸಾಗುವಳಿ ಮಾಡುತ್ತಿವೆ. ಈ ಶಾಲಾಜಮೀನುಗಳ ಖಾತೆ ಸಂವಿಧಾನಬಾಹಿರವಾಗಿ ರಾಜಪ್ರಮುಖರ ಹೆಸರಿನಲ್ಲಿವೆ. ಈ ಶಾಲಾಜಮೀನಿನ ಗೇಣಿದಾರರು ಆಯಾ ಸರ್ಕಾರಿ ಶಾಲೆಗಳಿಗೆ ಅಲ್ಪಸ್ವಲ್ಪ ಗೇಣಿ ಹಣವನ್ನು ಈಗಲೂ ಕಟ್ಟುತ್ತಿದ್ದಾರೆ. ಈ ಎಲ್ಲಾ ಗೇಣಿಸಾಗುವಳಿ ಯಲ್ಲಿರುವ ಶಾಲಾಜಮೀನುಗಳು ಶಾಲೆಗಳಿಂದ ೪-೫ ಕಿ.ಮೀ. ದೂರದಲ್ಲಿದ್ದು, ಶಾಲೆಗಳ ಬಳಕೆಗೆ ಸಾಧ್ಯವಾಗದ ಜಮೀನುಗಳಾಗಿವೆ. ಈ ಶಾಲೆಗಳಿಗೆ ಸರ್ಕಾರ, ಆಟದಮೈದಾನ, ಪೀಠೋಪಕರಣಗಳು ಮತ್ತು ಶಿಕ್ಷಕರಿಗೆ ವೇತನವನ್ನು ಕೊಡುತ್ತಿದೆ. ಈ ಹಿನ್ನೆಲೆಯಲ್ಲಿ ಶಾಲಾಜಮೀನುಗಳ ಗೇಣಿದಾರರಿಂದ ಬರುವ ಗೇಣಿ ಹಣದ ಅಗತ್ಯ ಈಗ ಯಾವ ಶಾಲೆಗಳಿಗೂ ಇಲ್ಲ. ಉಳುವವನೆ ಹೊಲದ ಒಡೆಯ ಎಂಬ ಐತಿಹಾಸಿಕ ಕಾಗೋಡು ಸತ್ಯಾಗ್ರಹದ ಸಿದ್ಧಾಂತದ ಅಡಿಯಲ್ಲಿ ೧೯೭೪ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸು ಅವರು ಜಾರಿಗೆ ತಂದ ಕರ್ನಾಟಕ ಭೂಸುಧಾರಣಾ ಕಾನೂನಿನ ಅಡಿಯಲ್ಲಿ ಈ ಶಾಲಾ ಜಮೀನಿನ ಗೇಣಿದಾರರಿಗೆ ಭೂಒಡೆತನದ ಹಕ್ಕುಪತ್ರ ನೀಡದೆ ಅನ್ಯಾಯ ಮಾಡಲಾಗಿದೆ.

ರಾಜ್ಯದಲ್ಲಿ ಕಳೆದ ಹಲವಾರು ದಶಕಗಳಿಂದ ಜಾರಿಯಲ್ಲಿರುವ ಅವೈಜ್ಞಾನಿಕ ಹಾಗು ಅಮಾನವೀಯ ಶಾಲಾಜಮೀನು ಗೇಣಿಪದ್ಧತಿಯನ್ನು ರದ್ದುಪಡಿಸಿ, ಈ ಶಾಲಾಜಮೀನು ಗೇಣಿದಾರರಿಗೆ ಕೂಡಲೇ ಈ ಜಮೀನುಗಳ ಹಕ್ಕುಪತ್ರವನ್ನು ನೀಡಬೇಕೆಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್.ಎಸ್. ದೊರೆಸ್ವಾಮಿಯವರು, ಕಾಗೋಡು ಹೋರಾಟದ ರೂವಾರಿ ಶ್ರೀ ಗಣಪತಿಯಪ್ಪನವರು, ಹಿರಿಯ ಸಾಹಿತಿ ಡಾ. ಯು.ಆರ್. ಅನಂತಮೂರ್ತಿಯವರು, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಶ್ರೀ ಎನ್.ಡಿ. ವೆಂಕಟೇಶ್‌ರವರು, ರೈತ ಮುಖಂಡರಾದ ಶ್ರೀ ಕಡಿದಾಳ್ ಶಾಮಣ್ಣನವರು, ಹೋರಾಟಗಾರರಾದ ಶ್ರೀ ಕಲ್ಲೂರುಮೇಘರಾಜ್ ಮುಂತಾದವರು ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ. ಸರ್ಕಾರ ಶಾಲಾಜಮೀನು ಗೇಣಿದಾರರ ವಿಚಾರದಲ್ಲಿ ಮೀನಾಮೇಷ ಎಣಿಸದೆ ಕೂಡಲೇ ೧೯೭೪ರ ಕರ್ನಾಟಕ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು ಅರ್ಹ ಶಾಲಾಜಮೀನು ಗೇಣಿದಾರರಿಗೆ ಹಕ್ಕುಪತ್ರ ನೀಡಿ ಅದಿಭೋಗದಾರಿಕೆಯನ್ನು ಮಂಜೂರು ಮಾಡಲು ಮನವಿಮಾಡುತ್ತೇನೆ.

ಅರಣ್ಯವಾಸಿ ಗಿರಿಜನರು

ನಮ್ಮ ರಾಜ್ಯದ ಅರಣ್ಯಗಳಲ್ಲಿ ಹಲವು ಶತಮಾನಗಳಿಂದ ವಾಸವಾಗಿರುವ ಅರಣ್ಯವಾಸಿ ಗಿರಿಜನರ ಬದುಕು ದುಸ್ತರವಾಗಿದೆ. ಅರಣ್ಯಕಾಯ್ದೆಯ ನೆಪದಲ್ಲಿ ವಿವಿಧ ಯೋಜನೆಗಳನ್ನು ಹಾಕಿಕೊಂಡು ಕಾಡಿನ ಮೂಲನಿವಾಸಿಗಳನ್ನು ಅಲ್ಲಿಂದ ಎತ್ತಂಗಡಿಮಾಡುವ ಕಾರ್ಯ ನಡೆಯುತ್ತಿದೆ. ಕಾಡಿನಲ್ಲೇ ಇರಲು ಇಷ್ಟಪಟ್ಟವರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಗಿದೆ. ಅವರು ಕಾಡಿನಲ್ಲಿ ಇರಬಹುದು, ಆದರೆ ಅವರು ಜೀವನಾಧಾರವಾದ ಅರಣ್ಯದ ಸಂಪನ್ಮೂಲಗಳನ್ನು ಬಳಸುವಂತಿಲ್ಲ. ಹಣ್ಣುಗಳನ್ನು ಬಿಟ್ಟ ಮರವನ್ನು ಅವರು ದೂರನಿಂತು ಕಣ್ತುಂಬ ನೋಡಬಹುದೆ ಹೊರತು ಹಣ್ಣುಗಳನ್ನು ಕೀಳುವಂತಿಲ್ಲ. ಕೊಳದಲ್ಲಾಡುವ ಮೀನುಗಳನ್ನು ನೋಡಬಹುದೆ ಹೊರತು ಅವುಗಳನ್ನು ಹಿಡಿದು ಆಹಾರವಾಗಿ ಬಳಸುವಂತಿಲ್ಲ. ಜೇನನ್ನು ನೋಡಬಹುದೆ ಹೊರತು ಇವರಿಗೆ ಅದನ್ನು ಕಿತ್ತು ಸವಿಯುವ ಸೌಭಾಗ್ಯ ಇಲ್ಲ. ಅರಣ್ಯಕಾಯ್ದೆ ಬಡಗಿರಿಜನರ ಮೇಲೆ ಅರಣ್ಯನ್ಯಾಯವನ್ನು ಹೇರಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಈ ಅರಣ್ಯ ಕಾಯ್ದೆಯಲ್ಲಿ ಸರ್ಕಾರವು ಬದಲಾವಣೆ ತರುವ ಬಗ್ಗೆ ಚಿಂತಿಸಬೇಕಾಗಿದೆ. ಅರಣ್ಯವಾಸಿಗಳನ್ನು ಮುಖ್ಯವಾಹಿನಿಗೆ ತರುವ ಹೆಸರಿನಲ್ಲಿ ನಡೆಯುತ್ತಿರುವ ಪರಿಕಲ್ಪನೆಯಲ್ಲೂ ಬದಲಾವಣೆಯಾಗಬೇಕಾಗಿದೆ.

ವಿಶೇಷ ಆರ್ಥಿಕ ವಲಯ

ರಾಜ್ಯದಲ್ಲಿ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಸಾವಿರಾರು ಎಕರೆ ಕೃಷಿಭೂಮಿ ಬೃಹತ್ ಕೈಗಾರಿಕೆಗಳ ಪಾಲಾಗುತ್ತಿದೆ. ಇದಕ್ಕೆ ಕೊಟ್ಟ ಪರಿಹಾರವೂ ಅಲ್ಪ. ಈ ವಿಶೇಷ ಆರ್ಥಿಕ ವಲಯಕ್ಕೆ ಬಲಿಯಾಗಿ ಭೂಮಿಯನ್ನು ಕಳೆದುಕೊಂಡು ಬೀದಿಪಾಲಾದವರ ಗೋಳು ಹೇಳತೀರದು. ಕೈಗಾರಿಕೆ ಬರಬೇಕೆನ್ನುವುದು ನಿಜ; ಆದರೆ ಕೃಷಿಭೂಮಿ ಕೈಗಾರಿಕೆಗಳ ಪಾಲಾಗುವ ಭರದಲ್ಲಿ ಧ್ವನಿ ಇಲ್ಲದವರ ಮತ್ತು ರೈತರ ತುಂಡುಭೂಮಿಯನ್ನು ಸರ್ಕಾರ ಕಸಿದುಕೊಳ್ಳುತ್ತಿರುವುದು ಖಂಡನೀಯ. ಸಾಮಾಜಿಕವಾಗಿ ಹಿಂದುಳಿದ, ಧ್ವನಿಯೂ ಇಲ್ಲದ ರೈತ ಕುಟುಂಬಗಳಿಂದ ಭೂಮಿ ಕಿತ್ತುಕೊಂಡು ಅವರನ್ನು ಒಕ್ಕಲೆಬ್ಬಿಸಿ ಅವರು ಗುಳೇ ಹೋಗುವುದಕ್ಕೆ ಕಾರಣವಾಗಿರುವುದು ವಿಪರ್ಯಾಸ.

ಸಮಗ್ರ ಕರ್ನಾಟಕ ದರ್ಶನ

ಕರ್ನಾಟಕವು ದೇಶದಲ್ಲೇ ಕಲೆ, ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಶ್ರೀಮಂತವಾದ ರಾಜ್ಯ. ಇದರ ರಾಜಧಾನಿ ಬೆಂಗಳೂರು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ವಾಣಿಜ್ಯ ನಗರವಾಗಿ ಐತಿಹಾಸಿಕ ನೆನಪುಗಳನ್ನು ಇಟ್ಟುಕೊಂಡಿದೆ. ಈ ನಗರ ವ್ಯಾಪಾರ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಶಿಕ್ಷಣ ಮತ್ತು ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ವಿಶ್ವದ ಗಮನವನ್ನು ಸೆಳೆದಿದೆ. ದೇಶವಿದೇಶಗಳಿಂದ ಬರುವ ಪ್ರವಾಸಿಗರನ್ನು

ಆಕರ್ಷಿಸಿದೆ. ಇಂತಹ ಬೆಂಗಳೂರು ಅತ್ಯಗತ್ಯವಾಗಿ ಕನ್ನಡೀಕರಣ ಗೊಳ್ಳಬೇಕಾಗಿದೆ. ಆದ್ದರಿಂದ ಬೆಂಗಳೂರು ಸಮಗ್ರ ಕರ್ನಾಟಕದ ಅನನ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೇಂದ್ರವಾಗಬೇಕಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಸಮಗ್ರ ಕರ್ನಾಟಕವನ್ನು ಬಿಂಬಿಸುವ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತೇನೆ.

ಈ ಸಮ್ಮೇಳನದ ವಿವಿಧ ಗೋಷ್ಠಿಗಳಲ್ಲಿ ಕನ್ನಡ, ಕನ್ನಡಿಗ ಹಾಗೂ ಕರ್ನಾಟಕವನ್ನು ಕುರಿತಂತೆ ಅನೇಕ ಮಹತ್ವದ ಸಂಗತಿಗಳನ್ನು ವಿದ್ವಾಂಸರು ಚರ್ಚಿಸಲಿದ್ದಾರೆ. ಅವರ ಚಿಂತನೆಗಳನ್ನು ಕೇಳುವ ಕುತೂಹಲ ತಮ್ಮಂತೆ ನನಗೂ ಇದೆ. ಆದ್ದರಿಂದ ತಮ್ಮೆಲ್ಲರಿಗೂ ವಂದಿಸಿ ನನ್ನ ಈ ಭಾಷಣವನ್ನು ಮುಕ್ತಾಯ ಗೊಳಿಸುತ್ತೇನೆ.

ಜೈ ಭಾರತ್! ಜಯ ಕರ್ನಾಟಕ

೧ ಫೆಬ್ರವರಿ ೨೦೧೫ — **– ಡಾ. ಸಿದ್ಧಲಿಂಗಯ್ಯ**

ಶ್ರವಣಬೆಳಗೊಳ, ಹಾಸನ ಜಿಲ್ಲೆ

ಅನುಬಂಧ-೧
ಸಮ್ಮೇಳನಾಧ್ಯಕ್ಷರ ಭಾಷಣಗಳ ಸಂಪುಟಗಳು
ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು
(೧೯೧೫-೨೦೧೫)

ಸಂಖ್ಯೆ	ಸಮ್ಮೇಳನ ಸ್ಥಳ	ಸಮ್ಮೇಳನಾಧ್ಯಕ್ಷರು	ಇಸವಿ ಮತ್ತು ದಿನಾಂಕ
	ಸಂಪುಟ-೧ ಸಂ. : ರಂ. ಶ್ರೀ ಮುಗಳಿ, ೧೯೭೦		
೧.	ಬೆಂಗಳೂರು	ಎಚ್.ವಿ. ನಂಜುಂಡಯ್ಯ	೧೯೧೫ ಮೇ ೩, ೪, ೫, ೬
೨.	ಬೆಂಗಳೂರು	ಎಚ್.ವಿ. ನಂಜುಂಡಯ್ಯ	೧೯೧೬ ಮೇ ೬, ೭, ೮
೩.	ಮೈಸೂರು	ಎಚ್.ವಿ. ನಂಜುಂಡಯ್ಯ	೧೯೧೭ ಜೂನ್ ೮, ೯,೧೦
೪.	ಧಾರವಾಡ	ಆರ್. ನರಸಿಂಹಾಚಾರ್	೧೯೧೮ ಮೇ ೧೧,೧೨, ೧೩
೫.	ಹಾಸನ	ಕರ್ಪೂರ ಶ್ರೀನಿವಾಸರಾವ್	೧೯೧೯ ಮೇ ೬, ೭, ೮
೬.	ಹೊಸಪೇಟೆ	ರೊದ್ದ ಶ್ರೀನಿವಾಸರಾವ್	೧೯೨೦ ಜೂನ್ ೨೦, ೨೧
೭.	ಚಿಕ್ಕಮಗಳೂರು	ಕೆ.ಪಿ. ಪುಟ್ಟಣ್ಣಶೆಟ್ಟಿ	೧೯೨೧ ಮೇ ೧೯,೨೦,೨೧
೮.	ದಾವಣಗೆರೆ	ಎಂ. ವೆಂಕಟಕೃಷ್ಣಯ್ಯ	೧೯೨೨ ಮೇ ೧೨, ೧೩
೯.	ಬಿಜಾಪುರ	ಸಿದ್ಧಾಂತಿ ಶಿವಶಂಕರಶಾಸ್ತ್ರಿ	೧೯೨೩ ಮೇ ೨೧,೨೨,೨೩
೧೦.	ಕೋಲಾರ	ಹೊಸಕೋಟೆ ಕೃಷ್ಣಶಾಸ್ತ್ರಿ	೧೯೨೪ ಮೇ ೧೬,೧೭,೧೮
೧೧	ಬೆಳಗಾವಿ	ಬೆನಗಲ್ ರಾಮರಾವ್	೧೯೨೫ ಮೇ ೯,೧೦,೧೧
೧೨.	ಬಳ್ಳಾರಿ	ಫ.ಗು. ಹಳಕಟ್ಟಿ	೧೯೨೬ ಮೇ ೨೨,೨೩,೨೪
೧೩.	ಮಂಗಳೂರು	ಆರ್. ತಾತಾ	೧೯೨೭ ಮೇ ೧೯,೨೦,೨೧
೧೪.	ಕಲಬುರ್ಗಿ	ಬಿ.ಎಂ. ಶ್ರೀಕಂಠಯ್ಯ	೧೯೨೮ ಜೂನ್ ೧,೨,೩
೧೫	ಬೆಳಗಾವಿ	ಮಾಸ್ತಿ ವೆಂಕಟೇಶ ಅಯ್ಯಂಗಾರ್	೧೯೨೯ ಮೇ ೧೨,೧೩,೧೪
೧೬.	ಮೈಸೂರು	ಆಲೂರು ವೆಂಕಟರಾವ್	೧೯೩೦ ಅಕ್ಟೋಬರ್ ೫,೬,೭
೧೭.	ಕಾರವಾರ	ಮುಳಿಯ ತಿಮ್ಮಪ್ಪಯ್ಯ	೧೯೩೧ ಡಿಸೆಂಬರ್ ೨೮,೨೯,೩೦
೧೮.	ಮಡಿಕೇರಿ	ಡಿ.ವಿ. ಗುಂಡಪ್ಪ	೧೯೩೨ ಡಿಸೆಂಬರ್ ೨೮,೨೯,೩೦
೧೯.	ಹುಬ್ಬಳ್ಳಿ	ವೈ. ನಾಗೇಶ ಶಾಸ್ತ್ರಿ	೧೯೩೩ ಡಿಸೆಂಬರ್ ೨೯, ೩೦, ೩೧
೨೦.	ರಾಯಚೂರು	ಪಂಜೆ ಮಂಗೇಶರಾವ್	೧೯೩೪ ಡಿಸೆಂಬರ್ ೨೮, ೨೯, ೩೦
	ಸಂಪುಟ-೨ ಸಂ. : ರಂ. ಶ್ರೀ ಮುಗಳಿ, ೧೯೭೨		
೨೧.	ಮುಂಬಯಿ	ಎನ್.ಎಸ್. ಸುಬ್ಬರಾವ್	೧೯೩೫ ಡಿಸೆಂಬರ್ ೨೬, ೨೭, ೨೮
೨೨.	ಜಮಖಂಡಿ	ಬೆಳ್ಳಾವೆ ವೆಂಕಟನಾರಣಪ್ಪ	೧೯೩೭ ಡಿಸೆಂಬರ್ ೨೯,೩೦,೩೧
೨೩.	ಬಳ್ಳಾರಿ	ರಂ. ರಾ. ದಿವಾಕರ	೧೯೩೮ ಡಿಸೆಂಬರ್ ೨೯, ೩೦, ೩೧
೨೪.	ಬೆಳಗಾವಿ	ಮುದವೀಡು ಕೃಷ್ಣರಾಯರು	೧೯೩೯ ಡಿಸೆಂಬರ್ ೨೫, ೨೬, ೨೭, ೨೮
೨೫.	ಧಾರವಾಡ	ವೈ. ಚಂದ್ರಶೇಖರಶಾಸ್ತ್ರಿ	೧೯೪೦ ಡಿಸೆಂಬರ್ ೨೭,೨೮,೨೯
೨೬.	ಹೈದರಾಬಾದ್	ಎ.ಆರ್. ಕೃಷ್ಣಶಾಸ್ತ್ರಿ	೧೯೪೧ ಡಿಸೆಂಬರ್ ೨೭, ೨೮, ೨೯
೨೭.	ಶಿವಮೊಗ್ಗ	ದ.ರಾ. ಬೇಂದ್ರೆ	೧೯೪೩ ಡಿಸೆಂಬರ್ ೨೬, ೨೭, ೨೮
೨೮.	ರಬಕವಿ	ಎಸ್.ಎಸ್. ಬಸವನಾಳ	೧೯೪೪ ಡಿಸೆಂಬರ್ ೨೮, ೨೯, ೩೦

೨೯. ಮದರಾಸು	ಟಿ.ಪಿ. ಕೈಲಾಸಂ	೧೯೪೫ ಡಿಸೆಂಬರ್ ೨೭, ೨೮
೩೦. ಹರಪನಹಳ್ಳಿ	ಸಿ.ಕೆ. ವೆಂಕಟರಾಮಯ್ಯ	೧೯೪೭ ಮೇ ೭, ೮, ೯
೩೧. ಕಾಸರಗೋಡು	ತಿರುಮಲೆತಾತಾಚಾರ್ಯಶರ್ಮ	೧೯೪೮ ಡಿಸೆಂಬರ್ ೨೯, ೩೦, ೩೧
೩೨. ಕಲಬುರ್ಗಿ	ಉತ್ತಂಗಿ ಚನ್ನಪ್ಪ	೧೯೪೯ ಮಾರ್ಚ್ ೫, ೬, ೭
೩೩. ಸೊಲ್ಲಾಪುರ	ಎಂ.ಆರ್.ಶ್ರೀನಿವಾಸಮೂರ್ತಿ	೧೯೫೦ ಮೇ ೨೪, ೨೫, ೨೬
೩೪. ಮುಂಬಯಿ	ಎಂ. ಗೋವಿಂದ ಪೈ	೧೯೫೧ ಡಿಸೆಂಬರ್ ೨೬,೨೭,೨೮
೩೫. ಬೇಲೂರು	ಎಸ್.ಸಿ. ನಂದೀಮಠ	೧೯೫೨ ಮೇ ೧೬, ೧೭, ೧೮
೩೬. ಕುಮಟಾ	ವಿ. ಸೀತಾರಾಮಯ್ಯ	೧೯೫೩ ಡಿಸೆಂಬರ್ ೨೬,೨೭, ೨೮

ಸಂಪುಟ–೩ ಸಂ. : ರಂ. ಶ್ರೀ ಮುಗಳಿ, ೧೯೭೨

೩೭. ಮೈಸೂರು	ಶಿವರಾಮ ಕಾರಂತ	೧೯೫೫ ಜೂನ್ ೧೦,೧೧,೧೨
೩೮. ರಾಯಚೂರು	ಆದ್ಯ ರಂಗಾಚಾರ್ಯ	೧೯೫೫ ಡಿಸೆಂಬರ್ ೨೫,೨೬,೨೭
೩೯. ಧಾರವಾಡ	ಕೆ.ವಿ. ಪುಟ್ಟಪ್ಪ	೧೯೫೭ ಮೇ ೭, ೮, ೯
೪೦. ಬಳ್ಳಾರಿ	ವಿ.ಕೃ. ಗೋಕಾಕ್	೧೯೫೮ ಜನವರಿ ೧೮,೧೯, ೨೦
೪೧. ಬೀದರ್	ಡಿ.ಎಲ್. ನರಸಿಂಹಾಚಾರ್	೧೯೬೦ ಫೆಬ್ರವರಿ ೧೧,೧೨, ೧೩
೪೨. ಮಣಿಪಾಲ	ಅ.ನ. ಕೃಷ್ಣರಾಯ	೧೯೬೦ ಡಿಸೆಂಬರ್ ೨೭,೨೮, ೨೯
೪೩. ಗದಗ	ಕೆ.ಜಿ. ಕುಂದಣಗಾರ	೧೯೬೧ ಡಿಸೆಂಬರ್ ೨೭,೨೮, ೨೯
೪೪. ಸಿದ್ಧಗಂಗಾ	ರಂ. ಶ್ರೀ ಮುಗಳಿ	೧೯೬೩ ಡಿಸೆಂಬರ್ ೨೮,೨೯, ೩೦
೪೫. ಕಾರವಾರ	ಕಡೆಂಗೋಡ್ಲು ಶಂಕರಭಟ್ಟ	೧೯೬೫ ಮೇ ೧೦, ೧೧, ೧೨
೪೬. ಶ್ರವಣಬೆಳಗೊಳ	ಆ. ನೇ. ಉಪಾಧ್ಯೆ	೧೯೬೭ ಮೇ ೨೬, ೨೭, ೨೮
೪೭. ಬೆಂಗಳೂರು	ದೇ. ಜವರೇಗೌಡ	೧೯೭೦ ಡಿಸೆಂಬರ್ ೨೭,೨೮, ೨೯

ಸಂಪುಟ–೪ ಸಂ. : ಹಂಪ ನಾಗರಾಜಯ್ಯ, ೧೯೮೫

೪೮. ಮಂಡ್ಯ	ಜಯದೇವಿತಾಯಿ ಲಿಗಾಡೆ	೧೯೭೪ ಮೇ ೩೧, ಜೂನ್ ೧, ೨
೪೯. ಶಿವಮೊಗ್ಗ	ಎಸ್.ವಿ. ರಂಗಣ್ಣ	೧೯೭೬ ಡಿಸೆಂಬರ್ ೧೧,೧೨, ೧೩
೫೦. ನವದೆಹಲಿ	ಜಿ.ಪಿ. ರಾಜರತ್ನಂ	೧೯೭೮ ಏಪ್ರಿಲ್ ೨೩,೨೪, ೨೫
೫೧. ಧರ್ಮಸ್ಥಳ	ಎಂ. ಗೋಪಾಲಕೃಷ್ಣ ಅಡಿಗ	೧೯೭೯ ಮಾರ್ಚ್ ೯,೧೦, ೧೧
೫೨. ಬೆಳಗಾವಿ	ಬಸವರಾಜ ಕಟ್ಟೀಮನಿ	೧೯೮೦ ಫೆಬ್ರವರಿ ೭,೮,೯,೧೦
೫೩. ಚಿಕ್ಕಮಗಳೂರು	ಪು. ತಿ. ನರಸಿಂಹಾಚಾರ್	೧೯೮೧ ಮಾರ್ಚ್ ೧೩,೧೪, ೧೫
೫೪. ಮಡಿಕೇರಿ	ಶಂಬಾ ಜೋಶಿ	೧೯೮೧ ನವೆಂಬರ್ ೨೭,೨೮,೨೯, ೩೦
೫೫. ಶಿರಸಿ	ಗೊರೂರುರಾಮಸ್ವಾಮಿ ಅಯ್ಯಂಗಾರ್	೧೯೮೨ ಡಿಸೆಂಬರ್ ೨೩, ೨೪, ೨೫, ೨೬
೫೬. ಕೈವಾರ	ಎ. ಎನ್. ಮೂರ್ತಿರಾವ್	೧೯೮೪ ಮಾರ್ಚ್ ೨೩,೨೪, ೨೫
೫೭. ಬೀದರ್	ಹಾ. ಮಾ. ನಾಯಕ	೧೯೮೫ ಏಪ್ರಿಲ್ ೫, ೬, ೭

ಸಂಪುಟ-೫ ಸಂ. : ಗೊ.ರು. ಚನ್ನಬಸಪ್ಪ, ೧೯೯೫

೫೮.	ಕಲಬುರ್ಗಿ	ಸಿದ್ದಯ್ಯ ಪುರಾಣಿಕ	೧೯೮೭ ಅಕ್ಟೋಬರ್ ೨೯, ೩೦, ೩೧ ನವೆಂಬರ್ ೧
೫೯.	ಹುಬ್ಬಳ್ಳಿ	ಆರ್.ಸಿ. ಹಿರೇಮಠ	೧೯೯೦ ಫೆಬ್ರವರಿ ೧೬, ೧೭, ೧೮
೬೦.	ಮೈಸೂರು	ಕೆ.ಎಸ್. ನರಸಿಂಹಸ್ವಾಮಿ	೧೯೯೦ ಡಿಸೆಂಬರ್ ೨೮,೨೯, ೩೦
೬೧.	ದಾವಣಗೆರೆ	ಜಿ.ಎಸ್. ಶಿವರುದ್ರಪ್ಪ	೧೯೯೨ ಜನವರಿ ೯,೧೦,೧೧, ೧೨
೬೨.	ಕೊಪ್ಪಳ	ಸಿಂಪಿ ಲಿಂಗಣ್ಣ	೧೯೯೩ ಫೆಬ್ರವರಿ ೫, ೬, ೭
೬೩.	ಮಂಡ್ಯ	ಚದುರಂಗ	೧೯೯೪ ಫೆಬ್ರವರಿ ೧೧,೧೨, ೧೩
೬೪.	ಮುಧೋಳ	ಎಚ್.ಎಲ್. ನಾಗೇಗೌಡ	೧೯೯೫ ಜೂನ್ ೩, ೪, ೫

ಸಂಪುಟ-೬ ಸಂ. : ಧರ್ಮದರ್ಶಿ ಹರಿಕೃಷ್ಣ ಪುನರೂರು ೨೦೦೩


೬೫.	ಹಾಸನ	ಚೆನ್ನವೀರ ಕಣವಿ	೧೯೯೬ ಡಿಸೆಂಬರ್ ೨೧,೨೨,೨೩,೨೪
೬೬.	ಮಂಗಳೂರು	ಕಯ್ಯಾರ ಕಿಞ್ಞಣ್ಣರೈ	೧೯೯೭ ಡಿಸೆಂಬರ್ ೧೧, ೧೨, ೧೩, ೧೪
೬೭.	ಕನಕಪುರ	ಎಸ್. ಎಲ್. ಭೈರಪ್ಪ	೧೯೯೯ ಫೆಬ್ರವರಿ ೨೬,೨೭,೨೮
೬೮.	ಬಾಗಲಕೋಟೆ	ಶಾಂತಾದೇವಿ ಮಾಳವಾಡ	೨೦೦೦ ಜೂನ್ ೨೪,೨೫, ೨೬
೬೯.	ತುಮಕೂರು	ಯು.ಆರ್. ಅನಂತಮೂರ್ತಿ	೨೦೦೨ ಫೆಬ್ರವರಿ ೧೫, ೧೭
೭೦.	ಬೆಳಗಾವಿ	ಪಾಟೀಲ ಪುಟ್ಟಪ್ಪ	೨೦೦೩ ಮಾರ್ಚ್ ೭, ೮, ೯
೭೧.	ಮೂಡುಬಿದಿರೆ	ಕಮಲಾ ಹಂಪನಾ	೨೦೦೩ ಡಿಸೆಂಬರ್ ೧೮, ೧೯, ೨೦, ೨೧

ಸಂಪುಟ-೭ ಸಂ. : ಪ್ರೊ. ಜಿ. ಅಶ್ವತ್ಥ ನಾರಾಯಣ ೨೦೧೬


೭೨.	ಬೀದರ್	ಶಾಂತರಸ ಹೆಂಬೇರಾಳು	೨೦೦೬ ಜನವರಿ ೨೭,೨೮,೨೯
೭೩.	ಶಿವಮೊಗ್ಗ	ಕೆ.ಎಸ್. ನಿಸಾರ್‌ಅಹಮದ್	೨೦೦೬ ಡಿಸೆಂಬರ್ ೨೦, ೨೧, ೨೨, ೨೩
೭೪.	ಉಡುಪಿ	ಎಲ್.ಎಸ್. ಶೇಷಗಿರಿರಾವ್	೨೦೦೭ ಡಿಸೆಂಬರ್ ೧೨, ೧೩, ೧೪, ೧೫
೭೫.	ಚಿತ್ರದುರ್ಗ	ಎಲ್. ಬಸವರಾಜು	೨೦೦೯ ಫೆಬ್ರವರಿ ೪,೫,೬,೭
೭೬.	ಗದಗ	ಗೀತಾ ನಾಗಭೂಷಣ	೨೦೧೦ ಫೆಬ್ರವರಿ ೧೯,೨೦,೨೧
೭೭	ಬೆಂಗಳೂರು	ಜಿ. ವೆಂಕಟಸುಬ್ಬಯ್ಯ	೨೦೧೧ ಫೆಬ್ರವರಿ ೪, ೫, ೬
೭೮.	ಗಂಗಾವತಿ	ಸಿ.ಪಿ. ಕೃಷ್ಣಕುಮಾರ್	೨೦೧೧ ಡಿಸೆಂಬರ್ ೯,೧೦,೧೧
೭೯.	ವಿಜಾಪುರ	ಕೋ. ಚೆನ್ನಬಸಪ್ಪ	೨೦೧೩ ಫೆಬ್ರವರಿ ೯,೧೦,೧೧
೮೦.	ಮಡಿಕೇರಿ	ನಾ. ಡಿಸೋಜಾ	೨೦೧೪ ಜನವರಿ ೭, ೮, ೯
೮೧.	ಶ್ರವಣಬೆಳಗೊಳ	ಡಾ. ಸಿದ್ಧಲಿಂಗಯ್ಯ	೨೦೧೫ ಜನವರಿ ೩೧, ಫೆಬ್ರವರಿ ೧, ೨, ೩

ಅನುಬಂಧ-೨


ಸಮ್ಮೇಳನಗಳನ್ನು ನಡೆಸಿದ ಪರಿಷತ್ತಿನ ಅಧ್ಯಕ್ಷರುಗಳು (ಸಂಪುಟ ೭)



ಪ್ರೊ. ಚಂದ್ರಶೇಖರ ಪಾಟೀಲ
(೨೨ನೇ ಕಸಾಪ ಅಧ್ಯಕ್ಷರು)
೨೦೦೪-೨೦೦೮
ನಡೆದ ಸಮ್ಮೇಳನಗಳು ೭೨, ೭೩, ೭೪



ಪ್ರೊ. ನಲ್ಲೂರು ಪ್ರಸಾದ್
(೨೩ನೇ ಕಸಾಪ ಅಧ್ಯಕ್ಷರು)
೨೦೦೮-೨೦೧೨
ನಡೆದ ಸಮ್ಮೇಳನಗಳು ೭೫, ೭೬, ೭೭, ೭೮



ಪುಂಡಲೀಕ ಹಾಲಂಬಿ
(೨೪ನೇ ಕಸಾಪ ಅಧ್ಯಕ್ಷರು)
೨೦೧೨-೨೦೧೫
ನಡೆದ ಸಮ್ಮೇಳನಗಳು ೭೯, ೮೦, ೮೧

ಪ್ರಸ್ತುತ ಸಂಪುಟವು ೨೦೦೬ರಲ್ಲಿ ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಶಾಂತರಸ ಹೆಂಬೇರಾಳು ಅವರ ಭಾಷಣದಿಂದ ೮೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ಮಾಡಿದ ಭಾಷಣದವರೆಗೆ ೧೦ ಮಂದಿ ಸಮ್ಮೇಳನಾಧ್ಯಕ್ಷರ ಆಶಯ ಚಿಂತನೆಗಳನ್ನು ಒಳಗೊಂಡಿದೆ.

ಇಲ್ಲಿನ ಉತ್ಸಾಹಭರಿತ ಭಾಷಣಗಳಲ್ಲಿ ಸಮ್ಮೇಳನಾಧ್ಯಕ್ಷರುಗಳಲ್ಲಿ ಕನ್ನಡ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಯ ಬಗೆಗೆ ಹೊಂದಿರುವ ಕಾಳಜಿ, ನಾಡು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಸೂಚಿಸಿರುವುದು ಕಾಣಬಹುದಾಗಿರುತ್ತದೆ. ಇಲ್ಲಿನ ವಿಚಾರಲಹರಿ ನಾಡಿನ ಜನತೆಗೆ ಸ್ಪೂರ್ತಿ, ಉತ್ಸಾಹ ಹಾಗೂ ಆತ್ಮವಿಶ್ವಾಸ ಮೂಡಿಸಲು ಸಹಕಾರಿಯಾಗಿದೆ.

ಈ ಪುಸ್ತಕವು ರಾಯಚೂರಿನಲ್ಲಿ ಅಖಿಲ ಭಾರತ ೮೨ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಡಾ. ಮನು ಬಳಿಗಾರ್
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮